# ಶುದ್ಧಶಾಂಕರಪ್ರಕ್ರಿಯಾಭಾಸ್ಕರ



ಗ್ರಂಥಕರ್ತರು

**ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಅನುವಾದಕರು

**ವೇ।ಬ್ರ।ಶ್ರೀಚಂದ್ರಮೌಳಿಅವಧಾನಿಗಳು**

ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ

ಅಧ್ಯಾತ್ಮಗ್ರಂಥಾವಲಿಃ

# ಶುದ್ಧಶಾಂಕರಪ್ರಕ್ರಿಯಾಭಾಸ್ಕರ

ಗ್ರಂಥಕರ್ತರು

ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಅನುವಾದಕರು

ವೇ | ಬ್ರ | ಶ್ರೀ ಚಂದ್ರಮೌಳಿ ಅವಧಾನಿಗಳು

ಕ್ರಮಾಂಕ ೨೩೯

ಪ್ರಕಾಶನಸ್ಥಾನ

ಅಧ್ಯಾತ್ಮಪ್ರಕಾಶಕಾರ್ಯಾಲಯಃ,

ಹೊಳೆನರಸೀಪುರ,

ಹಾಸನಜಿಲ್ಲಾ

೨೦೦೯

First Print 2009

Copies 1000

Price - 120-00

All rights reserved
by
The Adhyatma Prakasha Karyalaya
Holenarasipur.

Typeset by
N.K.Hulamani.
No. 33 ShivanandNagar
Navanagar Hubli
Ph.94495-73443

Registered under the Copy Right Act, 1957

Printed in India by
Sai Screen & Graphics
Bangalore. Ph.: 9844646518

# ಮುನ್ನುಡಿ

ಆತ್ಮೀಯ ಪ್ರಿಯ ವಾಚಕರೇ

ಅಧ್ಯಾತ್ಮಪ್ರಕಾಶಕಾರ್ಯಾಲಯದ ಸಮಿತಿಯವರ ಮತ್ತು ಅನೇಕ ಜಿಜ್ಞಾಸುಗಳ ಅಪೇಕ್ಷೆಯಂತೆ ಶುದ್ಧಶಾಂಕರಪ್ರಕ್ರಿಯಾಭಾಸ್ಕರವೆಂಬ ಶ್ರೀಶ್ರೀಗಳವರ ಸಂಸ್ಕೃತಗ್ರಂಥವನ್ನು ಯಥಾಮತಿಯಾಗಿ ಕನ್ನಡಕ್ಕೆ ಅನುವಾದವನ್ನು ಮಾಡಿರುತ್ತೇನೆ. ಈ ಗ್ರಂಥವನ್ನು ಶ್ರೀಗಳವರು ಮೂರು ಸಣ್ಣ ಸಣ್ಣ ಗ್ರಂಥವಾಗಿ ಬರೆದದ್ದನ್ನು ನಾವು ಆರ್ಥಿಕದೃಷ್ಟಿಯಿಂದಲೂ ಓದುಗರ ಅನುಕೂಲತೆಯಿಂದಲೂ ಒಂದೇಗ್ರಂಥವಾಗಿ ಮುದ್ರಿಸಿರುತ್ತೇವೆ.

ಈ ಗ್ರಂಥವನ್ನು ಅನುವಾದಮಾಡುವಾಗ ಆರಂಭದಲ್ಲಿ ತುಂಬಾ ಹೆಮ್ಮೆಯಿದ್ದರೂ ಮಧ್ಯೆ ಎಷ್ಟೋ ಸಂದರ್ಭದಲ್ಲಿ ಉದಾ. ಬೌದ್ಧರ ಗ್ರಂಥಗಳನ್ನು ಶ್ರೀಗಳವರು ವಿಮರ್ಶೆಮಾಡಿರುವ ಸಂದರ್ಭದಲ್ಲಿ ಅನುವಾದ ಮಾಡುವಾಗ ಬಹಳ ಕ್ಲೇಶವನ್ನು ಮತ್ತು ಹೆದರಿಕೆಯನ್ನು ಅನುಭವಿಸಿದೆನು. ಆದರೆ ಶ್ರೀಶ್ರೀಗಳವರೇ ಗೌಡಪಾದಹೃದಯ ಗ್ರಂಥದಲ್ಲಿ ಬೌದ್ಧರ ಮಾಧ್ಯಮಿಕಕಾರಿಕೆಯೇ ಮುಂತಾದದ್ದನ್ನು ಉದಾಹರಣೆ ಮಾಡಿ ಅನುವಾದಮಾಡಿದ್ದನ್ನು ಹುಡುಕಿ ಅದನ್ನೇ ಆದಷ್ಟು ಮಟ್ಟಿಗೆ ಇಲ್ಲಿ ಕೊಟ್ಟಿರುತ್ತೇನೆ. ಹಾಗೆಯೇ ಭಾಷ್ಯಾನುವಾದ ಸಂದರ್ಭದಲ್ಲೂ ಶ್ರೀಶ್ರೀಗಳವರ ಕನ್ನಡಭಾಷ್ಯಾನುವಾದವನ್ನು ಕೊಟ್ಟಿರುತ್ತೇನೆ. ಆದ್ದರಿಂದ ಈ ಗ್ರಂಥವು ವಾಚಕರಿಗೆ ತುಂಬಾ ಉಪಕಾರಿಯಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಮೊದಲು ನಾವು ಕೇವಲ ಕನ್ನಡಾನುವಾದವನ್ನು ಕೊಟ್ಟು ಮುದ್ರಿಸಬೇಕೆಂದು ಸಂಕಲ್ಪಿಸಿದ್ದೆವು. ಆದರೆ ಅನೇಕರ ಒತ್ತಾಯದಿಂದ ಸಂಸ್ಕೃತ ಮೂಲವನ್ನು ಕೊಟ್ಟಿರುತ್ತೇವೆ. ಇದರಿಂದ ವಿದ್ವಾಂಸರಿಗೂ ಜಿಜ್ಞಾಸುಗಳಿಗೂ ಮೂಲಮೂಲಿಗಳನ್ನು ಹೋಲಿಸುವುದಕ್ಕೆ ಅವಕಾಶವಾಗುತ್ತದೆ. ಅದೇ ರೀತಿ ಎಲ್ಲಾದರೂ ಅನುವಾದದಲ್ಲಿ ವ್ಯತ್ಯಾಸವು ಕಂಡುಬಂದು ಅದನ್ನು ಅನುವಾದಕರಿಗೆ ತಿಳಿಸಿದರೆ ದ್ವಿತೀಯಮುದ್ರಣದಲ್ಲಿ ಸರಿಪಡಿಸಿಕೊಳ್ಳುತ್ತೇವೆಂದು ವಿನಮ್ರತೆಯಿಂದ ತಿಳಿಸುವೆವು. ಆದ್ದರಿಂದ ವಾಚಕರು ನಿರ್ಮತ್ಸರರಾಗಿ ಒಮ್ಮೆ ಆಮೂಲಚೂಡರಾಗಿ ಓದಿ ಅದರ ಗುಣದೋಷಗಳನ್ನು ತಿಳಿಸಿಕೊಟ್ಟರೆ ಅವರಿಗೆ ನಾನು ತುಂಬಾ ಚಿರಋಣಿಯಾಗಿರುತ್ತೇನೆ.

ಇನ್ನು ಈ ಗ್ರಂಥಪ್ರಕಟಣೆಗಾಗಿ ಸಂಪೂರ್ಣಧನಸಹಾಯವನ್ನು ಮಾಡಿದ ಗುರುಭಕ್ತಪರಾಯಣರಾದ ಬೆಂಗಳೂರಿನ ರಾಜಾಜೀನಗರದಲ್ಲಿರುವ ಸುಪ್ರಸಿದ್ಧ ಮಧುಮೇಹ ಚಿಕಿತ್ಸಕರಾದ ಡಾ.ಅರವಿಂದ್ ಹಾಗೂ ಶ್ರೀಮತಿ ಡಾ.ಶೋಭಾ ಇವರಿಗೆ ನಮ್ಮ ಕಾರ್ಯಾಲಯದವತಿಯಿಂದ ಅನೇಕಾನೇಕ ಧನ್ಯವಾದಗಳು. ಅವರ ಕುಟುಂಬವರ್ಗಕ್ಕೆಲ್ಲಾ ಸರ್ವಾತ್ಮನಾದ ಶ್ರೀಮನ್ನಾರಾಯಣನು ಸಕಲ ಸನ್ಮಂಗಳವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇವೆ. ಹಾಗೆಯೇ ಈ ಗ್ರಂಥದ ಕರಡುಪ್ರತಿಯನ್ನು ಬಹಳ ಆಸ್ಥೆಯಿಂದ ಪರಿಶೀಲಿಸಿದ ಟಿ.ವೆಂಕಟೇಶ್ (ಹರಿ) ಇವರಿಗೂ, ಸರ್ವಾಂಗ ಸುಂದರವಾಗಿ ಅಕ್ಷರಸಂಯೋಜನೆಮಾಡಿದ ಶ್ರೀಮಾನ್ ಶ್ರೀ ನಟರಾಜಶರ್ಮಾ ಇವರಿಗೂ ನಮ್ಮ ಕಾರ್ಯಾಲಯದಿಂದ ಧನ್ಯವಾದಗಳನ್ನು ಅರ್ಪಿಸಿ ಇವರಿಗೆ ಪರಮಾತ್ಮನು ಸಕಲ ಶ್ರೇಯಸ್ಸನ್ನು ಉಂಟುಮಾಡಲೆಂದು ಹರಸುವೆವು. ಇಂತಿ.

ಅನುವಾದಕ

**ಮ. ಸು. ಚಂದ್ರಮೌಳಿ ಅವಧಾನಿ.**

## ವೇ|ಬ್ರ|ಶ್ರೀ ಚಂದ್ರಮೌಳಿ ಅವಧಾನಿಗಳ ಕಿರುಪರಿಚಯ

ಶಿವಮೊಗ್ಗ ಜಿಲ್ಲೆಯಲ್ಲಿ ಸಂಸ್ಕೃತಗ್ರಾಮವೆಂದು ಹೆಸರುವಾಸಿಯಾದ ಮತ್ತೂರು ಎಂಬ ವೈದಿಕಗ್ರಾಮವಿರುತ್ತದೆ. ಆ ಊರಿನಲ್ಲಿದ್ದ ಪುಣ್ಯದಂಪತಿಗಳಾದ ವೇ|ಬ್ರ|ಶ್ರೀ ಸುಬ್ರಾಯಾವಧಾನಿ ಮತ್ತು ಚೆನ್ನಮ್ಮ ಎಂಬುವರಿಗೆ ಆರು ಜನ ಮಕ್ಕಳಿದ್ದಾರೆ. ಅವರಲ್ಲಿ ಐದುಜನ ಗಂಡುಮಕ್ಕಳು, ಒಬ್ಬಳು ಹೆಣ್ಣುಮಗಳು. ಈ ಗ್ರಂಥಾನುವಾದಕರು ಇವರಲ್ಲಿ ಕಿರಿಯವರಾಗಿರುವವರು. ೨೪-೨-೧೯೬೦ರಂದು ಮತ್ತೂರಿನಲ್ಲಿ ಇವರ ಜನನವಾಯಿತು. ಇವರು ತಮ್ಮ ಎಂಟನೇ ವಯಸ್ಸಿನಲ್ಲಿ ಉಪನೀತರಾಗಿ ಸಾಂಪ್ರದಾಯಿಕವಾದ ವೇದಾಧ್ಯಯನವನ್ನು ಮುಂದುವರೆಸಿದರು. ಆಧುನಿಕ ಶಾಲಾವಿದ್ಯಾಭ್ಯಾಸದಕಡೆಗೆ ಗಮನವನ್ನು ಕೊಡದೇ ತಮ್ಮ ಹದಿನೈದನೆಯ ವಯಸ್ಸಿನಲ್ಲಿ ಸಂಪೂರ್ಣ ಯಜುರ್ವೇದವನ್ನು (ಕ್ರಮಾಂತ) ಮುಗಿಸಿದರು. ಅನಂತರ ಬೆಂಗಳೂರಿನ ಶಾಖಾಕಾರ್ಯಾಲಯದಲ್ಲಿ ಎರಡುವರ್ಷಗಳ ಕಾಲವಿದ್ದು ವೇ|ಬ್ರ|ಶ್ರೀ ಕೆ.ಜಿ.ಸುಬ್ರಾಯಶರ್ಮಾರವರಿಂದ ಸಂಸ್ಕೃತ ಮತ್ತು ವೇದಾಂತಾಭ್ಯಾಸವನ್ನು ಮಾಡಿದರು. ಪುನಃ ಹದಿನೆಂಟನೆಯ ವಯಸ್ಸಿನಿಂದ ಇಪ್ಪತ್ತೈದನೆಯ ವಯಸ್ಸಿನವರೆಗೆ ಸ್ವಗ್ರಾಮದಲ್ಲೇ ತಮ್ಮ ಅಣ್ಣನವರಾದ ವೇ|ಬ್ರ|ಶ್ರೀ ಅಶ್ವತ್ಥನಾರಾಯಣಾವಧಾನಿಗಳಿಂದ ಸಂಸ್ಕೃತವ್ಯಾಕರಣ, (ವೇದಾಂತ) ಶಾಂಕರಭಾಷ್ಯವನ್ನು, ವೇದಭಾಷ್ಯದಪರಿಚಯವನ್ನೂ, ತಂದೆಯವರಿಂದ ಜ್ಯೋತಿಶ್ಶಾಸ್ತ್ರದ ಪರಿಚಯವನ್ನು ಹೊಂದಿರುತ್ತಾರೆ. ಮತ್ತೂರಿನಲ್ಲಿ ೧೯೮೮ರಿಂದ ಇವರೇ ಸ್ವತಃ ವೇದಪಾಠಶಾಲೆಯನ್ನು ಸ್ಥಾಪಿಸಿ ಅಲ್ಲಿ ಅನೇಕ ವಿದ್ಯಾರ್ಥಿಗಳಿಗೆ ಸಂಸ್ಕೃತ, ವೇದ, ವೇದಾಂತ, ಜ್ಯೋತಿಷ್ಯಗಳ ಪಾಠವನ್ನು ಹೇಳಿಕೊಡುತ್ತಿದ್ದರು. ಈಗ ೨೦೦೩ನೇ ಫೆಬ್ರವರಿಯಿಂದ ಅಧ್ಯಾತ್ಮಪ್ರಕಾಶ-ಕಾರ್ಯಾಲಯ ಹೊಳೇನರಸೀಪುರದಲ್ಲಿ ಪ್ರಧಾನಾಚಾರ್ಯರಾಗಿ ಶಾಂಕರಭಾಷ್ಯಾಧ್ಯಾಪನ ಸಂಸ್ಕೃತಪಾಠ, ಜ್ಯೋತಿಷ್ಯಪಾಠ, ವೇದಪಾಠಗಳನ್ನು ನಡೆಸಿಕೊಂಡುಬರುತ್ತಿದ್ದಾರೆ. ಇಲ್ಲೂ ಸಹ ೨೦೦೭ರಲ್ಲಿ ಆರುಜನ ವಿದ್ಯಾರ್ಥಿಗಳು ಸಂಪೂರ್ಣ ಪ್ರಸ್ಥಾನತ್ರಯಶಾಂಕರಭಾಷ್ಯದ ಅಧ್ಯಯನವನ್ನು ಪೂರ್ಣಗೊಳಿಸಿ ಪರೀಕ್ಷೆಗಳನ್ನು ಕೊಟ್ಟು ಅಧ್ಯಾತ್ಮವಿದ್ಯಾಪ್ರವೀಣ ಎಂಬ ಪ್ರಶಸ್ತಿಯನ್ನು ಹೊಂದಿರುತ್ತಾರೆ. ಈಗಲೂ ಸಹ ಎಂದಿನಂತೆ ಪ್ರತಿನಿತ್ಯ ಸಾಂಪ್ರದಾಯಿಕವಾಗಿ ಭಾಷ್ಯಪಾಠಾದಿಗಳು ನಡೆಯುತ್ತಿದೆ. ಈ ವಿದ್ವಾಂಸರು ಅನೇಕ ಕಡೆಗಳಲ್ಲಿ ಇಂದಿಗೂ ವೇದಾಂತಪ್ರವಚನಗಳನ್ನು, ಶಿಬಿರಗಳನ್ನು ಈಗಲೂ ನಡೆಸಿಕೊಂಡುಬರುತ್ತಿದ್ದಾರೆ. ಇವರ ವೇದಾಂತಬೋಧನೆ ಮತ್ತು ಉಪನ್ಯಾಸಗಳು ಶುದ್ಧಶಾಂಕರ ಪ್ರಕ್ರಿಯಾನುಸಾರವಾಗಿಯೂ ಪದವಾಕ್ಯಪ್ರಮಾಣಭರಿತವಾಗಿಯೂ ಇವೆ. ಇವರು ಶಂಕರಭಾಷ್ಯದ ಪಠನ, ಪಾಠನ, ಹಾಗೂ ಪ್ರಚಾರಗಳನ್ನೇ ತಮ್ಮ ಉಸಿರನ್ನಾಗಿ ಮಾಡಿಕೊಂಡು, ನೈಷ್ಠಿಕ ಬ್ರಹ್ಮಚರ್ಯೆಯಿಂದ ಗುರುಸೇವೆಯಲ್ಲೇ ಕಾಲಕಳೆಯುತ್ತಿದ್ದಾರೆ.

## ವೇದಾಂತರಸಿಕೇಷು ವಿಜ್ಞಪ್ತಿಃ

## ವೇದಾಂತರಸಿಕರಲ್ಲಿ ವಿಜ್ಞಪ್ತಿಯು

ಅಯಿ ಮಹಾಭಾಗಾಃ, ಸುವಿದಿತಮೇತತ್ ಸರ್ವೇಷಾಂ ವಃ, ಶ್ರೀಮಚ್ಛಂಕರ-ಭಗವತ್ಪಾದಾನಾಂ ಧವಲಕೀರ್ತಿರಿದಾನೀಮ್ ಅಖಿಲಭೂಮಂಡಲವ್ಯಾಪಿನೀತಿ | ತದೀಯಭಾಷ್ಯಾಣಿ, ತತ್ಕರ್ತೃಕತ್ವೇನ ಪ್ರಥಿತಾನಿ ಕತಿಚಿತ್ ಪ್ರಕರಣಾನಿ ಚ ಯಥೈವ ಭಾರತೇ ದೇಶೇ ತಥೈವ ವಿದೇಶೇಷ್ವಪಿ ಭಾಷಾಂತರಾನುವಾದಭೂಷಿತಾನಿ ತತ್ತ್ವ-ಜಿಜ್ಞಾಸೂನ್ ವೇದಾಂತದರ್ಶನಸೌಂದರ್ಯಸಮಾಕೃಷ್ಟಚಿತ್ತಾನ್ ಸಮಾಪಾದಯಂತಿ ವಿರಾಜಂತ ಇತಿ ಚ ||

ಅಯ್ಯಾ ! ಭಾಗ್ಯವಂತರಿರಾ ! ನಿಮಗೆಲ್ಲರಿಗೂ ಇದು ಚೆನ್ನಾಗಿ ಗೊತ್ತಿರುವ ವಿಚಾರವೇ ಆಗಿದೆ. ಏನೆಂದರೆ, ಶ್ರೀಮಚ್ಛಂಕರಭಗವತ್ಪಾದರ ಪರಿಶುದ್ಧ ಕೀರ್ತಿಯು ಈಗ ಸಮಸ್ತ ಭೂಮಂಡಲಕ್ಕೆಲ್ಲಾ ಹರಡಿದೆ ಎಂಬ ವಿಚಾರವು, ಅಷ್ಟೇ ಅಲ್ಲ, ಅವರು ರಚಿಸಿದ್ದಾದದ್ದೆಂದು ಪ್ರಸಿದ್ಧವಾದ ಭಾಷ್ಯಗಳು ಮತ್ತು ಕೆಲವು ಪ್ರಕರಣಗಳು ನಮ್ಮ ಭಾರತದೇಶದಲ್ಲಿ ಹೇಗೋ ಹಾಗೆ ವಿದೇಶಗಳಲ್ಲೂ ಸಹ ಅನುವಾದಗಳಿಂದಲಂಕೃತಗೊಂಡು ತತ್ವಜಿಜ್ಞಾಸುಗಳ ಮನಸ್ಸನ್ನು ವೇದಾನ್ತದರ್ಶನದ ಸೌಂದರ್ಯದಿಂದ ಸೆಳೆದುಕೊಂಡದ್ದಾಗಿ ಮಾಡುತ್ತಾ ಕಂಗೊಳಿಸುತ್ತಿವೆ ಎಂಬುದೂ ಸರ್ವವಿದಿತವಾಗಿದೆ.

ಇದಾನೀಂ ನಾಸ್ತಿ ತಾದೃಶೋ ಜನೋಽಸ್ಮದ್ದೇಶೇ ದೇಶಾಂತರೇ ವಾ ಕೃತಬುದ್ಧಿತ್ವೇನ ಪರಿಗಣಿತೋ ಯಸ್ಯ ಶ್ರುತಿಗೋಚರಂ ನಾಭೂತ್ ಶಾಂಕರ-ವೇದಾಂತದರ್ಶನಮ್ | ಅದ್ಯತನಸಕಲವಿದ್ಯಾನಿಲಯೇಷು ವಾ ಸಾಂಪ್ರದಾಯಿಕ-ಪದ್ಧತ್ಯನುಸಾರಿಸಂಸ್ಕೃತವಿದ್ಯಾಶಾಲಾಸು ವಾ ಯಸ್ಮಿನ್ ಕಸ್ಮಿಂಶ್ಚಿದಪಿ ವಿದ್ಯಾಸ್ಥಾನೇ ನಿಷ್ಣಾತಾಃ ಶಂಕರಭಗವತ್ಪಾದಾನಾಂ ವೇದಾಂತಪ್ರಸ್ಥಾನವಿಷಯೇ ಈಷದಾದರ-ಪ್ರಕಟನಮ್ ಆತ್ಮನೋ ಗೌರವಾವಹಮಿತ್ಯವಶ್ಯಂ ಮನ್ವತೇ| ಶಾಂಕರವೇದಾಂತಾ-ಭ್ಯಾಸಾಸಕ್ತಾಸ್ತು ಪರೀಕ್ಷಾನಿಮಿತ್ತೇನ ನಿಯಮಿತಾನ್ ತಾಂಸ್ತಾನ್ ವ್ಯಾಖ್ಯಾನೋಪ-ವ್ಯಾಖ್ಯಾನಸಹಿತಾನ್ ಭಾಷ್ಯಭಾಗಾನಧೀತ್ಯ ವಿದ್ವತ್ಪದಾಂಕಿತಾ ಭೂಯಾಸ್ಮೇತಿ ಸೋತ್ಕಂಠಮಾಶಾಸತೇ; ಅದ್ವೈತವಿದ್ವತ್ಪ್ರಕಾಂಡಾಶ್ಚ ವಿವಿಧವ್ಯಾಖ್ಯಾನಪ್ರಸ್ಥಾನ-ಪ್ರಕಾರಾನುಸಾರೇಣ ಶಾಂಕರವೇದಾಂತಮಧಿಕೃತ್ಯ ಭಾಷಣಗ್ರಂಥರಚನಾದಿದ್ವಾರೇಣ ತತ್ರ

ತತ್ರ ಸಭಾಸು ವಾಕ್ಯಾರ್ಥನಿರ್ಣಯಾರ್ಥಂ ತದ್ವಿದ್ಯೈಃ ಸಹ ಸಂವಾದೇನ ಚ. ಯಶೋಧನಾರ್ಜನೇನ ಸಂತುಷ್ಯಂತಿ | ಭಾಷ್ಯಾಂತರಪ್ರಸ್ಥಾನೇಷು, ಪಾಶ್ಚಾತ್ತ್ಯತತ್ತ್ವ-ಚಿಂತಕೋಪಜ್ಞಪ್ರಸ್ಥಾನೇಷು ವಾ ಕೃತಪರಿಶ್ರಮಾಸ್ತರ್ಕರಸಿಕಾಸ್ತು ಶಾಂಕರವೇದಾಂತ-ಪ್ರಶಂಸಾದೂಷಣಾನ್ಯತರಭೂಯಿಷ್ಠಭಾಷಣಲೇಖನೈಃ ಸ್ವವೈದುಷ್ಯಂ ಚಿಖ್ಯಾಪಯಿಷಂತಿ| ಅಪಿ ಚ ನಾಲ್ಪಸಂಖ್ಯಾಕಾಃ ಸಂತಿ ನಿವಾಸಿನೋ ದೇಶೇಽಸ್ಮಿನ್ ಯೇ ಸ್ವಸ್ವಪ್ರಾಂತೇ ಪ್ರತಿಸಂವತ್ಸರಂ ಶಂಕರಜಯಂತ್ಯಾದ್ಯುತ್ಸವಸಮಾರಂಭೇಣ ಭಗವತ್ಪಾದೇಷ್ವಾತ್ಮನೋ ಭಕ್ತ್ಯತಿಶಯಮ್ ಆವಿಷ್ಕುರ್ವಂತಿ | ತದೇವಂ ಸರ್ವಥಾಪೀದಾನೀಂ ದಿಗಂತವಿಶ್ರಾಂತ-ಕೀರ್ತಯೋ ಭಗವತ್ಪಾದಾ ಇತಿ ಕಸ್ಯ ತದ್ಭಕ್ತಸ್ಯ ಮುದೇ ನ ಸ್ಯಾತ್ ?

ತಿಳಿದವರೆನಿಸಿಕೊಂಡವರಾಗಿದ್ದು ಶಾಂಕರವೇದಾಂತದರ್ಶನವನ್ನು ಕಿವಿಯ ಮೇಲೆ ಹಾಕಿಕೊಳ್ಳದೇ ಇರುವ ಜನರು (ಎನ್ನುವರು) ನಮ್ಮ ದೇಶದಲ್ಲಾಗಲೀ ಬೇರೆ ದೇಶದಲ್ಲಾಗಲೀ ಈಗ ಇಲ್ಲವೇ ಇಲ್ಲ ಎನ್ನಬಹುದು. ಇಂದಿನ ಎಲ್ಲಾ ವಿದ್ಯಾಶಾಲೆಗಲ್ಲೂ ಸಾಂಪ್ರದಾಯಿಕ ಪದ್ಧತಿಯನ್ನನುಸರಿಸುವ ಸಂಸ್ಕೃತವಿದ್ಯಾಶಾಲೆಗಳಲ್ಲೂ ಅಥವಾ ಇನ್ಯಾವ ವಿದ್ಯಾಸ್ಥಾನದಲ್ಲಾಗಲೀ ನಿಷ್ಣಾತರಾದ ಪಂಡಿತರಿರುತ್ತಾರೋ ಅವರೆಲ್ಲರೂ ಶಂಕರಭಗವತ್ಪಾದರ ವೇದಾನ್ತಪ್ರಸ್ಥಾನ ವಿಷಯದಲ್ಲಿ ಸ್ವಲ್ಪವಾದರೂ ಗೌರವವನ್ನು ಪ್ರಕಟಪಡಿಸುವುದೆಂಬುದೇನಿದೆ ಅದು ತಮಗೆ ಗೌರವವನ್ನು ತಂದುಕೊಡು-ವಂಥದ್ದೆಂದು ಅವಶ್ಯವಾಗಿ ತಿಳಿದಿರುತ್ತಾರೆ. ಶಾಂಕರವೇದಾಂತವನ್ನು ಅಭ್ಯಾಸಮಾಡುವ ಆಸಕ್ತ ವಿದ್ಯಾರ್ಥಿಗಳು ಪರೀಕ್ಷಾನಿಮಿತ್ತವಾಗಿ ಕೆಲ ಕೆಲವು ಗೊತ್ತಾದ ವ್ಯಾಖ್ಯಾನ ಉಪವ್ಯಾಖ್ಯಾನ ಸಹಿತವಾದ ಭಾಷ್ಯಭಾಗದ ಅಧ್ಯಯನವನ್ನು ಮಾಡಿ ವಿದ್ವಾಂಸರ ಹೆಸರಿನಿಂದ ಕೂಡಿದವರಾದೇವು! ಎಂದು (ಬಹಳ) ತವಕದಿಂದ ಇಷ್ಟಪಡುವವರಾಗಿರುತ್ತಾರೆ. (ಇನ್ನು) ಅದ್ವೈತ ವಿದ್ಯಾಪ್ರಕಾಂಡರಾದ (ವಿದ್ವಾಂಸರು) ನಾನಾತರಹದ ವ್ಯಾಖ್ಯಾನದ ಮಾರ್ಗವನ್ನನುಸರಿಸುವ ರೀತಿಯಿಂದ ಶಾಂಕರವೇದಾಂತವನ್ನಾಶ್ರಯಿಸಿ, ಉಪನ್ಯಾಸವನ್ನು ಮಾಡುವುದು, ಗ್ರಂಥಗಳನ್ನು ಬರೆಯುವುದು ಮುಂತಾದವುಗಳ ಮೂಲಕ, ಹಾಗೆಯೇ ಅಲ್ಲಲ್ಲಿ ಸಭೆಗೆ ಹೋಗಿ ವಾಕ್ಯಾರ್ಥನಿರ್ಣಯಕ್ಕಾಗಿ ಅದನ್ನು ಬಲ್ಲವರೊಡನೆ ವಾದವನ್ನು ಮಾಡಿ ಕೀರ್ತಿಯನ್ನೂ ಹಣವನ್ನೂ ಸಂಪಾದನೆ ಮಾಡುವುದರ ಮೂಲಕ ಸಂತುಷ್ಟರಾಗುತ್ತಿದ್ದಾರೆ! ಬೇರೆ ಭಾಷ್ಯದ ಪ್ರಸ್ಥಾನದಲ್ಲಾಗಲೀ (ದ್ವೈತ, ವಿಶಿಷ್ಟಾದ್ವೈತಾದಿ), ಪಾಶ್ಚಾತ್ಯತತ್ತ್ವಚಿಂತಕರಿಗೆ

ಒಪ್ಪಿಗೆಂಬಾದ ಪ್ರಸ್ಥಾನದಲ್ಲಾಗಲೀ ಪರಿಶ್ರಮವನ್ನು ಹೊಂದಿದ ತರ್ಕರಸಿಕರಾದವರು, ಶಾಂಕರವೇದಾಂತವನ್ನು ಹೊಗಳುವುದು ಅಥವಾ ದೂಷಣೆ ಮಾಡುವುದನ್ನೇ ಹೆಚ್ಚಾಗಿ ಮಾಡುವ ಭಾಷಣ, ಲೇಖನಗಳ ಮೂಲಕ ತಮ್ಮ ಪಾಂಡಿತ್ಯವನ್ನು ಪ್ರಖ್ಯಾಪನೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತಾರೆ! ಈ ದೇಶದಲ್ಲೂ ಪ್ರತಿಸಂವತ್ಸರ ತಮ್ಮ ತಮ್ಮ ಸ್ಥಳದಲ್ಲೇ ಇದ್ದು ಶಂಕರ ಜಯಂತಿಯೇ ಮುಂತಾದ ಉತ್ಸವಸಮಾರಂಭದ ಮೂಲಕ ಭಗವತ್ಪಾದರವರ ವಿಷಯದಲ್ಲಿ ಹೆಚ್ಚಾಗಿ ಭಕ್ತಿಯನ್ನು ತೋರಿಸುವ ಜನರೂ ಸಹ ಕಡಿಮೆ ಏನಿರುವುದಿಲ್ಲ. ಹೀಗೆ ಎಲ್ಲಾ ಕಡೆಯಲ್ಲೂ, ಭಗವತ್ಪಾದರ ಕೀರ್ತಿಯು ಹರಡಿಕೊಂಡಿದೆ ಎಂದಾದರೆ ಅವರ ಭಕ್ತರಾಗಿದ್ದ ಯಾರಿಗೆ ತಾನೆ ಸಂತೋಷವಾಗದೇ ಇದ್ದೀತು !.

ಇದಂ ತ್ವಸಂತೃಪ್ತಿಸ್ಥಾನಂ ತತ್ತ್ವಪ್ರಕ್ಷಪಾತಿನಾಂ ಯದೇತಾದೃಶಸಂಭ್ರಮಯುತಾ ಅಪ್ಯೇತದ್ದೇಶೀಯಾ ದೇಶಾಂತರೀಯಾ ವಾ ವಿಚಕ್ಷಣಾಃ, ನೈವ ಚಿತ್ತಂ ಬಧ್ನಂತಿ ಶಾಂಕರಾದ್ವೈತಸತತ್ತ್ವನಿರ್ಧಾರಣೇ ಇತಿ | ಮಹನೀಯಕೀರ್ತಯೋ ಹಿ ಭಗವತ್ಪಾದಾಃ ಪ್ರಚಲಂತೀಷ್ವೇವ ನೈಕಾಸು ವೇದಾಂತವ್ಯಾಖ್ಯಾನರೂಪಾಸು ಪ್ರಾಚೀನಾಸ್ವದ್ವೈತಿ-ಕೃತವೃತ್ತಿಷು ತದಾದೃತಪ್ರಕ್ರಿಯಾವಿಶೇಷೈರಸಂತುಷ್ಟಾಃ ಸ್ವಾನಿ ಭಾಷ್ಯಾಣಿ ಪ್ರಾಣೈಷುಃ, ಅವಿರಕಾರ್ಷುಶ್ಚ ತತ್ರ ವಿವಿಧಾನ್ ದೋಷಾನಿತಿ ಪ್ರಸಿದ್ಧಮೇತತ್ | ತತ್ರೈವಂ ಸ್ಥಿತೇ ವಸ್ತುವೃತ್ತಂ ಜಾನಾನಾ ಅಸ್ಮಾಕೀನಾ ಅಪಿ ಪಂಡಿತಾಃ, ಪಾಶ್ಚಾತ್ತ್ಯವಿಮರ್ಶಕಜನವದೇವ, "ದ್ವೈತಮತಖಂಡನಾರ್ಥಮೇವ ಸೌಗತಾದಿ-ವೇದಬಾಹ್ಯ-ಖಂಡನಾರ್ಥಮೇವ ಚ ಭಾಷ್ಯಾಣಿ ನ್ಯಭಾನ್ತ್ಸುರ್ಭಗವತ್ಪಾದಾಃ" ಇತಿ ವದಂತಿ, ವ್ಯಾಖ್ಯಾನಕಾರಾಣಾಂ ಪ್ರಸ್ಥಾನಾನಿ ಪರಸ್ಪರವಿರುದ್ಧತ್ವೇನ ಸ್ಪಷ್ಟಮಾಭಾಸಮಾನಾನ್ಯಪಿ, ಅದ್ವೈತಪ್ರತಿ-ಪತ್ತ್ಯುಪಾಯದರ್ಶಕತ್ವಾತ್ ನ ದುಷ್ಯಂತಿ ಇತಿ ಕಥಂಚಿನ್ಮನಃ ಸಮಾಧಾನಂ ದಧತೇ| ಭಾಷ್ಯಕಾರೈರ್ದೂಷಿತಾನ್ಯೇವ ಚ ಪ್ರಾಚೀನಮತಾನಿ ವಿಪರಿಣಮಯ್ಯ ರೂಪಾಂತರೇಣ ಸ್ವೀಕುರ್ವತೇ | ಆಧುನಿಕವಿದ್ಯಾಭ್ಯಾಸಪದ್ಧತಿಮನುರುಂಧಾನಾ ಅಪಿ ಸಕಲವಿದ್ಯಾನಿಲ-ಯಾಧಿಕಾರಿಣೋಽಪಿ, ತೈರೇವ ಪಂಡಿತೈಃ ಪ್ರಭಾವಿತಾಃ ಪರಸ್ಪರವಿರುದ್ಧವ್ಯಾಖ್ಯಾನ-ಸಮೇತಾನಪಿ ಭಾಷ್ಯಗ್ರಂಥಾನ್ ಪರೀಕ್ಷಾಪಠ್ಯಗ್ರಂಥಜಾತಮಧ್ಯೇ ಸಂವಿದಧತೇ | ವ್ಯಾಕುಲಯಂತಿ ಚಾಧ್ಯೇತೃಜನಚಿತ್ತಮ್ ಇತ್ಯಹೋ ಕಾಲವೈಭವಮ್ !

ಈ ರೀತಿಯಾದ ಸಂಭ್ರಮದಿಂದ ಕೂಡಿದ್ದರೂ ತತ್ವವಿಚಾರದಲ್ಲಿ

ಅಭಿಮಾನವಿರುವವರಿಗೆ ಇದು ಮಾತ್ರ ಬೇಸರಕ್ಕೆ ಕಾರಣವಾದ ವಿಷಯವು, ಯಾವುದೆಂದರೆ – ಈ ದೇಶದ ಅಥವಾ ಬೇರೆ ದೇಶದವರಾದ ವಿದ್ವಾಂಸರು ಶಾಂಕರಾದ್ವೈತದ ಸ್ವರೂಪದ ನಿರ್ಧಾರಣೆಯ ವಿಷಯದಲ್ಲಿ ಮನಸ್ಸನ್ನಿಡುವುದೇ ಇಲ್ಲ. ಮಹಾಮಹಿಮರ ಪ್ರಶಂಸೆಗೆ ಪಾತ್ರರಾದ ಭಗವತ್ಪಾದರು – ಅನೇಕ ಉಪನಿಷತ್ತುಗಳಿಗೆ ವ್ಯಾಖ್ಯಾನಮಾಡಿದ್ದಾದ ಪ್ರಾಚೀನರಾದ ಅದ್ವೈತಿಗಳು ಮಾಡಿದ್ದಾದ ವೃತ್ತಿಗಳಿದ್ದರೂ, ಅವರು ಅನುಸರಿಸಿದ್ದಾದ ಪ್ರಕ್ರಿಯಾರೂಪದಲ್ಲಿ ಸಂತೋಷಗೊಳ್ಳದೇ – ತಾವು (ಖುದ್ದಾಗಿ) ಭಾಷ್ಯಗಳನ್ನು ಬರೆದರು. ಆ ಹಿಂದಿನವರ ವ್ಯಾಖ್ಯಾನದಲ್ಲಿರುವ ದೋಷಗಳನ್ನೂ ಸಹ ತೋರಿಸಿದರು ಎಂಬುದು ಸುಪ್ರಸಿದ್ಧವಾಗಿದೆ. ಹೀಗೆ ನಿಜವಿಚಾರವನ್ನು ತಿಳಿದವರಾಗಿದ್ದರೂ ನಮ್ಮವರೇ ಆದ ಪಂಡಿತರೂ ಸಹ ಪಾಶ್ಚಾತ್ಯವಿಮರ್ಶಕರಂತೆ "ದ್ವೈತಮತದಖಂಡನೆಗಾಗಿಯೂ, ಬೌದ್ಧರೇ ಮುಂತಾದ ಅವೈದಿಕಮತದ ಖಂಡನೆಗಾಗಿಯೂ ಭಾಷ್ಯಕಾರರು ಭಾಷ್ಯವನ್ನು ಬರೆದರು" ಎಂದು ಹೇಳುವರು! ವ್ಯಾಖ್ಯಾನಕಾರರ ಪ್ರಸ್ಥಾನಗಳು ಪರಸ್ಪರ ವಿರುದ್ಧವಾಗಿ ಸ್ಪಷ್ಟವಾಗಿ ತೋರುತ್ತಿದ್ದರೂ ಅವೆಲ್ಲ ಅದ್ವೈತತತ್ತ್ವವನ್ನು ತಿಳಿಯುವುದಕ್ಕೆ ಉಪಾಯವನ್ನು ತೋರಿಸುತ್ತವೆಯಾದ್ದರಿಂದ ದೋಷವಿಲ್ಲವೆಂದು ಹೇಗೋ ಮನಃಸಮಾಧಾನ–ವನ್ನು ಮಾಡಿಕೊಂಡಿರುತ್ತಾರೆ! ಭಾಷ್ಯಕಾರರು ಖಂಡನೆಮಾಡಿದ್ದಾದ ಪ್ರಾಚೀನ ಮತಗಳನ್ನೇ ಬದಲಾಯಿಸಿಕೊಂಡು (ಅವನ್ನೇ) ರೂಪಾಂತರದಿಂದ ಸ್ವೀಕರಿಸಿರುತ್ತಾರೆ! ಆಧುನಿಕ ವಿದ್ಯಾಭ್ಯಾಸಪದ್ಧತಿಯನ್ನನುಸರಿಸುವವರಾದ ಎಲ್ಲಾ ವಿದ್ಯಾನಿಲಯದ ಅಧಿಕಾರಿಗಳೂ ಸಹ ಆ ಪಂಡಿತರಿಂದ ಪ್ರಭಾವಿತರಾಗಿ ಪರಸ್ಪರವಾಗಿ ವಿರುದ್ಧವಾದ ವ್ಯಾಖ್ಯಾನದಿಂದ ಕೂಡಿದ್ದಾದ ಭಾಷ್ಯಗ್ರಂಥಗಳನ್ನು ಪರೀಕ್ಷೆಯಲ್ಲಿ ಓದಬೇಕಾದ ಗ್ರಂಥದ ಸಮೂಹದ ಮಧ್ಯೆ (ಇವನ್ನೂ) ಸೇರಿಸಿರುತ್ತಾರೆ ! ಮತ್ತು ಅಧ್ಯಯನವನ್ನು ಮಾಡುತ್ತಿರುವವರ ಮನಸ್ಸನ್ನು ಗೊಂದಲಗೊಳಿಸುತ್ತಿದ್ದಾರೆಂಬುದು ಕಾಲವಿಪರ್ಯಾಸವಿದು !

ತದೇತಾದೃಶೀಂ ಶಾಂಕರವೇದಾಂತಾಭ್ಯಾಸಕ್ರಮಸ್ಯ ದುರವಸ್ಥಾಮ್ ಆಕಲಯತಾ ಮಯಾ ವೇದಾಂತತತ್ತ್ವಜಿಜ್ಞಾಸುಜನಚಿತ್ತಕ್ಲೇಶಪರಿಹಾರಾರ್ಥಂ ಶಂಕರಪ್ರಸ್ಥಾನ-ಯಾಥಾರ್ಥ್ಯಮಾವಿಶ್ಚಿಕೀರ್ಷುಣಾ ಮಾಂಡೂಕ್ಯರಹಸ್ಯವಿವೃತಿಃ, ಅಧ್ಯಾಸಭಾಷ್ಯವ್ಯಾಖ್ಯಾ ಸುಗಮಾಖ್ಯಾ, ಜಿಜ್ಞಾಸಾಸೂತ್ರಭಾಷ್ಯಾರ್ಥತತ್ತ್ವವಿವೇಚನೀ - ಇತ್ಯಾದಯೋ ಗ್ರಂಥಾ ವಿರಚಿತಾಃ | ಶುದ್ಧಶಾಂಕರಪ್ರಕ್ರಿಯಾನಿರ್ಧಾರಣಾವಶ್ಯಕತಾಂ ಪ್ರಾಚೀನಾರ್ವಾಚೀನಾ-

ದ್ವೈತಿಪ್ರಸ್ಥಾನಾನಾಂ ಚ ಕೇಷಾಂಚಿತ್ ತಾದೃಶಪ್ರಕ್ರಿಯಾವಿರುದ್ಧತ್ವಾದ್ ದೋಷಕಲಂಕಿತತಾಂ ಚ ಪ್ರದಿದರ್ಶಯಿಷಯಾ ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾಭಿಧೋ ವಿಸ್ತೀರ್ಣತರೋ ನಿಬಂಧೋಽಪಿ ವಿದುಷಾಂ ಪರಿಶೀಲನಾರ್ಥಂ ಪ್ರಾಣಾಯಿ | ಇದಾನೀಂ ತು ಸುಕುಮಾರಮತೀನಾಂ ಸಂಕ್ಷೇಪಾಭಿರುಚೀನಾಂ ಕೃತೇ ಶುದ್ಧಶಾಂಕರಪ್ರಕ್ರಿಯಾ-ಭಾಸ್ಕರಂ ನಾಮೇಮಂ ಗ್ರಂಥಂ ಭಾಗಭಾಗಶಃ ಪ್ರಸ್ತೌಮಿ ಸ್ವಲ್ಪಮೂಲ್ಯೇನೈವಾಸಾದ್ಯ ಗ್ರಂಥಭಾಗಂ ತತ್ತದ್ವಿಷಯೇ ಸುನಿಶ್ಚಿತಾರ್ಥತ್ವಂ ಯಥಾ ನಿಷ್ಪದ್ಯೇತ ತಾದೃಶಾನಾ-ಮಪ್ಯಧಿಕಾರಿಣಾಮಿತಿ ||

ಈ ತರಹದ್ದಾದ ಶಾಂಕರವೇದಾಂತದ ಅಭ್ಯಾಸ ಕ್ರಮದ ದುಃಸ್ಥಿತಿಯನ್ನು ಕಂಡು, ವೇದಾನ್ತದ ತತ್ತ್ವವನ್ನು ತಿಳಿಯಬೇಕೆನ್ನುವರ ಚಿತ್ತದ ಕಷ್ಟವನ್ನು ಪರಿಹಾರ ಮಾಡುವುದಕ್ಕಾಗಿ ಶಂಕರಾಚಾರ್ಯರ ಪ್ರಸ್ಥಾನದ ನಿಜವನ್ನು ತೋರಿಸುವುದಕ್ಕಾಗಿ "ಮಾಂಡೂಕ್ಯರಹಸ್ಯವಿವೃತಿಯನ್ನೂ" "ಸುಗಮಾ" ಎಂಬ ಹೆಸರಿನ ಅಧ್ಯಾಸಭಾಷ್ಯದ ವ್ಯಾಖ್ಯಾನವನ್ನೂ, ಜಿಜ್ಞಾಸಾಸೂತ್ರವೇ (ಮುಂತಾದ ನಾಲ್ಕು ಅಧಿಕರಣದ) ಸೂತ್ರಭಾಷ್ಯಾರ್ಥತತ್ತ್ವವಿವೇಚನಿಯನ್ನೂ ಇನ್ನೂ ಕೆಲವು ಗ್ರಂಥಗಳನ್ನೂ (ನಾನು) ರಚಿಸಿರುತ್ತೇನೆ. ಪರಿಶುದ್ಧವಾದ ಶಾಂಕರಪ್ರಕ್ರಿಯೆಯ ನಿರ್ಧಾರಣೆಯನ್ನು ಮಾಡಬೇಕೆಂಬುದಕ್ಕಾಗಿಯೂ, ಕೆಲವು ಪ್ರಾಚೀನಾರ್ವಾ–ಚೀನವಾದ ಅದ್ವೈತಿಪ್ರಸ್ಥಾನಗಳ ಪೈಕಿ, ಕೆಲವರಲ್ಲಿರುವ (ವಿಚಾರವು) ಆಚಾರ್ಯರ ಪ್ರಕ್ರಿಯೆಗೆ ವಿರುದ್ಧವಾದದ್ದಾದ್ದರಿಂದ (ಅವು) ದೋಷದಿಂದ ಕೂಡಿದ್ದಾಗಿದೆ ಎಂಬುದನ್ನು ತೋರಿಸುವುದಕ್ಕಾಗಿ "ವೇದಾಂತ ಪ್ರಕ್ರಿಯಾಪ್ರತ್ಯಭಿಜ್ಞಾ" ಎಂಬ ಹೆಸರಿನ ಬಹುವಿಸ್ತಾರವಾದ ಗ್ರಂಥವನ್ನು ವಿದ್ವಾಂಸರ ಪರಿಶೀಲನೆಗಾಗಿ ರಚಿಸಿರುತ್ತೇನೆ. ಈಗಾಗಲಾದರೋ ಕೋಮಲ ಬುದ್ಧಿಯುಳ್ಳವರಾದ ಮತ್ತು ಸಂಕ್ಷೇಪವಿಚಾರದಲ್ಲಿ ಅಭಿರುಚಿಯನ್ನು ಹೊಂದಿದವರಿಗಾಗಿ "ಶುದ್ಧಶಾಂಕರಪ್ರಕ್ರಿಯಾಭಾಸ್ಕರ" ಎಂಬ ಹೆಸರಿನ ಗ್ರಂಥವನ್ನು ಭಾಗಭಾಗವಾಗಿ ರಚಿಸಿರುತ್ತೇನೆ. ಏಕೆಂದರೆ ಈ ತರಹದ ಜನರಿಗೂ ಅತಿ ಕಡಿಮೆಯ ಬೆಲೆಯುಳ್ಳ ಗ್ರಂಥವು – ಆಯಾ ವಿಷಯದಲ್ಲಿ ದೃಢವಾದ ತಿಳಿವಳಿಕೆಯನ್ನುಂಟು ಮಾಡುವುದೆಂಬ ಭರವಸೆಯಿಂದ (ರಚಿಸಿರುತ್ತೇನೆ). (ಏಕೆಂದರೆ ಕಡಿಮೆ ಬೆಲೆಗೇ ಗ್ರಂಥವನ್ನು ಕೊಂಡುಕೊಂಡವರಾಗಿ ಆ ವಿಷಯದಲ್ಲಿ ನಿಶ್ಚಿತವಾದ ಅಭಿಪ್ರಾಯವನ್ನು ಆ ತರಹದ ಜನರೂ ಹೊಂದಲಿ ಎಂಬ ಉದ್ದೇಶದಿಂದ ರಚಿಸಿರುತ್ತೇನೆ).

ಆವೇದಿತಮೇವ ಪ್ರಥಮಭಾಗವಿಜ್ಞಪ್ತೌ ಯಥಾ ಪರಸ್ಪರವಿರುದ್ಧಪ್ರಸ್ಥಾನ-ಸಂಕರದೂಷಿತಾಯಾಂ ಅದ್ಯತನಶಾಂಕರವೇದಾಂತಪಠನಪಾಠನಪದ್ಧತೌ ಪರಿಷ್ಕಾರಸ್ಯಾವಶ್ಯಕತಾ ಅಸ್ತಿ | ಯಸ್ಯಾಃ ಯಥಾಶಕ್ತಿಪರಿಹಾರಾಯ ಮಯಾ ಶುದ್ಧಶಾಂಕರಪ್ರಕ್ರಿಯಾಭಾಸ್ಕರಾಭಿಖ್ಯಃ ಪ್ರಕೃತಗ್ರಂಥೋ ಭಾಗಶಃ ಪ್ರಕಾಶಯಿತುಮ್ ಆರಬ್ಧಃ | ತತ್ರ ಕಿರಣದ್ವಯಾತ್ಮಕೇ ಪ್ರಥಮೇ ಭಾಗೇ ಪ್ರತಿಪಾದಿತಮ್ ಲಬ್ಧಪ್ರಚಾರಾಣಾಮಪ್ಯದ್ವೈತಪ್ರಸ್ಥಾನಭೇದಾನಾಂ ಸಾಂಪ್ರದಾಯಿಕವೇದಾಂತ-ಪ್ರಕ್ರಿಯಾನಭಿಜ್ಞತಯಾ ಜಿಜ್ಞಾಸುಜನಮನಃಪರಿತೋಷಣಾಸಾಮರ್ಥ್ಯಮ್ ಆಕಲಯ್ಯ ಭಗವತ್ಪಾದೈಃ ಪ್ರಸ್ಥಾನತ್ರಯಭಾಷ್ಯಾಣಿ ವಿರಚಿತಾನಿ ಅನಾದಿಸಂಪ್ರದಾಯಾಗತಪ್ರಕ್ರಿಯಾ-ವಿಶೇಷಮಾವಿಷ್ಕೃತ್ಯ ಮುಮುಕ್ಷೂನ್ ಕೃತಾರ್ಥಯಿತುಮಿತಿ | ಅಥಾಯಂ ದ್ವಿತೀಯೋ ಭಾಗ ಉಪಸ್ಥಾಪ್ಯತೇ ಭವತಾಂ ಪುರತಃ ಕಿರಣತ್ರಯಾತ್ಮಕಃ ಯದವಲೋಕನೇನ ನಿಃಸಂಶಯಂ ವಿಜ್ಞಾಯೇತ ಯದಸಾಧಾರಣಪ್ರಕ್ರಿಯಾವಿಶೇಷಾದರಣೇನೈವ ಶಾಂಕರಪ್ರಸ್ಥಾನಂ ತದಿತರೇಭ್ಯಃ ಸರ್ವೇಭ್ಯೋ ವಿಶಿಷ್ಯತ ಇತಿ ||

ಮೊದಲನೆಯ ಭಾಗದ ವಿಜ್ಞಾಪನೆಯಲ್ಲಿ ಇಂದಿನ ಶಾಂಕರವೇದಾನ್ತದ ಪಠನ ಪಾಠನ ಪದ್ಧತಿಯು ಪರಸ್ಪರವಾಗಿ ವಿರುದ್ಧವಾದ ಪ್ರಸ್ಥಾನದ ಕಲಬೆರಿಕೆಯಿಂದ ದೋಷಿತವಾಗಿದೆ ಎಂದಾದ್ದರಿಂದ ಅದರ ಪರಿಷ್ಕರಣದ ಆವಶ್ಯಕತೆ ಇದೆ ಎಂಬುದನ್ನು – ತಿಳಿಸಿರುತ್ತೇವೆ. ಯಾವ ಈ ಶಾಂಕರ ಪ್ರಸ್ಥಾನದಲ್ಲಿ ಸಾಧ್ಯವಾದಷ್ಟು ಮಟ್ಟಿಗೂ ದೋಷವನ್ನು ಪರಿಹಾರವನ್ನು ಮಾಡುವುದಕ್ಕಾಗಿ ನಾನು ಶುದ್ಧಶಾಂಕರ ಪ್ರಕ್ರಿಯಾಭಾಸ್ಕರ ಎಂಬ ಹೆಸರಿನ ಈ ಪ್ರಕೃತ ಗ್ರಂಥವನ್ನು ರಚಿಸಿರುತ್ತೇನೋ, ಅದನ್ನು ಭಾಗ ಭಾಗವಾಗಿ ಬೆಳಕಿಗೆ ತರುವುದಕ್ಕಾಗಿ ಆರಂಭಿಸಿರುತ್ತೇನೆ. ಎರಡು ಕಿರಣವನ್ನು ಒಳಗೊಂಡ ಮೊದಲನೆಯ ಗ್ರಂಥದಲ್ಲಿ ಈ ವಿಚಾರವನ್ನು ತಿಳಿಸಿದ್ದಾಯಿತು. ಏನೆಂದರೆ – ಇಂದು ಪ್ರಚಲಿತವಾದ ಅದ್ವೈತ ಪ್ರಸ್ಥಾನಭೇದಗಳ ಮಧ್ಯೆ, ಸಾಂಪ್ರದಾಯಿಕವಾದ ವೇದಾಂತಪ್ರಕ್ರಿಯೆಯನ್ನು ತಿಳಿಯದೇ ಇರುವುದರಿಂದ ಜಿಜ್ಞಾಸು ಜನರ ಮನಸ್ಸಿಗೆ ಸಂತೋಷವನ್ನುಂಟುಮಾಡುವ ಸಾಮರ್ಥ್ಯವಿಲ್ಲವೆಂಬುದನ್ನು ತಿಳಿದು ಭಗವತ್ಪಾದರು ಪ್ರಸ್ಥಾನತ್ರಯಭಾಷ್ಯವನ್ನು ರಚಿಸಿರುತ್ತಾರೆ. ಅನಾದಿಕಾಲದ ಸಂಪ್ರದಾಯದಲ್ಲಿರುವ ಪ್ರಕ್ರಿಯಾವಿಶೇಷವನ್ನು ಹೊರಪಡಿಸಿ ಮುಮುಕ್ಷುಗಳನ್ನು ಕೃತಾರ್ಥರನ್ನಾಗಿ ಮಾಡಲು (ಈ ರೀತಿ ಭಾಷ್ಯವನ್ನು ಬರೆದಿರುತ್ತಾರೆ). ಈಗ (ವಾಚಕರಾದ ತಮ್ಮ) ಮುಂದೆ ಮೂರು

ಕಿರಣಗಳನ್ನೊಳಗೊಂಡ ೨ನೇ ಭಾಗವನ್ನು ತಂದಿಡಲಾಗುತ್ತದೆ. ಯಾವ ಈ (ಎರಡನೆಯ ಗ್ರಂಥವನ್ನು) ಅವಲೋಕನೆಯನ್ನು ಮಾಡುವುದರಿಂದ ನಿಃಸಂಶಯವಾಗಿ ಶಾಂಕರಪ್ರಸ್ಥಾನವು ಬಾಕಿ ಎಲ್ಲಕ್ಕಿಂತಲೂ ವಿಶೇಷ–ವಾದದ್ದಾಗಿದೆ ಎಂಬುದು ಹೇಗಾದರೆ ಗೊತ್ತಾದೀತೋ, ಇದರಲ್ಲಿರುವ ಯಾವ ಅಸಾಧಾರಣವಾದ ಪ್ರಕ್ರಿಯಾವಿಶೇಷವನ್ನು ಆದರಿಸುವುದರಿಂದಲೇ ಅದೂ ಸಹ ಗೊತ್ತಾದೀತೋ ಅಂತಹ ಈ ಎರಡು ಕಿರಣಗಳನ್ನು ವಾಚಕರ ಮುಂದೆ ಇಡುವೆವು.

ಅತ್ರ ಚ ಶಾಂಕರವೇದಾಂತಮರ್ಯಾದಾ, ಪ್ರಸ್ಥಾನೇಽಸ್ಮಿನ್ ಸಮಾಶ್ರೀಯ-ಮಾಣಾಯಾಃ ಪ್ರಕ್ರಿಯಾಯಾಃ ಸತತ್ತ್ವಮ್, ಸರ್ವಾಸ್ವಪಿ ಉಪನಿಷತ್ಸು ಭಿನ್ನಭಿನ್ನತ್ವೇನಾ-ಭಾಸಮಾನಾನಾಂ ಚ ಪ್ರಕ್ರಿಯಾಣಾಮ್ ಅಸ್ಯಾ ಏವೈಕಸ್ಯಾ ಅವಾಂತರಭೇದತ್ವಂ ಚ - ಇತ್ಯೇತೇ ವಿಷಯಾ ಯಥಾ ಪಾಠಕಹೃದಯಮಾಗಚ್ಛೇಯುಃ, ತಥಾ ಪ್ರತಿಪಾದನೇ ಯತ್ನಃ ಕೃತಃ ||

ಈ (ಎರಡು ಕಿರಣಗಳಲ್ಲಿ) ಶಾಂಕರವೇದಾನ್ತದ ಮರ್ಯಾದೆ, ಈ (ಶಾಂಕರ) ಪ್ರಸ್ಥಾನದಲ್ಲಿ ಆಶ್ರಯಿಸಿದ್ದಾದ ಪ್ರಕ್ರಿಯೆಯ ನಿಜಸ್ವರೂಪ; ಬೇರೆ ಎಲ್ಲಾ ಉಪನಿಷತ್ತುಗಳಲ್ಲೂ ಬೇರೆಬೇರೆಯಾಗಿ ತೋರಿಬರುತ್ತಿರುವ ಪ್ರಕ್ರಿಯೆಗಳೆಲ್ಲವೂ ಇದೊಂದರದ್ದೇ ಅವಾಂತರಭೇದವಾಗಿದೆ ಎಂಬಿವೇ ಮೊದಲಾದ ವಿಚಾರಗಳನ್ನು ಓದುಗರ ಹೃದಯಕ್ಕೆ ತಟ್ಟುವ ಹಾಗೆ ಇಲ್ಲಿ ಪ್ರತಿಪಾದಿಸುವುದಕ್ಕೆ ನಾವು ಪ್ರಯತ್ನಿಸುವೆವು.

ಆವೇದಿತಮೇವ ಪ್ರಥಮಭಾಗವಿಜ್ಞಪ್ತೌ ಯಥಾ ಪರಸ್ಪರವಿರುದ್ಧ-ಪ್ರಸ್ಥಾನಸಂಕರದೂಷಿತಾಯಾಮ್ ಅದ್ಯತನಶಾಂಕರವೇದಾಂತಪಠನಪಾಠನಪದ್ಧತೌ ಪರಿಷ್ಕಾರಸ್ಯ ಆವಶ್ಯಕತಾ ಅಸ್ತಿ, ಯದರ್ಥಂ ಮಯಾ ಗ್ರಂಥೋಽಯಮಾರಬ್ಧಃ ಪ್ರಕಾಶಯಿತುಂ ಭಾಗಶಃ | ತತ್ರ ಅದ್ವೈತಮೇವ ಸರ್ವವೇದಾಂತಾರ್ಥಃ, ಶಾಂಕರಪ್ರಸ್ಥಾನಸ್ಯ ತು ಅನಿತರಸಾಧಾರಣಸಾಂಪ್ರದಾಯಿಕಪ್ರಕ್ರಿಯಾವಿಶೇಷಾಂಗೀಕಾರನಿಮಿತ್ತಮೇವ ಸಕಲೇತರವೇದಾಂತಪ್ರಸ್ಥಾನವೈಲಕ್ಷಣ್ಯಮ್ - ಇತಿ ಪ್ರಥಮೇ ಭಾಗೇ ಪ್ರತಿಪಾದಿತಮ್| ಶಾಂಕರವೇದಾಂತಮರ್ಯಾದಾಃ, ತತ್ರ ಪ್ರಸ್ಥಾನೇ ಸಮಾಶ್ರೀಯಮಾಣಾಯಾ ಏವ ಪ್ರಕ್ರಿಯಾಯಾ ಸರ್ವವೇದಾಂತಾದೃತತ್ವಮ್, ಪ್ರಕ್ರಿಯಾಯಾಶ್ಚ ತಸ್ಯಾ ಅವಾಂತರಭೇದಾಶ್ಚ ಕತಿಪಯೇ - ಇತ್ಯೇತೇ ವಿಷಯಾಃ ಪ್ರಕಾಶಿತಾ ದ್ವಿತೀಯೇ ಭಾಗೇ||

ಮೊದಲನೆಯ ಭಾಗದ ವಿಜ್ಞಪ್ತಿಯಲ್ಲಿ – ಇಂದಿನ ಶಾಂಕರ ವೇದಾಂತವು ಪಠನ ಪಾಠನ ಪದ್ಧತಿಯಲ್ಲಿರುವ ಪರಸ್ಪರವಿರುದ್ಧವಾದ ಪ್ರಸ್ಥಾನಗಳ ಕಲಬೆರಿಕೆಯಿಂದ ದೂಷಿತವಾಗಿದೆ ಎಂದಾಗಲಾಗಿ ಅದರ ಪರಿಷ್ಕಾರದ ಅವಶ್ಯಕತೆಯು ಇದೆ ಎಂಬುದನ್ನೂ ಅದಕ್ಕಾಗಿಯೇ ಈ ಗ್ರಂಥವನ್ನು ಬರೆಯುವುದಕ್ಕೆ ಹೊರಟಿರುತ್ತೇನೆಂಬ ವಿಚಾರವನ್ನು – ನಾನು ತಿಳಿಸಿ ಕೊಟ್ಟಿರುತ್ತೇನೆ. ಅಲ್ಲಿ ಅದ್ವೈತವೇ ಸಕಲ ವೇದಾಂತಾರ್ಥವೆಂದೂ, ಶಾಂಕರಪ್ರಸ್ಥಾನದ್ದಾದರೋ ಅಸಾಮಾನ್ಯವಾದ ಸಂಪ್ರದಾಯದಿಂದ ಬಂದದ್ದಾದ ಪ್ರಕ್ರಿಯಾವಿಶೇಷವನ್ನು ಒಪ್ಪಿಕೊಂಡಿರುವುದರಿಂದಲೇ ಬಾಕಿ ಎಲ್ಲಾ ವೇದಾನ್ತಪ್ರಸ್ಥಾನಕ್ಕಿಂತಲೂ ವಿಲಕ್ಷಣವಾಗಿದೆ ಎಂಬ ವಿಚಾರವನ್ನು ಮೊದಲನೆಯ ಭಾಗದಲ್ಲಿ ಹೇಳಿದ್ದಾಗಿದೆ. ಎರಡನೆಯ ಭಾಗದಲ್ಲಿ ಶಾಂಕರ ವೇದಾಂತದ ಮರ್ಯಾದೆ, ಆ ಪ್ರಸ್ಥಾನದಲ್ಲಿ ಅನುಸರಿಸಿರುವ ಪ್ರಕ್ರಿಯೆಯೇ ಎಲ್ಲಾ ವೇದಾಂತಗಳಲ್ಲೂ ಸ್ವೀಕರಿಸಿದೆ, ಆ ಪ್ರಕಿಯೆಯ ಅವಾಂತರಭೇದಗಳು ಕೆಲವಿದೆ ಎಂಬುದನ್ನು ತೋರಿಸಿಕೊಟ್ಟಿದ್ದೇವೆ.

ಅಥಾಸ್ಮಿನ್ ತೃತೀಯೇ ಭಾಗೇ ಶಾಂಕರಪ್ರಸ್ಥಾನಸ್ಯ ಪ್ರಾಚೀನಪ್ರಸ್ಥಾ-ನಾಂತರೇಭ್ಯೋ ವೈಶಿಷ್ಟ್ಯಮ್, ತತ್ರ ಚಾಧುನಾತನಪ್ರಸ್ಥಾನಾಂತರಾನುಯಾಯಿಭಿಃ, ಐತಿಹಾಸಿಕದೃಷ್ಟಿಮನುರುಂಧಾನೈಶ್ಚ ಕೈಶ್ಚಿದ್ ವಿಮರ್ಶಕೈಃ, ಅಧ್ಯಾರೋಪ್ಯಮಾಣಸ್ಯ ಬೌದ್ಧಮತಸಾಮ್ಯಸ್ಯ ಪರಿಹರಣಂ ಚ ಯಥಾಶಕ್ತಿ ಪ್ರದರ್ಶಿತಮ್ ||

ಇನ್ನು ಈ ಮೂರನೇ ಭಾಗದಲ್ಲಿ ಶಾಂಕರಪ್ರಸ್ಥಾನವು ಪ್ರಾಚೀನವಾದ ಬೇರೆ ಪ್ರಸ್ಥಾನಕ್ಕಿಂತಲೂ ವಿಶೇಷವಾಗಿದೆ ಎಂಬುದನ್ನೂ, ಮತ್ತು ಆಧುನಿಕವಾದ ಬೇರೆ ಪ್ರಸ್ಥಾನವನ್ನನುಸರಿಸುವವರು ಮತ್ತು ಐತಿಹಾಸಿಕ ದೃಷ್ಟಿಯನ್ನನು-ಸರಿಸುವರೂ ಆದ ಕೆಲವರು ವಿಮರ್ಶಕರು ಈ ಪ್ರಸ್ಥಾನಕ್ಕೆ ಬೌದ್ಧಮತದೊಡನೆ ಸಾಮ್ಯತೆ ಇದೆ ಎಂದು ಏನು ಆರೋಪಿಸಿರುತ್ತಾರೆ ಅದನ್ನು ಯಥಾಮತಿಯಾಗಿ ಪರಿಹರಿಸಿ ತೋರಿಸಿಕೊಟ್ಟಿರುತ್ತೇನೆ.

ಅತ್ರಾಪಿ ಭಾಗೇ ಪ್ರಮಾದಸಂಜಾತಾನ್, ಅಕ್ಷರಾಂಕನದೋಷಾನ್, ಭಾಷಾ-ದೋಷಾನ್, ವಿಚಾರಸರಣಿದೋಷಾಂಶ್ಚ ಆವಿಷ್ಕರ್ತ್ಯೋಪಕರ್ತುಂ ಸಂಪ್ರಾರ್ಥ್ಯಂತೇ ದೋಷಜ್ಞಾಃ, ಯೇನಾಹಂ ಆಧಮರ್ಣ್ಯಪ್ರಕಟನಪೂರ್ವಕಂ ತಾನ್ ದ್ವಿತೀಯಸಂಸ್ಕರಣೇ ದೂರೀಕರ್ತುಂ ಪ್ರಯತೇಯೇತಿ ||

ಈ ಗ್ರಂಥದಲ್ಲಿ ಪ್ರಮಾದದಿಂದಾದ ದೋಷ, ಅಕ್ಷರದೋಷ, ಭಾಷಾದೋಷ ಮತ್ತು ವಿಚಾರಸರಣಿಯಲ್ಲಿ ಏನಾದರೂ ದೋಷವಿದ್ದರೆ, ಅದನ್ನು ತಿಳಿದವರು ತೋರಿಸಿಕೊಟ್ಟು ಉಪಕರಿಸಬೇಕೆಂದು ಪ್ರಾರ್ಥಿಸಿ-ಕೊಳ್ಳುವೆನು. ಹಾಗೆಯೇ ಅವರಿಗೆ ಚಿರಋಣಿತ್ವವನ್ನು ತಿಳಿಸುವುದರ ಮೂಲಕ ಮುಂದಿನ ಸಂಸ್ಕರಣದಲ್ಲಿ ಆ ದೋಷಗಳನ್ನು ಸರಿಪಡಿಸಿಕೊಳ್ಳುವೆನು.

ಅಸ್ಯಾಪಿ ಗ್ರಂಥಸ್ಯ ಮುದ್ರಾಪಣಪ್ರಕಾಶನವಿಕ್ರಯಾದಿಸರ್ವವ್ಯವ-ಹಾರಾಧಿಕಾರಃ ಹೋಳೇನರಸೀಪುರಸ್ಥಾಯ್ಯೈ ಅಧ್ಯಾತ್ಮಪ್ರಕಾಶಕಾರ್ಯಾಲಯ-ಕಾರ್ಯಕಾರಿಸಮಿತ್ಯೈ ಸರ್ವಥಾ ಪ್ರತ್ತೋऽಸ್ತಿ ನಾರಾಯಣಸ್ಮರಣಪೂರ್ವಕಮಿತಿ ||

ಈ ಗ್ರಂಥದ ಮುದ್ರಣ, ಪ್ರಕಾಶನ, ಮಾರುವುದೇ ಮುಂತಾದ ಎಲ್ಲಾ ಅಕಾರವನ್ನೂ ಹೊಳೆನರಸೀಪುರದಲ್ಲಿರುವ ಅಧ್ಯಾತ್ಮ ಪ್ರಕಾಶಕಾರ್ಯಾಲಯದ ಸಮಿತಿಯುವರಿಗೆ ಸಂಪೂರ್ಣವಾಗಿ ನಾರಾಯಣ ಸ್ಮರಣೆಯ ಪೂರ್ವಕ ಕೊಟ್ಟಿರುತ್ತೇನೆ.

ಶಂಕರಚರಣಸ್ಮರಣಾವಲಂಬೀ

**ಗ್ರಂಥಕರ್ತಾ**

**ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಭಿಕ್ಷುಃ**

ಶ್ರೀ ಶಂಕರಚರಣಸ್ಮರಣೆಯನ್ನವಲಂಬಿಸಿರುವ

**ಗ್ರಂಥಕರ್ತ**

**ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಭಿಕ್ಷುವು**

# ವಿಷಯಾನುಕ್ರಮಣಿಕೆ


| ಕಿರಣ | ಹೆಸರು | ಪುಟ |
|---|---|---|
| ೧. | ವೇದಾಂತಸಿದ್ಧಾಂತನಿರ್ಣಯಃ | ೧ |
| ೨. | ಶಾಂಕರಸಂಪ್ರದಾಯನಿರ್ಣಯಶ್ಚ | ೨೬ |
| ೩. | ಶಾಂಕರವೇದಾಂತಮರ್ಯಾದಾ | ೬೨ |
| ೪. | ಶಾಂಕರವೇದಾಂತಪ್ರಕ್ರಿಯಾಸ್ವರೂಪಮ್ | ೯೩ |
| ೫. | ಅಧ್ಯಾರೋಪಾಪವಾದಪ್ರಕ್ರಿಯಾವಿಶೇಷಾಃ | ೧೧೭ |
| ೬. | ಶಾಂಕರಪ್ರಸ್ಥಾನಸ್ಯ ಪ್ರಸ್ಥಾನಾಂತರೇಭ್ಯೋ ವೈಲಕ್ಷಣ್ಯಮ್ | ೧೬೫ |
| ೭. | ಬೌದ್ಧಮತಸಾಮ್ಯಶಂಕಾಪರಿಹಾರಃ | ೧೯೯ |

# ಸಂಕೇತಾಕ್ಷರಗಳ ವಿವರಣೆ.

| | |
|---|---|
| ಆ.ಪ. | ಆಲಂಬನಪರೀಕ್ಷಾ ದಿಙ್ನಾಗಕೃತ. ಎನ್. ಅಯ್ಯಸ್ವಾಮಿಶಾಸ್ತ್ರಿಸಂಪಾದಿತ |
| ಉಪ.ಸಾ. | ಉಪದೇಶಸಾಹಸ್ರೀ (ಪದ್ಯಭಾಗ) |
| ಗೌ.ಕಾ | ಗೌಡಪಾದಕೃತ ಮಾಂಡೂಕ್ಯಕಾರಿಕೆಗಳು |
| ಗೀ.ಭಾ. | ಭಗವದ್ಗೀತಾಶಾಂಕರಭಾಷ್ಯ |
| ತ್ರಿ. | ತ್ರಿಂಶಿಕಾ ವಸುಬಂಧಕೃತ |
| ತೈ.ನಾ. | ತೈತ್ತಿರೀಯನಾರಾಯಣೋಪನಿಷತ್ |
| ಪ್ರ.ವಾ. | ಪ್ರಮಾಣವಾರ್ತಿಕಮ್, ಧರ್ಮಕೀರ್ತಿಕೃತ (Jayasval Institute) |
| ಬೋ.ಚ. | ಬೋಧಿಚರ್ಯಾವತಾರಃ ಶಾಂತಿದೇವಕೃತ (Bib. Ind.) |
| ಮ.ಕಾ., ಮಾ.ಕಾ. | ಮಾಧ್ಯಮಿಕಕಾರಿಕೆಗಳು, ನಾಗಾರ್ಜುನಕೃತ |
| ಮ.ಕಾ.ವೃ. | ಮಧ್ಯಮಕ (ಮಾಧ್ಯಮಿಕ) ಕಾರಿಕಾವೃತ್ತಿಃ, ಚಂದ್ರಕೀರ್ತಿಕೃತ |
| ಮ.ವಿ. | ಮಧ್ಯಾಂತವಿಭಙ್ಗಃ, ಮೈತ್ರೇಯಿನಾಥಕೃತಃ |
| ಮ.ವಿ.ಸೂ.ಭಾ. | ಮಧ್ಯಾಂತವಿಭಙ್ಗಸೂತ್ರಭಾಷ್ಯಟೀಕಾ, ಸ್ಥಿರಮತಿಕೃತ |
| ವಿಂ. | ವಿಂಶಿಕಾ, ವಸುಬಂಧಕೃತ (ಆಲಂಬನಪರೀಕ್ಷಾಪರಿಶಿಷ್ಟಭೂತಾ) |
| ವಿ.ವ್ಯಾ. | ವಿಗ್ರಹವ್ಯಾವರ್ತಿನೀ, ನಾಗಾರ್ಜುನಕೃತ(Edited by Jayasval and Sankrityayana) |
| ವೇ.ಸೂ. | ಬಾದರಾಯಣಕೃತವೇದಾಂತಸೂತ್ರ |
| ಶ್ರೀ.ಭಾ. | ಶ್ರೀಭಾಷ್ಯಮ್, ಶ್ರೀರಾಮಾನುಜಾಚಾರ್ಯಕೃತ |
| ಸ.ರಾ. | ಸಮಾಧಿರಾಜಃ. (Gilgit) |
| ಸಿ.ತ್ರ. | ಸಿದ್ಧಿತ್ರಯ, ಯಾಮುನಾಚಾರ್ಯಕೃತ |
| ಸೂ.ಭಾ. | ಬ್ರಹ್ಮಸೂತ್ರಶಾಂಕರಭಾಷ್ಯ |

.. ॐ ..

## ಶುದ್ಧಶಾಂಕರಪ್ರಕ್ರಿಯಾಭಾಸ್ಕರಃ

## ೧. ವೇದಾನ್ತಸಿದ್ಧಾನ್ತನಿರ್ಣಯಃ

ಓಂ ನಮೋ ಬ್ರಹ್ಮಾದಿಭ್ಯೋಬ್ರಹ್ಮವಿದ್ಯಾಸಂಪ್ರದಾಯಕರ್ತೃಭ್ಯೋ
ವಂಶರ್ಷಿಭ್ಯೋ ನಮೋ ಮಹದ್ಭ್ಯೋ ನಮೋ ಗುರುಭ್ಯಃ

**೧. ಶಂಕರಪ್ರತ್ಯರ್ಥಿದ್ವೈತಿನಃ ಸಾಂಖ್ಯಾದಯ ಏವ** :- ಇಹ ಖಲು ವೇದಾನ್ತಸಿದ್ಧಾನ್ತತ್ವೇನ ಪ್ರಥಿತೇಷು ಭಿನ್ನಭಿನ್ನಾಚಾರ್ಯೈರುಪಸ್ಥಾಪಿತೇಷು, ಅದ್ವೈತವಿಶಿಷ್ಟಾದ್ವೈತದ್ವೈತಾದ್ವೈತಾದಿಪ್ರಭೇದೈರ್ಭಿನ್ನೇಷು ಮಧ್ಯೇ, ಅದ್ವೈತಸಿದ್ಧಾಂತ ಏವ ತಥಾತ್ವೇನ ಶ್ರೀಶಂಕರಭಗವತ್ಪಾದಾನಾಮಭಿಮತ ಇತ್ಯತ್ರ ನಾಸ್ತಿ ವಿಪ್ರತಿಪತ್ತಿರ್ವಾದಿನಾಂ ಲೌಕಿಕಾನಾಂ ವಾ । ತತ್ರ ಯದ್ಯಪಿ ವಿಶಿಷ್ಟಾದ್ವೈತಾದಿವಾದಿನೋಽಪಿ ಸ್ವಸ್ವಾಭಿಮತ ಏವ ವೇದಾನ್ತಾರ್ಥಃ, ಅತೋ ವಿಶಿಷ್ಟಾದ್ವೈತಾದಿಸಿದ್ಧಾನ್ತ ಏವ ವೇದಾನ್ತೇಷು ಪ್ರತಿಪಿಪಾದಯಿಷಿತಃ - ಇತ್ಯಭಿನಿವಿಷ್ಟಾಃ, ಉಪನ್ಯಸ್ಯನ್ತಿ ಚ ಸ್ವಸ್ವಸಂಪ್ರದಾಯ ಪ್ರವರ್ತಕಾನ್ ಪೂರ್ವಾಚಾರ್ಯಾನ್ ತತ್ರ ತತ್ರ ಪ್ರಮಾಣತ್ವೇನ, ತಥಾಪಿ ಶಂಕರಭಗವತ್ಪಾದಪ್ರಸ್ಥಾನಾದರ್ವಾಚೀನಾನ್ಯೇವ ತಾನಿ ಸರ್ವಾಣ್ಯಪ್ಯದ್ವೈತೇತರ-

---

## ಶುದ್ಧ ಶಾಂಕರ ಪ್ರಕ್ರಿಯಾಭಾಸ್ಕರಃ
## ವೇದಾಂತಸಿದ್ಧಾಂತ ನಿರ್ಣಯವು

**೧. ಶ್ರೀ ಶಂಕರರಿಗೆ ಎದುರಾಳಾದ ದ್ವೈತಿಗಳೆಂದರೆ ಸಾಂಖ್ಯರೆ ಮೊದಲಾದವರೇ (ಆಗಿರುತ್ತಾರೆ).** ನಮ್ಮ ದೇಶದಲ್ಲಿ (ತಮ್ಮದೇ) ವೇದಾಂತ ಸಿದ್ಧಾಂತವೆಂದು, ಪ್ರಸಿದ್ಧರಾದ ಬೇರೆ ಬೇರೆ ಆಚಾರ್ಯರುಗಳು ಸ್ಥಾಪನೆ ಮಾಡಿರುತ್ತಾರೆ. ಅವು ಅದ್ವೈತ, ವಿಶಿಷ್ಟಾದ್ವೈತ, ಶುದ್ಧಾದ್ವೈತ ದ್ವೈತಾದ್ವೈತವೇ ಮೊದಲಾದ ರೂಪದಿಂದ ಅನೇಕವಾಗಿವೆ. ಅವುಗಳಲ್ಲಿ ಅದ್ವೈತ ವೇದಾನ್ತವೇ ವೇದಾನ್ತ ಸಿದ್ಧಾಂತವಾದದ್ದು ಮತ್ತು ಶ್ರೀ ಶಂಕರಭಗವತ್ಪಾದರಿಗೆ ಒಪ್ಪಿಗೆಯಾದದ್ದು ಎಂಬುದರ ಬಗ್ಗೆ ವಾದಿಗಳಿಗಾಗಲೀ ಲೌಕಿಕರಿಗಾಗಲೀ ವಿರುದ್ಧಾಭಿಪ್ರಾಯವಿಲ್ಲ. ವಿಶಿಷ್ಟಾದ್ವೈತವೇ ಮುಂತಾದ

ಪ್ರಸ್ಥಾನಾನಿ - ಇತ್ಯತ್ರ ಬಲವದಸ್ತಿ ಗಮಕಮ್, ಶಾಂಕರಭಾಷ್ಯೇಷ್ವೇವ ||

ತಥಾ ಹಿ ಭಗವತ್ಪಾದಾಃ ಸ್ವೀಯಭಾಷ್ಯೇಷು ಸಾಂಖ್ಯಾದೀನೇವ ದ್ವೈತಿನಃ ಪ್ರತಿವಾದಿತ್ವೇನ ಸ್ವೀಕೃತ್ಯ ನಿರಾಕಾರ್ಷುಃ, ನ ದ್ವೈತವಿಶಿಷ್ಟಾದ್ವೈತಾದಿವೇತದಾನ್ತ-ಸಿದ್ಧಾನ್ತಾನುಯಾಯಿನಃ | ಸಾಂಖ್ಯಾದಯೋऽಪಿ ಅದ್ವೈತಮೇವ ವೇದಾಂನ್ತಸಿದ್ಧಾನ್ತತ್ವೇನ ಪರಾಮೃಶನ್ತಿ ಸ್ಮ ಸ್ವಗ್ರನ್ಥೇಷು, ನ ತ್ವೇವ ಜಾತುಚಿದಪಿ ಅಧುನಾತನದ್ವೈತವೇದಾಂತಿನಃ | ವಿಶಿಷ್ಯ ಚ ಸಾಂಖ್ಯೋತ್ಥಾಪಿತದೂಷಣಾನ್ಯೇವ ಸಮುದ್ಧರ್ತುಂ ಯತ್ನಃ ಕೃತೋऽಸ್ತಿ ಶಾಂಕರಭಾಷ್ಯೇ, ನ ತ್ವದ್ವೈತೀತರವೇದಾಂತ್ಯುತ್ಥಾಪಿತಾನಿ - ಇತೀದಮಪಿ ಗಮಕಂ ಯಥೋಕ್ತನಿರ್ಣಯೇ | ಯದಿ ಹಿ ಭಗವತ್ಪಾದಸಮಯೇ ದ್ವೈತಾದಿವೇದಾಂತಸಿದ್ಧಾಂತ-ಪ್ರಭೇದಾ ಅಪಿ ಪ್ರಾಚಲಿಷ್ಯನ್, ತರ್ಹಿ ಅವಶ್ಯಂ ತಾನ್ಯಪಿ ಸಾಂಖ್ಯಾದಿವದೇವ ಕುತ್ರಚಿತ್ ನಿರಾಕರಣೀಯಪಕ್ಷಕುಕ್ಷೌ ನ್ಯವೇಶಯಿಷ್ಯಂತ; ತೈರುತ್ಥಾಪಿತಾ ಅಪಿ ದೋಷಾ

---

ವಾದಿಗಳೂ ತಮಗೆ ಒಪ್ಪಿಗೆಯಾದದ್ದೇ ವೇದಾನ್ತಾರ್ಥವೆಂದು ಹೇಳುತ್ತಾರೆ ಉಪನಿಷತ್ತುಗಳಲ್ಲಿ ಪ್ರತಿಪಾದನೆ ಮಾಡಬೇಕೆಂದು ಇಷ್ಟಪಟ್ಟಿಕೊಂಡಿರುವುದೂ ವಿಶಿಷ್ಟಾದ್ವೈತವೇ ಎಂದು ಹಠವನ್ನು ಮಾಡುತ್ತಿದಾರೆ. ಅಲ್ಲಲ್ಲಿ ತಮ್ಮ ಸಂಪ್ರದಾಂಯ ಪ್ರವರ್ತಕಾಚಾರ್ಯರಾದ ಪೂರ್ವಾಚಾರ್ಯರನ್ನೂ ಪ್ರಮಾಣವಾಗಿ ಉದಾಹರಿಸುತ್ತಲೂ ಇದ್ದಾರೆ!. ಆದರೂ ಆ ಅದ್ವೈತಕ್ಕಿಂತ ಬೇರೆಯಾದ ಎಲ್ಲಾ ಪ್ರಸ್ಥಾನಗಳೂ ಶ್ರೀ ಶಂಕರಭಾಗವತ್ಪಾದರ ಪ್ರಸ್ಥಾನಕ್ಕಿಂತ ತುಂಬಾ ಈಚಿನದು ಎಂಬುದಕ್ಕೆ ಶ್ರೀ ಶಂಕರಭಾಷ್ಯದಲ್ಲೇ ಬಲವಾದ ಕಾರಣವಿದೆ.

ಭಗವತ್ಪಾದರು ತಮ್ಮ ಭಾಷ್ಯದಲ್ಲಿ ಸಾಂಖ್ಯರೇ ಮೊದಲಾದ ದ್ವೈತಿಗಳನ್ನು ಪ್ರತಿವಾದಿಗಳೆಂದು ಸ್ವೀಕರಿಸಿ ಖಂಡನೆ ಮಾಡಿರುತ್ತಾರೆ. ದ್ವೈತಿ, ವಿಶಿಷ್ಟಾದ್ವೈತಿಗಳೇ ಮುಂತಾದ ವೇದಾನ್ತಸಿದ್ಧಾಂತಾನುಯಾಯಿಗಳನ್ನು ಎಲ್ಲೂ ಖಂಡಿಸಿಲ್ಲ. ಸಾಂಖ್ಯರೇ ಮುಂತಾದವರೂ ಸಹ ತಮ್ಮ ಗ್ರಂಥದಲ್ಲಿ ಅದ್ವೈತವೇ ವೇದಾನ್ತಸಿದ್ಧಾಂತವೆಂದು ಪರಾಮರ್ಶಿಸುತ್ತಾರೆ. ಈಚಿನ ದ್ವೈತ-ವೇದಾಂತಿಗಳನ್ನು ಎಲ್ಲೂ ಅವರು ಪರಾಮರ್ಶಿಸಿಲ್ಲ.ವಿಶೇಷವಾಗಿ ಸಾಂಖ್ಯರು ಎಬ್ಬಿಸಿದ್ದಾದ ದೋಷಗಳನ್ನೇ ನಿವಾರಣೆ ಮಾಡುವುದಕ್ಕೆ ಶಾಂಕರಭಾಷ್ಯದಲ್ಲಿ ಪ್ರಯತ್ನಿಸಿದೆಯೇ ಹೊರತು ಅದ್ವೈತಕ್ಕಿಂತ ಬೇರೆಯವರಾದ ವೇದಾನ್ತಿಗಳ ದೋಷಗಳನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನಿಸಿಯೇ ಇಲ್ಲ. ಆಗ ಇವರು

ಸಮುದ್ಧರಣಾಯ ಅನೇಷ್ಯಂತ | ಇತರಥಾ ಹಿ ಭಗವತ್ಪಾದಸಂಮತಮದ್ವೈತಮೇವ ವೇದಾಂತಸಂಮತಂ ದರ್ಶನಮಿತಿ ನ ನಿರಾಕುಲಂ ಪ್ರತಿಷ್ಠಾಪಿತಂ ಸ್ಯಾದಿತಿ | ನ ತ್ವೇವ ತೇ ದ್ವೈತಾದಿವೇದಾಂತಪ್ರಸ್ಥಾನಭೇದಾಃ ಸಾಂಖ್ಯಾದಿಭಿರ್ಭಗವತ್ಪಾದೈರ್ವಾ ಪರಾಮೃಷ್ಟಾ ದೃಶ್ಯಂತೇ ಕ್ವಚಿದಪಿ | ಅತಸ್ತದಾನೀಂ ನಾಸನ್ ದ್ವೈತಾದಿಸಿದ್ಧಾಂತಪ್ರಭೇದಾ ಇತ್ಯವಗಚ್ಛಾಮಃ ||

ಕಿಂಚ, ಭಗವತ್ಪಾದೀಯಭಾಷ್ಯೇ ವೇದಾಂತವಾಕ್ಯಾನಾಮೈದಂಪರ್ಯೇ ನಿಶ್ಚೇತವ್ಯೇ "**ಈಕ್ಷತೇರ್ನಾಶಬ್ದಮ್**" (ವೇ.ಸೂ. ೧-೧-೫) ಇತ್ಯಾರಭ್ಯ ಆಪರಿಸಮಾಪ್ತೇಃ ಪ್ರತಿಪಕ್ಷರೀತ್ಯಾ ವೇದಾಂತವಾಕ್ಯವ್ಯಾಖ್ಯಾತೃಷು ಮಧ್ಯೇ ಸಾಂಖ್ಯಾ ಏವ ಪ್ರಾಧಾನ್ಯೇನೋಪಾತ್ತಾಃ, ವೈಶೇಶಿಕಾದ್ಯಚೇತನಕಾರಣವಾದಿನಸ್ತು ಅತಿದೇಶೇನೈವ ಪ್ರತ್ಯಾಖ್ಯಾತಾಃ "ಏತೇನ ಸರ್ವೇ ವ್ಯಾಖ್ಯಾತಾ ವ್ಯಾಖ್ಯಾತಾಃ"(ವೇ.ಸೂ. ೧-೪-೨೮) ಇತಿ | ತತ್ರ ದ್ವೈತ್ಯಾದಿ-ವೇದಾಂತಿನೋ ನಾಮ್ನಾಪಿ ನ ನಿರ್ದಿಷ್ಟಾಃ ಕ್ವಚಿದಪಿ |

---

ಇರಲಿಲ್ಲ ಎಂಬುದಕ್ಕೆ ಇದೂ ಒಂದು ಆಧಾರವಾಗಿದೆ. ಆಚಾರ್ಯರ ಕಾಲದಲ್ಲಿ ದ್ವೈತವೇ ಮುಂತಾದ ವೇದಾನ್ತ ಪ್ರಭೇದಗಳು ಇದ್ದಿದ್ದರೆ ಸಾಂಖ್ಯಾದಿಗಳನ್ನು ಖಂಡನೆ ಮಾಡಿದಂತೆ ಇವರನ್ನೂ ಎಲ್ಲಾದರೂ ಒಂದು ಕಡೆಯಲ್ಲಿ ಖಂಡನೆ ಮಾಡುತ್ತಿದ್ದರು. ಆ ದ್ವೈತಿಗಳು ಆರೋಪಿಸಿದ ದೋಷಗಳನ್ನೂ ಪರಿಹರಿಸುವುದಕ್ಕಾಗಿ ಪರಾಮರ್ಶೆಯನ್ನೂ ಮಾಡುತ್ತಿದ್ದರು. ಹಾಗಲ್ಲದೆ ಆ ಕಾಲದಲ್ಲಿದ್ದವರಾಗಿದ್ದರೂ ಪರಾಮರ್ಶಿಸಿಲ್ಲವೆಂದಾದರೆ ಆಗ ಆಚಾರ್ಯರಿಗೆ ಸಮ್ಮತವಾದ ಅದ್ವೈತ ದರ್ಶನವೇ ವೇದಾನ್ತ ದರ್ಶನವು ಎಂಬುದು ಸರಿಯಾಗದೇ ಹೋದೀತು?

ಆದರೆ ಆಚಾರ್ಯರು ದ್ವೈತವೇ ಮುಂತಾದ ವೇದಾನ್ತಪ್ರಸ್ಥಾನ ಭೇದವನ್ನು ಪರಾಮರ್ಶಿಸಿಯೇ ಇಲ್ಲವಾದ್ದರಿಂದಲೂ, ಸಾಂಖ್ಯರೇ ಮುಂತಾದವರೂ ಸಹ ಪರಾಮರ್ಶಿಸಿಲ್ಲವಾದ್ದರಿಂದಲೂ ಆ ಕಾಲದಲ್ಲಿ ಆ ದ್ವೈತಾದಿ ಸಿದ್ಧಾಂತಪ್ರಭೇದಗಳು ಇರಲೇ ಇಲ್ಲವೆಂದು ಗೊತ್ತಾಗುತ್ತದೆ.

ಮತ್ತೂ ಏನೆಂದರೆ, ವೇದಾನ್ತ ವಾಕ್ಯಗಳಿಗೆ ತಾತ್ಪರ್ಯವನ್ನು ನಿರ್ಣಯ ಮಾಡುವುದಕ್ಕೆ ಹೊರಟ ಆಚಾರ್ಯರಭಾಷ್ಯದಲ್ಲಿ "ಈಕ್ಷತೇರ್ನಾಶಬ್ದಮ್" (ವೇ.ಸೂ. ೧-೧-೫) ಎಂದು ಆರಂಭಗೊಂಡು ಕೊನೆಯುವರೆಗೂ

ತದೇವಮ್, ಇದಮವಗಮ್ಯತೇ ಯದ್ ಭಗವತ್ಪಾದಾನಾಂ ಕಾಲೇ ನಾಸನ್ನೇವ ದ್ವೈತಾದಿಸಿದ್ಧಾಂತಾವಲಂಬಿನೋ ವೇದಾಂತಿನಃ, ಯೇನ ತೇಽಪಿ ಸಾಂಖ್ಯಾದಿವತ್ ಪರಾಮೃಕ್ಷ್ಯಂತ ತೈಃ ಪರಪಕ್ಷಯುಕ್ತಿಪ್ರತ್ಯಾಖ್ಯಾನಾವಸರೇ, ವೇದಾಂತವಾಕ್ಯಾರ್ಥ-ನಿರ್ಧಾರಣಾವಸರೇ ವಾ - ಇತಿ ||

ಏತೇನೇದಮಪಿ ಸಿದ್ಧಂ ಭವತಿ ದ್ವೈತಾದಿವೇದಾಂತಸಿದ್ಧಾಂತಪಕ್ಷಸ್ವೀಕರ್ತಾರೋ ನೈವಾಸನ್ ಶಾರೀರಕಪ್ರಣಯನಕಾಲೇ ಇತ್ಯೇವ ಭಗವತ್ಪಾದಾನಾಂ ಮತಮಿತಿ | ಅನ್ಯಥಾ ಹಿ ಕಥಂ ನಾಮ ಸೂತ್ರಾಕ್ಷರಯೋಜನಾವಸರೇ ತಾದೃಶಸಿದ್ಧಾಂತಾವಲಂಬಿನಾಂ ಮತಾನಿ ತೈಃ ಕುತ್ರಚಿದಪಿ ಕಿಂಚಿದಪ್ಯಕಟಾಕ್ಷಿತಾನಿ ಭವೇಯುರಿತಿ ||

೨. ಭಗವತ್ಪಾದಕಾಲೇ ವೇದಾಂತಿನಃ ಸರ್ವೇ ಬ್ರಹ್ಮಾತ್ಮೈಕತ್ವವಾದಿನ ಏವ,

---

ಪೂರ್ವಪಕ್ಷಿಗಳಾಗಿ ವೇದಾನ್ತವಾಕ್ಯಗಳಿಗೆ ವ್ಯಾಖ್ಯಾನವನ್ನು ಮಾಡಿದವರ ಪೈಕಿ ಪ್ರಧಾನವಾಗಿ ಸಾಂಖ್ಯರನ್ನೇ ಸ್ವೀಕರಿಸಿರುತ್ತದೆ. ವೈಶೇಷಿಕರೇ ಮೊದಲಾದ ಅಚೇತನವು ಕಾರಣವಾದದ್ದು ಎಂದು ಹೇಳುವರನ್ನು ಅತಿದೇಶವನ್ನು ಮಾಡುವುದರ ಮೂಲಕವಾಗಿ (ಏತೇನ ಸರ್ವೇ ವ್ಯಾಖ್ಯಾತಾಃ ವ್ಯಾಖ್ಯಾತಾಃ (ವೇ.ಸೂ. ೧-೪-೨೮) ಅಲ್ಲಗಳೆದಿರುತ್ತಾರೆ. ಆ ಸಂದರ್ಭದಲ್ಲಿ ದ್ವೈತಿಗಳೇ ಮುಂತಾದ ವೇದಾಂತಿಗಳ ಹೆಸರನ್ನೂ ಸಹ ಎಲ್ಲೂ ಪರಾಮರ್ಶಿಸಿಲ್ಲ. ಇದರಿಂದ ಏನು ಗೊತ್ತಾಗುತ್ತದೆ ಎಂದರೆ - ಆಚಾರ್ಯರ ಕಾಲದಲ್ಲಿ ದ್ವೈತವೇ ಮುಂತಾದ ವೇದಾಂತಿಗಳನ್ನು ಅವಲಂಬಿಸಿರುವ ವಾದಿಗಳು ಇರಲೇ ಇಲ್ಲ. ಇದ್ದಿದ್ದರೆ ಸಾಂಖ್ಯರೇ ಮುಂತಾದವರನ್ನು ಪರಾಮರ್ಶಿಸಿರುವಂತೆ ಇವರನ್ನೂ ಆಚಾರ್ಯರು ಪರಾಮರ್ಶಿಸುತ್ತಿದ್ದರು. ಬೇರೆ ವಾದಿಗಳ ಯುಕ್ತಿಯನ್ನು ತಿರಸ್ಕರಿಸುವಾಗಲೂ ವೇದಾಂತವಾಕ್ಯಾರ್ಥವನ್ನು ನಿರ್ಧಾರಣೆ ಮಾಡುವಾಗಲೂ ಅವಶ್ಯವಾಗಿ (ಅವರನ್ನೂ ಪರಾಮರ್ಶಿಸಲೇಬೇಕು. ಆದರೆ ಎಲ್ಲೂ ಪರಾಮರ್ಶಿಸಿಲ್ಲ). ಆದ್ದರಿಂದ ಇದು ತೀರ್ಮಾನವಾಗುತ್ತದೆ. ಏನೆಂದರೆ ಶಾರೀರಿಕ ಸೂತ್ರವನ್ನು ರಚಿಸಿದ ಕಾಲದಲ್ಲಿ ದ್ವೈತವೇ ಮುಂತಾದ ವೇದಾನ್ತ ಸಿದ್ಧಾಂತ ಪಕ್ಷವನ್ನು ಸ್ವೀಕರಿಸಿದವರು ಇರಲೇ ಇಲ್ಲವೆಂಬುದೇ ಆಚಾರ್ಯರ ಮತವು. ಅವರು ಆಗ ಏನಾದರೂ ಇದ್ದಿದ್ದರೆ ಸೂತ್ರಾಕ್ಷರಕ್ಕೆ ವ್ಯಾಖ್ಯಾನಮಾಡುವ ಸಂದರ್ಭದಲ್ಲಿ ಆ ತರಹದ ಸಿದ್ಧಾಂತವನ್ನವಲಂಬಿಸಿ-

ಅಪಿ ಚ, ನ ಕೇವಲಂ ದ್ವೈತ್ಯಾದಿವೇದಾಂತ್ಯಭಾವೋ ಭಗವತ್ಪಾದಾನಾಂ ಕಾಲೇ ಕ್ವಚಿದಪಿ ತತ್ಪರಾಮರ್ಶಾಭಾವಬಲಾದೇವೋನ್ನೀಯತೇ, ಕಿಂ ತು ಸಾಕ್ಷಾದ್ವಚನಮಪಿ ದೃಶ್ಯತೇ ಭಾಷ್ಯೇ ತದಾನೀಂ ತದಭಾವಾಭಿಧಾಯಕಮ್ ಇತ್ಯತೋಽಪಿ | ತದ್ಯಥಾ ಬೃಹದಾರಣ್ಯಕ-ಭಾಷ್ಯೇ -

(೧) ಸರ್ವೋಪನಿಷತ್ಸು ಹಿ ವಿಜ್ಞಾನಾತ್ಮನಃ ಪರಮಾತ್ಮನಾ ಏಕತ್ವಪ್ರತ್ಯಯೋ ವಿಧೀಯತ ಇತ್ಯವಿಪ್ರತಿಪತ್ತಿಃ ಸರ್ವೇಷಾಮುಪನಿಷದ್ವಾದಿನಾಮ್||

ಬೃ.ಭಾ ೨-೧-೨೦,

ಇತಿ | ಸೂತ್ರಭಾಷ್ಯೇ ಚೇದಂ ವಾಕ್ಯಮಸ್ತಿ -

(೨) ಸಮ್ಯಜ್ಞಾನಾನ್ಮೋಕ್ಷ ಇತಿ ಸರ್ವೇಷಾಂ ಮೋಕ್ಷವಾದಿನಾಮ್ ಅಭ್ಯುಪಗಮಃ|| ಸೂ.ಭಾ. ೨-೧-೧೧,

---

ಕೊಂಡವರನ್ನು ಎಲ್ಲಾದರೂ ಒಂದು ಕಡೆಯಲ್ಲಿ ಪರಾಮರ್ಶಿಸದೇ ಹೇಗೆ ಇದ್ದಾರು ?

೨) ಭಗವತ್ಪಾದರ ಕಾಲದಲ್ಲಿ ಎಲ್ಲಾ ವೇದಾನ್ತಿಗಳೂ ಬ್ರಹ್ಮಾತ್ಮೈಕತ್ವ-ವಾದಿಗಳೇ ಆಗಿದ್ದರು. ದ್ವೈತಾದಿ ವೇದಾನ್ತಿಗಳ ಪರಾಮರ್ಶೆಯು ಎಲ್ಲೂ ಕಾಣದೇ ಇರುವುದರಿಂದ ಭಗವತ್ಪಾದರ ಕಾಲದಲ್ಲಿ ಅವರು ಇರಲೇ ಇಲ್ಲ ಎಂಬುದಷ್ಟೇ ಅಲ್ಲ, ಅವರಿರಲಿಲ್ಲ ಎಂಬರ್ಥವನ್ನು ಕೊಡುವ ನೇರಾದ ವಚನವೂ ಸಹ ಬೃಹದಾರಣ್ಯಕಭಾಷ್ಯದಲ್ಲಿ ಕಂಡು ಬರುತ್ತದೆ. ಅದು ಹೇಗೆಂದರೆ "ಎಲ್ಲಾ ಉಪನಿಷತ್ತುಗಳಲ್ಲೂ" ವಿಜ್ಞಾನಾತ್ಮರುಗಳಿಗೆ ಪರಮಾತ್ಮನೊಡನೆ ಏಕತ್ವವನ್ನೇ ಹೇಳುತ್ತಿದೆ ಎಂಬ ವಿಷಯಕ್ಕೆ ಉಪನಿಷತ್ಪ್ರಮಾಣಕರಾದ ಎಲ್ಲಾ ವಾದಿಗಳಿಗೂ ಒಪ್ಪಿಗೆ ಇದೆ. ಬೃ.ಭಾ. ೨-೧-೨೦. ಭಾ. ಭಾ. ೩-೬.

ಹಾಗೇಯೇ ಸೂತ್ರಭಾಷ್ಯದಲ್ಲೂ ಇದೆ. " ಸಮ್ಯಜ್ಞಾನದಿಂದಲೇ ಮೋಕ್ಷವು ಎಂಬುದಾಗಿ ಮೋಕ್ಷವನ್ನು ಹೇಳುವ ಎಲ್ಲಾ ವಾದಿಗಳಿಗೂ ಒಪ್ಪಿಗೆ ಇದೆ." ಸೂ.ಭಾ. ೨-೧-೧೧. ಈ ದ್ವೈತ್ಯಾದಿ ವೇದಾನ್ತಿಗಳು ಹೇಳುವ ಹಾಗೆ "ಜೀವ ಬ್ರಹ್ಮರಿಗೆ ಭೇದವು ಸತ್ಯವಾಗಿದೆ. ಭಗವಂತನ ಪ್ರಸಾದ ಮತ್ತು

ಇತಿ | ಯದಿ ಜೀವಬ್ರಹ್ಮಭೇದವಾದಿನೋ ಭಗವತ್ಪ್ರಸಾದತದ್ಭಕ್ತ್ಯಾದಿಸಾಧನಕ-ಮೋಕ್ಷವಾದಿನೋ ವಾ ತದಾತ್ವೇ ಪ್ರಸಿದ್ಧಾ ಅಭವಿಷ್ಯನ್, ತರ್ಹಿ ವಿಜ್ಞಾನಾತ್ಮ-ಪರಮಾತ್ಮೈಕ್ಯಮೇವೋಪನಿಷತ್ಪ್ರತಿಪಾದ್ಯಮಿತ್ಯೇತತ್ ಸರ್ವವೇದಾಂತಿಸಂಪ್ರತಿಪನ್ನಮಿತಿ ನೈವೋದಘೋಷ್ಯತಾಚಾರ್ಯೈಃ, ಮೋಕ್ಷಸ್ಯ ಸಮ್ಯಜ್ಞಾನಮಾತ್ರಾಧಿಗಮ್ಯತ್ವಂ ಸರ್ವಮೋಕ್ಷವಾದಿಸಂಪ್ರತಿಪನ್ನಮಿತಿ ವಾ | ಉದ್ಘೋಷಿತಂ ತು | ತೇನೇದಂ ಸ್ಫುಟಮವಗಮ್ಯತೇ, ಯತ್ ತತ್ಕಾಲೇ ಅದ್ವೈತೇತರವೇದಾಂತ-ಸಿದ್ಧಾಂತಭೇದಾ ನೈವಾಸನ್ನಿತಿ ||

**೩. ಜೀವೇಶ್ವರಭೇದವಾದಿನೋ ವೇದಾಂತಿನೋ ನೈವಾಸನ್ ಶಾರೀರಕ-ಕರ್ತುಃ ಕಾಲೇ-** ಶಾರೀರಕಮೀಮಾಂಸಾಪ್ರಣೇತ್ರಾ ಬಾದರಾಯಣಾಚಾರ್ಯೇಣ ಜೀವಬ್ರಹ್ಮಸಂಬಂಧವಿಷಯೇ ವಿಪ್ರತಿಪನ್ನಾ ಬ್ರಹ್ಮವಾದಿನಃ ಪೂರ್ವಾಚಾರ್ಯಾಸ್ತ್ರೇಧಾ ವರ್ಗೀಕೃತ್ಯ ದರ್ಶಿತಾಃ **"ಪ್ರತಿಜ್ಞಾಸಿದ್ಧೇರ್ಲಿಂಗಮಾಶ್ಮರಥ್ಯಃ", "ಉತ್ಕ್ರಮಿಷ್ಯತ ಏವಂಭಾವಾದಿತ್ಯೌಡುಲೋಮಿಃ", "ಅವಸ್ಥಿತೇರಿತಿ ಕಾಶಕೃತ್ಸ್ನಃ"** (ವೇ.ಸೂ. ೧-

---

ಆತನ ಭಕ್ತಿಯೇ ಮುಂತಾದ ಸಾಧನದಿಂದ ಮೋಕ್ಷವು ದೊರೆಯುತ್ತದೆ " ಎನ್ನುವವರು ಆಗ ಪ್ರಸಿದ್ಧರಾಗಿದ್ದರೆ ಭಗವತ್ಪಾದರು ಎಲ್ಲಾ ಉಪನಿಷತ್ತಿನಲ್ಲಿ ಹೇಳಿರುವುದು ವಿಜ್ಞಾನಾತ್ಮ ಪರಮಾತ್ಮರುಗಳಿಗೆ ಐಕ್ಯವೇ ಎಂಬುದು ಸಿದ್ಧಾಂತವೆಂದು ಹೇಳುತ್ತಿರಲಿಲ್ಲ. ಹಾಗೆಯೇ ಮೋಕ್ಷವೆಂಬುದು ಸಮ್ಯಜ್ಞಾನದಿಂದಲೇ ದೊರೆಯತಕ್ಕದ್ದು ಎಂಬುದು ಮೋಕ್ಷವನ್ನು ಹೇಳುವ ಎಲ್ಲಾ ವಾದಿಗಳಿಗೂ ಇದು ಒಪ್ಪಿಗೆಯಾದದ್ದು ಎಂದು ಘೋಷಿಸುತ್ತಿರಲಿಲ್ಲ. ಆದರೆ ಘೋಷಿಸಿದ್ದಾರೆ. ಇದರಿಂದ ಏನು ಸ್ಪಷ್ಟವಾಗಿ ಗೊತ್ತಾಗುತ್ತದೆ ಎಂದರೆ, ಅದ್ವೈತಕ್ಕಿಂತ ಬೇರೆಯಾದ ವೇದಾಂತ ಸಿದ್ಧಾಂತವು ಆ ಕಾಲದಲ್ಲಿ ಇರಲೇ ಇಲ್ಲ ಎಂದೇ ತೀರ್ಮಾನವಾಗುತ್ತದೆ.

**೩) ಜೀವನಿಗೂ ಈಶ್ವರನಿಗೂ ಭೇದವನ್ನು ಹೇಳುವ ವಾದಿಗಳು ಶಾರೀರಕವನ್ನು ರಚಿಸಿದ ಕಾಲದಲ್ಲಿ ಇರಲೇ ಇಲ್ಲ.** ಶಾರೀರಕ-ಮೀಮಾಂಸೆಯನ್ನು ರಚಿಸಿದವರಾದ ಬಾದರಾಯಣರು ಜೀವಬ್ರಹ್ಮದ ಸಂಬಂಧದ ವಿಷಯದಲ್ಲಿ ವಿರುದ್ಧಾಭಿಪ್ರಾಯರಾದ ಹಿಂದಿನ ಆಚಾರ್ಯರನ್ನು ಮೂರು ವರ್ಗವಾಗಿ ಮಾಡಿರುತ್ತಾರೆ.

೪-೨೦, ೨೧, ೨೨,) ಇತಿ | ತದಿದಂ ಸೂತ್ರತ್ರಯಂ ಮೈತ್ರೇಯೀಬ್ರಾಹ್ಮಣಸ್ಥ-ವಾಕ್ಯಾರ್ಥನಿರ್ಣಯಾಯ ಪ್ರವೃತ್ತಮ್ | ತತ್ರ ಹಿ "ನ ವಾ ಅರೇ ಪತ್ಯುಃ ಕಾಮಾಯ" ಇತ್ಯುಪಕ್ರಮ್ಯ "ನ ವಾ ಅರೇ ಸರ್ವಸ್ಯ ಕಾಮಾಯ ಸರ್ವಂ ಪ್ರಿಯಂ ಭವತ್ಯಾತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತ್ಯಾತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ" (ಬೃ. ೨-೪-೫) ಇತಿ ಪ್ರಿಯಸಂಸೂಚಿತೇನ ಭೋಕ್ತ್ರಾತ್ಮನಾ ಉಪಕ್ರಮ್ಯ "ಆತ್ಮನಿ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ" ಇತಿ ಪರಮಾತ್ಮೋಪದೇಶಃ ಕೃತಃ | ತದಿದಂ ಜೀವಾತ್ಮಪರಮಾತ್ಮನೋರಭೇದೇನೋಪಕ್ರಮಣಂ ಕಥಮುಪಪಾದ್ಯತಾಮ್ ? ಇತ್ಯತ್ರ ವಿಪ್ರತಿಪನ್ನಾ ಆಶ್ಮರಥ್ಯಾದಯಃ | ತತ್ರ ಸೂತ್ರಾಭಿಪ್ರಾಯಮ್ ಏವಂ ವ್ಯಾಚಷ್ಟೇ ಭಾಷ್ಯಕಾರಃ -

(೧) ಪ್ರತಿಜ್ಞಾಸಿದ್ಧ್ಯರ್ಥಂ ವಿಜ್ಞಾನಾತ್ಮಪರಮಾತ್ಮನೋರಭೇದಾಂಶೇನೋಪ-ಕ್ರಮಣಮಿತಿ ಆಶ್ಮರಥ್ಯ ಆಚಾರ್ಯೋ ಮನ್ಯತೇ ||

ಸೂ.ಭಾ. ೧-೪-೨೦,

---

೧) "ಪ್ರತಿಜ್ಞಾಸಿದ್ಧೇರ್ಲಿಂಗಮಾಶ್ಮರಥ್ಯಃ", ೨) "ಉತ್ಕ್ರಮಿಷ್ಯತ ಏವಂಭಾವಾದಿತ್ಯೌಡುಲೋಮಿಃ", ೩) "ಅವಸ್ಥಿತೇರಿತಿ ಕಾಶಕೃತ್ಸ್ನಃ" (ವೇ. ಸೂ. ೧–೪–೨೦, ೨೧, ೨೨) ಎಂಬುದಾಗಿ ಹೇಳಿದ್ದಾರೆ. ಈ ಮೂರು ಸೂತ್ರಗಳೂ ಸಹ ಮೈತ್ರೇಯಿ ಬ್ರಾಹ್ಮಣದಲ್ಲಿರುವ ವಾಕ್ಯಾರ್ಥವನ್ನು ನಿರ್ಣಯ ಮಾಡುವುದಕ್ಕೆ ಬಂದಿರುತ್ತವೆ. ಅಲ್ಲಿ "ಎಲೆ, ಮೈತ್ರೇಯಿ, ಗಂಡನ ಸಂತೋಷಕ್ಕಾಗಿ ಗಂಡನು ಪ್ರಿಯನಾಗಿರುವುದಿಲ್ಲ. ತನ್ನ ಸಂತೋಷಕ್ಕಾಗಿಯೇ ಗಂಡನು ಪ್ರಿಯನಾಗಿರುತ್ತಾನೆ" ಎಂಬುದಾಗಿ ಆರಂಭಗೊಂಡು "ಎಲ್ಲದರ ಪ್ರೇಮಕ್ಕಾಗಿ ಎಲ್ಲವೂ ಪ್ರಿಯವಾಗಿರುವುದಿಲ್ಲ. ತನ್ನ ಪ್ರೇಮಕ್ಕಾಗಿಯೇ ಎಲ್ಲವೂ ಪ್ರಿಯವಾಗಿರುತ್ತದೆ. ಆತ್ಮನನ್ನೇ ಕಂಡುಕೊಳ್ಳಬೇಕು ಶ್ರವಣವನ್ನು ಮಾಡಬೇಕು. ಮನನವನ್ನೂ, ನಿದಿಧ್ಯಾಸನವನ್ನು ಮಾಡಬೇಕು" (ಬೃ. ೨–೪–೫) ಎಂಬುದಾಗಿ ಪ್ರಿಯತ್ವಗುಣದಿಂದ ಸೂಚಿತನಾದ ಭೋಕ್ತ್ರಾತ್ಮನನ್ನು ಆರಂಭಿಸಿಕೊಂಡು "ಆತ್ಮನನ್ನು ತಿಳಿದುಬಿಟ್ಟರೆ ಎಲ್ಲವನ್ನೂ ತಿಳಿದಂತಾಗುತ್ತದೆ" ಎಂದು ಪರಮಾತ್ಮೋಪದೇಶವನ್ನು ಮಾಡಿದೆ. ಆ ಈ ಜೀವಾತ್ಮಪರಮಾತ್ಮರುಗಳಿಗೆ ಅಭೇದದಿಂದ ಆರಂಭಿಸಿರುವುದು ಹೇಗೆ ಹೊಂದುತ್ತದೆ? ಎಂಬೀ ವಿಷಯದಲ್ಲಿ ಆಶ್ಮರಥ್ಯರೇ ಮುಂತಾದ ಆಚಾರ್ಯರುಗಳು ವಿರುದ್ಧಾಭಿಪ್ರಾಯವನ್ನು ಹೊಂದಿದ್ದಾರೆ. ಈ ಸಂದರ್ಭದಲ್ಲಿ ಸೂತ್ರದ ಅಭಿಪ್ರಾಯವೇನೆಂಬುದನ್ನು

ಅತ್ರ "ಅಭೇದಾಂಶೇನೋಪಕ್ರಮಣಮ್" ಇತ್ಯುಕ್ತೇಃ, ಭೇಧಾಂಶೋಽಪ್ಯಭಿಮತ ಇತಿ ಗಮ್ಯತೇ | ತಥಾ ಚಾಹ ವಾಕ್ಯಶೇಷೇ ಭಾಷ್ಯಕೃತ್ -

> (೧) ಆಶ್ಮರಥ್ಯಸ್ಯ ತು ಯದ್ಯಪಿ ಜೀವಸ್ಯ ಪರಸ್ಮಾದನನ್ಯತ್ವಮಭಿಪ್ರೇತಮ್, ತಥಾಪಿ "ಪ್ರತಿಜ್ಞಾಸಿದ್ಧೇಃ" ಇತಿ ಸಾಪೇಕ್ಷತ್ವಾಭಿಧಾನಾತ್ ಕಾರ್ಯಕಾರಣಭಾವಃ ಯಾನಪ್ಯಭಿಪ್ರೇತ- ಇತಿ ಗಮ್ಯತೇ ||

ಇತಿ ||

> [ಜೀವಬ್ರಹ್ಮಣೋಃ ಕಾರ್ಯಕಾರಣಭಾವೋ ಮೃದ್ಘಟಯೋರಿವ, ಘಟಸ್ಯ ಮೃತ್ಸಕಾಶಾದಿವ ಬ್ರಹ್ಮಣಃ ಸಕಾಶಾಜ್ಜೀವಸ್ಯ ಭೇದೋಽಭೇದಶ್ಚ ಇತ್ಯೇತದಾಚಾರ್ಯಸ್ಯ ಮತಮಿತ್ಯರ್ಥಃ] ||

> (೨) ವಿಜ್ಞಾನಾತ್ಮನ ಏವ ದೇಹೇಂದ್ರಿಯಮನೋಬುದ್ಧಿಸಂಘಾತೋಪಾಧಿ- ಸಂಪರ್ಕಾತ್ ಕಲುಷೀಭೂತಸ್ಯ ಜ್ಞಾನಧ್ಯಾನಾದಿಸಾಧನಾನುಷ್ಠಾನಾತ್ ಸಂಪ್ರಸನ್ನಸ್ಯ

---

ಭಾಷ್ಯಕಾರರು ಹೀಗೆ ವಿವರಿಸಿರುತ್ತಾರೆ. (೧) ಪ್ರತಿಜ್ಞೆಯು ಸಿದ್ಧಿಯಾಗುವುದಕ್ಕಾಗಿ ವಿಜ್ಞಾನಾತ್ಮಪರಮಾತ್ಮರುಗಳಿಗೆ ಅಭೇದದಿಂದಾರಂಭಿಸಿರುತ್ತದೆ, ಎಂದು ಆಶ್ಮರಥ್ಯಾಚಾರ್ಯರು ಅಭಿಪ್ರಾಯಪಟ್ಟಿರುತ್ತಾರೆ (೧-೪-೨೦). ಇಲ್ಲಿ "ಅಭೇದಾಂಶದಿಂದ ಆರಂಭಿಸಿರುವುದು" ಎಂದು ಹೇಳಿರುವುದರಿಂದ ಭೇದಾಂಶವೂ ಕೂಡ ಒಪ್ಪಿಗೆ ಎಂದು ಗೊತ್ತಾಗುತ್ತದೆ. ಹಾಗೆಯೇ ವಾಕ್ಯಶೇಷದಲ್ಲಿ ಭಾಷ್ಯಕಾರರು ಹೇಳಿರುತ್ತಾರೆ. "ಆಶ್ಮರಥ್ಯಾಚಾರ್ಯರಿಗೆ ಜೀವನು ಪರಮಾತ್ಮನಿಗಿಂತ ಬೇರೆಯಲ್ಲ ಎಂಬ ಅಭಿಪ್ರಾಯವಿದ್ದರೂ" ಪ್ರತಿಜ್ಞಾಸಿದ್ಧೇಃ (ಪ್ರತಿಜ್ಞಾ ಸಿದ್ಧಿಗಾಗಿ) ಎಂದು ಸಾಪೇಕ್ಷವಾಗಿ ಹೇಳಿರುವುದರಿಂದ (ಜೀವಪರಮಾತ್ಮರುಗಳಿಗೆ) ಏನೋ ಒಂದು ಸ್ವಲ್ಪ ಕಾರ್ಯಕಾರಣ ಭಾವವು ಒಪ್ಪಿಗೆಯಾಗಿದೆ ಎಂದು ಗೊತ್ತಾಗುತ್ತದೆ. ಜೀವಕ್ಕೂ ಬ್ರಹ್ಮಕ್ಕೂ ಕಾರ್ಯಕಾರಣ ಭಾವವು ಮಣ್ಣುಗಡಿಗೆಗೆ ಇರುವಂತೆ ಇದೆ. ಗಡಿಗೆ ಮಣ್ಣಿನೊಡನೆ ಭೇದವೂ ಅಭೇದವೂ ಇರುವ ಹಾಗೆ ಜೀವನಿಗೆ ಬ್ರಹ್ಮಕ್ಕಿಂತ ಭೇದಾಭೇದವಿದೆ ಎಂಬುದು ಈ ಆಚಾರ್ಯಮತವೆಂದಾಗುತ್ತದೆ. (೨) ವಿಜ್ಞಾನಾತ್ಮನಾದ (ಜೀವನೇ) ದೇಹೇಂದ್ರಿಯಮನೋಬುದ್ಧಿಗಳೆಂಬ ಉಪಾಯ ಸಂಬಂಧದಿಂದ ಕಲುಷಿತನಾದವನಾಗಿ (ಮತ್ತೆ) ಜ್ಞಾನಧ್ಯಾನಾದ್ಯನುಷ್ಠಾನದಿಂದ

ದೇಹಾದಿಸಂಘಾತಾತ್ ಉತ್ಕ್ರಮಿಷ್ಯತಃ, ಪರಮಾತ್ಮೈಕ್ಯೋಪಪತ್ತೇರಿದಮ್
ಅಭೇದೇನೋಪಕ್ರಮಣಮ್ ಇತಿ - ಔಡುಲೋಮಿರಾಚಾರ್ಯೋ ಮನ್ಯತೇ ||
ಸೂ. ಭಾ. ೧-೪-೨೧,

ಅತ್ರ ಜೀವಸ್ಯ ಸಂಸಾರಾವಸ್ಥಾಯಾಮ್ ಉಪಾಧಿವಶತೋ ಭೇದ ಏವ, ಉತ್ಕ್ರಾಂತ್ಯನಂತರಂ ತು ಅಭೇದಃ, ತದಿಹ ಭವಿಷ್ಯದ್ವೃತ್ತ್ಯಾ ಅಭೇದೋಽಂಗೀಕೃತಃ ಶ್ರುತ್ಯಾ- ಇತಿ ಔಡುಲೋಮಿಮತಮಿತಿ ಗಮ್ಯತೇ | ತಥಾ ಹ್ಯುಕ್ತಂ ಭಾಷ್ಯಕೃತಾಪಿ -

(೨) ಔಡುಲೋಮಿಪಕ್ಷೇ ಪುನಃ ಸ್ಪಷ್ಟಮೇವಾವಸ್ಥಾಂತರಾಪೇಕ್ಷೌ ಭೇದಾಭೇದೌ ಗಮ್ಯೇತೇ ||

ಇತಿ ||

[ ನ ತು ಯುಗಪತ್ ಭೇದಾಭೇದೌ, ಆಶ್ಮರಥ್ಯಪಕ್ಷೇ ಇವೇತ್ಯಭಿಪ್ರಾಯಃ || ]

(೩) ಅಸ್ಯೈವ ಪರಮಾತ್ಮನೋಽನೇನಾಪಿ ವಿಜ್ಞಾನಾತ್ಮಭಾವೇನಾವಸ್ಥಾನಾತ್

---

ತಿಳಿಯಾದವನಾಗಿ ದೇಹಾದಿ ಸಂಘಾತದಿಂದ ಬಿಟ್ಟೇಳುತ್ತಿರುವವನಾದ ಆತನಿಗೆ (ಜೀವನಿಗೆ) ಪರಮಾತ್ಮನೊಡನೆ ಐಕ್ಯವು ಹೊಂದುತ್ತದೆಯಾದ್ದರಿಂದ ಅಭೇದದಿಂದ ಆರಂಭಮಾಡಿಕೊಂಡಿದೆ ಎಂದು ಔಡುಲೋಮಿ ಆಚಾರ್ಯರು ಅಭಿಪ್ರಾಯವನ್ನು ಪಟ್ಟಿರುತ್ತಾರೆ. (ಸೂ. ಭಾ. ೧-೪-೨೧) (ಈ ಆಚಾರ್ಯರ ಅಭಿಪ್ರಾಯವೇನೆಂದರೆ,) ಸಂಸಾರಾವಸ್ಥೆಯಲ್ಲಿ ಜೀವನಿಗೆ, ಉಪಾಧಿಗೆ ಅಧೀನವಾಗಿ ಭೇದವಿದ್ದೇ ಇದೆ. ಉತ್ಕ್ರಾಂತಿಯಾದ ಮೇಲಾದರೋ ಅಭೇದವಿರುತ್ತದೆ. ಅದನ್ನು ಇಲ್ಲಿ ಶ್ರುತಿಯು ಭವಿಷ್ಯದ್ವೃತ್ತಿಯಿಂದ (ಮುಂದಾಗುತ್ತದೆ ಎಂಬ ಕಾರಣದಿಂದ) ಹೇಳಿರುತ್ತದೆ. ಹಾಗೆ ಭಾಷ್ಯಕಾರರೂ ಸಹ ಹೇಳಿರುತ್ತಾರೆ. "ಔಡುಲೋಮಿ ಪಕ್ಷದಲ್ಲಿಯಾದರೋ ಸ್ಪಷ್ಟವಾಗಿಯೇ ಅವಸ್ಥಾಂತರಾಪೇಕ್ಷೆಯಿಂದ (ಬೇರೆ ಬೇರೆ ಅವಸ್ಥಾದೃಷ್ಟಿಯಿಂದ) ಭೇದಾಭೇದಗಳು ಇದ್ದೇ ಇವೆ ಎಂದು ಗೊತ್ತಾಗುತ್ತದೆ" ಎಂದು ಹೇಳಿದ್ದಾರೆ. ಆಶ್ಮರಥ್ಯ ಪಕ್ಷದಲ್ಲಿ ಹೇಗೋ ಹಾಗೆ ಒಟ್ಟಿಗೆ ಭೇದಾಭೇದಗಳು ಇವರ ಪಕ್ಷದಲ್ಲಿಲ್ಲ ಎಂದು ಅಭಿಪ್ರಾಯವು (೩) "ಈ ಪರಮಾತ್ಮನೇ ಈ ಜೀವರೂಪದಿಂದಿದ್ದುಕೊಂಡಿರುವುದರಿಂದ ಅಭೇದದಿಂದ ಆರಂಭಿಸಿಕೊಂಡಿ-ರುವುದು ಹೊಂದುತ್ತದೆ ಎಂದು ಕಾಶಕೃತ್ಸ್ನಾಚಾರ್ಯರು ಅಭಿಪ್ರಾಯ

ಉಪಪನ್ನಮಿದಮಭೇದೇನೋಪಕ್ರಮಣಮ್ - ಇತಿ ಕಾಶಕೃತ್ಸ್ನ ಆಚಾರ್ಯೋ ಮನ್ಯತೇ || ಸೂ. ಭಾ. ೧-೪-೨೨,

ಅತ್ರ ತು "ವಿಜ್ಞಾನಾತ್ಮಭಾವೇನಾಪಿ" ಇತ್ಯಪಿಶಬ್ದಾತ್ ಸಂಸಾರದಶಾಯಾಮಪಿ ಪರಮಾತ್ಮಭಾವೋ ನ ಹೀಯತ ಇತಿ ಕಾಶಕೃತ್ಸ್ನಮತಮಿತಿ ಗಮ್ಯತೇ | ತಥಾ ಚ ಭಾಷ್ಯೋಕ್ತಿಃ ||

(೩) ಕಾಶಕೃತ್ಸ್ನಸ್ಯ ಆಚಾರ್ಯಸ್ಯ ಅವಿಕೃತಃ ಪರಮೇಶ್ವರೋ ಜೀವೋ ನಾನ್ಯ ಇತಿ ಮತಮ್ ||

ಇತಿ ||

ಸರ್ವಥಾಪಿ ತ್ವತ್ರ ಮೋಕ್ಷೇ ಜೀವಬ್ರಹ್ಮಣೋರಭೇದಃ ಸರ್ವಸಂಮತಃ | ಅತೋ "ಬದ್ಧಾನ್ಮುಕ್ತಾಚ್ಚ ಪ್ರತ್ಯಗಾತ್ಮನೋಽತ್ಯಂತವಿಲಕ್ಷಣಃ ಪರಮಾತ್ಮಾ" (ವೇ.ದೀ.ಪಾ. ೧೧೪) ಇತಿ ವದಂತೋ ರಾಮಾನುಜಾದಿಸಜಾತೀಯಾ ವಿಶಿಷ್ಟಾದ್ವೈತಿವೇದಾಂತಿನೋ ನಾಸನ್ನೇವ ಸೂತ್ರಪ್ರಣಯನಕಾಲೇಽಪೀತಿ ಭಾಷ್ಯಕಾರಾಭಿಪ್ರಾಯೋ ಗಮ್ಯತೇ || ಪರಮಾತ್ಮನೋಽತ್ಯಂತಭಿನ್ನಾನಾಂ ತದನುಚರಾಣಾಂ ನೀಚೋಚ್ಚಭಾವಂಗತಾನಾಂ

---

ಪಟ್ಟಿರುತ್ತಾರೆ". ಈ ಪಕ್ಷದಲ್ಲಾದರೋ "ಜೀವರೂಪದಿಂದಿದ್ದಾಗಲೂ" ಎಂದು ಅಪಿ ಶಬ್ದವನ್ನು ಹಾಕಿರುವುದರಿಂದ ಸಂಸಾರಾವಸ್ಥೆಯಲ್ಲಿದ್ದಾಗಲೂ ಈತನಿಗೆ ಪರಮಾತ್ಮಭಾವವು ಬಿಟ್ಟು ಹೋಗಿರುವುದಿಲ್ಲ ಎಂದು ಕಾಶಕೃತ್ಸ್ನರು ಅಭಿಪ್ರಾಯಪಟ್ಟುಕೊಂಡಿದ್ದಾರೆಂದು ಗೊತ್ತಾಗುತ್ತದೆ. ಭಾಷ್ಯವಾಕ್ಯವೂ ಸಹ ಹಾಗೆಂಯೇ ಇದೆ. "ಬದಲಾವಣೆ ಇಲ್ಲದ ಪರಮಾತ್ಮನೇ ಜೀವರೂಪದಿಂದಿರತಕ್ಕವನು, ಬೇರೆ ಅಲ್ಲ, ಎಂದು ಕಾಶಕೃತ್ಸ್ನರ ಮತವೆಂದು ಗೊತ್ತಾಗುತ್ತದೆ". ಹೇಗೆ ಆಗಲಿ ಈ ಎಲ್ಲಾ (ಮೂರು) ಪಕ್ಷದಲ್ಲೂ ಜೀವ ಬ್ರಹ್ಮರಿಗೆ ಅಭೇದವೇ ಎಲ್ಲರಿಗೂ ಒಪ್ಪಿಗೆಯಾಗಿರುವಂಥದ್ದೆಂದು ಗೊತ್ತಾಗುತ್ತದೆ. "ಬದ್ಧನೂ ಮುಕ್ತನೂ ಆದ ಜೀವನಿಗಿಂತ ಪರಮಾತ್ಮನು ಅತ್ಯಂತ ವಿಲಕ್ಷಣನು" (ವೇ.ದೀ.ಪು) ಎಂಬುದಾಗಿ ಹೇಳುವ ರಾಮಾನುಜರೇ ಮೊದಲಾದ ವಿಶಿಷ್ಟಾದ್ವೈತಿ ವೇದಾಂತಿಗಳು, ಬಾದರಾಯಾಣರು ಸೂತ್ರವನ್ನು ಬರೆಯುವ ಕಾಲದಲ್ಲಿ ಇರಲೇಇಲ್ಲ ಎಂಬುದು ಭಾಷ್ಯಕಾರರ ಮತವೆಂದು ಗೊತ್ತಾಗುತ್ತದೆ. ಆಗಿನ ಕಾಲದಲ್ಲಿ ಪರಮಾತ್ಮನಿಗಿಂತ ಅತ್ಯಂತ ಭಿನ್ನರಾದ,

ಜೀವಾನಾಂ ವಾರ್ತಾಪಿ ನ ವೇದಾಂತಗೋಷ್ಠೀಷು ಶ್ರೂಯತೇ ಸ್ಮ ತದಾತ್ವೇ ಇತಿ ಚ ||

**೪. ಅದ್ವೈತಪ್ರಕ್ರಿಯಾಭೇದಾ ಬಹವೋ ಭಾಷ್ಯೇ ಪರಾಮೃಷ್ಟಾಃ** - ಅಪಿ ಚ ಪ್ರಸ್ಥಾನತ್ರಯಭಾಷ್ಯೇಷು ಬಹುಶೋ ದರೀದೃಶ್ಯಂತೇ ಅದ್ವೈತಿನಾಮೇವ ಪ್ರಕ್ರಿಯಾಭೇದಾಸ್ತತ್ರ ತತ್ರ ಪರಾಮೃಶ್ಯ ನಿರಾಕೃತಾಃ | ತದ್ಯಥಾ -

> (೧) ಯದ್ಯಪಿ ಶಾಸ್ತ್ರಪ್ರಮಾಣಕಂ ಬ್ರಹ್ಮ, ತಥಾಪಿ ಪ್ರತಿಪತ್ತಿವಿಧಿವಿಷಯತಯೈವ ಶಾಸ್ತ್ರೇಣ ಬ್ರಹ್ಮ ಸಮರ್ಪ್ಯತೇ | ..."ಆತ್ಮಾ ವಾ ಅರೇ ದ್ರಷ್ಟವ್ಯಃ", "ಯ ಆತ್ಮಾ ಅಪಹತಪಾಪ್ಮಾ... ಸೋಽನ್ವೇಷ್ಟವ್ಯಃ ಸ ವಿಜಿಜ್ಞಾಸಿತವ್ಯಃ", "ಆತ್ಮೇತ್ಯೇವೋಪಾಸೀತ", "ಆತ್ಮಾನಮೇವ ಲೋಕಮುಪಾಸೀತ", "ಬ್ರಹ್ಮ ವೇದ ಬ್ರಹ್ಮೈವ ಭವತಿ" ಇತ್ಯಾದಿವಿಧಾನೇಷು ಸತ್ಸು ಕೋಽಸಾವಾತ್ಮಾ? ಕಿಂ ತದ್ ಬ್ರಹ್ಮ ? - ಇತ್ಯಾಕಾಂಕ್ಷಾಯಾಂ ತತ್ಸ್ವರೂಪಸಮರ್ಪಣೇನ ಸರ್ವೇ ವೇದಾಂತಾ ಉಪಯುಕ್ತಾಃ "ನಿತ್ಯಃ ಸರ್ವಜ್ಞಃ ಸರ್ವಗತೋ ನಿತ್ಯತೃಪ್ತೋ ನಿತ್ಯಶುದ್ಧಬುದ್ಧಮುಕ್ತಸ್ವಭಾವೋ ವಿಜ್ಞಾನಮಾನಂದಂ ಬ್ರಹ್ಮ" ಇತ್ಯೇವಮಾದಯಃ | ತದುಪಾಸನಾಚ್ಚ ಶಾಸ್ತ್ರದೃಷ್ಟೋಽದೃಷ್ಟೋ ಮೋಕ್ಷಃ ಫಲಂ ಭವಿಷ್ಯತೀತಿ ||
>
> ಸೂ.ಭಾ. ೧-೧-೪,ಭಾ.ಭಾ. ೩೯,೪೦

---

ಅವನಿಗೆ ಅನುಚರರಾದ ನೀಚೋಚ್ಚಭಾವವನ್ನು ಹೊಂದಿದವರಾದ ಜೀವರುಗಳ ಮಾತೂ ಸಹ ವೇದಾಂತಗೋಷ್ಠಿಗಳಲ್ಲಿ ಕೇಳಬಂದಿಲ್ಲ ಎಂಬುದು ಗೊತ್ತಾಗುತ್ತದೆ.

**೪) ಭಾಷ್ಯದಲ್ಲಿ ಅನೇಕ ಅದ್ವೈತ ಪ್ರಕ್ರಿಯಾಭೇದಗಳು ಪರಾಮೃಷ್ಟವಾಗಿವೆ.** ಪ್ರಸ್ಥಾನತ್ರಯ ಭಾಷ್ಯದಲ್ಲಿ ಅದ್ವೈತಿಗಳದ್ದೇ ಆದ ಪ್ರಕ್ರಿಯಾ ಭೇದಗಳು ಬಹಳವಾಗಿ ಕಂಡು ಬಂದಿವೆ. ಹಾಗೆಯೇ ಅಲ್ಲಿ ಅವುಗಳ ನಿರಾಕರಣೆಯನ್ನೂ ಮಾಡಿರುತ್ತದೆ. ಹೇಗೆಂದರೆ – (೧) ಬ್ರಹ್ಮವು ಶಾಸ್ತ್ರಪ್ರಮಾಣದಿಂದಲೇ ತಿಳಿದು ಬರುವುದಾಗಿದ್ದರೂ ಅದು ಉಪಾಸನಾ ವಿಧಿಗೆ ವಿಷಯವಾಗಿಯೇ ತಿಳಿದು ಬಂದಿದೆ...... (ಉಪನಿಷತ್ತುಗಳಲ್ಲಿ) ಆತ್ಮನನ್ನೇ ಕಂಡುಕೊಳ್ಳಬೇಕು. ಯಾವ ಆತ್ಮನು ಅಪಹತಪಾಪ್ಮನೋ ...... ಅವನನ್ನೇ ಹುಡುಕಬೇಕು, ಅವನನ್ನೇ ಕಂಡುಕೊಳ್ಳಬೇಕು, ಆತ್ಮನೆಂತಲೇ ಉಪಾಸನೆಯನ್ನು ಮಾಡಬೇಕು, ಆತ್ಮಲೋಕವನ್ನೇ ಉಪಾಸನೆ ಮಾಡಬೇಕು. ಬ್ರಹ್ಮವನ್ನು ಅರಿತವನು ಬ್ರಹ್ಮನೇ ಆಗುವನು, ಇದೇ ಮೊದಲಾಗಿ ವಿಧಿ

ಅತ್ರೋಪಾಸನಾದೇವ ಕೇವಲಾತ್ ವಿದೇಹಮುಕ್ತಿರ್ಭವಿತ್ರೀ - ಇತ್ಯುಕ್ತಮ್ | ಉಪಾಸನಾಯಾ ಅವಿದ್ಯಾನಿವರ್ತಕತ್ವಮಪ್ಯಸ್ತಿ ದೃಷ್ಟಫಲಮ್ ಇತ್ಯಪ್ಯಂಗೀಕೃತಂ ದೃಶ್ಯತೇ ಬೃಹದಾರಣ್ಯಕಭಾಷ್ಯೇ ಏತಸ್ಯೈವ ಮತಸ್ಯಾನುವಾದಾವಸರೇ -

> (೨) ಯಥಾ ಚ ಕೃತ್ಸ್ನಸ್ಯ ದರ್ಶಪೂರ್ಣಮಾಸಾದಿಪ್ರಕರಣಸ್ಯ ದರ್ಶಪೂರ್ಣಮಾಸಾದಿವಿಧ್ಯುದ್ದೇಶತ್ವೇನೋಪಯೋಗಃ, ಏವಮ್ ಔಪನಿಷದಾತ್ಮೋಪಾಸನಪ್ರಕರಣಸ್ಯ ಆತ್ಮೋಪಾಸನವಿಧ್ಯುದ್ದೇಶತ್ವೇನೈವ ಉಪಯೋಗಃ | "ನೇತಿ ನೇತಿ", "ಅಸ್ಥೂಲಮ್", "ಏಕಮೇವಾದ್ವಿತೀಯಮ್", "ಅಶನಾಯಾದ್ಯತೀತಃ" ಇತ್ಯೇವಮಾದಿವಾಕ್ಯಾನಾಮ್ ಉಪಾಸ್ಯಾತ್ಮಸ್ವರೂಪವಿಶೇಷಸಮರ್ಪಣೇನೋಪಯೋಗಃ | ಫಲಂ ಚ ಮೋಕ್ಷಃ ಅವಿದ್ಯಾನಿವೃತ್ತಿರ್ವಾ || ಬೃ. ೧-೪-೭,

ಅತ್ರ ರಾಮಾನುಜೀಯಮತೇ ಇವೈವ ಅವಿದ್ಯಾನಿವೃತ್ತಯೇ ಉಪಾಸನಾತ್ಮಿಕೈವ ವಿದ್ಯಾ

---

ಇರಲಾಗಿ, ಯಾರು ಆತ್ಮಾ ? ಆ ಬ್ರಹ್ಮ ಯಾವುದು ? ಎಂಬುದಾಗಿ ಆಕಾಂಕ್ಷೆಯು ಹುಟ್ಟಲಾಗಿ ಅದರ ಸ್ವರೂಪವನ್ನು ತಿಳಿಸಿಕೊಡುವುದಕ್ಕಾಗಿ ಎಲ್ಲಾ ವೇದಾಂತಗಳೂ ಉಪಯುಕ್ತವಾಗಿವೆ. ಅವು ಬ್ರಹ್ಮವು ನಿತ್ಯವಾಗಿದೆ, ಸರ್ವಜ್ಞವೂ ಸರ್ವಗತವೂ ನಿತ್ಯತೃಪ್ತವೂ ನಿತ್ಯಶುದ್ಧ-ಬುದ್ಧ-ಮುಕ್ತ ಸ್ವಭಾವವೂ ವಿಜ್ಞಾನಮಾನಂದಸ್ವರೂಪವೂ ಆದದ್ದು ಬ್ರಹ್ಮವು ಎಂದು ಹೇಳುತ್ತಿವೆ. ಅದರ ಉಪಾಸನೆಯಿಂದ ಶಾಸ್ತ್ರದಲ್ಲಿ ಕಂಡದ್ದಾದ ಅದೃಷ್ಟವಾದ ಮೋಕ್ಷವಾಗುತ್ತದೆ. (ಸೂ.ಭಾ. ೧-೧-೪) ಈ ಸ್ಥಳದಲ್ಲಿ ಕೇವಲವಾದ ಉಪಾಸನೆಯಿಂದಲೇ ವಿದೇಹ ಮುಕ್ತಿಯಾಗುವುದೆಂದು ಹೇಳಿದೆ. ಈ ಮತವನ್ನು ಅನುಸರಣೆ ಮಾಡುವವರು ಕೆಲವರು, ಉಪಾಸನೆಗೆ ಅವಿದ್ಯೆಯನ್ನು ಕಳೆದುಹಾಕುವುದೆಂಬ ದೃಷ್ಟಫಲವೂ ಉಂಟೆಂದು ಅಂಗೀಕರಿಸುವ ಪಕ್ಷವನ್ನು ಬೃಹದಾರಣ್ಯಕ ಭಾಷ್ಯದಲ್ಲಿ ಒಪ್ಪಿರುವುದು ಕಂಡು ಬರುತ್ತದೆ.

(೨) ಹೇಗೆ ಸಂಪೂರ್ಣವಾಗಿ ದರ್ಶಪೂರ್ಣಮಾಸಪ್ರಕರಣವು ದರ್ಶಪೂರ್ಣಮಾಸವೇ ಮುಂತಾದ ವಿಧಿಗೆ ಶೇಷವಾಗಿ ವಿನಿಯೋಗವಿರುತ್ತದೋ ಅದರಂತೆ ಔಪನಿಷದ ಆತ್ಮನ ಉಪಾಸನೆಯನ್ನು ಮಾಡಬೇಕೆಂಬ ಪ್ರಕರಣಕ್ಕೆ ಆತ್ಮೋಪಾಸನೆಯನ್ನು ಮಾಡಬೇಕೆಂಬ ವಿಧಿಗೆ ಉದ್ದೇಶವಾಗಿ ಸಂಪೂರ್ಣಉಪನಿಷತ್ತು ವಿನಿಯೋಗವಾಗಿರುತ್ತದೆ. "ಇದಲ್ಲ, ಇದಲ್ಲ" ದಪ್ಪ ಅಲ್ಲ, ಎರಡಿಲ್ಲದ ಒಂದೇ ಆಗಿದೆ. ಹಸಿವು ಮುಂತಾದವುಗಳನ್ನುಮೀರಿದ್ದು,

ವಿಹಿತಾ ಶ್ರುತಿಷು - ಇತ್ಯುಕ್ತಂ ಯದ್ಯಪಿ, ತಥಾಪಿ "ನೇತಿ ನೇತಿ" ಇತ್ಯಾದಿವಿಶೇಷ-ನಿರಾಕರಣಶ್ರುತೀನಾಮಪಿ ಉಪಾಸ್ಯಸ್ವರೂಪಸಮರ್ಪಕತಯೈವ ವಿನಿಯೋಗ ಉಕ್ತ ಇತಿ ಅದ್ವೈತಿನ ಏವೈತೇ ಅನೂದಿತಾ ವಾದಿನ ಇತಿ ಸ್ಪಷ್ಟಮ್ ||

(೩) ನನ್ವನೇಕಾತ್ಮಕಂ ಬ್ರಹ್ಮ | ಯಥಾ ವೃಕ್ಷೋಽನೇಕಶಾಖಃ, ಏವಮ್ ಅನೇಕಶಕ್ತಿಪ್ರವೃತ್ತಿಯುಕ್ತಂ ಬ್ರಹ್ಮ | ಅತಃ ಏಕತ್ವಂ ನಾನಾತ್ವಂ ಚೋಭಯಮಪಿ ಸತ್ಯಮೇವ | ಯಥಾ "ವೃಕ್ಷಃ" ಇತ್ಯೇಕತ್ವಮ್, "ಶಾಖಾಃ" ಇತಿ ನಾನಾತ್ವಮ್ | ಯಥಾ ಚ ಸಮುದ್ರಾತ್ಮನಾ ಏಕತ್ವಮ್, ಫೇನತರಂಗಾದ್ಯಾತ್ಮನಾ ನಾನಾತ್ವಮ್ | ಯಥಾ ಚ ಮೃದಾತ್ಮನಾ ಏಕತ್ವಮ್, ಘಟಶರಾವಾದ್ಯಾತ್ಮನಾ ನಾನಾತ್ವಮ್ | ತತ್ರ ಏಕತ್ವಾಂಶೇನ ಜ್ಞಾನಾನ್ಮೋಕ್ಷವ್ಯವಹಾರಃ ಸೇತ್ಸ್ಯತಿ, ನಾನಾತ್ವಾಂಶೇನ ತು ಕರ್ಮಕಾಂಡಾಶ್ರಯೌ ಲೌಕಿಕವೈದಿಕವ್ಯವಹಾರೌ ಸೇತ್ಸ್ಯತಃ ಇತಿ | ಏವಂ ಮೃದಾದಿದೃಷ್ಟಾಂತಾ ಅನುರೂಪಾ ಭವಿಷ್ಯಂತೀತಿ ||

ಸೂ. ಭಾ. ೨-೧-೧೪, ಭಾ.ಭಾ. ೪೩೫.

ಏತನ್ಮತಂ ಭರ್ತೃಪ್ರಪಂಚಾನಾಮಿತಿ ಭಾತಿ | ಯತಸ್ತೇಷಾಮಭಿಪ್ರಾಯಃ ಏತಾದೃಶ

---

ಎಂಬಿದೇ ಮೊದಲಾದ ವಾಕ್ಯಗಳಿಗೆ ಉಪಾಸ್ಯವಾದ ಆತ್ಮನ ಸ್ವರೂಪ ವಿಶೇಷವನ್ನು ಸಮರ್ಪಣೆ ಮಾಡುವುದರಲ್ಲಿ ವಿನಿಯೋಗವಿರುತ್ತದೆ. ಫಲವಾದರೋ ಮೋಕ್ಷವು, ಅಥವಾ ಅವಿದ್ಯೆಯು ತೊಲಗುವುದು ಎಂಬುದಾಗಿದೆ (ಬೃ ೧-೪-೭). ಈ ಸ್ಥಳದಲ್ಲಿ – ರಾಮಾನುಜರ ಮತದಲ್ಲಿ ಹೇಗೆ ಅವಿದ್ಯೆಯನ್ನು ಕಳೆಯುವುದಕ್ಕಾಗಿ ಉಪಾಸನೆಯು ಎಂದು ಹೇಳಿದೆಯೋ ಹಾಗೆಯೇ ಹೇಳಿದೆ ಎಂದು ತೋರುವುದಾದರೂ "ನೇತಿ ನೇತಿ" ಎಂಬುದಾಗಿ ವಿಶೇಷವನ್ನು ನಿರಾಕರಣೆಯನ್ನು ಮಾಡುವ ಶ್ರುತಿಗಳೂ ಉಪಾಸ್ಯವಾದ ಬ್ರಹ್ಮದ ಸ್ವರೂಪವನ್ನು ತಿಳಿಸಿಕೊಡುವುದಕ್ಕಾಗಿಯೇ ಬಂದಿದೆ ಎಂದು ಹೇಳಿರುವುದರಿಂದ ಈ ಬೃಹದಾರಣ್ಯಕದಲ್ಲಿ ಅನುವಾದ ಮಾಡಿಕೊಂಡಿರುವ ವಾದಿಗಳು ಅದ್ವೈತಿಗಳೇ ಎಂಬುದು ಸ್ಪಷ್ಟವು.

(೩) "ಬ್ರಹ್ಮವು ಅನೇಕಾತ್ಮಕವಲ್ಲವೇ ? ಹೇಗೆ ಮರದಲ್ಲಿ ಅನೇಕ ಕೊಂಬೆಗಳಿವೆಯೋ ಅದರಂತೆಯೇ ಬ್ರಹ್ಮವೂ ಅನೇಕ ಶಕ್ತಿ ಮತ್ತು ಪ್ರವೃತ್ತಿಯಿಂದ ಕೂಡಿರುತ್ತದೆ. ಆದ್ದರಿಂದ ಏಕತ್ವ ಮತ್ತು ನಾನಾತ್ವವೆರಡೂ ಸತ್ಯವೇ ಆಗಿರುತ್ತವೆ. ಹೇಗೆಂದರೆ – ಮರ ಎಂಬುದು ಒಂದು, ಕೊಂಬೆಗಳು ಎಂಬುದು ಅನೇಕವು, ಸಮುದ್ರ ರೂಪದಿಂದ ಅದು ಒಂದು, ನೊರೆ ಅಲೆ

ಏವಾನೂದಿತೋ ಬೃಹದಾರಣ್ಯಕಭಾಷ್ಯೇ "ಪೂರ್ಣಮದಃ ಪೂರ್ಣಮಿದಮ್" ಇತಿ ಮಂತ್ರವ್ಯಾಖ್ಯಾನಾವಸರೇ ಪಂಚಮಾಧ್ಯಾಯವ್ಯಾಖ್ಯಾನಪ್ರಾರಂಭೇ ||

(೪) ಸಕೃಚ್ಛ್ರುತೌ ಚ ಬ್ರಹ್ಮಾತ್ಮತ್ವಪ್ರತೀತ್ಯನುಪಪತ್ತೇರಾವೃತ್ತ್ಯಭ್ಯುಪಗಮಃ - ಇತಿ ಚೇತ್ | ನ | ಆವೃತ್ತಾವಪಿ ತದನುಪಪತ್ತೇಃ | ಯದಿ ಹಿ "ತತ್ತ್ವಮಸಿ" ಇತ್ಯೇವಂಜಾತೀಯಕಂ ವಾಕ್ಯಂ ಸಕೃಚ್ಛ್ರೂಯಮಾಣಂ ಬ್ರಹ್ಮಾತ್ಮತ್ವಪ್ರತೀತಿಂ ನೋತ್ಪಾದಯೇತ್, ತತಃ, ತದೇವಾವರ್ತ್ಯಮಾನಮ್ ಉತ್ಪಾದಯಿಷ್ಯತೀತಿ ಕಾ ಪ್ರತ್ಯಾಶಾ ಸ್ಯಾತ್ ? ಅಥೋಚ್ಯೇತ ನ ಕೇವಲಂ ವಾಕ್ಯಂ ಕಂಚಿದರ್ಥಂ ಸಾಕ್ಷಾತ್ಕರ್ತುಂ ಶಕ್ನೋತಿ ಅತಃ ಯುಕ್ತ್ಯಪೇಕ್ಷಂ ವಾಕ್ಯಮ್ ಅನುಭಾವಯಿಷ್ಯತಿ ಬ್ರಹ್ಮಾತ್ಮತ್ವಮ್ ಇತಿ | ತಥಾಪಿ, ಆವೃತ್ತ್ಯಾನರ್ಥಕ್ಯಮೇವ| ಸಾಪಿ ಹಿ ಯುಕ್ತಿಃ,

---

ಮುಂತಾದ ರೂಪದಿಂದ ಅನೇಕವಾಗಿದೆ. ಹಾಗೇಯೇ ಮಣ್ಣು ಎಂಬ ರೂಪದಿಂದ ಅದು ಒಂದು, ಗಡಿಗೆ, ತಟ್ಟೆ ಮುಂತಾದ ರೂಪದಿಂದ ನಾನಾ ರೂಪವಾಗಿದೆ. ಹೀಗೆ ಬ್ರಹ್ಮವಿರುವುದರಿಂದ (ಅದು) ಒಂದಾದ್ದರಿಂದ ಜ್ಞಾನದಿಂದ ಮೋಕ್ಷವೂ, (ಅದರ) ನಾನಾತ್ವಾಂಶದಿಂದ ಕರ್ಮಕಾಂಡವನ್ನಾಶ್ರಯಿಸಿದ್ದಾದ ಲೌಕಿಕ ವೈದಿಕ ವ್ಯವಹಾರವೂ ಕೂಡ ಹೊಂದುತ್ತವೆ. ಹೀಗಾದಾಗಲೇ ಮೃದಾದಿದೃಷ್ಟಾಂತಗಳೂ ಸಹ ಅನುಗುಣವಾದದ್ದಾಗುತ್ತವೆ. (ಸೂ. ಭಾ. ೨-೧-೧೪)

ಈ ಮತವು ಭರ್ತೃಪ್ರಪಂಚರದ್ದೆಂದು ತೋರುತ್ತದೆ. ಏಕೆಂದರೆ ಇವರ ಮತವನ್ನು ಇದೇ ರೀತಿಯಾಗಿ ಬೃಹದಾರಣ್ಯಕದ "ಪೂರ್ಣಮದಃ ಪೂರ್ಣಮಿದಂ", ಎಂಬ ಐದನೇ ಅಧ್ಯಾಯದ ವ್ಯಾಖ್ಯಾನಾರಂಭದಲ್ಲಿ ಮಂತ್ರಕ್ಕೆ ವ್ಯಾಖ್ಯಾನವನ್ನು ಮಾಡುವಾಗ (ಭಾಷ್ಯಕಾರರು) ಅನುವಾದವನ್ನು ಮಾಡಿಕೊಂಡಿರುತ್ತಾರೆ.

(೪) ಒಂದು ಸಲ ಕೇಳಿದಾಗ ಬ್ರಹ್ಮಾತ್ಮಜ್ಞಾನವು ಉಂಟಾಗದೇ ಇರುವುದರಿಂದ (ಈ ವಾಕ್ಯವನ್ನು) ಆವೃತ್ತಿಯನ್ನು ಮಾಡಬೇಕೆಂದು ಒಪ್ಪಿಕೊಳ್ಳಬೇಕಲ್ಲಾ? ಎಂದರೆ ಹಾಗೇನಿಲ್ಲ, (ಏಕೆಂದರೆ) ಆಗ ಆವೃತ್ತಿಯನ್ನು ಮಾಡಿದಾಗಲೂ ಅದು ಆಗುವುದಿಲ್ಲ. ಒಂದು ವೇಳೆ "ತತ್ವಮಸಿ" ಎಂಬುದೇ ಮೊದಲಾದ ವಾಕ್ಯವು ಒಂದು ಸಲ ಶ್ರವಣವನ್ನು ಮಾಡಿದಾಗ ಬ್ರಹ್ಮಾತ್ಮತ್ವಜ್ಞಾನವನ್ನುಂಟು ಮಾಡುವುದಿಲ್ಲವೆಂದಾದರೆ, ಆಗ ಅದನ್ನೇ

ಸಕೃತ್ ಪ್ರವೃತ್ತೈವ ಸ್ವಮರ್ಥಮ್ ಅನುಭಾವಯಿಷ್ಯತಿ | ಅಥಾಪಿ ಸ್ಯಾತ್ - ಯುಕ್ತ್ಯಾ ವಾಕ್ಯೇನ ಚ ಸಾಮಾನ್ಯವಿಷಯಮೇವ ವಿಜ್ಞಾನಂ ಕ್ರಿಯತೇ, ನ ವಿಶೇಷವಿಷಯಮ್| ಯಥಾ "ಅಸ್ತಿ ಮೇ ಹೃದಯೇ ಶೂಲಮ್" ಇತ್ಯತೋ ವಾಕ್ಯಾತ್ ಗಾತ್ರಕಂಪಾದಿಲಿಂಗಾಚ್ಚ ಶೂಲಸದ್ಭಾವಸಾಮಾನ್ಯಮೇವ ಪರಃ ಪ್ರತಿಪದ್ಯತೇ, ನ ವಿಶೇಷಮ್ ಅನುಭವತಿ ಯಥಾ ಸ ಏವ ಶೂಲೀ | ವಿಶೇಷಾನುಭವಶ್ಚ ಅವಿದ್ಯಾಯಾ ನಿವರ್ತಕಃ | ತತಃ, ತದರ್ಥಾ ಆವೃತ್ತಿಃ ಇತಿ ಚೇತ್ | ನ | ಅಸಕೃದಪಿ ತಾವನ್ಮಾತ್ರೇ ಕ್ರಿಯಮಾಣೇ ವಿಶೇಷವಿಜ್ಞಾನೋತ್ಪತ್ತ್ಯಸಂಭವಾತ್ | ನ ಹಿ ಸಕೃತ್ಪ್ರಯುಕ್ತಾಭ್ಯಾಂ ಶಾಸ್ತ್ರಯುಕ್ತಿಭ್ಯಾಮ್ ಅನವಗತೋ ವಿಶೇಷಃ ಶತಕೃತ್ವೋऽಪಿ ಪ್ರಯುಜ್ಯಮಾನಾಭ್ಯಾಮ್ ಅವಗಂತುಂ ಶಕ್ಯತೇ ||　ಸೂ.ಭಾ. ೪-೧-೨, ಭಾ. ಭಾ. ೫೦೫.

---

ಆವರ್ತಿ ಮಾಡುತ್ತಿದ್ದರೂ ಸಹ (ಆ ಜ್ಞಾನವನ್ನುಂಟು) ಮಾಡುತ್ತದೆ ಎಂಬುದರ ಬಗ್ಗೆ ನಂಬಿಕೆ ಏನು? ಇಲ್ಲಿ ನೀವು ಹೀಗೆನ್ನಬಹುದು, ಬರೀ ವಾಕ್ಯವು ಯಾವ ಅರ್ಥವನ್ನು ಉಂಟುಮಾಡಿಕೊಡುವುದಕ್ಕೆ ಸಮರ್ಥವಲ್ಲವೇ ಅಲ್ಲ. ಆದ್ದರಿಂದ ಯುಕ್ತಿಯನ್ನಪೇಕ್ಷಿಸಿಕೊಂಡು ವಾಕ್ಯವು ಬ್ರಹ್ಮಾತ್ಮತ್ವವನ್ನು ಅನುಭವಕ್ಕೆ ತಂದುಕೊಡಬಹುದಲ್ಲಾ? ಎಂದರೆ ಆಗಲೂ ಸಹ ಆವೃತ್ತಿ ಮಾಡುವುದು ವ್ಯರ್ಥವೇ ಸರಿ. ಏಕೆಂದರೆ ಆ ಯುಕ್ತಿಯೂ ಸಹ ಒಂದು ಸಲ ಸರಿಯಾಗಿ ಹೊರಟಿದ್ದಾದರೆ ಆಗ ಅದು ತನ್ನ ಅರ್ಥವನ್ನು ತಂದು ಕೊಟ್ಟೇ ತೀರುತ್ತದೆ. ಇನ್ನು ಯುಕ್ತಿಯಿಂದಲೂ ವಾಕ್ಯದಿಂದಲೂ ಸಾಮಾನ್ಯರೂಪವಾದ ಅರಿವುಂಟಾಗುತ್ತದೆ, ವಿಶೇಷ ಜ್ಞಾನವಾಗುವುದಿಲ್ಲ. ಹೇಗೆಂದರೆ, "ನನಗೆ ಎದೆ ನೋವಿದೆ" ಎಂಬ (ಒಬ್ಬರ) ವಾಕ್ಯದಿಂದಲೂ ಮೈ ನಡಗುವುದು ಮುಂತಾದ ಗುರಿತಿನಿಂದಲೂ ಸಹ ನೋವಿದೆ ಎಂಬುದನ್ನು, – " ಆತನೇ ನೋವುಳ್ಳವನು" ಎಂದು ಸಾಮಾನ್ಯವಾಗಿ ಮತ್ತೊಬ್ಬನು ಅರಿಯುತ್ತಾನೋ (ಆತನಿಗೆ) ವಿಶೇಷಾನುಭವವೇನೂ ಆಗುವುದಿಲ್ಲವೋ ಅದರಂತೆ ಇದು. ಆದರೆ ವಿಶೇಷಾನುಭವವೇ ಅವಿದ್ಯೆಯನ್ನು ಕಳೆದು ಹಾಕುವಂಥದ್ದು. ಆದ್ದರಿಂದ ಅದಕ್ಕಾಗಿ ಆವೃತ್ತಿಯನ್ನು ಮಾಡಬೇಕೆಂದು ಆಗುತ್ತದೆಯಲ್ಲಾ? ಎಂದರೆ ಅದು ಸರಿಯಲ್ಲ, ಏಕೆಂದರೆ ಅನೇಕ ಸಲವಾಗಿಯಾದರೂ ಕೇವಲ ವಾಕ್ಯಾರ್ಥವಷ್ಟನ್ನೇ ಆವೃತ್ತಿ ಮಾಡುತ್ತಿದ್ದರೂ ಅದರಿಂದ ವಿಶೇಷ ವಿಜ್ಞಾನೋತ್ಪತ್ತಿಯಾಗುವುದೆಂಬುದು ಹೊಂದುವುದಿಲ್ಲ. ಒಂದು ಸಲ ಉಪಯೋಗಿಸಿದ್ದಾದ ಶಾಸ್ತ್ರಯುಕ್ತಿಗಳಿಂದ ವಿಶೇಷವು ಗೊತ್ತಾಗದೇ ಇರುವಾಗ ಅದನ್ನೇ (ಅಷ್ಟನ್ನೇ) ನೂರು ಸಲ ಉಪಯೋಗ ಮಾಡಿದರೂ ಸಹ

ಅತ್ರಾನೂದಿತಾ ಏಕದೇಶಿಪ್ರಸ್ಥಾನಭೇದಾಸ್ತ್ವಿಮೇ (ಅ) ತತ್ತ್ವಮಸ್ಯಾದಿವಾಕ್ಯ-ಶ್ರವಣಾವೃತ್ತ್ಯಾ ಬ್ರಹ್ಮಾತ್ಮತ್ವಜ್ಞಾನಮುತ್ಪದ್ಯತೇ, (ಆ) ವಾಕ್ಯಶ್ರವಣಯುಕ್ತ್ಯೋಃ ಸಮುಚ್ಚಿತಯೋರಾವೃತ್ತ್ಯಾ ಸಾಕ್ಷಾತ್ಕಾರಲಕ್ಷಣಂ ಜ್ಞಾನಮುತ್ಪದ್ಯತೇ, (ಇ) ಯುಕ್ತಿಸಹಿತವಾಕ್ಯಶ್ರವಣಯುಕ್ತ್ಯನುಸಂಧಾನಸಹಿತಂ ಜ್ಞಾನಂ ಪರೋಕ್ಷಮ್, ತದಾವೃತ್ತ್ಯಾ ಚ ವಿಶೇಷಾನುಭವಲಕ್ಷಣಮ್ ಅಪರೋಕ್ಷಜ್ಞಾನಮ್ ಇತಿ ಚ | ಅತ್ರ ಪ್ರಥಮತೃತೀಯಪಕ್ಷೌ ನೈಷ್ಕರ್ಮ್ಯಸಿದ್ಧಾವಪಿ ಪ್ರಕಾರಾಂತರೇಣ ಅನುದಿತೌ ದೂಷಿತೌ ಚ | ತದ್ಯಥಾ -

> (೧) ಏವಮುಪಸಂಹೃತೇ ಕೇಚಿತ್ ಸ್ವಸಂಪ್ರದಾಯಬಲಾವಷ್ಟಂಭಾದಾಹುಃ - ಯದೇತದ್ ವೇದಾಂತವಾಕ್ಯಾತ್ ಅಹಂ ಬ್ರಹ್ಮೇತಿ ವಿಜ್ಞಾನಂ ಸಮುತ್ಪದ್ಯತೇ, ತನ್ನೈವ ಸ್ವೋತ್ಪತ್ತಿಮಾತ್ರೇಣ ಅಜ್ಞಾನಂ ನಿರಸ್ಯತಿ, ಕಿಂ ತರ್ಹಿ, ಅಹನ್ಯಹನಿ ದ್ರಾಘೀಯಸಾ ಕಾಲೇನ ಉಪಾಸೀನಸ್ಯ ಸತಃ, ಭಾವನೋಪಚಯಾತ್ ನಿಃಶೇಷ-ಮಜ್ಞಾನಮಪಗಚ್ಛತಿ | "ದೇವೋ ಭೂತ್ವಾ ದೇವಾನಪ್ಯೇತಿ" ಇತಿ ಶ್ರುತೇಃ||
>
> ನೈ.ಸಿ. ೧-೬೭,

---

ತಿಳಿದುಕೊಳ್ಳುವುದಕ್ಕಾಗುವುದಿಲ್ಲ (ಸೂ.ಭಾ. ೪-೧-೨)

ಈ ಸ್ಥಳದಲ್ಲಿ ಅನುವಾದಮಾಡಿಕೊಂಡಿದ್ದಾದ ಏಕದೇಶಿ ಪ್ರಸ್ಥಾನಗಳು ಈ ಕೆಳಗಿನಂತಿವೆ. (ಅ) ತತ್ತ್ವಮಸಿಯೇ ಮುಂತಾದ ವಾಕ್ಯದ ಶ್ರವಣದ ಆವೃತ್ತಿಯಿಂದ ಬ್ರಹ್ಮಾತ್ಮಜ್ಞಾನವುಂಟಾಗುತ್ತದೆ. (ಆ) ವಾಕ್ಯಶ್ರವಣ ಮತ್ತು ಯುಕ್ತಿಗಳನ್ನು ಸೇರಿಸಿಕೊಂಡು ಆವೃತ್ತಿಮಾಡುವುದರಿಂದ ಸಾಕ್ಷಾತ್ಕಾರ ರೂಪವಾದ ಜ್ಞಾನವುಂಟಾಗುತ್ತದೆ. (ಇ) ಯುಕ್ತಿಯಿಂದೊಡಗೂಡಿದ ವಾಕ್ಯವನ್ನು ಶ್ರವಣ ಮಾಡುವುದರಿಂದಲೂ, ಮತ್ತು ಯುಕ್ತಿಯ ಅನುಸಂಧಾನ ಸಹಿತವಾಗಿ ಆಗುವ ಜ್ಞಾನವು ಪರೋಕ್ಷವಾಗಿಯೂ ಅದರ ಆವೃತ್ತಿಯಿಂದ ವಿಶೇಷಾನುಭವರೂಪವಾದ ಅಪರೋಕ್ಷಜ್ಞಾನವಾಗುವುದೆಂತಲೂ (ಹೇಳುತ್ತಿದ್ದರು). ಈ ಮೂರರಲ್ಲಿ ಮೊದಲನೆಯ ಮತ್ತು ಮೂರನೆಯದಾದ ಪಕ್ಷಗಳನ್ನು ನೈಷ್ಕರ್ಮ್ಯಸಿದ್ಧಿಯಲ್ಲೂ ಸಹ ಬೇರೊಂದು ಪ್ರಕಾರದಿಂದ ಅನುವಾದಮಾಡಿಕೊಂಡು ಖಂಡಿಸಿರುತ್ತದೆ. (೧) ಈ ರೀತಿಯಾಗಿ ಉಪಸಂಹಾರ ಮಾಡಲಾಗಿ ಕೆಲವರು ತಮ್ಮ ಸಂಪ್ರದಾಯವನ್ನು ಅವಲಂಬಿಸಿಕೊಂಡವರಾಗಿ ಹೇಳುವುದೇನೆಂದರೆ - ಯಾವ ಈ ವೇದಾನ್ತ ವಾಕ್ಯವಾದ "ಅಹಂ ಬ್ರಹ್ಮಾಸ್ಮಿ" ಎಂಬುದಾಗಿರುವ ವಾಕ್ಯದಿಂದ ಜ್ಞಾನವು

[ಅತ್ರ ಸಕೃದ್ ವಾಕ್ಯಶ್ರವಣೇನ ಜನಿತಂ ಜ್ಞಾನಮ್ ಅಜ್ಞಾನವಿನಾಶನೇ ಅಸಮರ್ಥಮ್ ಇತ್ಯುಕ್ತಮ್, ಶ್ರವಣಜನ್ಯವಾಕ್ಯಜ್ಞಾನಾಭ್ಯಾಸಸ್ವರೂಪಂ ತು ಭಾವನೋಪಚಯ-ಲಕ್ಷಣಮ್ ಇತಿ ಚ | ತದೇತದ್ ಭಾಷ್ಯೇ ನ ಸ್ಫುಟಿತಮ್ || ]

(೨) ಅಪರೇ ತು ಬ್ರುವತೇ - ವೇದಾಂತವಾಕ್ಯಜನಿತಮ್ "ಅಹಂ ಬ್ರಹ್ಮ" ಇತಿ ವಿಜ್ಞಾನಂ ಸಂಸರ್ಗಾತ್ಮಕತ್ವಾದ್ ಆತ್ಮವಸ್ತುಯಾಥಾತ್ಮ್ಯಾವಗಾಹ್ಯೇವ ನ ಭವತಿ, ಕಿಂ ತರ್ಹಿ, ಏತದೇವ ಗಂಗಾಸ್ರೋತೋವತ್ ಸತತಮ್ ಅಭ್ಯಸ್ಯತಃ, ಅನ್ಯದೇವ ಅವಾಕ್ಯಾರ್ಥಾತ್ಮಕಂ ವಿಜ್ಞಾನಾಂತರಮ್ ಉತ್ಪದ್ಯತೇ, ತದೇವ ಅಶೇಷಜ್ಞಾನ-ತಿಮಿರೋತ್ಸಾರಿ - ಇತಿ | "ವಿಜ್ಞಾಯ ಪ್ರಜ್ಞಾಂ ಕುರ್ವೀತ ಬ್ರಾಹ್ಮಣಃ" ಇತಿ ಶ್ರುತೇಃ ಇತಿ ||　　ನೈ.ಸಿ. ೧.೬೭, ಸಂಬಂಧೋಕ್ತಿಃ ||

---

ಉಂಟಾಗುತ್ತದೆಯೋ ಆ ಜ್ಞಾನವು ತಾನು ಹುಟ್ಟಿಕೊಂಡ ಮಾತ್ರದಿಂದ ಅಜ್ಞಾನವನ್ನು ಕಳೆದು ಹಾಕುವುದೇ ಇಲ್ಲ. ಮತ್ತೆ ಹೇಗೆಂದರೆ – ಪ್ರತಿನಿತ್ಯವೂ ಬಹಳ ಕಾಲದವರೆಗೆ ಉಪಾಸನೆಯನ್ನು ಮಾಡುತ್ತಿದ್ದವನಿಗೆ (ಆ) ಭಾವನೆಯು ಹೆಚ್ಚಲಾಗಿ ಅದರಿಂದ ಸಂಪೂರ್ಣವಾಗಿ ಅಜ್ಞಾನವು ತೊಲಗುತ್ತದೆ. "ದೇವೋ ಭೂತ್ವಾ ದೇವಾನಪ್ಯೇತಿ" ದೇವನೇ ಆಗಿ ದೇವತೆಯಲ್ಲಿ ಸೇರಿ ಹೋಗುತ್ತಾನೆಂದು ಶ್ರುತಿಯಿರುವುದರಿಂದ ಇದು ಗೊತ್ತಾಗುತ್ತದೆ. (ನೈ.ಸಿ. ೧–೬೭)

(ಈ ನೈಷ್ಕರ್ಮ್ಯಸಿದ್ಧಿಯಲ್ಲಿ ಕೇವಲ ವಾಕ್ಯ ಶ್ರವಣದಿಂದುಂಟಾದ ಜ್ಞಾನವು ಅಜ್ಞಾನವನ್ನು ನಾಶಮಾಡುವುದರಲ್ಲಿ ಅಸಮರ್ಥವೆಂದೂ ಶ್ರವಣದಿಂದುಂಟಾದ ವಾಕ್ಯಜ್ಞಾನಾಭ್ಯಾಸಸ್ವರೂಪವಾದರೋ ಭಾವನೋಪಚಯರೂಪವಾದದ್ದು (ಸಮರ್ಥವೆಂದು) ಸ್ಪಷ್ಟವಾಗಿ ಹೇಳಿದೆ. ಹೀಗೆ ಇದು ಭಾಷ್ಯದಲ್ಲಿ ಸ್ಪಷ್ಟವಾಗಿಲ್ಲ.)

(೨) ಇನ್ನು ಕೆಲವರು ಏನು ಹೇಳುತ್ತಾರೆಂದರೆ – ವೇದಾಂತ-ವಾಕ್ಯದಿಂದುಂಟಾದ "ಅಹಂ ಬ್ರಹ್ಮ" ನಾನು ಬ್ರಹ್ಮವಾಗಿದ್ದೇನೆ ಎಂಬ ಜ್ಞಾನವು ಸಂಸರ್ಗಾತ್ಮಕವಾದ್ದರಿಂದ ಆತ್ಮ ವಸ್ತುವಿನ ನಿಜ ಸ್ವರೂಪವು (ಮನಸ್ಸಿಗೆ) ಇಳಿದುಕೊಳ್ಳುವುದೇ ಇಲ್ಲ. ಮತ್ತೆ ಹೇಗೆಂದರೆ – ಇದೇ ಜ್ಞಾನವನ್ನೇ ಗಂಗಾಪ್ರವಾಹದಂತೆ ನಿರಂತರ ಅಭ್ಯಾಸವನ್ನು ಮಾಡುತ್ತಿದ್ದರೆ ಅದೇ ಸಂಪೂರ್ಣವಾಗಿ ಅಜ್ಞಾನವೆಂಬ ಪೊರೆಯನ್ನು ನಾಶ ಮಾಡುವಂಥದ್ದಾಗಿ-ರುತ್ತದೆ. ಇದನ್ನೇ "ವಿಜ್ಞಾಯ ಪ್ರಜ್ಞಾಂ ಕುರ್ವೀತ" ತಿಳಿದುಕೊಂಡು

[ಅತ್ರ ಭಾಷ್ಯೋಕ್ತತೃತೀಯಃ ಪಕ್ಷೋ ವಿಶದೀಕೃತಃ | ಪ್ರಥಮಂ ಜ್ಞಾನಂ ಪರೋಕ್ಷಮಾತ್ರಮ್ | ಕುತಃ ? ಸಂಸರ್ಗಾತ್ಮಕತ್ವಾತ್ - ಇತಿ | ಸ ಏಷ ಹೇತುರ್ಭಾಷ್ಯೇ ಸ್ಪಷ್ಟತಯಾ ನೋಕ್ತಃ | ಆವೃತ್ತಿಜನ್ಯಂ ಜ್ಞಾನಮ್ ಅಪರೋಕ್ಷಮ್, ತಚ್ಚ ಶ್ರವಣಮಾತ್ರಜನ್ಯಜ್ಞಾನಾದನ್ಯದೇವ - ಇತಿ ತು ಸಮಾನಮುಭಯತ್ರಾಪಿ | ಭಾಷ್ಯೇ ಯುಕ್ತಿಸಹಿತಜ್ಞಾನಾವೃತ್ತಿಲಕ್ಷಣಂ ಪ್ರಸಂಖ್ಯಾನಶಬ್ದವಾಚ್ಯಮ್ ಅಪರೋಕ್ಷಜ್ಞಾನ-ಕಾರಣಮಿತಿ ಮತಮಪಿ ಪೂರ್ವಪಕ್ಷಸಂಮತತ್ವೇನಾನೂದಿತಮ್ | ತತ್ತು ಸಿದ್ಧೌ ತೃತೀಯಾಧ್ಯಾಯೇ ಪೃಥಗೇವಾನೂದ್ಯ ಖಂಡಿತಮ್ ಇತಿ ವಿಶೇಷಃ || ]

(೫) ಕೇಚಿತ್ ಪುನಃ ಪೂರ್ವಾಣಿ ಪೂರ್ವಪಕ್ಷಸೂತ್ರಾಣಿ ಭವಂತಿ, ಉತ್ತರಾಣಿ ಸಿದ್ಧಾಂತಸೂತ್ರಾಣಿ ಇತ್ಯೇತಾಂ - ವ್ಯವಸ್ಥಾಮ್ ಅನುರುಧ್ಯಮಾನಾಃ ಪರವಿಷಯಾ ಏವ ಗತಿಶ್ರುತೀಃ ಪ್ರತಿಷ್ಠಾಪಯಂತಿ || ಸೂ.ಭಾ. ೪-೩-೧೪,

---

ಪ್ರಜ್ಞೆಯನ್ನು ಮಾಡಿಕೊಳ್ಳಬೇಕು ಎಂದು ಶ್ರುತಿಯು ಹೇಳುತ್ತದೆ (ನೈ.ಸಿ. ೧-೬೭ರ ಸಂಬಂಧದಲ್ಲಿದೆ)

ಇಲ್ಲಿ ಭಾಷ್ಯದಲ್ಲಿ ಹೇಳಿದ ಮೂರನೇ ಪಕ್ಷವನ್ನು ಸ್ಪಷ್ಟಪಡಿಸಿದೆ. ಮೊದಲನೆಯ ಜ್ಞಾನವು ಪರೋಕ್ಷಮಾತ್ರವಾಗಿದೆ. ಏಕೆಂದರೆ ಅದು ಸಂಸರ್ಗಾತ್ಮಕವಾಗಿರುತ್ತದೆ. ಈ ಕಾರಣವನ್ನು ಭಾಷ್ಯದಲ್ಲಿ ಸ್ಪಷ್ಟವಾಗಿ ಹೇಳಿಲ್ಲ. ಆವೃತ್ತಿಯಿಂದುಂಟಾದ ಜ್ಞಾನವು ಅಪರೋಕ್ಷವಾದದ್ದು, ಅದು ಶ್ರವಣಮಾತ್ರದಿಂದುಂಟಾದ ಜ್ಞಾನಕ್ಕಿಂತ ಬೇರೆಯದೇ ಆಗಿರುತ್ತದೆ ಎಂಬ ವಿಷಯದಲ್ಲಿ ಇಬ್ಬರಿಗೂ ಸಮಾನವಾಗಿದೆ. ಭಾಷ್ಯದಲ್ಲಿ ಯುಕ್ತಿಸಹಿತವಾದ ಜ್ಞಾನಾವೃತ್ತಿ ರೂಪವಾದ ಪ್ರಸಂಖ್ಯಾನವೆಂಬ ಶಬ್ದದಿಂದ ಕರೆದದ್ದು ಅದು ಅಪರೋಕ್ಷ ಜ್ಞಾನಕ್ಕೆ ಕಾರಣವಾದದ್ದು ಎಂಬ ಕಾರಣದಿಂದ ಈ ಮತವನ್ನೂ ಕೂಡ ಪೂರ್ವಪಕ್ಷಿಗೆ ಒಪ್ಪಿಗೆಯಾದದ್ದೆಂದು ಅನುವಾದ ಮಾಡಿಕೊಂಡಿದೆ. ಅದನ್ನು ನೈ. ಸಿದ್ಧಿಯ ಮೂರನೇ ಅಧ್ಯಾಯದಲ್ಲಿ ಬೇರೆಯಾಗಿಯೇ ಅನುವಾದ ಮಾಡಿಕೊಂಡು ಖಂಡಿಸಿರುತ್ತದೆ.

(೫) ಕೆಲವರಾದರೋ ಮೊದಲನೆಯ ಸೂತ್ರಗಳು ಪೂರ್ವಪಕ್ಷವಾಗಿರುತ್ತವೆ, ಮುಂದಿನದು ಸಿದ್ಧಾಂತ ಸೂತ್ರವಾಗಿರುತ್ತದೆ ಎಂಬ ನಿಯಮವನ್ನನುಸರಿಸುತ್ತಾ ಗತಿಶ್ರುತಿಗಳೂ ಸಹ ಪರವಿದ್ಯೆಗೇ ವಿಷಯುವಾದವುಗಳು ಎಂದು ನೆಲೆನಿಲ್ಲಿಸಿರುತ್ತಾರೆ (ಸೂ.ಭಾ ೪-೩-೧೪). ಈ ಮತವಾದರೋ

ಇದಂ ತು ನಿರ್ವಿಶೇಷಂ ಬ್ರಹ್ಮಾನಭ್ಯುಪಗಚ್ಛತಾಮುಪಾಸನೇನೈವ ಬ್ರಹ್ಮಪ್ರಾಪ್ತಿಂ ವದತಾಂ ಮತಮ್ ||

(೬) ಯದಪ್ಯಾಹುಃ - ಆಕಾರವಾದಿನ್ಯೋಽಪಿ ಶ್ರುತಯಃ ಪ್ರಪಂಚಪ್ರವಿಲಯ-ಮುಖೇನ ಅನಾಕಾರಪ್ರತಿಪತ್ತ್ಯರ್ಥಾ ಏವ ನ ಪೃಥಗರ್ಥಾ ಇತಿ, ತದಪಿ ನ ಸಮೀಚೀನಮಿವ ಲಕ್ಷ್ಯತೇ|| ಸೂ.ಭಾ. ೩-೨-೨೧,

ಅತ್ರ ಉಪಾಸನಾಧಿಕಾರೇ ಶ್ರುತಾನಾಮಪಿ ಬ್ರಹ್ಮಧರ್ಮಾಣಾಂ ಅನಾಕಾರ-ಬ್ರಹ್ಮಬೋಧನಾರ್ಥತ್ವಮೇವ ಭೇದಪ್ರವಿಲಯನದ್ವಾರಾ - ಇತಿ ವದತಾಂ ವಿದ್ಯಮಾನಸ್ಯೈವ ಪ್ರಪಂಚಸ್ಯ ಭಾವನಯಾ ಪ್ರವಿಲಯಂ ಶಾಸ್ತ್ರಚೋದಿತತ್ವೇನ ಸ್ವೀಕುರ್ವತಾಮ್ ಅದ್ವೈತವಾದಿನಾಂ ಮತಮ್ ಅನೂದಿತಮ್ ||

(೭) ತತ್ರ ಭಾಗವತಾ ಮನ್ಯಂತೇ ಭಗವಾನೇವೈಕೋ ವಾಸುದೇವೋ ನಿರಂಜನಜ್ಞಾನಸ್ವರೂಪಃ ಪರಮಾರ್ಥತತ್ತ್ವಮ್, ಸ ಚತುರ್ಧಾ ಆತ್ಮಾನಂ

---

ನಿರ್ವಿಶೇಷವಾದ ಬ್ರಹ್ಮವನ್ನು ಒಪ್ಪದೇಇದ್ದವರಾದ ಉಪಾಸನೆಯಿಂದಲೇ ಬ್ರಹ್ಮಪ್ರಾಪ್ತಿಯಾಗುತ್ತದೆ ಎಂದು ಹೇಳುವವರ ಮತವು.

(೬) ಇನ್ನೂ ಕೆಲವರು ಹೇಳುವುದೇನೆಂದರೆ – ಆ ಬ್ರಹ್ಮಕ್ಕೆ ಆಕಾರವನ್ನು ಹೇಳುವ ಶ್ರುತಿಗಳು ಏನಿವೆ, ಅವೂ ಸಹ (ಬ್ರಹ್ಮವು) ಪ್ರಪಂಚವನ್ನು ಕರಗಿಸಿಕೊಳ್ಳುವುದರ ಮೂಲಕ ಅನಾಕಾರವಾದದ್ದಾಗಿದೆ ಎಂಬುದನ್ನು ತಿಳಿಸುವುದಕ್ಕಾಗಿ ಬಂದಿದೆಯೇ ಹೊರತು ಅವಕ್ಕೆ ಬೇರೆ ಅರ್ಥವಿರುವುದಿಲ್ಲ ಎಂದು ಹೇಳುತ್ತಾರಲ್ಲ ? ಅದೂ ಕೂಡ ಸರಿಯಾದದ್ದಲ್ಲ. (ಸೂ. ಭಾ ೩–೨–೨೧) ಇಲ್ಲಿ ಉಪಾಸನಾಪ್ರಕರಣದಲ್ಲಿ ಕೇಳಿಬಂದದ್ದಾದ ಬ್ರಹ್ಮದ ಧರ್ಮಗಳು ಏನಿವೆ, ಅವೂ ಕೂಡ ಭೇದವನ್ನು ಕರಗಿಸುವ ಮೂಲಕ ಬ್ರಹ್ಮಕ್ಕೆ ಆಕಾರವಿಲ್ಲ ಎಂಬುದನ್ನು ತಿಳಿಸುವುದಕ್ಕಾಗಿಯೇ, ಇರುವ ಪ್ರಪಂಚವನ್ನೇ ಭಾವನೆಯಿಂದ ಕರಗಿಸಿಕೊಳ್ಳಬೇಕೆಂಬುದು ಶಾಸ್ತ್ರದಲ್ಲಿ ಹೇಳಿದ್ದೆಂದು ಸ್ವೀಕರಿಸುವವರಾದ ಅದ್ವೈತವಾದಿಗಳ ಮತವನ್ನು ಅನುವಾದ ಮಾಡಿಕೊಂಡಿದೆ.

(೭) ಇಲ್ಲಿ ಭಾಗವತರು (ಈ ರೀತಿ) ತಿಳಿದಿರುತ್ತಾರೆ – ಭಗವಂತನೊಬ್ಬನೇ, ವಾಸುದೇವನೂ, ನಿರಂಜನನೂ ಜ್ಞಾನಸ್ವರೂಪನೂ, ಪರಮಾರ್ಥವಾಗಿರತಕ್ಕವನು. ಆತನು ತನ್ನನ್ನೇ ನಾಲ್ಕು ಪ್ರಕಾರವಾಗಿ

ಪ್ರವಿಭಜ್ಯ ಪ್ರತಿಷ್ಠಿತಃ, ವಾಸುದೇವವ್ಯೂಹರೂಪೇಣ, ಸಂಕರ್ಷಣ-ವ್ಯೂಹರೂಪೇಣ, ಪ್ರದ್ಯುಮ್ನವ್ಯೂಹರೂಪೇಣ, ಅನಿರುದ್ಧವ್ಯೂಹರೂಪೇಣ, ಚ| ವಾಸುದೇವೋ ನಾಮ ಪರಮಾತ್ಮಾ ಉಚ್ಯತೇ, ಸಂಕರ್ಷಣೋ ನಾಮ ಜೀವಃ, ಪ್ರದ್ಯುಮ್ನೋ ನಾಮ ಮನಃ, ಅನಿರುದ್ಧೋ ನಾಮ ಅಹಂಕಾರಃ | ತೇಷಾಂ ವಾಸುದೇವಃ ಪರಾ ಪ್ರಕೃತಿಃ, ಇತರೇ ಸಂಕರ್ಷಣಾದಯಃ ಕಾರ್ಯಮ್ | ತಮ್ ಇತ್ಥಂಭೂತಂ ಪರಮೇಶ್ವರಂ ಭಗವಂತಮ್ ಅಭಿಗಮನೋಪಾದಾನೇಜ್ಯಾ-ಸ್ವಾಧ್ಯಾಯಯೋಗೈಃ ವರ್ಷಶತಮ್ ಇಷ್ಟ್ವಾ ಕ್ಷೀಣಕ್ಲೇಶೋ ಭಗವಂತಮೇವ ಪ್ರತಿಪದ್ಯತ ಇತಿ || ಸೂ.ಭಾ. ೨-೨-೪೨,

ಅತ್ರಾನೂದಿತಾ ಭಾಗವತಾಃ, ಮುಕ್ತೌ ಜೀವಬ್ರಹ್ಮಣೋರಭೇದಂ ಸ್ವೀಕುರ್ವಾಣಾಃ | ಬ್ರಹ್ಮಣ ಉತ್ಪನ್ನೋ ಜೀವಃ, ಉಪಾಸನೇನ ಭಗವತ್ಸ್ವರೂಪ-ತ್ವಮೇವ ಪ್ರತಿಪತ್ಸ್ಯತ ಇತಿ ಬ್ರುವಾಣಾಃ | ಏತೇಷಾಂ ಮತಮ್ **ಗೀತಾಭಾಷ್ಯೇಽಪಿ** ಅನೂದಿತಮ್ -

---

ಒಡೆದುಕೊಂಡು ಇದ್ದುಕೊಂಡಿದ್ದಾನೆ. ವಾಸುದೇವನ ವ್ಯೂಹರೂಪದಿಂದಲೂ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧವ್ಯೂಹರೂಪದಿಂದಲೂ ಇರುತ್ತಾನೆ. ವಾಸುದೇವನೆಂದರೆ ಪರಮಾತ್ಮನೆಂತಲೂ ಸಂಕರ್ಷಣನೆಂದರೆ ಜೀವನೆಂತಲೂ, ಪ್ರದ್ಯುಮ್ನನೆಂದರೆ ಮನಸ್ಸೆಂತಲೂ, ಅನಿರುದ್ಧನೆಂದರೆ ಅಹಂಕಾರವೆಂತಲೂ ಹೇಳಲಾಗಿದೆ. ಅವರಿಗೆಲ್ಲರಿಗೂ ವಾಸುದೇವನೇ ಹೆಚ್ಚಿನ ಕಾರಣನು. ಉಳಿದ ಸಂಕರ್ಷಣಾದಿಗಳು (ಅವನ) ಕಾರ್ಯರಾಗಿರುತ್ತಾರೆ. ಹೀಗಿರುವ ಆ ಪರಮೇಶ್ವರನಾದ ಭಗವಂತನನ್ನು ಅಭಿಗಮನ, ಉಪಾದಾನ, ಇಜ್ಯಾ, ಸ್ವಾಧ್ಯಾಯ, ಯೋಗಗಳಿಂದ ನೂರು ವರ್ಷಗಳವರೆಗೂ ಪೂಜಿಸಿ ಕ್ಲೇಶಗಳನ್ನು ಕಳೆದುಕೊಂಡು ಭಗವಂತನನ್ನೇ ಸೇರುತ್ತಾನೆ. (ಸೂ.ಭಾ. ೨-೨-೪೨).

ಇಲ್ಲಿ ಪರಾಮೃಷ್ಟರಾದ ಭಾಗವತರು, ಮುಕ್ತಿಯಲ್ಲಿ ಜೀವಬ್ರಹ್ಮರುಗಳಿಗೆ ಅಭೇದವನ್ನು ಸ್ವೀಕರಿಸುವವರು, ಬ್ರಹ್ಮನಿಂದುಂಟಾದ ಜೀವನು ಉಪಾಸನೆ-ಯಿಂದ ಭಗವಂತನ ಸ್ವರೂಪವನ್ನೇ ಪಡೆಯುತ್ತಾನೆ ಎಂದು ಹೇಳುವವರಿವರು. ಇವರ ಮತವನ್ನು ಗೀತಾಭಾಷ್ಯದಲ್ಲೂ ಅನುವಾದಮಾಡಿಕೊಂಡಿದೆ.

(ಅ) ಈ ಒಂದು ಪಾಂಡಿತ್ಯವೂ ಸಹ ಕೆಲವರದ್ದಾಗಿರಲಿ, ಏನೆಂದರೆ ಕ್ಷೇತ್ರಜ್ಞನು ಈಶ್ವರನೇ, ಕ್ಷೇತ್ರವಾದರೋ ಅವನಿಗಿಂತ ಬೇರೆಯಾಗಿದ್ದು

(ಅ) "ಇದಂ ಚಾನ್ಯತ್ ಪಾಂಡಿತ್ಯಂ ಕೇಷಾಂಚಿದಸ್ತು | ಕ್ಷೇತ್ರಜ್ಞ ಈಶ್ವರ ಏವ, ಕ್ಷೇತ್ರಂ ಚಾನ್ಯತ್ ಕ್ಷೇತ್ರಜ್ಞಸ್ಯೈವ ವಿಷಯಃ | ಅಹಂ ತು ಸಂಸಾರೀ ಸುಖೀ ದುಃಖೀ ಚ | ಸಂಸಾರೋಪರಮಶ್ಚ ಮಮ ಕರ್ತವ್ಯಃ ಕ್ಷೇತ್ರಕ್ಷೇತ್ರಜ್ಞವಿಜ್ಞಾನೇನ, ಧ್ಯಾನೇನ ಚೇಶ್ವರಂ ಕ್ಷೇತ್ರಜ್ಞಂ ಸಾಕ್ಷಾತ್ ಕೃತ್ವಾ ತತ್ಸ್ವರೂಪಾವಸ್ಥಾನೇನ - ಇತಿ ||"

ಗೀ.ಭಾ. ೧೩-೨, ಭಾ.ಭಾ. ೭೬೯

ಯದ್ಯಪೀದಾನೀಂ ರಾಮಾನುಜೀಯಾಃ ಆನಂದತೀರ್ಥೀಯಾಶ್ಚ ಪ್ರಾಹುಃ "ವಯಂ ಪಾಂಚರಾತ್ರಾನುಸಾರಿಣೋ ಭಾಗವತಾ ಏವ" ಇತಿ, ತಥಾಪಿ ಭಗವತ್ಪಾದಭಾಷ್ಯ-ಪ್ರಕಟನಕಾಲೇ ಯೇ ಭಾಗವತತ್ವೇನ ಪ್ರಸಿದ್ಧಾಃ, ತೇ ಅದ್ವೈತಿನ ಏವೇತಿ ಗಮ್ಯತೇ | ಯಥೋದಾಹೃತಸೂತ್ರಭಾಷ್ಯಗೀತಾಭಾಷ್ಯಯೋರ್ವಾಕ್ಯೌ ಜೀವಸ್ಯ ಬ್ರಹ್ಮಭಾವಾಪತ್ತಿಕಥನಾತ್ | ಅಪಿ ಚ "ಭಗವಾನೇವೈಕೋ ವಾಸುದೇವೋ ನಿರಂಜನಜ್ಞಾನಸ್ವರೂಪಃ ಪರಮಾರ್ಥ-ತತ್ತ್ವಮ್" (ಸೂ.ಭಾ.), "ನ ಚ

---

ಕ್ಷೇತ್ರಜ್ಞನಿಗೇ ವಿಷಯವಾಗಿದೆ. ನಾನು ಮಾತ್ರ ಸಂಸಾರಿಯಾಗಿದ್ದು, ಸುಖಿ ದುಃಖಿಯಾಗಿರುವೆನು. ನನ್ನ ಸಂಸಾರವನ್ನು ಅಡಗಿಸಿಕೊಳ್ಳಬೇಕು, ಕ್ಷೇತ್ರ-ಕ್ಷೇತ್ರಜ್ಞರ ತಿಳುವಳಿಕೆಯಿಂದಲೂ, ಈಶ್ವರನಾದ ಕ್ಷೇತ್ರಜ್ಞನನ್ನು ಧ್ಯಾನವನ್ನು ಮಾಡುವುದರ ಮೂಲಕ ಆತನ ಸ್ವರೂಪವನ್ನು ಸಾಕ್ಷಾತ್ಕರಿಸಿ ಆತನ ಸ್ವರೂಪದಲ್ಲೇ ನೆಲೆನಿಲ್ಲುವುದರ ಮೂಲಕ ಸಂಸಾರವನ್ನು ಅಡಗಿಸಿಕೊಳ್ಳಬೇಕು, (ಗೀ.ಭಾ ೧೩-೨)

ಈಗಿನ ರಾಮಾನುಜ ಪಂಥದವರೂ ಮತ್ತು ಮಾಧ್ವರು ನಾವು ಪಾಂಚ-ರಾತ್ರಾನುಸಾರಿಗಳಾದ ಭಾಗವತರೇ, ಎಂದು ಹೇಳುವವರಾದರೂ ಭಗವತ್ಪಾದರ ಭಾಷ್ಯಪ್ರಕಟನಕಾಲದಲ್ಲಿ ಭಾಗವತರು ಎಂದು ಯಾರು ಪ್ರಸಿದ್ಧರಾಗಿದ್ದರೋ ಅವರು ಅದ್ವೈತಿಗಳೇ ಎಂದು ಗೊತ್ತಾಗುತ್ತದೆ. ಮೇಲೆ ಉದಾಹರಿಸಿದ್ದಾದ ಸೂತ್ರಭಾಷ್ಯ ಗೀತಾಭಾಷ್ಯಗಳಲ್ಲಿ (ಆ ವಾದಿಗಳು) ಜೀವನಿಗೆ ಬ್ರಹ್ಮಭಾವವನ್ನು ಒಪ್ಪಿರುವವರಾಗಿರುತ್ತಾರೆ. ಅಷ್ಟೇ ಅಲ್ಲದೆ "ಭಗವಂತನಾದ ವಾಸುದೇವನೊಬ್ಬನೇ ನಿರಂಜನವಾದ ಜ್ಞಾನಸ್ವರೂಪನೂ ಪರಮಾರ್ಥ ತತ್ವರೂಪನು". (ಸೂ. ಭಾ.II)

"ಪಾಂಚರಾತ್ರ ಸಿದ್ಧಾಂತಿಗಳು ವಾಸುದೇವನೇ ಮೊದಲಾದವರಾದ

ಪಂಚರಾತ್ರಸಿದ್ಧಾಂತಿಭಿಃ, ವಾಸುದೇವಾದಿಷು ಏಕೈಕಸ್ಮಿನ್ ಸರ್ವೇಷು ವಾ ಜ್ಞಾನೈಶ್ವರ್ಯಾದಿತಾರತಮ್ಯಕೃತಃ ಕಶ್ಚಿದ್ ಭೇದೋಽಭ್ಯುಪಗಮ್ಯತೇ, ವಾಸುದೇವಾ ಏವ ಹಿ ಸರ್ವೇ ವ್ಯೂಹಾ ನಿರ್ವಿಶೇಷಾ ಇಷ್ಯಂತೇ |" (ಸೂ.ಭಾ.) ಇತಿ ಚ ಭಗವತ ಏವೈಕಸ್ಯ ಪರಮಾರ್ಥತ್ವಂ ತಸ್ಯ ಚ ಪರಪ್ರಕೃತಿತ್ವಂ ಮನ್ಯಂತೇ ಸ್ಮ - ಇತಿ ಭಾಷ್ಯಕಾರ್ಯೈರ್ವರ್ಣಿತಾನಾಂ ನಿರ್ವಿಶೇಷಬ್ರಹ್ಮವಾದಿನಾಂ ವಿಶಿಷ್ಟಾದ್ವೈತ್ಯಾದಿ-ವೇದಾಂತಿಪಕ್ಷಪಾತಿತ್ವೇ ನ ಪ್ರಮಾಣಮಸ್ತಿ | ತಸ್ಮಾತ್, ದ್ವೈತವಿಶಿಷ್ಟಾದ್ವೈತಾದಿಭೇದೇನ ಪಂಚರಾತ್ರಮನುಸೃತ್ಯ ಸಿದ್ಧಾಂತಾಂತರಮೇವೇದಾನೀಂ ಸೂತ್ರಭಾಷ್ಯಪ್ರಕಾಶನಾದರ್ವಾಕ್ ಕೈಶ್ಚಿತ್ ಪ್ರಸ್ಥಾಪಿತಮ್ ಇತ್ಯುನ್ನೀಯತೇ ||

ಕಿಂಚಾನ್ಯತ್ - ಜೀವೋ ಬ್ರಹ್ಮಣಃ ಸಕಾಶಾದುತ್ಪನ್ನಃ, ಉಪಾಸನಾಬಲೇನ ಪುನರಪಿ ಬ್ರಹ್ಮಸಾಯುಜ್ಯಂ ಗಮಿಷ್ಯತೀತಿ ಯಥೈವ ಸೂತ್ರಭಾಷ್ಯೇ ಭಾಗವತಮತ-ಮನೂದಿತಮ್, ತಥೈವ ಜಾತಬ್ರಹ್ಮವಾದನಾಮ್ನಾ ಏತನ್ಮತಂ ಗೌಡಪಾದೈರಪ್ಯನೂದ್ಯ ದೂಷಿತಮುಪಲಭ್ಯತೇ -

---

ಒಬ್ಬಬ್ಬರಲ್ಲಾಗಲೀ, ಎಲ್ಲರಲ್ಲಾಗಲೀ ಜ್ಞಾನೈಶ್ವರ್ಯಾದಿಗಳಿಂದಾದ ವ್ಯತ್ಯಾಸದಿಂದಾದ ಭೇದವನ್ನು ಒಪ್ಪಿರುವುದಿಲ್ಲ. ಈ ಎಲ್ಲಾ ವ್ಯೂಹದವರೂ ಸಹ ನಿರ್ವಿಶೇಷರಾದ ವಾಸುದೇವರೇ ಆಗಿರುತ್ತಾರೆ" ಎಂದು ಹೇಳುತ್ತಾ ಭಗವಂತನೊಬ್ಬನೇ ಪರಮಾರ್ಥತತ್ವನೆಂತಲೂ ಆತನೇ ಹೆಚ್ಚಿನ ಕಾರಣವೆಂತಲೂ ತಿಳಿದಿದ್ದರು. ಆದ್ದರಿಂದ ಭಾಷ್ಯಕಾರರು ವರ್ಣಿಸಿದ್ದಾದ (ಭಾಗವತರಾದ) ನಿರ್ವಿಶೇಷಬ್ರಹ್ಮವಾದಿಗಳು ಯಾರಿದ್ದಾರೆ, ಅವರು ವಿಶಿಷ್ಟಾದ್ವೈತ ವೇದಾಂತಿ ಪಕ್ಷವನ್ನವಲಂಬಿಸಿಕೊಂಡವರೇ ಎಂದು ತಿಳಿಯುವುದಕ್ಕೆ ಯಾವ ಅಧಾರವಿಲ್ಲ. ಆದ್ದರಿಂದ ದ್ವೈತ, ವಿಶಿಷ್ಟಾದ್ವೈತವೇ ಮುಂತಾದ ಭೇದದಿಂದ ಪಾಂಚರಾತ್ರಾಗಮವನ್ನು ಅನುಸರಿಸಿ ಆಚಾರ್ಯರ ಭಾಷ್ಯವು ಬಂದನಂತರ ಯಾರೋ ಇತ್ತೀಚಿನ ಕೆಲವರು ಬೇರೆಯದಾದ ಸಿದ್ಧಾಂತವನ್ನೇ ತಂದಿರುತ್ತಾರೆಂದು ಊಹಿಸಬಹುದಾಗಿದೆ.

ಮತ್ತೂ ಏನಂದರೆ – ಜೀವನು ಬ್ರಹ್ಮದಿಂದ ಹುಟ್ಟಿರುತ್ತಾನೆ. ಮತ್ತೆ ಉಪಾಸನಾಬಲದಿಂದ ಬ್ರಹ್ಮಸಾಯುಜ್ಯವನ್ನು ಹೊಂದುತ್ತಾನೆ ಎಂಬ ವಿಚಾರವಾದ ಭಾಗವತ ಮತವನ್ನು ಹೇಗೆ ಸೂತ್ರಭಾಷ್ಯದಲ್ಲಿ ಅನುವಾದ

(ಆ) ಉಪಾಸನಾಶ್ರಿತೋ ಧರ್ಮೋ ಜಾತೇ ಬ್ರಹ್ಮಣಿ ವರ್ತತೇ |
ಪ್ರಾಗುತ್ಪತ್ತೇರಜಂ ಸರ್ವಂ ತೇನಾಸೌ ಕೃಪಣಃ ಸ್ಮೃತಃ ||   ಗೌ.ಕಾ. ೩-೧.

ಇತಿ | ವ್ಯಾಖ್ಯಾತಂ ಚೇದಂ ವಾಕ್ಯಂ ಭಾಷ್ಯಕಾರೈಃ -

"ಉಪಾಸನಾಶ್ರಿತಃ ಉಪಾಸನಾಮ್ ಆತ್ಮನೋ ಮೋಕ್ಷಸಾಧನತ್ವೇನ ಗತಃ, ಉಪಾಸಕೋಽಹಮ್, ಮಮೋಪಾಸ್ಯಂ ಬ್ರಹ್ಮ, ತದುಪಾಸನಂ ಕೃತ್ವಾ ಜಾತೇ ಬ್ರಹ್ಮಣಿ ಇದಾನೀಂ ವರ್ತಮಾನಃ, ಅಜಂ ಬ್ರಹ್ಮ ಶರೀರಪಾತಾದೂರ್ಧ್ವಂ ಪ್ರತಿಪತ್ಸ್ಯೇ | ಪ್ರಾಗುತ್ಪತ್ತೇಶ್ಚಾಜಮಿದಂ ಸರ್ವಮ್, ಅಹಂ ಚ | ಯದಾತ್ಮಕೋಽಹಂ ಪ್ರಾಗುತ್ಪತ್ತೇಃ, ಇದಾನೀಂ ಜಾತೋ, ಜಾತೇ ಬ್ರಹ್ಮಣಿ ಚ ವರ್ತಮಾನಃ, ಉಪಾಸನಯಾ ಪುನಸ್ತದೇವ ಪ್ರತಿಪತ್ಸ್ಯೇ" ಇತ್ಯೇವಮ್ ಉಪಾಸನಾಶ್ರಿತೋ ಧರ್ಮಃ ಸಾಧಕಃ, ಯೇನೈವಂ ಕ್ಷುದ್ರಬ್ರಹ್ಮವಿತ್, ತೇನಾಸೌ ಕಾರಣೇನ ಕೃಪಣಃ ದೀನಃ, ಅಲ್ಪಕಃ, ಸ್ಮೃತೋ ನಿತ್ಯಾಜಬ್ರಹ್ಮದರ್ಶಿಭಿಃ ಇತ್ಯಭಿಪ್ರಾಯಃ ||   ಗೌ.ಕಾ.ಭಾ, ೧೨೮.

---

ಮಾಡಿಕೊಂಡಿದೆಯೋ ಅದೇ ರೀತಿಯಾಗಿ "ಜಾತಬ್ರಹ್ಮವಾದ" ಎಂಬ ಹೆಸರಿನಿಂದ ಈ ಮತವನ್ನು ಗೌಡಪಾದರು ಅನುವಾದಮಾಡಿಕೊಂಡು ಖಂಡಿಸಿರುತ್ತಾರೆ.

ಭಾಷ್ಯಕಾರರು ಇದನ್ನು ಈ ರೀತಿಯಾಗಿ ವಿವರಿಸಿರುತ್ತಾರೆ -

ಆ. ಉಪಾಸನಾಶ್ರಿತನು ಎಂದರೆ ಉಪಾಸನೆಯು ತನಗೆ ಮೋಕ್ಷಕ್ಕೆ ಸಾಧನವು ಎಂದು ತಿಳಿದವನು, ನಾನು ಉಪಾಸಕನಾಗಿದ್ದೇನೆ. ಬ್ರಹ್ಮವು ನನಗೆ ಉಪಾಸ್ಯವಾಗಿದೆ, ಅದರ ಉಪಾಸನೆಯನ್ನು ಮಾಡಿ ಈಗ ಜಾತಬ್ರಹ್ಮದಲ್ಲಿದ್ದವನಾದ ನಾನು ಶರೀರವು ಬಿದ್ದುಹೋದಮೇಲೆ ಹುಟ್ಟಿಲ್ಲದ ಬ್ರಹ್ಮವನ್ನು ಸೇರುವೆನು. ಸೃಷ್ಟಿಗೆ ಮುಂಚೆ ಇದೆಲ್ಲವೂ ಮತ್ತು ನಾನೂ ಅಜಸ್ವರೂಪವೇ. ಹುಟ್ಟುವುದಕ್ಕೆ ಮುಂಚೆ ನಾನು ಯಾವ ರೂಪದವನಾಗಿದ್ದೆನೋ, ಈಗ ಹುಟ್ಟಿ ಜಾತಬ್ರಹ್ಮದಲ್ಲಿ ಇದ್ದವನಾಗಿ ಮತ್ತೆ ಉಪಾಸನೆಯಿಂದ ಅದನ್ನೇ ಪಡೆಯುವೆನು ಎಂದು ಉಪಾಸನೆಯನ್ನಾಶ್ರಯಿಸಿಕೊಂಡ ಧರ್ಮನು ಎಂದರೆ ಸಾಧಕನು (ತಿಳಿದಿರುತ್ತಾನೆ). ಆದ್ದರಿಂದ ಆತನು ಅಲ್ಪ ಬ್ರಹ್ಮವನ್ನರಿತವನು. ಅದರಿಂದಲೇ ಆತನು ದೀನನು ಕೃಪಣನು ಎಂದು, ಅಜಾತಬ್ರಹ್ಮವನ್ನರಿತವರಾದ ಜ್ಞಾನಿಗಳಿಂದ ಕರೆಸಿಕೊಂಡಿರುತ್ತಾನೆ"

ಇತಿ | ಬೃಹದಾರಣ್ಯಕಭಾಷ್ಯೇಽಪಿ ಏತನ್ಮತಮನೂದಿತಮಸ್ತಿ -

(೯) ತಸ್ಮಾತ್ "ಅಹಂ ಬ್ರಹ್ಮಾಸ್ಮಿ" ಇತಿ ನ ಗೃಹ್ಣೀಯಾತ್, ಪರಂ ಹಿ ದೇವಮೀಶಾನಂ ನಿಕೃಷ್ಟಃ ಸಂಸಾರೀ ಆತ್ಮತ್ವೇನ ಸ್ಮರನ್ ಕಥಂ ನ ದೋಷಭಾಕ್ ಸ್ಯಾತ್ ? ತಸ್ಮಾತ್, ನಾಹಂ ಬ್ರಹ್ಮಾಸ್ಮಿ - ಇತಿ ಯುಕ್ತಮ್ | ತಸ್ಮಾತ್ ಪುಷ್ಪೋದಕಾಂಜಲಿಸ್ತುತಿನಮಸ್ಕಾರಬಲ್ಯುಪಹಾರಸ್ವಾಧ್ಯಾಯಾಧ್ಯಯನಯೋಗಾದಿಭಿಃ ಆರಿರಾಧಯಿಷೇತ | ಆರಾಧನೇನ ಚ ವಿದಿತ್ವಾ ಸರ್ವೇಶಿತೃ ಬ್ರಹ್ಮ ಭವತಿ ||

ಬೃ.ಭಾ. ೨-೧-೨೦,

[ಅತ್ರಾಪಿ ಆರಾಧನೇನ ಬ್ರಹ್ಮಭಾವ ಏವ ಪ್ರಾಪ್ಯತ್ವೇನೋಕ್ತಃ || ]

ತಸ್ಮಾತ್, ತದಾನೀಂತನಾ ಭಾಗವತಾ ಔಡುಲೋಮಿಪಕ್ಷಮೇವ (ವೇ.ಸೂ. ೧-೪-೨೧) ಅನುಸೃತ್ಯ ಜೀವಃ ಸಾಧನಾನುಷ್ಠಾನೇನ ಭಗವತ್ಸಾಯುಜ್ಯಂ

---

(ಗೌ.ಕಾ. ೩-೧) ಬೃಹದಾರಣ್ಯಕಭಾಷ್ಯದಲ್ಲೂ ಈ ಮತವನ್ನು ಅನುವಾದ-ಮಾಡಿಕೊಂಡಿರುತ್ತದೆ.

(೯) ಆದ್ದರಿಂದ "ನಾನು ಬ್ರಹ್ಮವಾಗಿದ್ದೇನೆ" ಎಂದು ತಿಳಿಯಬಾರದು. ಪರದೇವನಾದ ಈಶ್ವರನನ್ನು ನಿಕೃಷ್ಟನಾದ ಸಂಸಾರಿಯು ತನ್ನ ಆತ್ಮನೆಂದು ಸ್ಮರಿಸಿದರೆ ಹೇಗೆ ತಾನೇ ದೋಷಕ್ಕೆ ಭಾಗಿಯಾಗದೇ ಇದ್ದಾನು ! ಆದ್ದರಿಂದ ನಾನು ಬ್ರಹ್ಮವಾಗಿದ್ದೇನೆಂದು (ತಿಳಿಯುವುದು) ಸರಿಯಲ್ಲ. ಆದ್ದರಿಂದ ಆತನನ್ನು ಹೂವು, ನೀರು, ಕೈ ಮುಗಿಯುವುದು, ಸ್ತೋತ್ರ, ನಮಸ್ಕಾರ, (ನೈವೇದ್ಯವನ್ನು) ಒಪ್ಪಿಸುವುದು, ಸ್ವಾಧ್ಯಾಯಾಧ್ಯಯನ, ಯೋಗಾನುಷ್ಠಾನಾದಿಗಳಿಂದ ಆರಾಧಿಸು-ವುದಕ್ಕೆ ಇಷ್ಟಪಡಬೇಕು. ಆರಾಧನೆಯಿಂದ ಆತನನ್ನು ತಿಳಿದು ಸರ್ವೇಶಿತೃವಾದ ಬ್ರಹ್ಮವಾಗುತ್ತಾನೆ. (ಬೃ. ಭಾ ೨-೧-೨೦)

(ಇಲ್ಲೂ ಕೂಡ ಆರಾಧನೆಯಿಂದ ಬ್ರಹ್ಮ ಭಾವವೆಂಬುದು ಪ್ರಾಪ್ಯವೆಂಬು-ದಾಗಿ ಹೇಳಿರುತ್ತದೆ). ಆದ್ದರಿಂದ ಆ ಕಾಲದ ಭಾಗವತರು ಔಡುಲೋಮಿ-ಪಕ್ಷವನ್ನೇ ಆಶ್ರಯಿಸಿದವರಾಗಿ ಜೀವನು ಸಾಧನಾನುಷ್ಠಾನದಿಂದ ಭಗವತ್ಸಾಯುಜ್ಯವನ್ನು ಹೊಂದುತ್ತಾನೆಂದು ಹಟವಿಡಿದು ಹೇಳುತ್ತಿದ್ದರೆಂದು ತೀರ್ಮಾನವಾಯಿತು.

ಗಚ್ಛತೀತ್ಯಾಸ್ಥಿತಾ ಇತಿ ಸ್ಥಿತಮ್||

**೫. ಉಪಸಂಹಾರಃ -** ತದೇವಮ್ ಅದ್ವೈತಮೇವ ವೇದಾಂತಸಿದ್ಧಾಂತ ಇತಿ ಸರ್ವಸಂಪ್ರತಿಮನ್ನಮಾಸೀತ್ ಶಂಕರಭಗವತ್ಪಾದೇಭ್ಯಃ ಪೂರ್ವಮಪಿ, ಅದ್ವೈತಿಮತಭೇದಾಸ್ತು ತೈಸ್ತೈರಾದೃತಪ್ರಕ್ರಿಯಾಭೇದಾದ್ ಬಹುಧಾ ಭಿನ್ನಾ[೧] ಆಸನ್ ಬಹೋಃ ಕಾಲಾದಪಿ | ಶ್ರೀಶಂಕರಭಗವತ್ಪಾದಮತಂ ಪುನಃ ಪ್ರಕ್ರಿಯಾವಿಶೇಷಾವಲಂಬನಾದೇವ ವೇದಾಂತಪ್ರಸ್ಥಾನಾಂತರೇಭ್ಯೋ ವಿಲಕ್ಷಣಮ್ - ಇತಿ ಚ ಸಿದ್ಧಮ್ ||

ಇತಿಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರೇಣ್ಯಶ್ರೀಪೂಜ್ಯಪಾದಶ್ರೀಮಚ್ಛಂಕರಭಗವಚ್ಚರಣಸ್ಮರಣ-
ಪರಿಚಯಾವಾಪ್ತವೇದಾಂತಪ್ರವೇಶೇನ ಶ್ರೀ ಬೋಧಾನಂದೇಂದ್ರಸರಸ್ವತೀಶಿಷ್ಯಸಚ್ಚಿದಾನಂದೇಂದ್ರ-
ಸರಸ್ವತ್ಯಾಖ್ಯೇನ ಭಿಕ್ಷುಣಾ ಪ್ರಣೀತೇ ಶುದ್ಧಶಾಂಕರಪ್ರಕ್ರಿಯಾಭಾಸ್ಕರಾಭಿಧೇ ಪ್ರಕರಣೇ
ವೇದಾಂತಸಿದ್ಧಾಂತನಿರ್ಣಯೋ ನಾಮ ಪ್ರಥಮಃ ಕಿರಣಃ

---

**(೫) ಉಪಸಂಹಾರವು** - ಹೀಗೆ ಶ್ರೀಶಂಕರಭಗವತ್ಪಾದರಿಗಿಂತ ಮೊದಲು ಅದ್ವೈತವೇ ವೇದಾಂತ ಸಿದ್ಧಾಂತವೆಂಬುದು ಎಲ್ಲರಿಗೂ ಒಪ್ಪಿಗೆಯಾಗಿತ್ತೆಂತಲೂ, ಅದ್ವೈತಿಗಳಲ್ಲಿ ಮತ ಭೇದವಾದರೋ ಅವರವರು ಒಪ್ಪಿಕೊಂಡ ಪ್ರಕ್ರಿಯಾಭೇದದಿಂದ ಬಹಳವಾಗಿ ಭಿನ್ನ (ಭಿನ್ನವಾಗಿ) ಬಹಳ ಕಾಲದಿಂದಲೂ ಇತ್ತು ಎಂದು ಗೊತ್ತಾಗುತ್ತದೆ. ಶ್ರೀಶಂಕರಭಗವತ್ಪಾದರಿಗೆ ಒಪ್ಪಿಗೆಯಾದ ಪ್ರಕ್ರಿಯಾ ವಿಶೇಷವನ್ನು ಅವಲಂಬಿಸಿರುವುದರಿಂದಲೇ ಅದು ಬೇರೆ ವೇದಾಂತ ಪ್ರಸ್ಥಾನಕ್ಕಿಂತ ವಿಲಕ್ಷಣವಾದದ್ದೆಂದು ಸಿದ್ಧವಾಗುತ್ತದೆ.

ಇಲ್ಲಿಗೆ ವೇದಾಂತಸಿದ್ಧಾಂತವೆಂಬ ಮೊದಲನೆ ಕಿರಣವು ಮುಗಿಯಿತು.

---

೧. ಅತ್ರ ಸೂತ್ರಭಾಷ್ಯಮೇವಾಶ್ರಿತ್ಯ ಕತಿಚಿದೇವ ಪ್ರಸ್ಥಾನಾಂತರಾಣಿ ದರ್ಶಿತಾನಿ | ಅಧಿಕಂ ತು ನಾತಿಚಿರೇಣ ಪ್ರಚಿಕಾಶಯಿಷಿತ "ವೇದಾಂತಪ್ರಕ್ರಿಯಾಪ್ರತ್ಯಭಿಜ್ಞಾ" ಗ್ರಂಥತೋಽಧಿಗಂತವ್ಯಮ್ ||

---

(ಇಲ್ಲಿ ಇನ್ನೂ ಹೆಚ್ಚಿನ ಬೇರೆ ಬೇರೆ ಪ್ರಸ್ಥಾನಗಳನ್ನು ನೋಡಬೇಕಾದರೆ ವೇದಾಂತಪ್ರಕ್ರಿಯಾಪ್ರತ್ಯಭಿಜ್ಞೆಯನ್ನು ವಾಚಕರು ಅವಲೋಕಿಸಬೇಕು)

## ೨. ಶಾಂಕರಸಂಪ್ರದಾಯನಿರ್ಣಯಃ

೬. ಶಾಂಕರಪ್ರಕ್ರಿಯಾ ಶ್ರೀಗೌಡಪಾದಸಂಪ್ರದಾಯಾನುಸಾರಿಣೀ - ಭಗವತ್ಪಾದೈರಭ್ಯುಪಗತೋ ವೇದಾಂತಪ್ರಕ್ರಿಯಾವಿಶೇಷೋ ನ ತದುಪಜ್ಞಃ, ಕಿಂ ತು ತತ್ಪ್ರಾಗಪಿ ಲಬ್ಧಪ್ರಸರ ಆಸೀತ್ - ಇತ್ಯತ್ರ ಪ್ರಸ್ಥಾನತ್ರಯಭಾಷ್ಯೇಷು ತೇಷಾ-ಮೇವೋದ್ಘೋಷಣಾದವಗಮ್ಯತೇ | ತಥಾ ಹಿ -

(೧) "ತಥಾ ಚ ಸಂಪ್ರದಾಯವಿದೋ ವದಂತಿ" (ಸೂ.ಭಾ. ೧-೪-೧೪)
"ಅತ್ರೋಕ್ತಂ ವೇದಾಂತಾರ್ಥಸಂಪ್ರದಾಯವಿದ್ಭಿರಾಚಾರ್ಯೈಃ" (ಸೂ.ಭಾ. ೨-೧-೯).

ಇತಿ ಚ ಶ್ರೀಗೌಡಪಾದಾಚಾರ್ಯಾಃ ಸಂಪ್ರದಾಯವಿತ್ತ್ವೇನ ಮಹೀಕೃತಾಃ | ತತ್ರೋದಾಹೃತೌ ಶ್ಲೋಕೌ ತು -

---

## ೨. ಶಾಂಕರ ಸಂಪ್ರದಾಯದ ನಿರ್ಣಯವು (ಎರಡನೇಯ ಕಿರಣವು)

**(೬) (ಶ್ರೀ) ಶಂಕರರ ಪ್ರಕ್ರಿಯೆಯು ಶ್ರೀ ಗೌಡಪಾದಸಂಪ್ರ-ದಾಯವನ್ನು ಅನುಸರಿಸಿರುವಂಥದ್ದು.** ಭಗವತ್ಪಾದರು ಒಪ್ಪಿರುವ ವೇದಾಂತ ಪ್ರಕ್ರಿಯಾವಿಶೇಷವು (ಏನಿದೆ ಅದು) ಅವರೇ ಕಲ್ಪಿಸಿದ್ದಲ್ಲ. ಮತ್ತೇನೆಂದರೆ ಅವರಿಗಿಂತ ಮುಂಚೆಯೂ ಪ್ರಚಾರದಲ್ಲಿತ್ತು ಎಂಬ ವಿಷಯಕ್ಕೆ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಅವರೇ ಹೇಳಿರುವುದರಿಂದ ಗೊತ್ತಾಗುತ್ತದೆ. ಹೇಗೆಂದರೆ "(೧) ಹಾಗೆಯೇ ಸಂಪ್ರದಾಯವನ್ನು ಬಲ್ಲವರು ಹೇಳುತ್ತಾರೆ", (ಸೂ. ಭಾ. ೧-೪-೧೪) "ಈ ವಿಷಯಕ್ಕೆ ವೇದಾನ್ತಾರ್ಥಸಂಪ್ರದಾಯವನ್ನು ಬಲ್ಲವರಾದ ಆಚಾರ್ಯರು ಹೇಳಿರುತ್ತಾರೆ", (ಸೂ. ಭಾ. ೨-೧-೯) ಈ ರೀತಿಯಾಗಿ (ಆಚಾರ್ಯರು) ಗೌಡಪಾದರನ್ನು ಸಂಪ್ರದಾಯವನ್ನು ಬಲ್ಲವರೆಂದು ಗೌರವಿಸಿರುತ್ತಾರೆ. ಅಲ್ಲೇ ಈ ಕೆಳಗಿನ ಎರಡು ಶ್ಲೋಕಗಳೂ ಸಹ ಉದಾಹೃತವಾಗಿವೆ.

(೧) ಮೃಲ್ಲೋಹವಿಸ್ಫುಲಿಂಗಾದ್ಯೈಃ ಸೃಷ್ಟಿರ್ಯಾ ಚೋದಿತಾನ್ಯಥಾ |
ಉಪಾಯಃ ಸೋಽವತಾರಾಯ ನಾಸ್ತಿ ಭೇದಃ ಕಥಂಚನ || ಗೌ.ಕಾ. ೩-೧೫.

(೨) ಅನಾದಿಮಾಯಯಾ ಸುಪ್ತೋ ಯದಾ ಜೀವಃ ಪ್ರಬುಧ್ಯತೇ |
ಅಜಮನಿದ್ರಮಸ್ವಪ್ನಮದ್ವೈತಂ ಬುಧ್ಯತೇ ತದಾ || ಗೌ.ಕಾ.೧-೧೬.

ಇತ್ಯೇತೌ ಅದ್ಯಾಪಿ ಸರ್ವತ್ರ ಸಗೌರವಂ ಪಠನಪಾಠನಯೋರದ್ವೈತಿಭಿಃ ಶ್ರೀಗೌಡಪಾದೀಯತ್ವೇನ ಆದ್ರಿಯೇತೇ, ಉಪಲಭ್ಯೇತೇ ಚ ಮುದ್ರಿತಮಾಂಡೂಕ್ಯ-ಕಾರಿಕಾಸು ಮಧ್ಯೇ - ಇತಿ ಸರ್ವವಿದಿತಮ್, ಶ್ರೀಗೌಡಪಾದಾಶ್ಚ ಶಂಕರಭಗವತ್ಪಾದಾನಾಂ ಪರಮಗುರುತ್ವೇನ ಪ್ರಖ್ಯಾತಾ ಇತಿ ಚ | ಯದ್ಯಪಿ ಸೂತ್ರಭಾಷ್ಯೇ ಯಥೋದಾಹೃತ-ಶ್ಲೋಕೌ ಗೌಡಪಾದಕರ್ತೃತ್ವೇನ ನೋಲ್ಲಿಖಿತೌ, ತಥಾಪಿ ಶಂಕರಭಗವತ್ಪಾದಾನಾಂ ಸಾಕ್ಷಾಚ್ಛಿಷ್ಯತ್ವೇನ ಸರ್ವಸಂಪ್ರತಿಪನ್ನೈಃ ಶ್ರೀಸುರೇಶ್ವರಾಚಾರ್ಯೈರ್ವಿಸ್ಪಷ್ಟಂ ಲಿಖಿತಮಸ್ತಿ-

---

(೧) ಮಣ್ಣು, ಲೋಹ, ಬೆಂಕಿಯ ಕಿಡಿ ಮುಂತಾದ (ದೃಷ್ಟಾಂತಗಳಿಂದ) ಬೇರೆ ಬೇರೆ ಪ್ರಕಾರವಾಗಿ ಯಾವ ಸೃಷ್ಟಿಯ ವಿಚಾರವನ್ನು ಹೇಳಿರುತ್ತದೆ, ಅದು (ನಮ್ಮ ಬುದ್ಧಿಯಲ್ಲಿ ಆತ್ಮೈಕತ್ವವು) ಇಳಿದುಕೊಳ್ಳುವುದಕ್ಕೆ ಉಪಾಯವಾಗಿ ಹೇಳಿರುತ್ತದೆಯೇ ಹೊರತು (ನಿಜವಾಗಿ) ಭೇದವು ಹೇಗೂ ಇರುವುದೇ ಇಲ್ಲ. (ಗೌ.ಕಾ. ೩–೧೫)

(೨) ಅನಾದಿಕಾಲದಿಂದಿರುವ ಮಾಯೆಯಿಂದ ಮಲಗಿರುವವನಾದ ಜೀವನು ಯಾವಾಗ ಎಚ್ಚರುತ್ತಾನೋ ಆಗ ಹುಟ್ಟಿಲ್ಲದ, ನಿದ್ರೆಯಿಲ್ಲದ, ಕನಸಿಲ್ಲದ ಅದ್ವೈತವನ್ನು ಕಂಡುಕೊಳ್ಳುತ್ತಾನೆ. (ಗೌ.ಕಾ ೧–೧೬) ಈ ಎರಡು ಶ್ಲೋಕಗಳನ್ನು ಇಂದೂ ಸಹ ತುಂಬಾ ಗೌರವಪೂರ್ವಕವಾಗಿಯೇ ಎಲ್ಲಾ ಅದ್ವೈತಿಗಳು (ತಮ್ಮ) ಪಠನ ಪಾಠನ ಸಮಯದಲ್ಲಿ ಹೇಳುತ್ತಾ (ದೇಶದ) ಎಲ್ಲಾ ಕಡೆಯಲ್ಲೂ ಶ್ರೀ ಗೌಡಪಾದರದ್ದೆಂದೇ ಒಪ್ಪಿರುತ್ತಾರೆ. ಮುದ್ರಿತವಾದ ಮಾಂಡೂಕ್ಯಕಾರಿಕೆಗಳ ಮಧ್ಯದಲ್ಲಿ ಇಂದೂ ಸಹ ಇವು ಸಿಗುತ್ತಿವೆ. ಶ್ರೀಗೌಡಪಾದರು ಶಂಕರಭಗವತ್ಪಾದರ ಪರಮಗುರುಗಳೆಂದು ಪ್ರಖ್ಯಾತ-ರಾಗಿದ್ದಾರೆಂಬ ವಿಚಾರವೂ (ಸಹ) ಎಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಈ ಮೇಲೆ ಉದಾಹರಿಸಿರುವ ಶ್ಲೋಕಗಳು ಶ್ರೀಗೌಡಪಾದರದ್ದೆಂದು ಸೂತ್ರಭಾಷ್ಯದಲ್ಲಿ ಹೇಳಿಲ್ಲವಾದರೂ ಶ್ರೀಶಂಕರಭಗವತ್ಪಾದರ ಸಾಕ್ಷಾತ್

(೩) ನಿಃಶೇಷವೇದಸಿದ್ಧಾಂತವಿದ್ವದ್ಭಿರಪಿ ಭಾಷಿತಮ್ |
ಗೌಡಾಚಾರ್ಯೈರಿದಂ ವಸ್ತು ಯಥಾಸ್ಮಾಭಿಃ ಪ್ರಪಂಚಿತಮ್ ||

ಮೃಲ್ಲೋಹವಿಸ್ಫುಲಿಂಗಾದ್ಯೈಃ ಸೃಷ್ಟಿರ್ಯಾ ಚೋದಿತಾನ್ಯಥಾ |
ಉಪಾಯಃ ಸೋಽವತಾರಾಯ ನಾಸ್ತಿ ಭೇದಃ ಕಥಂಚನ || ಬೃ.ವಾ.೨-೧-೩೮೬, ೩೮೭.

ಇತಿ | ಏತೇನ ಸೂತ್ರಭಾಷ್ಯೋದಾಹೃತಃ ಶ್ಲೋಕೋ ಗೌಡಪಾದೀಯತ್ವೇನ ವಾರ್ತಿಕಕಾರಸಮಯೇ ಪ್ರಥಿತ ಆಸೀದಿತ್ಯವಗಮ್ಯತೇ | "ಗೌಡಾಚಾರ್ಯೈಃ" ಇತ್ಯನೇನ ಗೌಡಪಾದಾಚಾರ್ಯಾ ಏವ ವಿವಕ್ಷಿತಾ ಇತಿ ತು ವಾರ್ತಿಕಾಂತರೇ ಸ್ಪಷ್ಟತರೋಲ್ಲೇಖಾತ್ ಗಮ್ಯತೇ -

(೪) ಶ್ಲೋಕಾಂಶ್ಚ ಗೌಡಪಾದಾದೇರ್ಯಥೋಕ್ತಾರ್ಥಸ್ಯ ಸಾಕ್ಷಿಣಃ |
ಅಧೀಯತೇಽತ್ರ ಯತ್ನೇನ ಸಂಪ್ರದಾಯವಿದಃ ಸ್ವಯಮ್ ||

---

ಶಿಷ್ಯರೆಂದು ಎಲ್ಲರೂ ಒಪ್ಪಿರುವ ಶ್ರೀಸುರೇಶ್ವರಾಚಾರ್ಯರು ಸ್ಪಷ್ಟವಾಗಿ (ಇದು ಗೌಡಪಾದರದ್ದೆಂದು) ಬರೆದಿರುತ್ತಾರೆ.

(೩) "ಸಮಸ್ತವೇದಸಿದ್ಧಾಂತವನ್ನು ಬಲ್ಲವರಾದ ಗೌಡಪಾದಾಚಾರ್ಯರೂ ಸಹ ನಾವು ಯಾವ ರೀತಿ ಇದನ್ನು ಹೇಳಿರುತ್ತೇವೆಯೋ ಅದರ ಬಗ್ಗೆ ಅವರೂ (ಸಹ) ಹಾಗೆಯೇ ಹೇಳಿರುತ್ತಾರೆ. ಮಣ್ಣು, ಲೋಹ, ಬೆಂಕಿಯ ಕಿಡಿ ........ ಭೇದವಿಲ್ಲ" (ಬೃ.ವಾ ೨-೧-೩೮೬, ೩೮೭) (ಎಂದು ಹೇಳಿರುತ್ತಾರೆ).

ಇದರಿಂದ ಸೂತ್ರಭಾಷ್ಯದಲ್ಲಿ ಉದಾಹರಿಸಿದ್ದಾದ (ಈ) ಶ್ಲೋಕವು ಗೌಡಪಾದರದ್ದೆಂದು ವಾರ್ತಿಕಕಾರರ ಕಾಲದಲ್ಲಿ ಪ್ರಸಿದ್ಧವಾಗಿತ್ತೆಂದು ಗೊತ್ತಾಗುತ್ತದೆ. "ಗೌಡಾಚಾರ್ಯೈಃ" ಎಂದು ಹೇಳಿರುವುದೂ ಸಹ ಗೌಡಪಾದರನ್ನೇ ಎಂಬುದಕ್ಕೆ ಮತ್ತೊಂದು ವಾರ್ತಿಕದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುವುದು ಕಂಡು ಬಂದಿದೆ.

(೪) "ಮೇಲೆ ಹೇಳಿದ ವಿಷಯಕ್ಕೆ ಸಾಕ್ಷಿಯಾಗಿ ಗೌಡಪಾದರೇ ಮುಂತಾದವರ ಶ್ಲೋಕಗಳು ಇರುತ್ತವೆ. ಅವರು ಸ್ವತಃ ಸಂಪ್ರದಾಯವನ್ನು

ತತ್ತ್ವಮಾಧ್ಯಾತ್ಮಿಕಂ ದೃಷ್ಟ್ವಾ ತತ್ತ್ವಂ ದೃಷ್ಟ್ವಾ ತು ಬಾಹ್ಯತಃ |
ತತ್ತ್ವೀಭೂತಸ್ತದಾರಾಮಸ್ತತ್ತ್ವಾದಪ್ರಚ್ಯುತೋ ಭವೇತ್ || ಬೃ.ವಾ. ೪-೪-೮೮೬, ೮೮೭.

ಇತ್ಯಾದಿಸ್ಥಲೇಷು ||

["ತತ್ತ್ವಮ್" ಇತ್ಯಾದಿಶ್ಲೋಕೋ ವೈತಥ್ಯಪ್ರಕರಣಸ್ಥೋ ಪ್ರಕ್ರಿಯಾಂತರಾನುಸಾರಿಭಿ-ರ್ಗೌಡಪಾದೀಯತ್ವೇನ ಉದಾಹೃತ್ಯ ಸ್ವಮತಾನುಸಾರೇಣ ವ್ಯಾಖ್ಯಾತಃ | ತತ್ಪ್ರತ್ಯಾಖ್ಯಾನಾಯಾತ್ರ ವಾರ್ತಿಕಕಾರೈಃ "ಸಂಪ್ರದಾಯವಿದಃ" ಇತಿ ತೇ ಸೋಪಹಾಸಂ ವಿಶೇಷಿತಾಃ ||]

ತದೇವಂ ತಾವತ್, ಶಂಕರಭಗವತ್ಪಾದಾ ಗೌಡಪಾದಾಚಾರ್ಯೈರಾದೃತಮೇವ ಸಂಪ್ರದಾಯಮನುಸೃತ್ಯ ಸ್ವೀಯಭಾಷ್ಯಂ ರಚಿತವಂತ ಇತಿ ಸಿದ್ಧಮ್ ||

**೭. ಗೌಡಪಾದಾಚಾರ್ಯಾ ಅಪಿ ಸ್ವಸಂಪ್ರದಾಯಜ್ಞಾನ್ ಪರಾಮೃಶಂತಿ-** ಗೌಡಪಾದಾಚಾರ್ಯಾ ಅಪಿ ಸ್ವೀಯಕಾರಿಕಾಸೂಪಾತ್ತಂ ಪ್ರಕ್ರಿಯಾವಿಶೇಷಂ

---

ಬಲ್ಲವರಾಗಿರುತ್ತಾರೆ". "ಆಧ್ಯಾತ್ಮಿಕವಾಗಿಯೂ ಹೊರಗಡೆಯಿಂದಲೂ ಸಹ ತತ್ತ್ವವನ್ನು ಕಂಡುಕೊಂಡು, ತಾನೂ ತತ್ವರೂಪದವನೇ ಆಗಿ ತತ್ವದಿಂದ ಜಾರದವನಾಗಿರಬೇಕು" (ಬೃ.ವಾ. ೪-೪-೮೮೬,೮೮೭) ಎಂಬಿವೇ ಮೊದಲಾದ ಸ್ಥಳದಲ್ಲಿ ಹೇಳಿರುತ್ತಾರೆ.

"ತತ್ತ್ವಮಾಧ್ಯಾತ್ಮಿಕಂ" ಎಂಬಿವೇ ಮೊದಲಾದ ಶ್ಲೋಕಗಳು ವೈತಥ್ಯ ಪ್ರಕರಣದಲ್ಲಿರುವ ಶ್ಲೋಕಗಳು. ಇವನ್ನು ಬೇರೆ ಪ್ರಕ್ರಿಯೆಯನ್ನು ಅನುಸರಿಸಿದವರು ಗೌಡಪಾದರದ್ದೆಂದು ಉದಾಹರಿಸಿ ತಮ್ಮ ಮತಕ್ಕನುಗುಣವಾಗಿ ವ್ಯಾಖ್ಯಾನವನ್ನು ಮಾಡಿರುತ್ತಾರೆ. ಅದನ್ನಲ್ಲಗಳೆಯುವುದಕ್ಕಾಗಿ ಹಾಸ್ಯಪೂರ್ವಕವಾದ ವಿಶೇಷಣವನ್ನು ಇಲ್ಲಿ ವಾರ್ತಿಕಕಾರರು (ಅವರಿಗೆ) "ಸಂಪ್ರದಾಯವನ್ನು ಬಲ್ಲವ"ರೆಂದು ಕೊಟ್ಟಿರುತ್ತಾರೆ).

ಹೀಗೆ ಶ್ರೀಶಂಕರಭಗವತ್ಪಾದರು ಗೌಡಪಾದಾಚಾರ್ಯರು ಒಪ್ಪಿರುವ ಸಂಪ್ರದಾಯವನ್ನು ಅನುಸರಿಸಿ ತಮ್ಮ ಭಾಷ್ಯವನ್ನು ರಚಿಸಿರುತ್ತಾರೆಂದು ಸಿದ್ಧವಾಯಿತು.

**(೭) ಶ್ರೀಗೌಡಪಾದರೂ ಸಹ ತಮ್ಮ ಸಂಪ್ರದಾಯವನ್ನು**

ಪ್ರಾಚೀನಸಂಪ್ರದಾಯಾನುಸಾರೀತ್ಯೇವ ಮನ್ಯಂತೇ ಸ್ಮ - ಇತ್ಯತ್ರಾಪಿ ಜ್ಞಾಪಕಂ ವಿದ್ಯತೇ-

(೧) ಸ್ವಪ್ನಜಾಗರಿತಸ್ಥಾನೇ ಹ್ಯೇಕಮಾಹುರ್ಮನೀಷಿಣಃ | ಗೌ.ಕಾ. ೨-೫.

ಸ್ವಪ್ನಮಾಯೇ ಯಥಾ ದೃಷ್ಟೇ ಗಂಧರ್ವನಗರಂ ಯಥಾ |
ತಥಾ ವಿಶ್ವಮಿದಂ ದೃಷ್ಟಂ ವೇದಾಂತೇಷು ವಿಚಕ್ಷಣೈಃ || ಗೌ.ಕಾ. ೨-೩೧.

ಅತ್ರ "ತ್ರಯಃ ಸ್ವಪ್ನಾಃ" (ಐ. ೧-೧-೧೨), "ಮಾಯಾಂ ತು ಪ್ರಕೃತಿಂ ವಿದ್ಯಾತ್" (ಶ್ವೇ. ೪-೧೦) ಇತ್ಯಾದಿಶ್ರುತಿಮನುರುಂಧಾನೈರ್ವೇದಾಂತಸಂಪ್ರದಾಯವಿದ್ಭಿಃ, ಜಾಗ್ರತ್ಸ್ವಪ್ನಯೋರೈಕ್ಯಂ ವಿಶ್ವಸ್ಯ ಸ್ವಪ್ನಮಾಯಾಸದೃಶತ್ವಂ ಚಾಭ್ಯುಪಗತಮಸ್ತಿ - ಇತ್ಯುಕ್ತಮ್ ||

(೨) ವೀತರಾಗಭಯಕ್ರೋಧೈರ್ಮುನಿಭಿರ್ವೇದಪಾರಗೈಃ |
ನಿರ್ವಿಕಲ್ಪೋ ಹ್ಯಯಂ ದೃಷ್ಟಃ ಪ್ರಪಂಚೋಪಶಮೋಽದ್ವಯಃ || ಗೌ.ಕಾ. ೨-೩೫.

ಅತ್ರ ತು ಪರಮಾತ್ಮನೋ ನಿರ್ವಿಕಲ್ಪಕತ್ವಂ ನಿಷ್ಪ್ರಪಂಚತ್ವಂ ಚ ವೈದಿಕಸಂಪ್ರದಾಯಾವಗತಮ್ - ಇತ್ಯುಕ್ತಮ್ | ಏತೇನ "ನ ನಿದ್ರಾಂ ನೈವ ಚ ಸ್ವಪ್ನಂ ತುರ್ಯೇ ಪಶ್ಯಂತಿ

---

**ಬಲ್ಲವರನ್ನು ಪರಾಮರ್ಶಿಸುತ್ತಾರೆ.** ಗೌಡಪಾದಾಚಾರ್ಯರೂ ಕೂಡ ತಮ್ಮ ಕಾರಿಕೆಯಲ್ಲಿ ಸ್ವೀಕರಿಸಿದ್ದಾದ ಪ್ರಕ್ರಿಯಾವಿಶೇಷವನ್ನು ಪ್ರಾಚೀನ ಸಂಪ್ರದಾಯಕ್ಕನುಗುಣವಾದದ್ದೆಂದೇ ಅಭಿಪ್ರಾಯಪಟ್ಟಿರುತ್ತಾರೆಂಬುದಕ್ಕೆ ಪ್ರಮಾಣವನ್ನೂ ಸಹ ಹೇಳಿರುತ್ತಾರೆ. ಮೇಲೇ ಉದಾಹರಿಸಿರುವ ಶ್ಲೋಕಗಳು ಸ್ಪಷ್ಟಾರ್ಥಗಳಾಗಿವೆ.

ಈ ಶ್ಲೋಕಗಳಲ್ಲಿ ಶ್ರುತಿಯಲ್ಲೇ ತಿಳಿಸಿದ್ದಾದ "ತ್ರಯಃ ಸ್ವಪ್ನಾಃ" (ಐ ೧-೧-೧೨) ಮಾಯಾಂ ತು ಪ್ರಕೃತಿಂ ವಿದ್ಯಾತ್ । (ಶ್ವೇ ೪-೧೦) "ಮೂರು ಸ್ವಪ್ನಗಳೇ", ಮಾಯೆಯನ್ನಾದರೋ ಪ್ರಕೃತಿಯೆಂದು ತಿಳಿಯಬೇಕು", ಎಂಬುದಾಗಿರುವುದನ್ನು ಅನುಸರಿಸಿದವರಾದ ವೇದಾಂತಸಂಪ್ರದಾಯವನ್ನು ಬಲ್ಲವರು ಎಲ್ಲರೂ, ಎಚ್ಚರ ಕನಸುಗಳಿಗೆ ಏಕತ್ವವನ್ನು, ಪ್ರಪಂಚವು ಸ್ವಪ್ನಮಾಯ ಸಮಾನವೆಂಬುದಾಗಿ ಒಪ್ಪಿರುತ್ತಾರೆಂಬುದನ್ನು ತಿಳಿಸಿರುತ್ತಾರೆ.

"ರಾಗಭಯಕ್ರೋಧಗಳನ್ನು ಬಿಟ್ಟವರಾದ ವೇದಪಾರಂಗತರಾದ ಮುನಿಗಳೂ, ವೇದಾಂತದಲ್ಲಿ ನಿಷ್ಣಾತರೂ ಆದ (ಜ್ಞಾನಿಗಳು) ಈ

ನಿಶ್ಚಿತಾಃ" (ಗೌ.ಕಾ. ೧-೧೪) ಕಾರಿಕಾಪಿ ಸಂಪ್ರದಾಯಸೂಚಿನೀತಿ ವ್ಯಾಖ್ಯಾತಾ ವೇದಿತವ್ಯಾ ||

ಯದ್ಯಪಿ ಪ್ರಥಮಂ ಪ್ರಕರಣಂ ಆಗಮಪ್ರಕರಣತ್ವೇನ ವಿಖ್ಯಾತಂ ಶ್ರುತಿರಿತ್ಯೇವ ಭ್ರಾಂತಾಃ ಕೇಚಿದಧುನಾತನವೇದಾಂತಪ್ರಸ್ಥಾನಾಂತರಾನುಯಾಯಿನಃ | ತದ್ಯಥಾ ರಾಮಾನುಜಾಚಾರ್ಯಾಃ ಶ್ರೀಭಾಷ್ಯೇ "ಅನಾದಿಮಾಯಯಾ ಸುಪ್ತೋ ಯದಾ ಜೀವಃ ಪ್ರಬುಧ್ಯತೇ" ಇತ್ಯೇತಾಂ ಕಾರಿಕಾಂ ಶ್ರುತಿತ್ವೇವ ಪರಿಗೃಹ್ಯ "ತಸ್ಮಿಂಶ್ಚಾನ್ಯೋ ಮಾಯಯಾ ಸಂನಿರುದ್ಧಃ" ಇತಿ ಶ್ರುತ್ಯಾ ಸಾಕಮುದಾಜಹ್ರುಃ (ಶ್ರೀ.ಭಾ. ೧-೧-೪) ಆನಂದತೀರ್ಥಾಸ್ತು -

ಪ್ರಮಾಣಸ್ಯ ಪ್ರಮಾಣಂ ಚ ಬಲವದ್ ವಿದ್ಯತೇ ಮುನೇ |
ಬ್ರಹ್ಮದೃಷ್ಟಾನತೋಮಂತ್ರಾನ್ ಪ್ರಮಾಣಂ ಸಲಿಲೇಶ್ವರಃ |
ಅತ್ರ ಶ್ಲೋಕಾ ಭವಂತೀತಿ ಚಕಾರೈವ ಪೃಥಕ್ ಪೃಥಕ್ ||

ಇತಿ ಆಗಮಪ್ರಕರಣಪ್ರಾರಂಭ ಏವ ಕಾರಿಕಾ ಏತಾ ಬ್ರಹ್ಮದೃಷ್ಟಮಂತ್ರಾ ಇತಿ

---

ನಿರ್ವಿಕಲ್ಪವಾದ ಆತ್ಮನನ್ನು ಕಂಡಿರುತ್ತಾರೆ" ಎಂದು ಇಲ್ಲಿ ಪರಮಾತ್ಮನು ನಿರ್ವಿಕಲ್ಪನಾಗಿರುತ್ತಾನೆಂತಲೂ ನಿಷ್ಪ್ರಪಂಚನಾಗಿರುತ್ತಾನೆಂಬುದೂ ವೈದಿಕಸಂಪ್ರದಾಯದಿಂದ ಬಂದದ್ದೆಂದು ತಿಳಿಸಿದೆ. ಇಷ್ಟು ಹೇಳಿದ್ದರಿಂದ "ತುರೀಯಸ್ವರೂಪವನ್ನು ಕಂಡುಕೊಂಡವರು ನಿದ್ರೆಯನ್ನೂ ಸ್ವಪ್ನವನ್ನೂ (ಆತ್ಮನಲ್ಲಿ) ಕಾಣುವುದಿಲ್ಲ ಎಂಬ ಕಾರಿಕೆಯೂ ಸಹ ಸಂಪ್ರದಾಯವನ್ನು ಸೂಚಿಸುತ್ತದೆ ಎಂಬುದನ್ನು ವ್ಯಾಖ್ಯಾನವನ್ನು ಮಾಡಿದಂತಾಯಿತು.

ಈಚಿನ ವೇದಾಂತ ಪ್ರಸ್ಥಾನಾಂತರವನ್ನು ಆಶ್ರಯಿಸಿದವರಾದ ರಾಮಾನುಜರು ಈ ಮೊದಲನೆಯ ಪ್ರಕರಣವಾದ ಆಗಮಪ್ರಕರಣವನ್ನು ಶ್ರುತಿಯೆಂತಲೇ ತಿಳಿದು ಭ್ರಾಂತರಾಗಿದ್ದಾರೆ. ಹೇಗೆಂದರೆ ಶ್ರೀರಾಮಾನುಜಾಚಾರ್ಯರು ತಮ್ಮ ಶ್ರೀ ಭಾಷ್ಯದಲ್ಲಿ ಅನಾದಿಮಾಯಯಾ ........ ಎಂಬೀ ಕಾರಿಕೆಯನ್ನು ಶ್ರುತಿಯೆಂದೇ ಸ್ವೀಕರಿಸಿ ಅದರೊಡನೆ (ಅದರಲ್ಲಿ ಮತ್ತೊಬ್ಬನಾದ ಜೀವನು ಮಾಯೆಯಿಂದ ಕಟ್ಟು ಹಿಡಿದವನಾಗಿದ್ದಾನೆ) ಎಂಬ ಶ್ರುತಿಯನ್ನು ಉದಾಹರಿಸಿರುತ್ತಾರೆ. ಆನಂದತೀರ್ಥರಾದ (ಮಧ್ವಾಚಾರ್ಯ-ರಾದರೋ) ಎಲೈ ಮುನಿಯೇ, ಇದರ ಪ್ರಾಮಾಣ್ಯಕ್ಕೆ ಬಲವತ್ತರವಾದ ಪ್ರಮಾಣವು ಇದೆ. ಬ್ರಹ್ಮನು ಕಂಡದ್ದಾದ ಮನ್ತ್ರವನ್ನು ವರುಣನು ಈ ವಿಷಯಕ್ಕೆ,

"ಗಾರುಡ"ಪುರಾಣಶ್ಲೋಕೋದಾಹರಣೇನ ಅವಧಾರಯಾಮಾಸುಃ, ತಥಾಪಿ ಗೌಡಪಾದಾಚಾರ್ಯಾಣಾಮೇವೇಯಮ್ ಇತ್ಯಾತಸ್ಥುಷಾಮ್ ಅದ್ವೈತಿನಾಮೇವ ಸಂಪ್ರದಾಯಃ ಶುದ್ಧಃ, ಉಕ್ತಪ್ರಕರಣಸ್ಯ ಶ್ರುತಿತ್ವೇ ಪ್ರಾಚೀನಾಚಾರ್ಯಸಮ್ಮತ್ಯ-ಭಾವಾತ್ - ಇತಿ ಪ್ರಕರಣಚತುಷ್ಟಯಸಂಗಾನಜ್ಞಾಪನಾರ್ಥಾಯ ತ್ರಿಯಮಪಿ ಕಾರಿಕಾ ಇಹ ಸಮುದಾಹೃತಾ | ಅಧಿಕಂ ತ್ವತ್ರ ಮಾಂಡೂಕ್ಯರಹಸ್ಯವಿವೃತಿತೋಽಧಿಗಂತವ್ಯಮಿತಿ ದಿಕ್ ||

**೮. ಭಗವತ್ಪಾದೀಯಭಾಷ್ಯೇಷು ದೃಶ್ಯಮಾನಃ ಸಂಪ್ರದಾಯಶ್ರದ್ಧಾ-** ನ ಕೇವಲಂ ಗೌಡಪಾದಾಚಾರ್ಯಾಃ ಸ್ವಸಂಪ್ರದಾಯವಿತ್ತ್ವೇನ ಪ್ರಮಾಣೀಕೃತಾ ಭಾಷ್ಯಕಾರೇಣ, ಯಾವತ್ ಸ್ವೀಯಭಾಷ್ಯೇಷು ಸರ್ವತ್ರಾಪಿ ತತ್ರ ತತ್ರ ಸತ್ಸಂಪ್ರದಾಯೇ ಪರಮಾದರಃ ಪ್ರಕಟಿತೋಽಸ್ತಿ, ಸತ್ಸಂಪ್ರದಾಯವಿದಾಮೇವ ಸುವೇದ್ಯೋ ವೇದಾಂತಾರ್ಥಃ

---

ಈ ಶ್ಲೋಕಗಳು ಇರುತ್ತವೆ ಎಂದು ಬೇರೆಬೇರೆಯಾಗಿ ಮಾಡಿರುವುದೇ ಪ್ರಮಾಣವು ಎಂದು ಹೇಳುತ್ತಾ ಆಗಮಪ್ರಕರಣಾರಂಭದಲ್ಲಿಯೇ ಈ ಕಾರಿಕೆಗಳು ಬ್ರಹ್ಮದೃಷ್ಟವಾದವುಗಳು ಎಂದು ಗರುಡಪುರಾಣ ಶ್ಲೋಕವನ್ನು ಉದಾಹರಣೆಯನ್ನು ಮಾಡುವುದರ ಮೂಲಕ ಒತ್ತಿಹೇಳಿರುತ್ತಾರೆ. ಆದರೂ ಇವು ಗೌಡಪಾದಾಚಾರ್ಯರದೇ ಎಂಬುದಾಗಿ ಆಗ್ರಹಪಡುತ್ತಿರುವವರಾದ ಅದ್ವೈತಿಗಳ ಸಂಪ್ರದಾಯವೇ ಶುದ್ಧವಾದದ್ದೆಂದೂ ಆಗಮಪ್ರಕರಣವು ಶ್ರುತಿಯಾಗಿದೆ ಎಂಬವಿಷಯಕ್ಕೆ ಪ್ರಾಚೀನಾಚಾರ್ಯರ ಸಮ್ಮತಿ ಇಲ್ಲ ಎಂಬುದನ್ನೂ ತೋರಿಸಿರುತ್ತೇವೆ. ನಾಲ್ಕು ಪ್ರಕರಣಗಳಿಗೂ ಸಂಬಂಧವನ್ನು ಸೂಚಿಸುವುದಕ್ಕಾಗಿ ಈ ಕಾರಿಕೆಯನ್ನು ಸಹ ನಾವು ಉದಾಹರಿಸಿರುತ್ತೇವೆ. (ಇದರ ಬಗ್ಗೆ) ಇನ್ನೂ ಹೆಚ್ಚಾಗಿ ತಿಳಿಯಬೇಕೆನ್ನುವವರು ಮಾಂಡೂಕ್ಯರಹಸ್ಯವಿವೃತಿಯಿಂದ ತಿಳಿದುಕೊಳ್ಳಬಹುದು.

**(೮) ಭಗವತ್ಪಾದರ ಭಾಷ್ಯದಲ್ಲಿ ಸಂಪ್ರದಾಯದ ಬಗ್ಗೆ ಕಂಡು-ಬರುವ ಶ್ರದ್ಧೆಯು,** ಬರೀ ಗೌಡಪಾದರನ್ನು ಮಾತ್ರ "ಸಂಪ್ರದಾಯವನ್ನು ಬಲ್ಲವರು" ಎಂದು ಭಾಷ್ಯಕಾರರು ಪ್ರಮಾಣವನ್ನಾಗಿ ತೆಗೆದುಕೊಂಡಿದ್ದಾರೆಂದು ತಿಳಿಯಬಾರದು, ಮತ್ತೇನೆಂದರೆ ತಮ್ಮ ಎಲ್ಲಾ ಭಾಷ್ಯದಲ್ಲೂ ಅಲ್ಲಲ್ಲಿ ಸತ್ಸಂಪ್ರದಾಯದವಿಷಯಕ್ಕೆ ಹೆಚ್ಚಿನ ಆದರವನ್ನು ತೋರಿಸಿರುತ್ತಾರೆ.

-ಇತಿ ಸ್ವಾಶಯಾವಿಷ್ಕರಣಾಯ | ಗುರುಶಿಷ್ಯಪರಂಪರಯಾ ಆಗತ ಏವ ಹಿ ವೇದಾಂತೋಪದೇಶೋ ಯಾಥಾರ್ಥ್ಯೇನ ವೇದಾಂತಾನಾಂ ತಾತ್ಪರ್ಯಮನುಭವಪರ್ಯಂತತಾಮ್ ಆಪಾದಯಿತುಂ ಶಕ್ನೋತೀತಿ | ತದೇವಂ ಸಂಪ್ರದಾಯಾಗತತ್ವಾತ್, ಪರಮಾರ್ಥತತ್ತ್ವಸ್ಯ ಆಗಮಯಿತೃತ್ವಾಚ್ಚ ಸಮ್ಯಗುಪದೇಶಕ್ರಮೋಽಯಮ್ "ಆಗಮಃ" ಇತ್ಯಪಿ ವ್ಯಪದಿಶ್ಯತೇ | ಆಗಮಯಿತೃತ್ತ್ವಂ ಹಿ ನಾಮ ಸಮ್ಯಗನುಭವಪರ್ಯಂತಜ್ಞಾನಪ್ರಾಪಕತ್ವಮಿತಿ | ಪರಮಾರ್ಥತತ್ತ್ವಂ ನ ಪ್ರತ್ಯಕ್ಷಾದಿಪ್ರಮಾಣಾಂತರವೇದ್ಯಮಿತಿ ಶಾಸ್ತ್ರಾಚಾರ್ಯೋಪದೇಶೇನೈವ, ಸಾಧಕೈರನುಭವಮಾರೋಪಯಿತವ್ಯಮ್ - ಇತಿ ಭಾಷ್ಯಕಾರಃ ಸುಹೃದ್ಭೂತ್ವಾ ಸಾವಧಾರಣಮ್ ಉಪದಿಶತಿ -

(೧) ತದ್ವಿಜ್ಞಾನಾರ್ಥಂ ವಿಶೇಷೇಣಾಧಿಗಮಾರ್ಥಮ್, ಸ ನಿರ್ವಿಣ್ಣೋ ಬ್ರಾಹ್ಮಣಃ ಗುರುಮೇವ ಆಚಾರ್ಯಂ ಶಮದಮದಯಾದಿಸಂಪನ್ನಮ್ ಅಭಿಗಚ್ಛೇತ್ | ಶಾಸ್ತ್ರಜ್ಞೋಽಪಿ ಸ್ವಾತಂತ್ರ್ಯೇಣ ಬ್ರಹ್ಮಜ್ಞಾನಾನ್ವೇಷಣಂ ನ ಕುರ್ಯಾತ್ -

---

ಸತ್ಸಂಪ್ರದಾಯವನ್ನು ಬಲ್ಲವರಿಗೇ ವೇದಾಂತಾರ್ಥವಾದ (ಆತ್ಮತತ್ತ್ವವು) ಸುಲಭವಾಗಿ ತಿಳಿಯುವುದಕ್ಕಾಗುತ್ತದೆ ಎಂಬ ಅಭಿಪ್ರಾಯವನ್ನು ತೋರಿಸಬೇಕಾಗಿದೆ. ಗುರುಶಿಷ್ಯಪರಂಪರೆಯಿಂದ ಬಂದಂತಹ ವೇದಾಂತೋಪದೇಶವು ಸರಿಯಾಗಿ ವೇದಾಂತಿಗಳ ತಾತ್ಪರ್ಯವನ್ನು ಅನುಭವಪರ್ಯಂತವಾಗಿ ಉಂಟುಮಾಡಿಕೊಡುವುದಕ್ಕೆ ಸಮರ್ಥವಾಗಿರುತ್ತದೆ. ಹೀಗೆ ಸಂಪ್ರದಾಯದಿಂದ ಬಂದದ್ದಾದ್ದರಿಂದಲೂ, ಪರಮಾರ್ಥತತ್ತ್ವವನ್ನು ತಿಳಿಸಿಕೊಡುವುದರಿಂದಲೂ ಸರಿಯಾದ ಉಪದೇಶಕ್ರಮಕ್ಕೆ "ಆಗಮ" ಎಂದು ಹೆಸರು ಬಂದಿರುತ್ತದೆ. ತಿಳಿಸಿಕೊಡುವುದು ಎಂದರೆ ಸರಿಯಾಗಿ ಅನುಭವ ಪರ್ಯಂತವಾದ ಜ್ಞಾನವನ್ನುಂಟು ಮಾಡುವುದು ಎಂದರ್ಥವು. ಪರಮಾರ್ಥತತ್ತ್ವವು ಪ್ರತ್ಯಕ್ಷವೇ ಮುಂತಾದ ಪ್ರಮಾಣಾಂತರಗಳಿಂದ ತಿಳಿಯುವುದಕ್ಕಾಗುವುದಿಲ್ಲವಾದ್ದರಿಂದ ಶಾಸ್ತ್ರಾಚಾರ್ಯೋಪದೇಶದಿಂದಲೇ ಸಾಧಕರಾದವರು ಅನುಭವಕ್ಕೆ ತಂದುಕೊಳ್ಳಬೇಕು ಎಂಬ ವಿಚಾರವನ್ನು ಶ್ರೀ ಶಂಕರಾಚಾರ್ಯರು ಅತ್ಯಂತ ಸುಹೃದ್ಭಾವದಿಂದ ಒತ್ತಿ ಉಪದೇಶಿಸಿರುತ್ತಾರೆ.

(೧) ಅದನ್ನು ತಿಳಿಯುವುದಕ್ಕಾಗಿ ಎಂದರೆ ವಿಶೇಷವಾಗಿ ಗೊತ್ತುಮಾಡಿಕೊಳ್ಳುವುದಕ್ಕಾಗಿ, ಆತನು ಎಂದರೆ ವೈರಾಗ್ಯವನ್ನು ಹೊಂದಿದ ಬ್ರಾಹ್ಮಣನು ಶಮದಮಾದಿಗಳಿಂದ ಕೂಡಿದ ಆಚಾರ್ಯರನ್ನೇ ಕುರಿತು ಹೋಗಬೇಕು. ತಾನು ಶಾಸ್ತ್ರಜ್ಞನಾಗಿದ್ದರೂ ಸಹ ಸ್ವತಂತ್ರವಾಗಿ

ಇತ್ಯೇತದ್ ಗುರುಮೇವ ಇತ್ಯವಧಾರಣಫಲಮ್ ||

ಮುಂ.ಭಾ. ೧-೨-೧೨,

(೨) ಕೇಚಿತ್ ಪಂಡಿತಂಮನ್ಯಾ ನಿರಾಕಾರತ್ವಾದಾತ್ಮವಸ್ತು ನೋಪೈತಿ ಬುದ್ಧಿಃ ಅತೋ ದುಃಸಾಧ್ಯಾ ಸಮ್ಯಗ್ಜ್ಞಾನನಿಷ್ಠಾ - ಇತ್ಯಾಹುಃ | ಸತ್ಯಮೇವೇದಂ ಗುರುಸಂಪ್ರದಾಯರಹಿತಾನಾಮ್ ಅಶ್ರುತವೇದಾಂತಾನಾಮ್, ಅತ್ಯಂತ-ಬಹಿರ್ವಿಷಯಾಸಕ್ತಬುದ್ಧೀನಾಮ್, ಸಮ್ಯಕ್ಪ್ರಮಾಣೇಷು ಅಕೃತಶ್ರಮಾಣಾಮ್, ತದ್ವಿಪರೀತಾನಾಂ ತು ಲೌಕಿಕಗ್ರಾಹ್ಯಗ್ರಾಹಕದ್ವೈತವಸ್ತುನಿ ಸದ್ಬುದ್ಧಿರ್ನಿತರಾಂ ದುಃ-|ಸಂಪಾದ್ಯಾ, ಆತ್ಮಚೈತನ್ಯವ್ಯತಿರೇಕೇಣ ವಸ್ತ್ವಂತರಸ್ಯ ಅನುಪಲಬ್ಧೇಃ ||

ಗೀ.ಭಾ. ೧೮-೫೦,

(೩) ಸತ್ಯಮೇವಮ್, ಪ್ರತ್ಯಕ್ಷಾದಿಭಿಃ ಪ್ರಮಾಣೈರ್ನ ಪರಃ ಪ್ರತ್ಯಾಯಯಿತುಂ ಶಕ್ಯಃ, ಆಗಮೇನ ತು ಶಕ್ಯತ ಏವ ಪ್ರತ್ಯಾಯಯಿತುಮ್|| ಕೇ. ೧-೪,

---

ಬ್ರಹ್ಮಜ್ಞಾನವನ್ನು ಮಾಡಿಕೊಳ್ಳುವುದಕ್ಕೆ ಹೋಗಬಾರದು ಎಂಬುದನ್ನು ತಿಳಿಸುವುದಕ್ಕೆ "ಗುರುಮೇವ" ("ಗುರುಗಳನ್ನು ಕುರಿತೇ") ಎಂದು ಒತ್ತಿ ಹೇಳಿರುತ್ತದೆ (ಮುಂ–೧–೨–೧೨)

(೨) ಕೆಲವರು ತಮ್ಮನ್ನೇ ಪಂಡಿತರೆಂದು ತಿಳಿಯುತ್ತಾ ಆತ್ಮ ವಸ್ತುವಿಗೆ ಯಾವ ಆಕಾರವೂ ಇಲ್ಲವಾದ್ದರಿಂದ ಬುದ್ಧಿಗೆ ಹತ್ತುವುದಿಲ್ಲ ಆದ್ದರಿಂದ ಸಮ್ಯಜ್ಞಾನನಿಷ್ಠೆಯು ಸಂಪಾದಿಸಿಕೊಳ್ಳುವುದು ತುಂಬಾ ಕಷ್ಟ ಎನ್ನುವರು. ಇದೇನೋ ನಿಜವೇ. ಏಕೆಂದರೆ ಯಾರಿಗೆ ಗುರುಸಂಪ್ರದಾಯವಿಲ್ಲವೋ ಮತ್ತು (ಜೀವನದಲ್ಲಿ ಒಮ್ಮೆಯೂ) ವೇದಾಂತವನ್ನು ಕೇಳೇ ಇಲ್ಲವೋ, ಬಹಳವಾಗಿ ಹೊರಗಡೆಯಲ್ಲಿ ಆಸಕ್ತರಾದ ಬುದ್ಧಿಯವರಾಗಿರುತ್ತಾರೋ, ಪ್ರಮಾಣಗಳ ವಿಷಯಕ್ಕೆ ಸರಿಯಾಗಿ ಪರಿಶ್ರಮವನ್ನು ಪಟ್ಟಿಲ್ಲವೋ ಅವರಿಗೆ ಕಷ್ಟವೇ ಸರಿ. ಆದರೆ ಇದಕ್ಕೆ ವಿರುದ್ಧರಾದವರಿಗೆ ಲೌಕಿಕವಾದ ಗ್ರಾಹ್ಯಗ್ರಾಹಕ ವಸ್ತುವಿನಲ್ಲಿ ಸದ್ಬುದ್ಧಿಯುನ್ನು (ಇದೇ ಎಂಬ ಬುದ್ಧಿಯುನ್ನು) ಸಂಪಾದಿಸುವುದು ಕಷ್ಟವಾಗಿರುತ್ತದೆ. ಅವರಿಗೆ ಆತ್ಮಚೈತನ್ಯಕ್ಕಿಂತ ಬೇರೆಯಾಗಿ ಮತ್ತೊಂದು ವಸ್ತುವೇ ತೋರುವುದಿಲ್ಲ (ಗೀ.ಭಾ. ೧೮–೫೦)

(೩) ನಿಜ, ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳಿಂದ ಪರಮಾತ್ಮನನ್ನು ತಿಳಿಸಿಕೊಡುವುದಕ್ಕಾಗುವುದಿಲ್ಲ, ಆದರೆ ಆಗಮದಿಂದಲಾದರೋ ಆಗಿಯೇ ತೀರುತ್ತದೆ (ಕೇ. ೧–೪)

(೪) (ಅ) ಏವಂ ಸುವಿಜ್ಞೇಯ ಆತ್ಮಾ, ಆಗಮವತಾ ಆಚಾರ್ಯೇಣ ಅನನ್ಯತಯಾ ಪ್ರೋಕ್ತಃ || ಕಾ. ಭಾ. ೧-೨-೮,

(ಆ) ಯೇಯಮ್ ಆಗಮಪ್ರಭೂತಾ ಮತಿಃ, ತಾರ್ಕಿಕಾದನ್ಯೇನೈವ ಆಗಮಾಭಿಜ್ಞೇನ ಆಚಾರ್ಯೇಣ ಪ್ರೋಕ್ತಾ ಸತೀ ಸುಜ್ಞಾನಾಯ ಭವತಿ ||

ಕಾ.ಭಾ. ೧-೨-೯.

(೫) ತಸ್ಮಾತ್, ಅಸಂಪ್ರದಾಯವಿತ್ ಸರ್ವಶಾಸ್ತ್ರವಿದಪಿ ಮೂರ್ಖವದೇವ ಉಪೇಕ್ಷಣೀಯಃ || ಗೀ.ಭಾ. ೧೩-೨,

[ಅತ್ರ ಧ್ಯಾನೇನೇಶ್ವರಂ ಸಾಕ್ಷಾತ್ಕೃತ್ವಾ ತತ್ಸ್ವರೂಪಾವಸ್ಥೇನ ಮೋಕ್ಷಃ ಸಂಪಾದಯಿತವ್ಯಃ ಇತಿ ವದತಾಮ್ ಅದ್ವೈತಿನಾಮಪಿ ಮತಂ ನ ಸಾಂಪ್ರದಾಯಿಕಮಿತ್ಯುಕ್ತಮ್ || ]

**೯. ಭಾಷ್ಯೇ ದ್ರವಿಡಾಚಾರ್ಯಪರಾಮರ್ಶಃ - ಗೌಡಪಾದಾಚಾರ್ಯಾಣಾಮೇವೈಕೋ ಗ್ರಂಥೋ ಭಗವತ್ಪಾದೀಯಸಂಪ್ರದಾಯಸ್ಥಾನಾಮದ್ಯತ್ವೇ ಪೂರ್ಣತಯಾ**

---

(೪) ಹೀಗೆ ಆಗಮವಂತನಾದ ಆಚಾರ್ಯನು ಅನನ್ಯನಾಗಿ ಹೇಳಿದ್ದಾದರೆ ಸುಲಭವಾಗಿ ತಿಳಿಯಬಹುದಾಗಿದೆ (ಕಠ-೧-೨-೮). ಯಾವ ಈ ಆಗಮದಿಂದುಂಟಾಗುವ ತಿಳುವಳಿಕೆ ಇದೆಯೋ ಅದು ಆಗಮವನ್ನು ಬಲ್ಲವನಾದ ತಾರ್ಕಿಕನಿಗಿಂತ ಬೇರೆಯವನಾದ ಆಚಾರ್ಯನು ಹೇಳಿದಾಗಲೇ ಸುಲಭವಾಗಿ ಗೊತ್ತಾಗುತ್ತದೆ (ಕಠ. ೧-೨-೯).

(೫) ಆದ್ದರಿಂದ ಸಂಪ್ರದಾಯವನ್ನರಿಯದವನು ಎಲ್ಲಾ ಶಾಸ್ತ್ರವನ್ನರಿತವನಾದರೂ ಆತನನ್ನು ಮೂರ್ಖನಂತೆ ಉಪೇಕ್ಷೆಮಾಡಬೇಕು (ಗೀ.ಭಾ. ೧೩-೨) (ಈ ಸ್ಥಳದಲ್ಲಿ ಧ್ಯಾನವನ್ನು ಮಾಡಿ ಈಶ್ವರನನ್ನು ಸಾಕ್ಷಾತ್ಕರಿಸಿಕೊಂಡು ಅವನ ಸ್ವರೂಪದಲ್ಲಿ ನೆಲೆ ನಿಲ್ಲುವುದರ ಮೂಲಕ ಮೋಕ್ಷವನ್ನು ಹೊಂದಬೇಕು ಎಂದು ಹೇಳುತ್ತಿದ್ದ ಅದ್ವೈತಿಗಳ ಮತವನ್ನೇ ಸಾಂಪ್ರದಾಯಿಕ ಮತವಲ್ಲ ಎಂದು ಹೇಳಿರುತ್ತದೆ).

## ೯. ಭಾಷ್ಯದಲ್ಲಿ ದ್ರವಿಡಾಚಾರ್ಯರ ಪರಾಮರ್ಶೆ.

(೧) ಭಗವತ್ಪಾದರ ಸಂಪ್ರದಾಯದಲ್ಲಿದ್ದವರಪೈಕಿ ಗೌಡಪಾದಾಚಾರ್ಯರೊಬ್ಬರ ಗ್ರಂಥವೇ ಇಂದು ಪೂರ್ಣವಾಗಿ ಸಿಗುತ್ತದೆ. ಆದರೆ ಈ

ಉಪಲಭ್ಯತೇ | ಆಸನ್ನೇವ ಪರಮ್ ಅನ್ಯೇಽಪಿ ಏತತ್ಸಂಪ್ರದಾಯಸ್ಥಾಃ ಪೂರ್ವಾಚಾರ್ಯಾ ಇತ್ಯತ್ರ ಲಿಂಗಾನಿ ಸಂತಿ ಪ್ರಸ್ಥಾನತ್ರಯಭಾಷ್ಯೇಷು -

(೧) ಯೈರಿಮೇ ಗುರುಭಿಃ ಪೂರ್ವಂ ಪದವಾಕ್ಯಪ್ರಮಾಣತಃ |
ವ್ಯಾಖ್ಯಾತಾಃ ಸರ್ವವೇದಾಂತಾಸ್ತಾನ್ನಿತ್ಯಂ ಪ್ರಣತೋಽಸ್ಮ್ಯಹಮ್ ||

ಉದಾಹೃತಃ ಶ್ಲೋಕೋಽಯಂ ತೈತ್ತಿರೀಯಕಭಾಷ್ಯಪ್ರಾರಂಭಮಂಗಲವಾಕ್ಯಸ್ಥೋ ದ್ವಿತೀಯಃ | ಏತೇನ ಆಚಾರ್ಯೈಃ ಪ್ರಮಾಣೀಕೃತಾಃ ಪೂರ್ವಾಚಾರ್ಯಾಃ ಕೇಚಿತ್ ಸರ್ವೇಷಾಮಪಿ ವೇದಾಂತಾನಾಂ ವ್ಯಾಖ್ಯಾನಂ ಕೃತವಂತ ಇತ್ಯವಗಮ್ಯತೇ ||

(೨) ಅತ್ರ ಚ ಸಂಪ್ರದಾಯವಿದ ಆಖ್ಯಾಯಿಕಾಂ ಸಂಪ್ರಚಕ್ಷತೇ - ಕಶ್ಚಿತ್ ಕಿಲ ರಾಜಪುತ್ರೋ ಜಾತಮಾತ್ರ ಏವ ಮಾತಾಪಿತೃಭ್ಯಾಮ್ ಅಪವಿದ್ಧೋ ವ್ಯಾಧಗೃಹೇ ಸಂವರ್ಧಿತಃ | ಸೋಽಮುಷ್ಯವಂಶ್ಯತಾಮ್ ಅಜಾನನ್ ವ್ಯಾಧಜಾತಿಪ್ರತ್ಯಯೋ ವ್ಯಾಧಜಾತಿಕರ್ಮಾಣ್ಯೇವ ಅನುವರ್ತತೇ ನ ರಾಜಾಸ್ಮೀತಿ ರಾಜಜಾತಿ-

---

ಸಂಪ್ರದಾಯಕ್ಕೆ ಸೇರಿದವರಾದ ಇನ್ನೂ ಅನೇಕ ಹಿಂದಿನ ಆಚಾರ್ಯರು ಇದ್ದರು ಎಂಬುದಕ್ಕೆ ಪ್ರಸ್ಥಾನತ್ರಯಭಾಷ್ಯದಲ್ಲಿ ಗುರುತುಗಳು ಸಿಗುತ್ತವೆ. "(ಯೈರಿಮೇ ಗುರುಭಿಃ ಪೂರ್ವಂ ಪದವಾಕ್ಯಪ್ರಮಾಣತಃ। ವ್ಯಾಖ್ಯಾತಾಃ ಸರ್ವವೇದಾನ್ತಃ ತಾನ್ನಿತ್ಯಂ ಪ್ರಣತೋಽಸ್ಮ್ಯಹಮ್ ॥") "ಯಾವ ಗುರುಗಳು ಪದವಾಕ್ಯಪ್ರಮಾಣದಿಂದ ಹಿಂದೆ ವೇದಾಂತಗಳನ್ನು ವ್ಯಾಖ್ಯಾನವನ್ನು ಮಾಡಿರುತ್ತಾರೋ ಅಂಥಹವರನ್ನು ಎಂದೆಂದಿಗೂ ನಮಸ್ಕರಿಸುವೆನು". ಈ ಶ್ಲೋಕವನ್ನು ತೈತ್ತೀರಿಯಭಾಷ್ಯದ ಮಂಗಲಶ್ಲೋಕದಲ್ಲಿ ಎರಡನೆಯ ಶ್ಲೋಕವಾಗಿ ಉದಾಹರಿಸುತ್ತಾರೆ. ಇದರಿಂದ ಆಚಾರ್ಯರು ಪ್ರಮಾಣವನ್ನಾಗಿ ಮಾಡಿಕೊಂಡ ಕೆಲವು ಹಿಂದಿನ ಆಚಾರ್ಯರೂ ಸಹ ಎಲ್ಲಾ ಉಪನಿಷತ್ತು-ಗಳಿಗೂ ವ್ಯಾಖ್ಯಾನವನ್ನು ಮಾಡಿದ್ದರು ಎಂದು ಗೊತ್ತಾಗುತ್ತದೆ.

(೨) ಇಲ್ಲಿ ಸಂಪ್ರದಾಯವನ್ನು ಬಲ್ಲವರು ಕಥೆಯನ್ನು ಹೇಳುತ್ತಾರೆ. ಒಬ್ಬಾನೊಬ್ಬ ರಾಜಕುಮಾರನು ಹುಟ್ಟಿದ ಕೂಡಲೇ ತಂದೆ ತಾಯಿಗಳಿಂದ ಬೇರ್ಪಟ್ಟವನಾಗಿ ಬೇಡರ ಮನೆಯಲ್ಲಿ ಬೆಳೆದವನಾದ. ಆತ ತಾನು ಇಂತಹ ವಂಶದವನೆಂಬುದನ್ನು ತಿಳಿಯದೇ ಬೇಡರ ಜಾತಿಯ ಅರಿವನ್ನು ಹೊಂದಿದವನಾಗಿ ಬೇಡ ಜಾತಿಯ ಕೆಲಸವನ್ನೇ ಮಾಡುತ್ತಿದ್ದ. ತನ್ನನ್ನು ರಾಜನಾಗಿದ್ದೇನೆಂದು ತಿಳಿದು ರಾಜಜಾತಿಯ ಕೆಲಸವನ್ನು ಮಾಡುತ್ತಿರಲಿಲ್ಲ.

ಕರ್ಮಾಣ್ಯನುವರ್ತತೇ | ಯದಾ ಪುನಃ ಕಶ್ಚಿತ್ ಪರಮಕಾರುಣಿಕೋ ರಾಜಪುತ್ರಸ್ಯ ರಾಜಶ್ರೀಪ್ರಾಪ್ತಿಯೋಗ್ಯತಾಂ ಜಾನನ್ ಅಮುಷ್ಯಪುತ್ರತಾಂ ಬೋಧಯತಿ "ನ ತ್ವಂ ವ್ಯಾಧಃ ಅಮುಷ್ಯ ರಾಜ್ಞಃ ಪುತ್ರಃ ಕಥಂಚಿದ್ ವ್ಯಾಧಗೃಹಮನುಪ್ರವಿಷ್ಟಃ" ಇತಿ | ಸ ಏವಂ ಬೋಧಿತಃ, ತ್ಯಕ್ತ್ವಾ ವ್ಯಾಧಜಾತಿಪ್ರತ್ಯಯಕರ್ಮಾಣಿ ಪಿತೃಪೈತಾಮಹೀಮ್ ಆತ್ಮನಃ ಪದವೀಮ್ ಅನುವರ್ತತೇ "ರಾಜಾಽಹಮಸ್ಮಿ" ಇತಿ | ತಥಾ ಕಿಲಾಯಂ ಪರಸ್ಮಾದ್ ಅಗ್ನಿವಿಸ್ಫುಲಿಂಗಾದಿವದ್ ತಜ್ಜಾತಿರೇವ ವಿಭಕ್ತಃ, ಇಹ ದೇಹೇಂದ್ರಿಯಾದಿಗಹನೇ ಪ್ರವಿಷ್ಟಃ ಅಸಂಸಾರೀ ಸನ್ ದೇಹೇಂದ್ರಿಯಾದಿ-ಸಂಸಾರಧರ್ಮಮನುವರ್ತತೇ, "ದೇಹೇಂದ್ರಿಯಸಂಘಾತೋಽಸ್ಮಿ, ಕೃಶಃ, ಸ್ಥೂಲಃ , ಸುಖೀ, ದುಃಖೀ" ಇತಿ ಪರಮಾತ್ಮತಾಮ್ ಅಜಾನನ್ ಆತ್ಮನಃ | "ನ ತ್ವಮೇತದಾತ್ಮಕಃ, ಪರಮೇವ ಬ್ರಹ್ಮಾಸಿ ಅಸಂಸಾರೀ" ಇತಿ ಪ್ರತಿಬೋಧಿತ ಆಚಾರ್ಯೇಣ ಹಿತ್ವಾ ಏಷಣಾತ್ರಯಾನುವೃತ್ತಿಂ "ಬ್ರಹ್ಮೈವಾಸ್ಮಿ" ಇತಿ ಪ್ರತಿಪದ್ಯತೇ || ಬೃ.ಭಾ. ೨-೧-೨೦,

---

ಯಾವಾಗಲೋ ಒಮ್ಮೆ ಒಬ್ಬಾನೊಬ್ಬ ಪರಮಕಾರುಣಿಕನಾದವನು, ಈ ರಾಜಕುಮಾರನು ರಾಜ್ಯಶ್ರೀಪ್ರಾಪ್ತಿಗೆ ತಕ್ಕವನೆಂಬುದನ್ನು ತಿಳಿದು (ಆತನನ್ನು ಕುರಿತು) ಇಂಥ (ರಾಜನ) ಮಗನೆಂಬುದಾಗಿ ತಿಳಿಸುತ್ತಾನೆ. (ಅಪ್ಪಾ , ಮಗು) "ನೀನು ವ್ಯಾಧನಲ್ಲ", "ಇಂಥ ರಾಜನ ಕುಮಾರನು", ಹೇಗೋ ಬೇಡರ ಮನೆಗೆ ಬಂದು ಸೇರಿರುತ್ತೀಯೆ" ಎಂಬುದಾಗಿ ಹೇಳುತ್ತಾನೆ. ಅದರಿಂದ (ನಿಜವನ್ನು) ತಿಳಿದವನಾಗಿ ವ್ಯಾಧಜಾತಿಗೆ ಸಂಬಂಧಪಟ್ಟ ಅರಿವು ಮತ್ತು ಕೆಲಸಗಳನ್ನೂ ಸಹ ಬಿಟ್ಟು ತಂದೆ ಅಜ್ಜಂದಿರರಿಗೆ ಸಂಬಂಧಪಟ್ಟ ತನ್ನ ಪದವಿಯಾದ (ರಾಜ್ಯವನ್ನು ಪಡೆದು) ರಾಜನಾಗಿರುವೆನು ಎಂದು ತಿಳಿದ. ಅದೇ ರೀತಿ ಈ ಜೀವನೂ ಸಹ ಪರಮಾತ್ಮನಿಂದ ಬೆಂಕಿಯ ಕಿಡಿಯಂತೆ ಅದೇ ಸ್ವರೂಪದವನಾಗಿ ಬೇರ್ಪಟ್ಟವನಂತೆ ಈ ದೇಹೇಂದ್ರಿಯವೆಂಬ ಕಾಡಿನೊಳಗೆ ಪ್ರವೇಶಿಸಿರುತ್ತಾನೆ. ತಾನು ಅಸಂಸಾರಿಯಾಗಿದ್ದರೂ ದೇಹೇಂದ್ರಿಯವೇ ಮೊದಲಾದ ಸಂಸಾರಧರ್ಮವನ್ನು ಅನುಸರಿಸಿರುತ್ತಾನೆ. ನಾನೇ ದೇಹೇಂದ್ರಿಯಸಂಘಾತದ ರೂಪದವನಾಗಿದ್ದೇನೆ, ಕೃಶನೂ, ಸ್ಥೂಲನು, ಸುಖಿ, ದುಃಖಿ ಎಂದು ತನ್ನ ಪರಮಾತ್ಮತೆಯನ್ನು ತಿಳಿಯದೇ ಇರುತ್ತಾನೆ. ಆಚಾರ್ಯನಾದವನು ನೀನು ಈ ರೀತಿಯಾಗಿರತಕ್ಕವನಲ್ಲ, ಪರಬ್ರಹ್ಮನೇ ಆಗಿರುವೆ, ಸಂಸಾರಿಯಲ್ಲ ಎಂದು ತಿಳಿಸಿದಾಗ ಏಷಣಾತ್ರಯವನ್ನೆಲ್ಲಾ ಬಿಟ್ಟು ಬ್ರಹ್ಮನೇ ಆಗಿದ್ದೇನೆಂದು ತಿಳಿಯುತ್ತಾನೆ. (ಬೃ.ಭಾ. ೨–೧–೨೦).

ಅತ್ರಾನಂದಗಿರಿಟೀಕಾ -

(೧) "ತತ್ತ್ವಮಸ್ಯಾದಿವಾಕ್ಯಮ್ ಐಕ್ಯಪರಮ್ | ತಚ್ಛೇಷಃ ಸೃಷ್ಟ್ಯಾದಿವಾಕ್ಯಮ್ ಇತಿ ಉಕ್ತೇಽರ್ಥೇ ದ್ರವಿಡಾಚಾರ್ಯಸಂಮತಿಮಾಹ" ||

ಆ.ಗಿ., ಆ.ಬೃ.ಭಾ.

[ಅತ್ರೋದಾಹೃತೋ ದ್ರವಿಡಾಚಾರ್ಯೋ ರಾಮಾನುಜಭಾಷ್ಯೇ ಪರಾಮೃಷ್ಟಾದ್ ದ್ರವಿಡಾಚಾರ್ಯಾದಭಿನ್ನಃ ಇತಿ ಭ್ರಾಂತಾಃ ಕೇಚಿತ್ ಯಥೋಕ್ತಖ್ಯಾಯಿಕಾ ನಿರ್ವಿಶೇಷಾತ್ಮವಾದಿಮತೇ ನ ಸಂಭವತೀತ್ಯಾಕ್ಷಿಪಂತಿ | ವಿಸ್ಫುಲಿಂಗವಾಕ್ಯಾನಂತರಂ "ತಸ್ಯೋಪನಿಷತ್ ಸತ್ಯಸ್ಯ ಸತ್ಯಮಿತಿ" ಇತಿ ವಾಕ್ಯೇ, "ಅಥ ನಾಮಧೇಯಮ್" ಇತ್ಯಾದೌ ಚ ನಿರ್ವಿಶೇಷಸ್ಯ ವಿವಕ್ಷಾ ನ ಘಟೇತ ಇತ್ಯಭಿಪ್ರೇತ್ಯೈವ ದ್ರಮಿಡಾಚಾರ್ಯೈಃ ರಾಜಕುಮಾರನಯಃ ಪ್ರದರ್ಶಿತಃ | ನ ಹಿ ರಾಜ್ಞಃ ತತ್ಪುತ್ರಸ್ಯ ಚೈಕ್ಯಂ ಕಸ್ಯಚಿತ್ ಸಂಮತಮ್, ನ ವಾ ರಾಜ್ಞಃ ಸ್ಥಿತಿದಶಾಯಾಂ ತತ್ಪುತ್ರಸ್ಯಾಸಮರ್ಥಸ್ಯ ರಾಜ್ಯಂ ಸಂಭವತಿ| ರಾಜ್ಯಸಂಭವೇಽಪಿ ಧರ್ಮ ಏವ ಪ್ರತಿಪನ್ನಃ ಸ್ಯಾತ್, ನ ತು ಜೀವಬ್ರಹ್ಮಾಭೇದಪ್ರತಿಪತ್ತಿಃ ಸಂಭವತಿ (ಗೂ.ಸಂ.) ಇತಿ | ತದ್ ವಿಸಂಗತಂ ಚೋದ್ಯಮ್ | ನ

---

ಈ ಜಾಗದಲ್ಲಿ ಆನಂದಗಿರಿಗಳ ಟೀಕೆಯು ಈ ರೀತಿ ಇರುತ್ತದೆ.

"ತತ್ವಮಸಿಯೇ ಮುಂತಾದ ವಾಕ್ಯಗಳು ಐಕ್ಯವನ್ನು ಹೇಳುವುದರಲ್ಲಿ ತಾತ್ಪರ್ಯವಾಗಿವೆ. ಸೃಷ್ಟಿಯೇ ಮುಂತಾದ ವಾಕ್ಯವಾದರೂ ಅದಕ್ಕೆ ಶೇಷವಾಗಿದೆ" ಎಂದು ಹೇಳಿರುವ ವಿಷಯಕ್ಕೆ ದ್ರವಿಡಾಚಾರ್ಯರ ಒಪ್ಪಿಗೆಯನ್ನು ತಿಳಿಸುತ್ತಾರೆ – ಎಂದಿದೆ (ಆ.ಟಿ)

ಇಲ್ಲಿ ಉದಾಹರಿಸಿದ್ದಾದ ದ್ರವಿಡಾಚಾರ್ಯರು ರಾಮಾನುಜಭಾಷ್ಯದಲ್ಲಿ ಪರಾಮೃಷ್ಟರಾದ ದ್ರಮಿಡಾಚಾರ್ಯರಿಗಿಂತ ಬೇರೆ ಅಲ್ಲ ಎಂದು ಕೆಲವರು ಭ್ರಾಂತರಾಗಿ ಮೇಲೆ ಉದಾಹರಿಸಿದ್ದಾದ ಕಥೆಯು ನಿರ್ವಿಶೇಷಾತ್ಮವಾದಿಗಳ ಮತಪ್ರಕಾರವಾಗಿ ಹೊಂದುವುದಿಲ್ಲ ಎಂಬು ಆಕ್ಷೇಪಿಸುತ್ತಾರೆ. ವಿಸ್ಫುಲಿಂಗವಾಕ್ಯವಾದ ಮೇಲೆ ಅವನಿಗೆ ರಹಸ್ಯನಾಮವು "ಸತ್ಯಕ್ಕೂ-ಸತ್ಯನಾಗಿರುತ್ತಾನೆಂಬ" ವಾಕ್ಯದಲ್ಲಿ "ಇನ್ನು ನಾಮಧೇಯವು" ಎಂಬಿದೇ ಮೊದಲಾದ ವಾಕ್ಯದಲ್ಲಿ ನಿರ್ವಿಶೇಷವಾದ ಬ್ರಹ್ಮದ ವಿವಕ್ಷೆಇದೆ ಎಂಬುದು ಹೊಂದುವುದಿಲ್ಲ, ಎಂಬೀ ಅಭಿಪ್ರಾಯಕ್ಕನುಗುಣವಾಗಿ ರಾಜಕುಮಾರನ ಕಥೆಯನ್ನು ದ್ರಮಿಡಾಚಾರ್ಯರು ತೋರಿಸಿರುತ್ತಾರೆ. ರಾಜನಿಗೂ ಆತನ ಮಗನಿಗೂ ಐಕ್ಯವು ಸಮ್ಮತವಾದದಲ್ಲವಷ್ಟೇ ? ರಾಜನು ಬದುಕಿರುವಾಗ

ಹಿ ರಾಜಪುತ್ರಾಖ್ಯಾಯಿಕಾಯಾಂ ರಾಜಪುತ್ರಸ್ಯ ರಾಜ್ಞಾ ಸಹ ಏಕತ್ವಂ ವಿವಕ್ಷ್ಯತೇ ಕಾರುಣಿಕೋಪದೇಶೇನ ಕಿಂ ತು ವ್ಯಾಧತ್ವಬಾಧನೇನಾಮುಷ್ಯಪುತ್ರತಾ ರಾಜಶ್ರೀ-ಪ್ರಾಪ್ತಿಯೋಗ್ಯತ್ವಂ ಚ | ನ ಚ ರಾಜ್ಞೋ ಜೀವತಃ ಸ್ಥಿತಿರಸ್ಥಿತಿರ್ವಾ ಪರಾಮೃಷ್ಟಂ ದೃಶ್ಯತೇ ಶಾಂಕರಭಾಷ್ಯಸ್ಥಾಖ್ಯಾಯಿಕಾಯಾಮ್ ಇತಿ ||

ಇಮೇ ತು ದ್ರವಿಡಾಚಾರ್ಯಾಃ ಬೃಹದಾರಣ್ಯಕಭಾಷ್ಯೇ ಉತ್ಪತ್ತ್ಯಾದಿಶ್ರುತೀನಾ-ಮಾತ್ಮೈಕತ್ವಪರತ್ವವಾದಸ್ಯ ಸಾಂಪ್ರದಾಯಿಕತ್ವಪ್ರದರ್ಶನಾರ್ಥಮುದಾಹೃತಾ ನಿರುಪಾಧಿಕಬ್ರಹ್ಮವಾದಿನೋ ಬ್ರಹ್ಮಣಸ್ತಥ್ಯತ ಏವ ರೂಪವತ್ತ್ವಮನುಮನ್ಯಮಾನಾತ್ ದ್ರಮಿಡಾಚಾರ್ಯಾದ್ ಭಿನ್ನಾ ಏವ ಭವಿತುಮರ್ಹಂತೀತಿ ಸ್ಫುಟಮ್ | ರಾಮಾನುಜೋ-ದಾಹೃತದ್ರಮಿಡೋ ಹಿ ಏವಂ ವದತಿ ಸ್ಮ -

(೨) ನ ವಾ ಮಾಯಾಮಾತ್ರಮ್ ಅಂಜಸೈವ ವಿಶ್ವಸೃಜೋ ರೂಪಮ್ | ತತ್ತು

---

ಅವನ ಮಗನಿಗೆ (ರಾಜ್ಯಭಾರವನ್ನು ಮಾಡುವ) ಸಾಮರ್ಥ್ಯವಿಲ್ಲದಿರುವಾಗ ಅವನಿಗೆ ರಾಜ್ಯವೆಂಬುದು ಹೊಂದುವುದಿಲ್ಲವಷ್ಟೇ?

ರಾಜ್ಯವು ಹೊಂದುವುದಾದರೂ ರಾಜನ ಧರ್ಮವು ಮಾತ್ರ ಹೊಂದೀತೇ ಹೊರತು (ಹಿಂದಿನ ರಾಜನೇ ಆಗುವುದಿಲ್ಲ). ಜೀವ ಬ್ರಹ್ಮರಿಗೆ ಅಭೇದವು ಹೊಂದುವುದಿಲ್ಲ. ಇದು ಅಸಂಬದ್ಧವಾದ ಆಕ್ಷೇಪವು. ರಾಜಪುತ್ರನ ಕಥೆಯಲ್ಲಿ ರಾಜಪುತ್ರನಿಗೆ ರಾಜನೊಡನೆ ಏಕತ್ವವನ್ನು ಕಾರುಣಿಕನ ಉಪದೇಶದಿಂದ ಉಂಟುಮಾಡಿಕೊಡಬೇಕೆಂಬ ವಿವಕ್ಷೆಯು ಇಲ್ಲವಷ್ಟೇ? ಮತ್ತೇನೆಂದರೆ – ವ್ಯಾಧತ್ವವನ್ನು ಅಲ್ಲಗಳೆಯುವುದರ ಮೂಲಕ ಇಂತಹವನ ಮಗನಾಗಿದ್ದಾ-ನೆಂತಲೂ ರಾಜಶ್ರೀ ಪ್ರಾಪ್ತಿಗೆ ಯೋಗ್ಯನಾಗಿದ್ದಾನೆಂತಲೂ ತಿಳಿಸಿದೆ, ಅಷ್ಟೇ.

ಶಂಕರಭಾಷ್ಯದಲ್ಲಿದ್ದ ಕಥೆಯಲ್ಲಿ ಬದುಕಿರುವ ರಾಜನ ಸ್ಥಿತಿಯನ್ನಾಗಲೀ ಅಸ್ಥಿತಿಯನ್ನಾಗಲೀ ಪರಾಮರ್ಶೆ ಮಾಡಿರುವುದಿಲ್ಲ, ಅಲ್ಲವೇ ?

ಈ ದ್ರವಿಡಾಚಾರ್ಯರಾದರೋ – ಬೃಹದಾರಣ್ಯಕ ಭಾಷ್ಯದಲ್ಲಿ ಉತ್ಪತ್ತ್ಯಾದಿ ಶ್ರುತಿಗಳನ್ನು ಆತ್ಮನೊಬ್ಬನೇ ಇರತಕ್ಕವನೆಂದು ಹೇಳುವ ವಾದವು ಸಾಂಪ್ರದಾಯಿಕವಾಗಿದೆ ಎಂಬುದನ್ನು ತೋರಿಸುವುದಕ್ಕೆ ಉದಾಹರಿಸಲ್ಪಟ್ಟಿರು-ತ್ತಾರೆ. ಇವರು ನಿರುಪಾಧಿಕ ಬ್ರಹ್ಮವಾದಿಗಳು, ಇವರು ಬ್ರಹ್ಮವು ನಿಜವಾಗಿಯೇ ರೂಪವುಳ್ಳದ್ದಾಗಿದೆ ಎಂದು ಅನುಮಾನವನ್ನು ಮಾಡುವವರಾದ

> ನ ಚಕ್ಷುಷಾ ಗ್ರಾಹ್ಯಮ್, ಮನಸಾ ತ್ವಕಲುಷೇಣ ಸಾಧನಾಂತರವತಾ ಗೃಹ್ಯತೇ, "ನ ಚಕ್ಷುಷಾ ಗೃಹ್ಯತೇ ನಾಪಿ ವಾಚಾ, ಮನಸಾ ತು ವಿಶುದ್ಧೇನ" ಇತಿ ಶ್ರುತೇಃ | ನ ಹ್ಯರೂಪಾಯಾ ದೇವತಾಯಾಃ ರೂಪಮುಪದಿಶ್ಯತೇ, ಯಥಾಭೂತವಾದಿ ಹಿ ಶಾಸ್ತ್ರಮ್ | "ಯಥಾ ಮಾಹಾರಜನಂ ವಾಸಃ", "ವೇದಾಹಮೇತಂ ಪುರುಷಂ ಮಹಾಂತಮ್ | ಆದಿತ್ಯವರ್ಣಮ್" ಇತಿ ಪ್ರಕರಣಾಂತರನಿರ್ದೇಶಾತ್ ||
>
> ವೇ.ಸಾ. ೧-೧-೨೧,

ಅತ್ರ "ಸ್ಯಾತ್ ಪರಮೇಶ್ವರಸ್ಯಾಪಿ ಇಚ್ಛಾವಶಾತ್, ಮಾಯಾಮಯಂ ರೂಪಮ್, ಸಾಧಕಾನುಗ್ರಹಾರ್ಥಮ್" (ಸೂ.ಭಾ. ೧-೧-೨೦,) ಇತಿ ಭಗವತ್ಪಾದೈರ್ಲಿಖಿತಂ ದೃಷ್ಟ್ವಾ ತದಸಹಮಾನೇನ ಅನೇನ ದ್ರಮಿಡಾಚಾರ್ಯೇಣ ಪಾರಮಾರ್ಥಿಕರೂಪವತ್ತ್ವಮ್ ಉಪಪಿಪಾದಯಿಷತಾ ಇತ್ಥಮ್ ಅಲೇಖಿ - ಇತಿ ಬಲವತೀ ಸಂಭಾವನಾ ಅಸ್ತಿ | ಯತೋ ನಾನ್ಯತ್ರ ಭಗವತ್ಪಾದೀಯಭಾಷ್ಯಾತ್ ಕೇನಚಿನ್ಮಾಯಾಮಯಂ ರೂಪಮೀಶ್ವರಸ್ಯ ಇತಿ ಪ್ರತಿಪಾದಿತಮ್ ಉಪಲಭ್ಯತೇ, ಯೇನ ತದೇವಾನೂದಿತಂ ಸ್ಯಾದಿತಿ ಸಂಭಾವ್ಯೇತ | ನ ಭಗವತ್ಪಾದೈಸ್ತಚ್ಛಿಷ್ಯೈರ್ವಾರ್ತಿಕಕಾರೈರ್ವಾ ಮನಸೈವ ಗ್ರಾಹ್ಯಂ ಭಗವದ್ರೂಪಂ ಸತ್ಯಮೇವ ಇತಿ ಶಕ್ಯಃ

---

ದ್ರಮಿಡಾಚಾರ್ಯರಿಗಿಂತ ಭಿನ್ನರಾಗಿರುವುದಕ್ಕೇ ಅರ್ಹರಾಗಿರುತ್ತಾರೆ ಎಂಬುದು ಸ್ಪಷ್ಟ. ರಾಮಾನುಜಾಚಾರ್ಯರು ಉದಾಹರಿಸಿರುವ ದ್ರಮಿಡಾಚಾರ್ಯರು ಈ ರೀತಿ ಹೇಳುತ್ತಾರೆ. ಪರಮಾತ್ಮನಿಗೆ ಮುಖ್ಯಾರ್ಥದಲ್ಲಿ ಮಾಯಾಮಯವಾದ ರೂಪವೆಂಬುದಿಲ್ಲ. ಅದು ಕಣ್ಣಿಗೆ ಕಾಣಿಸುವುದಿಲ್ಲ. ಆದರೆ ನಿಷ್ಕಲ್ಮಶವಾದ ಸಾಧನಾಂತರವನ್ನು ಹೊಂದಿದ ಮನಸ್ಸಿಗೆ ತೋರಿಬರುತ್ತಾನೆ. "ಕಣ್ಣಿಗಾಗಲೀ ವಾಕ್ಕಿಗಾಗಲೀ ತೋರಿಬರುವುದಿಲ್ಲ", ಪರಿಶುದ್ಧವಾದ ಮನಸ್ಸಿಗೆ ತೋರಿಬರುತ್ತಾನೆಂದು ಶ್ರುತಿ ಇದೆ. ದೇವತೆಗೆ ರೂಪವೇ ಇಲ್ಲವಾದರೆ ಸತ್ಯವನ್ನು ಹೇಳುವ ಶ್ರುತಿಯು ರೂಪವನ್ನು ಹೇಳುವುದಿಲ್ಲ. "ಹೇಗೆ ಅರಿಶಿಣ ಬಣ್ಣದ ಬಟ್ಟೆ ಇದೆಯೋ", " ಮಹಾನ್ತನಾದ ಈ ಪುರುಷನನ್ನು ಅರಿತಿರುವೆನು", " ಆದಿತ್ಯವರ್ಣನಾಗಿರುತ್ತಾನೆ" ಎಂದು ಬೇರೆ ಪ್ರಕರಣದಲ್ಲಿ ಹೇಳಿರುತ್ತದೆ. (ವೇ.ಸಾ ೧-೧-೨೧)

ಇಲ್ಲಿ – "ಪರಮೇಶ್ವರನಿಗೂ ತನ್ನ ಇಚ್ಛೆಗೆ ಅನುಗುಣವಾಗಿ ಸಾಧಕರಿಗೆ ಅನುಗ್ರಹಕ್ಕಾಗಿ ಮಾಯಾಮಯವಾದ ರೂಪವಿರಬಹುದು" (ಸೂ.ಭಾ. ೧-೧-೨೦) ಎಂದು ಭಾಷ್ಯಕಾರರು ಬರೆದಿರುವುದನ್ನು ಸಹಿಸದೇ ಇರುವವರಾದ

ಕ್ವಚಿದನೂದ್ಯ ಖಂಡಿತೋಽಸ್ತಿ | ಅತಃ ಸಿದ್ಧಮಿದಂ ಯದಸೌ ದ್ರಮಿಡಾಚಾರ್ಯೋ ಭಗವತ್ಪಾದೇಭ್ಯೋಽರ್ವಾಚೀನ ಏವೇತಿ ||

ಅಪಿ ಚೇಮೋ ದ್ರವಿಡಾಚಾರ್ಯೋ ನಿರ್ವಿಶೇಷಾತ್ಮವಾದಿನ ಏವೇತ್ಯತ್ರ ಸುನಿಶ್ಚಾಯಕಂ ಪ್ರಮಾಣಾಂತರಮಪ್ಯಸ್ತಿ | ಯತ್ಕಾರಣಂ "ನ ನಿರೋಧೋ ನ ಚೋತ್ಪತ್ತಿಃ" (ಗೌ.ಕಾ. ೨-೩೨) ಇತಿ ಕಾರಿಕಾಭಾಷ್ಯೇ ಇದಂ ವಾಕ್ಯಂ ವರ್ತತೇ -

> (೩) ತಸ್ಮಾತ್ ನಿರ್ವಿಶೇಷ ಏವಾತ್ಮನಿ ಸುಖಿತ್ವಾದಯೋ ವಿಶೇಷಾಃ ಕಲ್ಪಿತಾಃ| ಯತ್ತು ಅಸುಖಿತ್ವಾದಿಶಾಸ್ತ್ರಮಾತ್ಮನಃ ತತ್ ಸುಖಿತ್ವಾದಿವಿಶೇಷ-ನಿವೃತ್ತ್ಯರ್ಥಮೇವೇತಿ ಸಿದ್ಧಮ್ | "ಸಿದ್ಧಂ ತು ನಿವರ್ತಕತ್ವಾತ್" ಇತ್ಯಾಗಮವಿದಾಂ ಸೂತ್ರಮ್ || ಆ.ಗೌ.ಕಾ.ಭಾ. ೨-೩೨,

---

ದ್ರಮಿಡಾಚಾರ್ಯರು ಆತನಿಗೂ ಪಾರಮಾರ್ಥಿಕವಾದ ರೂಪವುಂಟೆಂದು ಉಪಪಾದನೆ ಮಾಡುವುದಕ್ಕೆ ಇಷ್ಟಪಟ್ಟುಕೊಂಡು ಈ ರೀತಿ ಬರೆದಿರುತ್ತಾರೆಂದು ಬಲವಾದ ಸಂಭಾವನೆ ಇದೆ. ಏಕೆಂದರೆ – ಶ್ರೀ ಶಂಕರಚಾರ್ಯರಲ್ಲದೆ ಬೇರೆ ಯಾರೂ, "ಭಗವಂತನಿಗೆ ಇರುವ ರೂಪವು ಮಾಯಾಮಯವಾದದ್ದು" ಎಂದು ಹೇಳಿಲ್ಲ. ಹಾಗಿದಿದ್ದರೆ ಬೇರೆಯವರ ಅನುವಾದವಿದೆಂದು ಊಹಿಸಬಹುದಾಗಿತ್ತು. ಆಚಾರ್ಯರಾಗಲೀ ಅವರ ಶಿಷ್ಯರಾದ ಸುರೇಶ್ವರಾಚಾರ್ಯರಾಗಲೀ ಮನಸ್ಸಿಗೆ ತೋರಿಬರುವ ಭಗವದ್ರೂಪವು ಸತ್ಯವಾದದ್ದೇ ಎಂಬ ಪಕ್ಷವನ್ನು ಅನುವಾದಮಾಡಿಕೊಂಡು ಖಂಡಿಸಿಲ್ಲ. ಆದ್ದರಿಂದ ಯಾವ ಈ ದ್ರಮಿಡಾಚಾರ್ಯರಿದ್ದಾರೆ, ಅವರು ಭಗವತ್ಪಾದರಿಗಿಂತ ಈಚಿನವರೇ• ಆಗಿರುತ್ತಾರೆ.

ಅಷ್ಟೇ ಅಲ್ಲ, ದ್ರವಿಡಾಚಾರ್ಯರು (ಎಂಬುವರು ಯಾರಿದ್ದಾರೆ) ಅವರು ನಿರ್ವಿಶೇಷಾತ್ಮವಾದಿಗಳೇ ಆಗಿರುತ್ತಾರೆ ಎಂಬ ವಿಷಯಕ್ಕೆ ನಿರ್ಣಯಾತ್ಮಕವಾದ ಬೇರೊಂದು ಪ್ರಮಾಣವೂ ಸಹ ಇರುತ್ತದೆ. ಹೇಗೆಂದರೆ "ನ ನಿರೋಧೋ ನ ಚೋತ್ಪತ್ತಿಃ" ಗೌ.ಕಾ. ೨–೩೨ ಎಂಬ ಕಾರಿಕಾ ಭಾಷ್ಯದಲ್ಲಿ ಈ ವಾಕ್ಯವಿರುತ್ತದೆ.

೩) ಆದ್ದರಿಂದ ನಿರ್ವಿಶೇಷವೇ ಆಗಿರುವ ಆತ್ಮನಲ್ಲಿ ಸುಖಿತ್ವಾದಿವಿಶೇಷಗಳು ಕಲ್ಪಿತವಾಗಿವೆ. ಇನ್ನು "ಅಸುಖಿಯಾಗಿದ್ದಾನೆ ಆತ್ಮನು" ಎಂಬೀ

ಅತ್ರಾನಂದಗಿರಿರ್ವ್ಯಾಚಷ್ಟೇ -

(೩) ಉಕ್ತೇಽರ್ಥೇ ದ್ರವಿಡಾಚಾರ್ಯಸಂಮತಿಮಾಹ - ಸಿದ್ಧಂ ತ್ವಿತಿ ||

ಇತಿ | ಅತೋ ವ್ಯಕ್ತಮೇತದ್ ಯತ್ ತತ್ತ್ವಮಸೀತಿ ವಾಕ್ಯಸ್ಯ ಜೀವಸ್ಯಾದ್ವಿತೀಯ-ನಿರ್ವಿಶೇಷಬ್ರಹ್ಮತಾದಾತ್ಮ್ಯಾವಬೋಧಕತ್ವಮಾತಿಷ್ಠಮಾನಾ ಇಮೇ ಪ್ರಾಚೀನಾ-ಚಾರ್ಯಾ ಅನ್ಯೇ ಏವ ವಿಶಿಷ್ಟಾದ್ವೈತಿದ್ರಮಿಡಾಚಾರ್ಯಾದಿತಿ | ಅತ ಏವ ಸ್ಯಾನ್ನೂನಂ ಶ್ರೀರಾಮಾನುಜಾಚಾರ್ಯೋ ರಾಜಪುತ್ರಾಖ್ಯಾಯಿಕಾಂ ಪ್ರಾಚೀನದ್ರವಿಡಾಚಾರ್ಯೋ-ಪನ್ಯಸ್ತಾಂ ಅನ್ಯಥೈವ ಸ್ವಸಂಪ್ರದಾಯಾನುಗುಣಂ ವಿಪರಿಣಮಯ್ಯ ವರ್ಣಯಿತುಂ ಪ್ರವವೃತೇ ಶ್ರೀಭಾಷ್ಯೇ -

---

ಶಾಸ್ತ್ರವಾದರೋ ಅದು ಸುಖಿತ್ವವೇ ಮುಂತಾದ ವಿಶೇಷಗಳನ್ನು ಕಳೆಯುವುದಕ್ಕಾಗಿಯೇ ಬಂದಿರುತ್ತದೆ ಎಂಬುದು ಸಿದ್ಧವಾಗುತ್ತದೆ. "ಸಿದ್ಧಂ ತು ನಿವರ್ತಕತ್ವಾತ್" (ಶಾಸ್ತ್ರ ಪ್ರಾಮಾಣ್ಯವು) ಆತ್ಮನ ವಿಷಯಕ್ಕೆ ಸಿದ್ಧವಾಯಿತು. ಏಕೆಂದರೆ ಅದರದ್ದಲ್ಲದ್ದನ್ನು ಶಾಸ್ತ್ರವು ಕಳೆದುಹಾಕುತ್ತದೆ-ಯಾದ್ದರಿಂದ ಎಂದು ಸಂಪ್ರದಾಯವನ್ನು ಬಲ್ಲವರ ಸೂತ್ರವಿರುತ್ತದೆ.

ಇಲ್ಲಿ ಆನಂದಗಿರಿಗಳು (ಈ ರೀತಿ) ವ್ಯಾಖ್ಯಾನಿಸಿರುತ್ತಾರೆ. "ಮೇಲೆ ಹೇಳಿದ ವಿಷಯಕ್ಕೆ ದ್ರವಿಡಾಚಾರ್ಯರ ಒಪ್ಪಿಗೆಯನ್ನೂ(ಭಾಷ್ಯಕಾರರು) ಹೇಳುತ್ತಾರೆ" ಎಂದು ಇದೆ.

ಆದ್ದರಿಂದ ತತ್ವಮಸಿ ಎಂಬ ವಾಕ್ಯವು ಜೀವನಿಗೆ ಅದ್ವಿತೀಯವಾದ ನಿರ್ವಿಶೇಷವಾದ ಬ್ರಹ್ಮದೊಡನೆ ತಾದಾತ್ಮ್ಯವನ್ನು ಹೇಳುತ್ತದೆ ಎಂದು ಹೇಳುತ್ತಿರುವವರಾದ ಈ ಪ್ರಾಚೀನರಾದ (ದ್ರವಿಡಾಚಾರ್ಯರು) ವಿಶಿಷ್ಟಾದ್ವೈತಿಗಳಾದ ದ್ರಮಿಡಾಚಾರ್ಯರಿಗಿಂತ ಬೇರೆಯವರೇ ಎಂಬುದು ಸ್ಪಷ್ಟವಾಗಿದೆ. ಆದ್ದರಿಂದಲೇ ಶ್ರೀರಾಮಾನುಜಾಚಾರ್ಯರು ಈ ಪ್ರಾಚೀನರಾದ ದ್ರವಿಡಾಚಾರ್ಯರು ಹೇಳಿದ್ದಾದ ರಾಜಪುತ್ರನ ಕಥೆಯನ್ನು ಬೇರೊಂದು ರೀತಿಯಾಗಿ ತಮ್ಮ ಸಂಪ್ರದಾಯಕ್ಕನುಗುಣವಾಗಿ ಬದಲಾಯಿಸಿಕೊಂಡು ತಮ್ಮ ಶ್ರೀಭಾಷ್ಯದಲ್ಲಿ ವರ್ಣಿಸುವುದಕ್ಕೆ ಹೊರಟಿರುತ್ತಾರೆಂದು ತೋರುತ್ತದೆ. ಹೇಗೆಂದರೆ-

(೪) ಕಶ್ಚಿದ್ ರಾಜಕುಮಾರೋ ಬಾಲಕೀಡಾಸಕ್ತೋ ನರೇಂದ್ರ-ಭವನಾನ್ನಿಷ್ಕ್ರಾಂತೋ ಮಾರ್ಗಾದ್ ಭ್ರಷ್ಟೋ ನಷ್ಟ ಇತಿ ರಾಜ್ಞಾ ವಿಜ್ಞಾತಃ, ಸ್ವಯಂ ಚಾಜ್ಞಾತಪಿತೃಕಃ ಕೇನಚಿದ್ ದ್ವಿಜವರ್ಯೇಣ ವರ್ಧಿತೋಽಧಿಗತವೇದಶಾಸ್ತ್ರಃ ಷೋಡಶವರ್ಷಃ ಸರ್ವಕಲ್ಯಾಣಗುಣಾಕರಸ್ತಿಷ್ಠನ್ "ಪಿತಾ ತೇ ಸರ್ವಲೋಕಾಧಿಪತಿಃ, ಗಾಂಭೀರ್ಯೌದಾರ್ಯವಾತ್ಸಲ್ಯಸೌಶೀಲ್ಯಶೌರ್ಯ-ವೀರ್ಯಪರಾಕ್ರಮಾದಿಗುಣಸಂಪನ್ನಸ್ತ್ವಾಮೇವ ನಷ್ಟಂ ಪುತ್ರಂ ದಿದೃಕ್ಷುಃ ಪುರವರೇ ತಿಷ್ಠತಿ" ಇತಿ ಕೇನಚಿದಭಿಯುಕ್ತತಮೇನ ಪ್ರಯುಕ್ತಂ ವಾಕ್ಯಂ ಶೃಣೋತಿ ಚೇತ್, ತದಾನೀಮೇವ "ಅಹಂ ತಾವತ್, ಜೀವತಃ ಪುತ್ರಃ, ಮತ್ಪಿತಾ ಚ ಸರ್ವಸಂಪತ್ಸಮೃದ್ಧಃ" ಇತಿ ನಿರತಿಶಯಹರ್ಷಸಮನ್ವಿತೋ ಭವತಿ | ರಾಜಾ ಚ ಸ್ವಪುತ್ರಂ ಜೀವಂತಮ್, ಅರೋಗಮ್, ಅತಿಮನೋಹರದರ್ಶನಮ್, ವಿದಿತಸಕಲವೇದ್ಯಂ ಶ್ರುತ್ವಾ ಅವಾಪ್ತಸಮಸ್ತಪುರುಷಾರ್ಥೋ ಭವತಿ | ಪಶ್ಚಾತ್ ತದುಪಾದಾನೇ ಚ ಪ್ರಯತತೇ | ಪಶ್ಚಾತ್ ತಾವುಭೌ ಸಂಗಚ್ಛೇತೇ ಚ ||

ಶ್ರೀಭಾಷ್ಯಮ್, ೧-೧-೪,

---

೪) ಒಬ್ಬ ರಾಜಕುಮಾರನು, ಹುಡುಗುತನದ ಆಟದಲ್ಲಿ ಆಸಕ್ತನಾಗಿ ರಾಜನ ಮನೆಯಿಂದ (ಹೊರಗೆ) ಹೋದವನು ದಾರಿ ತಪ್ಪಿದವನಾಗಿ ಮಗನು ಕಳೆದು ಹೋದನು ಎಂದು ರಾಜನು ತಿಳಿದನು. ತಾನೂ ಸಹ ತಂದೆಯನ್ನರಿಯದವನಾಗಿ ಯಾವನೋ ಒಬ್ಬ ಬ್ರಾಹ್ಮಣೋತ್ತಮನಿಂದ ಬೆಳಸಿದವನಾಗಿ ಅಲ್ಲೇ ಹದಿನಾರು ವರ್ಷದವನಾಗಿ ವೇದ ಶಾಸ್ತ್ರಗಳನ್ನು ಅಭ್ಯಾಸವನ್ನು ಮಾಡಿದನು, (ಹೀಗಿದ್ದ ಅವನಿಗೆ) ಯಾವನೋ ಒಬ್ಬ ಕಾರುಣಿಕನು, "ಎಲ್ಲಾ ಒಳ್ಳೆಯ ಗುಣಗಳಿಗೆ ಗಣಿಯಂತಿರುವ ನಿನ್ನ ತಂದೆ ಇಡೀ ಲೋಕಕ್ಕೆ ಅಧಿಪತಿಯಾಗಿರುತ್ತಾನೆ". ಆತನು ಹೆಚ್ಚಿನದಾದ ಗಾಂಭೀರ್ಯ, ಔದಾರ್ಯ, ಪ್ರೇಮ, ಒಳ್ಳೆಯ ನಡವಳಿಕೆ, ಪರಾಕ್ರಮ, ಶಕ್ತಿಯೇ ಮೊದಲಾದ ಗುಣಗಳಿಂದ ಕೂಡಿದವನಾಗಿ ಮಗನನ್ನು ಕಳೆದುಕೊಂಡ ಆತನು ನಿನ್ನನ್ನೇ ನೋಡಬೇಕೆಂದು ಆ ಶ್ರೇಷ್ಠವಾದ ನಗರದಲ್ಲಿ ಕಾಯುತ್ತಿದ್ದಾನೆ" ಎಂದು ಹೇಳಿದಾಗ ಆ ವಾಕ್ಯವನ್ನು ಕೇಳಿದವನಾಗಿ ಆಗಲೇ ಆತನು "ನಾನು ಬದುಕಿಕೊಂಡ, (ಅಪ್ಪನ ಮಗನು) ನನ್ನ ತಂದೆ ಎಲ್ಲಾ ಸಂಪತ್ತಿನಿಂದ ಕೂಡಿದವನು" ಎಂದು ಮಿಗಿಲಿಲ್ಲದ ಹರ್ಷದಿಂದ ಕೂಡಿದವನಾಗುತ್ತಾನೆ. ರಾಜನೂ ಸಹ ತನ್ನ ಪುತ್ರನು ಜೀವನ್ತನಾಗಿದ್ದಾನೆ, ನೀರೋಗಿಯಾಗಿದ್ದಾನೆ, ನೋಡುವುದಕ್ಕೆ ತುಂಬಾ ಚೆನ್ನಾಗಿದ್ದಾನೆ, ತಿಳಿಯುಬೇಕಾದದ್ದನ್ನೆಲ್ಲಾ

ಇತಿ | ಅತ್ರ ಚ "ಅಸ್ತಿ ಭಗವಾನ್" ಇತ್ಯಾದಿವಾಕ್ಯೇನ ತತ್ಸದ್ಭಾವಂ ತತ್ಸ್ವರೂಪಂ ಚ ಜ್ಞಾತ್ವಾ ತದುಪಾಸನಾಯ ಪ್ರಯತತೇ ಜೀವಃ, ಭಗವಾಂಶ್ಚ ತಮನುಗೃಹ್ಣಾತಿ ಇತ್ಯಸ್ಮಿನ್ನರ್ಥೇ ಪ್ರಣೇತಾ ಆಖ್ಯಾಯಿಕೇತಿ ಸ್ಪಷ್ಟಮ್ ||

ಇಮೇ ಏವ ದ್ರವಿಡಾಚಾರ್ಯಾಃ, ಛಾಂದೋಗ್ಯಭಾಷ್ಯಮಪಿ ವಿರಚಯಾ-ಮಾಸುರಿತಿ ಶ್ರೂಯತೇ | ತತ್ತು ಭಾಷ್ಯಮ್ ಇದಾನೀಂ ನೋಪಲಭ್ಯತೇ | ತದ್ವಿಷಯೇ ಆನಂದಗಿರಿಟೀಕಾಯಾಮ್ ಏವಂ ಲಿಖಿತಮಸ್ತಿ -

(೫) ಅಥ ಪಾಠಕ್ರಮಮಾಶ್ರಿತ್ಯಾಪಿ ದ್ರಾವಿಡಂ ಭಾಷ್ಯಂ ಪ್ರಣೀತಮ್, ತತ್ ಕಿಮನೇನ?
ಇತ್ಯಾಶಂಕ್ಯಾಹ "ಅಲ್ಪಗ್ರಂಥಮ್" ಇತಿ || ಆ.ಛಾಂ.ಭಾ.

ದ್ರವಿಡಾಚಾರ್ಯವಾಕ್ಯಾನಿ ಅನ್ಯತ್ರಾಪಿ (ಛಾಂ.ಭಾ.ಟೀಕಾ, ಪಾ. ೧೪೬, ವಾ.ಭಾ. ೧-೧-೪) ಸಮುದ್ಧೃತಾನಿ ದೃಶ್ಯಂತೇ | ತೇಷಾಂ ಪ್ರಕೃತವಿಚಾರೇ ಅನುಪಕಾರಕತ್ವಾತ್

---

ತಿಳಿದವನಾಗಿದ್ದಾನೆಂದು ಕೇಳಿ ಪುರುಷಾರ್ಥವನ್ನು ಪಡೆದವನಾಗುತ್ತಾನೆ. ಆಮೇಲೆ ಅವನನ್ನು ಕರೆತರಲು ಪ್ರಯತ್ನಿಸುತ್ತಾನೆ. ಆಮೇಲೆ ಅವರಿಬ್ಬರೂ ಸೇರುತ್ತಾರೆ" (ಶ್ರೀ ಭಾಷ್ಯ ೧-೧-೪). ಇಲ್ಲಿ "ಭಗವಂತನಿದ್ದಾನೆ" ಎಂಬುದೇ ಮೊದಲಾದ ವಾಕ್ಯದಿಂದ ಅವನ ಇರುವಿಕೆ, ಮತ್ತು ಅವನ ಸ್ವರೂಪವನ್ನು ತಿಳಿದು ಜೀವನು ಅವನ ಉಪಾಸನೆಗೆ ಪ್ರಯತ್ನಿಸುತ್ತಾನೆ. ಭಗವಂತನೂ ಸಹ ಆತನನ್ನು ಅನುಗ್ರಹಿಸುತ್ತಾನೆ ಎಂಬರ್ಥದಲ್ಲಿ ಕಥೆಯನ್ನು ರಚಿಸಿರುತ್ತಾರೆಂಬುದು ಸ್ಪಷ್ಟವಾಗಿದೆ.

ಈ (ಅದ್ವೈತಿಗಳಾದ) ದ್ರವಿಡಾಚಾರ್ಯರು ಛಾಂದೋಗ್ಯ ಭಾಷ್ಯವನ್ನೂ ರಚಿಸಿರುತ್ತಾರೆಂದು ತಿಳಿದು ಬಂದಿದೆ. ಆ ಭಾಷ್ಯವಾದರೋ ಈಗ ಸಿಗುವುದಿಲ್ಲ. ಅದರವಿಷಯಕ್ಕೆ ಆನಂದಗಿರಿಟೀಕೆಯಲ್ಲಿ ಈ ರೀತಿ ಬರೆದಿದೆ.

೫) ಇನ್ನು ಪಾಠಕ್ರಮವನ್ನು ಆಶ್ರಯಿಸಿಕೊಂಡರೂ ಸಹ ದ್ರವಿಡಾಚಾರ್ಯರ ಭಾಷ್ಯವಿರುತ್ತದೆ. ಇದರಿಂದ (ಈ ನಿಮ್ಮ ಭಾಷ್ಯ)ದಿಂದೇನಾಗಬೇಕು? ಎಂದು ಸಂದೇಹ ಉಂಟಾದರೆ ಅದಕ್ಕೆ ಉತ್ತರವನ್ನು ಹೇಳುತ್ತಾರೆ " ಅಲ್ಪ ಗ್ರಂಥಂ" (ಅಲ್ಪ ಗ್ರಂಥವನ್ನು ರಚಿಸುವೆವು) ಎಂದಿದ್ದಾರೆ. (ಆ.ಗಿ. ಟೀ. ಛಾಂ. ಭಾ) ಬೇರೆ ಕಡೆಯಲ್ಲೂ ದ್ರವಿಡಾಚಾರ್ಯರ ವಾಕ್ಯಗಳನ್ನು ಎತ್ತಿರುವುದು ಕಂಡು ಬಂದಿವೆ. (ಛಾಂ.ಭಾ. ಟೀಕಾ ವಾ.ಭಾ. ೧-೧-೪) ಅವುಗಳೆಲ್ಲಾ ಪ್ರಕೃತಕ್ಕೆ

ನ ತಾನ್ಯತ್ರ ಲಿಖಾಮಃ | ಪ್ರಸಂಗವಶಾತ್ ಐತರೇಯೋಪನಿಷದ್ಭಾಷ್ಯಗತಾಪಿ ಕಾಚಿದಾಖ್ಯಾಯಿಕಾ ಅತ್ರೋದಾಹ್ರಿಯತೇ -

(೪) "ಕಥಂ ತರ್ಹಿ ತಸ್ಯ ಸ ಮ ಆತ್ಮೇತಿ ವೇದನಮ್ ? ಬ್ರೂಹಿ ಕೇನ ಪ್ರಕಾರೇಣ ತಮಹಂ "ಸ ಮ ಆತ್ಮಾ" ಇತಿ ವಿದ್ಯಾಮ್ | ಅತ್ರಾಖ್ಯಾಯಿಕಾಮಾಚಕ್ಷತೇ - ಕಶ್ಚಿತ್ ಕಿಲ ಮನುಷ್ಯೋ ಮುಗ್ಧಃ ಕೈಶ್ಚಿದುಕ್ತಃ ಕಸ್ಮಿಂಶ್ಚಿದಪರಾಧೇ ಸತಿ "ಧಿಕ್ ತ್ವಾಮ್, ನಾಸಿ ಮನುಷ್ಯಃ" ಇತಿ | ಸ ಮುಗ್ಧತಯಾ ಆತ್ಮನೋ ಮನುಷ್ಯತ್ವಂ ಪ್ರತ್ಯಾಯಯಿತುಂ ಕಂಚಿದುಪೇತ್ಯ ಆಹ "ಬ್ರವೀತು ಭವಾನ್ ಕೋಽಹಮಸ್ಮಿ" ಇತಿ | ಸ ತಸ್ಯ ಮುಗ್ಧತಾಂ ಜ್ಞಾತ್ವಾ ಆಹ "ಕ್ರಮೇಣ ಬೋಧಯಿಷ್ಯಾಮಿ" ಇತಿ | ಸ್ಥಾವರಾದ್ಯಾತ್ಮಭಾವಮ್ ಅಪೋಹ್ಯ"ನ ತ್ವಮಮನುಷ್ಯಃ" ಇತ್ಯುಕ್ತ್ವಾ ಉಪರರಾಮ | ಸ ತಂ ಮುಗ್ಧಃ ಪ್ರತ್ಯಾಹ "ಭವಾನ್ ಮಾಂ ಬೋಧಯಿತುಂ ಪ್ರವೃತ್ತಃ, ತೂಷ್ಣೀಂ ಬಭೂವ, ಕಿಂ ನ ಬೋಧಯತಿ?" ಇತಿ | ತಾದೃಗೇವ ತದ್ ಭವತೋ ವಚನಮ್ | "ನಾಸಿ ಅಮನುಷ್ಯಃ"ಇತ್ಯುಕ್ತೇಽಪಿ ಮನುಷ್ಯತ್ವಮ್ ಆತ್ಮನೋ ನ ಪ್ರತಿಪದ್ಯತೇ ಯಃ ಸ ಕಥಂ "ಮನುಷ್ಯೋಽಸಿ"ಇತ್ಯುಕ್ತೋಽಪಿ ಮನುಷ್ಯತ್ವಮಾತ್ಮನಃ ಪ್ರತಿಪದ್ಯೇತ ||" (ಐ.ಭಾ. ಪ್ರಥಮಾಧ್ಯಾಯಗತೋಪ-

---

ಬೇಕಿಲ್ಲವಾದ್ದರಿಂದ ನಾವಿಲ್ಲಿ ಬರೆಯುವುದಿಲ್ಲ. ಪ್ರಸಂಗಕ್ಕನುಗುಣವಾಗಿ ಐತರೇಯೋಪನಿಷದ್ಭಾಷ್ಯದಲ್ಲಿರುವ ಒಂದಾನೊಂದು ಕಥೆಯನ್ನು ಉದಾಹರಿಸುವೆವು.

(೪) ಹಾಗಾದರೆ ಹೇಗೆ ಆತನನ್ನು ನನ್ನ ಆತ್ಮನೆಂದು ತಿಳಿಯುವುದು ? ಹೇಳು, ಯಾವ ಪ್ರಕಾರದಿಂದ ಆತನನ್ನು ನಾನು "ಆತನು ನನ್ನ ಆತ್ಮನು ಎಂದು ತಿಳಿಯಲಿ? (ಎಂದು ಕೇಳಿದರೆ) ಈ ವಿಷಯಕ್ಕೆ ಕಥೆಯನ್ನು ಹೇಳುತ್ತಾರೆ. ಒಬ್ಬಾನೊಬ್ಬ ದಡ್ಡ ಮನುಷ್ಯನು ಏನೋ ಒಂದು ದೊಡ್ಡ ತಪ್ಪನ್ನು ಮಾಡಲಾಗಿ ಛೀ ನಿನ್ನ, ನೀನು ಮನುಷ್ಯನಲ್ಲ" ಎಂದು ಯಾರೋ ಹೇಳಿದರಂತೆ, ಅವನು ಮೂಢನಾದ್ದರಿಂದ ತಾನು ಮನುಷ್ಯನೇ ಎಂಬುದನ್ನು ಗೊತ್ತುಪಡಿಸಿ-ಕೊಳ್ಳುವುದಕ್ಕಾಗಿ ಯಾವನೋ ಒಬ್ಬನ ಬಳಿಗೆ ಹೋಗಿ "ನಾನು ಯಾರೆಂಬುದನ್ನು ನೀನು ಹೇಳು" ಎಂದನು. ಆತನು ಅವನ ಮೂಢತನವನ್ನು ತಿಳಿದುಕೊಂಡು "ಕ್ರಮಕ್ರಮವಾಗಿ ನಿನಗೆ ತಿಳಿಯ ಹೇಳುವೆನು" ಎಂದನು. ಸ್ಥಾವರ ಪ್ರಾಣಿಗಳೇ ಮುಂತಾಗಿ ಯಾವುದೂ ನೀನಲ್ಲ ಎಂದ ಬಳಿಕ ನೀನು ಮನುಷ್ಯನಲ್ಲ-ವೆಂಬುದೇನಲ್ಲ ಎಂದು ಹೇಳಿ ಸುಮ್ಮನಾದನು. ಆ ಮೂಢನು ಆತನನ್ನು ಕುರಿತು "ನೀನು ನನಗೆ ತಿಳಿಸಿಕೊಡುವೆನೆಂದು ಹೊರಟವನು, ಸುಮ್ಮನಾದೆ,

ಸಂಹಾರಭಾಷ್ಯೇ ಚರ್ಚಾ |)

ಸೇಯಮಾಖ್ಯಾಯಿಕಾಪ್ಯೇತೇಷಾಮೇವ ದ್ರವಿಡಾಚಾರ್ಯಾಣಾಮಿತಿ ಸಂಭಾವಯಿತುಂ ಶಕ್ಯತೇ | ಶಾಸ್ತ್ರಸ್ಯ ಅತದ್ಧರ್ಮನಿವರ್ತಕತ್ವೇನೈವ ಪ್ರಾಮಾಣ್ಯಮಿತಿ ಹ್ಯತ್ರೋಚ್ಯತ ಇತಿ | ಆನಂದಗಿರಿಸ್ತು ನ ತಥಾ ಉಲ್ಲಿಖ್ಯ ವ್ಯಾಚಷ್ಟೇ, "ಸೋಪಹಾಸಮುತ್ತರಮಾಹ" ಇತ್ಯೇತಾವದೇವ ಲಿಖತಿ | ತಾಮೇತಾಮ್ ಆಖ್ಯಾಯಿಕಾಂ ಪುನರಪ್ಯಾಗಾಮಿಕಿರಣೇ ಸಮಾಲೋಚಯಿಷ್ಯಾಮಃ ||

**೧೦. ಆಚಾರ್ಯೋ ಬ್ರಹ್ಮನಂದೀ** - ದ್ರವಿಡಾಚಾರ್ಯಾಃ ಸಮಾಲೋಚಿತಾಃ ಛಾಂದೋಗ್ಯೋಪನಿಷದಂ ಪಾಠಕ್ರಮಮಾಶ್ರಿತ್ಯೈವ ಸ್ವಭಾಷ್ಯೇಣ ವಿಭೂಷಯಾಮಾಸುರಿತಿ ಪ್ರಾಕ್ ಕಥಿತಮ್ ಆನಂದಗಿರಿವಾಕ್ಯಂ ಪ್ರಮಾಣೀಕೃತ್ಯ | ಸಂಕ್ಷೇಪಶಾರೀರಕಪ್ರಣೇತಾ ಸರ್ವಜ್ಞಾತ್ಮಮುನಿಸ್ತು ಛಾಂದೋಗ್ಯವಾಕ್ಯಕಾರತ್ವೇನ

---

ಏತಕ್ಕೆ ತಿಳಿಸಿಕೊಡುತ್ತಿಲ್ಲ? ಎಂದು ಕೇಳಿದನಂತೆ. ಇದರಂತೆ ಇದೆ ನಿನ್ನ ಮಾತು, ನೀನು ಮನುಷ್ಯನಲ್ಲವೆಂಬುದೇನಲ್ಲ ಎಂದಾಗಲೂ ತಾನು ಮನುಷ್ಯನೇ ಎಂದು ತಿಳಿಯದವನು, ನೀನು ಮನುಷ್ಯನೇ ಎಂದು ಹೇಳಿದರೆ ತಾನೇ ಹೇಗೆ ತಾನು ಮನುಷ್ಯನೆಂದು ತಿಳಿದಾನು? (ಐ.ಭಾ. ಮೊದಲನೇಯ ಅಧ್ಯಾಯದ ಕೊನೆಯ ಚರ್ಚೆ)

ಈ ಕಥೆಯೂ ಸಹ ದ್ರವಿಡಾಚಾರ್ಯರದ್ದೇ ಎಂದು ಅನುಮಾನಿಸುವುದಕ್ಕೆ ಅವಕಾಶವಿದೆ. ಏಕೆಂದರೆ, ಇಲ್ಲಿ ಶಾಸ್ತ್ರಕ್ಕೆ ಆತ್ಮನದಲ್ಲದ್ದಾದ ಧರ್ಮವನ್ನು ತೆಗೆದುಹಾಕುವುದರ ಮೂಲಕವಾಗಿಯೇ ಪ್ರಾಮಾಣ್ಯವಿದೆ ಎಂದು ಹೇಳಿದೆ. ಆನಂದಗಿರಿಗಳಾದರೋ ಈ ಸ್ಥಳದಲ್ಲಿ ಆ ರೀತಿ ವ್ಯಾಖ್ಯಾನವನ್ನು ಮಾಡದೇ "ಉಪಹಾಸ ಮಾಡುವುದರ ಮೂಲಕ ಉತ್ತರವನ್ನು ಹೇಳುತ್ತಾ" ರೆಂದು ಇಷ್ಟೇ ಬರೆದಿರುತ್ತಾರೆ. ಈ ಕಥೆಯನ್ನು ಮತ್ತೊಮ್ಮೆ ಮುಂದಿನ ಕಿರಣದಲ್ಲಿ ವಿಚಾರವನ್ನು ಮಾಡುತ್ತೇವೆ.

**೧೦) ಆಚಾರ್ಯರಾದ ಬ್ರಹ್ಮನಂದಿಗಳು** – (ಹಿಂದೆ) ವಿಚಾರ-ಮಾಡಿದವರಾದ ದ್ರವಿಡಾಚಾರ್ಯರು, ಛಾಂದೋಗ್ಯೋಪನಿಷತ್ತಿನ ಪಾಠಕ್ರಮವನ್ನನುಸರಿಸಿಯೇ ತಮ್ಮ ಭಾಷ್ಯವನ್ನು ಮಾಡಿದ್ದಾರೆಂದು ಈಗತಾನೇ ಆನಂದಗಿರಿಗಳ ವಾಕ್ಯವನ್ನು ಪ್ರಮಾಣವನ್ನಾಗಿ ಮಾಡಿಕೊಂಡು ಹೇಳಿರುತ್ತೇವೆ.

ಪ್ರಥಿತಂ ಬ್ರಹ್ಮನಂದಿನಮಪ್ಯೇಕಂ ಶಾಂಕರಸಂಪ್ರದಾಯಸ್ಥತ್ವೇನ ಸಮುದಾಜಹಾರ | ಸಂಕ್ಷೇಪಶಾರೀರಕಟೀಕಾಕಾರಶ್ಚ ಮಧುಸೂದನಸರಸ್ವತೀ "ಬ್ರಹ್ಮನಂದಿವಾಕ್ಯಾನಾಂ ಭಾಷ್ಯಕರ್ತಾ ದ್ರವಿಡಾಚಾರ್ಯಃ" ಇತ್ಯಾಹ | ತತ್ರೇಮೇ ಶ್ಲೋಕಾ ಭವಂತಿ -

(೧) ಆತ್ರೇಯವಾಕ್ಯಮಪಿ ಸಂವ್ಯವಹಾರಮಾತ್ರಂ
ಕಾರ್ಯಂ ಸಮಸ್ತಮಿತಿ ನಃಕಥಯಾಂಬಭೂವ |
ಸತ್ಕಾರ್ಯವಾದವಿಷಯೇ ನ ಹಿ ದೋಷರಾಶಿರ್ಮಾಯಾಮಯೇ
ಭವಿತುಮುತ್ಸಹತೇ ವಿರೋಧಾತ್ || ಸಂ.ಶಾ. ೩-೨೧೭.

[ ಅತ್ರ ವಾಕ್ಯಕಾರಸ್ಯ ಬ್ರಹ್ಮನಂದಿನ ಅತ್ರಿಗೋತ್ರೋದ್ಭವತ್ವಂ ಕಥಿತಮ್ || ]

(೨) ಪೂರ್ವಂ ವಿಕಾರಮುಪವರ್ಣ್ಯ ಶನೈಃ ಶನೈಸ್ತದ್
ದೃಷ್ಟಿಂ ವಿಸೃಜ್ಯ ನಿಕಟಂ ಪರಿಗೃಹ್ಯ ತಸ್ಮಾತ್ |

---

ಸಂಕ್ಷೇಪ ಶಾರೀರಿಕವನ್ನು ಬರೆದವರಾದ ಸರ್ವಜ್ಞಾತ್ಮ ಮುನಿಗಳಾದರೋ ಛಾಂದೋಗ್ಯವಾಕ್ಯಕಾರರೆಂದು ಪ್ರಸಿದ್ಧರಾದ ಶಾಂಕರಸಂಪ್ರದಾಯದವ-ರೆಂಬುದಾಗಿ ಬ್ರಹ್ಮನಂದಿ ಎಂಬುವರನ್ನು ಉದಾಹರಿಸಿರುತ್ತಾರೆ. ಸಂಕ್ಷೇಪ ಶಾರೀರಕಕ್ಕೆ ಟೀಕೆಯನ್ನು ಬರೆದವರಾದ ಮಧುಸೂದನಸರಸ್ವತಿಗಳಾದರೋ ದ್ರವಿಡಾಚಾರ್ಯರು ಬ್ರಹ್ಮನಂದಿಗಳ ವಾಕ್ಯಕ್ಕೆ ಭಾಷ್ಯವನ್ನು ಬರೆದವರು ಎಂದಿರುತ್ತಾರೆ. ಆ ವಿಷಯಕ್ಕೆ ಈ ಕೆಳಗಿನ ಶ್ಲೋಕಗಳಿವೆ.

(೧) "ಎಲ್ಲಾ ಕಾರ್ಯವೂ (ಸತ್ತಿನಿಂದಾದದ್ದು) ಎಂಬ ಆತ್ರೇಯ ಗೋತ್ರದವರಾದ (ಬ್ರಹ್ಮನಂದಿಗಳ) ವಾಕ್ಯವೂ ಸಹ ಸಂವ್ಯವಹಾರಮಾತ್ರಕ್ಕೆ ಎಂದು ನಮಗೆ ಹೇಳಿರುತ್ತಾರೆ. ಏಕೆಂದರೆ ಸತ್ಕಾರ್ಯವಿಷಯದಲ್ಲಿ ದೋಷಗಳು ಹೆಚ್ಚಿರುವುದಿಲ್ಲ. ಮಾಯಾಮಯವಾದ ಸತ್ತಿಗಿಂತ ವಿಲಕ್ಷಣವಾದದ್ದರ ಕಾರ್ಯದ ಪಕ್ಷದಲ್ಲಿ (ಶೂನ್ಯಪಕ್ಷದಲ್ಲಿ) ವಿರೋಧವಾದ್ದರಿಂದ ಅಲ್ಲಿ ದೋಷರಾಶಿಯಿರುವುದಕ್ಕೆ ಯೋಗ್ಯವಾಗಿದೆ.

(ಇಲ್ಲಿ ವಾಕ್ಯಕಾರರಾದ ಬ್ರಹ್ಮನಂದಿಯವರನ್ನೇ ಅತ್ರಿಗೋತ್ರೋದ್ಭವರೆಂದು ಹೇಳಿದೆ).

೨. ಕಾರ್ಯವನ್ನು ಮೊದಲು ಪರಿಣಾಮವೆಂದು ವರ್ಣಿಸಿ ಮೆಲ್ಲಮೆಲ್ಲಗೆ ಇದು ಹೊಂದುವುದಿಲ್ಲವೆಂಬುದನ್ನು ಯುಕ್ತಿಯಿಂದ ತೋರಿಸಿ ಆಮೇಲೆ ಆ ಪರಿಣಾಮದೃಷ್ಟಿಯನ್ನೂ ಬಿಡಿಸಿ ಅದಕ್ಕಿಂತಲೂ ಸಮೀಪವಾದ

ಸರ್ವಂ ವಿಕಾರಮಥ ಸಂವ್ಯವಹಾರಮಾತ್ರ
ಮದ್ವೈತಮೇವ ಪರಿರಕ್ಷತಿ ವಾಕ್ಯಕಾರಃ || ಸಂ.ಶಾ. ೩-೨೨೦.

ಅತ್ರ ವ್ಯಾಖ್ಯಾನಕರ್ತಾ ಮಧುಸೂದನಸರಸ್ವತೀ ಏವಂ ಲಿಖತಿ ಸ್ಮ -

(೧) ಛಾಂದೋಗ್ಯವಾಕ್ಯಕಾರೇಣ ಬ್ರಹ್ಮನಂದಿನಾಪಿ ಪೂರ್ವಪಕ್ಷೇ ಅಸತಃ ಸತಶ್ಚ ಉತ್ಪತ್ತೌ ದೋಷಮುಕ್ತ್ವಾ ಸಾಂವ್ಯವಹಾರಿಕಮಾಯಾಮಯತ್ವಪಕ್ಷೇಣ ಸಮಾಧಾನಮುಕ್ತಮ್ "ನಾಸತ ಉತ್ಪತ್ತಿಃ, ಅನಿಷ್ಪಾದ್ಯತ್ವಾತ್ | ನಾಪಿ ಸತಃ ಪ್ರವೃತ್ತ್ಯಾನರ್ಥಕ್ಯಾತ್, ಸತ್ತ್ವಾವಿಶೇಷಾತ್ | ಅಭಿವ್ಯಕ್ತ್ಯರ್ಥಮಿತಿ ಚೇತ್ | ನ, ತಸ್ಯಾ ಅಪಿ ಸತ್ತ್ವಾತ್, ಪ್ರವೃತ್ತಿನಿತ್ಯತ್ವಾಚ್ಚ ಸದಾ ಅಭಿವ್ಯಕ್ತಿಪ್ರಸಂಗಃ | ನ | ಸಂವ್ಯವಹಾರಮಾತ್ರತ್ವಾದ್" ಇತಿ | ತದ್ವಚನಂ ಚೋಕ್ತನ್ಯಾಯೋಪೋದ್ಬಲಿತ-ವಾಚಾರಂಭಣಾದಿಶ್ರುತಿಮೂಲಕಮ್ ಅವಶ್ಯಮುಪಾದೇಯಮ್ ಇತ್ಯಾಶಯೇನಾಹ|| ಸಂ.ಶಾ,

---

ವಿವರ್ತವಾದವನ್ನು ಸ್ವೀಕರಿಸಿ ಅನಂತರ ಎಲ್ಲಾ ವಿಕಾರವಾದವೂ ವ್ಯವಹಾರವಷ್ಟಕ್ಕೆ ಹೊರತು ಪರಮಾರ್ಥವಲ್ಲ, ಎಂದು ಬ್ರಹ್ಮನಂದಿಯವರೂ ಸಹ ಅದ್ವೈತವನ್ನು ಕಾಪಾಡುತ್ತಾರೆ. ಇಲ್ಲಿ ವ್ಯಾಖ್ಯಾನಕಾರರಾದ ಮಧುಸೂದನಸರಸ್ವತಿಗಳು ಈ ರೀತಿ ಬರೆಯುತ್ತಾರೆ.

(೧) ಛಾಂದೋಗ್ಯವಾಕ್ಯಕಾರರಾದ ಬ್ರಹ್ಮನಂದಿಗಳೂ ಕೂಡ, ಪೂರ್ವಪಕ್ಷದಲ್ಲಿ ಅಸತ್ತಿನಿಂದಲಾಗಲೀ ಸತ್ತಿನಿಂದಾಗಲೀ ಹುಟ್ಟುತ್ತದೆ ಎಂದರೆ ದೋಷವಾಗುತ್ತದೆ ಎಂದು ಹೇಳಿ ಸಂವ್ಯವಹಾರವಾದ ಮಾಯಾಮಯರೂಪ-ದಿಂದಾಗಬಹುದೆಂದು ಸಮಾಧಾನವನ್ನು ಹೇಳಿರುತ್ತದೆ. ಅಸತ್ತಿನಿಂದ ಉತ್ಪತ್ತಿಯಾಗುವುದಿಲ್ಲ, ಏಕೆಂದರೆ ಅದರಿಂದ ಏನೂ ಹುಟ್ಟುವುದಿಲ್ಲ-ವಾದ್ದರಿಂದ. ಹಾಗೆ ಸತ್ತಿನಿಂದಲೂ ಆಗುವುದಿಲ್ಲ, ಏಕೆಂದರೆ ಇದ್ದದ್ದು ಇದ್ದೇ ಇರುತ್ತದೆಯೆಂದಾಗಿ ಸೃಷ್ಟಿಸುವುದಕ್ಕೆ ಪ್ರವೃತ್ತಿಸುವುದೇ ವ್ಯರ್ಥವಾಗುತ್ತದೆ. (ಕಾರ್ಯವು) ತೋರಿಕೊಳ್ಳುವುದಕ್ಕೆ ಪ್ರವೃತ್ತಿಸಬೇಕಲ್ಲಾ ? ಎಂದರೆ ಅದೂ ಆಗುವುದಿಲ್ಲ, ಏಕೆಂದರೆ ಅದೂ ಇದ್ದೇ ಇರುತ್ತದೆಯಾದ್ದರಿಂದಲೂ, ಅಷ್ಟೇ ಅಲ್ಲ, ಪ್ರವೃತ್ತಿಯು ನಿತ್ಯವಾದ್ದರಿಂದ ಯಾವಾಗಲೂ ತೋರಿಕೊಳ್ಳುತ್ತಲೇ ಇರಬೇಕೆಂಬ ಪ್ರಸಂಗವೂ ಉಂಟಾಗುತ್ತದೆ. ಎಂದರೆ ಹಾಗಲ್ಲ, ಸಂವ್ಯವಹಾರ ಮಾತ್ರದಿಂದ ಸೃಷ್ಟಿ ಇರುವುದರಿಂದ ಇಲ್ಲಿ ದೋಷವಿಲ್ಲ. ಈ ಮಾತು,

[ ಕಲ್ಪತರುಗ್ರಂಥೇ ತು "ಬ್ರಹ್ಮನಂದಿನಾ ಹಿ "ನಾಸತಃ ಅನಿಷ್ಪದ್ಯತ್ವಾತ್," ಪ್ರವೃತ್ತ್ಯಾನರ್ಥಕ್ಯಂ ತು ಸತ್ತ್ವಾವಿಶೇಷಾತ್" - ಇತಿ ಸದಸತ್ಪಕ್ಷಪ್ರತಿಕ್ಷೇಪೇಣ ಪೂರ್ವಪಕ್ಷಮಾದರ್ಶ್ಯ," ನ "ಸಂವ್ಯವಹಾರಮಾತ್ರತ್ವಾತ್" ಇತಿ ಅನಿರ್ವಚನೀಯತಾ ಸಿದ್ಧಾಂತಿತಾ | ಅತಃ "ಪರಿಣಾಮಸ್ತು" ಇತಿ ಮಿಥ್ಯಾಪರಿಣಾಮಾಭಿಪ್ರಾಯಮ್" ಇತಿ ದೃಶ್ಯತೇ || ಕ.ತ. ೧-೪-೨೭. ಅತೋ ಬ್ರಹ್ಮನಂದಿವಾಕ್ಯಮ್ ಅರ್ಥತಃ ಪಠಿತಮನ್ಯತರತ್ರ - ಇತಿ ಭಾತಿ || ]

ಅತ್ರ ದ್ರವಿಡಾಚಾರ್ಯೈಃ ಸಾಕ್ಷಾದೇವೋಪನಿಷದ್ಭಾಷ್ಯಂ ರಚಿತಮಿತಿ ಆನಂದಗಿರಿವಾಕ್ಯಾತ್ ಪ್ರತೀಯತೇ | ತತ್ಕಿಂ ವಾಕ್ಯವ್ಯಾಖ್ಯಾನದ್ವಾರಾ ಉಪನಿಷದ್ಭಾಷ್ಯಮಿತ್ಯುಪಚರ್ಯತೇ, ಅಥವಾ ವಾಕ್ಯವ್ಯಾಖ್ಯಾನಮಪಿ ಅನ್ಯದೇವ ? ಇತ್ಯತ್ರ ಪ್ರಾಚೀನಗ್ರಂಥತತ್ತ್ವಶೋಧಕಾ ಏವ ಪ್ರಮಾಣಮ್ | ಸರ್ವಥಾಪಿ ತು

---

ಮೇಲೆ ಹೇಳಿದ ಯುಕ್ತಿಯಿಂದ ಪುಷ್ಟಿಗೊಂಡದ್ದಾದ ವಾಚಾರಂಭಣವೆಂಬ ಶ್ರುತಿಮೂಲವಾದ್ದರಿಂದ ಅವಶ್ಯವಾಗಿ ಒಪ್ಪಲೇಬೇಕೆಂಬ ಅಭಿಪ್ರಾಯದಿಂದ ಹೇಳುತ್ತಾರೆ (ಸಂ. ಶಾ ೨೭೬)?. (ಕಲ್ಪತರು ಗ್ರಂಥದಲ್ಲಿಯಾದರೋ – "ಬ್ರಹ್ಮನಂದಿಗಳು" ಹೀಗೆ ಹೇಳುತ್ತಾರಲ್ಲವೆ ? ಹೇಗೆಂದರೆ "ಅಸತ್ತಿನಿಂದ ಹುಟ್ಟಬೇಕಾಗಿಲ್ಲವಾದ್ದರಿಂದಲೂ (ಇದ್ದದ್ದರಿಂದ ಎಂದರೆ) ಇದ್ದದ್ದು ಇದ್ದೇ ಇರುತ್ತದೆಯಾದ್ದರಿಂದ ಪ್ರವೃತ್ತಿಯು ವ್ಯರ್ಥವಾಗುತ್ತದೆಯಾದ್ದರಿಂದಲೂ" ಎಂದು ಹೇಳಿರುತ್ತಾರೆ. ಅದು ಸದಸತ್ಪಕ್ಷಗಳಲ್ಲಿ ಆಕ್ಷೇಪಗಳನ್ನು ಒಡ್ಡುವುದರ ಮೂಲಕ ಪೂರ್ವಪಕ್ಷವನ್ನು ತೋರಿಸಿ, ಇದೇನು ತಪ್ಪಲ್ಲ, ಏಕೆಂದರೆ (ಎಲ್ಲವೂ) "ವ್ಯವಹಾರ ಮಾತ್ರಕ್ಕೆ ಹೇಳಿರುತ್ತದೆಯಾದ್ದರಿಂದ" ಎಂದು ಹೇಳಿ ಅನಿರ್ವಚನೀಯವಾದವನ್ನು ಸಿದ್ಧಾಂತ ಮಾಡಿರುತ್ತಾರೆ. ಆದ್ದರಿಂದ "ಪರಿಣಾಮಸ್ತು" ಪರಿಣಾಮವಾದರೋ ಎಂದು ಹೇಳಿರುವುದು ಮಿಥ್ಯಾಪರಿಣಾಮಾಭಿಪ್ರಾಯವಾಗಿ ಕಂಡು ಬಂದಿದೆ (ಕ.ತ. ೧–೪–೨೭). ಆದ್ದರಿಂದ ಯಾವುದೋ ಒಂದು ಕಡೆಯಲ್ಲಿ ಬ್ರಹ್ಮನಂದಿಗಳ ವಾಕ್ಯವು ಅರ್ಥದಿಂದ ಪಠಿತವಾಗಿದೆ ಎಂದು ತೋರುತ್ತದೆ.)

ಇಲ್ಲಿ ಆನಂದಗಿರಿಗಳ ವಾಕ್ಯದಿಂದ ದ್ರವಿಡಾಚಾರ್ಯರೇ ನೇರಾಗಿ ಉಪನಿಷದ್ಭಾಷ್ಯವನ್ನು ಬರೆದಿರುತ್ತಾರೆಂದು ತಿಳಿದುಬರುತ್ತದೆ. ಇಲ್ಲಿ ವಾಕ್ಯದ ವ್ಯಾಖ್ಯಾನದ ಮೂಲಕ ಉಪನಿಷದ್ಭಾಷ್ಯವೆಂದು ಉಪಚಾರಕ್ಕೆ ಕರೆದಿದೆಯೋ

ದ್ರವಿಡಭಾಷ್ಯಕಾರ ಇವ ವಾಕ್ಯಕಾರೋಽಪಿ ಬ್ರಹ್ಮನಂದೀ ಶಾಂಕರಸಂಪ್ರದಾಯಸ್ಥ ಆಚಾರ್ಯ ಇತ್ಯವಿವಾದಮ್ ||

ಅತ್ರಾಪಿ ಕೇಚಿದವಯಂತಿ - ಬ್ರಹ್ಮನಂದೀ ವಿಶಿಷ್ಟಾದ್ವೈತಿಸಂಮತಷ್ಟಂಕ ಏವ, ಸ ಏವ ಚ ಛಾಂದೋಗ್ಯವಾಕ್ಯಕಾರಃ, ತದ್ವ್ಯಾಕರ್ತಾ ಚ ರಾಮಾನುಜಾದ್ಯುಪನ್ಯಸ್ತ-ದ್ರಮಿಡಾಚಾರ್ಯಾದನನ್ಯ ಏವ - ಇತಿ ಚ | ತನ್ನ ಶುದ್ಧಮ್ | ವಿಶಿಷ್ಟಾದ್ವೈತೀತರ-ವೇದಾಂತಿಭಿಃ ಕೈಶ್ಚಿದಪಿ ವಾಕ್ಯಕಾರಪರಾಮರ್ಶಕೈಃ ಬ್ರಹ್ಮನಂದಿನಷ್ಟಂಕಾಭಿಧಾನೇನ ಟಂಕಿತತ್ವಾಭಾವಾತ್ | ತೇಷಾಂ ದ್ರಮಿಡದ್ರವಿಡಯೋರೈಕ್ಯಾಂಗೀಕಾರಾದರ್ಶನಾಚ್ಚ | ಅದ್ವೈತಿಭಿರ್ಹಿ "ದ್ರವಿಡಾಚಾರ್ಯಃ" ಇತ್ಯವರ್ಗೀಯವಕಾರಮಧ್ಯಮಮೇವಾಭಿಧಾನಂ ಪಠ್ಯತೇ ನ ತು ಪವರ್ಗಪಂಚಮಾಕ್ಷರಯುತಮ್ | ವೇದಾರ್ಥಸಂಗ್ರಹೇ ರಾಮಾನುಜ-ಸಮುದಾಹೃತದ್ರಮಿಡವಾಕ್ಯಸ್ಯ ಸರ್ವಜ್ಞಾತ್ಮಮುನ್ಯುದಾಹೃತಭಾಷ್ಯಕಾರವಾಕ್ಯ-ಸಾರೂಪ್ಯಾಭಾವಾಚ್ಚೈತದೇವಮಿತಿ ಮಂತವ್ಯಮ್ | ತಥಾ ಹಿ ರಾಮಾನುಜಾಚಾರ್ಯಾಃ

---

ಅಥವಾ ವಾಕ್ಯವ್ಯಾಖ್ಯಾನವೆಂಬುದೂ ಸಹ ಬೇರೊಂದಿದೆಯೋ? ಎಂಬುದರ ಬಗ್ಗೆ ಪ್ರಾಚೀನ ಗ್ರಂಥ ತತ್ವಶೋಧಕರೇ ಪ್ರಮಾಣರಾಗಿರುತ್ತಾರೆನ್ನಬೇಕು. ಹೇಗೇ ಆಗಲಿ ದ್ರವಿಡರೆಂಬ ಭಾಷ್ಯಕಾರರಂತೆ ಬ್ರಹ್ಮನಂದಿಗಳೆಂಬ ವಾಕ್ಯಕಾರರೂ ಕೂಡ ಶ್ರೀ ಶಂಕರರ ಸಂಪ್ರದಾಯದಲ್ಲಿದ್ದ ಆಚಾರ್ಯರು ಎಂಬುದರ ಬಗ್ಗೆ ವಿವಾದವಿಲ್ಲ.

ಇಲ್ಲಿ ಕೆಲವರು ಈ ರೀತಿ ತಿಳಿಯುತ್ತಾರೆ – ಬ್ರಹ್ಮನಂದಿಯವರು ಎಂದರೆ ವಿಶಿಷ್ಟಾದ್ವೈತಿಗಳಿಗೆ ಸಂಮತರಾದ ಟಂಕಾಚಾರ್ಯರೇ, ಅವರೇ ಛಾಂದೋಗ್ಯದ ವಾಕ್ಯಕಾರರು, ಅದಕ್ಕೆ ವ್ಯಾಖ್ಯಾನವನ್ನು ಬರೆದವರಾದ ರಾಮಾನುಜರೇ ಮೊದಲಾದವರು ಹೇಳಿದ್ದಾದ ದ್ರಮಿಡಾಚಾರ್ಯರೇ ಎಂದು ಹೇಳುತ್ತಾರೆ. ಇದು ಸರಿಯಲ್ಲ. ಏಕೆಂದರೆ ವಿಶಿಷ್ಟಾದ್ವೈತಿಗಳಿಗಿಂತ ಬೇರೆಯವರಾದ ವಾಕ್ಯಕಾರರೆಂದು ಪರಾಮರ್ಶೆ ಮಾಡುವವರಾದ ಯಾವ ವೇದಾಂತಿಗಳೂ ಬ್ರಹ್ಮನಂದಿಗಳು ಟಂಕರೇ ಎಂಬ ಹೆಸರಿನವರೆಂದು ಗುರುತಿಸಿರುವುದು ಕಂಡುಬಂದಿಲ್ಲ. ಅವರೆಲ್ಲರೂ ದ್ರಮಿಡರಿಗೂ ದ್ರವಿಡರಿಗೂ ಐಕ್ಯವನ್ನು ಸ್ವೀಕರಿಸಿರುವುದು ಕಂಡು ಬಂದಿಲ್ಲವಾದ್ದರಿಂದಲೂ ಹೀಗೆಯೇ ಸರಿ. ಅದ್ವೈತಿಗಳು "ದ್ರವಿಡಾಚಾರ್ಯರು" ಎಂದು ಅವರ್ಗೀಯಾಕ್ಷರವಾದ "ವ" ಕಾರವನ್ನು ಮಧ್ಯದಲ್ಲಿ ಪಠಿಸುತ್ತಾರೆಯೇ ಹೊರತು ಪವರ್ಗದ ಐದನೆಯ

(೨) ಯಥೋಕ್ತಂ ವಾಕ್ಯಕಾರೇಣ "ಯುಕ್ತಂ ತದ್ಗುಣಕೋಪಾಸನಮ್" ಇತಿ | ವ್ಯಾಖ್ಯಾತಂ ಚ ದ್ರಮಿಡಾಚಾರ್ಯೇಣ ವಿದ್ಯಾವಿಕಲ್ಪಂ ವದತಾ "ಯದ್ಯಪಿ ಸಚ್ಚಿತ್ತೋ ನ ನಿರ್ಭುಗ್ನದೈವತಂ ಗುಣಗಣಂ ಮನಸಾಽನುಧಾವೇತ್, ತಥಾಪಿ ಅಂತರ್ಗುಣಾಮೇವ ದೇವತಾಂ ಭಜತ ಇತಿ ತತ್ರಾಪಿ ಸಗುಣೈವ ದೇವತಾ ಪ್ರಾಪ್ಯತೇ" || ವೇ.ಸಂ.

ಇತಿ ವಿಶಿಷ್ಟಾದ್ವೈತಿಸಂಮತದ್ರಮಿಡಾಚಾರ್ಯವಾಕ್ಯಮ್ ತನ್ಮೂಲಿಟಂಕವಾಕ್ಯಂ ಚ | ಸಂಕ್ಷೇಪಶಾರೀರಕೋಕ್ತದ್ರವಿಡಾಚಾರ್ಯವಾಕ್ಯೇ ತು "ಅಂತರ್ಗುಣಾ ಭಗವತೀ ಪರಾ ದೇವತಾ ಪ್ರತ್ಯಗ್ಗುಣಾ" ಇತಿ ನ ತು "ಸಗುಣಾ" ಇತೀತಿ ವೈಷಮ್ಯಮ್ ||

ಏವಂ ಹಿ ತತ್ರ ಪೂರ್ಣಃ ಶ್ಲೋಕಃ -

ಅಂತರ್ಗುಣಾ ಭಗವತೀ ಪರದೇವತೇತಿ
ಪ್ರತ್ಯಗ್ಗುಣೇತಿ ಭಗವಾನಪಿ ಭಾಷ್ಯಕಾರಃ |

---

ಕೊನೆಯ ಅಕ್ಷರವಾದ "ಮ" ಕಾರವನ್ನು ಉಚ್ಚರಿಸುವುದಿಲ್ಲ. ವೇದಾರ್ಥ ಸಂಗ್ರಹದಲ್ಲಿ ರಾಮಾನುಜರು ಉದಾಹರಿಸಿದ್ದಾದ ದ್ರಮಿಡಾಚಾರ್ಯವಾಕ್ಯವು ಸರ್ವಜ್ಞಾತ್ಮಮುನಿಗಳು· ಉದಾಹರಿಸಿದ್ದಾದ ಭಾಷ್ಯಕಾರ ವಾಕ್ಯದೊಡನೆ ಸಮಾನತೆಯು ಇಲ್ಲವಾದ್ದರಿಂದ ಇದು ಹೀಗೆಯೇ ಎಂದು ತಿಳಿಯಬೇಕು. ರಾಮಾನುಜಾಚಾರ್ಯರೂ ಸಹ ಹೀಗೆಯೇ ಅಲ್ಲವೇ ಹೇಳಿರುವುದು?

(೨) ವಾಕ್ಯಕಾರರಾದ ಟಂಕರು "ಆ ಗುಣಗಳನ್ನುಳ್ಳ ಪರಮಾತ್ಮನನ್ನು ಉಪಾಸನೆಯನ್ನು ಮಾಡುವುದೆಂಬುದು ಯುಕ್ತವಾದದ್ದು" ಎಂದು ಏನನ್ನು ಹೇಳಿರುವರೋ, ಅದಕ್ಕೆ ವಿದ್ಯಾವಿಕಲ್ಪವನ್ನು ಹೇಳುವವರಾದ ದ್ರಮಿಡಾಚಾರ್ಯರೂ ಸಹ ಈ ರೀತಿ ವ್ಯಾಖ್ಯಾನವನ್ನು ಮಾಡಿರುತ್ತಾರೆ. ಹೇಗೆಂದರೆ, ಸಚ್ಚಿತ್ತನಾದವನು ನಿರ್ಭುಗ್ನ ದೈವತವಾದ ಗುಣಸಮೂಹವನ್ನು ಮನಸ್ಸಿನಿಂದ ಧ್ಯಾನಿಸುವುದಕ್ಕಾಗದಿದ್ದರೂ ತನ್ನೊಳಗೆ ಗುಣಗಳನ್ನಿಟ್ಟುಕೊಂಡ ದೇವತೆಯನ್ನೇ ಭಜಿಸುತ್ತಾನಾದರೂ (ಸಚ್ಚಿತ್ತದಲ್ಲೂ) ಸಗುಣದೇವತೆಯನ್ನೇ ಪಡೆಯುತ್ತಾನೆ. (ವೇ.ಸಂ.) ಎಂದು ವಿಶಿಷ್ಟಾದ್ವೈತಿಗಳಿಗೆ ಒಪ್ಪಿಗೆಯಾದ ದ್ರಮಿಡಾಚಾರ್ಯರ ವಾಕ್ಯವೂ ಅದಕ್ಕೆ ಮೂಲವಾದ ಟಂಕರ ವಾಕ್ಯವೂ ಇದೆ. ಸಂಕ್ಷೇಪ ಶಾರೀರಕದಲ್ಲಿ ಹೇಳಿರುವ ದ್ರವಿಡಾಚಾರ್ಯರ ವಾಕ್ಯದಲ್ಲಿ

ಆಹ ಸ್ಮ ಯತ್ತದಿಹ ನಿರ್ಗುಣವಸ್ತುವಾದೇ
ಸಂಗಚ್ಛತೇ ನ ತು ಪುನಃ ಸಗುಣಪ್ರವಾದೇ ||

ಸಂ. ಶಾ. ೩-೨೨೧.

ತಸ್ಮಾತ್, ವೇದಾರ್ಥಸಂಗ್ರಹೋದಿತಾಭಿಪ್ರಾಯಕವಾಕ್ಯಾನಾಂ ಪೂರ್ವ-ವೇದಾಂತಾಚಾರ್ಯಸಂಮತತ್ವೇನ ರಾಮಾನುಜಪರಮಗುರುಯಾಮುನಾಚಾರ್ಯೇಭ್ಯಃ ಪ್ರಾಗಪಿ ಯೈಃ ಕೈಶ್ಚಿದುದಾಹೃತತ್ವೇನ ಯಾವನ್ನ ದೃಗ್ಗೋಚರೀಕ್ರಿಯತೇ, ಯಾವಚ್ಚ ಶಂಕರಾಚಾರ್ಯಕಾಲೀನಗ್ರಂಥೇಷು ತತಃ ಪ್ರಾಕ್ಕಾಲೀನಗ್ರಂಥೇಷು ವಾ ವಿಶಿಷ್ಟಾದ್ವೈತ-ಪರಾಮರ್ಶಕವಾಕ್ಯಾನಿ ನೋಪಲಭ್ಯಂತೇ, ತಾವತ್ ದ್ರಮಿಡಾಚಾರ್ಯ-ದ್ರವಿಡಾಚಾರ್ಯೈಕ್ಯವತ್ ಟಂಕಬ್ರಹ್ಮನಂದಿನೋರೈಕ್ಯಮಪ್ಯನಿರ್ಧಾರಿತಮೇವ ತಿಷ್ಠತೀತ್ಯಸ್ಮನ್ಮತಿಃ ||

೧೧. **ಉಪವರ್ಷಾಚಾರ್ಯಃ** - ಏವಮ್ ಉಪವರ್ಷೋಽಪ್ಯನ್ಯೋ ಭಗವತ್ಪಾದಸಂಪ್ರದಾಯಸ್ಥಃ ಪೂರ್ವಾಚಾರ್ಯ ಇತಿ ಭಾಷ್ಯವಾಕ್ಯಪ್ರಾಮಾಣ್ಯಾದವ-ಗಮ್ಯತೇ ತದ್ಯಥಾ -

---

"ಭಗವತೀ ಅಂತರ್ಗುಣವುಳ್ಳದ್ದು ಪರಾದೇವತೆಯು, ಒಳಗಿರುವ ಗುಣವಾದದ್ದು ಅದು ಸಗುಣವಲ್ಲವೆಂದಾದ್ದರಿಂದ ವ್ಯತ್ಯಾಸವಿರುತ್ತದೆ.

ಈ ರೀತಿಯಾಗಿ ಅಲ್ಲಿ ಪೂರ್ಣಶ್ಲೋಕವಿರುತ್ತದೆ.

(ಸಂ. ಶಾ. ೩–೨೨೧) "ಭಗವನ್ತರಾದ ಭಾಷ್ಯಕಾರರಾದ ದ್ರವಿಡಾ-ಚಾರ್ಯರು ಅಂತರ್ಗುಣವೂ ಭಗವತಿಯೂ ಪರಾದೇವತೆಯು ಪ್ರತ್ಯಗ್ಗುಣ-ವಾದದ್ದೆಂದು ಏನೇನನ್ನು ಹೇಳಿರುತ್ತಾರೋ ಅದು ನಿರ್ಗುಣವಸ್ತುವಾದದಲ್ಲಿ ಹೊಂದುತ್ತದೆ. ಸಗುಣವಾದದದಲ್ಲಿ ಹೊಂದುವುದಿಲ್ಲ" ಎಂದಿದೆ. ಆದ್ದರಿಂದ ವೇದಾರ್ಥಸಂಗ್ರಹದಲ್ಲಿ ಹೇಳಿದ್ದಾದ ಅಭಿಪ್ರಾಯವುಳ್ಳ ವಾಕ್ಯಗಳಿಗೆ ಹಿಂದಿನ ವೇದಾನ್ತಾಚಾರ್ಯರಿಗೂ ಸಮ್ಮತವಾದದ್ದೆಂಬುದನ್ನು ರಾಮಾನುಜಾ-ಚಾರ್ಯರಿಗೆ ಪರಮಗುರುಗಳಾದ ಯಾಮುನಾಚಾರ್ಯರಿಗಿಂತಲೂ ಹಿಂದಿನವರು ಉದಾಹರಿಸಿರುತ್ತಾರೆಂಬುದು ಎಲ್ಲಿಯವರೆಗೆ ಗೋಚರವಾಗುವುದಿಲ್ಲವೋ, ಹಾಗೆಯೇ ಶಂಕರಾಚಾರ್ಯರ ಕಾಲದ ಗ್ರಂಥದಲ್ಲಾಗಲೀ ಅಥವಾ ಅದಕ್ಕಿಂತ ಹಿಂದಿನ ಗ್ರಂಥಗಳಲ್ಲಾಗಲೀ ವಿಶಿಷ್ಟಾದ್ವೈತವನ್ನು ಪರಾಮರ್ಶೆ ಮಾಡುವ ವಾಕ್ಯಗಳು ಸಿಗುವುದಿಲ್ಲವೋ

(೧) ಅತ ಏವ ಚ ಭಗವತಾ ಉಪವರ್ಷೇಣ ಪ್ರಥಮೇ ತಂತ್ರೇ ಆತ್ಮಾಸ್ತಿತ್ವಾಭಿಧಾನಪ್ರಸಕ್ತೌ "ಶಾರೀರಕೇ ವಕ್ಷ್ಯಾಮಃ" ಇತ್ಯುದ್ಧಾರಃ ಕೃತಃ ||

ಸೂ.ಭಾ. ೩-೩-೫೩.

ಇದಂ ಹಿ ಪೂರ್ವಮೀಮಾಂಸಾಶಾಸ್ತ್ರೇ ದೇಹವ್ಯತಿರಿಕ್ತಾತ್ಮಸದ್ಭಾವಪ್ರತಿಷ್ಠಾಪಕಸೂತ್ರಾಭಾವಾತ್ "ಇತ ಏವ ಚಾಕೃಷ್ಯಾಚಾರ್ಯೇಣ ಶಬರಸ್ವಾಮಿನಾ ಪ್ರಮಾಣಲಕ್ಷಣೇ ವರ್ಣಿತಮ್" ಇತ್ಯುಕ್ತ್ವಾ ತದನಂತರಂ ಲಿಖಿತಂ ವಾಕ್ಯಮ್ - ಇತ್ಯತ ಉಪವರ್ಷಾಚಾರ್ಯಃ ಪೂರ್ವಮೀಮಾಂಸಾಮಿವ ಶಾರೀರಕಮೀಮಾಂಸಾಮಪ್ಯಧಿಕೃತ್ಯ ವೃತ್ತಿಂ ವ್ಯರರಚತ್ ಇತಿ ಭಾಷ್ಯಾಭಿಪ್ರಾಯೋ ಗಮ್ಯತೇ || ತಂ ಚ "ಭಗವಾನ್" ಇತಿ ವಿಶೇಷಣೇನ ಪೂಜಯನ್ ಭಾಷ್ಯಕಾರೋ ಸ್ವಸಂಪ್ರದಾಯನಿಷ್ಠಪೂರ್ವಾಚಾರ್ಯಪರಂಪರಾಯಾಂ ನಿವೇಶಯತಿ ಸ್ಮೇತಿ ಚ ||

ಅತ್ರಾಪಿ ಕೇಚಿತ್ ಪುರಾತನಪ್ರಥಿತವೇದಾಂತಿನಾಂ ನಾಮಾನಿ

---

ಅಲ್ಲಿಯವರೆಗೂ ದ್ರಮಿಡಾ-ಚಾರ್ಯರಿಗೂ ದ್ರವಿಡಾಚಾರ್ಯರಿಗೂ ಹೇಗೆ ಐಕ್ಯವು ಸಿದ್ಧವಾಗಿಲ್ಲವೋ ಅದರಂತೆ ಟಂಕಬ್ರಹ್ಮನಂದಿಗಳಿಗೆ ಐಕ್ಯವೆಂಬುದೂ ನಿರ್ಣಯವಾಗದೇ ಇರುತ್ತದೆ ಎಂಬುದು ನಮ್ಮ ಅಭಿಪ್ರಾಯವು.

೧೧) ಉಪವರ್ಷಾಚಾರ್ಯರು – ಇದೇ ರೀತಿ ಉಪವರ್ಷರೆಂಬುವರೂ ಸಹ ಮತ್ತೊಬ್ಬರು ಭಗವತ್ಪಾದರ ಸಂಪ್ರದಾಯದಲ್ಲಿದ್ದವರಾದ ಪೂರ್ವಾಚಾರ್ಯರೆಂಬುದು ಭಾಷ್ಯವಾಕ್ಯದ ಆಧಾರದಿಂದ ಗೊತ್ತಾಗುತ್ತದೆ, ಹೇಗೆಂದರೆ –

(೧) "ಆದ್ದರಿಂದಲೇ ಭಗವಂತರಾದ ಉಪವರ್ಷಾಚಾರ್ಯರು ಪೂರ್ವಮಿಮಾಂಸೆಯಲ್ಲಿ ಆತ್ಮಾಸ್ತಿತ್ವವನ್ನು ಹೇಳಬೇಕಾದ ಸಂದರ್ಭವು ಬಂದಾಗ ಅದನ್ನು ಶಾರೀರಕದಲ್ಲಿ ಹೇಳುವೆವೆಂದು ಪರಾಮರ್ಶೆಯನ್ನು ಮಾಡಿರುತ್ತಾರೆ" (ಸೂ. ಭಾ. ೩–೩–೫೩)

ಪೂರ್ವಮೀಮಾಂಸಾಶಾಸ್ತ್ರದಲ್ಲಿ ದೇಹಕ್ಕಿಂತ ಬೇರೆಯಾದ ಆತ್ಮನೊಬ್ಬನಿದ್ದಾನೆಂದು ಹೇಳಬೇಕಾದ ಸೂತ್ರವಿಲ್ಲದ್ದಾದ್ದರಿಂದ "ಈ ಉತ್ತರಮೀಮಾಂಸೆಯಿಂದಲೇ ಎಳೆದುಕೊಂಡು ಆಚಾರ್ಯರಾದ ಶಬರಸ್ವಾಮಿಗಳು

ಸ್ವಸಂಪ್ರದಾಯಕರ್ತೃಪರಂಪರಾಮಧ್ಯೇ ನಿವೇಶಯಿತುಕಾಮಾಃ ಪ್ರಾಹುಃ -

(೧) ವೃತ್ತಿಕಾರಸ್ಯ ಬೋಧಾಯನಸ್ಯೈವ "ಉಪವರ್ಷಃ" ಇತಿ ಸ್ಯಾನ್ನಾಮ

ತ.ಟೀ.,ಗೂ.ಸಂ.

ಇತಿ | ತತ್ರೇದಂ ವಕ್ತವ್ಯಮ್ "ಅಥ ಗೌಃ ಇತ್ಯತ್ರ ಕಃ ಶಬ್ದಃ "ಗಕಾರೌಕಾರ-ವಿಸರ್ಜನೀಯಾಃ" ಇತಿ ಭಗವಾನುಪವರ್ಷಃ" (ಶಾ.ಬಾ.ಜೈ.ಸೂ. ೧-೧-೫) ಇತ್ಯುಪವರ್ಷಂ ಭಗವಚ್ಛಬ್ದೇನ ವ್ಯಪದಿಷ್ಟವತಾ ಆಚಾರ್ಯಶಬರಸ್ವಾಮಿನಾ ನ ಕ್ವಾಪಿ ಬೋಧಾಯನಾಭಿಧಾನಂ ಸಮುಪಾತ್ತಮ್ | ಶಂಕರಭಗವತ್ಪಾದೈಸ್ತಚ್ಛಿಷ್ಯೈರ್ವಾ ಅದ್ವೈತಿಭಿರ್ಬೋಧಾಯನೋ ನ ಕಟಾಕ್ಷೇಣಾಪಿ ವೀಕ್ಷಿತಃ | ಅಪಿ ಚ "ಭಗವದ್ಬೋಧಾಯನಕೃತಾಂ ವಿಸ್ತೀರ್ಣಾಂ ಬ್ರಹ್ಮಸೂತ್ರವೃತ್ತಿಂ ಪೂರ್ವಾಚಾರ್ಯಾಃ ಸಂಚಿಕ್ಷಿಪುಃ, ತನ್ಮತಾನುಸಾರೇಣ ಸೂತ್ರಾಕ್ಷರಾಣಿ ವ್ಯಾಖ್ಯಾಸ್ಯಂತೇ" (ಶ್ರೀ.ಭಾ. ೧-೧-೧) ಇತಿ ರಾಮಾನುಜಾಚಾರ್ಯಾಣಾಂ ಲಿಟ್‌ಪ್ರಯೋಗಾದುನ್ನೇತುಂ ಶಕ್ಯತೇ,

---

ಪ್ರಮಾಣಲಕ್ಷಣದಲ್ಲಿ ವರ್ಣಿಸಿರುತ್ತಾರೆ" ಎಂದು ಹೇಳಿ ಈ ಮೇಲಿನ ವಾಕ್ಯವನ್ನು ಬರೆದಿರುತ್ತಾರೆ. ಇದರಿಂದ ಉಪವರ್ಷಾಚಾರ್ಯರು ಪೂರ್ವಮೀಮಾಂಸೆಗೆ ಬರೆದಂತೆ ಶಾರೀರಕಮೀಮಾಂಸೆಯನ್ನಧಿಕರಿಸಿಯೂ ವ್ಯಾಖ್ಯಾನವನ್ನು ಬರೆದಿದ್ದರೆಂದು ಭಾಷ್ಯಾಭಿಪ್ರಾಯವೆಂದು ತೋರುತ್ತದೆ. ಆ ಉಪವರ್ಷರನ್ನು "ಭಗವಾನ್" ಭಗವಂತರಾದ ಎಂದು ವಿಶೇಷಣವನ್ನು ಕೊಡುವುದರ ಮೂಲಕ ಗೌರವಿಸುತ್ತಾ ತಮ್ಮ ಸಂಪ್ರದಾಯವಾದ ಪೂರ್ವಾಚಾರ್ಯರ ಪರಂಪರೆಯಲ್ಲಿ ಸೇರಿಸಿರುತ್ತಾರೆಂದು ಗೊತ್ತಾಗುತ್ತದೆ. ಈ ಸ್ಥಳದಲ್ಲೂ ಕೆಲವರು ಹಳೆಯ ಪ್ರಸಿದ್ಧರಾದ ವೇದಾಂತಿಗಳ ಹೆಸರನ್ನು ತಮ್ಮ ಸಂಪ್ರದಾಯ ಕರ್ತೃಗಳ ಪರಂಪರೆಯ ಮಧ್ಯದಲ್ಲಿ ಸೇರಿಸಬೇಕೆಂದವರಾಗಿ ಹೀಗೆ ಹೇಳುವರು, (೧) ವೃತ್ತಿಕಾರರಾದ ಬೋಧಾಯನರಿಗೇ ಉಪವರ್ಷ-ರೆಂದು ಹೆಸರಿರುತ್ತದೆ (ತ.ಟಿ.ಗೂ.ಸಂ.) ಎಂದು. ಇಲ್ಲಿ ಈ ಮಾತನ್ನು ಹೇಳಬೇಕಾಗುತ್ತದೆ. ಏನೆಂದರೆ ಆಚಾರ್ಯರಾದ ಶ್ರೀಶಬರಸ್ವಾಮಿಗಳು "ಗೌಃ" ಎಂಬ ಸ್ಥಳದಲ್ಲಿ ಶಬ್ದವೇನಿದೆ? ಎಂದರೆ ಗಕಾರ ಔಕಾರ ವಿಸರ್ಗಗಳು ಎಂದು ಭಗವಂತರಾದ ಉಪವರ್ಷರು (ಶಾ.ಭಾ ೧-೧-೫) ಎಂಬುದಾಗಿ ಉಪವರ್ಷರನ್ನು ಭಗವಚ್ಛಬ್ದದಿಂದ ಕರೆದಿರುತ್ತಾರೆ. ಎಲ್ಲೂ ಬೋಧಾಯನ ಎಂಬ ಶಬ್ದವನ್ನು ಸ್ವೀಕರಿಸಿಲ್ಲ. ಶಂಕರಭಗವತ್ಪಾದರಾಗಲೀ ಅವರ ಶಿಷ್ಯರಾದ

ಶ್ರೀಭಾಷ್ಯಪ್ರಣಯನಕಾಲೇऽಪಿ ಬೋಧಾಯನವೃತ್ತಿಃ ಸಂಪೂರ್ಣತಯಾ ನ ದೃಕ್ಪಥಂ ಯಾತಾ ತದಾತ್ವೇ ಪ್ರಚಲಿತಪೂರ್ವಾಚಾರ್ಯಮತಮನುಸೃತ್ಯೈವ ತು ಭಾಷ್ಯಂ ನಿರ್ಮಿತಂ ತೈಃ ಇತಿ | ಅಸ್ತಿ ಚ ಜನಶ್ರುತಿಃ ರಾಮಾನುಜಾಚಾರ್ಯಾ ವೃತ್ತ್ಯನ್ವೇಷಣಾರ್ಥಂ ಕಾಶ್ಮೀರಾನ್ ಗತಾಸ್ತತ್ರ ಬಹುಕ್ಲೇಶಾತ್ ಸಕೃದವಲೋಕನಾಯೈವ ಲಬ್ಧಾನುಜ್ಞಾಃ, ತಂ ಗ್ರಂಥಮಾಸೇದುಸ್ತತ್ರತ್ಯಗ್ರಂಥಾಲಯಾತ್, ತಚ್ಛಿಷ್ಯಶ್ಚ ಕಶ್ಚಿದೇಕಸಂಧಿಗ್ರಾಹೀ ಶ್ರೀಭಾಷ್ಯಲೇಖನಸಮಯೇ ವೃತ್ತಿಗ್ರಂಥಗತಾನಿ ವಾಕ್ಯಾನಿ ಸ್ವೇನೈಕವಾರಂ ಪಠಿತಾನಿ ತತ್ರ ತತ್ರಾಚಾರ್ಯಾನ್ ಸ್ಮಾರಯಾಮಾಸ ಇತಿ | ಶ್ರೀಭಾಷ್ಯೇऽಪಿ ಅತ್ಯಲ್ಪಸಂಖ್ಯಾಕಾನ್ಯೇವ ವೃತ್ತಿವಾಕ್ಯಾನಿ ಸಮುದಾಹೃತಾನಿ ರಾಮಾನುಜಾಚಾರ್ಯೈಃ | ತತ್ರೈವಂ ಸ್ಥಿತೇ ಗ್ರಂಥವೃತ್ತೇ ವೃತ್ತಿಗ್ರಂಥಪ್ರಣೇತಾ ಕೋ ವಾ ಸ್ಯಾದಿತ್ಯಯಮೇವ ಪ್ರಶ್ನಸ್ತಾವನ್ನ ಸುಖೇನ ನಿರ್ಣೇಯ ಇತಿ ಪ್ರಾಪ್ನೋತಿ | ಅಪಿ ಚ ವಿಶಿಷ್ಟಾದ್ವೈತಿನ ಏವ ಮಹಾಚಾರ್ಯಾಃ ಸ್ವಕೃತಪಾರಾಶರ್ಯವಿಜಯೇ ಉಪವರ್ಷಬೋಧಾಯನಯೋರ್ಭೇದಮೇವಾಸ್ಥಿತವಂತಃ - ಇತ್ಯಪಿ ವಿಜ್ಞಾಯತೇ (ಗೂ.ಸಂ.) ||

---

ಅದ್ವೈತಿಗಳಾಗಲೀ ಎಲ್ಲೂ ಬೋಧಾಯನರನ್ನು ಪರಾಮರ್ಶಿಸಿಲ್ಲ. ಇನ್ನೂ ಒಂದು ಏನೆಂದರೆ ಶ್ರೀರಾಮಾನುಜಾಚಾರ್ಯರು ತಮ್ಮ ಶ್ರೀಭಾಷ್ಯದಲ್ಲಿ "ಭಗವದ್ಬೋಧಾಯನ ಕೃತವಾದ ವಿಸ್ತೀರ್ಣವಾದ ಬ್ರಹ್ಮಸೂತ್ರ ವೃತ್ತಿಯನ್ನು ಹಿಂದಿನ ಆಚಾರ್ಯರು ಸಂಕ್ಷೇಪಿಸಿರುತ್ತಾರೆ. ಅವರ ಮತಾನುಸಾರವಾಗಿ ಸೂತ್ರಾಕ್ಷರಗಳನ್ನು ವ್ಯಾಖ್ಯಾನ ಮಾಡಲಾಗುತ್ತದೆ" ಎಂದು "ಸಂಚಿಕ್ಷಿಪುಃ" ಎಂದು ಲಿಟ್ ಪ್ರಯೋಗವನ್ನು (ಪರೋಕ್ಷ ಭೂತಾರ್ಥವನ್ನು) ಮಾಡಿರುವುದರಿಂದ ಅವರು ಶ್ರೀಭಾಷ್ಯವನ್ನು ರಚಿಸಿದ ಕಾಲದಲ್ಲೂ ಸಹ ಬೋಧಾಯನ ವೃತ್ತಿಯು ಸಂಪೂರ್ಣವಾಗಿ ಸಿಕ್ಕಿಲ್ಲವೆಂತಲೂ, ಆಗಿದ್ದ ಪ್ರಸಿದ್ಧವಾದ ಪೂರ್ವಾಚಾರ್ಯರ ಮತವನ್ನನುಸರಿಸಿಯೇ ಭಾಷ್ಯವನ್ನು ಅವರು ನಿರ್ಮಿಸಿರುತ್ತಾರೆಂದು ತೋರುತ್ತದೆ. ಈ ವಿಷಯಕ್ಕೆ ಒಂದು ಕಥೆಯೂ ಇದೆ. ಏನೆಂದರೆ ಒಮ್ಮೆ ಶ್ರೀ ರಾಮಾನುಜಾಚಾರ್ಯರು ಬೋಧಾಯನ ವೃತ್ತಿಯನ್ನು ಹುಡುಕುವುದಕ್ಕಾಗಿ ಕಾಶ್ಮೀರಕ್ಕೆ ಹೋಗಿದ್ದರು. ಅಲ್ಲಿ ಬಹಳ ಕ್ಲೇಶದಿಂದ ಒಂದೇ ಸಲ ವೃತ್ತಿಯುನ್ನು ನೋಡಲು ಅನುಮತಿಯನ್ನು ಪಡೆದವರಾಗಿ, ಆ ಗ್ರಂಥವನ್ನು ಗ್ರಂಥಾಲಯದಿಂದ ಪಡೆದರು. ಅವರಿಗೆ ಏಕಸಂಧಿಗ್ರಾಹಿಯಾದ ಶಿಷ್ಯನೊಬ್ಬನಿದ್ದನು. (ಅವನು ಒಮ್ಮೆ ಆ ವೃತ್ತಿಯನ್ನು ಓದಿದ್ದರಿಂದ) ಶ್ರೀಭಾಷ್ಯವನ್ನು ಬರೆಯುವ ಸಂದರ್ಭದಲ್ಲಿ ವೃತ್ತಿಗ್ರಂಥದಲ್ಲಿದ್ದ

ತದೇವಂವಿಧೇ ವ್ಯತಿಕರೇ ಯತ್ ಕೇಚನ ವಿಶಿಷ್ಟಾದ್ವೈತಿನಃ ಪ್ರಾಹುಃ ಶ್ರೀಭಾಷ್ಯಕಾರೈರ್ವೃತ್ತಿಕಾರವಾಕ್ಯತದ್ಭಾಷ್ಯಕರ್ತ್ಯ್ರಣಾಂ ಬೋಧಾಯನಟಂಕದ್ರಮಿಡಾಚಾರ್ಯಾಣಾಮ್, ಉಪವರ್ಷಬ್ರಹ್ಮನಂದಿದ್ರವಿಡಾಚಾರ್ಯಾಪರನಾಮಭಿರ್ವ್ಯಪದಿಶ್ಯಮಾನಾನಾಂ ಜೀವಭಿನ್ನಸವಿಶೇಷಬ್ರಹ್ಮಪರಿಣಾಮವಾದೇ ಐಕಮತ್ಯಸ್ಯ ಸ್ಫುಟಂ ಶ್ರೀಭಾಷ್ಯಾದಿಷು ದರ್ಶಿತತ್ವಾತ್, ಯದದ್ವೈತಿನೋ ವೃತ್ತಿಕಾರನುತಂ ದೂಷಯಂತಿ ವಾಕ್ಯಕಾರಾದೀಂಸ್ತು ನಿರ್ವಿಶೇಷಾದ್ವೈತವಾದಿತ್ವೇನ ಸ್ವೀಕುರ್ವಂತಿ, ತದನುಚಿತಮಿತಿ ತತ್ರ ನ ಕಿಂಚಿದ್ ವಕ್ತವ್ಯಮವಶಿಷ್ಯತೇ ಬೋಧಾಯನಾದೀನಾಮ್ ಉಪವರ್ಷಾದಿಭಿರೈಕ್ಯಸ್ಯ ಅದ್ಯಾಪಿ ಕಥಮಪ್ಯನಿಶ್ಚಿತತ್ವಾದಿತಿ ಧ್ಯೇಯಮ್ ||

೧೨. **ದ್ವೈತಿವೇದಾಂತಿನೋಽಪಿ ನಾಸನ್ ಭಾಷ್ಯಕಾರಕಾಲೇ** - ಏವಂ ತಾವತ್, ವಿಶಿಷ್ಟಾದ್ವೈತಸಂಪ್ರದಾಯಸ್ಥಾನಾಂ ವೃತ್ತಿಕಾರವಾಕ್ಯಕಾರಭಾಷ್ಯಕಾರಾಣಾಂ

---

ವಾಕ್ಯಗಳನ್ನು ಅಲ್ಲಲ್ಲಿ ಆತನು ನೆನಪಿಗೆ ತಂದುಕೊಡುತ್ತಿದ್ದನು. ಶ್ರೀ ಭಾಷ್ಯದಲ್ಲೂ ಸಹ ಅತ್ಯಲ್ಪವಾಗಿರುವ ವೃತ್ತಿಗ್ರಂಥದ ವಾಕ್ಯವನ್ನು ರಾಮಾನುಜರು ಉದಾಹರಿಸಿರುತ್ತಾರೆ. ಆದ್ದರಿಂದ ಗ್ರಂಥದ ಇತಿಹಾಸದ ವಿಷಯದಲ್ಲಿ ಹೇಳಬೇಕಾದರೆ ಈ ವೃತ್ತಿಗ್ರಂಥವನ್ನು ಯಾರು ರಚಿಸಿರಬಹುದು ಎಂಬೀ ಪ್ರಶ್ನೆಯೇ ಸುಲಭವಾಗಿ ನಿರ್ಣಯವನ್ನು ಮಾಡುವುದಕ್ಕಾಗುವುದಿಲ್ಲ. ಅಷ್ಟೇ ಅಲ್ಲ, ವಿಶಿಷ್ಟಾದ್ವೈತಿಗಳೇ ಆದ ಮಹಾಚಾರ್ಯರು ತಾವು ರಚಿಸಿದ್ದಾದ ಪಾರಾಶರ್ಯವಿಜಯವೆಂಬ ಗ್ರಂಥದಲ್ಲಿ ಉಪವರ್ಷಬೋಧಾಯನರಿಗೆ ಭೇದವನ್ನೇ ಒಪ್ಪಿರುತ್ತಾರೆಂದು ಗೊತ್ತಾಗುತ್ತದೆ (ಗೂ. ಸಂ. ಪು. ೮).

ಈ ರೀತಿಯಾಗಿ ಆಚಾರ್ಯರುಗಳ ಕಲೆಬೆರಿಕೆ ಇರುವಾಗ ಕೆಲವು ವಿಶಿಷ್ಟಾದ್ವೈತಿಗಳು ಹೇಳುವುದೇನೆಂದರೆ – ಶ್ರೀಭಾಷ್ಯಕಾರರಾದ ರಾಮಾನುಜರು ತಮ್ಮ ಶ್ರೀಭಾಷ್ಯದಲ್ಲಿ ವೃತ್ತಿಕಾರರು ಅದರ ವಾಕ್ಯಕಾರರು ಮತ್ತು ಭಾಷ್ಯಗಳ ಕರ್ತೃಗಳು ಬೋಧಾಯನ, ಟಂಕ, ದ್ರಮಿಡಾಚಾರ್ಯರೆಂಬುವರು ಯಾರಿದ್ದಾರೆ, ಅವರೇ ಉಪವರ್ಷ, ಬ್ರಹ್ಮನಂದಿ, ದ್ರವಿಡಾಚಾರ್ಯರೆಂಬ ಇನ್ನೊಂದು ಹೆಸರಿನಿಂದ ಕರೆಸಿಕೊಂಡವರೆಂತಲೂ, ಜೀವರಿಗಿಂತ ಬೇರೆಯದಾದ ಸವಿಶೇಷವಾದ ಬ್ರಹ್ಮಪರಿಣಾಮವಾದದಲ್ಲಿ ಇವರಿಗೆ ಐಕಮತ್ಯವು ಸ್ಪಷ್ಟವಾಗಿ ಶ್ರೀಭಾಷ್ಯಾದಿಗಳಲ್ಲಿ ಕಂಡು ಬಂದಿರುವುದರಿಂದಲೂ, ಹಾಗೆಯೇ ಅದ್ವೈತಿಗಳು ವೃತ್ತಿಕಾರರ ಮತವನ್ನು

ತದನ್ಯೇಷಾಂ ವಾ ಶಂಕರಭಗವತ್ಪಾದಸಮಯೇ ತತ್ಪೂರ್ವಂ ವಾ ಅಸ್ತಿತ್ವೇ ನ ಪ್ರಮಾಣಮ್ ಉಪಲಭ್ಯತೇ ಇತಿ ಪ್ರತಿಪಾದಿತಮ್ | ಆನಂದತೀರ್ಥ-ಸಂಪ್ರದಾಯಸ್ಥಾನಾಂ ತು ನಾಮಾಪಿ ನ ಶ್ರೂಯತೇ ಸ್ಮ ತದಾತ್ವೇ ಇತಿ ನ ಪೃಥಗ್ ವಕ್ತವ್ಯಮ್ | ಯತ್ಕಾರಣಮ್ ಆನಂದತೀರ್ಥಾಃ ಕೇವಲನಿಮಿತ್ತಭೂತೇಶ್ವರ-ಕಾರಣವಾದಿನಃ | ನಿಮಿತ್ತಕಾರಣವಾದಶ್ಚ ಭಾಷ್ಯೇ ವೇದಬಾಹ್ಯತ್ವೇನ ನಿಂದಿತಃ | ತದ್ಯಥಾ ಪತ್ಯಧಿಕರಣಭಾಷ್ಯೇ -

> (೧) "ಇದಾನೀಂ ಕೇವಲಾಧಿಷ್ಠಾತ್ರೀಶ್ವರಕಾರಣವಾದಃ ಪ್ರತಿಷಿಧ್ಯತೇ | ತತ್ಕಥಮವಗಮ್ಯತೇ ? "ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾಂತಾನುಪರೋಧಾತ್", "ಅಭಿಧ್ಯೋಪದೇಶಾಚ್ಚ" ಇತ್ಯತ್ರ ಪ್ರಕೃತಿಭಾವೇನ ಅಧಿಷ್ಠಾತೃಭಾವೇನ ಚ ಉಭಯಸ್ವಭಾವಸ್ಯ ಈಶ್ವರಸ್ಯ ಸ್ವಯಮೇವ ಆಚಾರ್ಯೇಣ ಪ್ರತಿಷ್ಠಾಪಿತತ್ವಾತ್| ಯದಿ ಪುನರವಿಶೇಷೇಣ ಈಶ್ವರಕಾರಣವಾದಮಾತ್ರಮಿಹ ಪ್ರತಿಷಿಧ್ಯೇತ, ಪೂರ್ವೋತ್ತರವಿರೋಧಾದ್ ವ್ಯಾಹತಾಭಿವ್ಯಾಹಾರಃ ಸೂತ್ರಕಾರ ಇತ್ಯೇತದಾ-

---

ಏನು ದೂಷಿಸುತ್ತಾರೆ, ಹಾಗೆಯೇ ವಾಕ್ಯಕಾರರೇ ಮುಂತಾದವರನ್ನು ನಿರ್ವಿಶೇಷಾದ್ವೈತವಾದಿಗಳೆಂದು ಸ್ವೀಕರಿಸುತ್ತಾರೆ, ಅದು ಸರಿಯಲ್ಲ, ಈ ವಿಷಯದಲ್ಲಿ ಅವರಿಗೆ ಏನೂ ಹೇಳಬೇಕಾದದ್ದು ಉಳಿದಿರುವುದಿಲ್ಲ. ಏಕೆಂದರೆ ಬೋಧಾಯನರೇ ಮುಂತಾದವರು ಉಪವರ್ಷಾಚಾರ್ಯರೇ ಮುಂತಾದವ-ರೊಡನೆ ಐಕ್ಯರಾಗಿದ್ದಾರೆ (ಒಬ್ಬರೇ ಆಗಿದ್ದಾರೆ) ಎಂಬುದು ಇಂದಿಗೂ ನಿಶ್ಚಿತವಾಗಿರುವುದಿಲ್ಲ.

**೧೨) ಶಂಕರಭಗವತ್ಪಾದರ ಕಾಲದಲ್ಲಿ ದ್ವೈತಿವೇದಾಂತಿಗಳೂ ಇರಲಿಲ್ಲ.** ಹೀಗೆ ವಿಶಿಷ್ಟಾದ್ವೈತ ಸಂಪ್ರದಾಯದಲ್ಲಿದ್ದವರಾದ ವೃತ್ತಿಕಾರ ವಾಕ್ಯಕಾರ ಭಾಷ್ಯಕಾರರಾಗಲೀ ಅವರಿಗಿಂತ ಬೇರೆಯವರಾಗಲೀ ಶಂಕರಭಗವತ್ಪಾದರ ಸಮಯದಲ್ಲಾಗಲೀ ಅದಕ್ಕೆ ಮುಂಚೆಯಾಗಲೀ ಇದ್ದರು ಎಂಬುದಕ್ಕೆ ಪ್ರಮಾಣವು ಕಂಡುಬಂದಿಲ್ಲ ಎಂಬುದನ್ನು ತೋರಿಸಿಕೊಟ್ಟಿದ್ದಾಯಿತು. ಇನ್ನು ಆನಂದತೀರ್ಥರ ಸಂಪ್ರದಾಯಸ್ಥರ ಹೆಸರೂ ಕೂಡ ಆ ಕಾಲದಲ್ಲಿ ಕೇಳಿ ಬಂದಿಲ್ಲ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಏಕೆಂದರೆ ಆನಂದತೀರ್ಥರು (ಮಾಧ್ವರು) ಕೇವಲ ನಿಮಿತ್ತನಾಗಿರುವ ಈಶ್ವರನು (ಜಗತ್ತಿಗೆ) ಕಾರಣನು ಎಂದು ಹೇಳುವವರು. ನಿಮಿತ್ತಕಾರಣ-ವಾದವನ್ನು ಭಾಷ್ಯದಲ್ಲಿ ವೇದ ಬಾಹ್ಯವಾದದ್ದೆಂದು ನಿಂದಿಸಿದೆ. ಅದು

ಪದ್ಯೇತ | ತಸ್ಮಾತ್, ಅಪ್ರಕೃತಿರಧಿಷ್ಠಾತಾ ಕೇವಲಂ ನಿಮಿತ್ತಕಾರಣಮ್ ಈಶ್ವರಃ ಇತ್ಯೇಷ ಪಕ್ಷೋ ವೇದಾಂತವಿಹಿತಬ್ರಹ್ಮೈಕತ್ವಪ್ರತಿಪಕ್ಷತ್ವಾತ್ ಯತ್ನೇನಾತ್ರ ಪ್ರತಿಷಿಧ್ಯತೇ | ಸಾ ಚೇಯಂ ವೇದಬಾಹ್ಯೇಶ್ವರಕಲ್ಪನಾ ಅನೇಕಪ್ರಕಾರಾ" ||

ಸೂ. ಭಾ. ೨-೨-೩೭,

ರಾಮಾನುಜಾಚಾರ್ಯಾಸ್ತು ಬ್ರಹ್ಮಪರಿಣಾಮವಾದಿನಃ | ಆಚಾರ್ಯಾ ಅಪಿ

(೨) ಅವಿದ್ಯಾಕಲ್ಪಿತೇನ ಚ ನಾಮರೂಪಲಕ್ಷಣೇನ ರೂಪಭೇದೇನ ವ್ಯಾಕೃತಾವ್ಯಾಕೃತಾತ್ಮಕೇನ ತತ್ತ್ವಾನ್ಯತ್ವಾಭ್ಯಾಮನಿರ್ವಚನೀಯೇನ ಬ್ರಹ್ಮ ಪರಿಣಾಮಾದಿಸರ್ವವ್ಯವಹಾರಾಸ್ಪದತ್ವಂ ಪ್ರತಿಪದ್ಯತೇ ||

ಸೂ.ಭಾ. ೨-೧-೨೭,

ಇತಿ ವ್ಯಾವಹಾರಿಕದೃಷ್ಟ್ಯಾ ಪರಿಣಾಮವಾದಮ್ ಉರೀಚಕ್ರುಃ | "ಬದ್ಧಾನ್ಮುಕ್ತಾಚ್ಚ

---

ಹೇಗೆಂದರೆ ಪತ್ಯಧಿಕರಣದಲ್ಲಿ (೧) ಈಗ ಕೇವಲ ಅಧಿಷ್ಠಾತೃವಾಗಿ (ಜಗತ್ತಿಗೆ) ನಿಮಿತ್ತಕಾರಣನು (ಈಶ್ವರನು) ಎಂಬುದನ್ನು ಅಲ್ಲಗಳೆಯಲಾಗುತ್ತದೆ. ಇದು ಹೇಗೆ ಗೊತ್ತಾಗುತ್ತದೆ ? ಎಂದರೆ – "ಈಶ್ವರನು ಉಪಾದಾನಕಾರಣನೂ ಆಗಿರುತ್ತಾನೆ ಏಕೆಂದರೆ ದೃಷ್ಟಾಂತಗಳಿಗೆ ಪೀಡೆಯಾಗದೇ ಇರಬೇಕಾಗಿರುವುದರಿಂದ" "ಧ್ಯಾನಮಾಡಿ ಸೃಷ್ಟಿಸಿದನು" ಎಂದು ಉಪಾದಾನಕಾರಣವಾಗಿಯೂ ನಿಮಿತ್ತಕಾರಣವೆಂತಲೂ ಎರಡು ಪ್ರಕಾರವಾಗಿ ಈಶ್ವರನು ಕಾರಣನಾಗಿರುತ್ತಾನೆಂದು ತಾವೇ ಬಾದರಾಯಣಾಚಾರ್ಯರು ನೆಲೆನಿಲ್ಲಿಸಿರುತ್ತಾರಾದ್ದರಿಂದ ಇದು ಹೀಗೆ. ಒಂದು ವೇಳೆ, ಏನೂ ವಿಶೇಷವಿಲ್ಲದೆ ಈಶ್ವರನು ಕಾರಣನು ಎಂಬುದನ್ನೇ ಇಲ್ಲಿ ಅಲ್ಲಗೆಳೆಯುತ್ತಿದ್ದಾರೆಂದಾದರೆ ಆಗ ಪೂರ್ವೋತ್ತರಗಳಿಗೆ ವಿರೋಧವಾಗುವುದರಿಂದ ಸೂತ್ರಕಾರರು ತಮ್ಮ ಮಾತಿಗೆ ತಾವೇ ವಿರುದ್ಧವಾಗಿ ಹೇಳುವರೆಂದಾಗುತ್ತದೆ. ಆದ್ದರಿಂದ ಉಪಾದಾನಕಾರಣವಾಗದೇ ಕೇವಲ ಈಶ್ವರನು ನಿಮಿತ್ತಕಾರಣನು ಎಂಬೀ ಪಕ್ಷವೇನುಂಟು, ಅದು ವೇದಾಂತಗಳಲ್ಲಿ ಹೇಳಿರುವ ಬ್ರಹ್ಮೈಕತ್ವಪಕ್ಷಕ್ಕೆ ವಿರುದ್ಧವಾದ್ದರಿಂದ ಪ್ರಯತ್ನಪೂರ್ವಕವಾಗಿ ಇಲ್ಲಿ ಅಲ್ಲಗಳೆಯಲಾಗುತ್ತದೆ. ಆ ಈ ವೇದಬಾಹ್ಯವಾದ ಈಶ್ವರನ ಕಲ್ಪನೆಯು ಅನೇಕ ಪ್ರಕಾರವಾಗಿರುತ್ತದೆ. (ಸೂ. ಭಾ. ೨–೨–೩೭)

(೨) ಅವಿದ್ಯಾಕಲ್ಪಿತವಾದ ನಾಮರೂಪ ಪ್ರಕಾರವಾದ ರೂಪಭೇದದಿಂದ

ಜೀವಾತ್ ಅತ್ಯಂತವಿಲಕ್ಷಣಃ ಪರಮಾತ್ಮಾ" ಇತಿ ವದಂತಸ್ತು ವೇದಾಂತಿನಃ ಪರಿಣಾಮವಾದಿಷು ಮಧ್ಯೇ ಭಗವತ್ಪಾದಕಾಲೇ ನಾಸನ್ ಇತ್ಯೇತಾವತ್ತು ಅಸ್ಮಾಭಿಃ ಪ್ರದರ್ಶಿತಂ ಗತೇನ ಗ್ರಂಥೇನ | ಕೇವಲನಿಮಿತ್ತಕಾರಣವಾದಿನಸ್ತು ವೇದಬಾಹ್ಯಾ ಇತಿ ಪ್ರಥಾ ಆಸೀತ್ ಭಗವತ್ಪಾದಸಮಯೆ ಇತಿ ಉಪರ್ಯುದಾಹೃತವಾಕ್ಯಾತ್ ಸುಸ್ಪಷ್ಟಮವಗಮ್ಯತೇ | ತೇನ ಆನಂದತೀರ್ಥೀಯಜಾತೀಯಕವೇದಾಂತಪ್ರಸ್ಥಾನಂ ನೈವೋತ್ಪನ್ನಮಭೂತ್ ತದಾತ್ವೇ ಇತಿ ನಿರ್ವಿವಾದಂ ಸಿದ್ಧಮ್ ||

೧೩. **ಉಪಸಂಹಾರಃ** - ತದೇವಮಂತಂ ಪ್ರತಾನಿತಯಾ ಕಿರಣದ್ವಯಗತ-ಚಿಂತಯಾ ಇದಮೇಕಂ ಸುನಿಷ್ಪನ್ನಮ್ ಯದದ್ವೈತಮೇವ ಸರ್ವೈರ್ವೇದಾಂತೈಃ ಪ್ರತಿಪಿಪಾದಯಿಷಿತೋ ರಾದ್ಧಾಂತಃ, ದ್ವೈತವಿಶಿಷ್ಟಾದ್ವೈತಾದಿವಾದಿನಸ್ತು ನೈವಾಸನ್ ಶಂಕರಭಾಷ್ಯಪ್ರಣಯನಸಮಯೇ, ತತಃ ಪ್ರಾಗ್ ವಾ - ಇತಿ | ಯದ್ಯಪಿ ಪ್ರಾಚೀನಾದ್ವೈತಿನಃ ಸರ್ವೇಽಪಿ ಜೀವಬ್ರಹ್ಮೈಕ್ಯಂ ನಿಯಮೇನಾನುಮೇನಿರೇ, ತಥಾಪಿ ತೇಷ್ವೇವ ಕೇಚಿತ್ ಜೈವಂ ರೂಪಂ ಪಾರಮಾರ್ಥಿಕಂ ಮನ್ಯಮಾನಾ

---

ಅದು ವ್ಯಾಕೃತಾವ್ಯಾಕೃತಸ್ವರೂಪವಾಗಿದ್ದು ತತ್ವವೆಂತಾಗಲೀ ಅದಕ್ಕಿಂತ ಬೇರೆಯೆಂತಾಗಲೀ ಹೇಳುವುದಕ್ಕೆ ಬಾರದ ಬ್ರಹ್ಮವು, ಪರಿಣಾಮವೇ ಮುಂತಾದ ಎಲ್ಲಾ ವ್ಯವಹಾರಕ್ಕೂ ಆಸ್ಪದವಾಗುತ್ತದೆ. (ಸೂ. ಭಾ. ೨-೧-೨೭) ಎಂದು ವ್ಯವಹಾರ ದೃಷ್ಟಿಯಿಂದ ಪರಿಣಾಮವಾದವನ್ನು ಒಪ್ಪಿರುತ್ತಾರೆ. ಇದುವರೆಗಿನ ಗ್ರಂಥದಿಂದ "ಬದ್ಧನೂ ಮುಕ್ತನೂ ಆದ ಜೀವನಿಗಿಂತ ಪರಮಾತ್ಮನು ಅತ್ಯಂತ ವಿಲಕ್ಷಣನು" ಎಂದು ಹೇಳುವ ಪರಿಣಾಮವಾದಿಗಳ ಮಧ್ಯೆ ಇರುವ (ವಿಶಿಷ್ಟಾದ್ವೈತ) ವೇದಾಂತಿಗಳು ಭಗವತ್ಪಾದರ ಕಾಲದಲ್ಲಿ ಇರಲೇ ಇಲ್ಲ ಎಂಬುದನ್ನು ನಾವು ತೋರಿಸಿರುತ್ತೇವೆ. (ಈಶ್ವರನು) ಕೇವಲ ನಿಮಿತ್ತಕಾರಣನು ಎಂದು ಹೇಳುವ ವಾದಿಗಳು ವೇದಬಾಹ್ಯರು ಎಂದು ಭಗವತ್ಪಾದರ ಕಾಲದಲ್ಲಿ ಮೇಲೆ ಉದಾಹರಿಸಿದ ವಾಕ್ಯದಿಂದ - ಪ್ರಸಿದ್ಧರಾಗಿದ್ದರು ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದರಿಂದ ಶ್ರೀ ಶಂಕರರ ಕಾಲಕ್ಕೆ ಆನಂದತೀರ್ಥಕ್ಕೆ (ಮಾಧ್ವಮತಕ್ಕೆ) ಸಂಬಂಧಪಟ್ಟ ವೇದಾಂತ ಪ್ರಸ್ಥಾನವು ಹುಟ್ಟಿಯೇ ಇರಲಿಲ್ಲ ಎಂದು ನಿರ್ವಿವಾದವಾಗಿ ಸಿದ್ಧವಾಗುತ್ತದೆ.

೧೩) **ಉಪಸಂಹಾರವು** - ಅದ್ವೈತವೇ ಎಲ್ಲಾ ವೇದಾಂತಗಳಲ್ಲೂ ಪ್ರತಿಪಾದನೆ ಮಾಡಬೇಕೆಂದುಕೊಂಡ ಸಿದ್ಧಾನ್ತವು, ದ್ವೈತವಿಶಿಷ್ಟಾದ್ವೈತ-

ಯತ್ಕಿಂಚಿತ್ಸಾಧನಾಯತ್ತಮೇವ ಜೀವಸ್ಯ ಪರಮಾತ್ಮನಾ ಐಕ್ಯಮಿತಿ ಮತಮಾಸ್ಥಿತಾಃ, ಏವಂ ಜಗದ್ಬ್ರಹ್ಮಣೋಃ ಸಂಬಂಧವಿಷಯೇ ಮೋಕ್ಷತತ್ಸಾಧನವಿಶೇಷವಿಷಯೇ ಚ ತೇ ಬಹುಧಾ ವಿಪ್ರತಿಪನ್ನಾ ಆಸನ್ನಿತಿ ಭಗವತ್ಪಾದೀಯಭಾಷ್ಯಾನೂದಿತವಿವಿಧವೃತ್ತಿಕಾರ-ಮತಸಮಾಲೋಚನಾದವಗಮ್ಯತೇ ||

ಶ್ರೀಶಂಕರಭಗವತ್ಪಾದೈರಪೀತರವೃತ್ತಿಕಾರೈರಿವ ಅದ್ವೈತಮೇವ ವೇದಾಂತಾರ್ಥ ಇತ್ಯಭ್ಯುಪಾಗಮಿ | ಅನಿತರಸಾಧಾರಣಪ್ರಕ್ರಿಯಾವಿಶೇಷಸ್ಯೈವ ವೇದಾಂತಸಮ್ಮತತ್ವೇನ ಸ್ವೀಕರಣಾತ್ತು ತೇಷಾಂ ಪ್ರಸ್ಥಾನಂ ಸಕಲೇತರವಿಲಕ್ಷಣಮಭೂತ್ | ಸಾ ಚ ಪ್ರಕ್ರಿಯಾ ನ ತೈರಭಿನವಮುಪಜ್ಞಾತಾ, ಕಿಂ ತು ಅನಾದಿಕಾಲಪ್ರವೃತ್ತಸಂಪ್ರದಾಯಾಗತೈವೇತಿ

---

ವಾದಿಗಳು ಶಂಕರಭಾಷ್ಯವನ್ನು ರಚಿಸಿದ ಕಾಲದಲ್ಲಾಗಲೀ ಅದಕ್ಕೆ ಮೊದಲಾಗಲೀ ಇರಲೇ ಇಲ್ಲ ಎಂಬುದು ಇದುವರೆಗಿನ ಎರಡು ಕಿರಣಗಳಿಂದ ವಿಚಾರಮಾಡಿದ್ದರಿಂದ ಸಿದ್ಧವಾಯಿತು. ಪ್ರಾಚೀನರಾದ ಎಲ್ಲಾ ಅದ್ವೈತಿಗಳೂ ಜೀವಬ್ರಹ್ಮರ ಐಕ್ಯವನ್ನು ಏಕಾಂತವಾಗಿ ಒಪ್ಪುವವರಾಗಿದ್ದರೂ, ಅವರಲ್ಲೇ ಕೆಲವರು ಜೀವರೂಪವು ನಿಜವಾಗಿರತಕ್ಕದ್ದೇ ಎಂತಲೂ ಅದು ಏನಾದರೊಂದು ಸಾಧನೆ ಮಾಡಿ ಅದಕ್ಕಧೀನವಾಗಿ ಜೀವನಿಗೆ ಪರಮಾತ್ಮನೊಡನೆ ಐಕ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟವರಾಗಿದ್ದರು. ಇದೇ ರೀತಿ ಬ್ರಹ್ಮಕ್ಕೂ ಜಗತ್ತಿಗೂ ಇರುವ ಸಂಬಂಧದ ವಿಷಯದಲ್ಲೂ ಹಾಗೂ ಮೋಕ್ಷವೂ ಅದರ ಸಾಧನದ ವಿಷಯದಲ್ಲೂ ಆ ವಾದಿಗಳು ಬಹಳವಾಗಿ ವಿರುದ್ಧಾಭಿಪ್ರಾಯವನ್ನು ಹೊಂದಿದ್ದರು ಎಂಬ ವಿಷಯಕ್ಕೆ ಶ್ರೀಶಂಕರಭಗವತ್ಪಾದರು ತಮ್ಮ ಭಾಷ್ಯದಲ್ಲಿ ಅನುವಾದ ಮಾಡಿಕೊಂಡ ನಾನಾ ಪ್ರಕಾರವಾದ ವೃತ್ತಿಕಾರರ ಮತದ ಸಮಾಲೋಚನೆಯಿಂದ ಗೊತ್ತಾಗುತ್ತದೆ.

ಬೇರೆ ವೃತ್ತಿಕಾರರಂತೆ ಶ್ರೀ ಶಂಕರಭಗವತ್ಪಾದರೂ ಸಹ ಅದ್ವೈತವೇ ವೇದಾನ್ತಾರ್ಥವೆಂದು ಒಪ್ಪಿಕೊಂಡಿದ್ದರು. ಬೇರೆ ಯಾರಲ್ಲೂ ಇರದ ಅಸಾಧಾರಣವಾದ ಪ್ರಕ್ರಿಯಾವಿಶೇಷವನ್ನೇ ವೇದಾನ್ತಸಮ್ಮತವಾದ ಪ್ರಕ್ರಿಯೆ ಎಂದು ಅವರು ಸ್ವೀಕರಿಸಿರುವುದರಿಂದ ಅವರ ಪ್ರಸ್ಥಾನವು ಬಾಕಿ ಎಲ್ಲಕ್ಕಿಂತಲೂ ವಿಲಕ್ಷಣವಾಯಿತು. ಆ ಪ್ರಕ್ರಿಯೆಯನ್ನು ಅವರೇ ಹೊಸದಾಗಿ ಕಲ್ಪಿಸಿದ್ದಲ್ಲ. ಮತ್ತೇನೆಂದರೆ, ಶ್ರೀ ಗೌಡಪಾದ, ದ್ರವಿಡಾಚಾರ್ಯ, ಬ್ರಹ್ಮನಂದಿಯೇ

ಶ್ರೀಗೌಡಪಾದದ್ರವಿಡಬ್ರಹ್ಮನಂದ್ಯಾದಿಪ್ರಾಚೀನಾಚಾರ್ಯಪ್ರಮಾಣವಾಕ್ಯೋಪಲಂಭಾದವಗಮ್ಯತೇ | ತೈರೇವ ಚ ವಾಕ್ಯೈಃ ಕತಿಭಿಶ್ಚಿದತ್ರೋದಾಹೃತೈರ್ದಿಙ್ಮಾತ್ರಂ ತಸ್ಯ ಪ್ರಕ್ರಿಯಾವಿಶೇಷಸ್ಯ ನಿಶ್ಚೇತುಂ ಶಕ್ನುವಂತ್ಯೇವ ಸೂಕ್ಷ್ಮಮತಯಃ | ಯಥಾ ಚ ಸೈವೈಕಾ ಶ್ರುತಿಯುಕ್ತ್ಯನುಭವಸಂಗಾನೇನ ವೇದಾಂತಾರ್ಥಂ ಗಮಯಂತೀ ಸಾಮ್ಪ್ರತಮಪಿ ವಿಜಯತೇ, ತಥಾ ಸಮನಂತರೋತ್ತರಕಿರಣೇ ದರ್ಶಯಿಷ್ಯತ ಇತಿ ಸರ್ವಂ ಶಿವಮ್||

ಇತಿಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರೇಣ್ಯಶ್ರೀಪೂಜ್ಯಪಾದಶ್ರೀಮಚ್ಛಂಕರಭಗವಚ್ಚರಣಸ್ಮರಣ-ಪರಿಚಯಾವಾಪ್ತವೇದಾಂತಪ್ರವೇಶೇನ ಶ್ರೀಬೋಧಾನಂದೇಂದ್ರಸರಸ್ವತೀಶಿಷ್ಯಸಚ್ಚಿದಾನಂದೇಂದ್ರ-ಸರಸ್ವತ್ಯಾಖ್ಯೇನ ಭಿಕ್ಷುಣಾ ಪ್ರಣೀತೇ ಶುದ್ಧಶಾಂಕರಪ್ರಕ್ರಿಯಾಭಾಸ್ಕರಾಭಿದೇ ಪ್ರಕರಣೇ ಶಾಂಕರಸಂಪ್ರದಾಯನಿರ್ಣಯೋ ನಾಮ ದ್ವಿತೀಯಃ ಕಿರಣಃ

---

ಮುಂತಾದ ಪ್ರಾಚೀನರಾದ ಆಚಾರ್ಯರ ಪ್ರಮಾಣವಾಕ್ಯವು ಕಂಡು ಬಂದಿದೆಯಾದ್ದರಿಂದ ಅನಾದಿಕಾಲದಿಂದ ಹೊರಟ ಸಂಪ್ರದಾಯದಿಂದ ಬಂದದ್ದೆಂದು ಗೊತ್ತಾಗುತ್ತದೆ. ಕೆಲವನ್ನು ಇಲ್ಲಿ ಸೂಚನಾ ಮಾತ್ರವಾಗಿ ಉದಾಹರಿಸಿದ್ದಾದ ಅವರ ವಾಕ್ಯದಿಂದ ಅವರ ಪ್ರಕ್ರಿಯೆಯಲ್ಲಿರುವ ವಿಶೇಷವನ್ನು ಸೂಕ್ಷ್ಮಮತಿಗಳಾದವರು ನಿಶ್ಚಯವನ್ನು ಮಾಡಿಕೊಳ್ಳಲು ಸಮರ್ಥರಾಗಿರುತ್ತಾರೆ. ಹೇಗೆ ಇದೊಂದೇ ಶ್ರುತಿಯುಕ್ತ್ಯನುಭವಕ್ಕೆ ಹೊಂದಿಕೊಳ್ಳುವ ಮೂಲಕ ಇಂದಿಗೂ ವೇದಾನ್ತಾರ್ಥವನ್ನು ತಿಳಿಸುತ್ತಾ ಕಂಗೊಳಿಸುತ್ತಿದೆಯೋ ಹಾಗೆಯೇ ಇನ್ನೂ (ಕೆಲವು ವಿಚಾರವನ್ನು) ಮುಂದಿನ ಕಿರಣದಲ್ಲಿ ತೋರಿಸಿಕೊಡುವೆವು.

**ಇತಿ – ಶುದ್ಧಶಾಂಕರ ಪ್ರಕ್ರಿಯಾಭಾಸ್ಕರದಲ್ಲಿ ಶಂಕರ ಸಂಪ್ರದಾಯ ನಿರ್ಣಯವೆಂಬ ಎರಡನೇ ಕಿರಣವು (ಇಲ್ಲಿಗೆ) ಮುಗಿಯಿತು.**

# ೩. ಶಾಂಕರವೇದಾಂತಮರ್ಯಾದಾ

೧೪.ಬ್ರಹ್ಮಾತ್ಮನಃ ಸ್ವಯಂಸಿದ್ಧತ್ವಮ್ ಶಂಕರಭಗವತ್ಪಾದೇಭ್ಯಃ ಪ್ರಾಗಪಿ ಪ್ರಚಲಿತಾನಾಂ ವಿವಿಧವೇದಾಂತಸಂಪ್ರದಾಯಾನಾಮ್ ಅದ್ವೈತಮೇವ ವೇದಾಂತಾರ್ಥತ್ವೇನ ಸಂಪ್ರತಿಪನ್ನಮಭೂತ್, ನಾಸನ್ನೇವ ವೇದಾಂತಿಷು ದ್ವೈತವಿಶಿಷ್ಟಾದ್ವೈತಾದಿಮತಪ್ರಭೇದಾ ಇತ್ಯಧಿಗತಮ್ | ಶಾಂಕರಪ್ರಸ್ಥಾನಂ ತು ಅನಾದಿಸಂಪ್ರದಾಯಾಗತಪ್ರಕ್ರಿಯಾವಿಶೇಷಾಭ್ಯುಪಗಮಾದೇವ ತೇಭ್ಯೋ ವಿಲಕ್ಷಣಮಿತಿ ಚ ಕತಿಚಿತ್ಪೂರ್ವಾಚಾರ್ಯವಾಕ್ಯೋದಾಹರಣಾತ್ ಪ್ರಸಾಧಿತಮ್ | ಅಥೇದಾನೀಮೇತತ್ಸಂಪ್ರದಾಯವಿದಾಂ ವಚನೈಃ ಪ್ರಕಟೀಕೃತಾ ವೇದಾಂತಮರ್ಯಾದಾವಿಶೇಷಾ ವಿಶಿಷ್ಯ ಪ್ರಖ್ಯಾಪ್ಯಂತೇ ಪ್ರಸ್ಥಾನಾಂತರವೈಲಕ್ಷಣ್ಯದ್ಯೋತನಾರ್ಥಮ್ ||

---

# ೩. ಶಾಂಕರವೇದಾಂತಸ್ಥಾನವು

**೧೪) ಬ್ರಹ್ಮಾತ್ಮತ್ವವು ಸ್ವಯಂಸಿದ್ಧವಾಗಿದೆ** – (ಹಿಂದಿನ ಕಿರಣದಲ್ಲಿ) ಶಂಕರಭಗತ್ಪಾದರಿಗಿಂತಲೂ ಮೊದಲು ಪ್ರಚಲಿತವಾದ ನಾನಾ ಪ್ರಕಾರವಾದ ವೇದಾನ್ತಸಂಪ್ರದಾಯಗಳ ಮಧ್ಯೆ ಅದ್ವೈತವೇ ವೇದಾಂತಾರ್ಥವೆಂದು ಎಲ್ಲರಿಗೂ ಒಪ್ಪಿಗೆಯಾಗಿತ್ತು, ವೇದಾನ್ತಿಗಳಲ್ಲಿ ದ್ವೈತ ವಿಶಿಷ್ಟಾದ್ವೈತಾದಿ ಮತಭೇದಗಳು ಇರಲೇ ಇಲ್ಲ ಎಂಬುದನ್ನು ತಿಳಿದುಕೊಂಡಿದ್ದಾಯಿತು. ಶಂಕರಪ್ರಸ್ಥಾನವು ಅನಾದಿಸಂಪ್ರದಾಯದಿಂದ ಬಂದ ಪ್ರಕ್ರಿಯಾ ವಿಶೇಷವನ್ನೇ ಒಪ್ಪಿಕೊಂಡಿರುವುದರಿಂದ ಅವರೆಲ್ಲರಿಗಿಂತಲೂ ವಿಲಕ್ಷಣವಾಗಿದೆ ಎಂಬುದನ್ನು ಕೆಲವು ಹಿಂದಿನ ಆಚಾರ್ಯರ ವಾಕ್ಯದ ಉದಾಹರಣೆಯಿಂದ ತೀರ್ಮಾನಿಸಿದ್ದಾಯಿತು. ಇನ್ನು ಈಗ ಈ ಸಂಪ್ರದಾಯವನ್ನು ಬಲ್ಲವರ ವಚನಗಳಿಂದ ಪ್ರಕಟಗೊಂಡ ವೇದಾನ್ತಮರ್ಯಾದಾವಿಶೇಷಗಳನ್ನು ವಿಶೇಷವಾಗಿ ತೋರಿಸಲಾಗುತ್ತದೆ. (ಇದರ ಉದ್ದೇಶವೇನೆಂದರೆ) ಬೇರೆ ಪ್ರಸ್ಥಾನಗಳೊಡನೆ ಇದಕ್ಕಿರುವ ವ್ಯತ್ಯಾಸವನ್ನು ತೋರಿಸುವುದು. ಇಲ್ಲಿ ಮೊಟ್ಟಮೊದಲನೇಯದಾಗಿ ಹಿಂದಿನ ಕಿರಣದಲ್ಲಿ ಉದಾಹರಿಸಿದ್ದಾದ ದ್ರವಿಡಾಚಾರ್ಯರ ವಾಕ್ಯವನ್ನು ವಿಚಾರಿಸುವುದು ಯೋಗ್ಯವಾಗಿದೆ.

ತತ್ರ ಸರ್ವಪ್ರಥಮನಿರೂಪಣಮರ್ಹತಿ ಪೂರ್ವಕಿರಣೋದಾಹೃತಂ ದ್ರವಿಡಾಚಾರ್ಯವಾಕ್ಯಮ್ -

(೧) "ಸಿದ್ಧಂ ತು ನಿವರ್ತಕತ್ವಾತ್" ಇತಿ | ಅಸ್ಯಾಯಮಭಿಪ್ರಾಯಃ ಸರ್ವತ್ರ ಶ್ರುತಿಷು ಬ್ರಹ್ಮಣ್ಯಾತ್ಮಶಬ್ದಪ್ರಯೋಗಾತ್, ಆತ್ಮಶಬ್ದಸ್ಯ ಚ ಪ್ರತ್ಯಗಾತ್ಮನ್ಯೇವ ರೂಢತ್ವಾತ್ ಸರ್ವಸ್ಯಾತ್ಮತ್ವೇನೈವ ಬ್ರಹ್ಮ ವಿವಕ್ಷಿತಮಿತಿ ಗಮ್ಯತೇ | ಆತ್ಮನಶ್ಚ ಸ್ವಯಂಸಿದ್ಧತ್ವಂ ಸರ್ವೈರಪ್ಯಭ್ಯುಪೇಯಮ್, ಸರ್ವೈರಪಿ "ಅಹಮಸ್ಮಿ" ಇತ್ಯೇವ ಪ್ರತೀಯಮಾನತ್ವಾತ್, "ನಾಹಮಸ್ಮಿ" ಇತಿ ಕೇನಚಿದಪಿ ಪ್ರತ್ಯೇತುಮಶಕ್ಯತ್ವಾಚ್ಚ | ಇತ್ಥಂ ಚ ಸ್ವಯಂಸಿದ್ಧೇ ಬ್ರಹ್ಮಣಿ ಕಿಮಸ್ತಿ ಶಾಸ್ತ್ರಸ್ಯ ಕೃತ್ಯಂ ಯೇನಾಸ್ಯ ತತ್ರ ಪ್ರಾಮಾಣ್ಯಂ ಸ್ಯಾದಿತಿ ? ಅತ್ರ ದ್ರವಿಡಾಚಾರ್ಯ ಆಹ - ಸತ್ಯಮ್, ಸರ್ವಸ್ಯಾತ್ಮತ್ವೇನ ಪ್ರತೀಯಮಾನತ್ವಾದ್ ಬ್ರಹ್ಮ ಸ್ವಯಂಸಿದ್ಧಮಿತಿ, ತಥಾಪಿ ಸಿದ್ಧಂ ತು ಪ್ರಾಮಾಣ್ಯಂ ಶಾಸ್ತ್ರಸ್ಯ ಆತ್ಮವಿಷಯೇ, ತತ್ರಾತ್ಮತ್ವೇನಾಧ್ಯಾರೋಪಿತಾನಾಮತದ್ಧರ್ಮಾಣಾಂ ನಿವರ್ತನೇನ ಆತ್ಮವಸ್ತುವಿಶೇಷರೂಪಸಮರ್ಪಣಾತ್ - ಇತಿ ||

---

**೧) "ಸಿದ್ಧಂ ತು ನಿವರ್ತಕತ್ವಾತ್"** (ಶಾಸ್ತ್ರಪ್ರಾಮಾಣ್ಯವು ಸಿದ್ಧವಾಗಿದೆ ಹೇಗೆಂದರೆ, (ಆತ್ಮನದಲ್ಲದ್ದನ್ನು ತೆಗೆದು ಹಾಕುವುದರಿಂದ.) ಈ ಸೂತ್ರದ ಅಭಿಪ್ರಾಯವಿದು, ಎಲ್ಲಾ ಶ್ರುತಿಗಳಲ್ಲೂ ಬ್ರಹ್ಮದಲ್ಲಿಯೇ ಆತ್ಮ ಎಂಬ ಶಬ್ದ ಪ್ರಯೋಗಮಾಡಿರುವುದರಿಂದಲೂ, "ಆತ್ಮ" ಎಂಬ ಶಬ್ದವು ತೀರ ಒಳಗಿರುವ ಪ್ರತ್ಯಗಾತ್ಮನಲ್ಲೇ ರೂಢವಾಗಿರುವುದರಿಂದಲೂ, ಬ್ರಹ್ಮವು ಎಲ್ಲರಿಗೂ ಆತ್ಮವಾಗಿದೆ ಎಂದು ಹೇಳಬೇಕೆಂದುಕೊಂಡಿದೆ ಎಂಬುದು ಗೊತ್ತಾಗುತ್ತದೆ. ಆತ್ಮನು ಸ್ವಯಂಸಿದ್ಧನೆಂದು ಎಲ್ಲರೂ ಒಪ್ಪಬೇಕು, ಏಕೆಂದರೆ ಎಲ್ಲರೂ "ನಾನಿದ್ದೇನೆಂದೇ" ತಿಳಿಯುತ್ತಿರುವುದರಿಂದಲೂ, ನಾನಿಲ್ಲವೆಂದು ಯಾರಿಗೂ ತಿಳಿದುಕೊಳ್ಳುವುದಕ್ಕಾಗುವುದಿಲ್ಲವಾದ್ದರಿಂದಲೂ ಸ್ವಯಂಸಿದ್ಧನೆಂದು ತಿಳಿಯಬೇಕು. ಹೀಗೆ ಸ್ವಯಂಸಿದ್ಧನಾದ (ಆತ್ಮನಲ್ಲಿ) ಬ್ರಹ್ಮದಲ್ಲಿ ಶಾಸ್ತ್ರಕ್ಕೆ ವ್ಯಾಪಾರವಾದರೂ (ತಿಳಿಸಿಕೊಡುವ ಕೆಲಸವಾದರೂ) ಏನಿದ್ದೀತು? ಹಾಗಿದ್ದಿದ್ದರೆ ಅಲ್ಲಿ ಶಾಸ್ತ್ರವು ಪ್ರಮಾಣವು ಎಂದು ಹೇಳಬಹುದಾಗಿತ್ತು? ಹೀಗೆ ಆಕ್ಷೇಪವು ಬರಲಾಗಿ ಇದಕ್ಕೆ ದ್ರವಿಡಾಚಾರ್ಯರು ಹೇಳುತ್ತಾರೆ, ನಿಜ, ಎಲ್ಲರಿಗೂ ಆತ್ಮನಾಗಿ ತೋರಿಬರುತ್ತಿರುವುದರಿಂದ ಬ್ರಹ್ಮವು ಸ್ವಯಂಸಿದ್ಧವೆಂಬುದು ನಿಜವೇ, ಆದರೂ ಶಾಸ್ತ್ರವು ಆತ್ಮನ ವಿಷಯದಲ್ಲಿ

ತತ್ರ ಬ್ರಹ್ಮಣ ಆತ್ಮತ್ವೇನ ನಿತ್ಯಾಪರೋಕ್ಷತಯಾ ಸ್ವಯಂಸಿದ್ಧತ್ವೇ ಶ್ರುತಿಃ -

(೧) ಯತ್ ಸಾಕ್ಷಾದಪರೋಕ್ಷಾದ್ಬ್ರಹ್ಮ ಯ ಆತ್ಮಾ ಸರ್ವಾಂತರಃ ||
ಬೃ.೩-೪-೧.

(೨) ಸರ್ವಂ ಹ್ಯೇತದ್ ಬ್ರಹ್ಮಾಯಮಾತ್ಮಾ ಬ್ರಹ್ಮ || ಮಾಂ. ೨.

ಇತಿ ಚ | ತದೇವಂ ವೇದಾಂತೈಕಗಮ್ಯಂ ಸ್ವತಃಸಿದ್ಧಮಾತ್ಮತತ್ತ್ವಮಿತಿ ಸಾಂಪ್ರದಾಯಿಕೀಂ ಪ್ರಕ್ರಿಯಾಮವಲಂಬ್ಯೈವ ಭಾಷ್ಯಕಾರಃ ಪದೇ ಪದೇ ಸ್ವೀಯಭಾಷ್ಯೇಷು ಲಿಖತಿ ಸ್ಮ-

(೧) ನ ಹ್ಯಾತ್ಮಾ ಆಗಂತುಕಃ ಕಸ್ಯಚಿತ್, ಸ್ವಯಂಸಿದ್ಧತ್ವಾತ್ ||
ಸೂ.ಭಾ. ೨-೩-೭,

(೨) ನನು ಆಗಮೇನ ಆತ್ಮಾ ಪರಿಚ್ಛಿದ್ಯತೇ ಪ್ರತ್ಯಕ್ಷಾದ್ದಿನಾ ಚ ಪೂರ್ವಮ್ | ನ| ಆತ್ಮನಃ ಸ್ವತಃಸಿದ್ಧತ್ವಾತ್ | ಗೀ. ಭಾ. ೨- ೧೮,

---

ಪ್ರಮಾಣವೆಂಬುದು ಸಿದ್ಧವಾಗಿದೆ, ಹೇಗೆಂದರೆ ಆ ಸ್ವರೂಪದಲ್ಲಿ ತಾನೆಂದು ಹುಟ್ಟುಗಟ್ಟಿಕೊಂಡಿರುವ ಆತ್ಮನದಲ್ಲದ (ಉಪಾಧಿ) ಧರ್ಮಗಳನ್ನು ಅಲ್ಲಗಳೆಯುವುದರ ಮೂಲಕ ಆತ್ಮಸ್ವರೂಪವನ್ನು ತಿಳಿಸಿಕೊಡುತ್ತದೆ. ಇಲ್ಲಿ ಬ್ರಹ್ಮವು ಆತ್ಮವಾಗಿದ್ದುಕೊಂಡು ನಿತ್ಯಅಪರೋಕ್ಷವಾಗುವುದರ ಮೂಲಕ ಸ್ವಯಂಸಿದ್ಧವಾಗಿದೆ ಎಂಬ ವಿಷಯಕ್ಕೆ ಶ್ರುತಿ ಇದೆ.

(೧) ಯಾವುದು ಸಾಕ್ಷಾತ್ತಾಗಿಯೂ ಅಪರೋಕ್ಷವಾಗಿರುವ ಬ್ರಹ್ಮವು ಸರ್ವಾಂತರನಾದ ಆತ್ಮವಾಗಿದೆಯೋ (ಬೃ ೩-೪-೧)

(೨) "ಇದೆಲ್ಲವೂ ಬ್ರಹ್ಮವಷ್ಟೇ? ಈ ಆತ್ಮನೂ ಬ್ರಹ್ಮವಾಗಿರುತ್ತದೆ" (ಮಾಂಡೂ. ೨) ಎಂಬುದಾಗಿದೆ. ಹೀಗೆ ವೇದಾಂತ ಒಂದರಿಂದಲೇ ತಿಳಿದುಬರುವಂಥದ್ದಾಗಿದ್ದು (ಅದು) ಸ್ವತಃಸಿದ್ಧವಾದ ಆತ್ಮತತ್ತ್ವವಾಗಿದೆ ಎಂಬ ಸಾಂಪ್ರದಾಯಿಕವಾದ ಪ್ರಕ್ರಿಯೆಯನ್ನವಲಂಬಿಸಿಕೊಂಡೇ ಭಾಷ್ಯಕಾರರು ತಮ್ಮ ಭಾಷ್ಯದಲ್ಲಿ ಹೆಜ್ಜೆಹೆಜ್ಜೆಗೂ (ಹೀಗೆ) ಬರೆಯುತ್ತಾರೆ -

(೧) ಆತ್ಮನೆಂಬುವನು ಸ್ವಯಂಸಿದ್ಧನಾಗಿರುವುದರಿಂದ ಯಾರ (ಬುದ್ಧಿಗೂ) ಹೊಸದಾಗಿ ಬರುವವನಲ್ಲವಷ್ಟೇ? (ಸೂ.ಭಾ. ೨-೩-೭) (೨) ಆಗಮದಿಂದ

(೩) ಅಪರೋಕ್ಷತ್ವಾಚ್ಚ ಪ್ರತ್ಯಗಾತ್ಮಪ್ರಸಿದ್ಧೇಃ | ಸೂ.ಭಾ., ಅಧ್ಯಾ.ಭಾ.

(೪) ಯೋಽಸೌ ಉಪನಿಷತ್ಸ್ವೇವಾಧಿಗತಃ ಪುರುಷೋಽಸಂಸಾರೀ ಬ್ರಹ್ಮ...ನಾಸೌ ನಾಸ್ತಿ ನಾಧಿಗಮ್ಯತ ಇತಿ ವಾ ಶಕ್ಯಂ ವದಿತುಮ್, "ಸ ಏಷ ನೇತಿ ನೇತ್ಯಾತ್ಮಾ" (ಬೃ) ಇತ್ಯಾತ್ಮಶಬ್ದಾತ್, ಆತ್ಮನಶ್ಚ ಪ್ರತ್ಯಾಖ್ಯಾತುಮಶಕ್ಯತ್ವಾತ್ ||
ಸೂ.ಭಾ.೧-೧-೪,

೧೫. ಜೀವಸ್ಯ ಸದ್ಬ್ರಹ್ಮಾತ್ಮತ್ವಾತ್ ಅಕರ್ತೃತ್ವಂ ಸ್ವಭಾವಃ - ಸಮನ್ವಯ-ಸೂತ್ರಭಾಷ್ಯಾಂತೇ "ಅಪಿ ಚಾಹುಃ" (ಸೂ.ಭಾ.) ಇತ್ಯವತಾರಿತಂ ಶ್ಲೋಕತ್ರಯಂ ಭಗವತ್ಪಾದಸಂಮತಮದ್ವೈತಸಿದ್ಧಾಂತಸಾರಂ ಸಂಗೃಹ್ಣಾತಿ | ತತ್ರ ಪ್ರಥಮ-ಶ್ಲೋಕೋಽಯಮ್ -

(೨) ಗೌಣಮಿಥ್ಯಾತ್ಮನೋಽಸತ್ತ್ವೇ ಪುತ್ರದೇಹಾದಿಬಾಧನಾತ್ | ಸದ್ಬ್ರಹ್ಮಾ-ತ್ಮಾಹಮಿತ್ಯೇವಂ ಬೋಧೇ ಕಾರ್ಯಂ ಕಥಂ ಭವೇತ್ ||

---

ಆತ್ಮನು ಗೊತ್ತಾಗುತ್ತಾನಲ್ಲವೇ? ಇನ್ನೂ ಹೇಳಬೇಕಾದರೆ ಪ್ರತ್ಯಕ್ಷಾದಿ-ಗಳಿಂದಲೇ ತಿಳಿದು ಬರುತ್ತಾನಲ್ಲವೇ? ಎಂದರೆ ಆಗುವುದಿಲ್ಲ, ಏಕೆಂದರೆ ಆತ್ಮನು ಸ್ವಯಂಸಿದ್ಧನಾಗಿರುತ್ತಾನೆ (ಗೀ.ಭಾ. ೨-೧೮) (೩) ಅಪರೋಕ್ಷ-ನಾಗಿರುವುದರಿಂದ ಪ್ರತ್ಯಗಾತ್ಮನು ಪ್ರಸಿದ್ಧನಾಗಿರುತ್ತಾನೆ. (ಸೂ.ಭಾ.ಅಧ್ಯಾ.ಭಾ) (೪) ಯಾವಾತನು ಉಪನಿಷತ್ತಿನಲ್ಲೇ ತಿಳಿದುಬರುವ ಆತ್ಮನಾಗಿದ್ದಾನೋ, ಅಸಂಸಾರಿಯಾದ ಬ್ರಹ್ಮವೋ, ಆತನನ್ನು ಹೀಗಿಲ್ಲವೆಂತಾಗಲೀ, ಇಲ್ಲವೆಂತಾಗಲೀ ಗೊತ್ತಾಗುವುದಿಲ್ಲವೆಂತಾಗಲೀ ಹೇಳುವುದಕ್ಕಾಗುವುದಿಲ್ಲ. "ಆತನು ಹೀಗಲ್ಲ, ಹೀಗಲ್ಲ ಎಂಬ ರೂಪದ ಆತ್ಮನು", (ಬೃ) ಎಂದು ಆತ್ಮಶಬ್ದಪ್ರಯೋಗವನ್ನು ಮಾಡಿರುವುದರಿಂದಲೂ, ಆತ್ಮನನ್ನು ತಿರಸ್ಕರಿಸುವುದಕ್ಕಾಗುವುದಿಲ್ಲವಾದ್ದರಿಂದಲೂ - ಇದು ಹೀಗೆಯೇ.

೧೫) ಜೀವನು ಸದ್ಬ್ರಹ್ಮಾತ್ಮಸ್ವಭಾವದವನಾಗಿರುವುದರಿಂದ ಅಕರ್ತೃವೆಂಬುದು (ಅವನ) ಸ್ವಭಾವವು. ಸಮನ್ವಯಸೂತ್ರಭಾಷ್ಯದ ಕೊನೆಯಲ್ಲಿ "ಅಪಿ ಚಾಹುಃ" "ಇಲ್ಲೂ ಕೂಡ ಹೇಳುವರು" ಎಂದು ಮೂರು ಶ್ಲೋಕಗಳನ್ನು ಉದಾಹರಿಸಿರುತ್ತಾರೆ. ಅವು ಭಗವತ್ಪಾದರಿಗೆ ಒಪ್ಪಿಗೆಯಾದ ಅದ್ವೈತಸಿದ್ಧಾಂತದ ಸಾರವನ್ನೇ ಸಂಗ್ರಹಿಸಿವೆ. ಅವುಗಳಲ್ಲಿ ಇದು ಮೊದಲನೆಯ

ಇತಿ ||

ಅತ್ರ ಸ್ವಯಂಸಿದ್ಧಸ್ಯಾತ್ಮನಃ ಸ್ವಭಾವತ ಏವಾಕರ್ತೃತ್ವಮ್ ಇತಿ ವೇದಾಂತ-ಮರ್ಯಾದಾ ಸ್ಫುಟಿತಾ | ಅಯಮತ್ರ ಶ್ಲೋಕಾಭಿಪ್ರಾಯಃ | ಪುತ್ರಾದಿಷು ಸಕಲೇಷು ವಿಕಲೇಷು ವಾ "ಅಹಮೇವ ಸಕಲೋ ವಿಕಲೋ ವಾ"ಇತಿ ಪುತ್ರಾದಿಧರ್ಮಾನ್ ಆತ್ಮನ್ಯಧ್ಯಸ್ಯತಿ ಅತಿಪ್ರಾಕೃತಃ | ತತ್ರ ಪುತ್ರಾದೀನಾಂ ಸ್ವಾತ್ಮನಃ ಸಕಾಶಾದ್ ಭೇದಸ್ಯ ಪ್ರಸಿದ್ಧತ್ವಾತ್ ತೇ ಗೌಣಾತ್ಮಾನ ಇತಿ ವ್ಯಪದಿಶ್ಯಂತೇ | ಮುಖ್ಯಾತ್ಮಾ ತು ಸ್ವಯಮ್ ಇತಿ ಜಾನನ್ನೇವ ಹಿ ತತಃ ಪುತ್ರಾದಿಭೇದಂ ತೇಷ್ವಾತ್ಮೀಯಾಭಿಮಾನೌತ್ಕಟ್ಯಾತ್ ತದ್ಧರ್ಮಾನಾತ್ಮನ್ಯಧ್ಯಾರೋಪಯತಿ | ದೇಹಾದಯಸ್ತು - ದೇಹೇಂದ್ರಿಯಮನಾಂಸಿ, ಅಹಂಕಾರಶ್ಚ - ನ ತಥಾ ವಿವಿಕ್ತಾ ವಿಜ್ಞಾಯಂತೇ | "ಅಯಂ ದೇಹಃ, ಏಷ ತು ತದ್ವಿವಿಕ್ತೋ ಮಮಾತ್ಮಾ" ಇತ್ಯೇವಂ ವಿವೇಕಾಭಾವಾದೇವ ಹಿ ತತ್ರ "ಅಹಮ್" ಇತಿ ನಿರುಪಚಾರೇಣ ಮಿಥ್ಯಾಪ್ರತ್ಯಯೋ ವರ್ತತೇ | ಅತೋ ದೇಹೋ ಮಿಥ್ಯಾತ್ಮಾ, ಏವಂ ಇಂದ್ರಿಯಾದಿಷ್ವಪಿ ಮಂತವ್ಯಮ್ | ತದೇವಂ ದೇಹಾದಯೋ ಮಿಥ್ಯಾತ್ಮಾನ

---

ಶ್ಲೋಕವು.

(೧) ಗೌಣಮಿಥ್ಯಾತ್ಮನೋಽಸತ್ತ್ವೇ ಪುತ್ರದೇಹಾದಿಬಾಧನಾತ್ ।
ಸದ್ಬ್ರಹ್ಮಾತ್ಮಾಹಮಿತ್ಯೇವಂ ಬೋಧೇ ಕಾರ್ಯಂ ಕಥಂ ಭವೇತ್?

ಎಂದು.

"ಮಗ, ತನ್ನದೇಹ ಮುಂತಾದ ಗೌಣ್ಮಾತ್ಮಮಿಥ್ಯಾತ್ಮರುಗಳು ಸುಳ್ಳೆಂದಾಗಿ ನಾನು ಸದ್ಬ್ರಹ್ಮನೇ ಆಗಿರುವೆನೆಂದು ಜ್ಞಾನವಾದರೆ ಕರ್ಮವು ಹೇಗೆತಾನೇ ಇರುತ್ತದೆ." (ಶ್ಲೋಕರ್ಥವಿದು). ಈ ಶ್ಲೋಕದಲ್ಲಿ ಸ್ವಯಂಸಿದ್ಧನಾದ ಆತ್ಮನು ಸ್ವಭಾವದಿಂದಲೇ ಅಕರ್ತೃವಾದವನೆಂದು ಹೇಳುವ ವೇದಾನ್ತಸಿದ್ಧಾಂತವನ್ನು ಸ್ಪಷ್ಟಪಡಿಸಿದೆ. ಶ್ಲೋಕಭಿಪ್ರಾಯುವಾದರೋ ಇದಾಗಿದೆ – ಮಕ್ಕಳೇ ಮುಂತಾದವರಲ್ಲಿ ಯಾರಿಗಾದರೂ ಏನಾದರೂ ಹೆಚ್ಚುಕಡಿಮೆಯಾದರೆ ತನಗೇ ಆ ಹೆಚ್ಚು ಕಡಿಮೆಯಾಯಿತೆಂದೂ ಮಕ್ಕಳೇ ಮುಂತಾದವರ ಧರ್ಮವನ್ನೂ ಸಹ ಅತ್ಯಂತ ಪ್ರಾಕೃತನಾದವನು ತನ್ನಲ್ಲಿ ಹುಟ್ಟುಹಾಕಿಕೊಳ್ಳುತ್ತಾನೆ. ಇಲ್ಲಿ ಮಕ್ಕಳೇ ಮುಂತಾದವರು ತನಗಿಂತ ಬೇರೆಯಾದವರೆಂಬುದು ಪ್ರಸಿದ್ಧವಾಗಿರುವುದರಿಂದ ಅವರನ್ನು ಗೌಣಾತ್ಮರು ಎಂದು ಕರೆದಿದೆ. ತಾನೇ ನಿಜವಾದ (ಮುಖ್ಯವಾದ) ಆತ್ಮನೆಂದು ತಿಳಿದೇ ಆ ಮೇಲೆ ಪುತ್ರಾದಿಭೇದವನ್ನೂ

ಇತಿ ವ್ಯಪದಿಶ್ಯಂತೇ "ಅಹಂ ಸ್ಥೂಲಃ" , "ಅಹಂ ಪಶ್ಯಾಮಿ", "ಶೃಣೋಮಿ", "ವಿಜಾನಾಮಿ", "ದುಃಖ್ಯಾಮಿ", "ಅಹಂ ದೇಹಾದಿಸ್ವಾಮೀ" ಇತಿ ನಿರುಪಚಾರೇಣ ತತ್ರಾಹಂಬುದ್ಧೇರ್ಜಾಯಮಾನತ್ವಾತ್ | ತತ್ರೈವಂ ಸ್ಥಿತೇ "ತತ್ತ್ವಮಸಿ" ಇತಿ ಶಾಸ್ತ್ರಾಚಾರ್ಯೋಪದೇಶೇನ "ಏಕಮೇವಾದ್ವಿತೀಯಂ ಸದ್ಬ್ರಹ್ಮಾಹಮ್" ಇತಿ ಬೋಧೇ ಜಾತೇ, "ಅಹಂ ದೇವದತ್ತಃ, ಅಯಂ ವಿಷ್ಣುಮಿತ್ರೋ ಮಮ ಪುತ್ರಃ" - ಇತ್ಯಾದಿರೂಪಾ ಮಿಥ್ಯಾಬುದ್ಧಿರ್ಬಾಧಿತಾ ಭವತಿ | ತದಾನೀಂ ದೇಹಾದಿಷು, ತತ್ಸಂಬಂಧೇಷು ವಾ ಅಸತ್ತ್ವೇನ ಜ್ಞಾತೇಷು ಆತ್ಮಬುದ್ಧೇರಭಾವಾತ್, "ಅಹಮೇತತ್ ಕೃತ್ವಾ ಮದರ್ಥಂ ಪುತ್ರಾದ್ಯರ್ಥಂ ವಾ ಇದಂ ಕರ್ಮ ಕೃತ್ವಾ ತತ್ಫಲಂ ಪ್ರಾಪ್ಸ್ಯೇ" ಇತಿ ಸಂಕಲ್ಪೋ ನೈವ ಜಾಯತೇ | ದೇಹಾದಿಸಮವೇತಕರ್ಮಣಾಂ ಆತ್ಮನ್ಯಧ್ಯಾರೋಪಾಭಾವಾತ್ | ಅತಃ ಸದ್ಬ್ರಹ್ಮಾತ್ಮಬೋಧೇ ಸತಿ ನ ಕಾರ್ಯಮ್ ಅವಶಿಷ್ಯತೇ - ಇತಿ ||

---

ಅವರಲ್ಲಿ ತಮ್ಮವರೆಂಬ ಹೆಚ್ಚಿನ ಅಭಿಮಾನದಿಂದ ಅವರ ಧರ್ಮಗಳನ್ನು ತನ್ನಲ್ಲಿಯೂ ಆರೋಪಿಸಿಕೊಳ್ಳುತ್ತಾನೆ. ದೇಹ ಇಂದ್ರಿಯ ಮನಸ್ಸು ಅಹಂಕಾರಗಳು ಆರೀತಿ ವಿಂಗಡವಾಗಿ ತೋರಿಬರುವುದಿಲ್ಲ. "ಇದು ದೇಹವು", "ಇವನಾದರೋ ಅದಕ್ಕಿಂತ ಬೇರೆಯದಾದ ನನ್ನ ಆತ್ಮನು" ಎಂದು ವಿಂಗಡವಾಗಿ ತೋರದೇ ಇರುವುದರಿಂದ ಅವುಗಳಲ್ಲಿ "ನಾನೆಂದು" ಮುಖ್ಯಾರ್ಥದಲ್ಲೇ ತಪ್ಪಾದ ತಿಳಿವಳಿಕೆಯು ಇರುತ್ತದೆ. ಆದ್ದರಿಂದ ದೇಹವು ಮಿಥ್ಯಾತ್ಮವು, ಇದೇ ರೀತಿ ಇಂದ್ರಿಯ ಮುಂತಾದವುಗಳಲ್ಲೂ ತಿಳಿಯಬೇಕು. ಹೀಗೆ "ನಾನು ದಪ್ಪನು, ನಾನು ನೋಡುತ್ತೇನೆ, ಕೇಳುತ್ತೇನೆ, ತಿಳಿಯುತ್ತೇನೆ, ದುಃಖಿಯಾಗಿದ್ದೇನೆ, ನಾನು ದೇಹಾದಿಗಳಿಗೆಲ್ಲಾ ಒಡೆಯನು" ಎಂದು ನಿರುಪಚರಿತವಾಗಿ ಅವುಗಳಲ್ಲಿ ನಾನೆಂಬ ಬುದ್ಧಿಯು ಉಂಟಾಗುತ್ತಿರುವುದರಿಂದ ದೇಹಾದಿಗಳನ್ನು ಮಿಥ್ಯಾತ್ಮರು ಎಂದು ಕರೆಯಲಾಗುತ್ತದೆ. ಇದು ಹೀಗಿರುವಾಗ "ಅದೇ ನೀನಾಗಿರುವೆ" ಎಂಬ ಶಾಸ್ತ್ರೋಪದೇಶದಿಂದ "ಎರಡಿಲ್ಲದ ಒಂದೇ ಆದ ಸದ್ಬ್ರಹ್ಮವೇ ನಾನಾಗಿರುವೆನು ಎಂದು ಜ್ಞಾನವುಂಟಾಗಲಾಗಿ "ನಾನು ದೇವದತ್ತನು", "ಇವನುವಿಷ್ಣುಮಿತ್ರನು ನನ್ನ ಮಗನು" ಎಂಬೀರೂಪವಾದ ಮಿಥ್ಯಾಬುದ್ಧಿಯು ಬಾಧಿತವಾದದ್ದಾಗುತ್ತದೆ. ಆಗ ದೇಹಾದಿಗಳಲ್ಲಾಗಲೀ ಅದಕ್ಕೆ ಸಂಬಂಧಪಟ್ಟುಕೊಂಡವರ ವಿಷಯದಲ್ಲಾಗಲೀ ಅವರೆಲ್ಲಾ ಸುಳ್ಳೆಂದು ಗೊತ್ತಾಗಲಾಗಿ ಅವರ ವಿಷಯದಲ್ಲಿ ನಾನು (ನನ್ನದೆಂಬ) ಬುದ್ಧಿಯೇ ಇರುವುದಿಲ್ಲವಾದ್ದರಿಂದ ನಾನು ನನಗಾಗಿಯಾಗಲೀ ಪುತ್ರಾದಿಗಳಿಗಾಗಲೀ

ಅತ್ರ ಚ "ಬೋಧೇ ಕಾರ್ಯಂ ಕಥಂ ಭವೇತ್" ಇತಿ ವಚನಾತ್ ಅನವಬೋಧಾದೇವ ಜನಾಃ ಸಕ್ರಿಯಾತ್ಮಸ್ವರೂಪೇ ಅವತಿಷ್ಠಂತೇ, ವಸ್ತುತಸ್ತು ಸರ್ವೇಷಾಮಪ್ಯಾತ್ಮಾ ನಿಷ್ಕ್ರಿಯ ಏವ ಸ್ವಭಾವತಃ ಇತ್ಯುಕ್ತಂ ಭವತಿ ||

ತತ್ರಾವಿದ್ಯಾತ ಏವ ಕ್ರಿಯಾಕಾರಕಫಲವ್ಯವಹಾರಃ, ಅದ್ವಿತೀಯಾತ್ಮಾವಬೋಧೇ ತು ನ ಕಾರ್ಯಂ ಸಂಭವತೀತ್ಯತ್ರ ಶ್ರುತಿಃ -

(೮) ಯದಾ ಸರ್ವೇ ಪ್ರಮುಚ್ಯಂತೇ ಕಾಮಾ ಯೇಽಸ್ಯ ಹೃದಿ ಶ್ರಿತಾಃ |
ಅಥ ಮರ್ತ್ಯೋಽಮೃತೋ ಭವತ್ಯತ್ರ ಬ್ರಹ್ಮ ಸಮಶ್ನುತ ಇತಿ ||

ತದ್ಯಥಾಹಿನಿರ್ಲ್ವಯನೀ ವಲ್ಮೀಕೇ ಮೃತಾ ಪ್ರತ್ಯಸ್ತಾ ಶಯೀತೈವಮೇವೇದಂ
ಶರೀರಂ ಶೇತೇಽಥಾಯಮಶರೀರೋಽಮೃತಃ ಪ್ರಾಣೋ ಬ್ರಹ್ಮೈವ ತೇಜ ಏವ||

ಬೃ. ೪-೪-೭.

---

ಇಂಥದ್ದನ್ನು ಮಾಡಿ ಅದರ ಫಲವನ್ನು ಪಡೆದುಕೊಂಡೇನೆಂಬ ಸಂಕಲ್ಪವು ಹುಟ್ಟಿಕೊಳ್ಳುವುದೇ ಇಲ್ಲ. ದೇಹಾದಿಗಳೊಡನೆ ಸೇರಿಕೊಂಡ ಕರ್ಮಗಳು ಆತ್ಮನಲ್ಲಿ ಅಧ್ಯಾರೋಪವಾಗುವುದೆಂಬುದು ಹೊಂದುವುದಿಲ್ಲ, ಆದ್ದರಿಂದ "ನಾನು ಸದ್ಬ್ರಹ್ಮನು" ಎಂದು ಜ್ಞಾನವಾದರೆ ಕರ್ಮವು ಉಳಿದುಕೊಳ್ಳುವುದಿಲ್ಲ ಎಂದರ್ಥ. ಇಲ್ಲಿ ಜ್ಞಾನವಾದಮೇಲೆ ಹೇಗೆತಾನೆ ಕರ್ಮವಿದ್ದೀತು? ಎಂದು (ಆಕ್ಷೇಪಿಸಿರುವುದರಿಂದ) ಅಜ್ಞಾನದಿಂದಲೇ ಜನರು ಸಕ್ರಿಯಾತ್ಮಸ್ವರೂಪದಲ್ಲಿ ನೆಲೆನಿಂತಿರುತ್ತಾರೆ, ಆದರೆ ನಿಜವಾಗಿ ಎಲ್ಲರ ಆತ್ಮನೂ ಸ್ವಭಾವದಿಂದ ನಿಷ್ಕ್ರಿಯನೇ ಆಗಿರುತ್ತಾನೆಂದು ಹೇಳಿದಂತಾಯಿತು. ಅವಿದ್ಯಾವಂತನಾದವನಿಗೇ ಕ್ರಿಯಾಕಾರಕಫಲವ್ಯವಹಾರವೇ ಹೊರತು ಅದ್ವಿತೀಯಾತ್ಮಜ್ಞಾನವಾದ ಮೇಲೆ ಕರ್ಮವು ಹೊಂದುವುದಿಲ್ಲ ಎಂಬುದಕ್ಕೆ ಶ್ರುತಿ ಇರುತ್ತದೆ.

(೧) ಯದಾ ಸರ್ವೇ ಪ್ರಮುಚ್ಯನ್ತೇ ಕಾಮಾ ಯೇಽಸ್ಯ ಹೃದಿ ಶ್ರಿತಾಃ।
ಅಥ ಮರ್ತ್ಯೋಽಮೃತೋ ಭವತಿ ಅತ್ರ ಬ್ರಹ್ಮ ಸಮಶ್ನುತೇ ॥

ಯಾವಾಗ ಹೃದಯದಲ್ಲಿರುವ ಎಲ್ಲಾ ಕಾಮಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೋ ಆಗ (ಮುಂಚೆ) ಮರ್ತ್ಯನಾಗಿದ್ದವನು ಅಮೃತನಾಗುವನು, ಇಲ್ಲಿಯೇ ಬ್ರಹ್ಮವನ್ನು ಹೊಂದುವನು, ("ತದ್ಯಥಾ ಅಹಿನಿರ್ಲ್ವಯನೀ ವಲ್ಮೀಕೇ ಮೃತಾ ಪ್ರತ್ಯಸ್ತಾ ಶಯೀತ ಏವಮೇವೇದಂ ಶರೀರಂ ಶೇತೇ ಅಥಾಯಮಶರೀರೋ ಅಮೃತಃ ಪ್ರಾಣೋ ಬ್ರಹ್ಮೈವ ತೇಜ ಏವ" (ಬೃ ೪-೪-೭))

[ಅವಿದ್ಯಯಾ ಪೂರ್ವಂ ಸಶರೀರೋಽಪಿ ಬ್ರಹ್ಮಾತ್ಮಬೋಧಾನಂತರಮ್ ಅಶರೀರ ಇತಿ ಶರೀರಾತ್ಮಬಾಧ ಉಕ್ತೋಽತ್ರ || ]

(ಆ) ಆತ್ಮಾನಂ ಚೇದ್ ವಿಜಾನೀಯಾದಯಮಸ್ಮೀತಿ ಪೂರುಷಃ | ಕಿಮಿಚ್ಛನ್ ಕಸ್ಯ ಕಾಮಾಯ ಶರೀರಮನುಸಂಜ್ವರೇತ್ || ಬೃ. ೪-೪-೧೨.

[ ಅತ್ರಾತ್ಮಾವಬೋಧೇ ಸತಿ ಕಾಮಯಿತವ್ಯಾಭಾವಃ, ಪುತ್ರಾದ್ಯಾತ್ಮೀಯಾಭಾವಶ್ಚ ಇತಿ ಕರ್ಮಹೇತುಃ ಕಾಮೋ ನಿಷಿಧ್ಯತೇ | ಅರ್ಥಾತ್ ಕರ್ಮಾಪಿ ನಿಷಿದ್ಧಂ ಭವತಿ || ]

ಸೈಷಾ ಕರ್ತೃತ್ವಾಭಾವಬುದ್ಧಿಃ ಆತ್ಮಜ್ಞಾನಫಲಭೂತಾ ಗುರುಸಂಪ್ರದಾಯವತಾಮೇವ ಸುಲಭಾ - ಇತ್ಯಾಗಮಮವಲಂಬ್ಯೈವ ಭಾಷ್ಯಕಾರೋ ವಕ್ತಿ -

(೧) ತಸ್ಮಾತ್, "ಅಹಂ ಬ್ರಹ್ಮಾಸ್ಮಿ" ಇತ್ಯೇತದವಸಾನಾ ಏವ ಸರ್ವೇ ವಿಧಯಃ||
ಸೂ.ಭಾ. ೧-೧-೪.

---

ಹೇಗೆ ಹಾವಿನ ಪೊರೆಯು ಹುತ್ತದ ಮೇಲೆ ಸತ್ತು ಬಿಸುಟ್ಟಿದ್ದಾಗಿ ಬಿದ್ದುಕೊಂಡಿರುತ್ತದೋ ಇದೇ ರೀತಿ ಈ ಶರೀರವಿರುತ್ತದೆ. ಇನ್ನು ಈತನು ಅಶರೀರನೂ, ಅಮೃತನೂ, ಪ್ರಾಣನೂ, ಬ್ರಹ್ಮವೇ, ತೇಜಸ್ಸೇ ಆಗಿರುತ್ತಾನೆ (ಬೃ. ೪–೪–೭). ಅಜ್ಞಾನದಿಂದ ಮೊದಲು ಸಶರೀರನಂತೆ ತೋರುತ್ತಿದ್ದರೂ ಬ್ರಹ್ಮಾತ್ಮಜ್ಞಾನವಾದಮೇಲೆ ಅಶರೀರನೆಂದಾಗಿ ಶರೀರಾತ್ಮಬಾಧೆಯಾಗಿರುತ್ತದೆ.

ಆತ್ಮಾನಂ ಚೇತ್ ವಿಜಾನೀಯಾತ್ ಅಯಮಸ್ಮೀತಿ ಪೂರುಷಃ ।
ಕಿಮಿಚ್ಛನ್ ಕಸ್ಯ ಕಾಮಾಯ ಶರೀರಮನುಸಂಜ್ವರೇತ್॥
(ಬೃ ೪–೪–೧೨॥)

"ತನ್ನನ್ನು ಇಂಥವನಾಗಿದ್ದೇನೆಂದು ಮನುಷ್ಯನು ತಿಳಿದ ಪಕ್ಷದಲ್ಲಿ, ಆತ ಯಾವುದಕ್ಕಾಗಿ ಏನನ್ನು ಇಷ್ಟಪಡುತ್ತಾ ಶರೀರವನ್ನು ತಪಿಸಿಯಾನು?" ಈ ಮನ್ತ್ರದಲ್ಲಿ – ಆತ್ಮಜ್ಞಾನವಾಗಲಾಗಿ ಬಯಸಬೇಕಾದದ್ದೇ ಇರುವುದಿಲ್ಲವಾದ್ದರಿಂದಲೂ, ಮಕ್ಕಳೇ ಮುಂತಾದ ತಮ್ಮವರೆಂಬುದೂ ಇರುವುದಿಲ್ಲವಾದ್ದರಿಂದಲೂ ಕರ್ಮಕ್ಕೆ ಕಾರಣವಾದ ಕಾಮವನ್ನೇ ಅಲ್ಲಗಳೆದಿದೆ. ಅರ್ಥಾತ್ ಕರ್ಮವನ್ನೂ ಅಲ್ಲಗಳೆದಂತಾಯಿತು.

(೨) ಆತ್ಮವಿದೋ ನಿವೃತ್ತಮಿಥ್ಯಾಜ್ಞಾನತ್ವಾತ್, ವಿಪರ್ಯಯಜ್ಞಾನಮೂಲಸ್ಯ ಕರ್ಮಯೋಗಸ್ಯ ಅಸಂಭವಃ ಸ್ಯಾತ್ || ಗೀ.ಭಾ. ೫-ಪೀಠಿಕೆ.

(೩) ಪೂರ್ವಸಿದ್ಧಕರ್ತೃತ್ವಭೋಕ್ತೃತ್ವವಿಪರೀತಂ ಹಿ "ತ್ರಿಷ್ವಪಿ ಕಾಲೇಷು ಅಕರ್ತೃತ್ವಾಭೋಕ್ತೃತ್ವಸ್ವರೂಪಂ ಬ್ರಹ್ಮಾಹಮಸ್ಮಿ | ನೇತಃ ಪೂರ್ವಮಪಿ ಕರ್ತಾ ಭೋಕ್ತಾ ವಾ ಅಹಮಾಸಮ್, ನೇದಾನೀಂ, ನಾಪಿ ಭವಿಷ್ಯತ್ಕಾಲೇ" ಇತಿ ಬ್ರಹ್ಮವಿದವಗಚ್ಛತಿ || ಸೂ.ಭಾ. ೪-೧-೧೩.

**೧೬. ಬ್ರಹ್ಮಾತ್ಮತ್ವಮೇವ ಜೀವಸ್ಯ ಸ್ವಭಾವೋ ನ ಪ್ರಮಾತೃತ್ವಮ್** - ಯಥೈವ ಕರ್ತೃತ್ವಬುದ್ಧಿರಜ್ಞಾನಕೃತಾ, ಅಕರ್ತೃತ್ವಮೇವ ತು ಸರ್ವೇಷಾಂ ನಃ ಸ್ವಭಾವಃ, ಏವಮೇವ "ಜ್ಞಾತಾಹಮ್, ಬ್ರಹ್ಮಜ್ಞಾನೇನಾಜ್ಞಾನಂ ಪರಿಹೃತ್ಯ ಬ್ರಹ್ಮಾತ್ಮಭಾವಂ ಪ್ರಾಪ್ಸ್ಯೇ" ಇತಿ ಬುದ್ಧಿರಪ್ಯಜ್ಞಾನಕೃತೈವ | ಬ್ರಹ್ಮಾತ್ಮವಿಜ್ಞಾನಿನಾಂ ತು "ಜ್ಞಾತೃತ್ವಾದಿ-ವಿಭಾಗರಹಿತಂ ನಿತ್ಯಶುದ್ಧಬುದ್ಧಮುಕ್ತಸ್ವಭಾವಂ ಬ್ರಹ್ಮೈವಾಹಮ್" ಇತ್ಯೇವ

---

ಈ ಕರ್ತೃತ್ವವಿಲ್ಲವೆಂಬ ಬುದ್ಧಿಯು ಆತ್ಮಜ್ಞಾನದ ಫಲವಾಗಿದ್ದು, ಅದು ಗುರುಸಂಪ್ರದಾಯವುಳ್ಳವರಿಗೆ ಸುಲಭವಾದದ್ದೆಂದು ಭಾಷ್ಯಕಾರರು ಆಗಮನವನ್ನವಲಂಬಿಸಿ ಹೇಳಿರುತ್ತಾರೆ. (೧) "ಆದ್ದರಿಂದ ಎಲ್ಲಾ ವಿಧಿಗಳೂ ನಾನು ಬ್ರಹ್ಮವಾಗಿರುವೆನು ಎಂಬವರೆಗೇ ಇರುವಂಥವುಗಳು" (ಸೂ.ಭಾ. ೧-೧-೪). (೨) "ಆತ್ಮಜ್ಞಾನಿಯಾದವನಿಗೆ ಮಿಥ್ಯಾಜ್ಞಾನವು ತೊಲಗಿಹೋಗಿರುತ್ತದೆಯಾದ್ದರಿಂದ ಆ ಮಿಥ್ಯಾಜ್ಞಾನಕಾರಣವಾದ ಕರ್ಮಯೋಗವು ಹೊಂದುವುದಿಲ್ಲ" (ಗೀ.ಭಾ. ೫-೧). (೩) "ಮೊದಲು ಸಿದ್ಧವಾಗಿದ್ದ ಕರ್ತೃತ್ವಭೋಕ್ತೃತ್ವಕ್ಕೆ ವಿರುದ್ಧವಾಗಿಯೇ ಅಲ್ಲವೇ (ಜ್ಞಾನಿಯಾದವನು) ಮೂರು ಕಾಲದಲ್ಲೂ ಅಕರ್ತೃವೂ ಅಭೋಕ್ತೃತ್ವವೂ ಆದ ಬ್ರಹ್ಮವೇ ನಾನಾಗಿರುವೆನು" ಎಂತಲೂ "ನಾನು" ಹಿಂದಾಗಲೀ ಈಗಾಗಲೀ ಮುಂದಾಗಲೀ ಕರ್ತೃಭೋಕ್ತೃವಾದವನಾಗಿ ಆಗಿಯೇ ಇಲ್ಲ ಎಂದಲ್ಲವೆ ಬ್ರಹ್ಮಜ್ಞಾನಿಯು ಅರಿತಿರುತ್ತಾನೆ? (ಬ್ರ.ಸೂ. ೪-೧-೧೩)

**೧೬) ಬ್ರಹ್ಮಾತ್ಮತ್ವವೇ ಜೀವನಿಗೆ(ಸ್ವರೂಪವೇ) ಹೊರತು ಪ್ರಮಾತೃತ್ವವಲ್ಲ.** ಹೇಗೆ ಅಕರ್ತೃತ್ವವೇ ನಮಗೆಲ್ಲರಿಗೂ ಸ್ವಭಾವವಾದದ್ದೋ, ಆದ್ದರಿಂದಲೇ ಕರ್ತೃತ್ವಬುದ್ಧಿಯು

ವಿನಿಶ್ಚಯಃ - ಇತೀದಂ ಸಮನ್ವಯಸೂತ್ರಭಾಷ್ಯಾಂತೇ ಸಮುದಾಹೃತೇನ ದ್ವಿತೀಯ-ಶ್ಲೋಕೇನೋಪದಿಶ್ಯತೇ -

(೩) ಅನ್ವೇಷ್ಟವ್ಯಾತ್ಮವಿಜ್ಞಾನಾತ್ ಪ್ರಾಕ್ ಪ್ರಮಾತೃತ್ವಮಾತ್ಮನಃ |
ಅನ್ವಿಷ್ಟಃ ಸ್ಯಾತ್ ಪ್ರಮಾತೈವ ಪಾಪ್ಮದೋಷಾದಿವರ್ಜಿತಃ ||

ಯಥೈವ "ಸದ್ಬ್ರಹ್ಮಾಹಮ್" ಇತಿ ಪ್ರಥಮಶ್ಲೋಕೇ ಛಾಂದೋಗ್ಯಶ್ರುತಿಃ "ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್" (ಛಾಂ. ೬-೨-೧) ಇತೀಯಂ ಪರಾಮೃಷ್ಟಾ, ಏವಮೇವ "ಯ ಆತ್ಮಾ ಅಪಹತಪಾಪ್ಮಾ" (ಛಾಂ. ೮-೭-೧) ಇತೀಯಮಿಹ ಸೂಚಿತಾ | ಏವಂ ಹಿ ಛಾಂದೋಗ್ಯಶ್ರುತಿಃ -

(೮) ಯ ಆತ್ಮಾ ಅಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋ ವಿಜಿಘತ್ಸೋಽಪಿಪಾಸಃ ಸತ್ಯಕಾಮಃ ಸತ್ಯಸಂಕಲ್ಪಃ ಸೋಽನ್ವೇಷ್ಟವ್ಯಃ ಸ ವಿಜಿಜ್ಞಾಸಿತವ್ಯಃ ಸ ಸರ್ವಾಂಶ್ಚ ಲೋಕಾನಾಪ್ನೋತಿ ಸರ್ವಾಂಶ್ಚ ಕಾಮಾನ್ ಯಸ್ತಮಾತ್ಮಾನಮನುವಿದ್ಯ ವಿಜಾನಾತೀತಿ ಹ ಪ್ರಜಾಪತಿರುವಾಚ ||
ಛಾಂ. ೮-೭-೧.

---

ಅಜ್ಞಾನದಿಂದಾದದ್ದೋ, ಅದರಂತೆಯೋ ನಾನು ಜ್ಞಾತೃವಾಗಿರುವೆನು, ಬ್ರಹ್ಮಜ್ಞಾನದಿಂದ ಅಜ್ಞಾನವನ್ನು ಪರಿಹರಿಸಿಕೊಂಡು ಬ್ರಹ್ಮಾತ್ಮಭಾವವನ್ನು ನಾನು ಪಡೆದೇನು ಎಂಬೀ ಬುದ್ಧಿಯೂ ಅಜ್ಞಾನದಿಂದಾದದ್ದೇ ಆಗಿರುತ್ತದೆ. ಬ್ರಹ್ಮಾತ್ಮವಿಜ್ಞಾನವನ್ನು ಕಂಡುಕೊಂಡವರಿಗಾದರೋ ಜ್ಞಾತೃತ್ವವೇ ಮುಂತಾದ ವಿಭಾಗವಿಲ್ಲದ ನಿತ್ಯಶುದ್ಧಬುದ್ಧಮುಕ್ತಸ್ವಭಾವವಾದ ಬ್ರಹ್ಮವೇ ನಾನಾಗಿರುವೆನು ಎಂದು ನಿಶ್ಚಯವಿರುತ್ತದೆ, ಎಂಬೀ ವಿಚಾರವು ಸಮನ್ವಯ ಸೂತ್ರಭಾಷ್ಯದ ಕೊನೆಯಲ್ಲಿ ಉದಾಹರಿಸಿದ್ದಾದ ಎರಡನೇಯ ಶ್ಲೋಕದಿಂದ ಹೇಳಿರುತ್ತದೆ.

ಅನ್ವೇಷ್ಟವ್ಯಾತ್ಮವಿಜ್ಞಾನಾತ್ ಪ್ರಾಕ್‌ಪ್ರಮಾತೃತ್ವಮಾತ್ಮನಃ ।
ಅನ್ವಿಷ್ಟಃ ಸ್ಯಾತ್ ಪ್ರಮಾತೈವ ಪಾಪ್ಮದೋಷಾದಿವರ್ಜಿತಃ ॥

ಕಂಡುಕೊಳ್ಳಬೇಕಾದ ಆತ್ಮನ ತಿಳಿವಳಿಕೆಗೆ ಮೊದಲು, ತನಗೆ ಪ್ರಮಾತೃತ್ವವಿರುತ್ತದೆ. ಕಂಡುಕೊಂಡಮೇಲಾದರೋ, ಪ್ರಮಾತೃವಾದವನೇ ಪುಣ್ಯಪಾಪದೋಷವಿಲ್ಲದವನಾಗುತ್ತಾನೆ. (ಹೇಗೆ ಮೊದಲನೇ ಶ್ಲೋಕದಲ್ಲಿ) "ಮಗುವೇ ಸೃಷ್ಟಿಗೆ ಮುಂಚೆ ಸತ್ತು ಒಂದೇ ತನಗೆರಡನೆಯದು ಇಲ್ಲದ್ದಾಗಿ ಇತ್ತು (ಛಾಂ. ೬–೨–೧) ಎಂದು ಛಾಂದೋಗ್ಯ ಶ್ರುತಿಯನ್ನು "ನಾನು

(ಆ) ತದ್ಧೋಭಯೇ ದೇವಾಸುರಾ ಅನುಬುಬುಧಿರೇ ತೇ ಹೋಚುರ್ಹಂತ ತಮಾತ್ಮಾನಮನ್ವಿಚ್ಛಾಮೋ ಯಮಾತ್ಮಾನಮನ್ವಿಷ್ಯ ಸರ್ವಾಂಶ್ಚ ಲೋಕಾನಾಪ್ನೋತಿ ಸರ್ವಾಂಶ್ಚ ಕಾಮಾನಿತೀಂದ್ರೋ ಹೈವ ದೇವಾನಾಮಭಿಪ್ರವವ್ರಾಜ ವಿರೋಚನೋऽಸುರಾಣಾಂ ತೌ ಹಾಸಂವಿದಾನಾವೇವ ಸಮಿತ್ಪಾಣೀ ಪ್ರಜಾಪತಿಸಕಾಶಮಾಜಗ್ಮತುಃ || ಛಾಂ. ೮-೭-೨.

ಇತಿ | ಅತ್ರ "ಸೋऽನ್ವೇಷ್ಟವ್ಯಃ" ಇತಿ ಪ್ರಜಾಪತಿವಚನಾತ್, "ತಮಾತ್ಮಾನಮನ್ವಿಚ್ಛಾಮಃ" ಇತಿ ದೇವಾಸುರವಚನಾಚ್ಚ, ಅನ್ವೇಷ್ಟವ್ಯಃ ಪರಮಾತ್ಮಾ ಅನ್ವೇಷ್ಟುರನ್ಯಃ ಇತಿ ಪ್ರತೀಯತೇ | "ಅನುವಿದ್ಯ ವಿಜಾನಾತಿ" ಇತಿ ಸ್ವಸಂವೇದ್ಯತಾಪಾದನಸ್ಯ ಕರ್ತವ್ಯತ್ವೋಪದೇಶಾಚ್ಚ ಜ್ಞಾತುರಾತ್ಮೈವಾತ್ರೋಪದಿಷ್ಟ ಇತಿ ಚ | ಅತಃ ಕತರದತ್ರ ನ್ಯಾಯ್ಯಮಿತಿ ವಿಚಾರಣೀಯಮ್ | ಪ್ರಕರಣಪರ್ಯಾಲೋಚನಯಾ ತು ಅತ್ರ ಅನ್ವೇಷಣವಿಜಿಜ್ಞಾಸನೇ ದೃಷ್ಟಾರ್ಥತ್ವೇನೈವೋಪದಿಷ್ಟೇ ಇತಿ ಗಮ್ಯತೇ | ತಥಾ ಹಿ - "ಯ ಏಷೋऽಕ್ಷಿಣಿ ಪುರುಷೋ ದೃಶ್ಯತೇ" (ಛಾಂ.೮-೭-೪), "ಉದಶರಾವ

---

ಸದ್ಬ್ರಹ್ಮನಾಗಿರುವೆನು" ಎಂಬುದಾಗಿರುವ ವಾಕ್ಯದಿಂದ ಪರಾಮರ್ಶಿಸಿರುತ್ತದೋ ಅದರಂತೆ ಈ ಎರಡನೇಯ ಶ್ಲೋಕದಲ್ಲೂ "ಯಾವ ಆತ್ಮನು ಪುಣ್ಯಪಾಪರಹಿತನೋ" ಎಂಬ ಅದೇ ಶ್ರುತಿಯನ್ನೇ ಪರಾಮರ್ಶಿಸಿರುತ್ತದೆ. ಛಾಂದೋಗ್ಯಶ್ರುತಿಯು ಈ ರೀತಿಯಾಗಿದೆಯಲ್ಲವೇ ? – "ಯ ಆತ್ಮಾ ಅಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋ ವಿಜಿಘತ್ಸೋऽಪಿಪಾಸಃ ಸತ್ಯಕಾಮಃ ಸತ್ಯಸಂಕಲ್ಪಃ ಸೋऽನ್ವೇಷ್ಟವ್ಯಃ ಸ ವಿಜಿಜ್ಞಾಸಿತವ್ಯಃ ಸ ಸರ್ವಾಗ್ಂಶ್ಚ ಲೋಕಾನಾಪ್ನೋತಿ ಸರ್ವಾಗ್ಂಶ್ಚ ಕಾಮಾನ್ ಯಸ್ತಮಾತ್ಮಾನಮನುವಿದ್ಯ ವಿಜಾನಾತೀತಿ ಹ ಪ್ರಜಾಪತಿರುವಾಚ" । (ಛಾಂ. ೮–೭–೧). "ತದ್ಧೋಭಯೇ ದೇವಾಸುರಾ ಅನುಬುಬುಧಿರೇ, ತೇ ಹೋಚುಃ ಹನ್ತ ತಮಾತ್ಮಾನಮನ್ವಿಚ್ಛಾಮಃ ಯಮಾತ್ಮಾನಮನ್ವಿಷ್ಯ ಸರ್ವಾಶ್ಚ ಲೋಕಾನಾಪ್ನೋತಿ ಸರ್ವಾಂಶ್ಚ ಕಾಮಾನಿತಿ ಇಂದ್ರೋ ಹೈವ ದೇವಾನಾಮಭಿ ಪ್ರವವ್ರಾಜ ವಿರೋಚನೋऽಸುರಾಣಾಂ ತೌ ಹಾಸಂವಿದಾನಾವೇವ ಸಮಿತ್ಪಾಣೀ ಪ್ರಜಾಪತಿಸಕಾಶಮಾಜಗ್ಮತುಃ ।" (ಛಾಂ. ೮–೭–೨), ಇಲ್ಲಿ " ಆತನನ್ನು ಹುಡುಕಬೇಕು" ಎಂದು ಪ್ರಜಾಪತಿಯ ಮಾತಿನಿಂದಲೂ "ಆ ಆತ್ಮನನ್ನು ಹುಡುಕೋಣ" ಎಂಬುದಾಗಿ ದೇವಾಸುರರ ಮಾತಿರುವುದರಿಂದಲೂ ಹುಡುಕಬೇಕಾದ ಪರಮಾತ್ಮನು ಹುಡುಕುವಾತನಿಗಿಂತ ಬೇರೆ ಎಂದು

ಆತ್ಮಾನಮವೇಕ್ಷ್ಯ ಯದಾತ್ಮನೋ ನ ವಿಜಾನೀಥಸ್ತನ್ಮೇ ಪ್ರಬ್ರೂತಮ್" (೮-೮-೧), "ಯ ಏಷ ಸ್ವಪ್ನೇ ಮಹೀಯಮಾನಶ್ಚರತ್ಯೇಷ ಆತ್ಮಾ" (ಛಾಂ. ೮-೧೦-೧), "ತದ್ಯತ್ರೈತತ್ಸುಪ್ತಸ್ಸಮಸ್ತಸ್ಸಂಪ್ರಸನ್ನಃ ಸ್ವಪ್ನಂ ನ ವಿಜಾನಾತ್ಯೇಷ ಆತ್ಮಾ" (ಛಾಂ. ೮-೧೧-೧) - ಇತಿ ಚ ತಮೇವೈಕಮಿಂದ್ರಸ್ಯಾತ್ಮಾನಂ ಪ್ರಸಿದ್ಧಂ ಪ್ರಜಾಪತಿರುಪದಿದೇಶ, ಇಂದ್ರೋಽಪಿ ತತ್ರ ತತ್ರ ದೋಷಂ ಪಶ್ಯನ್ "ನಾಹಮತ್ರ ಭೋಗ್ಯಂ ಪಶ್ಯಾಮಿ" ಇತ್ಯುವಾಚ | "ಏವಮೇವೈಷ ಸಂಪ್ರಸಾದೋಽಸ್ಮಾಚ್ಛರೀರಾತ್ ಸಮುತ್ಥಾಯ ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ ಸ ಉತ್ತಮಪುರುಷಃ" (ಛಾಂ. ೮-೧೨-೩) ಇತ್ಯವಸ್ಥಾತ್ರಯಕಲುಷಪರಿಹಾರೇಣೋಕ್ತಃ ಸ ಏವ ಪರಮಾತ್ಮಾ ಅನ್ವಿಷ್ಟಃ, ಇಂದ್ರಸ್ಯ ಸ್ವರೂಪಭೂತತ್ವೇನ ಚ ವಿಜ್ಞಾತಃ - ಇತಿ ಪ್ರಕರಣ-ಸಮಾಲೋಚನೇನ ಯ ಏವ ಶರೀರಾದಿಭಿರ್ಯುಕ್ತಃ ಪ್ರಮಾತಾ ಇತ್ಯಭಿಮತ ಆಸೀತ್ ತಮೇವ ಉಪದೇಶಜನ್ಯಜ್ಞಾನಾದೂರ್ಧ್ವಂ ಪರಮಾತ್ಮಾನಾಮ್ ಅಪಹತಪಾಪ್ಮಾದಿ-ಗುಣಕಂ ಸ್ವಾತ್ಮತ್ವೇನ ಪ್ರತಿಪನ್ನ ಇಂದ್ರಃ - ಇತ್ಯವಗಮ್ಯತೇ | ತಸ್ಮಾತ್

---

ತೋರುತ್ತದೆ. "ತನ್ನ ಅನುಭವಕ್ಕೆ ಹೊಂದಿಸಿ ತಿಳಿದುಕೊಂಡು" ಎಂದು ತನ್ನ ಅನುಭವಕ್ಕೆ ತಂದುಕೊಳ್ಳಬೇಕೆಂದು ಉಪದೇಶವನ್ನು ಮಾಡುತ್ತಿರುವುದರಿಂದ ತಿಳಿಯುವಾತನಿಗೆ ಆತ್ಮನಾಗಿರುವವನನ್ನೇ ಇಲ್ಲಿ ಉಪದೇಶವನ್ನು ಮಾಡಿರುತ್ತದೆ ಎಂದೂ ಗೊತ್ತಾಗುತ್ತದೆ. ಆದ್ದರಿಂದ ಇಲ್ಲಿ ಯಾವುದು ನ್ಯಾಯವಾದದ್ದೆಂದು ವಿಚಾರಿಸಬೇಕು. ಪ್ರಕರಣವನ್ನು ಚೆನ್ನಾಗಿ ಆಲೋಚಿಸುವುದರಿಂದಲಾದರೋ ಇಲ್ಲಿ ಅನ್ವೇಷಣ ಮತ್ತು ತಿಳಿದುಕೊಳ್ಳುವಿಕೆ (ಇವೆರಡೂ) ಇಲ್ಲಿಯೇ ಕಾಣಬಹುದಾದ ಪ್ರಯೋಜನಕ್ಕಾಗಿ ಹೇಳಿದ್ದು ಎಂದು ಗೊತ್ತಾಗುತ್ತದೆ. ಹಾಗೆಯೇ ಅಲ್ಲವೇ? – "ಯಾವ ಈ ಪುರುಷನು ಕಣ್ಣಿನಲ್ಲಿ ತೋರಿಬರುತ್ತಿರುವನೋ" (ಛಾಂ. ೮–೭–೪), "ನೀರಿನ ತಟ್ಟೆಯಲ್ಲಿ ನಿಮ್ಮನ್ನು ನೋಡಿಕೊಂಡು ಯಾವ ಆತ್ಮನನ್ನು ನೀವು ಕಾಣುವುದಿಲ್ಲವೋ ಅದನ್ನು ನನಗೆ ಹೇಳಿರಿ" (೮–೮–೧), "ಯಾವ ಈತನು ಸ್ವಪ್ನದಲ್ಲಿ ಮಹಿಮಾವಂತನಾಗಿ ಓಡಾಡುತ್ತಿರುವನೋ (೮–೧೦–೧)", "ಯಾವಾಗ ಈ ರೀತಿ ಮಲಗಿದವನಾದಾಗ ಸಂಪೂರ್ಣವಾಗಿ ತಿಳಿಯದವನಾಗಿ ಸ್ವಪ್ನವನ್ನು ಅರಿಯುವುದಿಲ್ಲವೋ ಈತನೇ ಆತ್ಮನು" (೮–೧೧–೧) – ಎಂದು ಆ ಒಬ್ಬನಾದ ಇಂದ್ರನಿಗೂ ಆತ್ಮನಾಗಿ ಪ್ರಸಿದ್ಧನಾಗಿರುವವನನ್ನು ಪ್ರಜಾಪತಿಯು ಉಪದೇಶಿಸಿದನು. ಇಂದ್ರನೂ ಸಹ ಅಲ್ಲಲ್ಲಿ ದೋಷವನ್ನು ಕಾಣುತ್ತಾ "ನಾನಿಲ್ಲಿ

ಪ್ರಾಗನ್ವೇಷಣಾದ್ ವಿಭಾವಿತಂ ಪ್ರಮಾತೃತ್ವಮಜ್ಞಾನತಃ, ಅನ್ವಿಷ್ಟಸ್ಯ ತು ವಿಜ್ಞಾತಂ ಪಾಪ್ಮಾದಿದೋಷವರ್ಜಿತಂ ಸ್ವಭಾವಭೂತಮ್ - ಇತಿ ಶ್ಲೋಕಾರ್ಥಸಾರಃ ||

ತಮೇತಂ ಸಂಪ್ರದಾಯಮನುಸರನ್ ಭಾಷ್ಯಕಾರೋಽಪಿ "ಭೇದವ್ಯಪದೇಶಾಚ್ಚ" (ವೇ.ಸೂ. ೧.೧.೧೭) ಇತಿ ಸೂತ್ರಸ್ಯ ಭಾಷ್ಯೇ ಲಿಖತಿ ಸ್ಮ -

> (೧) "ಕಥಂ ತರ್ಹಿ ಆತ್ಮಾಽನ್ವೇಷ್ಟವ್ಯಃ", "ಆತ್ಮಲಾಭಾನ್ನ ಪರಂ ವಿದ್ಯತೇ" ಇತಿ ಶ್ರುತಿಸ್ಮೃತೀ ? ಯಾವತಾ ನ ಲಬ್ಧೈವ ಲಬ್ಧವ್ಯೋ ಭವತೀತ್ಯುಕ್ತಮ್ | ಬಾಢಮ್ | ತಥಾಪಿ, ಆತ್ಮನೋಽಪ್ರಚ್ಯುತಾತ್ಮಭಾವಸ್ಯೈವ ಸತಃ, ತತ್ತ್ವಾನವಬೋಧನಿಮಿತ್ತೋ ದೇಹಾದಿಷ್ವನಾತ್ಮಸು ಆತ್ಮತ್ವನಿಶ್ಚಯೋ ಲೌಕಿಕೋ ದೃಷ್ಟಃ| ತೇನ ದೇಹಾದಿಭೂತಸ್ಯಾತ್ಮನೋಽಪಿ ಆತ್ಮಾ ಅನನ್ವಿಷ್ಟೋಽನ್ವೇಷ್ಟವ್ಯಃ, ಅಲಬ್ಧೋ ಲಬ್ಧವ್ಯಃ, ಅಶ್ರುತಃ ಶ್ರೋತವ್ಯಃ, ಅಮತೋ ಮಂತವ್ಯಃ, ಅವಿಜ್ಞಾತೋ ವಿಜ್ಞಾತವ್ಯಃ- ಇತ್ಯಾದಿಭೇದವ್ಯಪದೇಶ ಉಪಪದ್ಯತೇ | ಪ್ರತಿಷಿಧ್ಯತ ಏವ ತು ಪರಮಾರ್ಥತಃ ಸರ್ವಜ್ಞಾತ್ ಪರಮೇಶ್ವರಾದನ್ಯೋ ದ್ರಷ್ಟಾ, ಶ್ರೋತಾ ವಾ "ನಾನ್ಯೋಽತೋಽಸ್ತಿ ದ್ರಷ್ಟಾ" (ಬೃ. ೩-೭-೨೩) ಇತ್ಯಾದಿನಾ | ಪರಮೇಶ್ವರಸ್ತು

---

ಭೋಗವನ್ನು ಕಾಣೆನು" ಎಂದನು. "ಇದರಂತೆಯೇ, ಈ ಸಂಪ್ರಸಾದನು ಈ ಶರೀರದಿಂದ ಬಿಟ್ಟೆದ್ದು ಪರಂಜ್ಯೋತಿಯನ್ನು ಸೇರಿ ತನ್ನದಾದ ರೂಪದಿಂದ ತಯಾರಾದವನಾಗುತ್ತಾನೆ, ಆತನು ಉತ್ತಮ ಪುರುಷನು" (೮-೧೨-೩), ಎಂದೀರೀತಿಯಾಗಿ ಅವಸ್ಥಾತ್ರಯದ ಕಾಲುಷ್ಯ ಪರಿಹಾರದ ಮೂಲಕವಾಗಿ ಯಾವ ಆತ್ಮನನ್ನು ಹೇಳಿದೆಯೋ ಆ ಪರಮಾತ್ಮನೇ ಹುಡುಕಲ್ಪಟ್ಟಿದ್ದಾನೆ. ಇಂದ್ರನ ಸ್ವರೂಪವಾಗಿ ತಿಳಿದುಬಂದಿದ್ದಾನೆ, ಎಂಬುದು ಪ್ರಕರಣದ ಸಮಾಲೋಚನೆಯಿಂದ ಗೊತ್ತಾಗುತ್ತದೆ. ಯಾವಾತನೇ ಶರೀರಾದಿಗಳಿಂದ ಕೂಡಿ ಪ್ರಮಾತನೆನಿಸಿಕೊಂಡಿದ್ದಾನೋ, ಅವನನ್ನೇ ಉಪದೇಶದಿಂದುಂಟಾದ ಜ್ಞಾನವಾದ ಮೇಲೆ ಅಪಹತಪಾಪ್ಮತ್ವಾದಿಗುಣಕನಾದ ಪರಮಾತ್ಮನೆಂದು ತನ್ನ ಆತ್ಮವಾಗಿ ಇಂದ್ರನು ತಿಳಿದುಕೊಂಡನು ಎಂದು ಗೊತ್ತಾಗುತ್ತದೆ. ಆದ್ದರಿಂದ ಹುಡುಕುವುದಕ್ಕೆ ಮುಂಚೆ ಅಜ್ಞಾನದಿಂದ ತೋರಿಕೊಂಡ ಪ್ರಮಾತೃತ್ವವು, ಹುಡುಕಿದನಂತರ ಪಾಪ್ಮಾದಿದೋಷರಹಿತವಾಗಿ ಸ್ವಭಾವವಾಗಿ ತಿಳಿದುಬಂದಿತು ಎಂಬುದು ಶ್ಲೋಕಾರ್ಥದ ಸಾರವು. ಈ ಸಂಪ್ರದಾಯವನ್ನು ಅನುಸರಿಸುತ್ತಾ "ಭೇದವ್ಯಪದೇಶಾಚ್ಚ" (ವೇ.ಸೂ. ೧-೧-೧೭) ಎಂಬ ಸೂತ್ರದ ಭಾಷ್ಯದಲ್ಲಿ ಭಾಷ್ಯಕಾರರು ಬರೆದಿರುತ್ತಾರೆ -

ಅವಿದ್ಯಾಕಲ್ಪಿತಾತ್ ಶಾರೀರಾತ್ ಕರ್ತುರ್ಭೋಕ್ತುರ್ವಿಜ್ಞಾನಾತ್ಮಾಖ್ಯಾದನ್ಯಃ | ಯಥಾ ಮಾಯಾವಿನಶ್ಚರ್ಮಖಡ್ಗಧರಾತ್ ಸೂತ್ರೇಣಾಕಾಶಮಧಿರೋಹತಃ ಸ ಏವ ಮಾಯಾವೀ ಪರಮಾರ್ಥರೂಪೋ ಭೂಮಿಷ್ಠೋಽನ್ಯಃ | ಯಥಾ ವಾ ಘಟಾಕಾಶಾತ್, ಉಪಾಧಿಪರಿಚ್ಛಿನ್ನಾತ್ ಅನುಪಾಧಿರಪರಿಚ್ಛಿನ್ನ ಆಕಾಶೋಽನ್ಯಃ | ಈದೃಶಂ ಚ ವಿಜ್ಞಾನಾತ್ಮಪರಮಾತ್ಮಭೇದಮಾಶ್ರಿತ್ಯ "ನೇತರೋಽನುಪಪತ್ತೇಃ", "ಭೇದವ್ಯಪದೇಶಾಚ್ಚ" ಇತ್ಯುಕ್ತಮ್ || ಸೂ.ಭಾ. ೧-೧-೧೭.

[ ಯದ್ಯಪಿ ಯಥೋದಾಹೃತಭಾಗೋ ವೃತ್ತಿಕಾರಾಣಾಮ್ ಆನಂದಮಯಸ್ಯೈವ ಪರಮಾತ್ಮತ್ವಮಿಚ್ಛತಾಮ್, ತಥಾಪಿ ತೇಽಪಿ ನಿರ್ವಿಶೇಷಾತ್ಮವಾದಿನಃ, ಭಗವತ್ಪಾದಸಂಪ್ರದಾಯಾನುಗತಾ ಏವ ಇತಿ ಸ್ಪಷ್ಟಮ್ | ಭಗವತ್ಪಾದೈರಪ್ಯೇತಾದೃಶಪ್ರಕ್ರಿಯಾಯಾ ಏವ ಸಮಾದರಣಾದನ್ಯತ್ರ ಇತಿ ಬೋಧ್ಯಮ್ || ]

ಅತ ಏವ ಪ್ರಮಾತೃತ್ವಮಪ್ಯಾವಿದ್ಯಕಮ್, ಅಂತ್ಯಪ್ರಮಾಣಭೂತೇನ ಶಾಸ್ತ್ರೇಣ ನಿವರ್ತ್ಯತ್ವಾತ್ - ಇತಿ ಲಿಖತಿ ಸ್ಮ ಭಾಷ್ಯಕಾರಃ -

(೨) ಪ್ರಮಾತೃತ್ವಂ ಹಿ ಆತ್ಮನೋ ನಿವರ್ತಯತ್ಯಂತ್ಯಂ ಪ್ರಮಾಣಮ್ ||
ಗೀ.ಭಾ. ೨-೬೯.

[ ಶಾಸ್ತ್ರಸ್ಯ ಅಂತ್ಯಪ್ರಮಾಣತ್ವಂ ತು ಅಗ್ರೇ ಉಪಪಾದಯಿಷ್ಯತೇ || ]

---

(೧) ಕಥಂ ತರ್ಹಿ ಆತ್ಮನ್ವೇಷ್ಟವ್ಯಃ .... ಭೇದವ್ಯಪದೇಶಾಚ್ಚ ಇತ್ಯುಕ್ತಮ್ (ಸೂ.ಭಾ. ೧-೧-೧೭)

(ಮೇಲೆ ಉದಾಹರಿಸಿರುವ ಭಾಗವು - ಆನಂದಮಯನಿಗೇ ಪರಮಾತ್ಮತ್ವವನ್ನು ಇಷ್ಟಪಡುವವರಾದ ವೃತ್ತಿಕಾರರದ್ದೇ ಆಗಿದೆ - ಎಂಬುದು ನಿಜವಾದರೂ, ಅವರು ನಿರ್ವಿಶೇಷಾತ್ಮವಾದಿಗಳು, ಭಗವತ್ಪಾದರ ಸಂಪ್ರದಾಯಕ್ಕೆ ಸೇರಿದವರು ಎಂಬುದು ಸ್ಪಷ್ಟವು. ಈ ತರಹದ ಪ್ರಕ್ರಿಯೆಯನ್ನು ಭಗವತ್ಪಾದರೂ ಸಹ ಬೇರೊಂದು ಕಡೆಯಲ್ಲಿ ಸ್ವೀಕರಿಸಿರುತ್ತಾರೆ) ಎಂದು ತಿಳಿಯಬೇಕು. ಆದ್ದರಿಂದಲೇ - ಅನ್ತ್ಯಪ್ರಮಾಣವಾಗಿರುವ ಶಾಸ್ತ್ರವು ಆ ಪ್ರಮಾತೃತ್ವವನ್ನೂ ಕಳೆಯುತ್ತಿರುವುದರಿಂದ ಅದು ಆವಿದ್ಯಕವೇ ಆಗಿದೆ ಎಂದು ಭಾಷ್ಯಾಕಾರರು ಬರೆದಿರುತ್ತಾರೆ. "ಅನ್ತ್ಯಪ್ರಮಾಣವೆನಿಸಿಕೊಂಡ ಶಾಸ್ತ್ರವು ಆತ್ಮನ ಪ್ರಮಾತೃತ್ವವನ್ನೇ ಕಳೆದುಹಾಕುತ್ತದೆ". (ಗೀ. ಭಾ. ೨-೬೯) ಶಾಸ್ತ್ರವು ಹೇಗೆ ಅಂತ್ಯಪ್ರಮಾಣವೆಂಬುದನ್ನು ಮುಂದೆ ತೋರಿಸಿಕೊಡಲಾಗುತ್ತದೆ.

೧೭. ಆತ್ಮಜ್ಞಾನಾತ್ ಪ್ರಾಗೇವ ಪ್ರಮಾಣಾನಾಂ ಪ್ರಮಾಣತ್ವಮ್ - ಪರಮಾತ್ಮಜ್ಞಾನಸಮಸಮಯಮೇವ ಪ್ರಮಾತೃತ್ವಮಾತ್ಮನೋಽಪಗಚ್ಛತೀತ್ಯನಯೈವೋಕ್ತ್ಯಾ ತಥೈವ ಪ್ರಮಾಣಾನಾಂ ಪ್ರಮಾಣತ್ವಮಪಿ ಬಾಧಿತಂ ಭವತೀತ್ಯುಕ್ತಂ ಭವತಿ | ತದೇತತ್ ಸಮನ್ವಯಸೂತ್ರವ್ಯಾಖ್ಯಾನಾಂತೇ ಭಾಷ್ಯಕಾರೋದಾಹೃತೇನ ತೃತೀಯಶ್ಲೋಕೇನ ಸ್ಫುಟೀಕೃತಮ್ -

(೪) ದೇಹಾತ್ಮಪ್ರತ್ಯಯೋ ಯದ್ವತ್ ಪ್ರಮಾಣತ್ವೇನ ಕಲ್ಪಿತಃ |
ಲೌಕಿಕಂ ತದ್ವದೇವೇದಂ ಪ್ರಮಾಣಂ ತ್ವಾತ್ಮನಿಶ್ಚಯಾತ್ ||

ಶ್ಲೋಕಾಭಿಪ್ರಾಯಸ್ತು - ಯಥಾ ದೇಹಾತ್ಮಪ್ರತ್ಯಯಃ, ದೇಹವ್ಯತಿರಿಕ್ತಾತ್ಮಜ್ಞಾನಪರ್ಯಂತಂ ಪ್ರಮಾಣತ್ವೇನ ಕಲ್ಪ್ಯತೇ ಪ್ರಾಕೃತೈರ್ಜನೈಃ, ಶಾಸ್ತ್ರೋಪದೇಶಾತ್ತು ದೇಹಾತಿರಿಕ್ತಾತ್ಮಾಸ್ತಿತ್ವಂ ಧರ್ಮಾಧರ್ಮಾಸ್ತಿತ್ವಂ ತತ್ಕೃತಜನ್ಮಾಂತರಸಂಬಂಧಃ, ಇಷ್ಟಾನಿಷ್ಟಫಲೋಪಭೋಗಶ್ಚೇತ್ಯೇತತ್ಸರ್ವಂ ಪ್ರಮಾಣೀಕ್ರಿಯತೇ ಆಸ್ತಿಕೈಃ, ತೇನ ಚ ಶಾಸ್ತ್ರಜನ್ಯಜ್ಞಾನೇನ ದೇಹಾತ್ಮಬುದ್ಧಿರ್ಬಾಧ್ಯತೇ, ಏವಮೇವ ದೇಹೇಂದ್ರಿಯಮ-

---

೧೭) ಪ್ರಮಾಣಗಳ ಪ್ರಮಾಣತ್ವವು ಆತ್ಮಜ್ಞಾನವಾಗುವುದಕ್ಕೆ ಮುಂಚೆಯೇ (ಆಗಿರುತ್ತದೆ) ಪರಮಾತ್ಮಜ್ಞಾನವಾಗುವ ಸಮಾನಕಾಲದಲ್ಲೇ ತನ್ನ ಪ್ರಮಾತೃತ್ವವು ತೊಲಗಿಹೋಗುತ್ತದೆ ಎಂದು ಹೇಳಿದ್ದರಿಂದಲೇ ಪ್ರಮಾಣಗಳ ಪ್ರಮಾಣತ್ವವೂ ಬಾಧಿತವಾದಂತಾಗುತ್ತದೆ ಎಂದು ಹೇಳಿದಂತಾಗುತ್ತದೆ. ಈ ವಿಷಯವು ಸಮನ್ವಯ ಸೂತ್ರಭಾಷ್ಯದ ಕೊನೆಯಲ್ಲಿ ಉದಾಹರಿಸಿದ ಮೂರನೇ ಶ್ಲೋಕದಿಂದ ಗೊತ್ತಾಗುತ್ತದೆ.

(ದೇಹಾತ್ಮಪ್ರತ್ಯಯೋ ಯದ್ವತ್ ಪ್ರಮಾಣತ್ವೇನ ಕಲ್ಪಿತಃ । ಲೌಕಿಕಂ ತದ್ವದೇವೇದಂ ಪ್ರಮಾಣಂ ತ್ವಾತ್ಮನಿಶ್ಚಯಾತ್ ॥)

" ದೇಹದಲ್ಲಿ ನಾನೆಂಬ ತಿಳಿವಳಿಕೆಯು - ಯಾವ ರೀತಿ ನಿಶ್ಚಿತವಾಗಿ ಗೊತ್ತಾಗಿದೆಯೋ ಆದರಂತೆಯೇ ಲೋಕದಲ್ಲಿ ಈ ಶಾಸ್ತ್ರಪ್ರಮಾಣವೂ ಆತ್ಮನಿಶ್ಚಯವಾಗುವವರೆಗೂ ಇರುತ್ತದೆ". ಶ್ಲೋಕಾಭಿಪ್ರಾಯವಾದರೋ ಇದಾಗಿರುತ್ತದೆ - ಹೀಗೆ ದೇಹವೇ ನಾನೆಂಬ ತಿಳಿವಳಿಕೆಯು ದೇಹಕ್ಕಿಂತ ಬೇರೆಯಾಗಿರುವ ಆತ್ಮಜ್ಞಾನವಾಗುವವರೆಗೂ ಪ್ರಾಕೃತಜನರು - ಪ್ರಮಾಣವಾದದ್ದೆಂದು ಕಲ್ಪಿಸಲಾಗುತ್ತದೋ, ಹಾಗೆಯೇ ಶಾಸ್ತ್ರೋಪದೇಶದಿಂದ

ನೋಧರ್ಮೈರಾತ್ಮನಃ ಪ್ರಮಾತೃತ್ವಂ ತದಾಶ್ರಿತಾನಾಂ ಪ್ರಮಾಣಾನಾಂ ಪ್ರಮಾಣತ್ವಂ ಚ ಸತ್ಯಮೇವೇತಿ ದೃಢಂ ವಿಶ್ವಸ್ಯತೇ ಪರಮಾರ್ಥಜ್ಞಾನರಹಿತೈಃ, ಯದಾ ತು ಶಾಸ್ತ್ರಾಚಾರ್ಯೋಪದೇಶಜನ್ಯಾದ್ ವಿಜ್ಞಾನಾತ್ ಅದ್ವಿತೀಯಾತ್ಮೈವ ಮಮಾತ್ಮಾ ಇತಿ ನಿಶ್ಚಯೋ ಜಾಯತೇ, ತದಾ ತಾದೃಶನಿಶ್ಚಯಸಮಸಮಯಮೇವ ಪ್ರಮಾತೃತ್ವಂ ಬಾಧ್ಯತೇ | ತದಾಶ್ರಿತಪ್ರಮಾಣಾನಾಂ ಪ್ರಮಾಣತ್ವಮಪೀತಿ ||

ಅಸ್ಮಿನ್ನರ್ಥೇ ಶ್ರುತಿರಪಿ ಭವತಿ -

> (ಅ) ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ ತದಿತರ ಇತರಂ ಜಿಘ್ರತಿ ತದಿತರ ಇತರಂ ರಸಯತೇ ತದಿತರ ಇತರಮಭಿವದತಿ ತದಿತರ ಇತರಂ ಶೃಣೋತಿ ತದಿತರ ಇತರಂ ಮನುತೇ ತದಿತರ ಇತರಂ ಸ್ಪೃಶತಿ ತದಿತರ ಇತರಂ ವಿಜಾನಾತಿ ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ಕೇನ ಕಂ ಪಶ್ಯೇತ್ತತ್ಕೇನ ಕಂ ಜಿಘ್ರೇತ್ತತ್ಕೇನ ಕಂ ರಸಯೇತ್ತತ್ಕೇನ ಕಮಭಿವದೇತ್ ತತ್ಕೇನ ಕಂ

---

ದೇಹಕ್ಕಿಂತ ಬೇರೆಯಾಗಿರುವ ಆತ್ಮನಿದ್ದಾನೆಂಬುದೂ ಧರ್ಮಾಧರ್ಮಗಳಿವೆ-ಯೆಂದೂ ಅದರಿಂದಾದ ಜನ್ಮಾಂತರ ಸಂಬಂಧವೂ, ಇಷ್ಟಾನಿಷ್ಟಫಲವನ್ನು ಅನುಭವಿಸುವುದೆಂಬುದೂ ಇದೆಲ್ಲವನ್ನೂ ಆಸ್ತಿಕರು ಪ್ರಮಾಣವೆಂದೇ ನಂಬಿರುತ್ತಾರೆ. ಆ ಶಾಸ್ತ್ರದಿಂದುಂಟಾದ ಜ್ಞಾನದಿಂದ ದೇಹವೇ ನಾನೆಂಬ ಬುದ್ಧಿಯು ಬಾಧಿತವಾಗುತ್ತದೆ. ಪರಮಾರ್ಥವಾದ ಜ್ಞಾನವಿಲ್ಲದವರಿಗೆ ದೇಹೇಂದ್ರಿಯಮನೋಧರ್ಮಗಳ ಮೂಲಕ ತನಗೆ ಪ್ರಮಾತೃತ್ವವೂ ಅದನ್ನಾಶ್ರಯಿಸಿ ಪ್ರಮಾಣಗಳಿಗೆ ಪ್ರಮಾಣತ್ವವೂ ಸತ್ಯವೆಂದೇ ಗಟ್ಟಿಯಾದ ನಂಬಿಕೆ ಇರುತ್ತದೆ. ಯಾವಾಗಲಾದರೋ ಶಾಸ್ತ್ರಾಚಾರ್ಯೋಪದೇಶ-ದಿಂದುಂಟಾದ ವಿಜ್ಞಾನದಿಂದ ಅದ್ವಿತೀಯಾತ್ಮನೇ ನನ್ನ ಆತ್ಮನು ಎಂದು ನಿಶ್ಚಯವುಂಟಾಗುತ್ತದೋ ಆಗ ಆ ತರಹದ ನಿಶ್ಚಯದ ಸಮಾನ ಕಾಲದಲ್ಲೇ ಪ್ರಮಾತೃತ್ವವು ಬಾಧಿತವಾಗುತ್ತದೆ. ಅದನ್ನಾಶ್ರಯಿಸಿದ ಪ್ರಮಾಣಗಳ ಪ್ರಮಾಣತ್ವವೂ ಬಾಧಿತವಾಗುತ್ತದೆ. ಈ ಅರ್ಥದಲ್ಲಿ ಶ್ರುತಿಯೂ ಸಹ ಇರುತ್ತದೆ.

(ಯತ್ರಹಿ ದ್ವೈತಮಿವ ಭವತಿ .... ಕೇನ ಕಂ ವಿಜಾನೀಯಾತ್? (ಬೃ ೪-೫-೧೫) ) ಯಾವ ಅವಿದ್ಯಾವಸ್ಥೆಯಲ್ಲಿ ಆತ್ಮನಿಗಿಂತ ಬೇರೆ ವಸ್ತುವಾಗಿ

ಶೃಣುಯಾತ್ತತ್ಕೇನ ಕಂ ಮನ್ವೀತ ತತ್ಕೇನ ಕಂ ಸ್ಪೃಶೇತ್ತತ್ಕೇನ ಕಂ ವಿಜಾನೀಯಾತ್||
ಬೃ. ೪-೫-೧೫.

ಇತಿ | ಯತ್ರಾವಿದ್ಯಾವಸ್ಥಾಯಾಂ ದ್ವೈತಮಿವ ವಸ್ತ್ವಂತರಮಾತ್ಮನ ಉಪಲಕ್ಷ್ಯತೇ, ತತ್ರ ಇತರೋ ದ್ರಷ್ಟಾ ಇತರೇಣ ಚಕ್ಷುಷಾ ಇತರಂ ದೃಶ್ಯಂ ಪಶ್ಯತಿ | ಏವಮಿತರಂ ಜಿಘ್ರತಿ, ರಸಯತೇ, ಅಭಿವದತಿ, ಶೃಣೋತಿ, ಮನುತೇ, ಸ್ಪೃಶತಿ, ವಿಜಾನಾತೀತ್ಯೇವಂ ಪ್ರಮಾತಾ ಪ್ರಮಾಣೇನ ಪ್ರಮೇಯಂ ಪರಿಚ್ಛಿನತ್ತೀತಿ ಯುಜ್ಯತೇ | ಯತ್ರ ಪುನರ್ಬ್ರಹ್ಮವಿದ್ಯಯಾ ಅಸ್ಯ ಜ್ಞಾನಿನಃ ಸರ್ವಮಾತ್ಮನ್ಯೇವ ಪ್ರವಿಲಾಪಿತಮ್, ಆತ್ಮೈವ ಸಂವೃತ್ತಮ್, ತತ್ರ ಕಃ ಪ್ರಮಾತಾ ಕೇನ ಪ್ರಮಾಣೇನ ಕಿಂ ಪ್ರಮೇಯಂ ಪ್ರಮಿಮೀತ ? - ಇತ್ಯವಿದ್ಯಾವಸ್ಥಾಯಾಮೇವ ಪ್ರಮಾಣಾನಾಂ ಪ್ರಮಾಣತ್ವಮ್, ವಿದ್ಯಾವಸ್ಥಾಯಾಂ ದ್ವೈತವಿಷಯಪ್ರತ್ಯಕ್ಷಾದ್ಯಭಾವಂ ಚ ದರ್ಶಯತೀಯಂ ಶ್ರುತಿಃ -

ತಾಮೇತಾಂ ವೇದಾಂತಮರ್ಯಾದಾಮ್ ಅವಲಂಬ್ಯೈವ ಶಂಕರಭಗವತ್ಪಾದಾಃ ಪ್ರಾಹುಃ-

(೧) ತಮೇತಮ್ ಏವಂಲಕ್ಷಣಮಧ್ಯಾಸಂ ಪಂಡಿತಾ ಅವಿದ್ಯೇತಿ ಮನ್ಯಂತೇ |

---

ದ್ವೈತವಿದ್ದಂತೆ ಕಂಡುಬರುತ್ತದೋ ಅಲ್ಲಿ ಮತ್ತೊಬ್ಬ ದ್ರಷ್ಟೃವು ಇನ್ನೊಂದಾದ ಕಣ್ಣಿನಿಂದ ಮತ್ತೊಂದಾದ ದೃಶ್ಯವನ್ನು ಕಾಣುತ್ತಾನೆ. ಹೀಗೆಯೇ ಮತ್ತೊಂದನ್ನು ಮೂಸುತ್ತಾನೆ, ರುಚಿನೋಡುತ್ತಾನೆ, ಮಾತನಾಡುತ್ತಾನೆ, ಕೇಳುತ್ತಾನೆ, ಯೋಚಿಸುತ್ತಾನೆ, ಮುಟ್ಟುತ್ತಾನೆ, ತಿಳಿಯುತ್ತಾನೆ, ಎಂಬೀ ರೀತಿಯಾಗಿ ಪ್ರಮಾತೃವು ಪ್ರಮಾಣದಿಂದ ಪ್ರಮೇಯವನ್ನು ಪ್ರರಿಚ್ಛೇದಗೊಳಿಸುತ್ತಾನೆಂಬುದು ಹೊಂದುತ್ತದೆ. ಯಾವಾಗಲಾದರೋ ಬ್ರಹ್ಮಜ್ಞಾನದಿಂದ ಈ ಜ್ಞಾನಿಗೆ ಎಲ್ಲವೂ ಆತ್ಮನಲ್ಲೇ ಕರಗಿದಂತಾಗುತ್ತದೋ, ಆತ್ಮನೇ ಆಗಿಬಿಡುತ್ತದೋ ಆಗ ಯಾವ ಪ್ರಮಾತೃವು ಯಾವ ಪ್ರಮಾಣದಿಂದ ಯಾವ ಪ್ರಮೇಯವನ್ನು ಅರಿತಾನು? ಎಂಬುದಾಗಿ (ಆಕ್ಷೇಪವನ್ನು ಮಾಡುತ್ತಾ) ಅವಿದ್ಯಾವಸ್ಥೆಯಲ್ಲಿಯೇ ಪ್ರಮಾಣಗಳ ಪ್ರಮಾಣತ್ವವು, ವಿದ್ಯಾವಸ್ಥೆಯಲ್ಲಿ ದ್ವೈತವಿಷಯದ ಪ್ರತ್ಯಕ್ಷವೇ ಮುಂತಾದವುಗಳು ಇರುವುದಿಲ್ಲವೆಂದು ಶ್ರುತಿಯು ತೋರಿಸುತ್ತದೆ. ಆ ಈ ವೇದಾನ್ತಮರ್ಯಾದೆಯನ್ನವಲಂಬಿಸಿಯೇ ಶಂಕರಭಗವತ್ಪಾದರು (ಹೀಗೆ) ಹೇಳಿರುತ್ತಾರೆ.

(೧) " ಈ ಲಕ್ಷಣವಾದ ಅಧ್ಯಾಸವನ್ನೇ ಪಂಡಿತರು "ಅವಿದ್ಯೆ" ಎಂದು

ತದ್ವಿವೇಕೇನ ಚ ವಸ್ತುಸ್ವರೂಪಾವಧಾರಣಂ ವಿದ್ಯಾಮ್ ಆಹುಃ | ತತ್ರೈವಂ ಸತಿ ಯತ್ರ ಯದಧ್ಯಾಸಃ, ತತ್ಕೃತೇನ ದೋಷೇಣ ಗುಣೇನ ವಾ ಅಣುಮಾತ್ರೇಣಾಪಿ ಸ ನ ಸಂಬಧ್ಯತೇ || ಸೂ.ಭಾ.ಅ.

[ ಪಂಡಿತಾಃ ಬ್ರಹ್ಮವಿದಃ, "ದೂರಮೇತೇ ವಿಪರೀತೇ ವಿಷೂಚೀ ಅವಿದ್ಯಾ ಯಾ ಚ ವಿದ್ಯೇತಿ ಜ್ಞಾತಾ" (ಕಾ. ೧-೨-೪) ಇತ್ಯಾದಿಶ್ರುತ್ಯರ್ಥಮನುಸಂದಧಾನಾಃ | ವಸ್ತುಸ್ವರೂಪಾವಧಾರಣಮೇವ ವಿದ್ಯಾ, ಅಧ್ಯಸ್ತಗುಣದೋಷಾಭ್ಯಾಂ ತದಾಸ್ಪದಂ ವಸ್ತು ನ ಸಂಬಧ್ಯತೇ - ಇತ್ಯುಕ್ತ್ವಾ ಪ್ರಮಾತೃತ್ವಕರ್ತೃತ್ವಾದಿಕಮಧ್ಯಾರೋಪಿತಮೇವೇತಿ ನಾತ್ಮವಸ್ತುಸಂಸ್ಪರ್ಶಿ, ನಿತ್ಯಾಸಂಸಾರ್ಯದ್ವೈತಾತ್ಮರೂಪಮೇವಾಸ್ಯ ಸ್ವಭಾವಃ - ಇತಿ ಸ್ಫೋರಿತಂ ಭವತಿ || ]

(೨) ತಮೇತಮವಿದ್ಯಾಖ್ಯಮ್ ಆತ್ಮಾನಾತ್ಮನೋರಿತರೇತರಾಧ್ಯಾಸಂ ಪುರಸ್ಕೃತ್ಯ ಸರ್ವೇ ಪ್ರಮಾಣಪ್ರಮೇಯವ್ಯವಹಾರಾ ಲೌಕಿಕಾ ವೈದಿಕಾಶ್ಚ ಪ್ರವೃತ್ತಾಃ || ಸೂ.ಭಾ.ಅ.

[ ವೈದಿಕಾಶ್ಚ ಇತ್ಯನೇನ "ಸೋಽನ್ವೇಷ್ಟವ್ಯಃ" ಇತ್ಯಾದಿವ್ಯವಹಾರಾ ಅಪಿ ಉಪದೇ-

---

ಕರೆಯುತ್ತಾರೆ. ಅದರ ವಿವೇಕದಿಂದಲಾದರೋ ವಸ್ತುಸ್ವರೂಪವನ್ನು ಗೊತ್ತುಮಾಡುವುದನ್ನು "ವಿದ್ಯೆ" ಎಂದು ಕರೆಯುತ್ತಾರೆ. ಹೀಗಿರುವಾಗ ಎಲ್ಲಿ ಯಾವುದರ ಅಧ್ಯಾಸವೋ ಅದರಿಂದಾದ ದೋಷದಿಂದಲಾಗಲೀ ಗುಣದಿಂದಾಗಲೀ ಕಿಂಚಿತ್ತೂ ಸಹ ಅದು ಸಂಬಂಧಪಟ್ಟುಕೊಳ್ಳುವುದಿಲ್ಲ. (ಅಧ್ಯಾ. ಭಾ. ೨) ("ವಿದ್ಯಾವಿದ್ಯೆಗಳು ಎಂಬುದು ಯಾವುದಿದೆಯೋ, ಅವು ಪರಸ್ಪರ ದೂರವು ಅಸಂಬಂದ್ಧವೂ, ವಿರುದ್ಧವೂ ಎಂದು ತಿಳಿದುಬಂದಿದೆ" (ಕಠ. ೧-೨-೪) ಎಂಬುದಾಗಿರುವ ಶ್ರುತ್ಯರ್ಥವನ್ನು ಅನುಸಂಧಾನ ಮಾಡುವವರಾದ ಬ್ರಹ್ಮಜ್ಞಾನಿಗಳಾದ ಪಂಡಿತರು ಎಂದರ್ಥ. ವಸ್ತುಸ್ವರೂಪವನ್ನು ಗೊತ್ತುಮಾಡುವುದೇ ವಿದ್ಯೆಯು, ಹುಟ್ಟುಹಾಕಿದ್ದಾದ ಗುಣದೋಷಗಳಿಂದ ಅದಕ್ಕೆ ಆಧಾರವಾದ ವಸ್ತುವು ತಗಲಿಕೊಳ್ಳುವುದಿಲ್ಲ ಎಂದು ಹೇಳಿ ಪ್ರಮಾತೃತ್ವವೂ ಕರ್ತೃತ್ವಾದಿಗಳೂ ಅಧ್ಯಾರೋಪಿತವಾದದ್ದೇ, ಅದು ಆತ್ಮವಸ್ತುವನ್ನು ಮುಟ್ಟಿಕೊಂಡಿಲ್ಲ. ಎಂದೆಂದಿಗೂ ಅಸಂಸಾರಿಯಾದ ಅದ್ವೈತಾತ್ಮರೂಪವೇ ಇವನ ಸ್ವಭಾವವು".)

(೨) ಆ ಈ ಅವಿದ್ಯಾ ಎಂಬ ಹೆಸರಿನ ಆತ್ಮಾನಾತ್ಮರುಗಳ ಇತರೇತರಾಧ್ಯಾಸವನ್ನು ಮುಂದುಮಾಡಿಕೊಂಡು ಎಲ್ಲಾ ಪ್ರಮಾಣಪ್ರಮೇಯ

ಶಾರ್ಥಮ್ ಅವಿದ್ಯಾ ಪುರಸ್ಕೃತ್ಯೈವ ಪ್ರವೃತ್ತಾಃ, ನಿತ್ಯಾನ್ವಿಷ್ಟ ಏವಾತ್ಮಾ, ಸ್ವತಃ-ಸಿದ್ಧತ್ವಾತ್ - ಇತ್ಯುಕ್ತಂ ಭವತಿ || ]

(೩) ಕಥಂ ಪುನಃ, ಅವಿದ್ಯಾವದ್ವಿಷಯಾಣಿ ಪ್ರತ್ಯಕ್ಷಾದೀನಿ ಪ್ರಮಾಣಾನಿ ಶಾಸ್ತ್ರಾಣಿ ಚೇತಿ ? ಉಚ್ಯತೇ | ದೇಹೇಂದ್ರಿಯಾದಿಷು ಅಹಂಮಮಾಭಿಮಾನರಹಿತಸ್ಯ ಪ್ರಮಾತೃತ್ವಾನುಪಪತ್ತೌ, ಪ್ರಮಾಣಪ್ರವೃತ್ತ್ಯನುಪಪತ್ತೇಃ || ಸೂ.ಭಾ.

[ ದೇಹೇಂದ್ರಿಯಮನಸ್ಸು ಅಹಂ ಮಮಾಭಿಮಾನಕೃತಮೇವ ಪ್ರಮಾತೃತ್ವಮ್, ಕರ್ತೃತ್ವಾದಿಕಂ ಚ | ಏವಂ ಪುತ್ರಭಾರ್ಯಾದಿಷು ಗೌಣಾತ್ಮಸ್ವಪಿ ಮಮಾಭಿಮಾನಕೃತ್ಯೈವ ತದರ್ಥಂ ಕರ್ಮಸು ಪ್ರವೃತ್ತಿಃ | ದೇಹೇಂದ್ರಿಯಾದಿಭ್ಯೋ ವಿವಿಕ್ತಮಾತ್ಮಾನಂ ಪಶ್ಯತಸ್ತು ಪ್ರಮಾತೃತ್ವಮ್, ಪ್ರಮಾಣಪ್ರವರ್ತಕತ್ವಂ ವಾ | ಪ್ರಮಾತ್ರಾಶ್ರಯೇಣೈವ ಲಬ್ಧಪ್ರಾಣಾನಾಂ ಪ್ರಮಾಣಾನಾಮಪಿ ಪ್ರಮಾತ್ರಭಾವೇ ಪ್ರಮಾಣತ್ವಾನುಪಪತ್ತೇಃ | - ಇತ್ಯುಕ್ತಂ ಭವತಿ | ಸ್ಫುಟತರಂ ಭವತೀದಂ ಸಮನಂತರೋತ್ತರೋದಾಹರಣೇನ || ]

---

ವ್ಯವಹಾರಗಳು ಲೌಕಿಕ ವೈದಿಕ ವ್ಯವಹಾರಗಳೂ ಸಹ ಹೊರಟಿರುತ್ತವೆ. (ಅಧ್ಯಾ. ಭಾ. ೨) ("ವೈದಿಕವ್ಯವಹಾರವೂ" ಎಂದು ಹೇಳಿರುವುದರಿಂದ "ಆತನನ್ನು ಹುಡುಕಬೇಕು" ಎಂಬೀ ವ್ಯವಹಾರವೂ ಸಹ ಉಪದೇಶಕ್ಕಾಗಿ ಅವಿದ್ಯೆಯನ್ನು ಮುಂದುಮಾಡಿಕೊಂಡು ಹೊರಟಿವೆ ಎಂತಲೂ ಆತ್ಮನು ಸ್ವತಃ ಸಿದ್ಧನಾಗಿರುವುದರಿಂದ ಆಗಲೇ ಹುಡುಕಾಗಿರುವವನೇ ಎಂತಲೂ ಹೇಳಿದಂತಾಗುತ್ತದೆ).

(೩) "ಪ್ರತ್ಯಕ್ಷವೇ ಮುಂತಾದ ಪ್ರಮಾಣಗಳೂ ಶಾಸ್ತ್ರಗಳೂ ಅವಿದ್ಯಾವಂತನಾದವನನ್ನೇ ವಿಷಯ ಮಾಡಿಕೊಂಡು ಹೊರಟಿರುವುದು ಎಂದು ಹೇಗೆ ಹೇಳುವಿರಿ? ಎಂದರೆ ಅದಕ್ಕೆ ಹೇಳುವೆವು, ದೇಹೇಂದ್ರಿಯಾದಿಗಳಲ್ಲಿ ನಾನು ನನ್ನದೆಂಬ ಅಭಿಮಾನವಿಲ್ಲದವನಿಗೆ ಪ್ರಮಾತೃತ್ವವೇ ಹೊಂದದಿರುವಾಗ ಪ್ರಮಾಣಗಳ ಪ್ರವೃತ್ತಿಯೇ ಹೊಂದುವುದಿಲ್ಲ." (ಅಧ್ಯಾ.ಭಾ ೨) ಪ್ರಮಾತೃತ್ವವೂ ಮತ್ತು ಕರ್ತೃತ್ವಾದಿಗಳು ದೇಹೇಂದ್ರಿಯಮನಸ್ಸುಗಳಲ್ಲಿ ನಾನು ನನ್ನದೆಂಬ ಅಭಿಮಾನದಿಂದಲೇ ಆದದ್ದಾಗಿವೆ. ಹೀಗೆಯೇ ಮಕ್ಕಳು ಹೆಂಡತಿ ಮುಂತಾದ ಗೌಣಾತ್ಮರುಗಳಲ್ಲಿ ನನ್ನವರೆಂಬ ಅಭಿಮಾನದಿಂದಲೇ ಅವರಿಗಾಗಿ ಕರ್ಮದಲ್ಲಿ ತೊಡಗುವುದೆಂಬುದಾಗುತ್ತದೆ. ದೇಹೇಂದ್ರಿಯಾದಿ-ಗಳಿಗಿಂತ ವಿಂಗಡವಾದ ಆತ್ಮನನ್ನು ಕಾಣುವವನಿಗಾದರೋ ಪ್ರಮಾತೃತ್ವವೂ ಇರುವುದಿಲ್ಲ, ಪ್ರಮಾಣಗಳನ್ನು ತೊಡಗಿಸುವುದಕ್ಕೂ ಆಗುವುದಿಲ್ಲ. ಪ್ರಮಾತ್ರಾಶ್ರಯದಿಂದಲೇ ಬದುಕಿಕೊಂಡಿರುವ ಪ್ರಮಾಣಗಳಿಗೆ

(೪) ತಸ್ಮಾತ್, "ಅಹಂ ಬ್ರಹ್ಮಾಸ್ಮಿ" - ಇತ್ಯೇತದವಸಾನಾ ಏವ ಸರ್ವೇ ವಿಧಯಃ, ಸರ್ವಾಣಿ ಚೇತರಾಣಿ ಪ್ರಮಾಣಾನಿ | ನ ಹಿ ಅಹೇಯಾನುಪಾದೇಯಾದ್ವೈತಾತ್ಮಾವಗತೌ ನಿರ್ವಿಷಯಾಣಿ, ಅಪ್ರಮಾತೃಕಾಣಿ ಚ, ಪ್ರಮಾಣಾನಿ ಭವಿತುಮರ್ಹಂತೀತಿ||
ಸೂ.ಭಾ. ೧-೧-೪.

[ ಅತ್ರ ಯಥೋದಾಹೃತಶ್ಲೋಕತ್ರಯಾರ್ಥಃ ಸರ್ವೋಽಪಿ ಸಂಗೃಹ್ಯೋಕ್ತಃ | ಆತ್ಮತ್ವಾದೇವಾತ್ಮನಃ ಪ್ರಮೇಯತ್ವಾಭಾವಾತ್, ಅಹೇಯತ್ವಮನುಪಾದೇಯತ್ವಂ ಚ| "ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್" ಇತಿ ಶ್ರುತ್ಯನುಸಾರೇಣ ಪ್ರಮಾತೃಪ್ರಮಾಣಪ್ರಮೇಯವಿಭಾಗಸ್ಯ ಆತ್ಮೈಕತ್ವಾವಗಮೇ ಸತಿ ರಜ್ಜ್ವವಗಮೇ ಸರ್ಪಧಾರಾದಿವಿಕಲ್ಪಾನಾಮಿವಾತ್ಯಂತಮ್ ಅಭಾವಾತ್, ನ ಪ್ರಮಾತಾ, ನ ಚ ಪ್ರಮೇಯಾಣ್ಯಾವಶಿಷ್ಯಂತೇ | ಅತ ಏವ ಸ್ವಾಶ್ರಯಭೂತಪ್ರಮಾತ್ರಭಾವಾತ್, ಸ್ವವಿಷಯಭೂತಪ್ರಮೇಯಾಭಾವಾಚ್ಚ, ತದುಭಯನಿರೂಪಿತಸ್ವರೂಪಾಣಾಂ ಪ್ರಮಾಣಾನಾಂ ಪ್ರಮಾಣತ್ವಮೇವ ನಾವಕಲ್ಪತೇ - ಇತ್ಯರ್ಥಃ || ]

---

ಪ್ರಮಾತೃವಿಲ್ಲವಾದರೆ ಪ್ರಮಾಣವಾಗಿದೆ ಎಂಬುದೇ ಹೊಂದುವುದಿಲ್ಲ ಎಂದು ಹೇಳಿದಂತಾಗುತ್ತದೆ. ಮುಂದಿನ ಉದಾಹರಣೆಯಿಂದ ಇದು ಇನ್ನೂ ಸ್ಪಷ್ಟವಾಗುತ್ತದೆ.

(೪) ಆದ್ದರಿಂದ "ನಾನು ಬ್ರಹ್ಮವಾಗಿರುವೆನು" ಎಂಬ ತಿಳಿವಳಿಕೆಯಿರುವವರೆಗೇ ಎಲ್ಲಾ ವಿಷಯುಗಳು ಮತ್ತು ಬಾಕಿ ಎಲ್ಲಾ ಪ್ರಮಾಣಗಳು. ಬಿಡುವುದಕ್ಕಾಗಲೀ ತೆಗೆದುಕೊಳ್ಳುವುದಕ್ಕಾಗಲೀ ಬರದ ಅದ್ವೈತಾತ್ಮಜ್ಞಾನವಾದಮೇಲೆ ವಿಷಯವೂ ಪ್ರಮಾತೃತ್ವವೂ ಇಲ್ಲವೆಂದಾಗಿ ಪ್ರಮಾಣಗಳು ಪ್ರಮಾಣವಾಗಿ ಉಳಿಯುವುದಿಲ್ಲವಷ್ಟೇ? (ಸೂ.ಭಾ. ೧-೧-೪). ಈ ವಾಕ್ಯದಲ್ಲಿ ಹಿಂದೆ ಉದಾಹರಿಸಿದ ಮೂರು ಶ್ಲೋಕದ ಅರ್ಥವೂ ಸಂಗ್ರಹಿಸಿ ಹೇಳಿದಂತಾಗಿದೆ. ಆತ್ಮನು ಸ್ವರೂಪವಾಗಿರುವುದರಿಂದಲೇ ಪ್ರಮೇಯನಲ್ಲದವನಾಗಿಯೂ, ಬಿಡುವುದಕ್ಕೂ ತೆಗೆದುಕೊಳ್ಳುವುದಕ್ಕೂ ಬಾರದವನಾಗಿಯೂ ಇರುತ್ತದೆ. "ಯಾವಾಗ ಈತನಿಗೆ ಎಲ್ಲವೂ ಆತ್ಮನೆಂದು ಗೊತ್ತಾಗುತ್ತದೋ" ಎಂಬೀ ಶ್ರುತಿಗನುಗುಣವಾಗಿ ಪ್ರಮಾತೃಪ್ರಮಾಣಪ್ರಮೇಯ ವಿಭಾಗವೆಲ್ಲಾ ಆತ್ಮನೊಬ್ಬನೇ ಎಂದು ಗೊತ್ತಾಗಲಾಗಿ ಹಗ್ಗವು ಗೊತ್ತಾದ ಮೇಲೆ ಹಾವು, ನೀರಿನಧಾರೆ ಮುಂತಾದ ವಿಕಲ್ಪಗಳಂತೆ ಅತ್ಯಂತವಾಗಿ ಇಲ್ಲವಾಗುವುದರಿಂದ ಪ್ರಮಾತೃವಾಗಲೀ ಪ್ರಮೇಯವಾಗಲೀ ಉಳಿಯುವುದಿಲ್ಲ. ಆದ್ದರಿಂದಲೇ ಪ್ರಮಾಣಗಳಿಗೆ ಆಶ್ರಯವಾದ ಪ್ರಮಾತೃವು ಇಲ್ಲವಾದ್ದರಿಂದಲೂ, ತಮಗೆ

(೫) ನನ್ವೇಕತ್ವೈಕಾಂತ್ಯಾಭ್ಯುಪಗಮೇ ನಾನಾತ್ವಾಭಾವಾತ್, ಪ್ರತ್ಯಕ್ಷಾದೀನಿ ಲೌಕಿಕಾನಿ ಪ್ರಮಾಣಾನಿ ವ್ಯಾಹನ್ಯೇರನ್, ನಿರ್ವಿಷಯತ್ವಾತ್, ಸ್ಥಾಣ್ವಾದಿಷ್ವಿವ ಪುರುಷಾದಿಜ್ಞಾನಾನಿ | ತಥಾ ವಿಧಿಪ್ರತಿಷೇಧಶಾಸ್ತ್ರಮಪಿ ಭೇದಾಪೇಕ್ಷತ್ವಾತ್ ತದಭಾವೇ ವ್ಯಾಹನ್ಯೇತ | ಮೋಕ್ಷಶಾಸ್ತ್ರಸ್ಯಾಪಿ ಶಿಷ್ಯಶಾಸಿತ್ರಾದಿಭೇದಾಪೇಕ್ಷತ್ವಾತ್ ತದಭಾವೇ ವ್ಯಾಘಾತಃ ಸ್ಯಾತ್.....| ಅತ್ರೋಚ್ಯತೇ | ನೈಷ ದೋಷಃ | ಸರ್ವವ್ಯವಹಾರಾಣಾಮೇವ ಪ್ರಾಗ್ ಬ್ರಹ್ಮಾತ್ಮತಾವಿಜ್ಞಾನಾತ್ ಸತ್ಯತ್ವೋಪಪತ್ತೇಃ| ಸ್ವಪ್ನವ್ಯವಹಾರಸ್ಯೇವ ಪ್ರಾಕ್ ಪ್ರಬೋಧಾತ್ | ಯಾವದ್ ಹಿ ನ ಸತ್ಯಾತ್ಮೈಕತ್ವಪ್ರತಿಪತ್ತಿಃ, ತಾವತ್ ಪ್ರಮಾಣಪ್ರಮೇಯಫಲಲಕ್ಷಣೇಷು ವಿಕಾರೇಷು, ಅನೃತತ್ವಬುದ್ಧಿರ್ನ ಕಸ್ಯಚಿದುತ್ಪದ್ಯತೇ | ವಿಕಾರಾನೇವ ತು "ಅಹಮ್", "ಮಮ" - ಇತಿ ಅವಿದ್ಯಯಾ ಆತ್ಮಾತ್ಮೀಯೇನ ಭಾವೇನ ಸರ್ವೋ ಜಂತುಃ ಪ್ರತಿಪದ್ಯತೇ ಸ್ವಾಭಾವಿಕೀಂ ಬ್ರಹ್ಮಾತ್ಮತಾಂ ಹಿತ್ವಾ | ತಸ್ಮಾತ್ ಪ್ರಾಗ್ ಬ್ರಹ್ಮಾತ್ಮತಾಪ್ರತಿಬೋಧಾತ್, ಉಪಪನ್ನಃ ಸರ್ವೋ ಲೌಕಿಕೋ ವೈದಿಕಶ್ಚ ವ್ಯವಹಾರಃ || ಸೂ.ಭಾ. ೨-೧-೧೪.

---

ವಿಷಯವಾದ ಪ್ರಮೇಯವೂ ಇಲ್ಲವಾದ್ದರಿಂದಲೂ ಅವೆರಡರಿಂದಲೇ ಸಿದ್ಧವಾಗಬೇಕಾದ ಪ್ರಮಾಣಗಳಿಗೆ ಪ್ರಮಾಣತ್ವವು ಹೊಂದುವುದಿಲ್ಲ ಎಂದರ್ಥವು.

(೫) ಏಕಾಂತವಾಗಿ ಏಕತ್ವವನ್ನೇ ಒಪ್ಪಿಕೊಂಡರೆ (ಆಗ) ನಾನಾತ್ವವೆಂಬುದೇ ಇಲ್ಲವೆಂದಾಗಿ ಪ್ರತ್ಯಕ್ಷವೇ ಮುಂತಾದ ಲೌಕಿಕಪ್ರಮಾಣಗಳು ವಿರುದ್ಧವಾಗುತ್ತದೆಯಲ್ಲ! ಏಕೆಂದರೆ ಮೋಟುಮರದಲ್ಲಿ ಪುರುಷನೆಂಬುದು ಹೇಗೆ ನಿಜವಾಗಿಲ್ಲವೊ ಹಾಗೆ (ಶಾಸ್ತ್ರಕ್ಕೆ ದ್ವೈತವೆಂಬ) ವಿಷಯವೇ ಇರುವುದಿಲ್ಲವಲ್ಲ? ಹಾಗೆಯೇ ವಿಧಿಪ್ರತಿಷೇಧಶಾಸ್ತ್ರವೂ ಸಹ ಭೇದವನ್ನು ಅಪೇಕ್ಷಿಸಿಕೊಂಡೇ ನಡೆಯಬೇಕಾಗಿರುವುದರಿಂದ ಆ ಭೇದವಿಲ್ಲವಾದರೆ ಅದಕ್ಕೂ ವಿರೋಧವಾಗುತ್ತದೆಯಲ್ಲ! ಮೋಕ್ಷಶಾಸ್ತ್ರವೂ ಸಹ ಗುರು ಶಿಷ್ಯ ಮುಂತಾದ ಭೇದವನ್ನಿಟ್ಟುಕೊಂಡೇ ಹೊರಡುವುದರಿಂದ ಆ ಭೇದವಿಲ್ಲವಾದರೆ ಆ ಶಾಸ್ತ್ರಕ್ಕೂ ವಿರೋಧವಾಗುತ್ತದೆ. ಎಂದರೆ ಇದಕ್ಕೆ ಉತ್ತರವನ್ನು ಹೇಳುತ್ತೇವೆ. ಇದೇನು ದೋಷವಲ್ಲ, ಏಕೆಂದರೆ ಬ್ರಹ್ಮಾತ್ಮಜ್ಞಾನವಾಗುವವರೆಗೆ ಎಲ್ಲಾ ವ್ಯವಹಾರವೂ ಸತ್ಯವಾಗಿರಬಹುದಾಗಿದೆ. ಎಚ್ಚರವಾಗುವುದಕ್ಕೆ ಮುಂಚೆ ಸ್ವಪ್ನವ್ಯವಹಾರವು ಸತ್ಯವಾಗಿರುವಂತೆ ಎಲ್ಲಿಯವರೆಗೆ ಸತ್ಯಾತ್ಮಜ್ಞಾನವಿರುವುದಿಲ್ಲವೋ ಅಲ್ಲಿಯವರೆಗೆ

[ ಏತೇನ "ಪ್ರಮಾಣಂ ತ್ವಾತ್ಮನಿಶ್ಚಯಾತ್" ಇತಿ ಶ್ಲೋಕಭಾಗೋ ವ್ಯಾಖ್ಯಾತಃ | ಶ್ಲೋಕೇ "ದೇಹಾತ್ಮಪ್ರತ್ಯಯೋ ಯದ್ವತ್" ಇತಿ ದೃಷ್ಟಾಂತೋ, ಭಾಷ್ಯೇ ಸ್ವಪ್ನವ್ಯವಹಾರಪ್ರದರ್ಶನೇನ ಸ್ಫುಟತರಃ ಕೃತಃ ಯದ್ಯಪಿ, ಅಕರ್ತೃತ್ವಮ್, ಅಪ್ರಮಾತೃತ್ವಮ್, ಅದ್ವಿತೀಯತ್ವಂ ಚ ಸ್ವಭಾವ ಏವಾತ್ಮನಃ, ತಥಾಪಿ ಏತತ್ಸ್ವಭಾವಾಜ್ಞಾನಾದೇವ ತು ಕರ್ತೃತ್ವಾದಿಕಂ ತಥಾತ್ವೇನಾವಭಾಸತೇ ತತ್ಕಾಲೇ, ಸ್ವಪ್ನಕಾಲೇ ಇವ ಮಿಥ್ಯಾಭಾವಾಃ - ಇತಿ || ]

೧೮. **ಶಾಸ್ತ್ರಸ್ಯಾಂತ್ಯಪ್ರಮಾಣತ್ವಮ್** - ಶಾಸ್ತ್ರಾಚಾರ್ಯೋಪದೇಶಾತ್ ಆತ್ಮತತ್ತ್ವಜ್ಞಾನೇ ಜಾತೇ ಪ್ರಮಾಣಾದಿವ್ಯವಹಾರೋ ಮಿಥ್ಯಾತ್ವೇನಾವಗಮ್ಯತ ಇತ್ಯಧಿಗತಮ್| ಅಥ ಯಥೈವ ದ್ವೈತಬುದ್ಧಿರದ್ವೈತಜ್ಞಾನೇನ ಬಾಧ್ಯತೇ, ತಥೈವಾದ್ವೈತ-ಬುದ್ಧಿರಪಿ ಕಿಮಿತಿ ಶೂನ್ಯಬುದ್ಧ್ಯಾ ನ ಬಾಧ್ಯೇತ ? ಅದ್ವೈತಾತ್ಮಬುದ್ಧಿರೇವ ತ್ವಂತ್ಯಾ

---

ಪ್ರಮಾಣಪ್ರಮೇಯಫಲರೂಪವಾದ ವಿಕಾರಗಳಲ್ಲಿ ಸುಳ್ಳೆಂಬ ಬುದ್ಧಿಯು ಯಾರಿಗೂ ಉಂಟಾಗುವುದೇ ಇಲ್ಲ. ವಿಕಾರವಾದ (ದೇಹಾದಿಗಳನ್ನೇ) ನಾನು ನನ್ನದೆಂದು ತಪ್ಪು ತಿಳಿವಳಿಕೆಯಿಂದ ತನ್ನದೆಂಬ ಭಾವನೆಯಿಂದ- ಸ್ವಾಭಾವಿಕವಾದ ಬ್ರಹ್ಮಾತ್ಮರೂಪವನ್ನು ಬಿಟ್ಟು - ಎಲ್ಲರೂ ತಿಳಿದಿರುತ್ತಾರೆ. ಆದ್ದರಿಂದ ಬ್ರಹ್ಮಾತ್ಮಜ್ಞಾನಕ್ಕಿಂತ ಮುಂಚೆ ಈ ಎಲ್ಲಾ ಲೌಕಿಕ ವೈದಿಕವ್ಯವಹಾರವು ಹೊಂದಿಯೇ ಇರುತ್ತದೆ. (ಸೂ.ಭಾ. ೨-೧-೧೪) ಇಷ್ಟರ ವಿವರಣೆಯಿಂದ "ಪ್ರಮಾಣಂ ತ್ವಾತ್ಮನಿಶ್ಚಯಾತ್" ಎಂಬ ಶ್ಲೋಕದ ಭಾಗಕ್ಕೆ ವ್ಯಾಖ್ಯಾನವನ್ನು ಮಾಡಿದಂತಾಯಿತು. ಶ್ಲೋಕದಲ್ಲಿರುವ "ದೇಹಾತ್ಮಪ್ರತ್ಯಯೋ ಯದ್ವತ್" ಎಂಬುದಕ್ಕೆ ದೃಷ್ಟಾಂತವನ್ನು ಭಾಷ್ಯದಲ್ಲಿ ಸ್ವಪ್ನವ್ಯವಹಾರವನ್ನು ತೋರಿಸುವುದರ ಮೂಲಕ ಸ್ಪಷ್ಟಪಡಿಸಿರುತ್ತದೆ. ಆತ್ಮನಿಗೆ ಅಕರ್ತೃತ್ವವೂ, ಅಪ್ರಮಾತೃತ್ವವೂ ಅದ್ವಿತೀಯತ್ವವೂ ಸ್ವಭಾವವೇ ಆಗಿದ್ದರೂ ಹೀಗಿರುವ ಸ್ವಭಾವದವನೆಂದು ತಿಳಿಯದೇ ಇರುವುದರಿಂದಲೇ ಕರ್ತೃತ್ವವೇ ಮುಂತಾದವು ಆ ಕಾಲದಲ್ಲಿ ಹಾಗೆಯೇ ಇದೆ ಎಂದು ತೋರುತ್ತದೆ. ಇದು ಸ್ವಪ್ನಕಾಲದಲ್ಲಿ ಸುಳ್ಳಾಗದೆ ಪದಾರ್ಥಗಳು ತೋರುವಂತೆ ತೋರುತ್ತಿರುವವು.

೧೮) ಶಾಸ್ತ್ರವು ಕೊನೆಯ ಪ್ರಮಾಣವು, ಶಾಸ್ತ್ರಾಚಾರ್ಯರ ಉಪದೇಶದಿಂದ ಆತ್ಮತತ್ವವು ಗೊತ್ತಾಗಲಾಗಿ ಪ್ರಮಾಣಾದಿವ್ಯವಹಾರವು ಸುಳ್ಳಾದದ್ದೆಂದು ಗೊತ್ತಾಗುತ್ತದೆ ಎಂಬುದನ್ನು ತಿಳಿದದ್ದಾಯಿತು. ಇನ್ನು ಹೇಗೆ ದ್ವೈತ ಬುದ್ಧಿಯು ಅದ್ವೈತ ಜ್ಞಾನದಿಂದ ಸುಳ್ಳಾಗುತ್ತದೋ ಹಾಗೆಯೇ ಅದ್ವೈತಬುದ್ಧಿಯೂ

- ಇತಿ ಕೋ ವಿಸ್ರಂಭಃ ? ಸ್ವಪ್ನಾಂತರರ್ಗತಸ್ವಪ್ನೇ ಹಿ ತಾತ್ಕಾಲಿಕೀ ಜಾಗ್ರದ್ಬುದ್ಧಿರನು-ವರ್ತಮಾನಾ ಸ್ವಾಂತರ್ಭಾವಕಸ್ವಪ್ನವಿಷಯಯೈವ ನಿಶ್ಚಿತಜಾಗ್ರದ್ಬುದ್ಧ್ಯಾ ಬಾಧ್ಯತೇ, ತತಃ ಪಶ್ಚಾತ್ ಸಾಪಿ ಸ್ವಪ್ನವಿಷಯಾ ಜಾಗರಿತಬುದ್ಧಿಃ ಪರಮಾರ್ಥಜಾಗರಿತವಿಷಯಯಾ ಬುದ್ಧ್ಯಾ ಬಾಧ್ಯತ ಇತಿ ಸರ್ವೇಷಾಂ ನಃ ಪ್ರತ್ಯಕ್ಷಮೇತದಿತಿ | ಅತ್ರ ಸಂಪ್ರದಾಯವಿದಾಂ ಗೌಡಪಾದಾಚಾರ್ಯಾಣಾಂ ಪ್ರತಿವಚನಮಿದಮ್ -

(೫) ವಿಕಲ್ಪೋ ವಿನಿವರ್ತೇತ ಕಲ್ಪಿತೋ ಯದಿ ಕೇನಚಿತ್ | ಉಪದೇಶಾದಯಂ
ವಾದೋ ಜ್ಞಾತೇ ದ್ವೈತಂ ನ ವಿದ್ಯತೇ || ಗೌ.ಕಾ. ೧-೧೮.

ಅಯಮತ್ರ ಕಾರಿಕಾಭಿಪ್ರಾಯಃ | ವಿಕಲ್ಪೋ ಹಿ ನಾಮ ಅವಿದ್ಯಯಾ ಸ್ವಾಭಾವಿಕ್ಯಾ ಜಾಯಮಾನೋ ಲೌಕಿಕಪ್ರತ್ಯಯಃ, ಯಥಾ ಸೂರ್ಯೇ ಪ್ರಾದೇಶಮಾತ್ರತ್ವಬುದ್ಧಿಃ, ಊಷರಪ್ರದೇಶೇ ಸೋದಕತ್ವಬುದ್ಧಿಃ, ರಜ್ಜ್ವಾಂ ಸರ್ಪತ್ವಬುದ್ಧಿಃ - ಇತ್ಯಾದಿಃ | ಸ ಚ ವಿಕಲ್ಪಃ ಅವಿಕಲ್ಪಿತವಸ್ತುಸ್ವಭಾವಾವಧಾರಣೇನ ವಿನಿವರ್ತತೇ, ಅವಧಾರಿತಸೂರ್ಯಾದಿ-

---

ಕೂಡ ಶೂನ್ಯಬುದ್ಧಿಯಿಂದ ಏತಕ್ಕೆ ಬಾಧೆಯಾಗಬಾರದು? ಅದ್ವೈತಾತ್ಮ-ಬುದ್ಧಿಯೇ ಕೊನೆಯದಾದದ್ದು ಎಂಬುದನ್ನು ಹೇಗೆ ನಂಬುವುದು? ಇದು ಹೇಗೆಂದರೆ ಸ್ವಪ್ನದ ಒಳಗಿನ ಇನ್ನೊಂದು ಸ್ವಪ್ನದಲ್ಲಿ ತತ್ಕಾಲಕ್ಕೆ "ಇದು ಎಚ್ಚರ" ಎಂಬ ಬುದ್ಧಿಯು ಅಲ್ಲೂ ಅನುವೃತ್ತವಾಗಿದ್ದು, ತನ್ನೊಳಗೆ ಅಡಗಿಸಿಕೊಂಡ ಸ್ವಪ್ನಕ್ಕೆ ಗೋಚರವಾದ ( ಈ ಅವಸ್ಥೆಯಿಂದ) ಅದರೊಳಗಿನ ಕನಸು – ಇಲ್ಲಿ ನಿಶ್ಚಿತವಾಗಿ ಎಚ್ಚರವೇ ಎಂಬ ಬುದ್ಧಿ ಇರುವುದರಿಂದ ಅದು ಹೇಗೆ ಬಾಧಿತವಾಗುತ್ತದೋ ಆ ಮೇಲೆ ಈ ಎಚ್ಚರವೆಂದುಕೊಂಡ ಸ್ವಪ್ನವೂ (ಈಗಿರುವ) ನಿಜವಾದ ಎಚ್ಚರವೆಂಬ ಬುದ್ಧಿಯಿಂದ ಬಾಧಿಸಲ್ಪಡುತ್ತಿರುವುದು ನಮಗೆಲ್ಲರಿಗೂ ಪ್ರತ್ಯಕ್ಷವಾಗಿದೆ (ಸ್ಪಷ್ಟವಾಗಿದೆ). ಈ ವಿಷಯಕ್ಕೆ ಸಂಪ್ರದಾಯವನ್ನು ಬಲ್ಲವರಾದ ಗೌಡಪಾದಾಚಾರ್ಯರ ಉತ್ತರವಿದೆ.

(೫) ವಿಕಲ್ಪೋವಿನಿವರ್ತೇತ ಕಲ್ಪಿತೋ ಯದಿ ಕೇನಚಿತ್।
ಉಪದೇಶಾದಯಂ ವಾದೋ ಜ್ಞಾತೇ ದ್ವೈತಂ ನ ವಿದ್ಯತೇ ॥
ಗೌ. ಕಾ. ೧–೧೮॥

ಇಲ್ಲಿ ಕಾರಿಕೆಯ ಅಭಿಪ್ರಾಯವಿದು. ವಿಕಲ್ಪವೆಂಬುದು ಸ್ವಾಭಾವಿಕವಾದ ಅವಿದ್ಯೆಯಿಂದ ಹುಟ್ಟುವ ಲೌಕಿಕಪ್ರತ್ಯಯವು. ಹೇಗೆ ಸೂರ್ಯನು

ಸತತ್ವಾನಾಮಿವ ಪ್ರಾದೇಶಮಾತ್ರತ್ವಾದಿಪ್ರತ್ಯಯಃ| ಏವಂ ದೇಹಾತ್ಮಬುದ್ಧಿಃ, ಆತ್ಮನಿ ಸಂಸಾರಿತ್ವಬುದ್ಧಿಃ, ಸದ್ವೈತತ್ವಬುದ್ಧಿಶ್ಚ ಸ್ವಾಭಾವಿಕಾವಿದ್ಯಯಾ ಕಲ್ಪಿತತ್ವಾತ್, ಅದ್ವೈತಜ್ಞಾನೇನ ವಿನಿವರ್ತತ ಇತಿ ಯುಕ್ತಮ್| ಶಾಸ್ತ್ರಾದಿವಿಕಲ್ಪಸ್ತು ನ ತಥಾ ಕೇನಚಿತ್ ಅವಿದ್ಯಾವತ್ಪುರುಷೇಣ ಕಲ್ಪಿತಃ, ಪರಮಾರ್ಥಾದ್ವೈತತತ್ತ್ವಜ್ಞಾಪನಾಯ ತು ಉಪದೇಶಾರ್ಥಂ ಬ್ರಹ್ಮವಾದಿಭಿರುಪಾಯತ್ವೇನ ಕಲ್ಪಿತೋಽಯಂ ವಿಭಾಗಃ| ಜ್ಞಾತೇ ತ್ವದ್ವೈತತತ್ತ್ವೇ ಯಥಾ ಅಜ್ಞಕಲ್ಪಿತಂ ದ್ವೈತಂ ಬಾಧ್ಯತೇ "ನಾಸ್ತ್ಯಯಂ ವಸ್ತುತ" - ಇತಿ, ಏವಂ ಶಾಸ್ತ್ರಶಿಷ್ಯಾದಿದ್ವೈತಮಪಿ ನ ವಿದ್ಯತ ಇತಿ ವಿಜ್ಞಾಯತ ಏವ| ನ ಚ ಅದ್ವೈತಮಿತ್ಯಯಮಪಿ ವಿಕಲ್ಪ ಇತಿ ಕಿಂ ನ ಸ್ಯಾದಿತಿ ಶಂಕ್ಯಮ್| "ಅದ್ವೈತಮ್" ಇತಿ ಸರ್ವದ್ವೈತವಿಕಲ್ಪಪ್ರತಿಷೇಧೇನಾನಿರಾಕರಣೀಯವಸ್ತುತತ್ತ್ವಮಾತ್ರಸ್ಯ ನಿರ್ದೇಶಾತ್| ನ ಚ ವಸ್ತುತತ್ತ್ವಜ್ಞಾನೇ ಸತಿ ಪುನರಪಿ ಜ್ಞಾತೃಜ್ಞಾನಜ್ಞೇಯಾದಿವಿಭಾಗೋಽಸ್ತಿ, ಯೇನಾದ್ವೈತತತ್ತ್ವಮಪಿ ಕಿಮಿತಿ ನ ಬಾಧ್ಯಂ ಭವೇದಿತ್ಯಾಶಂಕ್ಯೇತ| ನ ಚ ಸರ್ವವಿಧಸ್ಯಾಪಿ ದ್ವೈತಸ್ಯ ಬಾಧೇ ವೇದಸ್ಯಾಪಿ ಬಾಧಃ ಸ್ಯಾತ್ ಇತಿ ಶಂಕನೀಯಮ್| ಇಷ್ಟತ್ವಾತ್|

---

ಚೋಟುದ್ದದಷ್ಟು ಇರುವನೆಂಬ ತಿಳಿವಳಿಕೆ, ಚೌಳುನೆಲದಲ್ಲಿ ಮರೀಚ್ಯುದಕವಿದೆ ಎಂಬ ಅರಿವು, ಹಗ್ಗದಲ್ಲಿ ಹಾವೆಂಬ ತಿಳಿವಳಿಕೆಯು ಹೇಗೋ ಹಾಗೆ ಇದು. (ಈ) ಸೂರ್ಯನೇ ಮುಂತಾದವರ ಸ್ವರೂಪವನ್ನು ಗೊತ್ತು ಮಾಡಿಕೊಂಡಾಗ ಚೋಟುದ್ದದಷ್ಟೇ ಎಂಬ ತಿಳಿವಳಿಕೆಯ ವಿಕಲ್ಪವು ಹೇಗೆ ಹೋಗುವುದೋ ಅದರಂತೆ ಅವಿಕಲ್ಪಿತವಾದ ಆತ್ಮಸ್ವರೂಪದ ತಿಳಿವಳಿಕೆಯಿಂದ (ಆತ್ಮನ ಬಗ್ಗೆ ಇರುವ) ವಿಕಲ್ಪವು ಹೋಗುತ್ತದೆ. ಇದರಂತೆ ಅದ್ವೈತ ಜ್ಞಾನದಿಂದ ದೇಹಾತ್ಮಬುದ್ಧಿಯೂ, ತನ್ನಲ್ಲಿ ಸಂಸಾರಿತ್ವಬುದ್ಧಿಯೂ ಹಾಗೆಯೇ ಸದ್ವಿತೀಯನಾಗಿದ್ದೇನೆಂಬ ಬುದ್ಧಿಯೂ ಸಹ ಸ್ವಾಭಾವಿಕವಾದ ಅವಿದ್ಯೆಯಿಂದ ಕಲ್ಪಿತವಾಗಿರುವುದರಿಂದ – (ಅದೂ) ತೊಲಗುತ್ತದೆ. ಶಾಸ್ತ್ರಾದಿ ವಿಕಲ್ಪವಾದರೋ ಹಾಗೆ ಯಾವನೋ ಒಬ್ಬ ಅವಿದ್ಯಾವಂತನಾದ ಪುರುಷನಿಂದ ಕಲ್ಪಿತವಾದದ್ದಲ್ಲ ಏಕೆಂದರೆ ಪರಮಾರ್ಥವಾದ ಅದ್ವೈತತತ್ವವನ್ನು ತಿಳಿಸಿಕೊಡುವುದಕ್ಕಾಗಿ ಬ್ರಹ್ಮಜ್ಞಾನಿಗಳು ಉಪಾಯವಾಗಿ ಈ ವಿಭಾಗವನ್ನು ಕಲ್ಪಿಸಿರುತ್ತಾರೆ. ಅದ್ವೈತತತ್ವವೂ ಗೊತ್ತಾದ ಮೇಲೆ ಹೇಗೆ ಅಜ್ಞರು ಕಲ್ಪಿಸಿರುವ ದ್ವೈತವು "ಇದು ನಿಜವಾಗಿರುವಂಥದ್ದಲ್ಲ" ಎಂದು ಬಾಧಿತವಾಗುತ್ತದೋ ಅದರಂತೆಯೇ ಶಾಸ್ತ್ರಶಿಷ್ಯಾದಿದ್ವೈತವೂ ಸಹ ನಿಜವಾಗಿರುವುದಲ್ಲ ಎಂದು ಗೊತ್ತಾಗಿಯೇ ಆಗುತ್ತದೆ. "ಅದ್ವೈತ" ವೆಂಬುದೂ ಸಹ ವಿಕಲ್ಪವಾದದ್ದೇ

ಅತ ಏವ ಹಿ ವೇದೇ "ಅಂತ್ಯಂ ಪ್ರಮಾಣಮ್" ಇತಿ ವೇದಾಂತಿಸಂವ್ಯವಹಾರಃ | ತಸ್ಯ ಸರ್ವಪ್ರಮಾಣವ್ಯವಹಾರಬಾಧೇನಾತ್ಮನೋಽಪಿ ಪ್ರಾಮಾಣ್ಯಸ್ಯ ಬಾಧಕತ್ವಾದಿತಿ||

ತಾಮೇತಾಂ ವೇದಾಂತಮರ್ಯಾದಾಮನುಸೃತ್ಯಾಹ ಭಗವಾನ್ ಭಾಷ್ಯಕಾರಃ -

(೧) ಪ್ರತ್ಯಕ್ಷಾದ್ಯಭಾವೇ ಶ್ರುತೇರಪ್ಯಭಾವಪ್ರಸಂಗಃ - ಇತಿ ಚೇತ್ | ನ | ಇಷ್ಟತ್ವಾತ್ | "ಅತ್ರ ಪಿತಾಽಪಿತಾ ಭವತಿ" (ಬೃ.೪-೩-೨೨) ಇತ್ಯುಪಕ್ರಮ್ಯ "ವೇದಾ ಅವೇದಾಃ" (೪-೩-೨೨) ಇತಿ ವಚನಾತ್ ಇಷ್ಯತ ಏವಾಸ್ಮಾಭಿಃ ಶ್ರುತೇರಪ್ಯಭಾವಃ ಪ್ರಬೋಧೇ || ಸೂ.ಭಾ. ೪-೧-೩.

[ ಯದ್ಯಪ್ಯಯಂ ವೇದಸ್ಯಾಭಾವಃ ಸುಷುಪ್ತಿವಿಷಯೇ ಪಠ್ಯತೇ, ತಥಾಪ್ಯೇಕತ್ವಾ-ವಿಶೇಷಾತ್ ಪ್ರಬೋಧೇಽಪಿ ತಥೇತಿ ಕೃತ್ವಾ ಉದಾಹೃತಂ ವಚನಮ್ || ]

---

ಎಂದೇಕೆ ಆಗಬಾರದು? ಎಂದು ಸಂದೇಹಪಡುವುದಕ್ಕೆ ಬರುವುದಿಲ್ಲ, ಏಕೆಂದರೆ ಅದ್ವೈತವೆಂಬುದು ಸಮಸ್ತ ದ್ವೈತವೆಂಬ ವಿಕಲ್ಪವನ್ನು ಅಲ್ಲಗಳೆಯುವುದರ ಮೂಲಕ, ನಿರಾಕರಣೆಯನ್ನು ಮಾಡುವುದಕ್ಕೆ ಬರದ ವಸ್ತುಸ್ವರೂಪದ ನಿರ್ದೇಶವಷ್ಟೇ ಆಗಿರುತ್ತದೆ. ವಸ್ತುಸ್ವರೂಪವು ಗೊತ್ತಾದ ಮೇಲೆ ಪುನಃ ಜ್ಞಾತೃಜ್ಞಾನಜ್ಞೇಯವಿಭಾಗವು ಉಳಿದಿರುವುದಿಲ್ಲ. ಹಾಗೇನಾದರೂ ಉಳಿದಿದ್ದರೆ ಅದ್ವೈತವೂ ಏತಕ್ಕೆ ಬಾಧೆಯಾಗಬಾರದು? ಎಂದು ಶಂಕಿಸಬಹುದಾಗಿತ್ತು. ಎಲ್ಲಾ ಪ್ರಕಾರದ್ದಾದ ದ್ವೈತವು ಬಾಧೆಯಾದರೆ ವೇದವೂ ಸಹ ಬಾಧೆಯಾಗಿಬಿಡುತ್ತದಲ್ಲ! ಎಂದು ಶಂಕಿಸಬಾರದು. ಏಕೆಂದರೆ (ವೇದವೂ ಬಾಧೆಯಾಗುವುದು) ಇಷ್ಟವಾಗಿದೆ. ಆದ್ದರಿಂದಲೇ ವೇದದ ವಿಷಯದಲ್ಲಿ "ಅದು ಅನ್ತ್ಯಪ್ರಮಾಣವು" ಎಂದು ವೇದಾನ್ತಿಗಳ ವ್ಯವಹಾರವಿರುತ್ತದೆ. ವೇದವು ಎಲ್ಲಾ ಪ್ರಮಾಣವ್ಯವಹಾರವನ್ನೂ ಬಾಧೆಮಾಡುವುದರ ಮೂಲಕ ತನ್ನ ಪ್ರಾಮಾಣ್ಯವನ್ನು ಬಾಧೆ ಮಾಡಿಕೊಳ್ಳುತ್ತದೆ. ಈ ಒಂದು ವೇದಾನ್ತಗಳ ಮರ್ಯಾದೆಯನ್ನು ಅನುಸರಿಸಿ ಪೂಜ್ಯರಾದ ಭಾಷ್ಯಕಾರರು ಹೇಳಿರುತ್ತಾರೆ.

(೧) ಪ್ರತ್ಯಕ್ಷಾದಿಗಳು ಇಲ್ಲವೆಂತಾದರೆ ಶ್ರುತಿಯೂ ಇಲ್ಲವೆಂದಾಗುತ್ತದೆಯಲ್ಲಾ! ಎಂದರೆ, ಹಾಗಲ್ಲ, ಅದು ಇಷ್ಟವಾಗಿದೆ. "ಇಲ್ಲಿ ತಂದೆಯೂ ತಂದೆಯಾಗಿರುವುದಿಲ್ಲ" (ಬೃ-೪-೩-೨೨) ಎಂದು ಆರಂಭಿಸಿ "ವೇದಗಳೂ ವೇದವಾಗಿರುವುದಿಲ್ಲ" (೪-೩-೨೨) ಎಂದು ಹೇಳಿರುವುದರಿಂದ ಜ್ಞಾನವಾದ ಮೇಲೆ ಶ್ರುತಿಯೂ ಇರುವುದಿಲ್ಲ ಎಂಬುದು

(೨) ಅಪಿ ಚಾನ್ತ್ಯಮಿದಂ ಪ್ರಮಾಣಮ್ ಆತ್ಮೈಕತ್ವಸ್ಯ ಪ್ರತಿಪಾದಕಂ ನಾತಃ ಪರಂ ಕಿಂಚಿದಾಕಾಂಕ್ಷ್ಯಮಸ್ತಿ | ಯಥಾ ಹಿ ಲೋಕೇ ಯಜೇತ ಇತ್ಯುಕ್ತೇ ಕಿಮ್ ? ಕೇನ? ಕಥಮ್ ? - ಇತ್ಯಾಕಾಂಕ್ಷ್ಯತೇ, ನೈವಂ "ತತ್ತ್ವಮಸಿ", "ಅಹಂ ಬ್ರಹ್ಮಾಸ್ಮಿ" ಇತ್ಯುಕ್ತೇ ಕಿಂಚಿದನ್ಯದಾಕಾಂಕ್ಷ್ಯಮಸ್ತಿ | ಸರ್ವಾತ್ಮೈಕತ್ವವಿಷಯತ್ವಾ(ದ?)ವಗತೇಃ | ........ನ ಚೇಯಮವಗತಿರನರ್ಥಿಕಾ ಭ್ರಾಂತಿರ್ವಾ ಇತಿ ಶಕ್ಯಂ ವಕ್ತುಮ್ | ಅವಿದ್ಯಾನಿವೃತ್ತಿಫಲದರ್ಶನಾತ್, ಬಾಧಕಜ್ಞಾನಾಂತರಾಭಾವಾಚ್ಚ ||

ಸೂ.ಭಾ. ೨-೧-೧೪.

[ ಅದ್ವೈತಾತ್ಮಾವಗತೇರೂರ್ಧ್ವಂ ತದ್ವ್ಯತಿರಿಕ್ತಂ ನ ಕಿಂಚಿದವಶಿಷ್ಯತೇ ಯೇನಾಕಾಂಕ್ಷಾ ಸ್ಯಾತ್, ಜ್ಞಾತೃಜ್ಞಾನವಿಭಾಗಸ್ಯೈವಾಭಾವಾದ್ ಬಾಧಕಜ್ಞಾನಾಂತರಾಭಾವಃ - ಇತ್ಯರ್ಥಃ | ]

(೩) ನ ಹಿ, ಆತ್ಮಸ್ವರೂಪಾಧಿಗಮೇ ಸತಿ ಪುನಃ ಪ್ರಮಾಣಪ್ರಮೇಯವ್ಯವಹಾರಃ ಸಂಭವತಿ | ಪ್ರಮಾತೃತ್ವಂ ಹಿ ಆತ್ಮನೋ ನಿವರ್ತಯತಿ ಅಂತ್ಯಂ ಪ್ರಮಾಣಮ್|

---

ನಮಗೆ ಇಷ್ಟವಾಗಿಯೇ ಇದೆ, (ಈ ವೇದವೂ ಇರುವುದಿಲ್ಲ ಎಂಬ ವಾಕ್ಯವು ಸುಷುಪ್ತ್ಯವಸ್ಥೆಯ ವಿಷಯಕ್ಕೆ ಹೇಳಿದ್ದೆಂಬುದು ನಿಜವಾದರೂ, ಜ್ಞಾನವಾದ ಮೇಲೆ ಏಕತ್ವವಿರುವುದೆಂಬುದು (ಸುಷುಪ್ತಿಯೊಡನೆ) ಸಮಾನವಾಗಿರುತ್ತದೆ-ಯೆಂದಿಟ್ಟುಕೊಂಡು ಶ್ರುತಿಯನ್ನು ಉದಾಹರಿಸಿದೆ.

(೨) ಇದಲ್ಲದೆ ಆತ್ಮನು ಒಬ್ಬನೆ ಎಂದು ತಿಳಿಸುವ ಈ ಪ್ರಮಾಣವು ಕೊನೆಯದು, ಇದರ ಮುಂದೆ ಕೇಳತಕ್ಕದ್ದು ಯಾವುದೂ ಇರುವುದಿಲ್ಲ. ಹೇಗೆ ಲೋಕದಲ್ಲಿ "ಯಾಗ ಮಾಡಬೇಕು" ಎಂದು ಹೇಳಿದರೆ "ಯಾವುದು?" "ಏತರಿಂದ" "ಹೇಗೆ" ಎಂದು ಕೇಳುತ್ತಾರೋ, ಹಾಗೆ "ಅದು ನೀನಾಗಿರುವೆ" "ನಾನು ಬ್ರಹ್ಮವಾಗಿರುವೆನು" ಎಂದು ಹೇಳಿದರೆ ಮತ್ತೆ ಯಾವುದೂ ಕೇಳತಕ್ಕದ್ದು ಇರುವುದಿಲ್ಲ. ಏಕೆಂದರೆ ಈ ಜ್ಞಾನವು ಎಲ್ಲರ ಆತ್ಮನೂ ಒಬ್ಬನೇ ಎಂಬ ವಿಷಯದ್ದಾಗಿದೆ. ಈ ಅರಿವು ವ್ಯರ್ಥವೆಂದಾಗಲೀ ಭ್ರಾಂತಿ ಎಂದಾಗಲೀ ಹೇಳುವುದಕ್ಕೂ ಬರುವುದಿಲ್ಲ. ಏಕೆಂದರೆ ಅವಿದ್ಯೆಯು ತೊಲಗುವುದೆಂಬ ಫಲವು ಕಂಡುಬರುತ್ತದೆ. ಇದನ್ನು ಬಾಧಿಸುವ ಮತ್ತೊಂದು ಜ್ಞಾನವೂ ಇರುವುದಿಲ್ಲ (ಸೂ.ಭಾ. ೨-೧-೧೪). (ಅದ್ವೈತಾತ್ಮಜ್ಞಾನವಾದ ಮೇಲೆ ಅದಕ್ಕಿಂತ ಬೇರೆಯಾಗಿ ಏನೊಂದೂ ಉಳಿದಿರುವುದಿಲ್ಲ. ಹಾಗಿದ್ದರೆ ಆಕಾಂಕ್ಷೆಯು ಇರುತ್ತಿತ್ತು. ಜ್ಞಾತೃಜ್ಞಾನವಿಭಾಗವೇ ಇರುವುದಿಲ್ಲವಾದ್ದರಿಂದ ಬಾಧಜ್ಞಾನಾಂತರವಿರುವುದಿಲ್ಲ ಎಂದು ಭಾವವು)

ನಿವರ್ತಯದೇವ ಚ ಅಪ್ರಮಾಣೀಭವತಿ ಸ್ವಪ್ನಕಾಲಪ್ರಮಾಣಮಿವ ಪ್ರಬೋಧೇ||
ಗೀ.ಭಾ. ೨-೬೯.

[ ಅತ್ರ ಶಾಸ್ತ್ರಸ್ಯಾಂತ್ಯಪ್ರಮಾಣತ್ವೇ ಹೇತುರುಕ್ತಃ | ಪ್ರಮಾತೃತ್ವಮೇವ ಹಿ ಶಾಸ್ತ್ರಂ ನಿವರ್ತಯತೀತಿ ಸ್ವಸ್ಯ ಚ ಪ್ರಮಾಣತ್ವೇನಾನವಶೇಷೇ ಸ ಏವ ಹೇತುತ್ವೇನೋಪದಿಷ್ಟಶ್ಚ || ]

(೪) ನ ಹಿ ಶಾಸ್ತ್ರಮಿದಂತಯಾ ವಿಷಯಭೂತಂ ಬ್ರಹ್ಮ ಪ್ರತಿಪಿಪಾದಯಿಷತಿ, ಕಿಂ ತರ್ಹಿ ಪ್ರತ್ಯಗಾತ್ಮತ್ವೇನ ಅವಿಷಯತಯಾ ಪ್ರತಿಪಾದಯತ್ ಅವಿದ್ಯಾಕಲ್ಪಿತಂ ವೇದ್ಯವೇದಿತೃವೇದನಾದಿಭೇದಮಪನಯತಿ || ಸೂ.ಭಾ. ೧-೧-೪.

(೫) ಶಾಸ್ತ್ರಂ ತು ಅಂತ್ಯಂ ಪ್ರಮಾಣಮ್ ಅತದ್ಧರ್ಮಾಧ್ಯಾರೋಪಣಮಾತ್ರನಿವರ್ತಕತ್ವೇನ ಪ್ರಾಮಾಣ್ಯಮಾತ್ಮನಃ ಪ್ರತಿಪದ್ಯತೇ | ನ ತ್ವಜ್ಞಾತಾರ್ಥಜ್ಞಾಪಕತ್ವೇನ || ಗೀ.ಭಾ. ೨-೧೮.

[ ಶಾಸ್ತ್ರಸ್ಯ ಪ್ರಮಾಣತ್ವಮಪಿ ಪ್ರಮಾತೃತ್ವಾದ್ಯತದ್ಧರ್ಮನಿವರ್ತಕತ್ವೇನ, ಪ್ರಮಾಣಾನಾಂ ಪ್ರಮಾಣತ್ವನಿವರ್ತನೇನ ಚ - ಇತಿ "ಸಿದ್ಧಂ ತು ನಿವರ್ತಕತ್ವಾತ್" ಇತಿ

---

(೩) ಆತ್ಮಸ್ವರೂಪವು ಗೊತ್ತಾದ ಮೇಲೆ ಮತ್ತೆ ಪ್ರಮಾಣಪ್ರಮೇಯ ವ್ಯವಹಾರವು ಇರುವುದಿಲ್ಲ. ಅನ್ತ್ಯಪ್ರಮಾಣವಾದ (ಶಾಸ್ತ್ರವು) ನಮ್ಮ ಪ್ರಮಾತೃತ್ವವನ್ನೇ ಕಳೆದುಹಾಕಿಬಿಡುತ್ತದೆಯಲ್ಲವೇ. ಕಳೆದುಹಾಕುತ್ತಲೇ ತಾನೂ ಸ್ವಪ್ನಕಾಲದ ಪ್ರಮಾಣವು ಎಚ್ಚರದಲ್ಲಿ ಅಪ್ರಮಾಣವಾಗುವಂತೆ ತಾನೂ ಅಪ್ರಮಾಣವಾಗುತ್ತದೆ. (ಗೀ. ಭಾ. ೨-೬೯) (ಇಲ್ಲಿ ಶಾಸ್ತ್ರವು ಹೇಗೆ ಅಂತ್ಯಪ್ರಮಾಣವಾಗುತ್ತದೆ ಎಂಬುದಕ್ಕೆ ಕಾರಣವನ್ನು ಹೇಳಿರುತ್ತದೆ. ಶಾಸ್ತ್ರವು ಪ್ರಮಾತೃತ್ವವನ್ನೇ ಕಳೆಯುತ್ತದೆಯೆಂದಾದ್ದರಿಂದ, ತಾನು ಪ್ರಮಾಣವಾಗಿ ಉಳಿಯದೆ ಇರುವುದಕ್ಕೆ ಅದನ್ನೇ ಕಾರಣವೆಂದು ತಿಳಿಸಿದೆ.

(೪) ಶಾಸ್ತ್ರವೇನೂ "ಇದು" ಎಂಬುದಾಗಿ ವಿಷಯುಮಾಡಿಕೊಂಡು ಬ್ರಹ್ಮವನ್ನು ತಿಳಿಸಿಕೊಡುವುದಕ್ಕೆ ಇಷ್ಟಪಟ್ಟಿರುವುದಿಲ್ಲ, ಮತ್ತೇನೆಂದರೆ ಪ್ರತ್ಯಗಾತ್ಮನಾಗಿ ಅವಿಷಯನಾಗಿರುತ್ತಾನೆಂದು ತಿಳಿಸುತ್ತಾ ಅವಿದ್ಯಾಕಲ್ಪಿತವಾದ ವೇದ್ಯವೇದಿತೃವೇದನಾದಿ ಭೇದವನ್ನು ತೆಗೆದುಹಾಕುತ್ತದೆ. (ಸೂ.ಭಾ. ೧-೧-೪).

(೫) ಶಾಸ್ತ್ರವು ಅನ್ತ್ಯಪ್ರಮಾಣವು, ಆತ್ಮನದಲ್ಲದ ಧರ್ಮವನ್ನು ಹುಟ್ಟುಹಾಕಿಕೊಂಡಿದ್ದಷ್ಟನ್ನು ತೆಗೆದುಹಾಕುವುದರಿಂದ ತಾನು

ಸಾಂಪ್ರದಾಯಿಕೋಕ್ತಿಸೂಚನಮ್ || ]

೧೯. **ಉಪಸಂಹಾರಃ** - ತದೇವಂ ಸಾಂಪ್ರದಾಯಿಕಪೂರ್ವಾಚಾರ್ಯವಾಕ್ಯೋ- ದಾಹರಣೇನೈವ ಸಂಗ್ರಹೇಣ ಪ್ರದರ್ಶಿತಾಃ ಶಂಕರಭಗವತ್ಪಾದಮತೇನ ಕತಿಚಿದ್ ವೇದಾಂತಮರ್ಯಾದಾವಿಶೇಷಾಃ | ಸ್ವಯಂಸಿದ್ಧ ಏವಾದ್ವಿತೀಯಾತ್ಮಾ ನಿರ್ವಿಕಲ್ಪಃ, ಅವಿದ್ಯಯಾ ತಸ್ಮಿನ್ ಪ್ರಮಾಣಪ್ರಮೇಯಾದಿವಿಭಾಗವ್ಯವಹಾರವಿಕಲ್ಪಾಃ, ಕ್ರಿಯಾಕಾರಕಫಲವಿಭಾಗವ್ಯವಹಾರವಿಕಲ್ಪಾಶ್ಚ ಭವಂತಿ | ತಾಮೇವಾವಿದ್ಯಾಂ ಪುರಸ್ಕೃತ್ಯ ವಿಧಿಪ್ರತಿಷೇಧಮೋಕ್ಷಪರಾಣ್ಯಪಿ ಶಾಸ್ತ್ರಾಣಿ ಪ್ರವೃತ್ತಾನಿ | ಶ್ರುತಿಸ್ತು ತದಾತ್ಮತತ್ತ್ವಂ ನ ವಿಷಯೀಕೃತ್ಯ ಬೋಧಯತಿ, ಕಿಂ ತು ಜ್ಞಾತೃಜ್ಞೇಯಜ್ಞಾನಾದಿಭೇದಾಪನಯನ- ಮುಖೇನೈವ ತತ್ರ ಪ್ರಮಾಣಮಿತ್ಯುಪಚರ್ಯತೇ | ಶಾಸ್ತ್ರಾದಿವಿಭಾಗೋಽಪಿ ಪ್ರಾಗೇವ ಆತ್ಮಜ್ಞಾನಾತ್ ಉಪಾಯತ್ವೇನ ಕಲ್ಪ್ಯತೇ, ವಿಜ್ಞಾತೇ ತು ತತ್ತ್ವೇ ಸೋಽಪಿ ವಿಭಾಗೋ ನೈವ ವಿದ್ಯತೇ - ಇತ್ಯಾವೇದಿತಮ್ | ಅಥ ಜ್ಞಾನಾಜ್ಞಾನವಿಕಲ್ಪೋಽಪಿ ಅವಿದ್ಯಾಕಲ್ಪಿತ

---

ಪ್ರಮಾಣವಾಗಿರುತ್ತದೆಂಬ ಹೊರತು ಗೊತ್ತಿಲ್ಲದೇ ಇರುವುದನ್ನು ತಿಳಿಸಿಕೊಡುವುದರಿಂದ ಪ್ರಮಾಣವಾಗಿರುವುದಿಲ್ಲ. (ಗೀ.ಭಾ. ೨-೧೮) (ಶಾಸ್ತ್ರವು ಪ್ರಮಾಣವಾಗಿದೆ ಎಂಬುದು ಪ್ರಮಾತೃತ್ವವೇ ಮುಂತಾದ ಆತ್ಮನದಲ್ಲದ ಧರ್ಮವನ್ನು ತೆಗೆದುಹಾಕುವುದರಿಂದಲೂ ಮತ್ತು ಪ್ರಮಾಣಗಳ ಪ್ರಮಾಣತ್ವವನ್ನು ತೆಗೆದುಹಾಕುವುದರಿಂದಲೂ ಆಗಿರುತ್ತದೆ. ಇದನ್ನೇ "ಸಿದ್ಧಂ ತು ನಿವರ್ತಕತ್ವಾತ್" ಶಾಸ್ತ್ರಪ್ರಮಾಣವು ಸಿದ್ಧವಾಗಿದೆ, ಏಕೆಂದರೆ (ಎಲ್ಲವನ್ನೂ) ತೆಗೆದುಹಾಕುವುದರಿಂದ ಎಂದು ಸಾಂಪ್ರದಾಯಿಕರ ಮಾತಿನಿಂದ ಸೂಚಿಸಿದೆ).

**೧೯) ಉಪಸಂಹಾರವು** - ಹೀಗೆ ಸಾಂಪ್ರದಾಯಿಕವಾದ ಹಿಂದಿನ ಆಚಾರ್ಯರುಗಳ ವಾಕ್ಯಗಳ ಉದಾಹರಣೆಯಿಂದ, ಸಂಗ್ರಹವಾಗಿ ತೋರಿಸಿದ್ದಾದ ಶಂಕರಭಗವತ್ಪಾದರಿಗೆ ಸಂಮತವಾದ ಕೆಲವು ವೇದಾನ್ತಗಳ ಮರ್ಯಾದೆಯ ವಿಶೇಷವನ್ನು ತೋರಿಸಿದ್ದಾಯಿತು. ಸ್ವಯಂಸಿದ್ಧನೇ ಆದ ಅದ್ವಿತೀಯಾತ್ಮನು ನಿರ್ವಿಕಲ್ಪನು, ಅದರಲ್ಲಿ ಅವಿದ್ಯೆಯಿಂದ ಪ್ರಮಾಣ- ಪ್ರಮೇಯವೇ ಮುಂತಾದ ವಿಭಾಗರೂಪವಾದ ವ್ಯವಹಾರದ ವಿಕಲ್ಪಗಳು ಕ್ರಿಯಾಕಾರಕಫಲವಿಭಾಗದ ವ್ಯವಹಾರದ ವಿಕಲ್ಪಗಳೂ ಇರುತ್ತವೆ. ಆ ಅವಿದ್ಯೆಯನ್ನೇ ಮುಂದುಮಾಡಿಕೊಂಡು ವಿಧಿಪ್ರತಿಷೇಧಮೋಕ್ಷಪರವಾದ ಶಾಸ್ತ್ರಗಳೂ ಸಹ ಹೊರಟಿರುತ್ತವೆ. ಶ್ರುತಿಯಾದರೋ ಆ ಆತ್ಮತತ್ವವನ್ನು

ಏವ, ನಾಸ್ತಿ ತು ಪರಮಾರ್ಥತ ಇತ್ಯರ್ಥೇ ಭಾಷ್ಯವಚನಮುದಾಹೃತ್ಯ ಕಿರಣಮಿಮ-ಮುಪಸಂಹರಾಮಃ ||

(೧) ಕಸ್ಯ ಪುನರಯಮಪ್ರಬೋಧಃ - ಇತಿ ಚೇತ್ | ಯಸ್ತ್ವಂ ಪೃಚ್ಛಸಿ ತಸ್ಯ ತೇ ಇತಿ ವದಾಮಃ | ನನ್ವಹಮೀಶ್ವರ ಏವೋಕ್ತಃ ಶ್ರುತ್ಯಾ | ಯದ್ಯೇವಂ ಪ್ರತಿಬುದ್ಧೋಽಸಿ ನಾಸ್ತಿ ಕಸ್ಯಚಿದಪ್ರಬೋಧಃ | ಯೋಽಪಿ ದೋಷಶ್ಚೋದ್ಯತೇ ಕೈಶ್ಚಿತ್ - ಅವಿದ್ಯಯಾ ಕಿಲಾತ್ಮನಃ ಸದ್ವಿತೀಯತ್ವಾತ್ ಅದ್ವೈತಾನುಪಪತ್ತಿರಿತಿ ಸೋಽಪ್ಯೇತೇನ ಪ್ರತ್ಯುಕ್ತಃ || ಸೂ.ಭಾ. ೪-೧-೩.

(೨) ಅವಿದ್ಯಾ ಕಸ್ಯ ದೃಶ್ಯತೇ ? ಇತಿ ಪ್ರಶ್ನೋ ನಿರರ್ಥಕಃ | ಕಥಮ್ ? ದೃಶ್ಯತೇ ಚೇತ್ ಅವಿದ್ಯಾ ತದ್ವಂತಮಪಿ ಪಶ್ಯಸಿ | ನ ಚ ತದ್ವತಿ ಉಪಲಭ್ಯಮಾನೇ "ಸಾ ಕಸ್ಯ" ? ಇತಿ ಪ್ರಶ್ನೋ ಯುಕ್ತಃ || ಗೀ.ಭಾ. ೧೩-೨.

---

ವಿಷಯೀಕರಿಸಿ ತಿಳಿಸಿಕೊಡುವುದಿಲ್ಲ, ಮತ್ತೇನೆಂದರೆ ಜ್ಞಾತೃಜ್ಞಾನಜ್ಞೇಯವೇ ಮುಂತಾದ ಭೇದವನ್ನು ಕಳೆಯುವುದರ ಮೂಲಕವಾಗಿಯೇ ಅಲ್ಲಿ ಪ್ರಮಾಣವೆಂದು ಉಪಚಾರಕ್ಕೆ ಹೇಳಲಾಗುತ್ತದೆ, ಶಾಸ್ತ್ರಶಿಷ್ಯಾದಿ ವಿಭಾಗವೂ ಸಹ ಆತ್ಮಜ್ಞಾನಕ್ಕಿಂತ ಮೊದಲೇ ಉಪಾಯವಾಗಿದೆ ಎಂದು ಕಲ್ಪಿಸಲಾಗಿದೆ, ತತ್ತ್ವವು ಗೊತ್ತಾದ ಮೇಲೆ ಆ ವಿಭಾಗವೂ ಸಹ ನಿಜವಾಗಿರುವುದಿಲ್ಲ ಎಂದು ತಿಳಿಸಿದ್ದಾಯಿತು. ಇನ್ನು ಜ್ಞಾನಾಜ್ಞಾನವಿಭಾಗವೂ ಸಹ ಅವಿದ್ಯಾಕಲ್ಪಿತವಾದದ್ದೇ, ನಿಜವಾಗಿರುವುದಲ್ಲ ಎಂಬರ್ಥದಲ್ಲಿ ಭಾಷ್ಯದ ವಾಕ್ಯವನ್ನುದಾಹರಿಸುವ ಮೂಲಕ (ಈ) ಕಿರಣವನ್ನು ಉಪಸಂಹರಿಸುವೆವು.

(೧) ಈ ಅಪ್ರಬೋಧವು ಯಾರಿಗೆ? ಎಂದರೆ ಯಾವ ನೀನು ಕೇಳುತ್ತಿರುವೆಯೋ ಆ ನಿನಗೆ ಎಂದು ಹೇಳುತ್ತೇವೆ. ನಾನು ಈಶ್ವರನಾಗಿದ್ದೇನೆಂದು ಶ್ರುತಿಯು ತಿಳಿಸುತ್ತದೆಯಲ್ಲಾ? ಎಂದರೆ ಹೀಗೆ ಅರಿತಿದ್ದರೆ ಯಾರಿಗೂ ಅಪ್ರಬೋಧವಿರುವುದಿಲ್ಲ. ಇನ್ನೂ ಕೆಲವು ದೋಷವನ್ನು ಕೆಲವರು ಆಕ್ಷೇಪಿಸುತ್ತಾರೆ– ಏನೆಂದರೆ, ಅವಿದ್ಯೆಯಿಂದ ಆತ್ಮನಿಗೆ ಸದ್ವಿತೀಯತ್ವವುಂಟಾಗಿದೆಯಾದ್ದರಿಂದ ಅದ್ವೈತವು ಹೊಂದುವುದಿಲ್ಲವಲ್ಲಾ? ಎಂದರೆ ಅದನ್ನೂ ಇಷ್ಟು ಹೇಳಿದ್ದರಿಂದ ತಳ್ಳಿಹಾಕಿದಂತಾಯಿತೆಂದು ತಿಳಿಯಬೇಕು. (ಸೂ.ಭಾ. ೪–೧–೩)

(೨) ಅವಿದ್ಯೆಯು ಯಾರಿಗೆ ಕಾಣುತ್ತದೆ? ಎಂಬ ಪ್ರಶ್ನೆಯು ವ್ಯರ್ಥವು.

[ ಅದ್ವೈತತತ್ತ್ವಂ ಕಥಮುಪಪಾದ್ಯಮ್ ? ಇತಿ ಪೃಚ್ಛನ್ ಹಿ ಅದ್ವೈತಮಜಾನನ್ ಅದ್ವೈತೇಽಪ್ಯಸ್ತಿ ಉಪಪಾದ್ಯೋಪಪಾದಕವಿಭಾಗ ಇತಿ ಭ್ರಾಂತ್ಯಾ ಪೃಚ್ಛತಿ | ಅತಸ್ತಸ್ಯ ಸ್ವದೃಷ್ಟ್ಯಾ ಅವಿದ್ಯಾ ಅಸ್ತ್ಯೇವ, ಅವಿದ್ಯಾವಿಕಲ್ಪಿತಂ ದ್ವೈತಮಪಿ | ಯದಾ ತು ಶ್ರುತ್ಯಾಚಾರ್ಯಪ್ರಬೋಧಿತೋ ವಿಜಾನಾತಿ "ಅಹಮಸ್ಮಿ ಬ್ರಹ್ಮಾದ್ವಿತೀಯಮ್, ನಿತ್ಯಶುದ್ಧಮ್" ಇತಿ, ತದಾನೀಂ ನೈವಾಸ್ತಿ ಪ್ರಶ್ನಸ್ಯಾವಕಾಶಃ - ಇತ್ಯಭಿಪ್ರಾಯಃ | ನ ಹಿ ಪರಮಾರ್ಥದೃಷ್ಟ್ಯಾ ಅವಿದ್ಯಾ ವಾ, ದ್ವೈತಂ ವಾ ಅಭ್ಯುಪಗಮ್ಯತೇ, ಕಿಂ ತು ಬೋಧ್ಯಶಿಷ್ಯದೃಷ್ಟ್ಯೈವೇತ್ಯಾಶಯಃ || ]

ತದೇವಂ ಭಗವತ್ಪಾದಸಂಪ್ರದಾಯಸಂಮತಾ ವೇದಾಂತೋಪಗಮಾಃ, ಕಯಾ ಪ್ರಕ್ರಿಯಯಾ ವೇದಾಂತೇಷೂಪಪಾದ್ಯಂತ ಇತೀದಮಸ್ಮಿನ್ ಕಿರಣೇ

---

ಹೇಗೆಂದರೆ ಅವಿದ್ಯೆಯು ಕಾಣುವುದಾಗಿದ್ದರೆ ಅದನ್ನುಳ್ಳವನನ್ನೂ (ಕಂಡೇ) ಕಾಣುತ್ತೀಯೆ. ಅದನ್ನುಳ್ಳವನು ಕಾಣುತ್ತಿರುವಾಗ ಅದು ಯಾರಿಗೆ ಎಂಬ ಪ್ರಶ್ನೆಯು ಸರಿಯಾಗುವುದಿಲ್ಲವಲ್ಲವೇ? (ಗೀ. ಭಾ. ೧೩-೨)

( ಅದ್ವೈತತತ್ತ್ವವನ್ನು ಹೇಗೆ ಹೊಂದಿಸುವುದು? ಎಂದು ಕೇಳುತ್ತಾ ಅದ್ವೈತವೆಂದರೆ ಏನೆಂಬುದನ್ನರಿಯದೇ ಅದ್ವೈತದಲ್ಲೂ ಹೊಂದಬೇಕಾದ ಮತ್ತು ಹೊಂದಿಸುವ ವಿಭಾಗವಿದೆಯೆಂದು ಭ್ರಾಂತಿಯಿಂದ ಕೇಳುತ್ತಿದ್ದಾ-ನಲ್ಲವೆ? ಆದ್ದರಿಂದ ಆತನಿಗೆ ತನ್ನ ದೃಷ್ಟಿಯಿಂದ ಅವಿದ್ಯೆಯೂ ಅವಿದ್ಯಾಕಲ್ಪಿತವಾದ ದ್ವೈತವೂ ಇದೆ. ಯಾವಾಗಲಾದರೋ ಶ್ರುತಿ ಮತ್ತು ಆಚಾರ್ಯರುಗಳಿಂದ ತಿಳಿಸಲ್ಪಟ್ಟವನಾಗಿ "ನಾನು ಅದ್ವಿತೀಯ ಬ್ರಹ್ಮನೇ ಆಗಿದ್ದೇನೆ, ನಿತ್ಯಶುದ್ಧನಾಗಿದ್ದೇನೆ" ಎಂಬುದಾಗಿ ತಿಳಿಯುತ್ತಾನೋ ಆಗ ಪ್ರಶ್ನೆಗೇ ಅವಕಾಶವಿಲ್ಲ ಎಂದಭಿಪ್ರಾಯವು. ಪರಮಾರ್ಥ ದೃಷ್ಟಿಯಿಂದ ಅವಿದ್ಯೆಯಾಗಲೀ ದ್ವೈತವಾಗಲೀ ಒಪ್ಪಿಕೊಳ್ಳಲಾಗುವುದಿಲ್ಲ, ಮತ್ತೇನೆಂದರೆ ತಿಳಿಸಬೇಕಾದ ಶಿಷ್ಯದೃಷ್ಟಿಯಿಂದಲೇ ಎಂದಭಿಪ್ರಾಯವು).

ಹೀಗೆ ಭಗವತ್ಪಾದ ಸಂಪ್ರದಾಯಕ್ಕೆ ಸಂಮತವಾದ ವೇದಾನ್ತಗಳಲ್ಲಿ ಒಪ್ಪಿರುವ (ವಿಚಾರಗಳನ್ನು) ಯಾವ ಪ್ರಕ್ರಿಯೆಯಿಂದ ವೇದಾನ್ತಗಳಲ್ಲಿ ತಿಳಿಸಿಕೊಡಲಾಗಿದೆ ಎಂಬುದನ್ನು ಈ ಕಿರಣದಲ್ಲಿ ಸಂಕ್ಷೇಪವಾಗಿ ಹೇಳಿ

ಸಂಕ್ಷೇಪೇಣೋಕ್ತಮೇವ ವಿಶಿಷ್ಯ ವಿಸ್ತರೇಣ ಪ್ರತಿಪಾದ್ಯತೇ ಸಮನಂತರೋತ್ತರಕಿರಣೇ - ಇತಿ ಸರ್ವಂ ಶಿವಮ್ ||

ಇತಿಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರೇಣ್ಯಶ್ರೀಪೂಜ್ಯಪಾದಶ್ರೀಮಚ್ಛಂಕರಭಗವಚ್ಚರಣಸ್ಮರಣ-
ಪರಿಚಯಾವಾಪ್ತವೇದಾಂತಪ್ರವೇಶೇನ ಶ್ರೀಬೋಧಾನಂದೇಂದ್ರಸರಸ್ವತೀಶಿಷ್ಯಸಚ್ಚಿದಾನಂದೇಂದ್ರ-
ಸರಸ್ವತ್ಯಾಖ್ಯೇನ ಭಿಕ್ಷುಣಾ ಪ್ರಣೀತೇ ಶುದ್ಧಶಾಂಕರಪ್ರಕ್ರಿಯಾಭಾಸ್ಕರಾಭಿದೇ ಪ್ರಕರಣೇ
ಶಾಂಕರವೇದಾಂತಮರ್ಯಾದಾ ನಾಮ ತೃತೀಯಃ ಕಿರಣಃ

---

ಇದನ್ನೇ ವಿಶೇಷವಾಗಿ ವಿಸ್ತಾರವಾಗಿ ಮುಂದಿನ ಕಿರಣದಲ್ಲಿ ಪ್ರತಿಪಾದನೆ ಮಾಡಲಾಗುತ್ತದೆ ಎಂದಾದ್ದರಿಂದ ಎಲ್ಲವೂ ಮಂಗಳವು.

(ಇತಿ ತೃತೀಯಃ ಕಿರಣಃ) ಇಲ್ಲಿಗೆ ಮೂರನೆಯ ಕಿರಣವು ಮುಗಿಯಿತು.

## ೪ ಶಾಂಕರವೇದಾಂತಪ್ರಕ್ರಿಯಾಸ್ವರೂಪಮ್

೨೦. ಪ್ರಕ್ರಿಯಾಸಾರಃ - ಏವಂ ತಾವತ್ ಪೂರ್ವಾಚಾರ್ಯಾಣಾಂ ಕೇಷಾಂಚಿದ್ ವಚನೈರಾವಿಷ್ಕೃತಾಃ ಕತಿಚಿದ್ ವೇದಾಂತಮರ್ಯಾದಾಃ ಪ್ರದರ್ಶಿತಾಃ ಪೂರ್ವಸ್ಮಿನ್ ಕಿರಣೇ, ಭಗವತ್ಪೂಜ್ಯಪಾದಾನುಸೃತಸಂಪ್ರದಾಯವಿಶೇಷ-ಸಂಸ್ತವಾರ್ಥಮ್ | ಅಥೇದಾನೀಂ ತತ್ಸಂಪ್ರದಾಯಾಭಿಮತವೇದಾಂತಪ್ರಕ್ರಿಯಾಸ್ವರೂಪಂ ನಿರ್ಧಾರ-ಣೀಯಮ್ | ತತ್ರ ನಿತ್ಯಶುದ್ಧೇ ಏವಾದ್ವಿತೀಯಾತ್ಮನಿ ಪ್ರಮಾತೃತ್ವಾದಿಲಕ್ಷಣಂ ದ್ವೈತಮವಿದ್ಯಯೈವಾಧ್ಯಾರೋಪಿತಂ ದೇಹೇಂದ್ರಿಯಾದಿಷ್ವಹಂಮಮಾಭಿಮಾನ-ಲಕ್ಷಣಯಾ ಇತ್ಯತಃ ತದಪನಯನೇನ ವಸ್ತುತತ್ತ್ವಜಿಜ್ಞಾಪಯಿಷಯಾ ವೇದಾಂತಾಃ ಪ್ರವೃತ್ತಾಃ ಸ್ವತಃಸಿದ್ಧಾತ್ಮನಿ ತು ತೇ ಕೇವಲಮತದ್ಧರ್ಮನಿವರ್ತಕತ್ವಾತ್ ಪ್ರಮಾಣ-ಮಿತ್ಯುಪಚರ್ಯಂತೇ - ಇತ್ಯುಕ್ತಮ್ | ತತ್ರ ಕಯಾ ಪ್ರಕ್ರಿಯಯಾ ತೇ ಆತ್ಮನ್ಯಧ್ಯಾರೋಪಿತಾನ್ ಅತದ್ಧರ್ಮಾನ್ ನಿವರ್ತಯಂತೀತಿ ? ಅತ್ರೋದಾಹೃತಂ ಗೀತಾಭಾಷ್ಯೇ -

---

## ೪) ಶಾಂಕರ ವೇದಾಂತ ಪ್ರಕ್ರಿಯಾ ಸ್ವರೂಪವು

೨೦) ಪ್ರಕ್ರಿಯೆಯ ಸಾರವು – ಹೀಗೆ ಹಿಂದಿನ ಕೆಲವು ಆಚಾರ್ಯರು ತೋರಿಸಿದ್ದಾದ ಕೆಲವು ವೇದಾನ್ತಗಳ ಮರ್ಯಾದೆಯನ್ನು ಹಿಂದಿನ ಕಿರಣದಲ್ಲಿ ತೋರಿಸಿದ್ದಾಯಿತು. ಇದನ್ನು ಭಗವತ್ಪಾದರು ಅನುಸರಿಸಿದ್ದಾದ ಸಂಪ್ರದಾಯದ ವಿಶೇಷವನ್ನು ಹೊಗಳುವುದಕ್ಕಾಗಿ ಹೇಳಿದ್ದು. ಈಗ ಆ ಸಂಪ್ರದಾಯಕ್ಕೆ ಒಪ್ಪಿಗೆಯಾದ ವೇದಾನ್ತಪ್ರಕ್ರಿಯಾಸ್ವರೂಪವನ್ನು ನಿರ್ಧರಿಸಬೇಕಾಗಿದೆ. ನಿತ್ಯಶುದ್ಧನಾದ ಅದ್ವಿತೀಯಾತ್ಮನಲ್ಲಿ ಪ್ರಮಾತೃತ್ವಾದಿರೂಪವಾದ ದ್ವೈತವು ಅವಿದ್ಯೆಯಿಂದ ಅಧ್ಯಾರೋಪಿತವಾಗಿದೆ. ಅದು ದೇಹೇಂದ್ರಿಯಾದಿಗಳಲ್ಲಿ "ನಾನು ನನ್ನದು" ಎಂಬೀರೂಪದ್ದಾಗಿದೆ. ಆದ್ದರಿಂದ ಅದನ್ನು ಕಳೆಯುವುದರ ಮೂಲಕ ವಸ್ತುತತ್ತ್ವವನ್ನು ತಿಳಿಸಿಕೊಡಬೇಕೆಂಬ ಇಚ್ಛೆಯಿಂದ ವೇದಾನ್ತಗಳು ಹೊರಟಿವೆ. ಸ್ವತಃಸಿದ್ಧನಾದ ಆತ್ಮನ ವಿಷಯದಲ್ಲಿ ಅವು ಬರೀ ಅದಲ್ಲದ್ದರ ಧರ್ಮವನ್ನು ಕಳೆದುಹಾಕುವುದಾದ್ದರಿಂದ ಪ್ರಮಾಣವೆಂದು ಉಪಚಾರಕ್ಕಾಗಿ ಹೇಳಲಾಗುತ್ತದೆ ಎಂಬುದನ್ನು ಹೇಳಿದ್ದಾಯಿತು. ಅಲ್ಲಿ ಯಾವ ಪ್ರಕ್ರಿಯೆಯಿಂದ ಆ ವೇದಾನ್ತಗಳು ಆತ್ಮನಲ್ಲಿ ಹುಟ್ಟಿಹಾಕಿದ್ದಾದ ಆತ್ಮನದಲ್ಲದ ಧರ್ಮಗಳನ್ನು ತೆಗೆದುಹಾಕುತ್ತವೆ? ಎಂದರೆ, ಈ ವಿಷಯದಲ್ಲಿ ಗೀತಾಭಾಷ್ಯದಲ್ಲಿ (ಒಂದು

(೧) ತಥಾ ಹಿ ಸಂಪ್ರದಾಯವಿದಾಂ ವಚನಮ್ "ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಂಚಂ ಪ್ರಪಂಚ್ಯತೇ" ಇತಿ || ಗೀ. ೧೩-೧೩.

ಅತ್ರಾಯಂ ಪ್ರಕ್ರಿಯಾಸಾರಃ - (೧) ಶುದ್ಧಬ್ರಹ್ಮಾತ್ಮವಸ್ತುನಃ ನಿರ್ವಿಶೇಷತ್ವಸ್ವಾಭಾವ್ಯಂ ಬೋಧಯಿತುಂ ಸ್ಥೂಲಬುದ್ಧಿಭಿರಧ್ಯಾರೋಪ್ಯಮಾಣಾನಾಂ ಸರ್ವೇಷಾಂ ವಿಶೇಷಾಣಾಂ ಪ್ರತಿಷೇಧ್ಯತ್ವೇನೈವ ನಿರ್ದೇಶಃ ಕ್ರಿಯತೇ "ಅಸ್ಥೂಲಮನಣ್ವಹ್ರಸ್ವಮದೀರ್ಘಮ-ಲೋಹಿತಮಸ್ನೇಹಮಚ್ಛಾಯಮತಮೋಽವಾಯ್ವನಾಕಾಶಮಸಂಗಮರಸಮಗಂಧಮ-ಚಕ್ಷುಷ್ಕಮಶ್ರೋತ್ರಮವಾಗಮನೋಽತೇಜಸ್ಕಮಪ್ರಾಣಮಮುಖಮಮಾತ್ರಮ-ನಂತರಮಬಾಹ್ಯಂ ನ ತದಶ್ನಾತಿ ಕಿಂಚನ ನ ತದಶ್ನಾತಿ ಕಶ್ಚನ" (ಬೃ ೩-೮-೮) ಇತ್ಯಾದಿಭಿಃ ಶ್ರುತಿಭಿಃ | ಏವಂ ಸರ್ವಧರ್ಮಪ್ರತಿಷೇಧಾತ್ ಶೂನ್ಯಮೇವ ತತ್ ಸ್ಯಾದಿತ್ಯಾಶಂಕಾ ಮಾ ಭೂದಿತಿ ತಸ್ಯಾಸತ್ತ್ವಬುದ್ಧಿನಿರಾಸಾರ್ಥಮ್ ಉಪಾಧಿಕೃತಂ ಮಿಥ್ಯಾವಿಶೇಷಮಪಿ ತದ್ಧರ್ಮವತ್ ಪರಿಕಲ್ಪ್ಯ ಸಮುಪದೇಶಃ | ತದನು ಜಿಜ್ಞಾಸುಪ್ರತಿಬೋಧನಾರ್ಥಮೇವಂ ಪರಿಕಲ್ಪಿತಸ್ಯ ವಸ್ತುಧರ್ಮತ್ವಮೇವೇತಿ

---

ವಾಕ್ಯವು) ಉದಾಹೃತವಾಗಿದೆ.

(೧) ಹಾಗೆಯೇ ಅಲ್ಲವೇ? ಸಂಪ್ರದಾಯವನ್ನು ಬಲ್ಲವರ ಉಪದೇಶವು? "ಅಧ್ಯಾರೋಪಾಪವಾದದಿಂದ ನಿಷ್ಪ್ರಪಂಚವಾದಬ್ರಹ್ಮವನ್ನು ತಿಳಿಸಿಕೊಡ-ಲಾಗುತ್ತದೆ". ಇಲ್ಲಿ ಇದು ಪ್ರಕ್ರಿಯೆಯ ಸಾರವು (೧) ಶುದ್ಧ ಬ್ರಹ್ಮಾತ್ಮವಸ್ತುವಿಗೆ ನಿರ್ವಿಶೇಷವಾದ ವಸ್ತುಸ್ವಭಾವವಿದೆ ಎಂಬುದನ್ನು ತಿಳಿಸಿಕೊಡಲು ಸ್ಥೂಲಬುದ್ಧಿಯುಳ್ಳವರು ಹುಟ್ಟುಹಾಕಿದ್ದಾದ ಎಲ್ಲಾ ವಿಶೇಷಗಳನ್ನೂ ಅಲ್ಲಗಳೆಯುವುದರ ಮೂಲಕವಾಗಿಯೇ ನಿರ್ದೇಶವನ್ನು ಮಾಡಲಾಗುತ್ತದೆ. ಅಸ್ಥೂಲಮನಣ್ವಹ್ರಸ್ವಂ ... ಕಶ್ಚನ (ಬೃ ೩-೮-೮) ಈ ರೀತಿಯ ಶ್ರುತಿಯಿಂದ ತಿಳಿಸಿದೆ. ಹೀಗೆ ಎಲ್ಲಾ ಧರ್ಮವನ್ನೂ ಅಲ್ಲಗಳೆದಿರುವುದರಿಂದ ಅದು ಶೂನ್ಯವೇ ಆಗಿರಬಹುದೆಂಬ ಸಂದೇಹವು ಯಾರಿಗೂ ಉಂಟಾಗದೇ ಇರಲೆಂದು ಅದು ಅಸತ್ತೆಂಬ ಬುದ್ಧಿಯನ್ನು ತೆಗೆದುಹಾಕುವುದಕ್ಕಾಗಿಯೂ, ಉಪಾಧಿಯಿಂದಾದ ಸುಳ್ಳಾದ ವಿಶೇಷವನ್ನು ಸಹ ಅದರದ್ದೇ ಧರ್ಮವೋ ಎಂಬಂತೆ ಒಪ್ಪಿಕೊಂಡು ಉಪದೇಶಿಸಿರುತ್ತದೆ. ಅನಂತರ ಜಿಜ್ಞಾಸುವಿಗೆ (ತತ್ತ್ವವನ್ನು) ತಿಳಿಸಿಕೊಡುವುದಕ್ಕಾಗಿ ಕಲ್ಪಿಸಿಕೊಂಡದ್ದು ನಿಜವಾಗಿ ಆ ವಸ್ತುವಿನ ಧರ್ಮವೇ ಆಗಿದೆಯೋ ಎಂಬ ಸಂದೇಹವನ್ನು ತೆಗೆದುಹಾಕುವುದಕ್ಕಾಗಿ ಉಪದೇಶದ

ಶಂಕಾನಿರಾಸಾರ್ಥಮ್ ಉಪದೇಶಪರಿಸಮಾಪ್ತೌ ತಸ್ಯಾಪ್ಯಪವಾದಃ - ಇತಿ ||

೨೧. **ನಿಷ್ಪ್ರಪಂಚೇ ಪ್ರಪಂಚಕಲ್ಪನಮುಪದೇಶಾರ್ಥಮೇವ, ನ ತು ಪ್ರಪಂಚೋ ವಸ್ತುಸನ್** - ತತ್ರ ಯದಜ್ಞೈರ್ವಿಕಲ್ಪ್ಯತೇ ವಿಶೇಷಃ ಸ್ವೇ ಆತ್ಮನಿ, ಯದಪಿ ಶ್ರುತಿಭಿಃ ಪರಿಕಲ್ಪ್ಯತೇ ಉಪದೇಶಾರ್ಥಮ್, ತದೇತದುಭಯಮಪಿ ಉಪಾಯಮಾತ್ರತ್ವೇನ ವೇದಾಂತಿಭಿಃ ಪರಾಮೃಶ್ಯತೇ, ನ ತು ವಸ್ತುಸದಿತಿ ಕೃತ್ವಾ | ಇತ್ಥಂ ಚ ಜಿಜ್ಞಾಸೂನಾಂ ಜಿಜ್ಞಾಸುತ್ವಮ್, ತೇಷಾಮಜ್ಞಾನಮ್, ಶಾಸ್ತ್ರಾಚಾರ್ಯೋಪದೇಶಜನಿತಜ್ಞಾನೇನ ತನ್ನಾಶಃ, ತತಶ್ಚ ಸಪ್ರಪಂಚತ್ವನಿವೃತ್ತೌ ಆತ್ಮನೋ ನಿಷ್ಪ್ರಪಂಚತ್ವೇನಾವಸ್ಥಾನಮ್ - ಇತ್ಯೇತತ್ ಸರ್ವಮಪಿ ಅಪರಮಾರ್ಥಮೇವ ಸತ್ ಉಪದೇಶೋಪಾಯತ್ವೇನ ಸಿದ್ಧವತ್ ಪರಿಕಲ್ಪ್ಯತೇ | ತದೇತತ್ ಸ್ಪಷ್ಟಮಭಿಹಿತಂ ಸಂಪ್ರದಾಯವಿದ್ಭಿಃ ಶ್ರೀಗೌಡಪಾದಾಚಾರ್ಯೈಃ -

---

ಕೊನೆಯಲ್ಲಿ ಅದನ್ನೂ ತೆಗೆದುಹಾಕಲಾಗುತ್ತದೆ.

**೨೧) ನಿಷ್ಪ್ರಪಂಚವಾದ (ಸ್ವರೂಪದಲ್ಲಿ) ಪ್ರಪಂಚವನ್ನು ಕಲ್ಪಿಸಿರುವುದು ಉಪದೇಶಕ್ಕಾಗಿಯೇ ಹೊರತು ಪ್ರಪಂಚವು ನಿಜವಾಗಿರತಕ್ಕದ್ದಲ್ಲ.** ಅಜ್ಞರಾದ ಜನರು ತಮ್ಮ ಆತ್ಮಸ್ವರೂಪದಲ್ಲಿ ಏನೇನು ವಿಶೇಷವನ್ನು ವಿಕಲ್ಪಿಸುತ್ತಾರೋ, ಹಾಗೆಯೇ ಶ್ರುತಿಯೂ ಉಪದೇಶಕ್ಕಾಗಿ (ಏನೇನನ್ನು) ಕಲ್ಪಿಸಿಕೊಂಡಿದೆಯೋ ಅವೆರಡನ್ನೂ ವೇದಾನ್ತಿಗಳು (ತಿಳಿಸಿಕೊಡುವುದಕ್ಕೆ) ಉಪಾಯಮಾತ್ರವಾಗಿ ಪರಾಮರ್ಶಿಸುತ್ತಾರೆಯೆ ಹೊರತು ನಿಜವಾಗಿದೆ ಎಂದಿಟ್ಟುಕೊಂಡು ಹೇಳುವುದಿಲ್ಲ. ಹೀಗೆಯೇ ಜಿಜ್ಞಾಸುಗಳ ಜಿಜ್ಞಾಸುತ್ವ, ಅವರ ಅಜ್ಞಾನ, ಅದು ಶಾಸ್ತ್ರಾಚಾರ್ಯೋಪದೇಶದಿಂದುಂಟಾದ ಜ್ಞಾನದಿಂದ ನಾಶವಾಗುತ್ತದೆ ಎಂಬ ವಿಚಾರವೂ, ಆಮೇಲೆ ಸಪ್ರಪಂಚತ್ವವು ತೊಲಗಲಾಗಿ ಆತ್ಮನು ನಿಷ್ಪ್ರಂಚನಾಗಿದ್ದುಕೊಂಡಿರುತ್ತಾನೆ ಎಂಬ ಈ ಎಲ್ಲಾ ವಿಚಾರವೂ ನಿಜವಾಗಿರದೇ ಕೇವಲ ಉಪದೇಶಮಾಡುವುದಕ್ಕೆ ಉಪಾಯವಾಗಿ ಸಿದ್ಧವಾಗಿರುವಂತೆ ಇಟ್ಟುಕೊಂಡು ಉಪಕಲ್ಪಿಸಿರುತ್ತದೆ. ಆ ಇದನ್ನು ಸಂಪ್ರದಾಯವನ್ನು ಬಲ್ಲವರಾದ ಶ್ರೀ ಗೌಡಾಪಾದಾಚಾರ್ಯರು ಸ್ಪಷ್ಟವಾಗಿ ಹೇಳಿರುತ್ತಾರೆ.

ಅನ್ಯಥಾ ಗೃಹ್ಣತಃ ಸ್ವಪ್ನೋ ನಿದ್ರಾ ತತ್ತ್ವಮಜಾನತಃ |
ವಿಪರ್ಯಾಸೇ ತಯೋಃ ಕ್ಷೀಣೇ ತುರೀಯಂ ಪದಮಶ್ನುತೇ || ಗೌ.ಕಾ. ೧-೧೫.

ಅನಾದಿಮಾಯಯಾ ಸುಪ್ತೋ ಯದಾ ಜೀವಃ ಪ್ರಬುಧ್ಯತೇ |
ಅಜಮನಿದ್ರಮಸ್ವಪ್ನಮದ್ವೈತಂ ಬುಧ್ಯತೇ ತದಾ || ಗೌ.ಕಾ. ೧-೧೬.

ಪ್ರಪಂಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ |
ಮಾಯಾಮಾತ್ರಮಿದಂ ದ್ವೈತಮದ್ವೈತಂ ಪರಮಾರ್ಥತಃ || ಗೌ.ಕಾ. ೧-೧೭.

ವಿಕಲ್ಪೋ ವಿನಿವರ್ತೇತ ಕಲ್ಪಿತೋ ಯದಿ ಕೇನಚಿತ್ |
ಉಪದೇಶಾದಯಂ ವಾದೋ ಜ್ಞಾತೇ ದ್ವೈತಂ ನ ವಿದ್ಯತೇ || ಗೌ.ಕಾ. ೧-೧೮.

ಇತಿ | ಅತ್ರ (೧) ಸ್ವಪ್ನಜಾಗರಿತೇ ಸಿದ್ಧವತ್ಕೃತ್ಯ ತತ್ರಾನ್ಯಥಾಗ್ರಹಣಲಕ್ಷಣಸ್ವಪ್ನತ್ವಮ್ ಅಧ್ಯಾರೋಪಿತಮ್, ಜಾಗ್ರತ್ಸ್ವಪ್ನಸುಷುಪ್ತಿಲಕ್ಷಣಾವಸ್ಥಾತ್ರಯಂ ಸಿದ್ಧವತ್ಕೃತ್ಯ ತಿಸೃಷ್ವಪಿ ಪರಮಾರ್ಥಾಜ್ಞಾನಲಕ್ಷಣನಿದ್ರಾತ್ವಮಧ್ಯಾರೋಪಿತಮ್ | ತತ್ರ ಚ

---

"ತತ್ತ್ವವನ್ನು ತಪ್ಪಾಗಿ ಅರಿಯುವವನಿಗೆ (ದ್ವೈತವನ್ನು ಕಾಣುವುದೆಂಬ) ಸ್ವಪ್ನವೂ ತತ್ತ್ವವನ್ನು ಅರಿಯದವನಿಗೆ ನಿದ್ರೆ ಎಂಬುದು (ಆಗುತ್ತಿರುತ್ತದೆ). ಈ ಎರಡು ಪ್ರಕಾರವಾದ ತಪ್ಪುತಿಳಿವಳಿಕೆ ಹೋಗಲಾಗಿ ತುರೀಯಸ್ಥಾನವನ್ನು ಪಡೆಯುತ್ತಾನೆ" (ಗೌ.ಕಾ. ೧-೧೫), "ಅನಾದಿಮಾಯೆಯಿಂದ ಮಲಗಿದವನಾದ ಜೀವನು ಯಾವಾಗ ಎಚ್ಚರಗೊಳ್ಳುತ್ತಾನೋ ಆಗ ಹುಟ್ಟಿಲ್ಲದ ನಿದ್ರೆಇಲ್ಲದ ಸ್ವಪ್ನವಿಲ್ಲದ ಅದ್ವೈತವನ್ನು ಕಂಡುಕೊಳ್ಳುತ್ತಾನೆ" (೧-೧೬), "ಪ್ರಪಂಚವೇನಾದರೂ ಇದ್ದದ್ದಾಗಿದ್ದರೆ ಅದು ಹೋಗಬೇಕಾದೀತು ! ಇದರಲ್ಲಿ ಸಂಶಯವಿಲ್ಲ ಆದರೆ ಈ ಎಲ್ಲಾ ದ್ವೈತವೂ ಮಾಯಾಮಾತ್ರವಾಗಿದೆ. ಅದ್ವೈತವೇ ಪರಮಾರ್ಥವಾದದ್ದು. (೧-೧೭) (ಶಿಷ್ಯಾದಿ) ವಿಕಲ್ಪವನ್ನು ಯಾರಾದರೂ ಕಲ್ಪಿಸಿದ್ದಾದರೆ ಅದು ತೊಲಗಬೇಕಾಗುತ್ತದೆ. (ಈ ಶಿಷ್ಯಾದಿಗಳ ವಿಭಾಗವನ್ನು) ಉಪದೇಶವಷ್ಟಕ್ಕೆ ಇಟ್ಟುಕೊಂಡಿರುತ್ತದೆ. (ತತ್ತ್ವವು) ಗೊತ್ತಾದ ಮೇಲೆ ದ್ವೈತವಿರುವುದಿಲ್ಲ. (೧-೧೮ ಗೌ.ಕಾ) ಎಂದಿದ್ದಾರೆ.

ಈ ಕಾರಿಕೆಯಲ್ಲಿ ಎಚ್ಚರ ಕನಸುಗಳನ್ನು ಸಿದ್ಧವಾಗಿರುವಂತೆ ಇಟ್ಟುಕೊಂಡು ಅವುಗಳ ವಿಷಯದಲ್ಲಿ ಅನ್ಯಥಾಗ್ರಹಣರೂಪವಾದ ಸ್ವಪ್ನತ್ವವನ್ನು

ಜಾಗ್ರತ್ಸ್ವಪ್ನಯೋರನ್ಯಥಾಗ್ರಹಣಲಕ್ಷಣೋ ವಿಪರ್ಯಾಸವಿಶೇಷಃ | ಅಗ್ರಹಣಲಕ್ಷಣಾ ನಿದ್ರಾ ಯದ್ಯಪಿ ತತ್ರಾಪಿ ವಿದ್ಯತ ಏವ, ತಥಾಪಿ ಕೇವಲನಿದ್ರಾಧ್ಯಾರೋಪಃ ಸುಷುಪ್ತಾವೇವೇತಿ ಸ ಏವಾಸಾಧಾರಣೋ ವಿಪರ್ಯಾಸಸ್ತತ್ರ - ಇತಿ ದ್ವೇಧಾ ರಾಶೀಕರಣಮವಸ್ಥಾನಾಮ್ | ಏವಂ ಚಾಗ್ರಹಣಲಕ್ಷಣೋ ವಿಪರ್ಯಾಸಃ, ಅನ್ಯಥಾಗ್ರಹಣಲಕ್ಷಣೋ ವಿಪರ್ಯಾಸಶ್ಚ ಯದಾ ತತ್ತ್ವಜ್ಞಾನೇನ ಬಾಧ್ಯೇತೇ ತದಾ "ತುರೀಯೋಽಹಮ್" ಇತಿ ನಿಶ್ಚಯೋ ಭವತೀತಿ ಪ್ರಥಮಶ್ಲೋಕಾರ್ಥಃ ||

ತದೇವಂ ತತ್ತ್ವಾಜ್ಞಾನತತ್ತ್ವಾನ್ಯಥಾಜ್ಞಾನಲಕ್ಷಣೌ ವಿಪರ್ಯಾಸೌ ಉಪದೇಶಾರ್ಥಂ ಪ್ರಕಲ್ಪಿತೌ ಪ್ರಥಮಶ್ಲೋಕೇನ | ಅಥ ದ್ವಿತೀಯೇನ ತಾವಪವದತಿ - ಅನಾದಿಮಾಯಯೇತಿ | ಶ್ಲೋಕಾಭಿಪ್ರಾಯಸ್ತು - (೨) ಅಗ್ರಹಣಲಕ್ಷಣನಿದ್ರಾ ವಾ ಅನ್ಯಥಾಗ್ರಹಣಲಕ್ಷಣಸ್ಸ್ವಪ್ನೋ ವಾ ನಾಸ್ತ್ಯೇವಾತ್ಮನಿ ವಸ್ತುತಃ | ತದುಭಯಮಪಿ

---

ಆಧ್ಯಾರೋಪಿಸಿದೆ. (ಈ) ಎಚ್ಚರ ಕನಸು ನಿದ್ರಾರೂಪವಾದ ಅವಸ್ಥಾತ್ರಯವನ್ನು ಸಿದ್ಧವಾಗಿರುವಂತೆ ಇಟ್ಟುಕೊಂಡು ಮೂರರಲ್ಲೂ ಪರಮಾರ್ಥವನ್ನು ತಿಳಿಯದೇ ಇರುವುದೆಂಬ ರೂಪವಾದ ನಿದ್ರಾತ್ವವನ್ನು ಅಧ್ಯಾರೋಪಿಸಿದೆ. ಅವುಗಳಲ್ಲಿ ಎಚ್ಚರಕನಸುಗಳೆರಡರಲ್ಲಿ ಅನ್ಯಥಾಗ್ರಹಣರೂಪವಾದ ವಿಪರ್ಯಾಸವಿದೆ ಎಂಬುದು ವಿಶೇಷವು. ಅವುಗಳಲ್ಲೂ ಅಗ್ರಹಣರೂಪವಾದ ನಿದ್ರೆ ಎಂಬುದು ಇದ್ದೇ ಇದೆಯಾದರೂ ಕೇವಲ (ತತ್ತ್ವವನ್ನರಿಯದಿರುವುದೆಂಬ) ನಿದ್ರಾತ್ವದ ಅಧ್ಯಾರೋಪವು ಸುಷುಪ್ತಿಯು ವಿಷಯಕ್ಕೇ ಅಸಾಧಾರಣರೂಪವಾದ ವಿಪರ್ಯಾಸವೆಂದು ಅವಸ್ಥೆಗಳನ್ನು ಎರಡೇ ವಿಭಾಗ ಮಾಡಿರುತ್ತದೆ. ಹೀಗೆ ಅಗ್ರಹಣರೂಪವಾದ ವಿಪರ್ಯಾಸವೂ ಅನ್ಯಥಾಗ್ರಹಣರೂಪವಾದ ವಿಪರ್ಯಾಸವೂ ಯಾವಾಗ ತತ್ತ್ವಜ್ಞಾನದಿಂದ ಬಾಧಿತವಾಗುತ್ತದೋ ಆಗ "ನಾನು ತುರೀಯಸ್ವರೂಪನು" ಎಂಬ ನಿಶ್ಚಯುವಾಗುತ್ತದೆ ಎಂಬುದು ಮೊದಲನೆಯ ಶ್ಲೋಕಾರ್ಥವು.

ಹೀಗೆ ಮೊದಲನೆಯ ಶ್ಲೋಕದಲ್ಲಿ ತತ್ತ್ವದ ಅಜ್ಞಾನ, ತತ್ತ್ವದ ಅನ್ಯಥಾಜ್ಞಾನರೂಪವಾದ ವಿಪರ್ಯಾಸಗಳನ್ನು ಉಪದೇಶಕ್ಕಾಗಿ ಕಲ್ಪಿಸಿರುತ್ತದೆ. ಇನ್ನು ಎರಡನೆಯ ಶ್ಲೋಕವಾದ "ಅನಾದಿಮಾಯಯಾ" ಎಂಬುದರಿಂದ ಅಪವಾದವನ್ನು ಮಾಡಲಾಗುತ್ತದೆ. ಆ ಶ್ಲೋಕದ ಅಭಿಪ್ರಾಯವಾದರೋ ಇದು, ಆತ್ಮನಲ್ಲಿ ಅಗ್ರಹಣರೂಪವಾದ ನಿದ್ರೆಯಾಗಲೀ ಅನ್ಯಥಾಗ್ರಹಣ-

ಸ್ವಪ್ನವದ್ ವಿಕಲ್ಪಿತಮೇವ | ಅನಾದಿಮಾಯಯೈವ ನಿದ್ರಾಸ್ವಪ್ನೌ ಯಥೋದಿತೌ ಕಲ್ಪಿತೌ ತತ್ರ | ಯಥಾ ಸುಪ್ತಃಪ್ರಾಕೃತಜನಃ ಸ್ವಪ್ನೇ ಆತ್ಮನ್ಯವಿದ್ಯಮಾನಮೇವ ವಿಶೇಷಂ ಕಲ್ಪಯತಿ ಮಾಯಯೈವ, ಏವಂ ಮೃಷೈವಾಯಂ ಜೀವಃ ಸ್ವಾತ್ಮನಿ ಅಗ್ರಹಣಾನ್ಯಥಾ-ಗ್ರಹಣೇ ಕಲ್ಪಯತಿ ಅನಾದಿಮಾಯಾಸ್ವಾಪವಶಾತ್ | ಯದಾ ತು ಶಾಸ್ತ್ರಾಚಾರ್ಯೋಪದೇಶಾತ್ ಪರಮಾರ್ಥತತ್ತ್ವಂ ಜಾನನ್, ಏತಸ್ಮಾನ್ಮಾಯಾಸ್ವಪ್ನಾತ್ ಪ್ರತಿಬುಧ್ಯತೇ, ತದಾ "ನಾಸೀದಸ್ತಿ ಭವಿಷ್ಯತಿ ವಾ, ಅಗ್ರಹಣಲಕ್ಷಣಾ ನಿದ್ರಾ ಅನ್ಯಥಾಗ್ರಹಣಲಕ್ಷಣಃ ಸ್ವಪ್ನೋ ವಾ ಮಯ್ಯಜೇ ನಿತ್ಯನಿರವಸ್ಥೇ ಅದ್ವೈತಾತ್ಮನಿ" ಇತಿ ತುರೀಯತ್ವಂ ವಿನಿಶ್ಚಿನೋತೀತಿ ||

ಅತ್ರ "ಯದಾ ಪ್ರಬುಧ್ಯತೇ ತದಾ ಅಜಮನಿದ್ರಮ್ ಅಸ್ವಪ್ನಮ್ ಅದ್ವೈತಂ ಬುಧ್ಯತೇ" ಇತ್ಯಕ್ಷರಾರ್ಥಂ ಗೃಹೀತ್ವಾ ಅಜತ್ವಾದಯೋ ಯೇ ಆತ್ಮನೋ ಧರ್ಮಾಃ, ತೇ ಬೋಧಾದೂರ್ಧ್ವಂ ಬುಧ್ಯಂತೇ - ಇತಿ ನ ಭ್ರಮಿತವ್ಯಮ್ | ಜನ್ಮನಿದ್ರಾದಯೋ

---

ರೂಪವಾದ ಸ್ವಪ್ನವಾಗಲೀ ಇಲ್ಲವೇ ಇಲ್ಲ, ಅವೆರಡೂ ಸ್ವಪ್ನದಂತೆ ವಿಕಲ್ಪಿತ-ವಾದದ್ದೇ ಆಗಿರುತ್ತದೆ. ಮೇಲೆ ಹೇಳಿದ್ದಾದ ನಿದ್ರಾ ಸ್ವಪ್ನಗಳೆರಡೂ ಆತ್ಮನಲ್ಲಿ ಅನಾದಿಮಾಯೆಯಿಂದಲೇ ಕಲ್ಪಿಸಿದ್ದಾಗಿರುತ್ತದೆ. ಹೇಗೆ ಮಲಗಿದ ಪ್ರಾಕೃತಮನುಷ್ಯನು ಕನಸಿನಲ್ಲಿ ಆತ್ಮನಲ್ಲಿಲ್ಲದ್ದಾದ ವಿಶೇಷವನ್ನು ಸುಳ್ಳು-ಸುಳ್ಳಾಗಿಯೇ ಕಲ್ಪಿಸುತ್ತಾನೋ ಹಾಗೆಯೇ ಸುಳ್ಳುಸುಳ್ಳಾಗಿಯೇ ಈ ಜೀವನು ಅನಾದಿ ಕಾಲದ ಮಾಯಾನಿದ್ರೆಗೆ ವಶನಾಗಿ ಅಗ್ರಹಣವನ್ನೂ ಅನ್ಯಥಾಗ್ರಹಣವನ್ನೂ ಕಲ್ಪಿಸಿರುತ್ತಾನೆ. ಯಾವಾಗಲಾದರೋ ಶಾಸ್ತ್ರಾಚಾ-ರ್ಯೋಪದೇಶದಿಂದ ಪರಮಾರ್ಥತತ್ತ್ವವನ್ನು ತಿಳಿಯುತ್ತಾ ಈ ಮಾಯಾ ಸ್ವಪ್ನದಿಂದ ಎಚ್ಚರಗೊಳ್ಳುತ್ತಾನೋ ಆಗ ಅಗ್ರಹಣರೂಪವಾದ ನಿದ್ರೆಯಾಗಲೀ ಅನ್ಯಥಾಗ್ರಹಣರೂಪವಾದ ಸ್ವಪ್ನವಾಗಲೀ ನಿತ್ಯನಿರವಸ್ಥನಾದ ಅದ್ವೈತಾತ್ಮನಾದ ಅಜನಾದ ನನ್ನಲ್ಲಿ ಅಗ್ರಹಣಾ(ಅಜ್ಞಾನಾ)ದಿಗಳು ಹಿಂದೂ ಇರಲಿಲ್ಲ, ಈಗಲೂ ಇಲ್ಲ ಮುಂದೂ ಇರುವುದಿಲ್ಲವೆಂದು ತಿಳಿಯುತ್ತಾ ತುರೀಯಸ್ವರೂಪವನ್ನು ನಿಶ್ಚಯಮಾಡಿಕೊಳ್ಳುತ್ತಾನೆ. ಇಲ್ಲಿ "ಯಾವಾಗ ಎಚ್ಚರಗೊಳ್ಳುತ್ತಾನೋ (ತಿಳಿಯುತ್ತಾನೋ) ಆಗ ಹುಟ್ಟಿಲ್ಲದ ನಿದ್ರೆ ಇಲ್ಲದ ಸ್ವಪ್ನವಿಲ್ಲದ ಅದ್ವೈತವನ್ನು ತಿಳಿಯುತ್ತಾನೆಂದು "ಅಕ್ಷರಾರ್ಥವನ್ನು ಗ್ರಹಿಸಿ" ಅಜತ್ವವೇ ಮುಂತಾದ ಯಾವ ಆತ್ಮನ ಧರ್ಮವುಂಟು ಅವು ಜ್ಞಾನವಾದ ಮೇಲೆ ಗೊತ್ತಾಗುತ್ತವೆ

ನಾತ್ಮಧರ್ಮಾ ಇತಿ ಜ್ಞಾಪನೇ ಹಿ ತಾತ್ಪರ್ಯಂ ವಾಕ್ಯಸ್ಯ, ನ ತು ಮಾಯಾಸ್ವಾಪಾದಯಃ ಪ್ರಾಗ್ ವಸ್ತುಸಂತಃ ಪ್ರಬೋಧೇನ ನಿವರ್ತ್ಯಂತೇ - ಇತ್ಯತ್ರಾಪಿ | ವಕ್ಷ್ಯತೇ ಹಿ -

(ಅ) ಜನ್ಮ ಮಾಯೋಪಮಂ ತೇಷಾಂ ಸಾ ಚ ಮಾಯಾ ನ ವಿದ್ಯತೇ ||

ಕಾ. ೪-೫೮.

ಇತಿ | ತಸ್ಮಾತ್, ಮಾಯಾ ವಾ, ಮಾಯಾಸ್ವಾಪೋ ವಾ, ನಿವರ್ತ್ಯಜನ್ಮನಿದ್ರಾ-ಸ್ವಪ್ನಾದಯೋ ವಾ, ನಿವರ್ತಕಪ್ರಬೋಧೋ ವಾ ನೈವ ವಿದ್ಯಂತೇ ಪರಮಾರ್ಥದೃಷ್ಟ್ಯಾ, ಸರ್ವೋಽಪ್ಯೇಷ ಉಪದೇಶಾರ್ಥ ಏವ ವಾದಃ - ಇತಿ ಬೋಧ್ಯಮ್ | ಅತ ಏವಾಜತ್ವಾದಯೋಽಪಿ ನಿಷೇಧ್ಯಾಪೇಕ್ಷಯೈವ ಸಮುಪದಿಶ್ಯಂತ ಇತಿ ಬೋಧ್ಯಮ್ | ಯದಪಿ ವಕ್ಷ್ಯತೇ -

(ಆ) ಅಜಃ ಕಲ್ಪಿತಸಂವೃತ್ಯಾ ಪರಮಾರ್ಥೇನ ನಾಪ್ಯಜಃ || ಕಾ. ೪-೭೪.

---

ಎಂದು ಭ್ರಮಿಸಿಕೊಳ್ಳಬಾರದು. ಏಕೆಂದರೆ ವಾಕ್ಯಕ್ಕೆ ಜನ್ಮನಿದ್ರಾದಿಗಳು ಆತ್ಮನ ಧರ್ಮವಲ್ಲ ಎಂದು ತಿಳಿಸುವುದರಲ್ಲಿ ತಾತ್ಪರ್ಯವಿರುತ್ತದೆ. ಅಷ್ಟೇ ಹೊರತು ಮಾಯಾಸ್ವಾಪಾದಿಗಳು ಮುಂಚೆ ನಿಜವಾಗಿಯೇ ಇದ್ದು ಜ್ಞಾನದಿಂದ ತೊಲಗುತ್ತವೆ ಎಂದು ತಿಳಿಸುವುದರಲ್ಲೂ ವಾಕ್ಯಕ್ಕೆ ತಾತ್ಪರ್ಯವಿರುವುದಿಲ್ಲ. ಅದೇ ರೀತಿ ಮುಂದೆ ಹೇಳಿದೆ. – "ಆ ಜೀವರ ಜನ್ಮವು ಮಾಯೆಗೆ ಸಮಾನವಾದದ್ದು, ಆ ಮಾಯೆಯೂ ಸಹ ಇರುವುದಿಲ್ಲ (೪–೫೮) ಎಂದಿದೆ. ಆದ್ದರಿಂದ ಮಾಯೆಯಾಗಲೀ, ಮಾಯೆಯ ಸ್ವಾಪವಾಗಲೀ ಕಳೆಯಬೇಕಾದ ಜನ್ಮನಿದ್ರಾಸ್ವಪ್ನಗಳಾಗಲೀ, ಅವುಗಳನ್ನು ಕಳೆಯುವ ಜ್ಞಾನವಾಗಲೀ ಇವು ಯಾವುವೂ ನಿಜವಾಗಿ ಇರುವಂಥವುಗಳೇ ಅಲ್ಲ. ಇವೆಲ್ಲವೂ ಉಪದೇಶಕ್ಕಾಗಿ ಹೇಳಿದ್ದು ಎಂದು ತಿಳಿಯಬೇಕು. ಆದ್ದರಿಂದಲೇ ಅಜತ್ವಾದಿಗಳೂ ಸಹ ನಿಷೇಧಿಸಬೇಕಾದದ್ದೆಂಬುದನ್ನು ಒಪ್ಪಿಕೊಂಡೇ ಉಪದೇಶಿಸಿರುತ್ತದೆ ಎಂದು ತಿಳಿಯಬೇಕು. ಅದನ್ನೂ ಮುಂದೆ ಹೇಳಿರುತ್ತದೆ. "ಕಲ್ಪಿತಸಂವೃತಿಯಿಂದಲೇ ಅಜನೆಂಬುದೂ, ನಿಜವಾಗಿ ಅಜನೆಂಬುದೂ ಅಲ್ಲ" (ಗೌ.ಕಾ. ೪–೭೪), ಮೂರನೇಯ ಶ್ಲೋಕಾಭಿಪ್ರಾಯವಾದರೋ – ಅನ್ಯಥಾಗ್ರಹಣಕಾಲದಲ್ಲಿ ಜೀವನು ಸಪ್ರಪಂಚನಾಗಿದ್ದು ತತ್ತ್ವಜ್ಞಾನವಾದ ಮೇಲೆ ನಿಷ್ಪ್ರಪಂಚ-ನಾಗುತ್ತಾನೆಂದು ತಿಳಿಯಬಾರದು. ಏಕೆಂದರೆ ನಿಜವಾಗಿ ಪ್ರಪಂಚವೆಂಬುದು

ಇತಿ ||

ತೃತೀಯಶ್ಲೋಕಾಭಿಪ್ರಾಯಸ್ತ್ವಯಮ್ - (೩) ನೈವಂ ಮಂತವ್ಯಮ್ ಅನ್ಯಥಾಗ್ರಹಣಕಾಲೇ ಸಪ್ರಪಂಚಃ ಸನ್ ಜೀವಸ್ತತ್ತ್ವಜ್ಞಾನಾದೂರ್ಧ್ವಂ ನಿಷ್ಪ್ರಪಂಚೋ ಭವಿತಾ - ಇತಿ | ಕುತಃ ? ವಸ್ತುತಃ ಪ್ರಪಂಚಸ್ಯ ಮಾಯಾಮಾತ್ರತ್ವೇನ ಸರ್ವದಾಪ್ಯಭಾವಾತ್, ಪ್ರಪಂಚೋಪಶಮತ್ವಮೇವಾಸ್ಯ ಸ್ವಭಾವಃ: - ಇತಿ ||

ಅಥ ತುರೀಯಶ್ಲೋಕಾಭಿಪ್ರಾಯಃ - (೪) ನೈವೇತ್ಥಮಪಿ ಪ್ರತ್ಯೇತವ್ಯಮ್ ಅನ್ಯಃ ಶಿಷ್ಯಃ ಸ್ವಾನ್ಯೇನ ಶಾಸ್ತ್ರೇಣಾಚಾರ್ಯೇಣ ಚ ಪ್ರತಿಬೋಧಿತಃ, ಸ್ವಸ್ಯ ನಿಷ್ಪ್ರಪಂಚತ್ವಂ ಬುಧ್ಯತ ಇತಿ | ಯತ್ಕಾರಣಮ್, ಉಪಾಯಮಾತ್ರಮಿದಮುಪದೇಶಾರ್ಥಂ ಕಲ್ಪಿತಂ ವೇದಾಂತೇಷು ಶಾಸ್ತ್ರಂ, ಶಾಸ್ತಾ, ಶಿಷ್ಯಃ, ಅಜ್ಞಾನಮ್, ಪ್ರತಿಬೋಧಶ್ಚೇತಿ | ಜ್ಞಾತೇ ತು ಪರಮಾರ್ಥತತ್ತ್ವೇ ನೈವಾಸ್ತಿ ಶಿಷ್ಯಾದಿವಿಕಲ್ಪೋಽಪಿ ಪರಮಾರ್ಥತ ಇತಿ ನಿಶ್ಚೀಯತ ಇತಿ ||

**೨೨. ವೇದಾಂತೇಷ್ವಭ್ಯುಪಗತೋಽಧ್ಯಾರೋಪೋ ನ ತತ್ಪ್ರಾಮಾಣ್ಯವಿಹಂತಾ-** ಯಥೋಕ್ತರೀತ್ಯಾ ಆತ್ಮನ್ಯನಾತ್ಮಾಧ್ಯಾರೋಪೋ ದ್ವಿವಿಧೋ ಭವತಿ, ನೈಸರ್ಗಿಕಾ-

---

ಮಾಯಾಮಾತ್ರವಾದ್ದರಿಂದ ಯಾವಾಗಲೂ ಇರುವುದೇ ಇಲ್ಲ, (ಯಾವಾಗಲೂ) ಪ್ರಪಂಚವು ಅಡಗಿರುವುದೆಂಬುದೇ (ಈ) ಆತ್ಮನ ಸ್ವಭಾವವು.

ನಾಲ್ಕನೇ ಶ್ಲೋಕಾಭಿಪ್ರಾಯವಾದರೋ – ಒಬ್ಬ ಶಿಷ್ಯನು ತನಗಿಂತ ಬೇರೆಯಾದ ಶಾಸ್ತ್ರಾಚಾರ್ಯರಿಂದ ತಿಳಿಸಲ್ಪಟ್ಟವನಾಗಿ ತನ್ನ ನಿಷ್ಪ್ರಪಂಚತ್ವವನ್ನು ತಿಳಿಯುತ್ತಾನೆಂದೂ ತಿಳಿಯಬಾರದು. ಏಕೆಂದರೆ, ವೇದಾನ್ತಗಳಲ್ಲಿ ಶಾಸ್ತ್ರ, ಗುರು, ಶಿಷ್ಯ, ಅಜ್ಞಾನ, ಜ್ಞಾನ ಎಂಬುದೆಲ್ಲವನ್ನೂ ಉಪದೇಶಕ್ಕಾಗಿ ಉಪಾಯ–ಮಾತ್ರವಾಗಿ ಕಲ್ಪಿಸಿರುತ್ತದೆ. ಪರಮಾರ್ಥತತ್ತ್ವವು ಗೊತ್ತಾದ ಮೇಲೆ ಶಿಷ್ಯಾದಿವಿಕಲ್ಪವು ನಿಜವಾಗಿ ಇರುವುದೇ ಇಲ್ಲವೆಂದು ನಿಶ್ಚಯವಾಗುತ್ತದೆ.

**೨೨) ವೇದಾನ್ತಗಳಲ್ಲಿ ಒಪ್ಪಿರುವ ಅಧ್ಯಾರೋಪವು ಅದರ ಪ್ರಾಮಾಣ್ಯವನ್ನು ಹೊಡೆದು ಹಾಕುವುದಿಲ್ಲ.** ಮೇಲೆ ಹೇಳಿದ ರೀತಿ–ಯಿಂದ ಆತ್ಮನಲ್ಲಿ ಹುಟ್ಟುಹಾಕಿದ್ದಾದ ಅಧ್ಯಾರೋಪವು ಎರಡು ತರಹ–ವಿರುತ್ತದೆ. (ಒಂದು) ಸ್ವಾಭಾವಿಕವಾದ ಅವಿದ್ಯೆಯಿಂದಾದದ್ದು, (ಇನ್ನೊಂದು) ಶಾಸ್ತ್ರವು ಮಾಡಿದ್ದಾಗಿರುವುದು. ಅವುಗಳಲ್ಲಿ ಅವಿದ್ಯಾಕೃತವಾದ

ವಿದ್ಯಾಕೃತಃ ಶಾಸ್ತ್ರಕೃತಶ್ಚೇತಿ | ತತ್ರಾವಿದ್ಯಾಕೃತೋ ಲೌಕಿಕವ್ಯವಹಾರೋ ಮಿಥ್ಯಾಭೂತೋಽಪಿ ಸತ್ಯತ್ವಾಭಿನಿವೇಶಪೂರ್ವಕ ಇತಿ ಸಂಸಾರಾನರ್ಥಹೇತುಃ, ಶಾಸ್ತ್ರಕೃತಸ್ತು ತತ್ತ್ವೋಪದೇಶಾರ್ಥಮನೂದ್ಯಮಾನಃ ಸಂವ್ಯವಹಾರಮಾತ್ರಾಲಂಬನೋ ಜಿಜ್ಞಾಸುಜನಬುದ್ಧಿವೈಶದ್ಯಾರ್ಥಂ ಭವತೀತಿ ವಿವೇಕಃ | ಯಥಾಹುಃ ಶ್ರೀಗೌಡಪಾದಾಚಾರ್ಯಾಃ -

> (೧) ಸಂವೃತ್ಯಾ ಜಾಯತೇ ಸರ್ವಂ ಶಾಶ್ವತಂ ನಾಸ್ತಿ ತೇನ ವೈ | ಸದ್ಭಾವೇನ ಹ್ಯಜಂ
> ಸರ್ವಮುಚ್ಛೇದಸ್ತೇನ ನಾಸ್ತಿ ವೈ || ೪-೫೭

ಇತಿ | ಅತ್ರ ಸಂವೃತಿರ್ನಾಮ ಸಂವರಣಮ್, ಅವಿದ್ಯಾವಿಷಯೋ ಲೌಕಿಕೋ ವ್ಯವಹಾರಃ| ವ್ಯವಹಾರದೃಷ್ಟ್ಯಾ ಸರ್ವಮಿದಂ ಜಾಯತ ಏವ, ತೇನ ಅವಿದ್ಯಾವಿಷಯೇ ವ್ಯವಹಾರೇ ಶಾಶ್ವತಂ ನಾಮ ನ ಕಿಂಚಿದಸ್ತಿ ಸದ್ಭಾವೇನ ತು ಪರಮಾರ್ಥದೃಷ್ಟ್ಯಾ ವೀಕ್ಷ್ಯಮಾಣಂ

---

ಲೌಕಿಕವ್ಯವಹಾರವು ಸುಳ್ಳಾಗಿದ್ದರೂ ಸತ್ಯವಾಗಿದೆಯೆಂಬ ಹಠವನ್ನು ಮುಂದು ಮಾಡಿಕೊಂಡು ಆಗಿರುವುದರಿಂದ ಅದು ಸಂಸಾರವೆಂಬ ಅನರ್ಥಕ್ಕೆ ಕಾರಣವು. ಶಾಸ್ತ್ರವು ಮಾಡಿದ್ದಾದರೋ ತತ್ತ್ವವನ್ನು ಉಪದೇಶಮಾಡುವುದಕ್ಕೆ ಅನುವಾದ ಮಾಡಿಕೊಂಡದ್ದಾಗಿದ್ದು, ವ್ಯವಹಾರವಷ್ಟನ್ನೇ ಅವಲಂಬಿಸಿಕೊಂಡಿದ್ದು ಜಿಜ್ಞಾಸುಗಳ ತಿಳಿವಳಿಕೆಯನ್ನು ಶುದ್ಧಿಪಡಿಸುವುದಕ್ಕಾಗಿ (ಬಂದಿರುವುದು) ಎಂಬ ಭೇದವಿರುತ್ತದೆ. ಇದನ್ನು ಶ್ರೀಗೌಡಪಾದಾಚಾರ್ಯರು ಹೇಳಿರುತ್ತಾರೆ.

(೧) "ವ್ಯವಹಾರದೃಷ್ಟಿಯಿಂದ ಎಲ್ಲವೂ ಹುಟ್ಟುತ್ತದೆ. ಆದರಿಂದ ಶಾಶ್ವತವೇನಲ್ಲ, ಅಲ್ಲವೇ? ಪರಮಾರ್ಥದೃಷ್ಟಿಯಿಂದ ಎಲ್ಲವೂ ಅಜವೇ ಆಗಿದೆ. ಆದ್ದರಿಂದ ನಾಶವೆಂಬುದೂ ಇಲ್ಲ" (೪-೫೭). ಈ ಶ್ಲೋಕದಲ್ಲಿ "ಸಂವೃತಿ" ಎಂದರೆ ಮುಚ್ಚಿರುವುದು, ಅವಿದ್ಯೆಗೆ ಗೋಚರವಾದ ಲೌಕಿಕವಾದ ವ್ಯವಹಾರವು. ವ್ಯವಹಾರದೃಷ್ಟಿಯಿಂದ ಎಲ್ಲವೂ ಹುಟ್ಟೇಯೇ ಇರುತ್ತದೆ. ಆದ್ದರಿಂದ ಅವಿದ್ಯಾವಿಷಯುವಾದ ವ್ಯವಹಾರದಲ್ಲಿ ಶಾಶ್ವತವೆಂಬುದು ಯಾವುದೂ ಇಲ್ಲ. ಸದ್ಭಾವವಾದ ಪರಮಾರ್ಥದೃಷ್ಟಿಯಿಂದ ನೋಡಿದಾಗ-ಲಾದರೋ ಎಲ್ಲವೂ ಹುಟ್ಟಿಲ್ಲದ್ದಾದ ಆತ್ಮತತ್ತ್ವವೇ, ಆದ್ದರಿಂದ ಯಾವುದಕ್ಕೂ ನಾಶವೆಂಬುದೇ ಇಲ್ಲ ಎಂದಭಿಪ್ರಾಯವು.

(೨) "ಯಾವ (ಶಾಸ್ತ್ರಾದಿಗಳು) ಕಲ್ಪಿತಸಂವೃತಿಯಿಂದ ಇರುವವೋ ಅವು

ಸರ್ವಮಪ್ಯಜಾತ್ಮತತ್ತ್ವಮೇವ, ತೇನ ನ ಕಸ್ಯಾಪ್ಯುಚ್ಛೇದಃ - ಇತ್ಯರ್ಥಃ ||

(೨) ಯೋಽಸ್ತಿ ಕಲ್ಪಿತಸಂವೃತ್ಯಾ ಪರಮಾರ್ಥೇನ ನಾಸ್ತ್ಯಸೌ | ಪರತಂತ್ರಾಭಿ-
ಸಂವೃತ್ಯಾ ಸ್ಯಾನ್ನಾಸ್ತಿ ಪರಮಾರ್ಥತಃ || ೪-೭೩.

ಅತ್ರ ಕಲ್ಪಿತಸಂವೃತಿರ್ನಾಮ[೧] ಪರಮಾರ್ಥಪ್ರತಿಪತ್ತ್ಯುಪಾಯತ್ವೇನ ಶಾಸ್ತ್ರೇಣಾ-

೧. ಅತ್ರ ಯದ್ಯಪಿ ಮಾಧ್ಯಮಿಕಾನಾಮಪಿ ಸಂವೃತಿಃ ಪರಮಾರ್ಥಶ್ಚೇತಿ ಸತ್ಯದ್ವಯಂ ಮತಮ್ "ಬುದ್ಧೇರಗೋಚರಸ್ತತ್ತ್ವಂ ಬುದ್ಧಿಃ ಸಂವೃತಿರುಚ್ಯತೇ" (ಬೋ.ಚ.); "ವ್ಯವಹಾರಮನಾಶ್ರಿತ್ಯ ಪರಮಾರ್ಥೋ ನ ದೇಶ್ಯತೇ | ಪರಮಾರ್ಥಮನಾಗಮ್ಯ ನಿರ್ವಾಣಂ ನಾಧಿಗಮ್ಯತೇ" (ಮಾ.ಕಾ. ೧೪) ಇತಿ ಸಂವೃತಿಪರಮಾರ್ಥವಿಭಾಗಃ ಸೌಗತೈರ್ಯ ಏವ ಕಲ್ಪ್ಯತೇ, ಸ ಏವ ಗೌಡಪಾದೈರಾದೃತ ಇತಿ ಪ್ರಚ್ಛನ್ನಬೌದ್ಧಾ ಏವ ತತ್ಸಂಪ್ರದಾಯಾನುಸಾರಿಣಃ - ಇತಿ ಯಃ ಕೇಷಾಂಚಿದುದ್ಗಾರಃ, ಸ ತು ವೇದಾಂತಸೌಗತಪ್ರಕ್ರಿಯಾವೈಲಕ್ಷಣ್ಯವಿವೇಕಶೂನ್ಯತ್ವಕೃತ ಇತ್ಯುಪೇಕ್ಷ್ಯಃ | ಶ್ರೀಗೌಡಪಾದಾನಾಂ ಸಂವೃತ್ಯಾದಿಸೌಗತಪಾರಿಭಾಷಿಕಶಬ್ದಾನಾಂ ಸ್ವೀಕಾರೇ ಬೀಜಂ ವೇದಾಂತಿಸೌಗತಪ್ರಕ್ರಿಯ-ಯೋರ್ವೈಲಕ್ಷಣ್ಯಂ ಚ ಮಾಂಡೂಕ್ಯರಹಸ್ಯವಿವೃತೌ ವಿತತ್ಯ ದರ್ಶಿತಮಿತಿ ತತ ಏವಾಧಿಗಂತವ್ಯಮ್|

ಪರಮಾರ್ಥದಿಂದಿರುವುದಲ್ಲ. (ಅವು) ಬೇರೆ ಸಾಂಖ್ಯಾದಿ ಶಾಸ್ತ್ರದವರ ಒಪ್ಪಿಗೆಯಿಂದ ಇರಬಹುದು, ಪರಮಾರ್ಥವಾಗಿ ಇರುವುದಲ್ಲ". (ಗೌ.ಕಾ ೪-೭೩)

ಇಲ್ಲಿ ಕಲ್ಪಿತ ಸಂವೃತಿ[೧] ಎಂದರೆ ಪರಮಾರ್ಥವನ್ನು ತಿಳಿದುಕೊಳ್ಳು-

[ಟಿಪ್ಪಣಿ: (೧) ಬೌದ್ಧರಿಗೂ ಸಹ ಕಲ್ಪಿತವಾದದ್ದು, ನಿಜವಾದದ್ದು ಎಂದು ಎರಡು ನಿಜದ ಒಪ್ಪಿಗೆ ಇದ್ದರೂ "ಬುದ್ಧಿಗೆ ಅಗೋಚರವಾದದ್ದು, ತತ್ತ್ವವು, ಬುದ್ಧಿಯು ಸಂವೃತಿಯು, (ಬೋ.ಚ). ವ್ಯವಹಾರವನ್ನಾಶ್ರಯಿಸದೇ ಪರಮಾರ್ಥವನ್ನು ಉಪದೇಶಿಸುವುದಕ್ಕೆ ಆಗುವುದಿಲ್ಲ. ಪರಮಾರ್ಥವನ್ನು ಗೊತ್ತುಮಾಡಿಕೊಳ್ಳದೇ ಮೋಕ್ಷವೆಂಬುದನ್ನು ಹೊಂದಲಾಗುವುದಿಲ್ಲ, (ಮಾ.ಕಾ. ೧೪) ಎಂಬುದಾಗಿ ಬೌದ್ಧರು ಸಂವೃತಿ ಮತ್ತು ಪರಮಾರ್ಥವೆಂಬ ವಿಭಾಗವನ್ನು ಯಾವುದನ್ನು ಒಪ್ಪಿರುತ್ತಾರೋ ಅದನ್ನೇ ಗೌಡಪಾದರೂ ಒಪ್ಪಿರುತ್ತಾರಾದ್ದರಿಂದ ಆ ಸಂಪ್ರದಾಯವನ್ನನುಸರಿಸುವವರು, (ಇವರನ್ನು), ಪ್ರಚ್ಛನ್ನಬೌದ್ಧರೆಂದು ಕೆಲವರು ಹೇಳುತ್ತಿದ್ದಾರೆ. ಅದು ಬೌದ್ಧ ಮತ್ತು ವೇದಾಂತ ಪ್ರಕ್ರಿಯಗಳ ವ್ಯತ್ಯಾಸವನ್ನರಿಯದ್ದರಿಂದಾದದ್ದು ಎಂದು ತಿಳಿದು ಅದನ್ನು

ಚಾರ್ಯೇಣ ವಾ ಅಭ್ಯುಪಗಮ್ಯಮಾನೋ ವ್ಯವಹಾರಃ | ಯಥಾ ಸಬಾಹ್ಯಾಭ್ಯಂತರೋ ಹ್ಯಜಃ (ಮುಂ) ಇತ್ಯಾದಿಸ್ಥಲೇ ಅಭ್ಯುಪಗಮ್ಯಮಾನಃ, ಬಾಹ್ಯಾದಿವಿಶೇಷರಹಿತೇ ಬಾಹ್ಯಾಭ್ಯಂತರತ್ವಾದಿಮತ್ತ್ವವ್ಯವಹಾರಃ | **ಪರತಂತ್ರಾಭಿಸಂವೃತಿಸ್ತು** ಸಾಂಖ್ಯ-ಕಾಣಾದಾದ್ಯಭಿಮತಪ್ರಮಾಣಪ್ರಮೇಯಸತ್ಕಾರ್ಯವಾದಪರಮಾಣುಕಾರಣವಾದಾದಿ-ವ್ಯವಹಾರಃ || ತದೇತದುಭಯಮಪಿ ಸಂವ್ಯವಹಾರಮಾತ್ರಾಲಂಬನಮಿತಿ ತತ್ತ್ವಬೋಧಾ-ಭ್ಯುಪಾಯಮಾತ್ರಮ್ - ಇತಿ ಬೋಧ್ಯಮ್ ||

ತದೇವಂ ಲೌಕಿಕವ್ಯವಹಾರೋ ವೈದಿಕವ್ಯವಹಾರಶ್ಚೇತ್ಯುಭಾವಪಿ ಯದ್ಯಪ್ಯ-ವಿದ್ಯಾಭೂಮಾವೇವ, ತಥಾಪಿ ಅಧ್ಯಾರೋಪಾಪವಾದಪ್ರಕ್ರಿಯಾಯಾಮ್ ವೇದಾಂತೇ-

---

ಇಹಾಪ್ಯುದರ್ಕೇ ಕಿರಣಾಂತರೇ ಸಮಾಲೋಚ್ಯತೇ ವೈಲಕ್ಷಣ್ಯಮಿತೀಹೋಪರಮ್ಯತೇ ||

---

ವುದಕ್ಕಾಗಿ ಉಪಾಯವಾಗಿ ಶಾಸ್ತ್ರಾಚಾರ್ಯರುಗಳಿಂದ ಒಪ್ಪಿಕೊಂಡದ್ದಾದ ವ್ಯವಹಾರವು. ಹೇಗೆಂದರೆ "ಸಬಾಹ್ಯಾಭ್ಯನ್ತರೋ ಹ್ಯಜಃ" (ಮುಂ) ಎಂಬಿವೇ ಮೊದಲಾದ ಸ್ಥಳದಲ್ಲಿರುತ್ತದೆ. ಬಾಹ್ಯಾಭ್ಯನ್ತರತ್ವಾದಿಗಳು ಇದೆ ಎಂದು ಒಪ್ಪಿಕೊಂಡ ವ್ಯವಹಾರವು, ಬಾಹ್ಯಾದಿ ವಿಶೇಷವಿಲ್ಲದ (ಬ್ರಹ್ಮದಲ್ಲಿ ಅಧ್ಯಾರೋಪಿಸಿದ್ದು) ಪರತನ್ತ್ರಾಭಿಸಂವೃತಿಯಾದರೋ (ಎಂದರೆ) ಸಾಂಖ್ಯರು ಮತ್ತು ಕಾಣಾದರೇ ಮುಂತಾದವರು ಒಪ್ಪಿಕೊಂಡ ಪ್ರಮಾಣಪ್ರಮೇಯ ಸತ್ಕಾರ್ಯವಾದ ಮತ್ತು ಪರಮಾಣುಕಾರಣವಾದವೇ ಮುಂತಾದ ವ್ಯವಹಾರವಾದರೊ ಎಂದರ್ಥ. ಇವೆರಡೂ ಕೂಡ ಸಂವ್ಯವಹಾರಮಾತ್ರವನ್ನು ಆಲಂಬಿಸಿರುವುದು ಎಂದಾದ್ದರಿಂದ ತತ್ತ್ವವನ್ನರಿಯುವುದಕ್ಕೆ ಉಪಾಯಮಾತ್ರವೆಂದು ತಿಳಿಯಬೇಕು.

---

ಉಪೇಕ್ಷಿಸಬೇಕು, (ತಾತ್ಸಾರಮಾಡಬೇಕು). ಸಂವೃತಿಯೇ ಮುಂತಾದ ಬೌದ್ಧರ ಪಾರಿಭಾಷಿಕ ಶಬ್ದಗಳನ್ನು ಗೌಡಪಾದರು ಸ್ವೀಕರಿಸಿರುವುದಕ್ಕೆ ಕಾರಣವನ್ನೂ, ವೇದಾಂತಿಗಳ ಮತ್ತು ಬೌದ್ಧರ ಪ್ರಕ್ರಿಯೆಗಳಿರುವ ವ್ಯತ್ಯಾಸವನ್ನೂ ಮಾಂಡೂಕ್ಯರಹಸ್ಯವಿವೃತಿಯಲ್ಲಿ ವಿಸ್ತಾರವಾಗಿ ತಿಳಿಸಿರುವುದರಿಂದ (ವಾಚಕರು) ಅಲ್ಲಿಂದಲೇ (ಅದನ್ನು) ತಿಳಿದುಕೊಳ್ಳಬೇಕು. ಈ ಗ್ರಂಥದಲ್ಲೂ ಸಹ ಮುಂದೆ ಮತ್ತೊಂದು ಕಿರಣದಲ್ಲಿ ವ್ಯತ್ಯಾಸವನ್ನು ಚರ್ಚಿಸುತ್ತೇವಾದ್ದರಿಂದ ಈಗ ಇಲ್ಲಿಗೆ ಇದು ಸಾಕಾಗಿದೆ].

ಷೂರರೀಕ್ರಿಯಮಾಣೋಽಧ್ಯಾರೋಪೋ ನ ಶಾಸ್ತ್ರಪ್ರಾಮಾಣ್ಯವಿಹಂತಾ ಉಪದೇಶಾರ್ಥಮೇವ ಕೇವಲಮನೂದ್ಯಮಾನತ್ವಾತ್ - ಇತಿ ಗೌಡಪಾದೈಃ ಸುಸ್ಪಷ್ಟಂ ದರ್ಶಿತಮೇವ ಶಾಂಕರಭಾಷ್ಯೇಷ್ವನುಸ್ರಿಯತ ಇತಿ ನ ವಿಸ್ಮರ್ತವ್ಯಮ್ ||

೨೩. **ಅಧ್ಯಾರೋಪಾಪವಾದೇನೈವ ಬೋಧನೇ ಹೇತುಃ** - ಸ್ವತಃ-ಸಿದ್ಧಸ್ಯಾತ್ಮನೋ ವಿಷಯತ್ವಾಭಾವಾದ್ ದುರ್ಬೋಧತ್ವಮಾಲಕ್ಷ್ಯ ವಿವಿಧಾಧ್ಯಾರೋಪಂ ಕುರ್ವಂತೀ ಶ್ರುತಿಃ, ಅಧ್ಯಾರೋಪಿತೋಪಾಯಸ್ಯ ಮಿಥ್ಯಾತ್ವಾದಗ್ರಾಹ್ಯತ್ವಮೇವ ಜ್ಞಾಪಯತ್ಯಪವಾದೇನ - ಇತೀದಮಪಿ ಪ್ರಕ್ರಿಯಾರಹಸ್ಯಂ ಸಂಪ್ರದಾಯ-ವಿದ್ಭಿರ್ಗೌಡಪಾದೈರುದ್ಘೋಷಿತಮ್ -

ಸ ಏಷ ನೇತಿನೇತೀತಿ ವ್ಯಾಖ್ಯಾತಂ ನಿಹ್ನುತೇ ಯತಃ |
ಸರ್ವಮಗ್ರಾಹ್ಯಭಾವೇನ ಹೇತುನಾಜಂ ಪ್ರಕಾಶತೇ || ಗೌ.ಕಾ. ೩-೨೬.

---

ಹೀಗೆ ಲೌಕಿಕ ವ್ಯವಹಾರ ಮತ್ತು ವೈದಿಕ ವ್ಯವಹಾರವೆಂಬುದೆರಡೂ ಅವಿದ್ಯಾಕ್ಷೇತ್ರದಲ್ಲೇ ಆದರೂ ಅಧ್ಯಾರೋಪಾಪವಾದ ಪ್ರಕ್ರಿಯೆಯಲ್ಲಿ ವೇದಾಂತಗಳಲ್ಲಿ ಒಪ್ಪಿಕೊಂಡದ್ದಾದ ಅಧ್ಯಾರೋಪವು ಶಾಸ್ತ್ರಪ್ರಾಮಾಣ್ಯವನ್ನು ಕೆಡಿಸುವುದಿಲ್ಲ, ಕೇವಲ ಅನುವಾದವನ್ನು ಮಾಡಿಕೊಳ್ಳುತ್ತಿರುವುದರಿಂದ ಉಪದೇಶಕ್ಕಾಗಿಯೇ ಎಂಬುದನ್ನು ಗೌಡಪಾದರು ಸ್ಪಷ್ಟವಾಗಿ ತೋರಿಸಿದ್ದನ್ನೇ ಶಂಕರಭಾಷ್ಯಗಳಲ್ಲಿ ಅನುಸರಿಸಿರುತ್ತದೆ ಎಂಬುದನ್ನು ಮರೆಯಬಾರದು.

**೨೩) ಅಧ್ಯಾರೋಪಾಪವಾದ (ಕ್ರಮದಿಂದಲೇ) ತಿಳಿಸುವುದಕ್ಕೆ ಕಾರಣವು.** ಸ್ವತಃಸಿದ್ಧನಾದ ಆತ್ಮನು ವಿಷಯನಲ್ಲವಾದ್ದರಿಂದ ತಿಳಿಸುವುದಕ್ಕೆ ಕಷ್ಟವಾಗಿರುತ್ತದೆ. ಇದನ್ನರಿತ ಶ್ರುತಿಯು ನಾನಾರೀತಿಯ ಅಧ್ಯಾರೋಪವನ್ನು ಮಾಡಿರುತ್ತದೆ. (ಅನಂತರ) ಅಧ್ಯಾರೋಪ ಮಾಡಿದ್ದನ್ನು ಅಪವಾದವನ್ನು ಮಾಡುವುದರ ಮೂಲಕ "ಸುಳ್ಳಾದದ್ದಾದ್ದರಿಂದ ಹಾಗೆ ತಿಳಿಯತಕ್ಕದಲ್ಲ" ವೆಂದು ತಿಳಿಸುತ್ತದೆ. ಈ ಒಂದು ಪ್ರಕ್ರಿಯೆಯ ರಹಸ್ಯವನ್ನು ಸಂಪ್ರದಾಯವನ್ನು ಬಲ್ಲವರಾದ ಗೌಡಪಾದರು ಹೇಳಿರುತ್ತಾರೆ. ಶ್ರುತಿಯು ತಾನೇ ವ್ಯಾಖ್ಯಾನವನ್ನು ಮಾಡಿದ್ದೆಲ್ಲವನ್ನು "ಆ ಈತನು ಇದಲ್ಲ ಇದಲ್ಲ" ಎಂದು ಅಲ್ಲಗಳೆದಿರುತ್ತದೆ. (ಏಕೆಂದರೆ) (ಆ ತತ್ತ್ವವು) ಅಗ್ರಾಹ್ಯವಾಗಿದೆ ಎಂಬ ಕಾರಣದಿಂದ (ಹಾಗೆ ಹೇಳಿದೆ). (ಅನಂತರ) ಹುಟ್ಟಿಲ್ಲದ (ಬ್ರಹ್ಮವನ್ನು) ತೋರಿಸಿರುತ್ತದೆ. (ಗೌ.ಕಾ.

ಯದ್ಯದುಪಾಯತ್ವೇನ ವ್ಯಾಖ್ಯಾತಂ ತತ್ ಸರ್ವಮ್ ಅಗ್ರಾಹ್ಯಮಿತಿ ಹೇತೋರೇವ ಶ್ರುತಿಃ "ಸ ಏಷ ನೇತಿನೇತ್ಯಾತ್ಮಾ" (ಬೃ.೩-೯-೨೬, ೪-೨-೪, ೪-೪-೨೨, ೪-೫-೧೫) ಇತಿ ಪದೇ ಪದೇ ನಿಹ್ನುತೇ | ಅಜಮದ್ವಯಮಾತ್ಮತತ್ತ್ವಂ ತು ತತಃ ಸ್ವಯಮೇವ ಪ್ರಕಾಶತ ಇತಿ ಕಾರಿಕಾರ್ಥಃ ||

೨೪. **ಬ್ರಹ್ಮಣಃ ಪರಪ್ರತಿಷೇಧೈಕಗಮ್ಯತಾ ಪ್ರಸ್ಥಾನತ್ರಯಸಂಮತಾ** - ನಿರ್ವಿಶೇಷತ್ವಾದವಿಷಯತ್ವಾಚ್ಚ ಬ್ರಹ್ಮ ಅಧ್ಯಾರೋಪಿತಪರಪ್ರತಿಷೇಧೈಕಗಮ್ಯಮಿತಿ ಬಾದರಾಯಣೀಯಸೂತ್ರೇಽಪ್ಯುಕ್ತಮ್, ಉಪನಿಷತ್ಸು ಬೋಧಿತಮ್, ಗೀತಾ-ಸ್ಮೃತ್ಯುಪದಿಷ್ಟಂ ಚ ಇತಿ ಭಾಷ್ಯಕಾರೇಣ ಪ್ರಸ್ಥಾನತ್ರಯಸಂಗಾನಂ ಪ್ರದರ್ಶಿತಮ್ ||

(೧) ದರ್ಶಯತಿ ಚಾಥೋ ಅಪಿ ಸ್ಮರ್ಯತೇ || ವೇ.ಸೂ. ೩-೨-೧೭.

(೨) ಅತ ಏವ ಚೋಪಮಾ ಸೂರ್ಯಕಾದಿವತ್ || ವೇ.ಸೂ. ೩-೨-೧೮.

---

೩-೨೬) ಯಾವ ಯಾವುದನ್ನು ಉಪಾಯವಾಗಿ ವ್ಯಾಖ್ಯಾನವನ್ನು ಮಾಡಿರುತ್ತದೋ ಅದೆಲ್ಲವನ್ನೂ (ಅದು) ಅಗ್ರಾಹ್ಯವಾಗಿದೆ ಎಂಬ ಕಾರಣದಿಂದಲೇ ಶ್ರುತಿಯು "ಆ ಈತನು" "ಹೀಗಲ್ಲ ಹೀಗಲ್ಲ" ಎಂಬ ರೂಪದವನು (ಬೃ. ೩-೯-೨೬, ೪-೨-೪, ೪-೪-೨೨, ೪-೫-೧೫) ಎಂದು ಮತ್ತೆ ಮತ್ತೆ ಅಲ್ಲಗಳೆದಿದೆ. ಆಮೇಲೆ ಅಜಾದ್ವಯತತ್ತ್ವವು ತಾನೇ ತೋರಿಕೊಳ್ಳುತ್ತದೆ ಎಂಬುದು ಕಾರಿಕೆಯ ಅರ್ಥವು.

**೨೪) ಬ್ರಹ್ಮವು ಪ್ರತಿಷೇಧಮಾತ್ರದಿಂದಲೇ ತಿಳಿದುಬರುವು-ದೆಂಬುದು ಪ್ರಸ್ಥಾನತ್ರಯಕ್ಕೂ ಒಪ್ಪಿಗೆಯಾಗಿರುವುದು** - ಬ್ರಹ್ಮವು ನಿರ್ವಿಶೇಷವಾದ್ದರಿಂದಲೂ ಮತ್ತು ಅಗೋಚರವಾದ್ದರಿಂದಲೂ ಅಧ್ಯಾರೋಪಮಾಡಿದ್ದಾದ ಬೇರೆಯದರ ಪ್ರತಿಷೇಧವೊಂದರಿಂದಲೇ ತಿಳಿದುಬರುವಂಥದ್ದೆಂಬುದು ಬಾದರಾಯಣರ ಸೂತ್ರದಲ್ಲೂ ಹೇಳಿದೆ, ಉಪನಿಷತ್ತಿನಲ್ಲೂ ತಿಳಿಸಿದೆ, ಗೀತಾಸ್ಮೃತಿಯಲ್ಲೂ ಹೇಳಿದೆ ಎಂಬುದನ್ನು ಭಾಷ್ಯಕಾರರು ಮೂರು ಪ್ರಸ್ಥಾನದಲ್ಲೂ ತೋರಿಸಿರುತ್ತಾರೆ.

(೧) ದರ್ಶಯತಿ ಚಾಥೋ ಅಪಿ ಸ್ಮರ್ಯತೇ (ವೇ.ಸೂ.೩-೨-೧೭)

ಇತ್ಯತ್ರ ಭಾಷ್ಯೋದಾಹೃತಾನಿ "ಅಥಾತ ಆದೇಶೋ ನೇತಿ ನೇತಿ", "ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ", "ಯತೋ ವಾಚೋ ನಿವರ್ತಂತೇ" | ಅಪ್ರಾಪ್ಯ ಮನಸಾ ಸಹ", "ಉಪಶಾಂತೋಽಯಮಾತ್ಮಾ", "ನ ಸತ್ತನ್ನಾಸದುಚ್ಯತೇ", "ಸರ್ವಭೂತಗುಣೈರ್ಯುಕ್ತಂ ಮೈವಂ ಮಾಂ ಜ್ಞಾತುಮರ್ಹಸಿ", "ಉಪಾಧಿನಾ ಕ್ರಿಯತೇ ಭೇದರೂಪಃ", "ಏಕಧಾ ಬಹುಧಾ ಚೈವ ದೃಶ್ಯತೇ ಜಲಚಂದ್ರವತ್" - ಇತೀಮಾನಿ ವಾಕ್ಯಾನಿ ಪರಿಶೀಲನೀಯಾನಿ ||

೨೫. **ಅಧ್ಯಾರೋಪ್ಯೋಪದೇಶಃ ಸರ್ವತ್ರಾಪಿ ತದನ್ಯಪ್ರತಿಷೇಧಾರ್ಥಃ :-** ಅಧ್ಯಾರೋಪಾಪವಾದಪ್ರಕ್ರಿಯಾಪ್ರಕಾರಾಸ್ತ್ವನಂತಾಃ | ತತ್ರ ಕತಿಚಿದೇವಾವಾಂತರ-ಪ್ರಕ್ರಿಯಾವಿಶೇಷಾಸ್ತತ್ತತ್ಸಮಾಖ್ಯಯಾ ಪ್ರಸಿದ್ಧಾಃ | ತಾಸು ಕಾಶ್ಚಿದುತ್ತರಸ್ಮಿನ್ ಕಿರಣೇ ಸಮಾಲೋಚಯಿಷ್ಯಾಮಃ | ತೇ ತು ಪ್ರದರ್ಶನಾರ್ಥಾ ಏವೇತಿ ವಿಜ್ಞಾಪನಾರ್ಥಂ ತಾವತ್

---

(೨) ಅತ ಏವ ಚೋಪಮಾ ಸೂರ್ಯಕಾದಿವತ್ (ವೇ.ಸೂ.೩-೨-೧೮)

"ಶ್ರುತಿಯೂ ತಿಳಿಸುತ್ತದೆ ಸ್ಮೃತಿಯೂ ಇದೆ", ಆದ್ದರಿಂದಲೇ ಸೂರ್ಯ-ಕಾದಿಗಳಂತೆಯೇ ಎಂಬ ಉಪಮಾನವಿದೆ. (ಬ್ರ.ಸೂ) ಈ ಸ್ಥಳದಲ್ಲಿ ಭಾಷ್ಯದಲ್ಲಿ ಉದಾಹರಿಸಿರುವ ವಾಕ್ಯಗಳನ್ನು ಪರಿಶೀಲಿಸಬೇಕು ( ವಾಕ್ಯವು ಹೀಗಿದೆ ) "ಇನ್ನು ಆದ್ದರಿಂದ ಆದೇಶವು, "ಹೀಗಲ್ಲ, ಹೀಗಲ್ಲ ಎಂದು", "ಅದು ವಿದಿತಾ-ವಿದಿತಕ್ಕಿಂತ ಬೇರೆಯಾಗಿದೆ". "ಯಾವಾತನಿಂದ ಮನಸ್ಸಿನೊಡನೆ ವಾಕ್ಕು ಮುಟ್ಟದೇ ಹಿಂತಿರುಗುತ್ತದೆಯೋ" ,"ಈ ಆತ್ಮನು ಉಪಶಾಂತನಾಗಿರುವನು", "ಸತ್ತೆಂದಾಗಲೀ ಅಸತ್ತೆಂದಾಗಲೀ ಹೇಳಲ್ಪಡುವುದಿಲ್ಲ", "ನನ್ನನ್ನು ಎಲ್ಲಾ ಭೂತಗಳ ಗುಣಗಳಿಂದ ಕೂಡಿದವನೆಂದು ತಿಳಿಯುವುದಕ್ಕೆ ನೀನು ತಕ್ಕವನಲ್ಲ", "ಉಪಾಧಿಯಿಂದ ಭೇದರೂಪವಾಗಿ ತೋರುತ್ತದೆ", "ನೀರಿನಲ್ಲಿ ತೋರುವ ಚಂದ್ರನು ಒಂದು ಪ್ರಕಾರವಾಗಿಯೂ ಅನೇಕ ಪ್ರಕಾರವಾಗಿಯೂ ಕಾಣುತ್ತಾನೆ" ಎಂಬುದಾಗಿ (ವಾಕ್ಯಗಳಿವೆ).

**೨೫) ಎಲ್ಲಾ ಕಡೆಯಲ್ಲೂ ಅಧ್ಯಾರೋಪಿಸಿ ಉಪದೇಶವನ್ನು ಮಾಡುವುದು ಮತ್ತೊಂದನ್ನು ಅಲ್ಲಗಳೆಯುವುದಕ್ಕಾಗಿಯೇ.** (ಆ) ಅಧ್ಯಾರೋಪಾಪವಾದದ ಪ್ರಕ್ರಿಯಾಪ್ರಕಾರಗಳು ಅನಂತವಾಗಿವೆ. ಅವುಗಳಲ್ಲಿ

ಕಾಂಶ್ಚಿದನ್ಯಾನಪ್ಯಧ್ಯಾರೋಪಪ್ರಕಾರಾನ್ ಅಂತರ್ನೀತಾನ್ಯನಿಷೇಧಾರ್ಥಾನ್ ಅತ್ರೋದಾಹರಿಷ್ಯಾಮಃ | (೧) ಪ್ರತ್ಯಸ್ತಮಿತಸರ್ವವಿಶೇಷೇಽಪಿ ಸರ್ವಗತ-ಸರ್ವಾತ್ಮತ್ವೇನ ನಿತ್ಯಪ್ರಾಪ್ತೇಽಪಿ ಬ್ರಹ್ಮಣಿ ಆಪ್ಯತ್ವಮ್ ಶ್ರುತಿಷು ಕ್ವಚಿದಧ್ಯಾ-ರೋಪ್ಯತೇ, "ಬ್ರಹ್ಮವಿದಾಪ್ನೋತಿ ಪರಮ್" (ತೈ. ೨-೧) ಇತ್ಯಾದಿಷು | ತದಿದಂ ಜ್ಞಾನಾತಿರಿಕ್ತಸಾಧನಪ್ರಾಪ್ಯತ್ವನಿರಾಕರಣಾಯೈವ "ಆಪ್ನೋತಿ ಸ್ವಾರಾಜ್ಯಮ್" (ತೈ. ೧-೬) ಇತ್ಯಾದಿಸ್ಥಲೇ ಇವ ಗತಿಪೂರ್ವಕಪ್ರಾಪ್ಯತ್ವಂ ತ್ವಿಹ ನ ವಿವಕ್ಷಿತಮಿತಿ ಜ್ಞಾಪನಾಯ ಚ | ಏವಂ ಕ್ವಚಿಜ್ಜ್ಞೇಯತ್ವಮಧ್ಯಾರೋಪ್ಯತೇ "ಏತಜ್ಜ್ಞೇಯಂ ನಿತ್ಯಮೇವಾತ್ಮಸಂಸ್ಥಮ್" (ಶ್ವೇ. ೧-೧೨), "ನಾರಾಯಣಂ ಮಹಾಜ್ಞೇಯಮ್" (ತೈ.ನಾ. ೧೩-೨೯), "ಯೇನಾಶ್ರುತಂ ಶ್ರುತಂ ಭವತ್ಯಮತಂ ಮತಮವಿಜ್ಞಾತಂ ವಿಜ್ಞಾತಮ್" (ಛಾಂ. ೬-೧-೩) ಇತ್ಯಾದಿಸ್ಥಲೇಷು | ತತ್ತು ಜ್ಞಾನೇನಾತ್ಯಂತಮಜ್ಞಾನ-ನಾಶಃ, ಜ್ಞಾತವ್ಯಾಂತರಾಭಾವಶ್ಚ ಇತಿ ಜ್ಞಾಪನಾರ್ಥಮ್ | ಕ್ವಚಿತ್ತು ಜ್ಞಾತೃತ್ವಾಧ್ಯಾರೋ-ಪೇಣ ಜ್ಞೇಯತ್ವಂ ನಿರಸ್ಯತೇ "ವಿಜ್ಞಾತಾರಮರೇ ಕೇನ ವಿಜಾನೀಯಾತ್" (ಬೃ. ೨-

---

ಅವಾಂತರ ಪ್ರಕ್ರಿಯಾ ವಿಶೇಷವಾದ ಕೆಲವುಮಾತ್ರ ಆ ಹೆಸರಿನಿಂದ ಪ್ರಸಿದ್ಧವಾಗಿವೆ. ಅವುಗಳಲ್ಲಿ ಕೆಲವನ್ನು ಮುಂದಿನ ಕಿರಣದಲ್ಲಿ ಸಮಾಲೋಚಿಸುವೆವು. ಅವುಗಳು ಉಪಲಕ್ಷಣಕ್ಕಾಗಿಯೇ ಹೇಳಿದೆಂಬುದನ್ನು ತಿಳಿಸುವುದಕ್ಕಾಗಿ ಕೆಲವು ಬೇರೆ ಅಧ್ಯಾರೋಪದ ಪ್ರಕಾರಗಳನ್ನು ತಿಳಿಸುವೆವು. ಅವು ಮತ್ತೊಂದರ ನಿಷೇಧವನ್ನು ಮಾಡುವುದಕ್ಕೆ ಬಂದವುಗಳೆಂಬುದು ಅವುಗಳ ಒಳಾರ್ಥವು.

(೧) "ಬ್ರಹ್ಮವನ್ನು ತಿಳಿದವನು ಹೆಚ್ಚಿನದನ್ನು ಪಡೆಯುತ್ತಾನೆ" ಎಂಬುದಾಗಿರುವ ಶ್ರುತಿಯಲ್ಲಿ ಬ್ರಹ್ಮವು ಯಾವ ವಿಶೇಷವೂ ಇಲ್ಲದ್ದಾಗಿದ್ದರೂ, ಸರ್ವಗತವಾಗಿ ಸರ್ವರ ಆತ್ಮವಾಗಿದ್ದರೂ ಎಲ್ಲರೂ (ಅದನ್ನು) ಪಡೆದೇ ಆಗಿದ್ದರೂ ಅದರಲ್ಲಿ ಆಪ್ಯತ್ವವನ್ನು ಅಧ್ಯಾರೋಪಿಸಿರುತ್ತದೆ. ಇದು ಜ್ಞಾನಕ್ಕಿಂತ ಬೇರೆಯಾದ ಮತ್ತೊಂದಾದ ಸಾಧನಕ್ಕೆ ಸಿಗುವುದಿಲ್ಲವೆಂಬುದನ್ನು ತಿಳಿಸುವುದಕ್ಕೂ "ಸ್ವಾರಾಜ್ಯವನ್ನು ಪಡೆಯುತ್ತೇನೆ" ಎಂಬ ಸ್ಥಳದಲ್ಲಿ ಹೇಳಿರುವ ಹಾಗೆ ಗತಿಪೂರ್ವಕವಾಗಿ ಪಡೆಯುವುದೆಂಬುದು ಇಲ್ಲಿ ವಿವಕ್ಷಿತವಲ್ಲ-ವೆಂಬುದನ್ನು ತಿಳಿಸುವುದಕ್ಕಾಗಿಯೂ ಹೇಳಿರುತ್ತದೆ. "ಯಾವಾಗಲೂ ಆತ್ಮನೇ ಆಗಿರುವ ಈತನನ್ನೇ ತಿಳಿಯಬೇಕು" (ಶ್ವೇತ ೧–೧೨), ನಾರಾಯಣನು

೪-೧೪) ಇತ್ಯಾದಿಸ್ಥಲೇಷು ಯಥಾ | ಕ್ವಚಿತ್ಪುನಃ ಸಾಕ್ಷಿತ್ವಮಧ್ಯಾರೋಪ್ಯತೇ ಜ್ಞಾತೃತ್ವಸ್ಯಾಪ್ಯ-ಪಹ್ನವಾಯ, "ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ" (ಶ್ವೇ ೬-೧೧) ಇತ್ಯತ್ರ ಯದ್ವತ್ | ಅನ್ಯತ್ರ ಸ್ವರೂಪಮೇವ ನಿರ್ದಿಶ್ಯತೇ "ನೇತಿ ನೇತಿ" (ಬೃ. ೨-೩-೬) ಇತಿ ಸಾಕ್ಷಿತ್ವಾದೇಃ ಸರ್ವಸ್ಯಾಪಿ ವಿಶೇಷಧರ್ಮಸ್ಯ ನಿಷೇಧಾರ್ಥಮ್ | ಏವಂ ಕ್ವಚಿದ್ ವೇದಾಂತವಾಕ್ಯಗಮ್ಯತ್ವಮಧ್ಯಾರೋಪ್ಯತೇ ಪ್ರತ್ಯಕ್ಷಾದ್ಯಗಮ್ಯತ್ವಬೋಧನಾಯ, ಯಥಾ "ವೇದಾಂತವಿಜ್ಞಾನಸುನಿಶ್ಚಿತಾರ್ಥಾಃ" (ಮುಂ ೩-೨-೬) ಇತ್ಯಾದಿಸ್ಥಲೇಷು | ಕ್ವಚಿತ್ತು ಮನೋಗಮ್ಯತ್ವಮುಚ್ಯತೇ ಇಂದ್ರಿಯಾಗೋಚರತ್ವಂ ಜ್ಞಾಪಯಿತುಮ್, "ಮನಸೈವಾನುದ್ರಷ್ಟವ್ಯಂ ನೇಹ ನಾನಾಸ್ತಿ ಕಿಂಚನ" (ಬೃ. ೪-೪-೧೯) ಇತ್ಯಾದಿವಾಕ್ಯೇಷು ಯಥಾ | ಕ್ವಚಿತ್ತು ಮನೋವಾಗಗೋಚರತ್ವಮೇವೋಚ್ಯತೇ ತದ್ವ್ಯತಿರಿಕ್ತಾನುಭವಮಾತ್ರಗಮ್ಯತ್ವಬೋಧನಾರ್ಥಮ್ "ಯತೋ ವಾಚೋ

---

ಮಹಾಜ್ಞೇಯನು (ತೈ.ನಾ ೧೩-೨೯) "ಯಾವದೊಂದನ್ನು ತಿಳಿದರೆ ಕೇಳದೇ ಇದ್ದದ್ದೂ ಕೇಳಿದಂತಾಗುವುದೋ, ಮನನ ಮಾಡದೇ ಇದ್ದದ್ದೂ ತಿಳಿಯದೇ ಇದ್ದದ್ದೂ ಮನನಮಾಡಿದಂತೆಯೂ ತಿಳಿದಂತೆಯೂ ಆಗುವುದೋ" (ಛಾಂ. ೬-೧-೩) ಎಂದು ಈ ರೀತಿಯಾಗಿ ಕೆಲವು ಕಡೆಯಲ್ಲಿ ಜ್ಞೇಯತ್ವವನ್ನು ಅಧ್ಯಾರೋಪಿಸಿದೆ. ಇದನ್ನು ಹೇಳಿದ್ದಾದರೋ – ಜ್ಞಾನದಿಂದ ಅಜ್ಞಾನವು ಅತ್ಯಂತವಾಗಿ ನಾಶವಾಗುತ್ತದೆ ಎಂದು ತಿಳಿಸುವುದಕ್ಕಾಗಿಯೂ, ಮತ್ತೆ ತಿಳಿಯಬೇಕಾದದ್ದು ಬೇರೆ ಉಳಿಯುವುದಿಲ್ಲ ಎಂಬುದನ್ನು ತಿಳಿಸುವುದಕ್ಕೂ ಆಗಿದೆ. ಕೆಲವು ಕಡೆಗಳಲ್ಲಿ ಜ್ಞಾತೃತ್ವವನ್ನು ಅಧ್ಯಾರೋಪಮಾಡುವುದರ ಮೂಲಕ ಜ್ಞೇಯವಾಗಿದೆ ಎಂಬುದನ್ನು – "ವಿಜ್ಞಾತೃವಾದವನನ್ನು ಹೇಗೆ ಅರಿತಾನು"! ಎಂದು ತಿಳಿಸುತ್ತಾ ಅಲ್ಲಗಳೆದಿದೆ. ಕೆಲವು ಕಡೆಗಳಲ್ಲಿ "ಸಾಕ್ಷಿಯು ಚೇತನನು, ಕೇವಲನು ಮತ್ತು ನಿರ್ಗುಣನು" (ಶ್ವೇ. ೬–೧೧) ಎಂಬುದಾಗಿ ಸಾಕ್ಷಿತ್ವವನ್ನು ಅಧ್ಯಾರೋಪಿಸಿ ಜ್ಞಾತೃತ್ವವನ್ನು ಕೂಡ ಅಲ್ಲಗಳೆದಿರುತ್ತದೆ. ಮತ್ತೊಂದು ಕಡೆಯಲ್ಲಿ "ಹೀಗಲ್ಲ ಹೀಗಲ್ಲ" (ಬೃ ೨–೩–೬) ಎಂಬುದಾಗಿ ಹೇಳುತ್ತಾ ಸಾಕ್ಷಿತ್ವವೇ ಮುಂತಾದ ಎಲ್ಲಾ ವಿಶೇಷಧರ್ಮವನ್ನೂ ಅಲ್ಲಗಳೆಯುವುದಕ್ಕಾಗಿ (ನೇರಾಗಿ) ಸ್ವರೂಪವನ್ನೇ ನಿರ್ದೇಶ ಮಾಡಿರುತ್ತದೆ. ಇದೇ ರೀತಿ "ವೇದಾನ್ತವಿಜ್ಞಾನದಲ್ಲಿ ಸುನಿಶ್ಚಿತವಾದ ಅರ್ಥವುಳ್ಳವರಾಗಿ" (ಮುಂ. ೩–೨–೬) ಎಂಬುದಾಗಿರುವ ಸ್ಥಳದಲ್ಲಿ ಪ್ರತ್ಯಕ್ಷಾದಿ (ಪ್ರಮಾಣಗಳಿಗೆ) ತಿಳಿದುಬರುವುದಿಲ್ಲ ಎಂಬುದನ್ನು ತಿಳಿಸಿಕೊಡುವುದಕ್ಕಾಗಿ ವೇದಾನ್ತವಾಕ್ಯದಿಂದ

ನಿವರ್ತಂತೇ | ಅಪ್ರಾಪ್ಯ ಮನಸಾ ಸಹ | ಆನಂದಂ ಬ್ರಹ್ಮಣೋ ವಿದ್ವಾನ್ | ನ ಬಿಭೇತಿ ಕುತಶ್ಚನೇತಿ"(ತೈ. ೨-೯) ಇತ್ಯಾದಿಸ್ಥಲೇಷು ಯಥಾ | ಏವಮನ್ಯತ್ರಾಪ್ಯೂಹ್ಯಂ ಸುಧೀಭಿಃ ||

ತತ್ರೈಕೈಕೇನಾಧ್ಯಾರೋಪೇಣ ಏಕೈಕಸ್ಯೈವ ವಿಕಲ್ಪಸ್ಯ ನಿರಾಸೋ ವಿವಕ್ಷ್ಯತ ಇತ್ಯಪಿ ನ ನಿಯಮಃ | ತದ್ಯಥಾ - ಆತ್ಮನಿ ಜ್ಞೇಯತ್ವಾಧ್ಯಾರೋಪೇಣ ನ ಕೇವಲಂ ತದನ್ಯಸ್ಯಾಜ್ಞೇಯತ್ವಮ್, ಕಿಂ ತು ತಜ್ಜ್ಞಾನೇನ ಸರ್ವಜ್ಞತ್ವಮ್, ಅಜ್ಞಾನಸ್ಯಾತ್ಯಂತಿಕ-ನಾಶಶ್ಚ - ಇತ್ಯಪಿ ಗಮ್ಯತೇ | ಆತ್ಮಾಜ್ಞಾನಮೇವ ದ್ವೈತಪ್ರತಿಭಾಸಹೇತುಃ, ಆತ್ಮಜ್ಞಾನೇ ಸತಿ ಪುನರ್ನ ಜ್ಞಾತೃಜ್ಞಾನಜ್ಞೇಯವಿಭಾಗಃ - ಇತ್ಯಾದ್ಯಪಿ ತತೋ ಗಮ್ಯತ ಏವ | ತದೇವಮ್ ಆತ್ಮಾತಿರಿಕ್ತಮಪಿ ಜ್ಞೇಯಮಸ್ತೀತಿ ವಿಕಲ್ಪಃ, ಆತ್ಮಜ್ಞಾನೇನ ತನ್ಮಾತ್ರಮೇವ ಜ್ಞಾತಂ ಸ್ಯಾದಿತಿ ವಿಕಲ್ಪಃ, ತಜ್ಜ್ಞಾನೇ ಸತ್ಯಪಿ ಪುನರಪ್ಯಜ್ಞಾನಂ ಕದಾಚಿದ್ ಪ್ರಾ-

---

ತಿಳಿದುಬರುತ್ತಾನೆಂದು ಅಧ್ಯಾರೋಪಿಸಿರುತ್ತದೆ. "ಮನಸ್ಸಿನಿಂದಲೇ ತಿಳಿಯಬೇಕು ಇಲ್ಲಿ ನಾನಾ ಎಂಬುದು ಸ್ವಲ್ಪವೂ ಇಲ್ಲ" (ಬೃ ೪-೪-೧೯) ಎಂಬುದಾಗಿರುವ ವಾಕ್ಯಗಳಲ್ಲಿ ಇಂದ್ರಿಯಗಳಿಗೆ ಅಗೋಚರನೆಂಬುದನ್ನು ಹೇಳಿದೆ. "ಯಾವಾತನಿಂದ ಮನಸ್ಸಿನೊಡನೆ ವಾಕ್ಕು ಮುಟ್ಟದೇ ಹಿಂತಿರುಗುತ್ತದೋ (ಅಂತಹ) ಆನಂದವಾದ ಬ್ರಹ್ಮವನ್ನು ಅರಿತವನು ಯಾವುದರಿಂದಲೂ ಹೆದರುವುದಿಲ್ಲ" (ತೈ ೨-೯) ಎಂದಿರುವ ಶ್ರುತಿಯಲ್ಲಿ ಮನಸ್ಸುವಾಕ್ಕುಗಳಿಗೆ ಅಗೋಚರವೆಂದೇ ಹೇಳಿರುತ್ತದೆ. ಏಕೆಂದರೆ ಅವುಗಳಿಗಿಂತ ಹೆಚ್ಚಿನದಾದ ಅನುಭವವೊಂದಕ್ಕೇ ತಿಳಿದುಬರುತ್ತಾನೆಂದು ತಿಳಿಸುವುದಕ್ಕಾಗಿ (ಹಾಗೆ) ಹೇಳಿರುತ್ತದೆ. ಇದೇ ರೀತಿಯಾಗಿ ತಿಳಿದವರು ಬೇರೆ ಕಡೆಯಲ್ಲೂ ಊಹಿಸಿಕೊಳ್ಳಬೇಕು.

ಇಲ್ಲಿ ಒಂದೊಂದು ಅಧ್ಯಾರೋಪದಿಂದ ಒಂದೊಂದು ವಿಕಲ್ಪವಷ್ಟನ್ನೇ ಕಳೆಯುವುದೆಂಬ ಅಭಿಪ್ರಾಯವಿದೆ ಎಂಬ ನಿಯಮವೇನಿಲ್ಲ. ಹೇಗೆಂದರೆ - ಆತ್ಮನನ್ನು ತಿಳಿಯಬೇಕೆಂದು ಅಧ್ಯಾರೋಪಮಾಡುವುದರಿಂದ ಬೇರೆಯದು ತಿಳಿಯತಕ್ಕದ್ದಲ್ಲವೆಂಬುದಷ್ಟನ್ನು ಮಾತ್ರ (ವಿವಕ್ಷೆ ಮಾಡಿಕೊಂಡಿದೆ ಎಂದು ತಿಳಿಯಬೇಕಾಗಿಲ್ಲ). ಮತ್ತೇನೆಂದರೆ ಅದರ ತಿಳಿವಳಿಕೆಯಿಂದ ಸರ್ವಜ್ಞತ್ವ-ವುಂಟಾಗುತ್ತದೆ ಎಂತಲೂ ಅಜ್ಞಾನವು ಸಂಪೂರ್ಣವಾಗಿ ನಾಶವಾಗುತ್ತದೆ ಎಂಬ ಅಭಿಪ್ರಾಯವೂ ಇರುತ್ತದೆ. ಆತ್ಮನನ್ನು ತಿಳಿಯದೇ ಇರುವುದೇ ದ್ವೈತವು

ದುರ್ಭಿರ್ಯಾದಿತಿ ವಿಕಲ್ಪಃ, ದ್ವೈತಂ ವಿದ್ಯಮಾನಮೇವ ಪ್ರತಿಭಾಸತ ಇತಿ ವಿಕಲ್ಪಃ, ಜ್ಞಾತೇಽಪ್ಯಾತ್ಮನಿ ಜ್ಞಾತೃತ್ವಮವಶಿಷ್ಯತ ಏವೇತಿ ವಿಕಲ್ಪಶ್ಚೇತ್ಯೇವಮಾದ್ಯನೇಕ ವಿಕಲ್ಪನಿವಾರಣಮ್ ಆತ್ಮನಿ ಜ್ಞೇಯತ್ವಾಧ್ಯಾರೋಪಾದ್ ವಿವಕ್ಷಿತಂ ಭವತಿ ||

ದಿಙ್ಮಾತ್ರಮಿಹ ದರ್ಶಿತಂ ಯಥಾ ಕಸ್ಯ ಕಸ್ಯಾಧ್ಯಾರೋಪೇಣ ಕಿಂ ಕಿಮಪೋದ್ಯತ ಇತಿ ಸೂಕ್ಷ್ಮಬುದ್ಧಿಭಿರೇವಮೇವೋಹ್ಯಮ್ ಅನ್ಯತ್ರಾಪ್ಯಧ್ಯಾರೋಪಸ್ಥಲೇಷು | ಇದಂ ತು ನ ಪ್ರಸ್ಮರ್ತವ್ಯಂ ಯತ್ ನಿರ್ಧರ್ಮಕೇ ಪರಮಾರ್ಥತತ್ತ್ವೇ ಯತ್ರ ಯತ್ರ ಯದ್ಯದಾರೋಪಪೂರ್ವಕಮುಪದಿಶ್ಯತೇ ತತ್ರ ತತ್ರ ಕೇವಲಂ ತತ್ತದನ್ಯಪ್ರತಿಷೇಧ ಏವ ಪ್ರಾಧಾನ್ಯೇನ ವಿವಕ್ಷ್ಯತೇ, ನ ತು ವಸ್ತುನಸ್ತತ್ತದ್ಧರ್ಮತ್ವಮಪಿ, ಅನ್ಯತ್ರ ತಸ್ಯಾಪ್ಯಾರೋಪಿತಸ್ಯ ಕಂಠರವೇಣ ನಿಷೇಧಾತ್ ಇತಿ ||

---

ತೋರುವುದಕ್ಕೆ ಕಾರಣವು, ಆತ್ಮಜ್ಞಾನವಾದ ಮೇಲೆ ಮತ್ತೆ ಜ್ಞಾತೃಜ್ಞಾನಜ್ಞೇಯವಿಭಾಗವು ಇರುವುದಿಲ್ಲ ಎಂಬಿದೇ ಮೊದಲಾದದ್ದೂ ಸಹ (ಆ ಅಧ್ಯಾರೋಪದಿಂದ ಗೊತ್ತಾಗಿಯೇ ತೀರುತ್ತದೆ). ಹೀಗೆ ಆತ್ಮನ ವಿಷಯದಲ್ಲಿ ಜ್ಞೇಯತ್ವವನ್ನು ಅಧ್ಯಾರೋಪವನ್ನು ಮಾಡುವುದರಿಂದ – (೧) ಆತ್ಮನಿಗಿಂತ ಬೇರೆಯಾದದ್ದು ತಿಳಿಯುವುದಿರುತ್ತದೆ ಎಂಬ ವಿಕಲ್ಪವೂ, (೨) ಆತ್ಮನನ್ನು ತಿಳಿಯುವುದರಿಂದ ಅದೊಂದೇ ಗೊತ್ತಾದಂತಾಗುತ್ತದೆಯೆಂಬ ವಿಕಲ್ಪವೂ, (೩) ಆ ಜ್ಞಾನವಿದ್ದರೂ ಮತ್ತೊಮ್ಮೆ ಅಜ್ಞಾನವು ಉಂಟಾಗಲಾದರೂ ತೋರಿಕೊಂಡೀತೆಂಬ ವಿಕಲ್ಪವೂ, (೪) ನಿಜವಾಗಿರುವಂತಹ ದ್ವೈತವು ತೋರುತ್ತದೆ ಎಂಬ ವಿಕಲ್ಪವು, (೫) ಆತ್ಮನನ್ನು ತಿಳಿದರೂ ಜ್ಞಾತೃತ್ವವು ಉಳಿದೇ ಇರುತ್ತದೆ ಎಂಬ ಇದೇ ಮೊದಲಾದ ಅನೇಕ ವಿಕಲ್ಪಗಳ ನಿವಾರಣೆಯಾಗುತ್ತದೆ. ಯಾವ ಯಾವ ಅಧ್ಯಾರೋಪದಿಂದ ಏನೇನನ್ನು ತೆಗೆದುಹಾಕಿರುತ್ತದೆ ಎಂಬುದಕ್ಕೆ ಇಲ್ಲಿ ನಾವು ಕೆಲವು ಗುರುತನ್ನು ಮಾತ್ರ ತೋರಿಸಿರುತ್ತೇವೆ. ಸೂಕ್ಷ್ಮಬುದ್ಧಿಯುಳ್ಳವರು ಬೇರೆ ಅಧ್ಯಾರೋಪದ ಸ್ಥಳದಲ್ಲೂ ಇದೇ ರೀತಿಯಾಗಿ ಊಹಿಸಿಕೊಳ್ಳಬೇಕು. ಇದನ್ನು ಮಾತ್ರ ಮರೆಯಬಾರದು, ಏನೆಂದರೆ – ಯಾವ ಧರ್ಮವೂ ಇಲ್ಲದ ಪರಮಾರ್ಥ ತತ್ತ್ವದಲ್ಲಿ ಎಲ್ಲೆಲ್ಲಿ ಏನೇನನ್ನು ಹುಟ್ಟು ಹಾಕುವುದರ ಮೂಲಕ ಉಪದೇಶವನ್ನು ಮಾಡಿರುತ್ತದೋ ಅಲ್ಲಲ್ಲಿ ಕೇವಲ ಅದಕ್ಕಿಂತ ಬೇರೆಯಾದದ್ದರ ಪ್ರತಿಷೇಧವಷ್ಟನ್ನೇ ಮುಖ್ಯವಾಗಿ ಮಾಡಿರುತ್ತದೆ. ಹಾಗೆಯೇ ಆ

೨೬. ಭಾಷ್ಯವಾಕ್ಯೋದಾಹರಣಾನಿ - ಅಧ್ಯಾರೋಪಾಪವಾದಪ್ರಕ್ರಿಯಾಯಾ-ಮೇವ ಭಗವತೋ ಭಾಷ್ಯಕಾರಸ್ಯ ಪರಮಾದರಃ, ಪರಮಾರ್ಥತತ್ತ್ವಸ್ಯ ನಿರ್ವಿಶೇಷತ್ವಾತ್ ಕೇನಚಿದ್ವಿಧಿಮುಖೇನ ತತ್ಸ್ವರೂಪನಿರ್ದೇಶಸ್ಯಾಶಕ್ಯತ್ವಾತ್ - ಇತ್ಯತ್ರ ಕತಿಚಿದ್ ವಚನಾನಿ ಇದಾನೀಮುದಾಹರಿಷ್ಯಾಮಃ -

> (೧) ಗೌರಸೌ, ಸ್ಪಂದತೇ, ಶುಕ್ಲೋ, ವಿಷಾಣೀ - ಇತಿ ಯಥಾ ಲೋಕೇ ನಿರ್ದಿಶ್ಯತೇ ತಥಾ ಅಧ್ಯಾರೋಪಿತನಾಮರೂಪಕರ್ಮದ್ವಾರೇಣ ಬ್ರಹ್ಮ ನಿರ್ದಿಶ್ಯತೇ "ವಿಜ್ಞಾನಮಾನಂದಂ ಬ್ರಹ್ಮ", "ವಿಜ್ಞಾನಘನ ಏವ", "ಬ್ರಹ್ಮ", "ಆತ್ಮಾ" - ಇತ್ಯೇವಮಾದಿಶಬ್ದೈಃ | ಯದಾ ಪುನಃ ಸ್ವರೂಪಮೇವ ನಿರ್ದಿದಿಕ್ಷಿತಂ ಭವತಿ ನಿರಸ್ತಸರ್ವೋಪಾಧಿವಿಶೇಷಮ್, ತದಾ ನ ಶಕ್ಯತೇ ಕೇನಚಿದಪಿ ಪ್ರಕಾರೇಣ ನಿರ್ದೇಷ್ಟುಮ್ ತದಾ ಅಯಮೇವಾಭ್ಯುಪಾಯೋ ಯದುತ ಪ್ರಾಪ್ತಿನಿರ್ದೇಶ-ಪ್ರತಿಷೇಧದ್ವಾರೇಣ "ನೇತಿ ನೇತಿ" ಇತಿ ನಿರ್ದೇಶಃ ||
>
> ಬೃ.ಭಾ. ೨-೩-೬.

---

ಧರ್ಮವುಳ್ಳದ್ದಾಗಿದೆ ಎಂಬುದನ್ನೂ ಸಹ ಅಲ್ಲಗಳೆಯುತ್ತದೆ, ಏಕೆಂದರೆ ಬೇರೊಂದು ಕಡೆಯಲ್ಲಿ ಬಾಯಿಬಿಟ್ಟು ಆ ಆರೋಪಿಸಿದ್ದನ್ನೂ ಅಲ್ಲಗಳೆದಿರುತ್ತದೆ.

**೨೬) ಭಾಷ್ಯವಾಕ್ಯದ ಉದಾಹರಣೆಗಳು** – ಪರಮಾರ್ಥತತ್ತ್ವವು ನಿರ್ವಿಶೇಷವಾದ್ದರಿಂದ ಯಾವ ಒಂದು ವಿಧಿಮೂಲಕವಾಗಿಯೂ ಅದರ ಸ್ವರೂಪವನ್ನು ನಿರ್ದೇಶವನ್ನು ಮಾಡುವುದಕ್ಕಾಗುವುದಿಲ್ಲ ಆದ್ದರಿಂದ ಅಧ್ಯಾರೋಪಾಪವಾದ ಪ್ರಕ್ರಿಯೆಯಲ್ಲಿಯೇ ಪೂಜ್ಯರಾದ ಭಾಷ್ಯಕಾರರಿಗೆ ಹೆಚ್ಚಿನ ಆದರವಿದೆ ಎಂಬುದರ ಬಗ್ಗೆ ಕೆಲವು ವಾಕ್ಯಗಳನ್ನು ಉದಾಹರಿಸುವೆವು. "ಇದು ಎತ್ತು, ಓಡಾಡುತ್ತದೆ, ಬಿಳಿಯಾಗಿದೆ, ಕೋಡುಗಳುಳ್ಳದ್ದು ಎಂದು ಹೇಗೆ ಲೋಕದಲ್ಲಿ ತಿಳಿಸುವರೋ ಹಾಗೆ (ಆ ತತ್ತ್ವವನ್ನು) "ಅದು ಇಂಥದ್ದು" ಎಂದು ತಿಳಿಸುವಕ್ಕಾಗುವುದಿಲ್ಲ. ಅಧ್ಯಾರೋಪಿತ ನಾಮರೂಪಕರ್ಮಗಳ ಮೂಲಕವಾಗಿಯೇ "ವಿಜ್ಞಾನವೂ ಆನಂದವೂ ಆದದ್ದು ಬ್ರಹ್ಮವು, (೩-೯-೨೮) ವಿಜ್ಞಾನಘನನೇ, (೨-೪-೧೨) ಬ್ರಹ್ಮವು, ಆತ್ಮವು ಎಂಬಿವೇ ಮೊದಲಾದ ಶಬ್ದಗಳಿಂದ ಬ್ರಹ್ಮವನ್ನು ತಿಳಿಸುತ್ತಾರೆ. ಆದರೆ ಯಾವಾಗ ಯಾವ ಉಪಾಧಿಯ ವಿಶೇಷವೂ ಇಲ್ಲದ ಸ್ವರೂಪವನ್ನೇ ತಿಳಿಸಬೇಕೆಂದು ಇಚ್ಛೆಯಾಗುವುದೋ ಆಗ ಯಾವ ಪ್ರಕಾರದಿಂದಲೂ ಅದನ್ನು

(೨) ಸರ್ವೋ ಹಿ ಶಬ್ದಃ, ಅರ್ಥಪ್ರಕಾಶನಾಯ ಪ್ರಯುಕ್ತಃ ಶ್ರೂಯಮಾಣಶ್ಚ ಶ್ರೋತೃಭಿಃ ಜಾತಿಕ್ರಿಯಾಗುಣಸಂಬಂಧದ್ವಾರೇಣ ಸಙ್ಕೇತಿಗ್ರಹಣಸವ್ಯಪೇಕ್ಷೋಽರ್ಥಂ ಪ್ರತ್ಯಾಯಯತಿ ನಾನ್ಯಥಾ | ಅದೃಷ್ಟತ್ವಾತ್ | ತದ್ಯಥಾ "ಗೌಃ", "ಅಶ್ವಃ" ಇತಿ ವಾ ಜಾತಿತಃ; "ಪಚತಿ", "ಪಠತಿ" ಇತಿ ವಾ ಕ್ರಿಯಾತಃ, "ಶುಕ್ಲಃ", "ಕೃಷ್ಣಃ" ಇತಿ ವಾ ಗುಣತಃ; "ಧನೀ", "ಗೋಮಾನ್" ಇತಿ ವಾ ಸಂಬಂಧತಃ | ನ ತು ಬ್ರಹ್ಮ ಜಾತಿಮತ್, ಅತೋ ನ ಸದಾದಿಶಬ್ದವಾಚ್ಯಮ್ ನಾಪಿ ಗುಣವತ್, ಯೇನ ಗುಣಶಬ್ದೇನೋಚ್ಯೇತ, ನಿರ್ಗುಣತ್ವಾತ್ | ನಾಪಿ ಕ್ರಿಯಾಶಬ್ದವಾಚ್ಯಮ್ ನಿಷ್ಕ್ರಿಯತ್ವಾತ್; "ನಿಷ್ಕಲಂ ನಿಷ್ಕ್ರಿಯಂ ಶಾಂತಮ್" (ಶ್ವೇ ೬-೧೯) ಇತಿ ಶ್ರುತೇಃ | ನ ಚ ಸಂಬಂಧೀ, ಏಕತ್ವಾತ್ | ಅದ್ವಯತ್ವಾತ್, ಅವಿಷಯತ್ವಾತ್, ಆತ್ಮತ್ವಾಚ್ಚ ನ ಕೇನಚಿಚ್ಛಬ್ದೇನೋಚ್ಯತ ಇತಿ ಯುಕ್ತಮ್ "ಯತೋ ವಾಚೋ ನಿವರ್ತಂತೇ" (ತೈ. ೨-೯) ಇತ್ಯಾದಿಶ್ರುತಿಭ್ಯಶ್ಚ || ಗೀ.ಭಾ. ೧೩-೧೨.

---

ತಿಳಿಸಲಾಗುವುದಿಲ್ಲ. ಆಗ ಪ್ರಾಪ್ತವಾಗಿರುವ ನಿರ್ದೇಶಗಳನ್ನು ಅಲ್ಲಗಳೆಯುವ ಮೂಲಕ "ಹೀಗಲ್ಲ ಹೀಗಲ್ಲ" ಎಂದು ತಿಳಿಸುವ ಇದೊಂದೇ ಉಪಾಯವು. (ಬೃ.ಭಾ. ೨–೩–೬).

ವಸ್ತುವನ್ನು ತಿಳಿಸುವುದಕ್ಕೆ ಪ್ರಯೋಗವಾಗುವ ಮತ್ತು ಕೇಳುವವರ ಕಿವಿಗೆ ಬೀಳುವ ಪ್ರತಿಯೊಂದು ಶಬ್ದವೂ ಜಾತಿ ಕ್ರಿಯೆ ಗುಣ ಸಂಬಂಧ ಇವುಗಳ ಮೂಲಕವೇ (ವಾಚ್ಯವಾಚಕ) ಸಂಬಂಧವನ್ನು ತಿಳಿಸುವುದರ ಮೂಲಕ ಆ ವಸ್ತುವನ್ನು ತಿಳಿಸಿಕೊಡುವುದೇ ಹೊರತು ಬೇರೆ ರೀತಿಯಿಂದ ತಿಳಿಸುವುದಿಲ್ಲ. ಏಕೆಂದರೆ (ಹಾಗೆ ತಿಳಿಸುವುದು ಎಲ್ಲಿಯೂ) ಕಂಡುಬಂದಿಲ್ಲ. ಅದು ಹೇಗೆಂದರೆ ಎತ್ತು, ಕುದುರೆ ಎಂದು ಜಾತಿಯಿಂದಲೋ, ಅಡಿಗೆಯವನು ಓದುವವನು ಎಂದು ಕ್ರಿಯೆಯಿಂದಲೋ, ಬಿಳಿದು ಕರಿದು ಎಂದು ಗುಣದಿಂದಲೋ, ಧನಿಕನು ಗೋಮಂತನು ಎಂದು ಸಂಬಂಧದಿಂದಲೋ ಶಬ್ದವು ವಸ್ತುವನ್ನು ತಿಳಿಸುತ್ತದೆ. ಆದರೆ ಬ್ರಹ್ಮದಲ್ಲಿ ಜಾತಿ ಇಲ್ಲ, ಆದ್ದರಿಂದ ಅದು ಇದೆ, ಮುಂತಾದ ಶಬ್ದಗಳಿಗೆ ವಾಚ್ಯವಲ್ಲ, ಅದರಲ್ಲಿ ಗುಣವೂ ಇರುವುದಿಲ್ಲ, ಏಕೆಂದರೆ ಅದು ನಿರ್ಗುಣವಾಗಿರುತ್ತದೆ. ಹಾಗಿದ್ದರೆ ಗುಣವನ್ನು ಹೇಳುವ ಮಾತಿಗೆ ವಾಚ್ಯವಾಗಬಹುದಾಗಿತ್ತು, ಅದು ಕ್ರಿಯೆಯನ್ನು ಹೇಳುವ ಮಾತಿಗೂ ವಾಚ್ಯವಲ್ಲ ಏಕೆಂದರೆ "ನಿರವಯವನಾದ ನಿಷ್ಕ್ರಿಯವಾದ ಶಾಂತವಾದ" (ಶ್ವೇತ ೬–೧೯) ಎಂಬ ಶ್ರುತಿಯ ಪ್ರಮಾಣದಿಂದ ಅದರಲ್ಲಿ ಯಾವ ಕ್ರಿಯೆಯೂ

(೩) ನಾಪಿ ಪ್ರಮಾಣಾಂತರವಿಷಯತ್ವಂ ಸ್ವರೂಪೇಣ ಗವಾದಿವತ್, ಆತ್ಮನೋ ನಿರುಪಾಧಿಕತ್ವಾತ್, ಗವಾದಿವತ್ | ನಾಪಿ ಜಾತಿಮತ್ತ್ವಮ್, ಅದ್ವಿತೀಯತ್ವೇನ ಸಾಮಾನ್ಯವಿಶೇಷಾಭಾವಾತ್ | ನಾಪಿ ಕ್ರಿಯಾವತ್ತ್ವಂ ಪಾಚಕಾದಿವತ್, ಅವಿಕ್ರಿಯತ್ವಾತ್ | ನಾಪಿ ಗುಣವತ್ತ್ವಂ ನೀಲಾದಿವತ್, ನಿರ್ಗುಣತ್ವಾತ್ | ಅತೋ ನಾಭಿಧಾನೇನ ನಿರ್ದೇಶಮರ್ಹತಿ || ಮಾಂ.ಭಾ. ೭. ಅವತರಣಿಕಾ.

(೪) ಅವಿದ್ಯಾಧ್ಯಾರೋಪಿತಸುಖಿತ್ವಾದಿವಿಶೇಷಪ್ರತಿಬಂಧಾದೇವ ಆತ್ಮನಃ ಸ್ವರೂಪೇಣಾನವಸ್ಥಾನಮ್ | ಸ್ವರೂಪಾವಸ್ಥಾನಂ ಚ ಶ್ರೇಯಃ - ಇತಿ ಸುಖಿತ್ವಾದಿನಿವರ್ತಕಂ ಶಾಸ್ತ್ರಮ್ ಆತ್ಮನ್ಯಸುಖಿತ್ವಾದಿಪ್ರತ್ಯಯಕರಣೇನ, ನೇತಿನೇತ್ಯಸ್ಥೂಲಾದಿವಾಕ್ಯೈಃ || ಗೌ.ಕಾ.ಭಾ. ೨-೩೨.

(೫) ತಸ್ಮಾದೇವ ಚ ನ ಜ್ಞಾನಶಬ್ದವಾಚ್ಯಮಪಿ ತದ್ ಬ್ರಹ್ಮ | ತಥಾಪಿ ತದಾಭಾಸವಾಚಕೇನ ಬುದ್ಧಿಧರ್ಮವಿಷಯೇಣ ಜ್ಞಾನಶಬ್ದೇನ ತಲ್ಲಕ್ಷ್ಯತೇ, ನ

---

ಇರುವುದಿಲ್ಲ. ಅದು ಯಾವ ಸಂಬಂಧವುಳ್ಳದ್ದೂ ಅಲ್ಲ. ಏಕೆಂದರೆ ಅದು ಒಂದೇ ಆಗಿರುತ್ತದೆ. ಅದ್ವಯವಾದ್ದರಿಂದಲೂ ಅದು ವಿಷಯವಲ್ಲ-ವಾದ್ದರಿಂದಲೂ ಆತ್ಮನೇ ಆಗಿರುವುದರಿಂದಲೂ ಯಾವ ಶಬ್ದಕ್ಕೂ ವಾಚ್ಯವಲ್ಲವೆಂಬುದು ಯುಕ್ತವಾಗಿದೆ. "ಯಾವುದರಿಂದ ಮಾತುಗಳು ಹಿಂತಿರುಗುವವೋ (ತೈ. ೨-೯) ಎಂದು ಶ್ರುತಿ ಇರುವುದರಿಂದಲೂ (ಇದು ಗೊತ್ತಾಗುತ್ತದೆ) (ಗೀ.ಭಾ. ೧೩-೧೨) (೭೯೫ ಭಾ.ಭಾ)

(ತುರೀಯನು) ತನ್ನ ರೂಪದಿಂದ ಪ್ರಮಾಣಾನ್ತರಕ್ಕೆ ವಿಷಯನೂ ಅಲ್ಲ ಏಕೆಂದರೆ ಆತ್ಮನಲ್ಲಿ ಯಾವ ಉಪಾಧಿಯೂ ಇಲ್ಲ. ಗೋವು ಮುಂತಾದವುಗಳಂತೆ ಅವನಲ್ಲಿ ಜಾತಿಯೂ ನಿಮಿತ್ತವಲ್ಲ, ಏಕೆಂದರೆ ಅವನು ಅದ್ವಿತೀಯನಾಗಿರುತ್ತಾನಾದ್ದರಿಂದ ಯಾವ ಸಾಮಾನ್ಯ ವಿಶೇಷಗಳೂ ಇರುವುದಿಲ್ಲ. "ಅಡಿಗೆಯವನು" ಎಂಬಂತೆ ಕ್ರಿಯಾನಿಮಿತ್ತವಾಗಿಯೂ ಅಲ್ಲಿ ಶಬ್ದವಿರುವುದಿಲ್ಲ. ಏಕೆಂದರೆ ಆತನು ವಿಕಾರರಹಿತನಾಗಿರುತ್ತಾನೆ. ಕರಿಯನ್ನೈದಿಲೆ ಮುಂತಾದವುಗಳಂತೆ ಗುಣದಿಂದ ಕೂಡಿರುವುದೂ ನಿಮಿತ್ತವಾಗುವುದಿಲ್ಲ. ಏಕೆಂದರೆ ಅವನು ನಿರ್ಗುಣನಾಗಿರುತ್ತಾನೆ. ಆದ್ದರಿಂದ ಮಾತಿನಿಂದ ತಿಳಿಸಲಾಗುವುದಿಲ್ಲ. (ಮಾಂ.ಭಾ. ೭. ಭಾ.ಭಾ. ೩೫)

ತಾನು ತನ್ನ ಸ್ವರೂಪದಿಂದ ನೆಲೆನಿಲ್ಲದೇ ಇರುವುದೆಂಬುದು ಅವಿದ್ಯೆಯಿಂದ ಹುಟ್ಟುಗಟ್ಟಿರುವ ಸುಖಿತ್ವವೇ ಮುಂತಾದ ಅಡ್ಡಿಯಿಂದಲೇ ಆಗಿರುವುದ-

ತೂಚ್ಯತೇ | ಶಬ್ದಪ್ರವೃತ್ತಿಹೇತುಜಾತ್ಯಾದಿಧರ್ಮರಹಿತತ್ವಾತ್ | ತಥಾ ಸತ್ಯಶಬ್ದೇನಾಪಿ | ಸರ್ವವಿಶೇಷಪ್ರತ್ಯಸ್ತಮಿತಸ್ವರೂಪತ್ವಾದ್ ಬ್ರಹ್ಮಣಃ | ಬಾಹ್ಯಸತ್ತಾಸಾಮಾನ್ಯವಿಷಯೇಣ ಸತ್ಯಶಬ್ದೇನ ಲಕ್ಷ್ಯತೇ ಸತ್ಯಂ ಬ್ರಹ್ಮೇತಿ, ನ ತು ಸತ್ಯಶಬ್ದವಾಚ್ಯಮೇವ ಬ್ರಹ್ಮ || ತೈ.ಭಾ. ೨-೧. ಭಾ.ಭಾ. ೧೦೭.

[ ಲಕ್ಷ್ಯತೇ ಇತ್ಯತ್ರಾಪಿ ನ ನಿರ್ಭರಃ | ನ ಹಿ ಶಬ್ದಃ ಕೇನಾಪಿ ವೃತ್ತ್ಯಾ ಬ್ರಹ್ಮ ವಿಷಯೀಕರ್ತುಂ ಶಕ್ನುಯಾತ್ | ಅವಿಷಯತ್ವಾತ್ | ಶಬ್ದಸ್ಯಾಪ್ಯಾತ್ಮತ್ವಾಚ್ಚ ಬ್ರಹ್ಮಣಃ | "ಸತ್ಯಂ ಬ್ರಹ್ಮ" ಇತಿ ಬ್ರಹ್ಮ ವಿಕಾರಾನ್ನಿವರ್ತಯತಿ ಇತ್ಯನ್ಯತ್ರ ಸ್ಪಷ್ಟೀಕೃತಮೇತತ್| ಏವಂ "ಜ್ಞಾನಂ ಬ್ರಹ್ಮ" ಇತಿ ಘಟಾದಿಸ್ವಭಾವಾನ್ನಿವರ್ತಯತೀತ್ಯಪಿ ಬೋಧ್ಯಮ್ | "ಕಾರಣಸ್ಯ ಚ ಕಾರಕತ್ವಂ ವಸ್ತುತ್ವಾತ್ ಮೃದ್ವದಚಿದ್ರೂಪತಾ ಚ ಪ್ರಾಪ್ತಾ | ಅತ ಇದಮುಚ್ಯತೇ ಜ್ಞಾನಂ ಬ್ರಹ್ಮೇತಿ" ಇತಿ ಭಾಷ್ಯವಚನಾತ್ || ]

---

ರಿಂದಲೂ, ಸ್ವರೂಪದಲ್ಲಿ ನೆಲೆ ನಿಲ್ಲುವುದೇ ಶ್ರೇಯಸ್ಸಾಗಿರುವುದರಿಂದಲೂ ಅವನ ವಿಷಯದಲ್ಲಿ ಸುಖಿಯಲ್ಲ ಎಂದು ಮುಂತಾದ ಅರಿವನ್ನುಂಟು ಮಾಡುವ ಮೂಲಕ ಸುಖಿತ್ವವೇ ಮುಂತಾದ ಅಡ್ಡಿಯನ್ನು ಶಾಸ್ತ್ರವು " ಇದಲ್ಲ ಇದಲ್ಲ", " ಸ್ಥೂಲವಲ್ಲ" ಮುಂತಾದ ವಾಕ್ಯಗಳಿಂದ ತೊಲಗಿಸುತ್ತದೆ. (ಮಾಂ.ಗೌ.ಕಾ. ೨-೩೨ ಭಾ.ಭಾ. ೧೧೫)

ಆದ್ದರಿಂದಲೇ ಆ ಬ್ರಹ್ಮವು ಜ್ಞಾನಶಬ್ದದ ವಾಚ್ಯಾರ್ಥವೂ ಅಲ್ಲ. ಹಾಗಿದ್ದರೂ ಆ (ಆತ್ಮನ) ಆಭಾಸಕ್ಕೆ ವಾಚಕವಾಗಿಯೂ ಬುದ್ಧಿಯ ಧರ್ಮವನ್ನು ವಿಷಯೀಕರಿಸುವುದಾಗಿಯೂ ಇರುವ ಜ್ಞಾನವೆಂಬ ಶಬ್ದದಿಂದ ಅದು ಲಕ್ಷಿತವಾಗಿರುತ್ತದೆ, ಆದರೆ ಅದಕ್ಕೆ ವಾಚ್ಯವಾಗಿರುವುದಿಲ್ಲ. ಏಕೆಂದರೆ ಶಬ್ದ ಪ್ರವೃತ್ತಿಗೆ ನಿಮಿತ್ತವಾದ ಜಾತಿಯೇ ಮುಂತಾದ ಯಾವ ಧರ್ಮವೂ ಅದರಲ್ಲಿರುವುದಿಲ್ಲ. ಇದರಂತೆ ಸತ್ಯಶಬ್ದಕ್ಕೂ (ಅದು ವಾಚ್ಯವಲ್ಲ). ಬ್ರಹ್ಮವು ಎಲ್ಲಾ ಬಗೆಯ ವಿಶೇಷಗಳೂ ಇಲ್ಲದಿರುವ ಸ್ವರೂಪವಾದ್ದರಿಂದ ಹೊರಗಿನ ಸತ್ತಾಸಾಮಾನ್ಯವನ್ನು ತಿಳಿಸುವ ಸತ್ಯಶಬ್ದದಿಂದ ಲಕ್ಷಿತವಾಗಿ "ಸತ್ಯವಾದದ್ದು ಬ್ರಹ್ಮವು" ಎಂದು ಎನಿಸಿಕೊಂಡಿರುತ್ತದೆ. ಅಷ್ಟೇ ಹೊರತು ಬ್ರಹ್ಮವು ಸತ್ಯಶಬ್ದಕ್ಕೆ ವಾಚ್ಯವೇ ಎಂಬುವುದಲ್ಲ. (ತೈ.ಭಾ. ೨-೧ ಭಾ.ಭಾ. ೧೦೭). (ಲಕ್ಷ್ಯವಾಗಿದೆ ಎಂಬುದರಲ್ಲೂ (ನಿಜವಾಗಿ) ತಾತ್ಪರ್ಯವಿಲ್ಲ, ಶಬ್ದವು ಯಾವ ವೃತ್ತಿಯಿಂದಲೂ ಬ್ರಹ್ಮವನ್ನು ವಿಷಯೀಕರಿಸಲಾರದು. ಏಕೆಂದರೆ ಅದು ಹೊಸವಿಷಯವಲ್ಲ. ಬ್ರಹ್ಮವು ಶಬ್ದಕ್ಕೂ ಆತ್ಮವಾಗಿದೆ. "ಸತ್ಯವಾದದ್ದು ಬ್ರಹ್ಮವು"

(೬) ನನು ಆತ್ಮಾಪಿ ಆತ್ಮಶಬ್ದೇನಾಭಿಧೀಯತೇ | ನ | "ಯತೋ ವಾಚೋ ನಿವರ್ತಂತೇ", "ಯತ್ರ ನಾನ್ಯತ್ ಪಶ್ಯತಿ" ಇತ್ಯಾದಿಶ್ರುತೇಃ | ಕಥಂ ತರ್ಹಿ "ಆತ್ಮೈವಾಧಸ್ತಾತ್", "ಸ ಆತ್ಮಾ" ಇತ್ಯಾದಿಶಬ್ದಾ ಆತ್ಮಾನಂ ಪ್ರತ್ಯಾಯಯಂತಿ? ನೈಷ ದೋಷಃ | ದೇಹವತಿ ಪ್ರತ್ಯಗಾತ್ಮನಿ ಭೇದವಿಷಯೇ ಪ್ರಯುಜ್ಯಮಾನಃ ಶಬ್ದೋ ದೇಹಾದೀನಾಮಾತ್ಮತ್ವೇ ಪ್ರತ್ಯಾಖ್ಯಾಯಮಾನೇ ಯತ್ ಪರಿಶಿಷ್ಟಂ ಸತ್ ಅವಾಚ್ಯಮಪಿ ಪ್ರತ್ಯಾಯಯತಿ || ಛಾಂ.ಭಾ. ೭-೧-೩.

[ ಅತ್ರ, ಅಭಿಧಾನಾಭಿಧೇಯಭೇದಸ್ಯ ವಿಕಾರತ್ವಾತ್ ವಿಕಾರಸ್ಯ ಚಾನಾತ್ಮತ್ವಾತ್ ನ ತದ್ವಿಲಕ್ಷಣಸ್ಯ ಸರ್ವಸ್ಯಾಪ್ಯಾತ್ಮಭೂತಸ್ಯ ಶಬ್ದಾಭಿಧೇಯತ್ವಂ ಬ್ರಹ್ಮಣಃ - ಇತಿ ಕಥನಪ್ರಸಂಗೇನೇದಮುಕ್ತಮ್ | ತಥಾ ಚ ದೇಹಾದಿಷು ಪ್ರಾಪ್ತಾತ್ಮಬುದ್ಧಿನಿವೃತ್ತ್ಯರ್ಥಮೇವಾತ್ಮಾನಿ ಆತ್ಮಶಬ್ದಪ್ರಯೋಗಃ ಶಬ್ದಾವಿಷಯೇಽಪೀತ್ಯಭಿಪ್ರಾಯಃ || ]

---

ಎಂದು ಹೇಳುತ್ತಾ ವಿಕಾರವಲ್ಲದ್ದು ಎಂದು ಬೇರೆಕಡೆಯಲ್ಲಿ ಸ್ಪಷ್ಟಪಡಿಸಿಯೂ ಇರುತ್ತಾರೆ. ಹೀಗೆಯೇ "ಜ್ಞಾನರೂಪವಾದದ್ದು ಬ್ರಹ್ಮವು" ಎಂದು ಹೇಳುತ್ತಾ ಗಡಿಗೆಯೇ ಮುಂತಾದ ಸ್ವಭಾವಕ್ಕಿಂತಲೂ ಬೇರ್ಪಟ್ಟದ್ದಾಗಿದೆ ಎಂದು ತಿಳಿಸುತ್ತದೆ ಎಂದು ತಿಳಿಯಬೇಕು. "(ಯಾವಾಗಲೂ) ಕಾರಣವಾದದ್ದು ಕಾರಕವಾಗುವುದರಿಂದಲೂ ವಸ್ತುವಾದ್ದರಿಂದಲೂ ಮಣ್ಣಿನಂತೆ ಜಡರೂಪವಾದದ್ದೆಂದು ಬಂದೊದಗಲಾಗಿ "ಜ್ಞಾನಂ ಬ್ರಹ್ಮ" ಎಂದು ಹೇಳಿದೆ ಎಂದು ಭಾಷ್ಯವಚನವಿರುವುದರಿಂದ ಇದು ಗೊತ್ತಾಗುತ್ತದೆ)".

ಆತ್ಮನೂ ಕೂಡ "ಆತ್ಮ" ಎಂಬ ಶಬ್ದದಿಂದ ಹೇಳಲ್ಪಡುತ್ತಾನಲ್ಲವೇ ? ಎಂದರೆ, ಹಾಗಲ್ಲ "ಯಾವುದರಿಂದ ವಾಕ್ಕು ಹಿಂತಿರುಗುವವೋ" (ತೈ.ಭಾ. ೨-೯) "ಎಲ್ಲಿ ಎರಡನೆಯದನ್ನು ಕಾಣುವುದಿಲ್ಲವೋ" (ಛಾಂ. ೨-೨೪-೧) ಎಂದು ಮುಂತಾಗಿ ಶ್ರುತಿ ಇದೆ. ಹಾಗಾದರೆ "ಆತ್ಮನೇ ಕೆಳಗೆ" (೭-೨೫-೨) "ಅದೇ ಆತ್ಮನು" (೬-೧೬-೧) ಇವೇ ಮುಂತಾದ ಶಬ್ದಗಳು ಆತ್ಮನನ್ನು ತಿಳಿಸಿಕೊಡುವುದು ಹೇಗೆ? ಎಂದರೆ ಇದೇನೂ ದೋಷವಲ್ಲ, ಅವಿದ್ಯಾವಿಷಯದಲ್ಲಿ – ದೇಹವುಳ್ಳ ಪ್ರತ್ಯಗಾತ್ಮನಲ್ಲಿ ಪ್ರಯುಕ್ತವಾಗುವ (ಆತ್ಮ) ಶಬ್ದವು ದೇಹಾದಿಗಳು ಆತ್ಮನಲ್ಲವೆಂದು ಅಲ್ಲಗಳೆದ ಬಳಿಕ ಯಾವುದು ಉಳಿಯುವುದೋ ಆ (ತತ್ತ್ವವು) ಅವಾಚ್ಯವಾದರೂ (ಅದನ್ನು) ಅದು- ತಿಳಿಸಿಕೊಡುತ್ತದೆ (ಛಾಂ. ೭-೧-೩. ಭಾ.ಭಾ. ೫೫೦)

ಇತ್ಯೇವಂ ದರ್ಶಿತಂ ಸಂಗ್ರಹೇಣ ಶಾಂಕರವೇದಾಂತಪ್ರಕ್ರಿಯಾಸ್ವರೂಪಮ್ | ಅಥ ವೇದಾಂತಪ್ರಕ್ರಿಯಾವಿಶೇಷಾಃ ಪ್ರದರ್ಶ್ಯಂತೇ ಸರ್ವತ್ರ ಪ್ರಧಾನಪ್ರಕ್ರಿಯಾನುಗಮ-ಖ್ಯಾಪನಾರ್ಥಂ ಸಮನಂತರೋತ್ತರಕಿರಣೇ ಇತಿ ಶಿವಮ್ ||

**ಇತಿಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರೇಣ್ಯಶ್ರೀಪೂಜ್ಯಪಾದಶ್ರೀಮಚ್ಛಂಕರಭಗವಚ್ಚರಣಸ್ಮರಣ-ಪರಿಚಯಾವಾಪ್ತವೇದಾಂತಪ್ರವೇಶೇನ ಶ್ರೀಬೋಧಾನಂದೇಂದ್ರಸರಸ್ವತೀಶಿಷ್ಯಸಚ್ಚಿದಾನಂದೇಂದ್ರ-ಸರಸ್ವತ್ಯಾಖ್ಯೇನ ಭಿಕ್ಷುಣಾ ಪ್ರಣೀತೇ ಶುದ್ಧಶಾಂಕರಪ್ರಕ್ರಿಯಾಭಾಸ್ಕರಾಭಿದೇ ಪ್ರಕರಣೇ ಶಾಂಕರವೇದಾಂತಪ್ರಕ್ರಿಯಾಸ್ವರೂಪಮ್ ನಾಮ ಚತುರ್ಥಃ ಕಿರಣಃ**

---

(ಇಲ್ಲಿ ಅಭಿಧಾನಾಭಿಧೇಯ ಭೇದವು ವಿಕಾರವಾದ್ದರಿಂದಲೂ ವಿಕಾರ-ವಾದದ್ದು ಅನಾತ್ಮವಾದ್ದರಿಂದಲೂ ಅದಕ್ಕೆ ವಿಲಕ್ಷಣವಾದ ಎಲ್ಲಕ್ಕೂ ಆತ್ಮವಾದ ಬ್ರಹ್ಮವು ಶಬ್ದಕ್ಕೆ ವಿಷಯುವಲ್ಲ ಎಂಬುದನ್ನು ಹೇಳುವ ಪ್ರಸಂಗದಲ್ಲಿ ಹೇಳಿರುತ್ತದೆ. ಹಾಗೆಯೇ (ಆತ್ಮನು) ಶಬ್ದಕ್ಕೆ ವಿಷಯುವಲ್ಲವಾದರೂ ದೇಹಾದಿಗಳಲ್ಲಿ ಒದಗಿರುವ ಆತ್ಮಬುದ್ಧಿಯನ್ನು ತೆಗೆದುಹಾಕುವುದಕ್ಕಾಗಿಯೇ ಆತನಲ್ಲಿ ಆತ್ಮಶಬ್ದಪ್ರಯೋಗವನ್ನು ಮಾಡಿರುತ್ತದೆ).

ಈ ರೀತಿಯಾಗಿ ಇಲ್ಲಿ ಶಾಂಕರವೇದಾಂತದ ಪ್ರಕ್ರಿಯಾಸ್ವರೂಪವನ್ನು ಸಂಗ್ರಹವಾಗಿ ತಿಳಿಸಲಾಗಿದೆ ಇನ್ನು ಪ್ರಧಾನವಾದ ಪ್ರಕ್ರಿಯೆಯನ್ನು ಗುರುತಿಸುವುದಕ್ಕಾಗಿ ಮುಂದಿನ ಕಿರಣದಲ್ಲಿ ವೇದಾನ್ತಪ್ರಕ್ರಿಯಾವಿಶೇಷಗಳನ್ನು ತೋರಿಸಿ ಕೊಡಲಾಗುತ್ತದೆ ಎಂದಾದ್ದರಿಂದ (ಇಲ್ಲಿ ಎಲ್ಲವೂ) ಮಂಗಳವಾಗಿದೆ.

ಇಲ್ಲಿಗೆ ಪ್ರಕ್ರಿಯಾಸ್ವರೂಪವೆಂಬ ನಾಲ್ಕನೇ ಕಿರಣವು ಮುಗಿಯಿತು.

## ೫. ಅಧ್ಯಾರೋಪಾಪವಾದಪ್ರಕ್ರಿಯಾವಿಶೇಷಾಃ

೨೭. **ಗ್ರಂಥಸಂಬಂಧಃ** - ಅವಗಮಿತಮೇತತ್ ಯತ್ ಸರ್ವೇಷ್ವಪಿ ವೇದಾಂತೇಷು ಅದ್ವೈತಾತ್ಮತತ್ತ್ವಸಮರ್ಪಣಾಯ ಅಧ್ಯಾರೋಪಾಪವಾದಪ್ರಕ್ರಿಯೈವೈಕಾ ಸಮಾದೃತೇತಿ ಭಗವತ್ಪಾದೀಯಂ ಮತಮಿತಿ | ಪ್ರತಿಪಾದಿತಂ ಚ ಪ್ರಕ್ರಿಯಾಸ್ವರೂಪಂ ಸಾಮಾನ್ಯತಃ, ಶಾಂಕರವೇದಾಂತಾಭ್ಯುಪಗಮವಿಶೇಷಾಃ ಸಂಪ್ರದಾಯಾಧ್ವನಿ ಸ್ಥಿತಾ ಇತ್ಯತ್ರ ಪ್ರಾಚೀನಾಚಾರ್ಯವಚನೋದಾಹರಣವ್ಯಾಜೇನ | ಅಥಾಸ್ಯಾ ವೇದಾಂತಪ್ರಕ್ರಿಯಾಯಾ ವಿಶೇಷಾಕಾರಾ ಯಥಾ ಪ್ರಸ್ಥಾನತ್ರಯಭಾಷ್ಯೇಷು ನಿರ್ದಿಷ್ಟಾಃ, ತಥಾ ಸಂಕ್ಷೇಪೇಣ ಪ್ರದರ್ಶಯಿಷ್ಯಾಮಃ ||

೨೮. **ವಿದ್ಯಾವಿದ್ಯಾವಿವೇಕಪ್ರಕ್ರಿಯಾ** - ತತ್ರ "ಬ್ರಹ್ಮವಿದಾಪ್ನೋತಿ ಪರಮ್" (ತೈ.೨-೧), "ಸ ಯೋ ಹ ವೈ ತತ್ ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ" (ಮುಂ.೩-೨-೯), "ಸ ವಾ ಏಷ ಮಹಾನಜ ಆತ್ಮಾಽಜರೋಽಮರೋಽಮೃತೋಽಭಯೋ ಬ್ರಹ್ಮಾಭಯಂ ವೈ ಬ್ರಹ್ಮಾಭಯಂ ಹಿ ವೈ ಬ್ರಹ್ಮ ಭವತಿ ಯ

---

## ೫. ಅಧ್ಯಾರೋಪಾಪವಾದಪ್ರಕ್ರಿಯಾವಿಶೇಷಗಳು

**೨೭) (ಈ) ಗ್ರಂಥಸಂಬಂಧವು** – ಎಲ್ಲಾ ವೇದಾನ್ತಗಳಲ್ಲೂ ಅದ್ವೈತಾತ್ಮಸ್ವರೂಪವನ್ನು ತಿಳಿಸುವುದಕ್ಕಾಗಿ ಅಧ್ಯಾರೋಪಾಪವಾದವೆಂಬ ಒಂದೇ ಪ್ರಕ್ರಿಯೆಯನ್ನೇ ಸ್ವೀಕರಿಸಿದೆ ಎಂಬುದು ಭಗವತ್ಪಾದರಿಗೆ ಒಪ್ಪಿಗೆಯಾದದ್ದು ಎಂಬುದನ್ನು ತಿಳಿಸಿಕೊಟ್ಟಿದ್ದಾಯಿತು. ಸಾಮಾನ್ಯವಾಗಿ ಪ್ರಕ್ರಿಯಾಸ್ವರೂಪವನ್ನೂ ತಿಳಿಸಿಕೊಟ್ಟಿದ್ದಾಯಿತು. ಅದು ಶಾಂಕರ ವೇದಾನ್ತಗಳಲ್ಲಿ ಒಪ್ಪಿರುವ ಪ್ರಕ್ರಿಯಾವಿಶೇಷವಾಗಿದೆ. ಅದು ಸಂಪ್ರದಾಯ ಮಾರ್ಗದಲ್ಲೇ ಇರುವುವಂಥದ್ದು ಎಂಬುದನ್ನು ಪ್ರಾಚೀನರ ಆಚಾರ್ಯರ ವಚನವನ್ನು ಉದಾಹರಿಸುವ ನೆಪದಿಂದ (ತಿಳಿಸಿಕೊಟ್ಟದ್ದಾಗಿದೆ). ಇನ್ನು ಈ ವೇದಾನ್ತ ಪ್ರಕ್ರಿಯೆಯ ವಿಶೇಷಾಕಾರಗಳೇ ಪ್ರಸ್ಥಾನತ್ರಯಭಾಷ್ಯದಲ್ಲಿ ತಿಳಿಸಿವೆ ಎಂಬುದನ್ನು ಸಂಕ್ಷೇಪವಾಗಿ ತೋರಿಸಿಕೊಡುವೆವು.

**೨೮) ವಿದ್ಯಾವಿದ್ಯಾವಿವೇಕ ಪ್ರಕ್ರಿಯೆಯು** – "ಬ್ರಹ್ಮವನ್ನು ತಿಳಿದವನು ಹೆಚ್ಚಿನದನ್ನು ಪಡೆಯುತ್ತಾನೆ" (ತೈ ೨–೧) "ಯಾವನಾದರೂ ಆ

ಏವಂ ವೇದ" || (ಬೃ. ೪-೪-೨೫) ಇತ್ಯಾದಿಭಿಃ ಶ್ರುತಿಭಿಃ ಬ್ರಹ್ಮವಿಜ್ಞಾನಮಾತ್ರಾದ್ ಬ್ರಹ್ಮಭಾವಲಕ್ಷಣಪರಮಪುರುಷಾರ್ಥಪ್ರಾಪ್ತಿಜ್ಞಾಪನಾತ್, ಮುಕ್ತಿರವಿದ್ಯಾಮಾತ್ರ-ವ್ಯವಹಿತೇತಿ ಗಮ್ಯತೇ | ತಸ್ಮಾತ್ ವಿದ್ಯಾವಿದ್ಯಾವಿವೇಕಪ್ರಕ್ರಿಯಾ ಸರ್ವಪ್ರಥಮಂ ಸಮಾಲೋಚಯಿತವ್ಯಾ | ತತ್ರ ಇಮಾನಿ ಭಾಷ್ಯವಾಕ್ಯಾನಿ ಅನುಸಂಧೇಯಾನಿ ಭವಂತಿ-

> (೧) ಯಥಾ ಗೃಹ್ಯಮಾಣಾಯಾ ಅಪಿ ಶುಕ್ತಿಕಾಯಾ ವಿಪರ್ಯಯೇಣ ರಜತಾಭಾಸಾಯಾಃ ಅಗ್ರಹಣಂ ವಿಪರೀತಜ್ಞಾನವ್ಯವಧಾನಮಾತ್ರಮ್, ತಥಾ ಗ್ರಹಣಂ ಜ್ಞಾನಮಾತ್ರಮೇವ | ವಿಪರೀತಜ್ಞಾನವ್ಯವಧಾನಾಪೋಹಾರ್ಥತ್ವಾತ್ ಜ್ಞಾನಸ್ಯ | ಏವಮ್, ಇಹಾಪಿ ಆತ್ಮನೋಽಲಾಭೋಽವಿದ್ಯಾಮಾತ್ರವ್ಯವಧಾನಮ್| ತಸ್ಮಾತ್ ವಿದ್ಯಯಾ ತದಪೋಹನಮಾತ್ರಮೇವ ಲಾಭೋ ನಾನ್ಯಃ ಕದಾಚಿದಪ್ಯುಪಪದ್ಯತೇ || ಬೃ.ಭಾ. ೧-೪-೭. ಭಾ.ಭಾ. ೧೪೭
>
> (೨) ಬ್ರಹ್ಮೈವ ಹಿ ಮುಕ್ತ್ಯವಸ್ಥಾ || ಸೂ.ಭಾ.೩-೪-೫೨.

---

ಪರಬ್ರಹ್ಮವನ್ನು ತಿಳಿದವನಾದರೆ ಅವನು ಬ್ರಹ್ಮನೇ ಆಗುತ್ತಾನೆ" (ಮುಂ. ೩-೨-೯) "ಆ ಈ ಆತ್ಮನು ಅಪರಿಚ್ಛಿನ್ನನು, ಹುಟ್ಟಿಲ್ಲದಸ್ವರೂಪದವನು, ಮುಪ್ಪಿಲ್ಲದವನು, ಸಾವಿಲ್ಲದವನು, ಅಮೃತನು, ಅಭಯವಾದ ಬ್ರಹ್ಮವು, ಬ್ರಹ್ಮವು ಅಭಯವಾದದ್ದಲ್ಲವೇ? ಯಾರು ಹೀಗೆ ತಿಳಿಯುತ್ತಾರೋ ಅವರು ಅಭಯಬ್ರಹ್ಮರೇ ಆಗುತ್ತಾರೆ." (ಬೃ ೪-೪-೨೫) ಎಂದು ಇವೇ ಮೊದಲಾದ ಶ್ರುತಿಗಳು ಬ್ರಹ್ಮದ ವಿಜ್ಞಾನಮಾತ್ರದಿಂದ ಬ್ರಹ್ಮವಾಗುವುದೆಂಬ ರೂಪವಾದ ಪರಮಪುರುಷಾರ್ಥವಾಗುವುದೆಂದು ತಿಳಿಸುತ್ತಿರುವುದರಿಂದ ಮುಕ್ತಿಗೆ ಅವಿದ್ಯೆಯಷ್ಟೇ ಅಡ್ಡಿ ಎಂಬುದು ಗೊತ್ತಾಗುತ್ತದೆ. ಆದ್ದರಿಂದ ವಿದ್ಯಾವಿದ್ಯೆಯ ಪ್ರಕ್ರಿಯೆಯನ್ನೇ ಎಲ್ಲಕ್ಕಿಂತಲೂ ಮೊಟ್ಟಮೊದಲು ಸಮಾಲೋಚನೆಯನ್ನು ಮಾಡಬೇಕು. ಇಲ್ಲಿ ಈ ಕೆಳಗಿನ ಭಾಷ್ಯವಾಕ್ಯಗಳ ಅನುಸಂಧಾನವನ್ನು ಮಾಡಬೇಕು.

(೧) ಹೇಗೆ ಕಪ್ಪೆಚಿಪ್ಪನ್ನು ಗ್ರಹಿಸುತ್ತಿದ್ದರೂ ವಿಪರೀತವಾಗಿ ಬೆಳ್ಳಿಯಾಗಿ ತೋರುತ್ತಿರುವಲ್ಲಿ ಅದನ್ನು ಗ್ರಹಿಸುವುದಿಲ್ಲ ಎಂಬುದಕ್ಕೆ ವಿಪರೀತ-ಜ್ಞಾನವೊಂದೇ ಮರೆಯಾಗಿರುತ್ತದೋ ಮತ್ತು ಅದನ್ನು ಗ್ರಹಿಸುವುದೆಂಬುದು ಬರಿಯ ಜ್ಞಾನವೇ ಆಗಿರುತ್ತದೋ, ಏಕೆಂದರೆ ವಿಪರೀತಜ್ಞಾನವೆಂಬ ಮರೆಯನ್ನು ತೆಗೆದುಹಾಕುವುದಕ್ಕಾಗಿಯೇ ಜ್ಞಾನವು ಬೇಕಾಗಿರುತ್ತದೆ. ಹಾಗೆಯೇ

[ ಅತ್ರೋಕ್ತಂ ಬ್ರಹ್ಮಾತ್ಮಭಾವಃ ಪ್ರಾಪ್ತ ಏವಾವಿದ್ಯಯಾ ಅಪ್ರಾಪ್ತ ಇವ, ವಿದ್ಯಯಾ ಪ್ರಾಪ್ತ ಇವ ಚ ಭವತೀತಿ || ]

(೩) ಯುಷ್ಮದಸ್ಮತ್ಪ್ರತ್ಯಯಗೋಚರಯೋರ್ವಿಷಯವಿಷಯಿಣೋಸ್ತಮಃ ಪ್ರಕಾಶವದ್ ವಿರುದ್ಧಸ್ವಭಾವಯೋಃ, ಇತರೇತರಭಾವಾನುಪಪತ್ತೌ ಸಿದ್ಧಾಯಾಂ ತದ್ಧರ್ಮಾಣಾಮಪಿ ಸುತರಾಮ್ ಇತರೇತರಭಾವಾನುಪಪತ್ತಿಃ - ಇತ್ಯತಃ ಅಸ್ಮತ್ಪ್ರತ್ಯಯಗೋಚರೇ ವಿಷಯಿಣಿ ಚಿದಾತ್ಮಕೇ ಯುಷ್ಮತ್ಪ್ರತ್ಯಯಗೋಚರಸ್ಯ ವಿಷಯಸ್ಯ ತದ್ಧರ್ಮಾಣಾಂ ಚಾಧ್ಯಾಸಃ, ತದ್ವಿಪರ್ಯಯೇಣ ವಿಷಯಿಣಸ್ತ-ದ್ಧರ್ಮಾಣಾಂ ಚ ವಿಷಯೇ ಅಧ್ಯಾಸೋ ಮಿಥ್ಯಾ - ಇತಿ ಭವಿತುಂ ಯುಕ್ತಮ್, ತಥಾಪಿ ಅನ್ಯೋನ್ಯಸ್ಮಿನ್ ಅನ್ಯೋನ್ಯಾತ್ಮಕತಾಮ್ ಅನ್ಯೋನ್ಯಧರ್ಮಾಂಶ್ಚ ಅಧ್ಯಸ್ಯೇತರೇತರಾವಿವೇಕೇನ ಅತ್ಯಂತವಿವಿಕ್ತಯೋರ್ಧರ್ಮಧರ್ಮಿಣೋ-ರ್ಮಿಥ್ಯಾಜ್ಞಾನನಿಮಿತ್ತಃ ಸತ್ಯಾನೃತೇ ಮಿಥುನೀಕೃತ್ಯ "ಅಹಮಿದಮ್", "ಮಮೇದಮ್" - ಇತಿ ನೈಸರ್ಗಿಕೋಽಯಂ ಲೋಕವ್ಯವಹಾರಃ ||

---

ಇಲ್ಲಿಯೂ ಆತ್ಮನ ಅಲಾಭವೆಂದರೆ ಅವಿದ್ಯಾಮಾತ್ರರೂಪವಾದ ಅಡ್ಡಿಯು. ಆದ್ದರಿಂದ ವಿದ್ಯೆಯಿಂದ ಆ ಅವಿದ್ಯೆಯನ್ನು ತೆಗೆದುಹಾಕುವುದೇ ಲಾಭವೇ ಹೊರತು ಮತ್ತೆ ಬೇರೆಯ ಲಾಭವು ಎಂದಿಗೂ ಹೊಂದುವುದಿಲ್ಲ. (ಬೃ. ೧-೪-೭ ಭಾ.ಭಾ. ೧೪೫)

(೨) ಬ್ರಹ್ಮವೇ ಅಲ್ಲವೇ ಮುಕ್ತಿಯ ಅವಸ್ಥೆಯು - (ಸೂ.ಭಾ ೩-೪-೫೨). (ಇಲ್ಲಿ ಹೇಳಿರುವ ಬ್ರಹ್ಮಾತ್ಮಭಾವವು ಪಡದದ್ದೇ ಆಗಿದ್ದು ಅವಿದ್ಯೆಯಿಂದ ಪಡೆಯುದೇ ಇದ್ದಂತಾಗಿರುತ್ತದೆ. (ಅದು ಮತ್ತೆ ವಿದ್ಯೆಯಿಂದ ಪಡೆದಂತಾಗುತ್ತದೆ).

(೩) ನೀನು ನಾನು ಎಂಬ ಪ್ರತ್ಯಯಗಳಿಗೆ ಗೋಚರವಾಗಿರುವ ವಿಷಯ ವಿಷಯಿಗಳಾದ (ಇವು) ಕತ್ತಲೆ ಬೆಳಕುಗಳಂತೆ ಒಂದಕ್ಕೊಂದು ವಿರುದ್ಧವಾದ ಸ್ವಭಾವವುಳ್ಳವುಗಳಾದ್ದರಿಂದ ಇವುಗಳಲ್ಲಿ ಒಂದು ಮತ್ತೊಂದರ ಸ್ವರೂಪ-ವಾಗುವುದೆಂಬುದು ಹೊಂದುವುದಿಲ್ಲವೆಂಬುದು ಸಿದ್ಧವಾಗಿರುವಲ್ಲಿ, ಇವುಗಳ ಧರ್ಮಗಳು ಒಂದರವು ಮತ್ತೊಂದರಲ್ಲಿರುವುದೆಂಬುದು ತೀರ ಹೊಂದದ ಮಾತಾಗಿರುವುದು. ಆದ್ದರಿಂದ, ನಾನು ಎಂಬ ಅರಿವಿಗೆ ಗೋಚರವಾಗಿಯೂ ಚಿತ್ಸ್ವರೂಪವಾಗಿಯೂ ಇರುವ ವಿಷಯಿಯಲ್ಲಿ "ನೀನು" ಎಂಬ ಅರಿವಿಗೆ ಗೋಚರವಾದ ವಿಷಯವನ್ನೂ ಅದರ ಧರ್ಮಗಳನ್ನೂ ಅಧ್ಯಾಸಮಾಡುತ್ತಾ-

(೩೮) ತಮೇತಮೇವಂಲಕ್ಷಣಮಧ್ಯಾಸಂ ಪಂಡಿತಾ ಅವಿದ್ಯೇತಿ ಮನ್ಯಂತೇ |
ತದ್ವಿವೇಕೇನ ಚ ವಸ್ತುಸ್ವರೂಪಾವಧಾರಣಂ ವಿದ್ಯಾಂ ಆಹುಃ ||
ಅಧ್ಯಾಸಭಾಷ್ಯಮ್.

[ ಯಯಾ ಅವಿದ್ಯಯಾ ಬ್ರಹ್ಮಾತ್ಮತ್ವಂ ವ್ಯವಹಿತಮ್, ತಸ್ಯಾಃ ಸ್ವರೂಪಂ ಸ್ಫುಟಿತಮ್, ಅವಿವೇಕನಿಮಿತ್ತೇತರೇತರಾಧ್ಯಾಸ ಏವಾವಿದ್ಯೇತಿ | ತದ್ವಿವೇಕೇನ ಆತ್ಮಾನಾತ್ಮನೋಃ ಸತ್ಯತ್ವೇನ, ಅನೃತತ್ವೇನ ಚ ಸ್ವರೂಪನಿರ್ಧಾರಣಮೇವ ವಿದ್ಯಾ - ಇತಿ ಚೋಕ್ತಮತ್ರ || ]

ತದೇವಮ್ ವಿದ್ಯಾವಿದ್ಯಾಧ್ಯಾರೋಪೇಣ ಬಂಧಸ್ಯ ಸತ್ಯತ್ವಮ್, ಮುಕ್ತೇರಾಗಂತುಕತ್ವಂ

ರೆಂಬುದೂ ಇದಕ್ಕೆ ವಿರುದ್ಧವಾಗಿ ವಿಷಯಿಯನ್ನೂ ಅದರ ಧರ್ಮಗಳನ್ನೂ ವಿಷಯದಲ್ಲಿ ಅಧ್ಯಾಸಮಾಡುತ್ತಾರೆಂಬುದೂ ಸುಳ್ಳು ಎಂದಾಗಬೇಕು. ಹೀಗಿದ್ದರೂ ಅತ್ಯಂತವಾಗಿ ಬೇರ್ಪಟ್ಟಿರುವ ಈ ಧರ್ಮಧರ್ಮಿಗಳನ್ನು ಒಂದರಿಂದೊಂದನ್ನು ವಿಂಗಡಿಸಿ ತಿಳಿದುಕೊಳ್ಳದ್ದರಿಂದ ಇವುಗಳಲ್ಲಿ ಒಂದರ ಸ್ವರೂಪವನ್ನು ಮತ್ತೊಂದರಲ್ಲಿಯೂ ಒಂದರ ಧರ್ಮಗಳನ್ನು ಮತ್ತೊಂದ- ರಲ್ಲಿಯೂ ಅಧ್ಯಾಸ ಮಾಡಿ ತಪ್ಪುತಿಳಿವಳಿಕೆಯ ನಿಮಿತ್ತದಿಂದ ನಿಜವಾದದ್ದನ್ನೂ ಸುಳ್ಳಾದದ್ದನ್ನೂ ಬೆರೆಯಿಸಿಕೊಂಡು "ಇದು ನಾನು" "ನನ್ನದಿದು" ಎಂಬೀ ರೀತಿಯಾಗಿ ಜನರು ವ್ಯವಹಾರವನ್ನು ಮಾಡುತ್ತಿರುವುದು ಸ್ವಾಭಾವಿಕ- ವಾಗಿರುತ್ತದೆ. (ಸೂ. ಅಧ್ಯಾ. ಭಾ. ೧)

ಆ ಈ ಲಕ್ಷಣದ್ದಾದ ಅಧ್ಯಾಸವನ್ನು ಪಂಡಿತರು ಅವಿದ್ಯೆ ಎಂದು ಕರೆಯುತ್ತಾರೆ. ಇದರ ವಿವೇಕದಿಂದ ವಸ್ತುಸ್ವರೂಪವನ್ನು ಗೊತ್ತು ಮಾಡುವುದನ್ನು ವಿದ್ಯೆ ಎನ್ನುತ್ತಾರೆ (ಸೂ.ಭಾ.ಅ.೨) (ಅವಿವೇಕ ನಿಮಿತ್ತವಾದ ಇತರೇತರಾಧ್ಯಾಸವೇ ಅವಿದ್ಯೆ ಎಂದು ಹೇಳುತ್ತಾ ಯಾವ ಅವಿದ್ಯೆಯಿಂದ ಬ್ರಹ್ಮಾತ್ಮತ್ವವು ಅಡ್ಡಿಗೊಂಡಿದೆಯೋ ಆ ಅವಿದ್ಯೆಯ ಸ್ವರೂಪವನ್ನು (ಮೇಲೆ) ಸ್ಪಷ್ಟಪಡಿಸಿದೆ. ಅವುಗಳ ವಿವೇಕದಿಂದ ಆತ್ಮಾನಾತ್ಮರುಗಳ ಸತ್ಯತ್ವ ಮತ್ತು ಅನೃತತ್ವದ ರೂಪದಿಂದ ಸ್ವರೂಪವನ್ನು ಗೊತ್ತುಮಾಡುವುದೇ ವಿದ್ಯೆ ಎಂದು ಇಲ್ಲಿ ಹೇಳಿರುತ್ತದೆ).

ಹೀಗೆ ವಿದ್ಯಾವಿದ್ಯಾಧ್ಯಾರೋಪದಿಂದ ಬಂಧವು ಸತ್ಯವೆಂಬುದನ್ನೂ ಮುಕ್ತಿಯು ಆಗಂತುಕವೆಂಬುದನ್ನೂ ಅಲ್ಲಗಳೆದಿದೆ. ಇನ್ನು ಆತ್ಮನಿಗೆ ಜ್ಞಾನಿತ್ವವು

ಚ, ಪ್ರತಿಷಿದ್ಧಮ್ | ಅಥಾತ್ಮನೋ ವಿದ್ವತ್ತ್ವಮಪಿ ಅವಿದ್ವತ್ತ್ವವದೇವ ಸಮಾರೋಪಿತಮ್ ನಾತ್ಮನಃ ಸ್ವಭಾವಃ - ಇತ್ಯತ್ರ ಭಾಷ್ಯಮ್ -

(೪) ಯಥಾ ಬುದ್ಧ್ಯಾದ್ಯಾಹೃತಸ್ಯ ಶಬ್ದಾದ್ಯರ್ಥಸ್ಯ ಅವಿಕ್ರಿಯ ಏವ ಸನ್ ಬುದ್ಧಿವೃತ್ತ್ಯಾ ಅವಿವೇಕವಿಜ್ಞಾನೇನ ಅವಿದ್ಯಯಾ "ಉಪಲಬ್ಧಾ" ಆತ್ಮಾ ಕಲ್ಪ್ಯತೇ ಏವಮೇವ ಆತ್ಮಾನಾತ್ಮವಿವೇಕಜ್ಞಾನೇನ ಬುದ್ಧಿವೃತ್ತ್ಯಾ ವಿದ್ಯಯಾ ಅಸತ್ಯ-ರೂಪಯೈವ ಪರಮಾರ್ಥತೋಽವಿಕ್ರಿಯ ಏವಾತ್ಮಾ "ವಿದ್ವಾನ್" ಉಚ್ಯತೇ ||
ಗೀ.ಭಾ. ೨-೨೧,

[ಬುದ್ಧಿವೃತ್ತ್ಯುಪಾಧಿವಶಾದೇವ ವಿದ್ವತ್ತ್ವಾವಿದ್ವತ್ತ್ವವ್ಯವಹಾರಃ-ಇತ್ಯುಕ್ತಂ ಭವತಿ||]

(೫) ವಿವೇಕಾವಿವೇಕೌ ರೂಪಾದಿವತ್ ಪ್ರತ್ಯಕ್ಷೌ ಉಪಲಭ್ಯೇತೇ ಅಂತಃಕರಣಸ್ಥೌ| ನ ಹಿ ರೂಪಸ್ಯ ಪ್ರತ್ಯಕ್ಷಸ್ಯ ಸತೋ ದ್ರಷ್ಟೃಧರ್ಮತ್ವಮ್ | ಅವಿದ್ಯಾ ಚ ಸ್ವಾನುಭವೇನ ರೂಪ್ಯತೇ, "ಮೂಢೋಽಹಮ್ ಅವಿವಿಕ್ತಂ ಮಮ ವಿಜ್ಞಾನಮ್"

---

ಅಜ್ಞಾನಿತ್ವದಂತೆ ಆರೋಪಿತವಾದದ್ದು, ಆತ್ಮನ ಸ್ವಭಾವವಲ್ಲ ಎಂಬೀ ವಿಷಯದಲ್ಲಿ ಭಾಷ್ಯವಿದೆ.

(೪) "ಆತ್ಮನು ಅವಿಕ್ರಿಯನೇ ಆಗಿದ್ದರೂ ಬುದ್ಧಿಯೇ ಮುಂತಾದವುಗಳು ತಂದು ತೋರಿಸಿದ ಶಬ್ದವೇ ಮುಂತಾದ ವಿಷಯವನ್ನು ಅರಿಯುವವನೆಂದು ಆತ್ಮಾನಾತ್ಮಗಳನ್ನು ವಿಂಗಡಿಸಿಕೊಳ್ಳದ ಜ್ಞಾನವೆಂಬ ಬುದ್ಧಿವೃತ್ತಿಯಾದ ಅವಿದ್ಯೆಯಿಂದ ಹೇಗೆ ಕಲ್ಪಿಸಲ್ಪಡುತ್ತಾನೋ ಹಾಗೆಯೇ ನಿಜವಾಗಿ ಅವಿಕ್ರಿಯನೇ ಆಗಿರುವ ಆತ್ಮನು ಆತ್ಮಾನಾತ್ಮಗಳನ್ನು ವಿಂಗಡಿಸುವ ಜ್ಞಾನವೆಂಬ ಬುದ್ಧಿವೃತ್ತಿಯಾದ ಅಸತ್ಯರೂಪವಾಗಿಯೇ ಇರುವ ವಿದ್ಯೆಯಿಂದ ಜ್ಞಾನಿ ಎನಿಸಿಕೊಳ್ಳುತ್ತಾನೆ". (ಗೀ.ಭಾ. ೨-೨೧, ಭಾ.ಭಾ. ೪೩) (ಬುದ್ಧಿವೃತ್ತಿಯೆಂಬ ಉಪಾಧಿವಶದಿಂದಲೇ ವಿದ್ವತ್ತ್ವಾವಿದ್ವತ್ತ್ವವ್ಯವಹಾರವು (ಆತ್ಮನಿಗೆ) ಬಂದಿದೆ ಎಂದು ಹೇಳಿದಂತಾಯಿತು).

(೫) ವಿವೇಕಾವಿವೇಕಗಳು, ರೂಪವೇ ಮುಂತಾದವುಗಳಂತೆಯೇ ಅಂತಃಕರಣದಲ್ಲಿರುವುದು ಪ್ರತ್ಯಕ್ಷವಾಗಿರುತ್ತದೆ. ಪ್ರತ್ಯಕ್ಷವಾದ ರೂಪವು ಅದನ್ನು ನೋಡುವವನ ಧರ್ಮವಲ್ಲವಷ್ಟೆ? "ನಾನು ಮೂಢನು ನನ್ನ ಜ್ಞಾನವು ವಿಂಗಡಿಸಿ ತಿಳಿದಿಲ್ಲ" ಎಂದು ಅವಿದ್ಯೆಯು ತನ್ನ ಅನುಭವಕ್ಕೆ ವಿಷಯ-ವಾಗಿರುತ್ತದೆ. ಇದರಂತೆ ವಿದ್ಯೆ ಎಂಬ ವಿವೇಕವೂ ಅನುಭವಕ್ಕೆ ಬರುತ್ತದೆ.

ಇತಿ | ತಥಾ ವಿದ್ಯಾವಿವೇಕೋಽನುಭೂಯತೇ | ಉಪದಿಶಂತಿ ಚಾನ್ಯೇಭ್ಯ ಆತ್ಮನೋ ವಿದ್ಯಾಂ ಬುಧಾಃ | ತಥಾ ಚಾನ್ಯೇ ಅವಧಾರಯಂತಿ | ತಸ್ಮಾತ್ ನಾಮರೂಪ-ಪಕ್ಷಸ್ಯೈವ ವಿದ್ಯಾವಿದ್ಯೇ, ನಾಮರೂಪೇ ಚ ನಾತ್ಮಧರ್ಮೌ ||

ತೈ.ಭಾ. ೨-೮.

(೬) ತಿಮಿರಾತಿಮಿರದೃಷ್ಟಿವತ್ ಅವಿದ್ಯಾಕರ್ತೃತ್ವಾಕರ್ತೃತ್ವಕೃತ ಆತ್ಮನೋ ವಿಶೇಷಃ ಸ್ಯಾತ್ ಇತಿ ಚೇತ್ | ನ | "ಧ್ಯಾಯತೀವ ಲೇಲಾಯತೀವ" ಇತಿ ಸ್ವತೋಽವಿದ್ಯಾಕರ್ತೃತ್ವಸ್ಯ ಪ್ರತಿಷಿದ್ಧತ್ವಾತ್ || ಬೃ.ಭಾ. ೪-೪-೬.

[ ವಿದ್ಯಾವಿದ್ಯಯೋರನಾತ್ಮಧರ್ಮತ್ವಮೇವ, ವಿಷಯತ್ವಾತ್ ಆತ್ಮನಸ್ತದ್ವತ್ತ್ವ-ಪ್ರತೀತಿಸ್ತ್ವಾಭಾಸಮಾತ್ರಮ್ - ಇತ್ಯುಕ್ತಮತ್ರ || ]

ಏವಂ ಚಾತ್ರ ವಿದ್ಯಾವಿದ್ಯಾಪ್ರಕ್ರಿಯೇಯಮಾತ್ಮನಿ ಪರತಂತ್ರಸಂವೃತ್ತ್ಯಾ

---

ತಿಳಿದವರು ತಮ್ಮ ವಿದ್ಯೆಯನ್ನು ಮತ್ತೊಬ್ಬರಿಗೆ ಉಪದೇಶ ಮಾಡುತ್ತಾರೆ ಹಾಗೂ ಆ ಮತ್ತೊಬ್ಬರೂ ಅದನ್ನು ಗೊತ್ತುಪಡಿಸಿಕೊಳ್ಳುತ್ತಾರೆ. ಆದ್ದರಿಂದ ವಿದ್ಯಾವಿದ್ಯೆಗಳೆರಡೂ ನಾಮರೂಪಗಳ ಪಕ್ಷಕ್ಕೆ ಸೇರಿದವುಗಳು. ನಾಮರೂಪಗಳು ಆತ್ಮಧರ್ಮವಲ್ಲ (ತೈ.ಭಾ. ೨-೮. ಭಾ.ಭಾ. ೨೧೬)

(೬) ತಿಮಿರ ಅತಿಮಿರ ದೃಷ್ಟಿಯಿಂದಾಗುವಂತೆ, ಅವಿದ್ಯೆಗೆ ಕರ್ತೃವಾಗಿರು-ವುದು ಆಗದೇ ಇರುವುದೆಂಬುದರಿಂದ ಆತ್ಮನಿಗೆ ವಿಶೇಷವಾಗಬಹುದಲ್ಲ! ಎಂದರೆ ಅದು ಸರಿಯಲ್ಲ, "ಧ್ಯಾನಿಸುತ್ತಿರುವಂತೆಯೂ, ಅಲುಗಾಡುತ್ತಿರು-ವಂತೆಯೂ" ಎಂದು ಶ್ರುತಿಯು (ತಿಳಿಸುತ್ತಿರುವುದರಿಂದ) ಸ್ವತಃ ಅವಿದ್ಯಾಕತೃವಾಗಿದ್ದಾನೆಂಬುದನ್ನೂ ಅಲ್ಲಗಳೆದಿರುತ್ತದೆ (ಬೃ-೪-೪-೬).

(ವಿದ್ಯಾವಿದ್ಯೆಗಳು ವಿಷಯವಾದ್ದರಿಂದ ಅನಾತ್ಮಧರ್ಮವೇ ಆಗಿವೆಯೆಂತಲೂ ಆತ್ಮನು ಅದನ್ನುಳ್ಳವನಂತೆ ತೋರುವುದು ಕೇವಲ ಆಭಾಸಮಾತ್ರವೆಂತಲೂ ಇಲ್ಲಿ ಹೇಳಿದೆ).

ಈ ರೀತಿಯಾಗಿ ಇಲ್ಲಿ ಈ ವಿದ್ಯಾವಿದ್ಯೆಗಳ ಪ್ರಕ್ರಿಯೆಯು ಆತ್ಮನಲ್ಲಿ ಮತ್ತೊಬ್ಬರ ಶಾಸ್ತ್ರದ ವ್ಯವಹಾರದಿಂದ ಬೇರೊಬ್ಬರ ದೃಷ್ಟಿಯನ್ನು ಒಪ್ಪಿ ಜ್ಞಾತೃತ್ವವನ್ನು ಅಧ್ಯಾರೋಪಿಸಿಕೊಂಡೇ ಹೇಳಿದ್ದೇ ಹೊರತು ನಿಜವಾಗಿ ಆತ್ಮನು ಜ್ಞಾತೃವೆಂಬುದೂ ಅಲ್ಲ. "ಯಾವುದು ಕಲ್ಪಿತ ಸಂವೃತಿಯಿಂದ

ಜ್ಞಾತೃತ್ವಮಧ್ಯಾರೋಪ್ಯೈವ, ಪರಮಾರ್ಥತಸ್ತು ನೈವ ಜ್ಞಾತಾಪ್ಯಾತ್ಮಾ ಇತಿ -

ಯೋಽಸ್ತಿ ಕಲ್ಪಿತಸಂವೃತ್ಯಾ ಪರಮಾರ್ಥೇನ ನಾಸ್ತ್ಯಸೌ |
ಪರತಂತ್ರಾಭಿಸಂವೃತ್ಯಾ ಸ್ಯಾನ್ನಾಸ್ತಿ ಪರಮಾರ್ಥತಃ || ಗೌ.ಕಾ. ೪-೭೩.

ಇತಿ ಸಂಪ್ರದಾಯಾನುಗಮಾದಿತಿ ಜ್ಞೇಯಮ್ ||

೨೯. **ಶಾಸ್ತ್ರಪ್ರಾಮಾಣ್ಯಪ್ರಕ್ರಿಯಾ** - ಏವಂ "ತಂ ತ್ವೌಪನಿಷದಂ ಪೃಚ್ಛಾಮಿ" (ಬೃ. ೩-೯-೨೬), "ಸರ್ವೇ ವೇದಾ ಯತ್ಪದಮಾಮನಂತಿ" (ಕಾ. ೧-೨-೧೫) ಇತಿ ಚ ಶ್ರುತೇಃ, ಆತ್ಮನ ಉಪನಿಷನ್ಮಾತ್ರವೇದ್ಯತ್ವೋಕ್ತಿಃ ಪ್ರತ್ಯಕ್ಷಾದಿಪ್ರಮಾಣಾಂತರಾಗಮ್ಯತ್ವದ್ಯೋತನಾಯೈವ, ನ ತು ಶಬ್ದಜ್ಞಾಪ್ಯತ್ವಮಂಗೀಕೃತ್ಯ ಯಥಾಹ ಭಗವಾನ್ ಭಾಷ್ಯಕಾರಃ -

---

ಇರುವುದೋ, ಅದು ಪರಮಾರ್ಥದಿಂದ ಇರುವುದಿಲ್ಲ. ಪರತಂತ್ರಾಭಿಸಂವೃತ್ತಿಯಿಂದ ಇರಬಹುದು ನಿಜವಾಗಿರುವುದಿಲ್ಲ (ಗೌ.ಕಾ. ೪-೭೩) ಎಂದು ಹೀಗೆ ಸಂಪ್ರದಾಯವನ್ನನುಸರಿಸಿದ್ದಾದ ವಿಚಾರವೆಂದು ತಿಳಿಯಬೇಕು.

**೨೯) ಶಾಸ್ತ್ರಪ್ರಾಮಾಣ್ಯದ ಪ್ರಕ್ರಿಯೆಯು** - ಹೀಗೆಯೇ "ಆ ಉಪನಿಷತ್ತಿನಲ್ಲಿ ತಿಳಿಸಿದ ಆತ್ಮನನ್ನು ಕೇಳುತ್ತೇನೆ" (ಬೃ. ೩-೯-೨೬). "ಎಲ್ಲಾ ವೇದಗಳೂ ಯಾವ ಸ್ಥಾನವನ್ನು ಕುರಿತು ಹೇಳುತ್ತಿವೆಯೋ" (ಕಾಠ. ೧-೨-೧೫) ಎಂಬುದಾಗಿ ಶ್ರುತಿಗಳು ಆತ್ಮನು ಕೇವಲ ಉಪನಿಷತ್ತಿನಿಂದಲೇ ತಿಳಿದುಬರುವವನು ಎಂದು ಹೇಳುತ್ತಿರುವ ಅಭಿಪ್ರಾಯವೇನೆಂದರೆ ಪ್ರತ್ಯಕ್ಷವೇ ಮುಂತಾದ ಬೇರೆ ಪ್ರಮಾಣಗಳಿಗೆ ತಿಳಿದುಬರುವವನಲ್ಲ, ಎಂದು ತಿಳಿಸುವುದಷ್ಟಕ್ಕೆ, ಹೊರತು, ಶ್ರುತಿಗೆ ವಿಷಯವಾಗಿದೆ ಎಂಬುದನ್ನು ಒಪ್ಪಿಕೊಂಡು ಹೇಳಿದ್ದಲ್ಲ. ಭಗವನ್ತರಾದ ಭಾಷ್ಯಕಾರರೂ ಹೀಗೆ ಹೇಳುತ್ತಾರೆ - (೧) "ವಾಕ್ಯಾರ್ಥವನ್ನು ವಿಚಾರಮಾಡಿ ಗೊತ್ತುಮಾಡುವುದರಿಂದ ಬ್ರಹ್ಮಜ್ಞಾನವಾದೀತೇ ಹೊರತು ಅನುಮಾನವೇ ಮುಂತಾದ ಬೇರೆ ಪ್ರಮಾಣದಿಂದ ತಿಳಿದುಬರುವವನಲ್ಲ" (ಸೂ.ಭಾ. ೧-೧-೨). (೨) ರೂಪಾದಿಗಳು ಯಾವುದೂ ಇಲ್ಲವಾದ್ದರಿಂದ ಈ ವಿಷಯವು ಪ್ರತ್ಯಕ್ಷಗೋಚರವಲ್ಲ, ಗುರುತೇ ಮುಂತಾದವುಗಳಿಲ್ಲವಾದ್ದರಿಂದ ಅನುಮಾನವೇ ಮುಂತಾದಕ್ಕೂ ಗೋಚರವಲ್ಲ. ಧರ್ಮವಿಚಾರ ಹೇಗೆ ಶ್ರುತಿಯಿಂದ ಮಾತ್ರ ತಿಳಿದುಬರುವುದೋ ಅದರಂತೆ

(೧) ವಾಕ್ಯಾರ್ಥವಿಚಾರಣಾಧ್ಯವಸಾನನಿರ್ವೃತ್ತಾ ಹಿ ಬ್ರಹ್ಮಾವಗತಿಃ, ನಾನುಮಾನಾದಿಪ್ರಮಾಣಾಂತರನಿರ್ವೃತ್ತಾ || ಸೂ.ಭಾ. ೧-೧-೨.

(೨) ರೂಪಾದ್ಯಭಾವಾದ್ ಹಿ ನಾಯಮರ್ಥಃ ಪ್ರತ್ಯಕ್ಷಸ್ಯ ಗೋಚರಃ | ಲಿಂಗಾದ್ಯಭಾವಾಚ್ಚ ನಾನುಮಾನಾದೀನಾಮ್ | ಆಗಮಮಾತ್ರಸಮಧಿಗಮ್ಯ ಏವ ತ್ವಯಮರ್ಥೋ ಧರ್ಮವತ್ || ಸೂ.ಭಾ. ೨-೧-೬.

ಆಗಮಮಾತ್ರಸಮಧಿಗಮ್ಯತ್ವಮೇವ ತ್ವಭಿಪ್ರೇತ್ಯ ಸೂತ್ರಿತಂ ಭಗವತಾ ಬಾದರಾಯಣೇನ "ಶಾಸ್ತ್ರಯೋನಿತ್ವಾತ್" (ವೇ.ಸೂ. ೧-೧-೩) ಇತಿ, ಭಾಷಿತಂ ಚ ಭಾಷ್ಯಕಾರೇಣ "ಶಾಸ್ತ್ರಾದೇವ ಪ್ರಮಾಣಾತ್ ಜಗತೋ ಜನ್ಮಾದಿಕಾರಣಂ ಬ್ರಹ್ಮಾಧಿಗಮ್ಯತ - ಇತ್ಯಭಿಪ್ರಾಯಃ" ಇತಿ | ನ ತು ತಾವತಾ ಪ್ರಮಾಣಪ್ರಮೇಯ-ವ್ಯವಹಾರಃ ಪಾರಮಾರ್ಥಿಕ - ಇತಿ, ಶಾಸ್ತ್ರಂ ಚ ಪ್ರತ್ಯಕ್ಷಾದಿಪ್ರಮಾಣವದೇವ ಪ್ರಮಾಣಾದನಧಿಗತಂ ಬ್ರಹ್ಮ ಜ್ಞಾಪಯತೀತಿ ವಾ ಭ್ರಮಿತವ್ಯಮ್ "ಯದ್ವಾಚಾ-

---

(ಇದು) ಶ್ರುತಿಯಿಂದ ಮಾತ್ರ ತಿಳಿದುಬರುವಂಥದ್ದಾಗಿದೆ. (ಸೂ.ಭಾ. ೨–೧–೬) ಆಗಮ ಮಾತ್ರಕ್ಕೆ ತಿಳಿದುಬರುವಂಥದ್ದೆಂದು ಅಭಿಪ್ರಾಯಪಟ್ಟುಕೊಂಡೇ ಭಗವನ್ತರಾದ (ಸೂತ್ರಕಾರರಾದ) ಬಾದರಾಯಣರು "ಶಾಸ್ತ್ರಯೋನಿತ್ವಾತ್" (೧–೧–೩) ಎಂದು ಸೂತ್ರಮಾಡಿರುತ್ತಾರೆ. (ಇಲ್ಲಿ) ಭಾಷ್ಯಕಾರರೂ ಸಹ – "ಜಗತ್ತಿನ ಜನ್ಮಾದಿಗಳಿಗೆ ಕಾರಣವಾದ ಬ್ರಹ್ಮವು ಶಾಸ್ತ್ರಪ್ರಮಾಣದಿಂದಲೇ ತಿಳಿದು ಬರುವಂಥದ್ದಾಗಿದೆ ಎಂದಭಿಪ್ರಾಯವು" ಎಂದಿರುತ್ತಾರೆ. ಇಷ್ಟು ಹೇಳಿದ್ದರಿಂದ ಪ್ರಮಾಣಪ್ರಮೇಯ ವ್ಯವಹಾರವು ನಿಜವೆಂತಾಗಲೀ ಪ್ರತ್ಯಕ್ಷಾದಿ ಪ್ರಮಾಣದಂತೆ ಶಾಸ್ತ್ರವು ಪ್ರಮಾಣಕ್ಕೆ ತಿಳಿದುಬರದ ಬ್ರಹ್ಮವನ್ನು ತಿಳಿಸಿಕೊಡುತ್ತದೆ ಎಂದಾಗಲೀ ಭ್ರಮಿಸಬಾರದು. "ಯಾವುದನ್ನು ಮಾತಿನಿಂದ ಹೇಳಲಾಗುವುದಿಲ್ಲವೋ, ಯಾವುದರಿಂದಲೇ ಮಾತು (ತನ್ನ ವಿಷಯವನ್ನು) ಹೇಳುತ್ತಿದೆಯೋ "(ಕೇನ ೧–೫) ಎಂಬುದಾಗಿ ಶ್ರುತಿಯಿರುತ್ತದೆ. ಪ್ರಮಾಣಗಳೂ ಮತ್ತು ಶಾಸ್ತ್ರಗಳೂ ಸಹ ಅವಿದ್ಯೆಯನ್ನು ಮುಂದುಮಾಡಿಕೊಂಡೇ ಹೊರಟಿರುವುದರಿಂದಲೂ (ಇದು ಹೀಗೆಯೇ). ಇಲ್ಲಿ ಭಾಷ್ಯಕಾರರೂ (ಸಹ ಹೀಗೆ ಹೇಳಿರುತ್ತಾರೆ) – "ಶಾಸ್ತ್ರವಾದರೋ ಕೊನೆಯ ಪ್ರಮಾಣವು, ಅದರದ್ದಲ್ಲದ ಆರೋಪಿಸಿದ್ದಾದ ಧರ್ಮವನ್ನು ತೆಗೆದು–ಹಾಕುವುದಷ್ಟರ ಮಾತ್ರದಿಂದಲೇ ಅದು ಪ್ರಮಾಣವೆನಿಸಿಕೊಂಡಿದೆಯೋ ಹೊರತು ಗೊತ್ತಿಲ್ಲದ್ದನ್ನು ಗೊತ್ತುಮಾಡಿಸುವುದರಿಂದ ಪ್ರಮಾಣವಾಗಿರು–

ನಭ್ಯುದಿತಂ ಯೇನ ವಾಗಭ್ಯುದ್ಯತೇ" (ಕೇ. ೧-೫) ಇತ್ಯಾದಿಶ್ರುತೇಃ | ಪ್ರಮಾಣಾನಾಂ ಶಾಸ್ತ್ರಾಣಾಂ ಚ, ಅವಿದ್ಯಾಪುರಸ್ಸರಮೇವ ಪ್ರವೃತ್ತೇಶ್ಚ | ಯದಾಹ ಭಾಷ್ಯಕಾರಃ -

(೧) ಶಾಸ್ತ್ರಂ ತು ಅಂತ್ಯಂ ಪ್ರಮಾಣಮ್ ಅತದ್ಧರ್ಮಾಧ್ಯಾರೋಪಣ-ಮಾತ್ರನಿವರ್ತಕತ್ವೇನ ಪ್ರಾಮಾಣ್ಯಮಾತ್ಮನಃ ಪ್ರತಿಪದ್ಯತೇ, ನ ತ್ವಜ್ಞಾತಾರ್ಥಜ್ಞಾಪಕತ್ವೇನ || ಗೀ.ಭಾ. ೨-೧೮.

[ ಅತದ್ಧರ್ಮನಿವರ್ತಕತ್ವಮಾತ್ರೇಣ ಇತಿ ಭಿನ್ನಕ್ರಮೋ ಮಾತ್ರಶಬ್ದಃ ]

(೨) ಪ್ರಮಾತೃತ್ವಂ ಹಿ ಆತ್ಮನೋ ನಿವರ್ತಯತಿ ಅಂತ್ಯಂ ಪ್ರಮಾಣಮ್, ನಿವರ್ತಯದೇವ ಚ ಅಪ್ರಮಾಣೀಭವತಿ ಸ್ವಪ್ನಕಾಲಪ್ರಮಾಣಮಿವ ಪ್ರಬೋಧೇ|| ಗೀ.ಭಾ. ೨-೬೯.

[ ಅವಿದ್ಯಾಕೃತಪ್ರಮಾತಾರಮಾಶ್ರಿತ್ಯೈವ ಪ್ರಮಾಣವ್ಯವಹಾರಪ್ರವೃತ್ತೇಃ, ಶ್ರುತೇರಪಿ ಪ್ರಮಾಣತ್ವಮವಿದ್ಯಾದೃಷ್ಟ್ಯೈವೋಪಚರ್ಯತೇ - ಇತಿ ಭಾವಃ || ]

---

ವುದಿಲ್ಲ" (ಗೀ.ಭಾ. ೨–೧೮), (ಈ ವಾಕ್ಯದಲ್ಲಿ "ಮಾತ್ರ" ಎಂಬ ಪದವನ್ನು ಅತದ್ಧರ್ಮನಿವರ್ತಕತ್ವಮಾತ್ರೇಣ ಎಂದೀರೀತಿಯಾಗಿ ಅನ್ವಯುವನ್ನು ಮಾಡಿಕೊಳ್ಳಬೇಕು). ಅನ್ತ್ಯಪ್ರಮಾಣವಾದ ಶಾಸ್ತ್ರವು ನಮಗಿರುವ ಪ್ರಮಾತೃತ್ವವನ್ನೇ ತೆಗೆದುಹಾಕುತ್ತದೆ. ಹೀಗೆ ತೆಗೆದುಹಾಕುತ್ತಲೇ ತಾನೂ ಸಹ – ಸ್ವಪ್ನಕಾಲದ ಪ್ರಮಾಣಗಳು ಎಚ್ಚರದಲ್ಲಿ ಅಪ್ರಮಾಣವಾಗುವ ಹಾಗೆ – ಅಪ್ರಮಾಣವಾಗುತ್ತದೆ (೨–೬೯. ಗೀ.ಭಾ.)

(ಅವಿದ್ಯಾಕೃತವಾದ ಪ್ರಮಾತೃವನ್ನಾಶ್ರಯಿಸಿಕೊಂಡೇ ಪ್ರಮಾಣವ್ಯವಹಾರವು ಹೊರಡುವುದಾದ್ದರಿಂದಲೂ ಶ್ರುತಿಯೂ ಸಹ ಪ್ರಮಾಣವಾಗಿರುವುದು ಅವಿದ್ಯಾ ದೃಷ್ಟಿಯಿಂದಲೇ, ಉಪಚಾರಕ್ಕೆ ಹೇಳಿದ್ದು ಎಂದಭಿಪ್ರಾಯವು).

(೩) ಆ ಅವಿದ್ಯೆ ಎಂಬ ಹೆಸರಿನ ಆತ್ಮಾನಾತ್ಮರುಗಳ ಇತರೇತರಾ-ಧ್ಯಾಸವನ್ನು ಮುಂದುಮಾಡಿಕೊಂಡೇ ಎಲ್ಲಾ ಪ್ರಮಾಣಪ್ರಮೇಯ ವ್ಯವ-ಹಾರಗಳು ಲೌಕಿಕವೈದಿಕ ವ್ಯವಹಾರಗಳೂ ಹೊರಟಿರುತ್ತದೆ. ಎಲ್ಲಾ ವಿಧಿಪ್ರತಿಷೇಧ ಮತ್ತು ಮೋಕ್ಷವನ್ನು ಹೇಳುವ ಶಾಸ್ತ್ರವೂ ಹೊರಟಿರುತ್ತವೆ. (ಸೂ.ಭಾ. ಅ. ೨) (ಇಲ್ಲಿ "ಸರ್ವೇ" ಎಂದು ಸಾಮಾನ್ಯವಾಗಿ

(೩) ತಮೇತಮವಿದ್ಯಾಖ್ಯಮ್ ಆತ್ಮಾನಾತ್ಮನೋರಿತರೇತರಾಧ್ಯಾಸಂ ಪುರಸ್ಕೃತ್ಯ ಸರ್ವೇ ಪ್ರಮಾಣಪ್ರಮೇಯವ್ಯವಹಾರಾಃ ಲೌಕಿಕಾ ವೈದಿಕಾಶ್ಚ ಪ್ರವೃತ್ತಾಃ | ಸರ್ವಾಣಿ ಚ ಶಾಸ್ತ್ರಾಣಿ ವಿಧಿಪ್ರತಿಷೇಧಮೋಕ್ಷಪರಾಣಿ || ಅಧ್ಯಾಸಭಾಷ್ಯಮ್, ಸೂ.ಭಾ.

[ "ಸರ್ವೇ" ಇತ್ಯವಿಶೇಷವಚನಾತ್ ಮುಮುಕ್ಷುಮುಕ್ತವ್ಯವಹಾರಾ ಅಪಿ ಅವಿದ್ಯಾದೃಷ್ಟ್ಯೈವೇತ್ಯುಕ್ತಂ ಭವತಿ | "ಮೋಕ್ಷಪರಾಣಿ" ಇತ್ಯನೇನ ಆತ್ಮವಿಷಯಕಮಪಿ ಶಾಸ್ತ್ರಂ ಸಾಂವೃತಿಕಪ್ರಮಾಣವ್ಯವಹಾರಮಾಶ್ರಿತ್ಯೈವ ಪ್ರವೃತ್ತಮಿತ್ಯುಕ್ತಂ ಭವತಿ || ]

ತದೇವಂ ವೇದಾಂತಿನಾಂ ಪ್ರಮಾಣಪ್ರಮೇಯವ್ಯವಹಾರಃ, ಶಾಸ್ತ್ರಾದಿವ್ಯವಹಾರಶ್ಚ ತತ್ತ್ವೋಪದೇಶಾರ್ಥಮ್ ಅಧ್ಯಾರೋಪಾಪವಾದಪ್ರಕ್ರಿಯಾಮಾಶ್ರಿತ್ಯೈವೇತಿ ಸಿದ್ಧಮ್||

೩೦. ಸೃಷ್ಟಿಪ್ರಕ್ರಿಯಾ - ವೇದಾಂತೇಷು ಯಥೈವ ಜೀವಬ್ರಹ್ಮಣೋರ್ಭೇದಮುರರೀಕೃತ್ಯ, ಜೀವೇ ಜ್ಞಾತೃತ್ವಂ ಬ್ರಹ್ಮಣಿ ಜ್ಞೇಯತ್ವಂ ಚಾಧ್ಯಾರೋಪ್ಯ, ಬ್ರಹ್ಮಜಿಜ್ಞಾಸಾ ಕರ್ತವ್ಯವತ್ತ್ವೇನೋಪದಿಶ್ಯತೇ, ಏವಮೇವ ಜೀವೇಶ್ವರಭೇದ-

---

ಹೇಳಿರುವುದರಿಂದ ಮುಮುಕ್ಷು, ಮುಕ್ತ ಎಂಬ ವ್ಯವಹಾರವೂ ಸಹ ಅವಿದ್ಯಾದೃಷ್ಟಿಯಿಂದಲೇ ಎಂದು ಹೇಳಿದಂತಾಯಿತು. "ಮೋಕ್ಷಪರಾಣಿ" ಎಂದು ಹೇಳುತ್ತಾ ಆತ್ಮನನ್ನು ತಿಳಿಸುವ ಶಾಸ್ತ್ರವೂ ಸಹ ಆವಿದ್ಯಕವಾದ ಪ್ರಮಾಣವ್ಯವಹಾರವನ್ನಾಶ್ರಯಿಸಿಯೇ ಹೊರಟದ್ದು ಎಂದು ಹೇಳಿದಂತಾಯಿತು) ಹೀಗೆ ವೇದಾಂತಿಗಳ ಪ್ರಮಾಣ ಪ್ರಮೇಯ ವ್ಯವಹಾರವೂ ಶಾಸ್ತ್ರವೇ ಮುಂತಾದ ವ್ಯವಹಾರವೂ ಸಹ ತತ್ತ್ವವನ್ನು ಉಪದೇಶವಮಾಡುವುದಕ್ಕಾಗಿ ಅಧ್ಯಾರೋಪಾಪವಾದ ಪ್ರಕ್ರಿಯೆಯನ್ನು ಆಶ್ರಯಿಸಿಕೊಂಡೇ ಹೊರಟದ್ದು ಎಂಬುದು ಸಿದ್ಧವಾಯಿತು.

**೩೦) ಸೃಷ್ಟಿಪ್ರಕ್ರಿಯೆಯು** – ಹೇಗೆ ವೇದಾನ್ತಗಳಲ್ಲಿ ಜೀವಬ್ರಹ್ಮರ ಭೇದವನ್ನು ಒಪ್ಪಿಕೊಂಡು ಜೀವನು ಜ್ಞಾತೃವೆಂದೂ ಬ್ರಹ್ಮವು ಜ್ಞೇಯವೆಂದೂ ಅಧ್ಯಾರೋಪವನ್ನು ಮಾಡಿಕೊಂಡು ಬ್ರಹ್ಮಜಿಜ್ಞಾಸೆಯನ್ನು ಮಾಡಬೇಕೆಂದು ಉಪದೇಶವನ್ನು ಮಾಡಿರುತ್ತದೋ ಹಾಗೆಯೇ (ಅದೇ) ಜೀವೇಶ್ವರಭೇದವನ್ನು ಆಶ್ರಯಿಸಿಕೊಂಡು ಬ್ರಹ್ಮವು ಜಗತ್ತಿನ ಜನ್ಮಾದಿಗಳಿಗೆ ಕಾರಣವಾಗಿದೆಯೆಂತಲೂ ಸೃಷ್ಟಿಯಾದ ಜಗತ್ತಿನೊಳಗೆ ಜೀವರೂಪದಿಂದ ಪ್ರವೇಶವನ್ನು ಮಾಡಿರುವುದೆಂತಲೂ ಮತ್ತೆ ಅದೇ ಬ್ರಹ್ಮದಲ್ಲಿಯೇ ಅಡಗುತ್ತದೆಯೆಂತಲೂ

ಮುಪಜೀವ್ಯ ಬ್ರಹ್ಮಣೋ ಜಗಜ್ಜನ್ಮಾದಿಕಾರಣತ್ವಮ್, ಸೃಷ್ಟೇ ಜಗತಿ ಜೀವಾತ್ಮನಾ ಪ್ರವೇಶಃ, ಪುನರಪಿ ತಸ್ಮಿನ್ನೇವ ಬ್ರಹ್ಮಣಿ ತದಪ್ಯಯಶ್ಚ - ಇತ್ಯೇತತ್ ಸರ್ವಮುಪದಿಶ್ಯತೇ| ಜೀವಸ್ಯ ಅವಸ್ಥಾಭೇದಾಃ, ಗತ್ಯಾಗತೀ, ಜನ್ಮಮರಣಾದಿಸಂಸಾರಃ ಜ್ಞಾನಾವಾಪ್ತ್ಯಾ ಮೋಕ್ಷಶ್ಚ - ಇತ್ಯೇತೇ ಅಪಿ ತಥೈವ | ತದೇತತ್ ಸರ್ವಮಧ್ಯಾರೋಪಾಪವಾದ-ಪ್ರಕ್ರಿಯಾಮವಲಂಬ್ಯ ಪರಮಾತ್ಮತತ್ತ್ವಂ ಪ್ರತಿಬೋಧಯಿತುಮುಪಾಯತ್ವೇನೈವ, ನ ತು ವಸ್ತುತೋಽಪಿ ಬ್ರಹ್ಮಣಃ ಜಗಜ್ಜನ್ಮಾದಿಕಾರಣತ್ವಮ್, ಸೃಷ್ಟೇ ಜಗತಿ ಜೀವರೂಪೇಣ ಪ್ರವೇಶಃ, ಜೀವಾನಾಂ ಬಂಧಮೋಕ್ಷಾವಾಪ್ತಿಶ್ಚ ತಥ್ಯತ ಏವ - ಇತಿ ಕೃತ್ವಾ | ತದೇತತ್ ಶ್ರೀಗೌಡಪಾದಾಚಾರ್ಯೈರೇವಂ ಶ್ಲೋಕೇನ ಸಂಗೃಹೀತಮ್ -

> ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕಃ |
> ನ ಮುಮುಕ್ಷುರ್ನ ವೈ ಮುಕ್ತ ಇತ್ಯೇಷಾ ಪರಮಾರ್ಥತಾ || ೨-೩೨.

ಇತಿ | ತತ್ರ ಜಗತ್ಸೃಷ್ಟಿಮುಪಜೀವ್ಯೈವ ಜೀವಾನಾಂ ಸ್ವರೂಪಮ್, ಅವಸ್ಥಾ,

---

ಉಪದೇಶವನ್ನು ಮಾಡಿರುತ್ತದೆ. ಹಾಗೆಯೇ ಜೀವನ ಅವಸ್ಥಾಭೇದಗಳು, ಗತ್ಯಾಗತಿಗಳು, ಜನ್ಮಮರಣಾದಿ ಸಂಸಾರವೂ, ಜ್ಞಾನವನ್ನು ಪಡೆಯುವುದರಿಂದ ಮೋಕ್ಷವಾಗುವುದೆಂಬ ವ್ಯವಹಾರವೂ (ಅಧ್ಯಾರೋಪದಿಂದಲೇ ವರ್ಣಿಸಿ-ರುತ್ತದೆ). ಇದೆಲ್ಲವೂ ಅಧ್ಯಾರೋಪಾಪವಾದ ಪ್ರಕ್ರಿಯೆಯನ್ನವ-ಲಂಬಿಸಿಕೊಂಡು ಪರಮಾತ್ಮತತ್ತ್ವವನ್ನು ತಿಳಿಸಿಕೊಡುವುದಕ್ಕೆ ಉಪಾಯವಾಗಿ ಹೇಳಿರುತ್ತದೆ. ಇಷ್ಟೇ ಹೊರತು ನಿಜವಾಗಿ ಬ್ರಹ್ಮವು ಜಗತ್ತಿನ ಜನ್ಮಾದಿಗಳಿಗೆ ಕಾರಣವಾಗಿದೆ ಎಂದಾಗಲೀ, ಸೃಷ್ಟವಾದ ಜಗತ್ತಿನೊಳಗೆ ಜೀವರೂಪದಿಂದ ಪ್ರವೇಶವನ್ನು ಮಾಡಿದೆ ಎಂದಾಗಲೀ, ಜೀವರಿಗೆ ಬಂಧಮೋಕ್ಷ ಪ್ರಾಪ್ತಿಯು ನಿಜವಾಗಿದೆ ಎಂದಾಗಲಿ ಇಟ್ಟುಕೊಂಡು ಹೇಳಿದ್ದಲ್ಲ. ಇದೆಲ್ಲವನ್ನೂ ಶ್ರೀಗೌಡಪಾದಾಚಾರ್ಯರು ಶ್ಲೋಕದಿಂದ ಸಂಗ್ರಹಿಸಿರುತ್ತಾರೆ. "ಪ್ರಳಯುವಾಗಲೀ ಉತ್ಪತ್ತಿಯಾಗಲೀ ಬದ್ಧನಾಗಲೀ, ಸಾಧಕನಾಗಲೀ ಮುಮುಕ್ಷುವಾಗಲೀ, ಮುಕ್ತನಾಗಲೀ ನಿಜವಾಗಿರುವುದಲ್ಲ ಎಂಬುದೇ ಸತ್ಯವಾದದ್ದು" (ಗೌ.ಕಾ. ೨-೩೨). ಇಲ್ಲಿ ಜಗತ್ತಿನ ಸೃಷ್ಟಿಯನ್ನುಪ-ಜೀವಿಸಿಕೊಂಡೇ ಜೀವರುಗಳ ಸ್ವರೂಪವನ್ನೂ ಅವಸ್ಥೆಯನ್ನೂ ಗತ್ಯಾಗತ್ಯಾದಿ ಸಂಸಾರಬಂಧವನ್ನೂ ಆಮೇಲೆ ಮೋಕ್ಷವನ್ನೂ ಮೋಕ್ಷಸಾಧನವನ್ನೂ ಹೀಗೆ ಇದೆಲ್ಲವನ್ನೂ ವಿಚಾರಿಸಬೇಕೆಂದಾದ್ದರಿಂದ ಮೊಟ್ಟಮೊದಲು ಸೃಷ್ಟಿ

ಗತ್ಯಾಗತ್ಯಾದಿಸಂಸಾರಬಂಧಃ, ತತೋ ಮೋಕ್ಷಃ, ಮೋಕ್ಷಸಾಧನಂ ಚ - ಇತ್ಯೇತತ್ಸರ್ವಂ ವಿಚಾರಣೀಯಮಿತಿ ಪ್ರಪ್ರಥಮಂ ಸೃಷ್ಟಿಪ್ರಕ್ರಿಯಾ ವಿಚಾರ್ಯತೇ ||

ಸೃಷ್ಟಿಶ್ರುತಯಸ್ತಾವತ್ ಆತ್ಮೈಕತ್ವವಿದ್ಯಾಪ್ರತಿಪಾದನಾರ್ಥಮೇವ ಪ್ರವೃತ್ತಾಃ | ನ ತು ಸೃಷ್ಟೌ ತಾತ್ಪರ್ಯಂ ತಾಸಾಮ್ ಇತ್ಯೇತತ್ ತಾವತ್ **ತೈತ್ತಿರೀಯಕೇ** "ಬ್ರಹ್ಮವಿದಾಪ್ನೋತಿ ಪರಮ್" ಇತಿ ಬ್ರಹ್ಮವಿದ್ಯಾಫಲಕಥನಪೂರ್ವಕಂ "ಆತ್ಮನ ಆಕಾಶಃ ಸಂಭೂತಃ" (ತೈ. ೨-೧) ಇತ್ಯಾದಿನಾ ಸೃಷ್ಟ್ಯಾದಿಕಮುಕ್ತ್ವಾ "ಯದಾ ಹ್ಯೇವೈಷ ಏತಸ್ಮಿನ್ನದೃಶ್ಯೇಽನಾತ್ಮ್ಯೇಽನಿರುಕ್ತೇಽನಿಲಯನೇಽಭಯಂ ಪ್ರತಿಷ್ಠಾಂ ವಿಂದತೇ | ಅಥ ಸೋಽಭಯಂ ಗತೋ ಭವತಿ" (ತೈ. ೨-೭) ಇತಿ ಸೃಷ್ಟಸ್ಯ ಮೂರ್ತಾಮೂರ್ತಲಕ್ಷಣಸ್ಯ ಸರ್ವಸ್ಯಾಪಿ ತಸ್ಮಿನ್ನೇವ ನಿರ್ವಿಶೇಷೇ ಬ್ರಹ್ಮಣಿ ನಿಷೇಧಾದ್ ವಿನಿಶ್ಚೀಯತೇ | ಏವಮೇವ **ಮುಂಡಕೇ** "ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಮವರ್ಣಮಚಕ್ಷುಃಶ್ರೋತ್ರಂ ತದಪಾಣಿಪಾದವಮ್" (ಮುಂ. ೧-೧-೬) ಇತಿ ಸರ್ವವಿಶೇಷರಹಿತಮಕ್ಷರಂ

---

ಪ್ರಕ್ರಿಯೆಯನ್ನು ವಿಚಾರಮಾಡಲಾಗುತ್ತದೆ.

ಮೊದಲನೆಯದಾಗಿ ಸೃಷ್ಟಿಶ್ರುತಿಗಳು ಆತ್ಮನೊಬ್ಬನೇ ಇರತಕ್ಕವನೆಂಬ ತಿಳಿವಳಿಕೆಯನ್ನು ಪ್ರತಿಪಾದನೆ ಮಾಡುವುದಕ್ಕಾಗಿಯೇ ಹೊರಟಿರುತ್ತವೆ. ಅವುಗಳಿಗೆ ಸೃಷ್ಟಿಯಲ್ಲಿ ತಾತ್ಪರ್ಯವಿರುವುದೇ ಇಲ್ಲ ಎನ್ನುವುದಕ್ಕೆ ತೈತ್ತೀರಿಯದಲ್ಲಿ ನೋಡಿದರೆ (ಅಲ್ಲಿ ಹೀಗಿರುತ್ತದೆ) "ಬ್ರಹ್ಮವನ್ನು ತಿಳಿದವನು ಹೆಚ್ಚಿನದನ್ನು ಪಡೆಯುವವನು" ಎಂದು ಬ್ರಹ್ಮವಿದ್ಯೆಗೆ ಫಲವನ್ನು ಹೇಳುವುದರ ಮೂಲಕ "ಆತ್ಮನಿಂದ ಆಕಾಶವು ಹುಟ್ಟಿತು" ಎಂಬುದಾಗಿ ಸೃಷ್ಟಿ ಹೇಳಿ "ಯಾವಾಗ ಈತನು ಅದೃಶ್ಯನೂ, ಶರೀರವಿಲ್ಲದವನೂ, ಹೇಳುವುದಕ್ಕೆ ಬಾರದವನೂ, ಆಧಾರವಿಲ್ಲದವನಾದ ಈ ಆತ್ಮನಲ್ಲಿ ಪ್ರತಿಷ್ಠೆಯನ್ನು ಹೊಂದುತ್ತಾನೋ ಆಮೇಲೆ ಆತನು ಅಭಯವನ್ನು ಹೊಂದಿದವನಾಗುತ್ತಾನೆ" ಎಂಬ ಮೂರ್ತಾಮೂರ್ತವಾದ ಎಲ್ಲಾ ಜಗತ್ತೂ ಆತ್ಮನಲ್ಲಿಲ್ಲ ಎಂದು ಅಲ್ಲಗಳೆದಿರುವುದರಿಂದ ಇದು ಗೊತ್ತಾಗುತ್ತದೆ. ಹೀಗೆಯೇ ಮುಂಡಕದಲ್ಲಿ – "ಯಾವ ಅದು ಕಣ್ಣಿಗೆ ಕಾಣದ, (ಕರ್ಮೇಂದ್ರಿಯದಿಂದ) ಹಿಡಿಯುವು–ದಕ್ಕಾಗದ, ಕಾರಣವಿಲ್ಲದ, ಬಣ್ಣವಿಲ್ಲದ, ಕಣ್ಣು ಕಿವಿ ಕೈ ಕಾಲುಗಳಿಲ್ಲದ" ಎಂದು ಯಾವ ವಿಶೇಷವೂ ಇಲ್ಲದ ಅಕ್ಷರವನ್ನು ಪ್ರತಿಜ್ಞೆ ಮಾಡಿ "ಬ್ರಹ್ಮವು ತಪಸ್ಸಿನಿಂದ ಉಬ್ಬುತ್ತದೆ, ಆಮೇಲೆ (ಅದರಿಂದ) ಅವ್ಯಾಕೃತವು ಹುಟ್ಟುತ್ತದೆ"

ಪ್ರತಿಜ್ಞಾಯ "ತಪಸಾ ಚೀಯತೇ ಬ್ರಹ್ಮ ತತೋಽನ್ನಮಭಿಜಾಯತೇ...." ಇತ್ಯಾದಿನಾ ತಸ್ಮಾದೇವಾಕ್ಷರಾತ್ ಜಗತಃ ಸೃಷ್ಟಿಮಭಿಧಾಯ "ಪುರುಷ ಏವೇದಂ ವಿಶ್ವಮ್" (ಮುಂ. ೨-೧-೧೦) "ಬ್ರಹ್ಮೈವೇದಮಮೃತಂ ಪುರಸ್ತಾತ್" (ಮುಂ. ೨-೨-೧೨) ಇತಿ ಚೋಪಸಂಹಾರಾತ್ "ಏತದ್ಯೋ ವೇದ ನಿಹಿತಂ ಗುಹಾಯಾಂ ಸೋಽವಿದ್ಯಾಗ್ರಂಥಿಂ ವಿಕಿರತೀಹ ಸೋಮ್ಯ" (ಮುಂ. ೨-೧-೧೦) ಇತಿ ಚ ಬ್ರಹ್ಮಜ್ಞಾನಫಲಸಂಕೀರ್ತನಾಚ್ಚ ಏತದೇವಮಿತಿ ನಿಶ್ಚೀಯತೇ | ಏವಮೇವ ಸರ್ವೇಷ್ವಪಿ ವೇದಾಂತೇಷು ಸೃಷ್ಟಿ-ಪ್ರಕ್ರಿಯಾಯಾ ಅಧ್ಯಾರೋಪಾಪವಾದಪ್ರಕ್ರಿಯಾಭೇದತ್ವಂ ವಿಜ್ಞಾಪಿತಂ ಬೋದ್ಧವ್ಯಮ್||

ತದೇತತ್ ಪ್ರಸ್ಥಾನತ್ರಯೇಽಪಿ ಸಮಾನಮ್, ಆತ್ಮೈಕತ್ವವಿಜ್ಞಾಪನಾರ್ಥಂ ಜಗತ್ಸೃಷ್ಟೇರಧ್ಯಾರೋಪಃ, ಪುನಸ್ತದಪವಾದಶ್ಚೇತಿ | ತದ್ಯಥಾ **ಭಗವದ್ಗೀತಾಸು** -

(೧) ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃ ಪುನಃ || ಗೀ. ೯-೮.

---

ಎಂಬುದಾಗಿ ಅದೇ ಅಕ್ಷರದಿಂದ ಜಗತ್ತು ಹುಟ್ಟುತ್ತದೆ ಎಂದು ಹೇಳಿ "ಈ ವಿಶ್ವವೆಲ್ಲವೂ ಪುರುಷನೇ" (೨–೧–೧೦) "ಈ ಅಮೃತವಾದ ಬ್ರಹ್ಮವೇ ಮುಂದುಗಡೆ ಇರುವುದು" (೨–೨–೧೨) ಎಂದು ಹೇಳಿ ಉಪಸಂಹಾರವನ್ನು ಮಾಡಿರುತ್ತದೆ. (ಆ ಮೇಲೆ) ಹೃದಯ ಗುಹೆಯಲ್ಲಿರುವ ಈತನನ್ನು ಯಾವಾತನು ಅರಿತಿರುತ್ತಾನೋ ಆತನು ಅವಿದ್ಯಾಗ್ರಂಥಿಯನ್ನು ಇಲ್ಲಿಯೇ ಕಳಚಿಕೊಳ್ಳುತ್ತಾನೆ ಎಂಬುದಾಗಿ ಬ್ರಹ್ಮಜ್ಞಾನದ ಫಲವನ್ನು ಹೇಳಿರುವುದರಿಂದ (ಆತ್ಮೈಕತ್ವವನ್ನು ತಿಳಿಸುವುದಕ್ಕಾಗಿಯೇ ಸೃಷ್ಟಿವಿಚಾರವನ್ನು ಹೇಳಿದೆ ಎಂದು) ನಿಶ್ಚಯವಾಗುತ್ತದೆ. ಇದೇ ರೀತಿ ಎಲ್ಲಾ ವೇದಾನ್ತಗಳಲ್ಲೂ ಸೃಷ್ಟಿ ಪ್ರಕ್ರಿಯೆಯನ್ನು ಅಧ್ಯಾರೋಪಾಪವಾದಪ್ರಕ್ರಿಯಾಭೇದವಾಗಿಯೇ ತಿಳಿಸಿದೆ ಎಂದು ತಿಳಿಯಬೇಕು.

ಆತ್ಮೈಕತ್ವವನ್ನು ತಿಳಿಸುವುದಕ್ಕೆ ಜಗತ್ಸೃಷ್ಟಿಯ ಅಧ್ಯಾರೋಪವೂ ಮತ್ತೆ ಅದರ ಅಪವಾದವು ಎಂಬೀ ವಿಚಾರವು ಪ್ರಸ್ಥಾನತ್ರಯದಲ್ಲೂ ಸಮಾನವಾಗಿದೆ. ಅದು ಹೇಗೆಂದರೆ ಭಗವದ್ಗೀತೆಯಲ್ಲಿ –

(೧) "ನನ್ನ ಪ್ರಕೃತಿಯನ್ನು ಹಿಡಿದಿಟ್ಟುಕೊಂಡು ಮತ್ತೆ ಮತ್ತೆ ಸೃಷ್ಟಿಸುವೆನು" (ಗೀ. ೯–೮)

ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ || ಗೀ. ೯-೪.

[ ಇತ್ಯಧ್ಯಾರೋಪಃ ]

ನ ಚ ಮತ್ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಮ್ || ಗೀ. ೯-೫.

[ ಇತ್ಯಪವಾದಃ ]

ಶಾರೀರಕೇ ಚ -

(೨) ಕಾರಣತ್ವೇನ ಚಾಕಾಶಾದಿಷು ಯಥಾ ವ್ಯಪದಿಷ್ಟೋಕ್ತೇಃ||ಸೂ.ಭಾ.೧-೪-೧೪.

ಭಾಷ್ಯಮ್ - (ಅ) ಯಥಾಭೂತೋ ಹ್ಯೇಕಸ್ಮಿನ್ ವೇದಾಂತೇ ಸರ್ವಜ್ಞಃ ಸರ್ವೇಶ್ವರಃ ಸರ್ವಾತ್ಮಾ ಏಕೋಽದ್ವಿತೀಯಃ ಕಾರಣತ್ವೇನ ವ್ಯಪದಿಷ್ಟಃ, ತಥಾ-ಭೂತ ಏವ ವೇದಾಂತಾಂತರೇಷ್ವಪಿ ವ್ಯಪದಿಶ್ಯತೇ || ......... "ಬಹು ಸ್ಯಾಂ ಪ್ರಜಾಯೇಯ" ಇತಿ ಚಾತ್ಮವಿಷಯೇಣ ಬಹುಭವನಾನುಶಂಸನೇನ ಸೃಜ್ಯಮಾನಾನಾಂ ವಿಕಾರಾಣಾಂ ಸ್ರಷ್ಟುರಭೇದಮಭಾಷತ | ತಥಾ "ಇದಂ

---

"ಎಲ್ಲಾ ಭೂತಗಳೂ ನನ್ನಲ್ಲಿವೆ, ನಾನು ಅವುಗಳಲ್ಲಿಲ್ಲ" (೯-೪) ಎಂಬುದಾಗಿ ಅಧ್ಯಾರೋಪವು, "ಭೂತಗಳು ನನ್ನಲ್ಲಿರುವುದಿಲ್ಲ. ಈ ನನ್ನ ಯೋಗೈಶ್ವರ್ಯವನ್ನು ಕಾಣುವನಾಗು" (೯-೫) ಎಂಬುದಾಗಿ ಅಪವಾದ-ವಿರುತ್ತದೆ. ಬ್ರಹ್ಮಸೂತ್ರದಲ್ಲೂ ಸಹ – ಆಕಾಶದ ಸೃಷ್ಟಿಯ ವಿಷಯಕ್ಕೆ ವಿಗಾನವಿದ್ದರೂ (ವಿರೋಧ) ಅವುಗಳಿಗೆ ಕಾರಣವಾಗಿ ಒಂದು ಕಡೆಯಲ್ಲಿ ಹೇಳಿರುವ ಬ್ರಹ್ಮವನ್ನೇ ಬೇರೆ ಕಡೆಯಲ್ಲೂ ಹೇಳಿರುವುದರಿಂದ ಗತಿಸಾಮಾನ್ಯವಿದೆ. (ಬ್ರ.ಸೂ. ೧-೪-೧೪) ಇಲ್ಲಿ ಭಾಷ್ಯವು ಹೀಗಿದೆ. – ಯಾವ ರೀತಿಯಾಗಿ ಒಂದು ವೇದಾನ್ತದಲ್ಲಿ ಸರ್ವಜ್ಞನೂ ಸರ್ವೇಶ್ವರನೂ ಸರ್ವಾತ್ಮನೂ ಏಕನೂ ಅದ್ವಿತೀಯನೂ (ಆದ ಪರಮಾತ್ಮನನ್ನು) ಕಾರಣವೆಂದು ಹೇಳಿದೆಯೋ ಆ ರೀತಿಯಾಗಿಯೇ ಮತ್ತೊಂದು ವೇದಾನ್ತದಲ್ಲೂ ಹೇಳಿರುತ್ತದೆ.... "ಬಹಳವಾಗಿ ನಾನು ಹುಟ್ಟುವೆನು" ಎಂದು ತನ್ನ ವಿಷಯದ್ದಾದ ಅನೇಕವಾಗುವುದೆಂಬುದನ್ನು ಹೇಳುವುದರ ಮೂಲಕ ಸೃಷ್ಟಿಯಾಗುತ್ತಿರುವ ವಿಕಾರಗಳು ಸ್ರಷ್ಟೃವಾದ ತನಗಿಂತ ಬೇರೆಯಲ್ಲ ಎಂದು ಹೇಳಿದೆ. ಹಾಗೆಯೇ "ಏನೇನಿದೆಯೋ ಅದೆಲ್ಲವನ್ನೂ ಸೃಷ್ಟಿಸಿದ," ಎಂದು ಹೇಳುತ್ತಾ ಸಮಸ್ತ ಜಗತ್ತಿನ ಸೃಷ್ಟಿಯನ್ನು ಹೇಳುವುದರಿಂದ ಸೃಷ್ಟಿಗೆ ಮೊದಲು ಅದ್ವಿತೀಯ

ಸರ್ವಮಸೃಜತ | ಯದಿದಂ ಕಿಂಚ" ಇತಿ ಸಮಸ್ತಜಗತ್ಸೃಷ್ಟಿನಿರ್ದೇಶೇನ ಪ್ರಾಕ್ ಸೃಷ್ಟೇರದ್ವಿತೀಯಂ ಸ್ರಷ್ಟಾರಮಾಚಷ್ಟೇ | ತದತ್ರ ಯಲ್ಲಕ್ಷಣಂ ಬ್ರಹ್ಮ ಕಾರಣತ್ವೇನ ವಿಜ್ಞಾತಮ್, ತಲ್ಲಕ್ಷಣಮೇವಾನ್ಯತ್ರಾಪಿ ವಿಜ್ಞಾಯತೇ ||

ಸೂ.ಭಾ. ೧-೪-೧೪.

(ಆ) ಭವೇದಪಿ ಕಾರ್ಯಸ್ಯ ವಿಗೀತತ್ವಮ್, ಅಪ್ರತಿಪಾದ್ಯತ್ವಾತ್, ನ ಹ್ಯಯಂ ಸೃಷ್ಟ್ಯಾದಿಪ್ರಪಂಚಃ ಪ್ರತಿಪಿಪಾದಯಿಷಿತಃ | ನ ಹಿ ತತ್ಪ್ರತಿಬದ್ಧಃ ಕಶ್ಚಿತ್ ಪುರುಷಾರ್ಥೋ ದೃಶ್ಯತೇ ಶ್ರೂಯತೇ ವಾ | ನ ಚ ಕಲ್ಪಯಿತುಂ ಶಕ್ಯತೇ, ಉಪಕ್ರಮೋಪಸಂಹಾರಾಭ್ಯಾಂ ತತ್ರ ತತ್ರ ಬ್ರಹ್ಮವಿಷಯೈರ್ವಾಕ್ಯೈಃ ಸಾಕಮೇಕ-ವಾಕ್ಯತಾಯಾ ಗಮ್ಯಮಾನತ್ವಾತ್ | ..... ಮೃದಾದಿದೃಷ್ಟಾಂತೈಶ್ಚ ಕಾರ್ಯಸ್ಯ ಕಾರಣೇನಾಭೇದಂ ವದಿತುಂ ಸೃಷ್ಟ್ಯಾದಿಪ್ರಪಂಚಃ ಶ್ರಾವ್ಯತ ಇತಿ ಗಮ್ಯತೇ | ತಥಾ ಚ ಸಂಪ್ರದಾಯವಿದೋ ವದಂತಿ -

"ಮೃಲ್ಲೋಹವಿಸ್ಫುಲಿಂಗಾದ್ಯೈಃ ಸೃಷ್ಟಿರ್ಯಾ ಚೋದಿತಾನ್ಯಥಾ |
ಉಪಾಯಃ ಸೋಽವತಾರಾಯ ನಾಸ್ತಿ ಭೇದಃ ಕಥಂಚನ ||" ಇತಿ || ಸೂ.ಭಾ. ೧-೪-೧೪.

ಇತಿ ||

---

ಸ್ರಷ್ಟೃವನ್ನು ಹೇಳಿರುತ್ತದೆ. ಆದ್ದರಿಂದ ಒಂದು ಉಪನಿಷತ್ತಿನಲ್ಲಿ ಯಾವ ರೀತಿಯುದಾದ ಬ್ರಹ್ಮವು ಕಾರಣವೆಂದು ತಿಳಿದು ಬಂದಿದೆಯೋ ಆ ಲಕ್ಷಣವಾದದ್ದೇ ಮತ್ತೊಂದು ಕಡೆಯಲ್ಲೂ ತಿಳಿದುಬರುತ್ತದೆ. (ಸೂ.ಭಾ. ೧–೪–೧೪), ಕಾರ್ಯವು ಪ್ರತಿಪಾದ್ಯವಲ್ಲವಾದ್ದರಿಂದ ಅದರ ವಿಷಯಕ್ಕೆ ವಿರುದ್ಧವಾಗಿ ಹೇಳಿದ್ದರೂ ಹೇಳಿರಬಹುದು. ಏಕೆಂದರೆ ಈ ಸೃಷ್ಟಿಯ ವಿಷಯವಾಗಿ ಪ್ರತಿಪಾದಿಸುವ ಅಭಿಪ್ರಾಯವು ಶ್ರುತಿಗಿಲ್ಲ. ಅದರಿಂದಾಗುವ ಪುರುಷಾರ್ಥವೂ ಸಹ ಯಾವುದೂ ಕಾಣುವುದಿಲ್ಲ. ಶ್ರುತಿಯಲ್ಲಿ ಹೇಳಿಯೂ ಇಲ್ಲ, ಕಲ್ಪಿಸುವುದಕ್ಕೂ ಬರುವುದಿಲ್ಲ. ಉಪಕ್ರಮೋಪಸಂಹಾರಗಳಿಂದ ಅಲ್ಲಲ್ಲಿರುವ ಬ್ರಹ್ಮವಿಷಯದ ವಾಕ್ಯದೊಡನೆ ಸೃಷ್ಟಿವಾಕ್ಯಗಳಿಗೆ ಏಕವಾಕ್ಯತೆ ಇರುವುದು ಗೊತ್ತಾಗುತ್ತದೆ... ಮಣ್ಣೇ ಮುಂತಾದ ದೃಷ್ಟಾಂತಗಳಿಂದಲೂ ಕಾರ್ಯವು ಕಾರಣಕ್ಕಿಂತ ಬೇರೆಯಲ್ಲ ಎಂಬುದನ್ನು ತಿಳಿಸುವುದಕ್ಕಾಗಿಯೇ ಸೃಷ್ಟ್ಯಾದಿ ವಿವರಣೆಯನ್ನು ಶ್ರುತಿಯಲ್ಲಿ ಹೇಳಿದೆ ಎಂಬುದು ಗೊತ್ತಾಗುತ್ತದೆ. ಹಾಗೆಯೇ ಸಂಪ್ರದಾಯವನ್ನು ಬಲ್ಲವರು ಹೇಳುತ್ತಾರೆ. ಮಣ್ಣು, ಲೋಹ, ಕಿಡಿಯೇ ಮುಂತಾದ (ದೃಷ್ಟಾಂತ)ಗಳಿಂದ ಬೇರೆ ಬೇರೆ ಪ್ರಕಾರವಾಗಿ

೩೧. **ಕಾರ್ಯಕಾರಣಪ್ರಕ್ರಿಯಾ** - ಏತೇನ ಕಾರ್ಯಕಾರಣಪ್ರಕ್ರಿಯಾ ವ್ಯಾಖ್ಯಾತಾ | ತಥಾ ಹಿ ಶ್ರುತಿಃ "ಯಥಾ ಸುದೀಪ್ತಾತ್ ಪಾವಕಾದ್ವಿಸ್ಫುಲಿಂಗಾಃ ಸಹಸ್ರಶಃ ಪ್ರಭವಂತೇ ಸರೂಪಾಃ | ತಥಾಕ್ಷರಾದ್ ವಿವಿಧಾಃ ಸೋಮ್ಯ ಭಾವಾಃ ಪ್ರಜಾಯಂತೇ ತತ್ರ ಚೈವಾಪಿ ಯಂತಿ|| "(ಮುಂ. ೨-೧-೧) ಇತ್ಯಾದ್ಯಾ ಜೀವಾನಾಂ ಬ್ರಹ್ಮಣ ಉತ್ಪತ್ತಿಂ ಬ್ರಹ್ಮಣ್ಯೇವ ಚ ಲಯಂ ಶ್ರಾವಯತಿ "ಏತಸ್ಮಾಜ್ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ | ಖಂ ವಾಯುರ್ಜ್ಯೋತಿರಾಪಃ ಪೃಥಿವೀ ವಿಶ್ವಸ್ಯ ಧಾರಿಣೀ" (ಮುಂ. ೨-೧-೩) ಇತಿ ಚ ಆಧ್ಯಾತ್ಮಿಕಾದಿಲೌಕಿಕಭಾವಾನಾಂ ಸರ್ವೇಷಾಂ, ಅಪ್ಯುತ್ಪತ್ತಿರ್ಬ್ರಹ್ಮಣ ಏವೇತಿ ಶ್ರಾವಯತಿ | ತಥಾ "ತದೈಕ್ಷತ ಬಹು ಸ್ಯಾಂ ಪ್ರಜಾಯೇಯೇತಿ | ತತ್ತೇಜೋಽಸೃಜತ" (ಛಾಂ. ೬-೨-೩) ಇತ್ಯಾದ್ಯಾ ಚ ಬ್ರಹ್ಮಣ ಏವ ತೇಜಆದಿರೂಪೇಣೋತ್ಪತ್ತಿಂ ಶ್ರಾವಯತಿ - ಇತ್ಯತೋ ಬ್ರಹ್ಮಜಗತೋಃ ಕಾರ್ಯಕಾರಣಭಾವ ಏವ ವಿವಕ್ಷ್ಯತ ಇತಿ ತಾವದ್ ಭಾತಿ | ಪರಂ ತು ಕಾರ್ಯಸ್ಯ

---

ಸೃಷ್ಟಿಯನ್ನು ಹೇಳಿರುತ್ತದೆ. ಅದೆಲ್ಲವೂ (ಬುದ್ಧಿಗೆ ಆತ್ಮೈಕತ್ವಪ್ರತ್ಯಯವನ್ನು) ಇಳಿಸುವುದಕ್ಕಾಗಿ ಹೇಳಿದ್ದು (ನಿಜವಾಗಿ) ಹೇಗೂ ಭೇದವೆಂಬುದು ಇಲ್ಲವೇ ಇಲ್ಲ (ಸೂ.ಭಾ. ೧-೪-೧೪).

**೩೧) ಕಾರ್ಯಕಾರಣ ಪ್ರಕ್ರಿಯೆಯು** – ಇಷ್ಟು ಹೇಳಿದ್ದರಿಂದ ಕಾರ್ಯಕಾರಣಪ್ರಕ್ರಿಯೆಯ ವ್ಯಾಖ್ಯಾನವನ್ನು ಮಾಡಿದಂತಾಯಿತು. ಹಾಗೆಯೇ (ಅಲ್ಲವೆ ಶ್ರುತಿಯಿರುವುದು)? ಹೇಗೆ ಚೆನ್ನಾಗಿ ಉರಿಯುತ್ತಿರುವ ಬೆಂಕಿಯಿಂದ ಕಿಡಿಗಳು ಸಾವಿರಾರು ಅದೇರೂಪದ್ದಾಗಿರುವುದು ಹೊರಕ್ಕೆ ಬರುವವೋ, ಅದರಂತೆ ಸೌಮ್ಯನೇ ಅಕ್ಷರದಿಂದ ಜೀವರು ಹುಟ್ಟುತ್ತಾರೆ, ಅಲ್ಲೇ ಒಂದಾಗುತ್ತಾರೆ (ಮುಂ. ೨–೧–೧) ಇದೇ ಮೊದಲಾಗಿರುವ ಶ್ರುತಿಯು ಜೀವರುಗಳಿಗೆ ಬ್ರಹ್ಮದಿಂದಲೇ ಉತ್ಪತ್ತಿಲಯುವನ್ನು ಕೇಳಿಸುತ್ತಿದೆ. "ಈತನಿಂದಲೇ ಪ್ರಾಣನು ಹುಟ್ಟುತ್ತಾನೆ, ಮನಸ್ಸು ಮತ್ತು ಎಲ್ಲಾ ಇಂದ್ರಿಯಗಳು ಆಕಾಶ ವಾಯು ತೇಜಸ್ಸು ಅಪ್ಪು ವಿಶ್ವವನ್ನುಧರಿಸಿರುವ ಪೃಥ್ವಿಯೂ ಇದರಿಂದಲೇ ಹುಟ್ಟಿರುತ್ತವೆ" (ಮುಂ. ೨–೧–೩) ಈ ರೀತಿಯಾಗಿ (ಶ್ರುತಿಯು) ಆಧ್ಯಾತ್ಮಿಕವೇ ಮೊದಲಾದ ಲೌಕಿಕಭಾವಗಳು ಎಲ್ಲವೂ ಬ್ರಹ್ಮದಿಂದಲೇ ಹುಟ್ಟುತ್ತದೆ ಎಂದು ಹೇಳುತ್ತಿದೆ. ಹಾಗೆಯೇ "ಅದು ಬಹಳವಾಗಿ ಹುಟ್ಟಬೇಕು ಎಂದು ಯೋಚಿಸಿತು, ಅದು ತೇಜಸ್ಸನ್ನು ಸೃಷ್ಟಿಸಿತು" (ಛಾಂ. ೬–೨–೩)

ಕಾರಣಾನನ್ಯತ್ವಂ ವಕ್ತುಮೇವೇಯಂ ಕಾರ್ಯಕಾರಣಪ್ರಕ್ರಿಯಾ ಶಿಷ್ಟಾ ಇತಿ ತಸ್ಯೈವ ಕಾರ್ಯಕಾರಣಭಾವಸ್ಯಾಪವಾದಾದವಗಮ್ಯತೇ | "ಅಜಾಯಮಾನೋ ಬಹುಧಾ ವಿಜಾಯತೇ" (ತೈ. ಆ. ೩-೧೩-೩೯), "ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಮ್ | ತಸ್ಯಾವಯವಭೂತೈಸ್ತು ವ್ಯಾಪ್ತಂ ಸರ್ವಮಿದಂ ಜಗತ್ ||" (ಶ್ವೇ. ೪-೧೦) ಇತ್ಯಾದಿಶ್ರುತಿಭ್ಯಃ ||

ತದೇತತ್ ಸೂತ್ರಕಾರೋಽಪ್ಯಸುಸೂಚತ್ -

(೧) ತದನನ್ಯತ್ವಮಾರಂಭಣಶಬ್ದಾದಿಭ್ಯಃ || ವೇ.ಸೂ. ೨-೧-೧೪.

ಭಾಷ್ಯಕಾರಶ್ಚೈವಂ ಸೂತ್ರಾರ್ಥಂ ವ್ಯಾಕೃತವಾನ್ -

---

ಎಂಬಿವೇ ಮೊದಲಾದ ಶ್ರುತಿಯು ಬ್ರಹ್ಮದಿಂದಲೇ ತೇಜಸ್ಸೇ ಮೊದಲಾದ-ರೂಪದಿಂದ ಉತ್ಪತ್ತಿಯನ್ನು ಕೇಳಿಸುತ್ತಿದೆ. ಆದ್ದರಿಂದ ಬ್ರಹ್ಮಕ್ಕೂ ಜಗತ್ತಿಗೂ ಕಾರ್ಯಕಾರಣಭಾವವೇ ವಿವಕ್ಷಿತವಾಗಿದೆ ಎಂದು ಗೊತ್ತಾಗುತ್ತದೆ. ಆದರೆ ಅದೇ ಕಾರ್ಯಕಾರಣ ಭಾವವನ್ನು (ಮತ್ತೆ) ಅಪವಾದವನ್ನು ಮಾಡುತ್ತಿರು-ವುದರಿಂದ ಕಾರ್ಯವು ಕಾರಣಕ್ಕಿಂತ ಬೇರೆಯಾಗಿಲ್ಲ ಎಂದು ಹೇಳುವುದಕ್ಕಾಗಿಯೇ ಈ ಕಾರ್ಯಕಾರಣ ಪ್ರಕ್ರಿಯೆಯನ್ನು ಉಪದೇಶಿಸಿದೆ ಎಂದು ಗೊತ್ತಾಗುತ್ತದೆ. "(ತಾನು) ಹುಟ್ಟದೇ ಬಹಳವಾಗಿ ಹುಟ್ಟಿದವನಂತೆ ತೋರಿಬರುತ್ತಿದ್ದಾನೆ" (ತೈ.ಆ. ೩-೧೩-೩೯) "ಪ್ರಕೃತಿಯನ್ನು ಮಾಯೆ ಎಂದು ತಿಳಿಯಬೇಕು. ಪರಮೇಶ್ವರನನ್ನು ಮಾಯಾವಿ ಎಂದು (ತಿಳಿಯಬೇಕು). ಪರಮಾತ್ಮನ ಸ್ವರೂಪದಿಂದ ಈ ಜಗತ್ತೆಲ್ಲವೂ ವ್ಯಾಪ್ತವಾಗಿದೆ". (ಶ್ವೇ. ೪-೧೦) ಎಂದು ಮುಂತಾಗಿರುವ ಶ್ರುತಿಗಳಿಂದ ಗೊತ್ತಾಗುತ್ತದೆ. ಈ ವಿಷಯವನ್ನು ಸೂತ್ರಕಾರರೂ ಸಹ ಸೂಚಿಸಿರುತ್ತಾರೆ.

"ಕಾರ್ಯವು ಕಾರಣಕ್ಕಿಂತ ಬೇರೆಯಾಗಿರುವುದಿಲ್ಲ, (ಹೇಗೆಂದರೆ) ಆರಂಭಣವೇ ಮುಂತಾದ ಶಬ್ದಗಳಿಂದ ಗೊತ್ತಾಗುತ್ತದೆ (ವೇ.ಸೂ. ೨-೧-೧೪) ಸೂತ್ರಾರ್ಥವನ್ನು ಭಾಷ್ಯಕಾರರು ಹೀಗೆ ವಿವರಿಸಿರುತ್ತಾರೆ. "ಆಕಾಶವೇ ಮೊದಲಾಗಿ ಬಹು ವಿಸ್ತಾರವಾದ ಜಗತ್ತು ಕಾರ್ಯವು, ಕಾರಣವು ಪರಬ್ರಹ್ಮವು. ಕಾರ್ಯವಾದ ಜಗತ್ತು ಆ ಕಾರಣವಾದ (ಬ್ರಹ್ಮಕ್ಕಿಂತ) ನಿಜವಾಗಿ

(೨) ಕಾರ್ಯಮಾಕಾಶಾದಿಕಂ ಬಹುಪ್ರಪಂಚಂ ಜಗತ್, ಕಾರಣಂ ಪರಂ ಬ್ರಹ್ಮ | ತಸ್ಮಾತ್ ಕಾರಣಾತ್ ಪರಮಾರ್ಥತೋಽನನ್ಯತ್ವಂ ವ್ಯತಿರೇಕೇಣಾಭಾವಃ, ಕಾರ್ಯಸ್ಯಾವಗಮ್ಯತೇ | ಕುತಃ ? ಆರಂಭಣಶಬ್ದಾದಿಭ್ಯಃ | ಆರಂಭಣಶಬ್ದಸ್ತಾವತ್| ಏಕವಿಜ್ಞಾನೇನ ಸರ್ವವಿಜ್ಞಾನಂ ಪ್ರತಿಜ್ಞಾಯ ದೃಷ್ಟಾಂತಾಪೇಕ್ಷಾಯಾಮುಚ್ಯತೇ "ಯಥಾ ಸೌಮ್ಯೈಕೇನ ಮೃತ್ಪಿಂಡೇನ ಸರ್ವಂ ಮೃನ್ಮಯಂ ವಿಜ್ಞಾತಂ ಸ್ಯಾದ್ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್" ಇತಿ| ಏತದುಕ್ತಂ ಭವತಿ | ಏಕೇನ ಮೃತ್ಪಿಂಡೇನ ಪರಮಾರ್ಥತೋ ಮೃದಾತ್ಮನಾ ವಿಜ್ಞಾತೇನ ಸರ್ವಂ ಮೃನ್ಮಯಂ ಘಟಶರಾವೋದಂಚನಾದಿಕಂ ಮೃದಾತ್ಮಕತ್ವಾ-ವಿಶೇಷಾದ್ ವಿಜ್ಞಾತಂ ಭವೇತ್ | ಯತೋ ವಾಚಾರಂಭಣಂ ವಿಕಾರೋ ನಾಮಧೇಯಮ್ | ವಾಚೈವ ಕೇವಲಮಸ್ತೀತ್ಯಾರಭ್ಯತೇ ವಿಕಾರಃ "ಘಟಃ", "ಶರಾವಃ", "ಉದಂಚನಂ ಚ" ಇತಿ | ನ ತು ವಸ್ತುವೃತ್ತೇನ ವಿಕಾರೋ ನಾಮ ಕಶ್ಚಿದಸ್ತಿ | ನಾಮಧೇಯಮಾತ್ರಂ ಹ್ಯೇತತ್ ಅನೃತಮ್, ಮೃತ್ತಿಕೇತ್ಯೇವ ಸತ್ಯಮಿತಿ| ಏಷ ಬ್ರಹ್ಮಣೋ ದೃಷ್ಟಾಂತ ಆಮ್ನಾತಃ | ತತ್ರ ಶ್ರುತಾದ್ ವಾಚಾರಂಭಣಶಬ್ದಾದ್ ದಾರ್ಷ್ಟಾಂತಿಕೇಽಪಿ ಬ್ರಹ್ಮವ್ಯತಿರೇಕೇಣ ಕಾರ್ಯಜಾತಸ್ಯಾಭಾವ ಇತಿ/ಗಮ್ಯತೇ |

---

ಅನನ್ಯತ್ವವು ಎಂದರೆ ಬೇರೆಯಾಗಿ ಇಲ್ಲದಿರುವುದು. ಏಕೆಂದರೆ, ಆರಂಭಣ ಶಬ್ದವೇ ಮುಂತಾದವುಗಳಿಂದ (ಗೊತ್ತಾಗುತ್ತದೆ), ಆರಂಭಣ ಶಬ್ದವು ಹೇಗೆಂದರೆ – ಒಂದನ್ನು ತಿಳಿಯುವುದರಿಂದ ಎಲ್ಲವೂ ತಿಳಿದಂತಾಯಿತೆಂದು ಪ್ರತಿಜ್ಞೆಮಾಡಿ, (ಅದಕ್ಕೆ) ದೃಷ್ಟಾಂತದ ಅಪೇಕ್ಷೆಯುಂಟಾಗಲಾಗಿ ಹೀಗೆ ಹೇಳಿರುತ್ತದೆ –

"ಹೇಗೆ ಒಂದು ಮಣ್ಣುಮುದ್ದೆಯಿಂದ ಎಲ್ಲಾ ಮಣ್ಣಿನ ವಿಕಾರ–ವಾದದ್ದೆಲ್ಲವೂ ತಿಳಿದಂತಾಗುತ್ತದೆಯೋ, ವಿಕಾರವೆಂಬುದು ಕೇವಲ ಮಾತಿನಿಂದ ತಯಾರಾದದ್ದೋ, ಹೆಸರಷ್ಟೆಯೋ, ಮಣ್ಣು ಎಂಬುದೇ (ಆ ದೃಷ್ಟಾಂತದಲ್ಲಿ ಹೇಗೆ) ಸತ್ಯವೋ (ಅದರಂತೆಯೇ). (ಇಲ್ಲಿ) ಇಷ್ಟನ್ನು ಹೇಳಿದಂತಾಗುತ್ತದೆ. ಒಂದು ಮಣ್ಣಿನ ಮುದ್ದೆಯಿಂದ (ಎಂದರೆ) ನಿಜವಾಗಿ ಮಣ್ಣಿನ ರೂಪವನ್ನು ತಿಳಿದದ್ದರಿಂದ ಎಲ್ಲಾ ಮಣ್ಣಿನ ವಿಕಾರಗಳನ್ನು (ಎಂದರೆ) ಗಡಿಗೆ, ಶರಾವೆ, ನೀರಿನ ಪಾತ್ರೆ, ಮುಂತಾದವುಗಳನ್ನು ಮಣ್ಣಿನ ರೂಪದ್ದಾಗಿದೆ ಎಂಬುದು ಸಮಾನವಾದ್ದರಿಂದ – (ಎಲ್ಲವನ್ನೂ) ತಿಳಿದಂತಾಗುವುದೋ, ಏಕೆಂದರೆ ವಿಕಾರವೆಲ್ಲವೂ ಕೇವಲ ಮಾತಿನಿಂದ ತಯಾರಾದ ಹೆಸರಷ್ಟೇ ಆಗಿದೆ. (ಹಾಗೆಯೇ) ವಿಕಾರವಾದ ಗಡಿಗೆ, ಶರಾವೆ, ನೀರಿನ ಪಾತ್ರೆ ಎಂಬಿವು ಬರಿಯಮಾತಿನಿಂದ ಇದೆ ಎಂದಾಗಿರುತ್ತವೆ. ನಿಜವಾಗಿ ವಸ್ತುವಿನ ಕಡೆಯಿಂದ

ಪುನಶ್ಚ ತೇಜೋಽಬನ್ನಾನಾಂ ಬ್ರಹ್ಮಕಾರ್ಯತ್ವಮುಕ್ತ್ವಾ ತೇಜೋಽಬನ್ನ-ಕಾರ್ಯಾಣಾಂ ತೇಜೋಽಬನ್ನವ್ಯತಿರೇಕೇಣಾಭಾವಂ ಬ್ರವೀತಿ "ಅಪಾಗಾದಗ್ನೇ-ರಗ್ನಿತ್ವಂ ವಾಚಾರಂಭಣಂ ವಿಕಾರೋ ನಾಮಧೇಯಂ ತ್ರೀಣಿ ರೂಪಾಣೀತ್ಯೇವ ಸತ್ಯಮ್" ಇತ್ಯಾದಿನಾ || ಸೂ.ಭಾ. ೨-೧-೧೪.

(೩) "ಆರಂಭಣಶಬ್ದಾದಿಭ್ಯಃ" ಇತ್ಯಾದಿಶಬ್ದಾತ್ "ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ", "ಇದಂ ಸರ್ವಂ ಯದಯಮಾತ್ಮಾ" ..... ಇತ್ಯೇವಮಾದ್ಯಾತ್ಮೈಕತ್ವಪ್ರತಿಪಾದನಪರಂ ವಚನಜಾತಮ್ ಉದಾಹರ್ತವ್ಯಮ್||
ಸೂ.ಭಾ. ೨-೧-೧೪.

ಅತ್ರ ಚ ಕಾರ್ಯಸ್ಯ ಕಾರಣಾನನ್ಯತ್ವವಚನಾತ್, ಇದಂ ವಿವಕ್ಷಿತಂ ಯತ್ ಸರ್ವಂ ಚ ಕಾರಣಂ ಮಾಯಯೈವ ಜಾಯತ ಇತ್ಯುಚ್ಯತೇ ಏಕಾತ್ಮತಾವಿದ್ಯಾಪ್ರತಿಪಾದನಾರ್ಥಮ್,

---

ವಿಕಾರವೆಂಬುದಿರುವುದಿಲ್ಲ. ಹೆಸರಷ್ಟೇ ಆದ್ದರಿಂದ (ಇವು) ಸುಳ್ಳು. (ಆ ದೃಷ್ಟಾಂತದಲ್ಲಿ) ಮಣ್ಣೆಂಬುದೇ ಸತ್ಯವು. ಇದು ಬ್ರಹ್ಮಕ್ಕೆ ದೃಷ್ಟಾಂತವಾಗಿ ಹೇಳಿರುತ್ತದೆ. (ಬರೀ) ಮಾತಿನಿಂದ ಆರಂಭವಾಗುತ್ತದೆ ಎಂಬ ಶಬ್ದವು ಇರುವುದರಿಂದ ದಾರ್ಷ್ಟಾಂತಿಕದಲ್ಲೂ ಕಾರ್ಯಸಮೂಹವು ಬ್ರಹ್ಮಕ್ಕಿಂತ ಬೇರೆಯಾಗಿಲ್ಲವೆಂದು ಗೊತ್ತಾಗುತ್ತದೆ. ತೇಜೋಬನ್ನಗಳು ಬ್ರಹ್ಮದ ಕಾರ್ಯವೆಂದು ಹೇಳಿ, ತೇಜೋಬನ್ನಗಳ ಕಾರ್ಯವಾದ (ಜಗತ್ತು) ತೇಜೋಬನ್ನಗಳಿಗಿಂತ ಬೇರೆಯಾಗಿ ಇಲ್ಲವೆಂದು (ಶ್ರುತಿಯು) ಹೇಳುತ್ತಿದೆ" "ಅಗ್ನಿಯ ಅಗ್ನಿತ್ವವು ಹೊರಟು ಹೋಯಿತು, ವಿಕಾರವೆಂಬುದು ಮಾತಿನಿಂದ ತಯಾರಾದದ್ದು, ಹೆಸರು ಮಾತ್ರವಾಗಿದೆ. (ಅಲ್ಲಿ) ಮೂರು ರೂಪವೆಂಬುದೇ ಸತ್ಯ" (ಸೂ.ಭಾ. ೨-೧-೧೪) ಎಂಬುದಾಗಿ ಹೇಳಿದೆ.

(೩) "ಆರಂಭಣಶಬ್ದಾದಿಭ್ಯಃ" ಎಂಬುದಾಗಿ "ಆದಿ" ಶಬ್ದವನ್ನು (ಹೇಳಿದ್ದ-ರಿಂದ) "ಇದೆಲ್ಲವೂ ಇದನ್ನೇ ಆತ್ಮವುಳ್ಳದ್ದಾಗಿದೆ ಅದು ಸತ್ಯವು, "ಆತನೇ ಆತ್ಮನು ಅದೇ ನೀನಾಗಿರುವೆ" "ಇದೆಲ್ಲವೂ ಯಾವ ಈ ಆತ್ಮನೇ ಆಗಿರುವನೋ"...... ಎಂಬುದಾಗಿ ಇದೇ ಮೊದಲಾಗಿರುವ ಆತ್ಮೈಕತ್ವವನ್ನು ತಿಳಿಸುವ ವಾಕ್ಯ ಸಮೂಹವನ್ನು ಉದಾಹರಿಸಿಕೊಳ್ಳಬೇಕು (ಸೂ.ಭಾ. ೨-೧-೧೪)

ಇಲ್ಲಿ ಕಾರ್ಯವು ಕಾರಣಕ್ಕಿಂತ ಬೇರೆಯಲ್ಲ ಎಂದು ಹೇಳಿರುವುದರಿಂದ

ವಸ್ತುತಸ್ತು ಕಾರ್ಯಂ ನಾಮ ನಾಸ್ತ್ಯೇವ ಸ್ವೇನ ರೂಪೇಣ, ಕಾರಣೇ ಏವ ತ್ವವಿದ್ಯಯಾ ಅಧ್ಯಸ್ತಂ ತತ್ - ಇತಿ | ತಥಾ ಹ್ಯಾಹ ಭಾಷ್ಯಕೃತ್ -

(೪) ತಸ್ಮಾತ್, ಯಥಾ ಘಟಕರಕಾದ್ಯಾಕಾಶಾನಾಂ ಮಹಾಕಾಶಾನನ್ಯತ್ವಮ್, ಯಥಾ ಚ ಮೃಗತೃಷ್ಣಿಕೋದಕಾದೀನಾಮೂಷರಾದಿಭ್ಯೋಽನನ್ಯತ್ವಂ ದೃಷ್ಟನಷ್ಟಸ್ವರೂಪತ್ವಾತ್ ಸ್ವರೂಪೇಣಾನುಪಾಖ್ಯತ್ವಾತ್, ಏವಮ್ ಅಸ್ಯ ಭೋಕ್ತೃಭೋಗ್ಯಾದಿಪ್ರಪಂಚಜಾತಸ್ಯ ಬ್ರಹ್ಮವ್ಯತಿರೇಕೇಣಾಭಾವ ಇತಿ ದ್ರಷ್ಟವ್ಯಮ್ ||

ಸೂ.ಭಾ. ೨-೧-೧೪.

ಯಥೋದಾಹೃತಾನಿ ಭಾಷ್ಯವಾಕ್ಯಾನಿ ಸಂಪ್ರದಾಯಾನುಸಾರೀಣೀತ್ಯತ್ರ ದ್ವೇ ಕಾರಿಕೇ ಉದಾಹರಿಷ್ಯಾಮಃ -

(೫) ಸತೋ ಹಿ ಮಾಯಯಾ ಜನ್ಮ ಯುಜ್ಯತೇ ನ ತು ತತ್ತ್ವತಃ |
ತತ್ತ್ವತೋ ಜಾಯತೇ ಯಸ್ಯ ಜಾತಂ ತಸ್ಯ ಹಿ ಜಾಯತೇ || ಗೌ. ಕಾ. ೩-೨೭.

---

ಇದು ವಿವಕ್ಷಿತವಾಗಿದೆ, ಏನಂದರೆ – ಏಕಾತ್ಮತಾರೂಪವಾದ ವಿದ್ಯೆಯನ್ನು ಪ್ರತಿಪಾದನೆ ಮಾಡುವುದಕ್ಕಾಗಿ ಕಾರಣವೇ ಮಾಯೆಯಿಂದಲೇ ಎಲ್ಲವಾಗಿ ಹುಟ್ಟುತ್ತದೆ ಎಂದು ಹೇಳುತ್ತದೆ. ನಿಜವಾಗಿಯಾದರೋ ಕಾರ್ಯವೆಂಬುದು ತನ್ನ ರೂಪದಿಂದ ನಿಜವಾಗಿರುವುದೇ ಇಲ್ಲ. ಅವಿದ್ಯೆಯಿಂದ ಕಾರಣದಲ್ಲಿಯೇ ಅಧ್ಯಸ್ತವಾಗಿರುತ್ತದೆ. ಹಾಗೆಯೇ ಭಾಷ್ಯಕಾರರು ಹೇಳಿರು–ತ್ತಾರೆ. "ಆದ್ದರಿಂದ ಹೇಗೆ ಘಟಾಕಾಶ ಕರಕಾಕಾಶಗಳು – ಕಾಣುವಾಗಲೇ ನಾಶವಾಗುವ ಸ್ವರೂಪದ್ದಾದ್ದರಿಂದಲೂ, ಅದರ ರೂಪದಿಂದ ಅವನ್ನು ಬಿಡಿಸಿ ಹೇಳುವುದಕ್ಕೆ ಬರದೇ ಇರುವುದಾದ್ದರಿಂದಲೂ (ಅವು) ಮಹಾಕಾಶಕ್ಕಿಂತಲೂ ಬೇರೆಯಲ್ಲದವೋ, ಬಿಸಿಲುಕುದುರೆಯ ನೀರೇ ಮುಂತಾದವುಗಳು ಚೌಳುದೇಶವೇ ಮುಂತಾದ್ದಕ್ಕಿಂತ ಬೇರೆಯಲ್ಲದವೋ ಹಾಗೆಯೇ ಈ ಭೋಕ್ತೃ ಭೋಗ್ಯವೇ ಮೊದಲಾದ ಪ್ರಪಂಚಸಮೂಹವು ಬ್ರಹ್ಮಕ್ಕಿಂತ ಬೇರೆಯಲ್ಲ ಎಂದು ತಿಳಿಯಬೇಕು (ಸೂ.ಭಾ. ೨–೧–೧೪).

ಈ ಮೇಲೆ ಉದಾಹರಿಸಿದ ಭಾಷ್ಯವಾಕ್ಯಗಳು ಸಂಪ್ರದಾಯಕ್ಕೆ ಅನುಸಾರವಾದವುಗಳು ಎಂಬುದಕ್ಕೆ ಎರಡು ಕಾರಿಕೆಗಳನ್ನು ಉದಾಹರಿಸುವೆವು.

(೫) "ಇದ್ದದ್ದಕ್ಕೆ ಮಾಯೆಯಿಂದ ಜನ್ಮವು ಹೊಂದುತ್ತದೆ ಆದರೆ ನಿಜವಾಗಿ

ನ ಕಶ್ಚಿಜ್ಜಾಯತೇ ಜೀವಃ ಸಂಭವೋಽಸ್ಯ ನ ವಿದ್ಯತೇ |
ಏತತ್ತದುತ್ತಮಂ ಸತ್ಯಂ ಯತ್ರ ಕಿಂಚಿನ್ನ ಜಾಯತೇ || ಗೌ.ಕಾ. ೩-೪೮.

(೬) ಉಪಲಂಭಾತ್ ಸಮಾಚಾರಾದಸ್ತಿವಸ್ತುತ್ವವಾದಿನಾಮ್ |
ಜಾತಿಸ್ತು ದೇಶಿತಾ ಬುದ್ಧೈರಜಾತೇಸ್ತ್ರಸತಾಂ ಸದಾ || ಗೌ.ಕಾ. ೪-೪೨.

೩೨. ಬ್ರಹ್ಮಣಃ ಸೃಷ್ಟೌ ಜೀವರೂಪೇಣ ಪ್ರವೇಶಃ - ಯಥೈವ ಸೃಷ್ಟಿಃ, ತಥೈವ ಜೀವರೂಪೇಣ ಪ್ರವೇಶೋಽಪಿ ಶ್ರುತಿಷೂಚ್ಯಮಾನಂ ನ ಪ್ರವೇಶಸ್ಯ ಯಾಥಾರ್ಥ್ಯವಿವಕ್ಷಯಾ, ಕಿಂ ತರ್ಹಿ, ಬ್ರಹ್ಮಣ ಏವಾವಿಕೃತಸ್ಯ ಮಾಯಯಾ ಜೀವರೂಪೇಣ ಉಪಲಂಭಃ - ಇತಿ ಬೋಧನೇನ ಆತ್ಮೈಕತ್ವಬುದ್ಧ್ಯವತಾರಾಯೈವೇತಿ ಗಮ್ಯತೇ | ಪ್ರವಿಷ್ಟಸ್ಯ ಬ್ರಹ್ಮಣಾ ತಾದಾತ್ಮ್ಯೋಪದೇಶಾತ್ | ಅತಃ -

"ತತ್ಸೃಷ್ಟ್ವಾ ತದೇವಾನುಪ್ರಾವಿಶತ್" || ತೈ. ೨-೬,

---

ಹೊಂದುವುದಿಲ್ಲ. ಯಾವನ ಮತದಲ್ಲಿ ನಿಜವಾಗಿಯೇ ಹುಟ್ಟುತ್ತದೋ ಅವನ ಮತದಲ್ಲಿ ಹುಟ್ಟಿದ್ದೇ ಹುಟ್ಟುತ್ತದೆ" (ಗೌ.ಕಾ. ೩-೨೭). ಯಾವ ಒಬ್ಬ ಜೀವನೂ (ನಿಜವಾಗಿ) ಹುಟ್ಟುವುದಿಲ್ಲ, ಇವನಿಗೆ (ಹುಟ್ಟು) ಹೊಂದುವುದೂ ಇಲ್ಲ. ಎಲ್ಲಿ ಯಾವುದೊಂದು ಹುಟ್ಟುವುದೆಂಬುದಿಲ್ಲವೋ, ಇದು ಉತ್ತಮವಾದ ಸತ್ಯವು (ಗೌ.ಕಾ.೩-೪೮).

(೬) ಯಾರಿಗೆ ವಸ್ತುವು ತೋರುತ್ತಿರುವುದರಿಂದಲೂ ಹಾಗೆ ವ್ಯವಹಾರವಿರುವುದರಿಂದಲೂ ಇದೆ ಎಂಬ (ಬುದ್ಧಿ ಇರುವುದೋ), ಹಾಗೆಯೇ ಯಾವಾಗಲೂ ಯಾವುದೂ ಹುಟ್ಟುವುದೇ ಇಲ್ಲ ಎಂದರೆ ಯಾರು, ಹೆದರುವರೋ ಅವರಿಗಾಗಿ ಸೃಷ್ಟಿಯನ್ನು ಜ್ಞಾನಿಗಳು ಉಪದೇಶಿಸಿರುತ್ತಾರೆ (ಗೌ.ಕಾ. ೪-೪೨).

**೩೨) ಬ್ರಹ್ಮವು ಸೃಷ್ಟಿಯಲ್ಲಿ ಜೀವರೂಪದಿಂದ ಪ್ರವೇಶಿಸಿದ್ದು-** ಸೃಷ್ಟಿಯ ವಿಷಯಕ್ಕೆ ಹೇಗೋ ಹಾಗೆಯೇ ಜೀವರೂಪದಿಂದ ಪ್ರವೇಶವನ್ನೂ ಕೂಡ ಶ್ರುತಿಯಲ್ಲಿ ಹೇಳಿರುವುದು ಪ್ರವೇಶವು ನಿಜವಾಗಿ ಆಗಿದೆ ಎಂದು ಹೇಳುವುದಕ್ಕಲ್ಲ; ಮತ್ತೇನೆಂದರೆ ಅವಿಕೃತವಾದ ಬ್ರಹ್ಮವೇ ಮಾಯೆಯಿಂದ ಜೀವನಾಗಿ ತೋರುತ್ತಿರುವನು ಎಂದು ತಿಳಿಯುವುದರಿಂದ ಆತ್ಮೈಕತ್ವ ಬುದ್ಧಿಯನ್ನು ತಿಳಿಸುವುದಕ್ಕಾಗಿಯೇ ಎಂದು ಗೊತ್ತಾಗುತ್ತದೆ, ಏಕೆಂದರೆ

"ಸ ಏತಮೇವ ಸೀಮಾನಂ ವಿದಾರ್ಯೈತಯಾ ದ್ವಾರಾ ಪ್ರಾಪದ್ಯತ" ||
ಐ. ೧-೩-೧೨,

"ಅನೇನ ಜೀವೇನಾತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ" ||
ಛಾಂ. ೬-೩-೨.

ಇತ್ಯಾದಯಃ ಶ್ರುತಯೋಽಧ್ಯಾರೋಪದೃಷ್ಟ್ಯಾ; "ಸ ಯಶ್ಚಾಯಂ ಪುರುಷೇ | ಯಶ್ಚಾಸಾವಾದಿತ್ಯೇ | ಸ ಏಕಃ" (ತೈ. ೨-೮), "ಸ ಏತಮೇವ ಪುರುಷಂ ಬ್ರಹ್ಮ ತತಮಮಪಶ್ಯದಿದಮದರ್ಶಮಿತೀಂ"(ಐ. ೧-೩-೧೩), "ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ಶ್ವೇತಕೇತೋ" (ಛಾಂ. ೬-೮-೭) ಇತ್ಯಪವಾದ-ಶ್ರುತಯಃ | ತದಾಹ ಭಾಷ್ಯಕೃತ್ -

(೧) ತದೇವೇದಮಾಕಾಶಾದಿಕಾರಣಂ ಕಾರ್ಯಂ ಸೃಷ್ಟ್ವಾ ತದನುಪ್ರವಿಷ್ಟಮಿವ ಅಂತರ್ಗುಹಾಯಾಂ ಬುದ್ಧೌ ದ್ರಷ್ಟೃಶ್ರೋತೃಮಂತೃವಿಜ್ಞಾತೃ - ಇತ್ಯೇವಂ ವಿಶೇಷವದುಪಲಭ್ಯತೇ | ಸ ಏವ ತಸ್ಯ ಪ್ರವೇಶಃ || ತೈ.ಭಾ. ೨-೬.

---

ಪ್ರವಿಷ್ಟನಾದ ಜೀವನಿಗೆ ಬ್ರಹ್ಮದೊಡನೆ ತಾದಾತ್ಮ್ಯದ ಉಪದೇಶವನ್ನು ಮಾಡುತ್ತಿರುವುದರಿಂದ ಗೊತ್ತಾಗುತ್ತದೆ. ಆದ್ದರಿಂದಲೇ –

"ಅದು ಸೃಷ್ಟಿಸಿ ಅದೇ ಪ್ರವೇಶವನ್ನು ಮಾಡಿತು" (ತೈ. ೨–೬).

"ಆತನು ಈ ಬೈತಲೆಯನ್ನು ಸೀಳಿಕೊಂಡು ಇದರ ಮೂಲಕ ಪ್ರವೇಶವನ್ನು ಮಾಡಿದನು" (ಐ. ೧–೩–೧೨). "ಈ ಜೀವರೂಪದಿಂದ ಒಳಹೊಕ್ಕಿದವನಾಗಿ ನಾಮರೂಪಗಳನ್ನು ಬಿಡಿ ಬಿಡಿ ಮಾಡುವೆನು" (ಛಾಂ. ೬–೩–೨) ಎಂಬುದಾಗಿ ಶ್ರುತಿಗಳು ಸೃಷ್ಟಿಯನ್ನು ಅಧ್ಯಾರೋಪ ಮಾಡಿ, "ಆ ಈ ಪುರುಷನಲ್ಲಿ ಯಾವಾತನಿರುವನೋ, ಆದಿತ್ಯನಲ್ಲಿ ಯಾವಾತನೋ, ಆತನು ಒಬ್ಬನೇ" (ತೈ–೨–೮) "ಆತನು ಈ ಅತ್ಯಂತವಾಗಿ ವ್ಯಾಪಿಸಿಕೊಂಡಿರುವ ಬ್ರಹ್ಮವನ್ನು ಕಂಡನು, ಇದನ್ನು ಕಂಡೆನೂ...." (ಐ. ೧–೩–೧೩) "ಇದೆಲ್ಲವೂ ಈತನನ್ನೇ ಆತ್ಮವುಳ್ಳದ್ದಾಗಿದೆ, ಅದು ಸತ್ಯವು, ಅದೇ ಆತ್ಮವು, ಎಲೈ ಶ್ವೇತಕೇತುವೇ ಅದೇ ನೀನಾಗಿರುವೆ" (ಛಾಂ. ೬–೮–೭) ಎಂಬುದಾಗಿರುವ ಶ್ರುತಿಗಳು ಅಪವಾದವನ್ನು ಮಾಡುತ್ತವೆ. ಅದನ್ನೇ ಭಾಷ್ಯಕಾರರು ಹೇಳಿರುತ್ತಾರೆ. "ಆಕಾಶಾದಿಗಳಿಗೆ ಕಾರಣವಾದ ಆ ಬ್ರಹ್ಮವೇ ಕಾರ್ಯಪ್ರಪಂಚವನ್ನು ಸೃಷ್ಟಿಸಿ

(೨) ಆಕಾಶಾದಿಕಾರ್ಯಮನ್ನಮಯಾಂತಂ ಸೃಷ್ಟ್ವಾ ತದೇವಾನುಪ್ರವಿಷ್ಟಂ ವಿಶೇಷವದಿವ ಉಪಲಭ್ಯಮಾನಂ ಯಸ್ಮಾತ್, ತಸ್ಮಾತ್ ಸರ್ವಕಾರ್ಯವಿಲಕ್ಷಣಂ ಅದೃಶ್ಯಾದಿಧರ್ಮಕಮೇವಾನಂದಮ್, ತದೇವಾಹಮಿತಿ ವಿಜಾನೀಯಾತ್ | ಅನುಪ್ರವೇಶಸ್ಯ ತದರ್ಥತ್ವಾತ್ || ತೈ.ಭಾ. ೩-೧.

(೩) ಉಪಲಬ್ಧ್ಯರ್ಥತ್ವಾಚ್ಚ ಸೃಷ್ಟಿಪ್ರವೇಶಸ್ಥಿತ್ಯಪ್ಯಯವಾಕ್ಯಾನಾಮ್ ||
ಬೃ.ಭಾ. ೧-೪-೭.

(೪) ಭೇದದರ್ಶನಾಪವಾದಾಚ್ಚ ಸೃಷ್ಟ್ಯಾದಿವಾಕ್ಯಾನಾಮ್ ಆತ್ಮೈಕತ್ವದರ್ಶನಾರ್ಥಪರತ್ವೋಪಪತ್ತಿಃ | ತಸ್ಮಾತ್, ಕಾರ್ಯಸ್ಥಸ್ಯ ಉಪಲಭ್ಯತ್ವಮೇವ ಪ್ರವೇಶ ಇತ್ಯುಪಚರ್ಯತೇ || ಬೃ.ಭಾ. ೧-೪-೭.



ಅದರೊಳಗೆ ಪ್ರವೇಶವನ್ನು ಮಾಡಿದಂತೆ ಸೃಷ್ಟಿಯೊಳಗಿರುವ ಬುದ್ಧಿಗುಹೆಯಲ್ಲಿ ದ್ರಷ್ಟೃಶ್ರೋತೃಮನ್ತೃವಿಜ್ಞಾತೃವೆಂಬ ವಿಶೇಷವುಳ್ಳದ್ದಂತೆ ತೋರಿಬರುತ್ತಿದೆ. ಅದೇ ಅದರ ಪ್ರವೇಶವು" (ತೈ.ಭಾ. ೨-೬).

(೨) ಯಾವ ಕಾರಣದಿಂದ, ಅನ್ನಮಯದವರೆಗಿರುವ ಆಕಾಶಾದಿ ಕಾರ್ಯವನ್ನು ಸೃಷ್ಟಿಸಿ ಅದನ್ನೇ ಪ್ರವೇಶಿಸಿದಂತೆ ವಿಶೇಷವುಳ್ಳದ್ದಾಗಿರುವಂತೆ ತೋರುತ್ತಿರುವುದೋ ಆದ್ದರಿಂದ (ಅದು) ಎಲ್ಲಾ ಕಾರ್ಯ (ಧರ್ಮಕ್ಕಿಂತಲೂ) ವಿಲಕ್ಷಣವಾಗಿದ್ದು ಅದೃಶ್ಯವೇ ಮೊದಲಾದ ಸ್ವಭಾವದ್ದಾದ ಆನಂದಸ್ವರೂಪವು. ಅದನ್ನೇ ನಾನೆಂದು ತಿಳಿಯಬೇಕು. ಅನುಪ್ರವೇಶವನ್ನು ಹೇಳಿರುವುದೂ ಅದಕ್ಕಾಗಿಯೇ" (ತೈ.ಭಾ. ೩-೧)

(೩) ಸೃಷ್ಟಿ, ಪ್ರವೇಶ, ಸ್ಥಿತಿ, ಪ್ರಳಯಗಳನ್ನು ಅರಿತುಕೊಳ್ಳುವುದಕ್ಕಾಗಿ ಹೇಳಿರುತ್ತದೆ. (ಬೃ.ಭಾ. ೧-೪-೭).

(೪) ಭೇದದರ್ಶನವನ್ನು ಅಪವಾದಮಾಡುತ್ತಿರುವುದರಿಂದಲೂ ಸೃಷ್ಟ್ಯಾದಿವಾಕ್ಯಗಳು ಆತ್ಮೈಕತ್ವವನ್ನು ತೋರಿಸುವುದರಲ್ಲಿ ತಾತ್ಪರ್ಯವುಳ್ಳದ್ದಾಗಿವೆ ಎಂಬುದು ಹೊಂದುತ್ತದೆ. ಆದ್ದರಿಂದ ಕಾರ್ಯಪ್ರಪಂಚದಲ್ಲಿ (ತೋರುವ ಆತ್ಮನ) ಪ್ರವೇಶವು ಅರಿಯುವುದಕ್ಕಾಗಿಯೇ ಉಪಚಾರಕ್ಕಾಗಿ ಹೇಳಿರುತ್ತದೆ. (ಬೃ.ಭಾ. ೧-೪-೭)

ಪ್ರವಿಷ್ಟಸ್ಯೇವ ಸತಃ ಕಲ್ಪಿತಜೀವಭಾವಮಾಪನ್ನಸ್ಯೈವ ಕರ್ತೃತ್ವಂ ಭೋಕ್ತೃತ್ವಂ ಚ ಪ್ರಮಾತೃತ್ವವದೇವೇತಿ ಸ್ಪಷ್ಟಮ್ | ದೇಹೇಂದ್ರಿಯಮನೋಧರ್ಮಾಧ್ಯಾಸಸ್ಯ ಅವಿಶೇಷಾದತ್ರಾಪಿ | ತತ್ರ ಕ್ರಿಯಾಕರ್ತೃತ್ವಮಧ್ಯಾರೋಪ್ಯ ಕರ್ಮಾಣಿ ವಿದಧಚ್ಛಾಸ್ತ್ರಂ ಕರ್ತ್ರಾದಿಕಾರಕಾಸ್ತಿತ್ವಂ ನ ವಿವಕ್ಷತಿ, ಅಪವದತ್ಯೇವ ತು ಧರ್ಮಾಧರ್ಮಾದಿ-ಸಂಬಂಧಮಾತ್ಮನಃ "ಅನ್ಯತ್ರ ಧರ್ಮಾದನ್ಯತ್ರಾಧರ್ಮಾದ್" (ಕಾ. ೧-೨-೧೪) ಇತ್ಯಾದಿನಾ | ಏವಂ ಧ್ಯಾನಕ್ರಿಯಾಕರ್ತೃತ್ವಮಪ್ಯಧ್ಯಾರೋಪ್ಯೈವ ಉಪಾಸನಾನಿ ವಿದಧತ್ ಧ್ಯಾನಕರ್ತೃತ್ವಸ್ಯ ಸತ್ಯತ್ವೇಽಪಿ ನ ತಾತ್ಪರ್ಯವತ್, ತತ್ಕರ್ತೃತ್ವಸ್ಯಾಪ್ಯಪವಾದಾದೇವ "ಧ್ಯಾಯತೀವ ಲೇಲಾಯತೀವ" (ಬೃ. ೪-೩-೭) ಇತಿ | ತಥಾ ಹ್ಯಾಹ ಭಾಷ್ಯಕೃತ್-

(೧) ಯಥಾಪ್ರಾಪ್ತಮೇವ ಕಾರಕಾಸ್ತಿತ್ವಮ್ ಉಪಾದಾಯ ಉಪಾತ್ತದುರಿತ-

---

**೩೩) ಕರ್ಮೋಪಾಸನಾ ಪ್ರಕ್ರಿಯೆಯು** – ಕಾರ್ಯಕಾರಣಸಂಘಾತ-ವನ್ನು ಹೊಕ್ಕಿರುವಂತೆ ತೋರುವ, ಕಲ್ಪಿತವಾದ ಜೀವಭಾವವನ್ನು ಹೊಂದಿರು-ವಾತನಿಗೇ ಪ್ರಮಾತೃತ್ವವು ಹೇಗೋ ಹಾಗೆಯೇ ಕರ್ತೃತ್ವವೂ ಭೋಕ್ತೃತ್ವವೂ (ಇರುವುದೆಂಬುದು) ಸ್ಪಷ್ಟವು. ಏಕೆಂದರೆ ಇಲ್ಲೂ ದೇಹೇಂದ್ರಿಯಮನಸ್ಸಿನ ಧರ್ಮಗಳು ಅಧ್ಯಾಸವಾಗಿರುವುದೆಂಬುದು ಸಮಾನವಾಗಿದೆ. ಇಲ್ಲಿ ಕ್ರಿಯೆಗಳಿಗೆ ಕರ್ತೃವಾಗಿದ್ದಾನೆಂಬುದನ್ನು ಅಧ್ಯಾರೋಪಿಸಿಕೊಂಡು ಕರ್ಮಗಳನ್ನು ವಿಧಿಸು-ತ್ತಿರುವ ಶಾಸ್ತ್ರಗಳು ಕರ್ತೃವೇ ಮುಂತಾದ ಕಾರಕಗಳು (ನಿಜವಾಗಿವೆ) ಎಂಬುದನ್ನು ಹೇಳುವುದಕ್ಕೆ ಹೊರಟಿರುವುದಿಲ್ಲ. "ಧರ್ಮಕ್ಕಿಂತಲೂ ಬೇರೆಯಾ-ದವನೂ ಅಧರ್ಮಕ್ಕಿಂತಲೂ ಬೇರೆಯಾದವನೂ" (ಕಠ ೧-೨-೧೪) ಎಂಬುದಾಗಿ (ಹೇಳುತ್ತಾ) ಆತ್ಮನಿಗೆ ಧರ್ಮಾಧರ್ಮಗಳ ಸಂಬಂಧವನ್ನು ಅಪವಾದ ಮಾಡಿರುತ್ತದೆ. ಹೀಗೆಯೇ ಉಪಾಸನೆಯನ್ನು ಮಾಡುವುದಕ್ಕೆ ಕರ್ತೃವಾಗಿರುತ್ತಾನೆಂಬುದನ್ನು ಒಪ್ಪಿಕೊಂಡೇ ಉಪಾಸನೆಗಳನ್ನು ವಿಧಿಸುವ ಶಾಸ್ತ್ರವು, ಸತ್ಯವಾಗಿಯೇ ಧ್ಯಾನಕ್ಕೆ ಕರ್ತೃವಾಗಿದ್ದಾನೆಂಬುದರಲ್ಲಿ ತಾತ್ಪರ್ಯವಿರುವುದಿಲ್ಲ. ಏಕೆಂದರೆ "ಧ್ಯಾನಮಾಡುವವನಂತೆಯೂ ಅಲುಗಾಡುವವನಂತೆಯೂ (ತೋರಿಬರುತ್ತಾನೆ)" (ಬೃ. ೪-೩-೭), ಎಂಬುದಾಗಿ (ತಿಳಿಸುತ್ತಾ) ಅದಕ್ಕೆ ಕರ್ತೃವಾಗಿದ್ದಾನೆ ಎಂಬುದನ್ನೂ ಅಲ್ಲಗಳೆದೇ ಇರುತ್ತದೆ.

(೧) ಲೋಕಪ್ರಸಿದ್ಧವಾದ ಕಾರಕಗಳಿವೆ ಎಂಬುದನ್ನು ಒಪ್ಪಿಕೊಂಡೇ

ಕ್ಷಯಾರ್ಥಂ ಕರ್ಮಾಣಿ ವಿದಧಚ್ಛಾಸ್ತ್ರಂ ಮುಮುಕ್ಷೂಣಾಂ ಫಲಾರ್ಥಿನಾಂ ಚ ಫಲಸಾಧನಮ್, ನ ಕಾರಕಾಸ್ತಿತ್ವೇ ವ್ಯಾಪ್ರಿಯತೇ ||

(ತೈ.ಭಾ. ಶೀಕ್ಷಾವಲ್ಲ್ಯುಪಸಂಹಾರಭಾಷ್ಯೇ)

(೨) ಉಪಾಸನೋಪದಿಷ್ಟೇಯಂ ತದರ್ಥಂ ಮಂದಮಧ್ಯಮದೃಷ್ಟ್ಯಾ-ಶ್ರಮಾದ್ಯರ್ಥಂ ಕರ್ಮಾಣಿ ಚ, ನ ಚ "ಆತ್ಮಾ ಏಕ ಏವಾದ್ವಿತೀಯಃ" ಇತಿ ನಿಶ್ಚಿತೋತ್ತಮದೃಷ್ಟ್ಯರ್ಥಮ್ || ಗೌ.ಕಾ. ೩-೧೬.

(೩) ತತ್ರ ಏತೈಃ ಆತ್ಮಾನನ್ಯತ್ವೇನ ಅವಿದ್ಯಯಾ ಪರಿಕಲ್ಪಿತೈಃ ಕ್ರಿಯಮಾಣಸ್ಯ ಕರ್ಮಣಃ, "ಅಹಮೇವ ಕರ್ತಾ" ಇತಿ ಕರ್ತಾರಮ್ ಆತ್ಮಾನಂ ಕೇವಲಂ ಶುದ್ಧಂ ತು ಯಃ ಪಶ್ಯತ್ಯವಿದ್ವಾನ್ | ಕಸ್ಮಾತ್ ? ವೇದಾಂತಾಚಾರ್ಯೋಪದೇಶ-ನ್ಯಾಯೈರಕೃತಬುದ್ಧಿತ್ವಾತ್, ಅಸಂಸ್ಕೃತಬುದ್ಧಿತ್ವಾತ್... ದುರ್ಮತೇಃ ಕುತ್ಸಿತಾ ವಿಪರೀತಾ ದುಷ್ಟಾ ಅಜಸ್ರಂ ಜನನಮರಣಪ್ರತಿಪತ್ತಿಹೇತುಭೂತಾ ಮತಿಃ ಅಸ್ಯ

---

(ಜನ್ಮಾಂತರದಲ್ಲಿ) ಕೂಡಿ ಹಾಕಿಕೊಂಡಿದ್ದ ಪಾಪದ ಕ್ಷಯಕ್ಕಾಗಿಯೂ ಮುಮುಕ್ಷುಗಳಿಗೂ, ಕರ್ಮಫಲವನ್ನು ಬಯಸುವವರಿಗೂ ಕರ್ಮಗಳನ್ನು ವಿಧಿಸುತ್ತಾ ಶಾಸ್ತ್ರವು ಕಾರಕಗಳೂ ಸಹ ನಿಜವಾಗಿಯೇ ಇವೆ ಎಂದು ಹೇಳುವದರಲ್ಲಿ ತಾತ್ಪರ್ಯವುಳ್ಳವುಗಳಾಗಿರುವುದಿಲ್ಲ." (ತೈ.ಭಾ. ಶೀಕ್ಷಾವಲ್ಲಿಯ ಉಪಸಂಹಾರ)

(೨) ಮಂದಮದ್ಯಮ ದೃಷ್ಟಿಯವರಾದ ಆಶ್ರಮಿಗಳೇ ಮೊದಲಾದವರಿಗಾಗಿ ಈ ಉಪಾಸನೆಯನ್ನೂ ಕರ್ಮಗಳನ್ನೂ ಉಪದೇಶಿಸಿರುತ್ತದೆ". ಅದ್ವಿತೀಯ-ನಾದ ಆತ್ಮನೊಬ್ಬನೇ ಇರತಕ್ಕವನು" ಎಂಬ ಉತ್ತಮದೃಷ್ಟಿಯುಳ್ಳವರಿಗಾಗಿ ಹೇಳಿದ್ದಲ್ಲ" (ಗೌ.ಕಾ. ೩-೧೬)

(೩) "ಇಲ್ಲಿ ತನಗಿಂತ ಬೇರೆಯಲ್ಲವೆಂದು ಅವಿದ್ಯೆಯಿಂದ ಕಲ್ಪಿತವಾದ ಈ (ಅಧಿಷ್ಠಾನವೇ ಮೊದಲಾದ ಐದರಿಂದ) ಮಾಡಲ್ಪಡುತ್ತಿರುವ ಕರ್ಮಕ್ಕೆ "ನಾನೇ ಕರ್ತನು" ಎಂದು ಕೇವಲನಾದ ಶುದ್ಧವಾದ ಆತ್ಮನನ್ನು ಕರ್ತನೆಂದು ಯಾವ ಅಜ್ಞನು ತಿಳಿದುಕೊಂಡಿರುವನೋ, ಅದೇಕೆ (ಹಾಗೆ ತಿಳಿದುಕೊಂಡಿ-ರುವನು?,) ಎಂದರೆ, ಅಕೃತಬುದ್ಧಿಯಾಗಿರುವುದರಿಂದ, ಉಪನಿಷತ್ತು ಆಚಾರ್ಯ ಇವರ ಉಪದೇಶದಿಂದಲೂ ಯುಕ್ತಿಯಿಂದಲೂ ಸಂಸ್ಕಾರವನ್ನು ಹೊಂದದೇ ಇರುವ ಬುದ್ಧಿಯುಳ್ಳವನಾದ್ದರಿಂದ ... ದುರ್ಮತಿಯು, ಕೀಳಾದ

- ಇತಿ ದುರ್ಮತಿಃ ಸ ಪಶ್ಯನ್ನಪಿ ನ ಪಶ್ಯತಿ ಯಥಾ ತೈಮಿರಿಕೋಽನೇಕಂ ಚಂದ್ರಮ್, ಯಥಾ ವಾ ಅಭ್ರೇಷು ಧಾವತ್ಸು ಚಂದ್ರಂ ಧಾವಂತಮ್, ಯಥಾ ವಾ ವಾಹನೇ ಉಪವಿಷ್ಟೋಽನ್ಯೇಷು ಧಾವತ್ಸು, ಆತ್ಮಾನಂ ಧಾವಂತಮ್ ||

ಗೀ.ಭಾ. ೧೮-೧೬.

[ ಏತ್ಯೈಃ - ಚತುರ್ದಶಶ್ಲೋಕೋಕ್ತೈಃ ಅಧಿಷ್ಠಾನಾದಿಭಿಃ ಪಂಚಭಿಃ ]

೩೪. **ಪಂಚಕೋಶವಿವೇಕಪ್ರಕ್ರಿಯಾ** - ಏವಂ ತೈತ್ತಿರೀಯಕೋಪಾತ್ತಪಂಚಕೋಶಪ್ರಕ್ರಿಯಾಪ್ಯಧ್ಯಾರೋಪಾಪವಾದಪ್ರಕ್ರಿಯೈವೇತಿ ಸ್ಪಷ್ಟಮ್ | ತತ್ರ ಹಿ "ತಸ್ಮಾದ್ವಾ ಏತಸ್ಮಾದನ್ನರಸಮಯಾತ್ | ಅನ್ಯೋಽಂತರ ಆತ್ಮಾ ಪ್ರಾಣಮಯಃ"(ತೈ. ೨-೨), "ಅನ್ಯೋಽಂತರ ಆತ್ಮಾ ಮನೋಮಯಃ"(ತೈ. ೨-೩), "ಅನ್ಯೋಽಂತರ ಆತ್ಮಾ ವಿಜ್ಞಾನಮಯಃ"(ತೈ. ೨-೪), "ಅನ್ಯೋಽಂತರ ಆತ್ಮಾ ಆನಂದಮಯಃ"(ತೈ. ೨-೫), ಇತಿ ದೇಹಾದ್ಯವಿದ್ಯಾಕಲ್ಪಿತಾತ್ಮನ ಉಪನ್ಯಸ್ಯ ತತ್ರ ತತ್ರ ಸಮಷ್ಟಿಬುದ್ಧಿ

---

ವಿರುದ್ಧವಾದ ದುಷ್ಟವಾದ ಯಾವಾಗಲೂ ಹುಟ್ಟು ಸಾವು ಇವುಗಳನ್ನೇ ಪಡೆಯುವುದಕ್ಕೆ ಕಾರಣವಾಗಿರುವ ಮತಿಯು ಇವನಿಗಿದೆಯಾದ್ದರಿಂದ ದುರ್ಮತಿಯು, ಅವನು ತಿಳಿದಿದ್ದರೂ ತಿಳಿಯದವನು. ಕಣ್ಣುಪರೆ ಇರುವವನು ಅನೇಕ ಚಂದ್ರನನ್ನು ಕಂಡರೂ ಅಥವಾ ಮೋಡಗಳು ಓಡುತ್ತಿರುವಾಗ ಚಂದ್ರನೇ ಓಡುತ್ತಿರುವವನೆಂದು ತಿಳಿದರೂ ಅಥವಾ ವಾಹನದ ಮೇಲೆ ಕುಳಿತವನು ಮಿಕ್ಕದ್ದು ಓಡುತ್ತಿರುವಲ್ಲಿ ತಾನೇ ಓಡುತ್ತಿರುವವನೆಂದು ಅರಿತರೂ ಹೇಗೆ ನಿಜವನ್ನರಿಯದವನೋ ಹಾಗೆಯೇ (ಇವನೂ ನಿಜವನ್ನರಿಯದವನೆಂದು ತಿಳಿಯಬೇಕು)" (ಗೀ.ಭಾ. ೧೮-೧೬).

**೩೪) ಪಂಚಕೋಶ ವಿವೇಕ ಪ್ರಕ್ರಿಯೆಯು** – ಇದೇ ರೀತಿ ತೈತ್ತಿರೀಯ (ಶಾಖೆಯಲ್ಲಿ) ಸ್ವೀಕರಿಸಿದ ಪಂಚಕೋಶ ಪ್ರಕ್ರಿಯೆಯೂ ಸಹ ಅಧ್ಯಾರೋ–ಪಾಪವಾದ ಪ್ರಕ್ರಿಯೆಯೇ ಎಂಬುದು ಸ್ಪಷ್ಟ. ಅಲ್ಲಿ ಅನ್ನರಸಮಯನಾದ ಆತ್ಮನಿಗಿಂತ ಒಳಗಿರುವ ಇನ್ನೊಬ್ಬನಾದ ಆತ್ಮನು ಪ್ರಾಣಮಯನು, (ಅದಕ್ಕೂ) ಇನ್ನೊಬ್ಬ ಒಳಗಿರುವ ಆತ್ಮನು ಮನೋಮಯನು, ಅದಕ್ಕೂ ಮತ್ತೊಬ್ಬನಾದ ಒಳಗಿರುವ ಆತ್ಮನು ವಿಜ್ಞಾನಮಯನು, ಅದಕ್ಕೂ ಇನ್ನೊಬ್ಬ ಒಳಗಿರುವ ಆತ್ಮನು ಆನಂದಮಯನು (ತೈ. ೨–೨, ೩, ೪, ೫) ಎಂಬುದಾಗಿ ದೇಹವೇ ಮುಂತಾದ ಅವಿದ್ಯಾಕಲ್ಪಿತಾತ್ಮನನ್ನು ಹೇಳಿ ಅಲ್ಲಲ್ಲಿ ಸಮಷ್ಟಿಬುದ್ಧಿಯನ್ನು

ವಿಧಾಯೋಪಾಸನಾಂ ವಿದಧಾತಿ ಶಾಸ್ತ್ರಮ್ | ಅಂತೇ ತು ಆನಂದಮಯಸ್ಯಾಪಿ ಪುಚ್ಛತ್ವೇನ ತದ್ವಿಲಕ್ಷಣಂ ಸರ್ವಾಂತರಂ ಬ್ರಹ್ಮೋಪದಿಶ್ಯ, "ಅಸನ್ನೇವ ಸ ಭವತಿ | ಅಸದ್ ಬ್ರಹ್ಮೇತಿ ವೇದ ಚೇತ್" (ತೈ. ೨-೬) ಸರ್ವಾನಪ್ಯಧ್ಯಾರೋಪಿತಾ-ನಾತ್ಮನೋಽತೀತ್ಯ ಪರಮಾರ್ಥಾತ್ಮಾನಂ ಪ್ರತ್ಯಸ್ತಮಿತಸರ್ವವಿಶೇಷಂ ಸರ್ವವಿಕಲ್ಪಾಸ್ಪದ-ತ್ವೇನ ಬ್ರಹ್ಮೈವಾವಧಾರಯತಿ | ತಂ ಚ "ಸ ಏಕಃ" ಇತಿ ಸರ್ವತ್ರೈಕಮೇವೈಕರೂಪ-ಮುಪದಿಶತ್, ತದ್ವಿದ್ವಾನ್ "ಏತಮಾನಂದಮಯಮಾತ್ಮಾನಮುಪಸಂಕ್ರಾಮತಿ" (ತೈ. ೨-೮) ಇತ್ಯಾನಂದಮಯಸ್ಯಾಪಿ ಪರಮಾರ್ಥರೂಪಂ ಬ್ರಹ್ಮ ಸ್ವಾತ್ಮತ್ವೇನ ಜ್ಞಾತವನ್ತಂ ಪರಮಪುರುಷಾರ್ಥಭಾಗಿನಮಾಹ | ಉಕ್ತಂ ಚ ಭಾಷ್ಯಕೃತಾ -

> (೧) ತಸ್ಮಾತ್, ನ ಪ್ರಾಪ್ತಿಃ ಸಂಕ್ರಮಣಮ್, ನಾಪಿ ಅನ್ನಮಯಾದೀನಾಮನ್ಯತಮ-ಕರ್ತೃಕಮ್, ಪಾರಿಶೇಷ್ಯಾತ್, ಅನ್ನಮಯಾದ್ಯಾನಂದಮಯಾನ್ತಾತ್ಮವ್ಯತಿರಿಕ್ತ-ಕರ್ತೃಕಂ ಜ್ಞಾನಮಾತ್ರಂ ಚ ಸಂಕ್ರಮಣಮ್ ಉಪಪದ್ಯತೇ ||
>
> ತೈ.ಭಾ. ೨-೮.

---

ವಿಧಾನಮಾಡಿ ಶಾಸ್ತ್ರವು ಉಪಾಸನೆಯನ್ನು ವಿಧಿಸಿರುತ್ತದೆ. ಕೊನೆಗಾದರೋ ಆನಂದಮಯನಿಗೂ ಪುಚ್ಛವಾಗಿ ಅದಕ್ಕೂ ವಿಲಕ್ಷಣವಾದ ಸರ್ವಾಂತರ–ತಮವಾದ ಬ್ರಹ್ಮವನ್ನು ಉಪದೇಶಮಾಡಿ, "ಬ್ರಹ್ಮವನ್ನು ಇಲ್ಲವೆಂದು ತಿಳಿದವನಾದರೆ ಅವನೇ ಇಲ್ಲವೆಂದಾಗುವನು" (ಎಂಬುದಾಗಿ ಹೇಳುತ್ತಾ) ಅಧ್ಯಾರೋಪಿತವಾದ ಎಲ್ಲಾ ಅನಾತ್ಮವನ್ನೂ ದಾಟಿ ಎಲ್ಲಾ ವಿಶೇಷವೂ ಅಡಗಿಹೋದ ಎಲ್ಲಾ ವಿಕಲ್ಪಕ್ಕೂ ಆಸ್ಪದವಾಗಿರುವ ಪರಮಾರ್ಥವಾದ ಆತ್ಮವಾಗಿರುವ ಬ್ರಹ್ಮವನ್ನೇ ಒತ್ತಿ ಹೇಳಿರುತ್ತದೆ. "ಆತ್ಮನು ಒಬ್ಬನೇ" ಎಂಬುದಾಗಿ ಎಲ್ಲಾ ಕಡೆಯಲ್ಲೂ ಅದ್ವಿತೀಯವಾಗಿ ಒಂದೇ ಪ್ರಕಾರವಾಗಿರು–ವಂಥದ್ದೆಂದು ಉಪದೇಶಿಸುತ್ತಾ ಅದನ್ನು ತಿಳಿದವನು "ಈ ಆನಂದಮಯಾತ್ಮ–ನನ್ನೂ (ಬಂದು) ಸೇರಿಕೊಳ್ಳುತ್ತಾನೆ" ಎಂಬುದಾಗಿ, ಆನಂದಮಯನಿಗೂ ನಿಜವಾದ ರೂಪದ್ದಾದ ಬ್ರಹ್ಮವನ್ನು ತನ್ನ ಸ್ವರೂಪವೆಂದು ತಿಳಿದಂತಹವನಾದ ಆತನನ್ನು ಹೆಚ್ಚಿನ ಪುರುಷಾರ್ಥಕ್ಕೆ ಯೋಗ್ಯನಾಗಿರುವವನೆಂದು ಹೇಳುತ್ತದೆ. (ಇದನ್ನು) ಭಾಷ್ಯಕಾರರು (ಹೀಗೆ) ಹೇಳಿರುತ್ತಾರೆ, "ಆದ್ದರಿಂದ ಸಂಕ್ರಮಣ–ವೆಂದರೆ ಪಡೆಯುವುದು ಎಂದರ್ಥವಲ್ಲ, ಹಾಗೆಯೇ (ಪಡೆಯುವುದಕ್ಕೆ) ಇದಕ್ಕೆ ಕರ್ತೃವು ಅನ್ನಮಯವೇ ಮುಂತಾದ ಯಾವ ಒಂದು ಕೋಶವೂ ಅಲ್ಲ. ಪಾರಿಶೇಷ್ಯನ್ಯಾಯದಿಂದ, ಅನ್ನಮಯದಿಂದ ಮೊದಲುಗೊಂಡು

ಇತಿ ||

[ "ಆನಂದಮಯಾಂತಾತ್ಮವ್ಯತಿರಿಕ್ತಾತ್ಮಕರ್ತೃಕಮ್" ಇತಿ, ಸ್ವಾತ್ಮಾನಮೇವ ಸರ್ವತ್ರೈಕಂ ನಿರುಪಾಧಿಕಂ ತತ್ತ್ವಮವಗಚ್ಛನ್ ಬ್ರಹ್ಮೈವ ಇತ್ಯಾತ್ಮೈಕ್ಯಮಾಹ || ]

ಸಂಪ್ರದಾಯವಿದಶ್ಚಾಹುಃ -

(೨) ರಸಾದಯೋ ಹಿ ಯೇ ಕೋಶಾ ವ್ಯಾಖ್ಯಾತಾಸ್ತೈತ್ತಿರೀಯಕೇ |
ತೇಷಾಮಾತ್ಮಾ ಪರೋ ಜೀವಃ ಖಂ ಯಥಾ ಸಂಪ್ರಕಾಶಿತಃ ||ಗೌ.ಕಾ. ೩-೧೧.

[ ಸ ಏವ ಪರಮಾತ್ಮಾ "ಆತ್ಮಾ ಹ್ಯಾಕಾಶವತ್" (೩-೩) ಇತ್ಯಾದಿಭಿಃ ಶ್ಲೋಕೈರ್ಯುಕ್ತ್ಯಾ ಸಂಪ್ರಕಾಶಿತೋಽಸ್ಮಾಭಿಃ - ಇತ್ಯರ್ಥಃ || ]

೩೫. (ಸ್ವಯಂ)ಜ್ಯೋತಿಷ್ಟ್ವಪ್ರಕ್ರಿಯಾ - ಏವಮೇವ ಜ್ಯೋತಿರ್ಬ್ರಾಹ್ಮಣೇ "ಕಿಂಜ್ಯೋತಿರಯಂ ಪುರುಷಃ" (ಬೃ. ೪-೩-೨) ಇತಿ ಪ್ರಶ್ನಂ ಜನಕಮುಖೇ-

---

ಆನಂದಮಯವಾಗಿರುವ ಅನಾತ್ಮವಾದ ಇವುಗಳಿಗಿಂತ ಬೇರೆಯವನು ಸಂಕ್ರಮಣ ಕರ್ತನು, ಅವನ ಸಂಕ್ರಮಣವೂ ಸಹ ಜ್ಞಾನಮಾತ್ರ (ತಿಳಿದುಕೊಳ್ಳುವುದಷ್ಟೇ) ಎಂಬುದು ಹೊಂದುತ್ತದೆ." (ತೈ.ಭಾ. ೨-೮) (ಆನಂದಮಯನವರೆಗಿರುವ ಆತ್ಮರುಗಳಿಗಿಂತ ಬೇರೆಯಾದ ಆತ್ಮನು (ಸಂಕ್ರಮಣಕ್ಕೆ) ಕರ್ತನು (ಎಂದು ಹೇಳುತ್ತಾ) ಎಲ್ಲಾ ಕಡೆಯಲ್ಲೂ ಒಂದೇ ಆದ ನಿರುಪಾಧಿಕನಾದ ಆತ್ಮತತ್ತ್ವವನ್ನೇ ತಿಳಿಯುತ್ತಾ ಅದು ಬ್ರಹ್ಮವೇ ಎಂದು ಆತ್ಮೈಕ್ಯವನ್ನು ಹೇಳುತ್ತದೆ). ಇದನ್ನು ಸಂಪ್ರದಾಯವನ್ನು ಬಲ್ಲವರೂ ಹೇಳುತ್ತಾರೆ -

"(ಅನ್ನ) ರಸವೇ ಮುಂತಾದ ಯಾವ ಕೋಶಗಳನ್ನು ತೈತ್ತಿರೀಯದಲ್ಲಿ ವ್ಯಾಖ್ಯಾನವನ್ನು ಮಾಡಿರುತ್ತದೋ ಆ ಕೋಶಗಳಿಗೂ ಪರಮಾತ್ಮನೇ ತಿರುಳಾದವನು, (ಇದರ ವಿಷಯಕ್ಕೆ, ಆಕಾಶವು ಹೇಗಿದೆಯೋ ಎಂಬುದಾಗಿ (ದೃಷ್ಟಾಂತವನ್ನು) ತೋರಿಸಲಾಗಿದೆ. (ಗೌ.ಕಾ. ೩-೧೧)"

(ಆತನೇ ಪರಮಾತ್ಮನು ಅದನ್ನೇ "ಆತ್ಮಾ ಹ್ಯಾಕಾಶವತ್" (೩-೩) ಎಂಬುದಾಗಿರುವ ಶ್ಲೋಕಗಳಿಂದಲೂ ಯುಕ್ತಿಯಿಂದಲೂ ನಾವು ತೋರಿಸಿರುತ್ತೇವೆ ಎಂದರ್ಥವು)

ನೋತ್ಥಾಪ್ಯ ಶ್ರುತಿರ್ಯಾಜ್ಞವಲ್ಕ್ಯದ್ವಾರೇಣಾಧ್ಯಾರೋಪಾಪವಾದಪ್ರಕ್ರಿಯಯೈವ ತನ್ನಿರ್ಣಯಮಾಚಷ್ಟೇ | ಕಾರ್ಯಕರಣಸಂಘಾತಸ್ಯ ಹಿ ವಿವಿಧೋ ವ್ಯವಹಾರೋ ದೃಷ್ಟಃ ಆಸನಗಮನಕರ್ಮನಿರ್ವರ್ತನಪ್ರತ್ಯಾಗಮನಾದಿಲಕ್ಷಣಃ, ಸ ಕಿಂಜ್ಯೋತಿಃ ಸಾಧನಃ ? ಕಿಂ ಸಂಘಾತೋಽಯಂ ಸ್ವಯಮೇವ ಸ್ವಸ್ಯ ಜ್ಯೋತಿರ್ಭವತೀದೃಶವ್ಯಾಪೃತೌ, ಉತ ಸ್ವವ್ಯತಿರಿಕ್ತಜ್ಯೋತಿಃ ಸಾಧನೇನ ಕಾರ್ಯಂ ನಿರ್ವರ್ತಯತಿ ? - ಇತ್ಯಭಿಪ್ರಾಯೋ ಜನಕಪ್ರಶ್ನಸ್ಯ | ಯಾಜ್ಞವಲ್ಕ್ಯಸ್ತು ಸಂಘಾತವ್ಯತಿರಿಕ್ತೇಷ್ವೇವ ಬಾಹ್ಯೇಷ್ವಾದಿತ್ಯ-ಚಂದ್ರಾಗ್ನಿವಾಕ್ಷು ತಾದೃಶಜ್ಯೋತಿಷ್ಟ್ವಮಧ್ಯಾರೋಪ್ಯ, ತತ್ತದಭಾವೇಽಪಿ ಸಂಘಾತ-ಪ್ರವೃತ್ತಿದರ್ಶನಾತ್ ವಸ್ತುತಃ ಕಿಂಜ್ಯೋತಿರೇವ ಸ್ಯಾದಯಂ ಪುರುಷಃ ? - ಇತಿ ಜನಕೇನ ಪೃಷ್ಟೇ "ಆತ್ಮೈವಾಸ್ಯ ಜ್ಯೋತಿಃ" (ಬೃ. ೪-೩-೬) ಇತ್ಯಂತತೋ ನಿರ್ಣಿನಾಯ | ಅತ್ರಾದಿತ್ಯಾದಿಷು ಜ್ಯೋತಿಷ್ಟ್ವಾಧ್ಯಾರೋಪಣಂ ನ ತಾತ್ಪರ್ಯೇಣ, ಕಿಂ ತು ಸಂಘಾತ-ವ್ಯತಿರಿಕ್ತೇನೈವ ಕೇನಚಿಜ್ಜ್ಯೋತಿಷಾ ಭಾವ್ಯಮಿತಿ ಸಂಭಾವನಾದಾರ್ಢ್ಯಾರ್ಥಮೇವ |

---

**೩೫) ಸ್ವಯಂಜ್ಯೋತಿಷ್ಟ್ವ ಪ್ರಕ್ರಿಯೆಯು** – ಹೀಗೆಯೇ ಜ್ಯೋತಿ-ಬ್ರಾಹ್ಮಣದಲ್ಲಿ "ಈ ಪುರುಷನು ಯಾವ ಬೆಳಕಿನವನಾಗಿರುವನು? (ಬೃ. ೪–೩–೨) ಎಂಬುದಾಗಿ ಜನಕನ ಬಾಯಿಯಿಂದ ಪ್ರಶ್ನೆಯನ್ನು ಎಬ್ಬಿಸಿ ಶ್ರುತಿಯು ಯಾಜ್ಞವಲ್ಕ್ಯರ ಮೂಲಕವಾಗಿ ಅಧ್ಯಾರೋಪಾಪವಾದ ಪ್ರಕ್ರಿಯೆಯಿಂದಲೇ ನಿರ್ಣಯವನ್ನು ಹೇಳಿರುತ್ತದೆ. ಕಾರ್ಯಕರಣಸಂಘಾತಕ್ಕೆ ಅನೇಕ ಪ್ರಕಾರವಾದ ವ್ಯವಹಾರವು ಕಂಡಿದೆ. ಕೂರುವುದು, ಹೋಗುವುದು, ಕೆಲಸವನ್ನು ಮಾಡುವುದು ಬರುವುದೇ ಮೊದಲಾದ ರೂಪವಾದದ್ದಾಗಿ ಕೆಲಸವು ಕಂಡುಬಂದಿದೆ. ಅದು ಯಾವ ಬೆಳಕಿನ ಸಹಾಯದಿಂದಾಗುವುದು?

(ಮೇಲೆ ತಿಳಿಸಿದ ಕೂರುವುದೇ ಮೊದಲಾದ) ವ್ಯಾಪಾರವನ್ನು ಈ ಶರೀರೇಂದ್ರಿಯಗುಂಪೇ ತನ್ನಷ್ಟಿಗೆ ತಾನೇ ನಡೆಸುತ್ತದೆಯೋ, ಅಥವಾ ತನಗಿಂತ ಬೇರೆಯಾದ ಬೆಳಕಿನ ಸಹಾಯದಿಂದ ನಡೆಸುತ್ತದೆಯೊ? ಎಂಬುದು ಜನಕನ ಪ್ರಶ್ನೆಯ ಅಭಿಪ್ರಾಯವು.

ಯಾಜ್ಞವಲ್ಕ್ಯರಾದರೋ ತನಗಿಂತ ಬೇರೆಯದಾದ ಹೊರಗಿನ ಆದಿತ್ಯ, ಚಂದ್ರ ಅಗ್ನಿ ವಾಕ್ಕುಗಳೆಂಬ ಬೆಳಕಿನಲ್ಲಿ ಆ ರೀತಿಯದಾದ ವ್ಯವಹಾರವು ನಡೆಯುವುದೆಂಬುದನ್ನು ಅಧ್ಯಾರೋಪಿಸಿ, ಆಯಾ ಒಂದೊಂದಾದ (ಆದಿತ್ಯಾದಿಗಳು) ಇಲ್ಲದಿದ್ದರೂ ದೇಹೇಂದ್ರಿಯಗುಂಪಿನ ವ್ಯವಹಾರವು

ಯಥೈವ ಪ್ರಾಣಮಯಾದಿಷು ಆತ್ಮತ್ವಾಧ್ಯಾರೋಪಣಮ್ ಸರ್ವಾಂತರಮುಖ್ಯಾತ್ಮ-ನಿರ್ಧಾರಣೋಪಾಯತ್ವೇನ, ಏವಮೇವೇಹಾಪಿ "ಕತಮ ಆತ್ಮೇತಿ | ಯೋಽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ" (ಬೃ. ೪-೩-೭) ಇತಿ ಸರ್ವ-ಕಾರ್ಯಕರಣಪ್ರಕಾಶಕಸ್ಯಾತ್ಮನೋ ಬಾಹ್ಯಜ್ಯೋತಿರ್ನಿರಪೇಕ್ಷಸ್ಯ ಸ್ವಯಂಜ್ಯೋತಿ-ಷ್ಟ್ವಾವಗಮನೋಪಾಯತ್ವೇನೈವಾಧ್ಯಾರೋಪ ಇತಿ ನಿಶ್ಚೀಯತೇ | "ಅತ್ರಾಯಂ ಪುರುಷಃ ಸ್ವಯಂಜ್ಯೋತಿರ್ಭವತಿ" (ಬೃ. ೪-೩-೯, ೪-೩-೧೪) ಇತ್ಯವಧಾರಣಾತ್ ||

ಯಥಾಹ ಭಾಷ್ಯಕೃತ್ -

---

ಕಂಡುಬಂದಿರುವುದರಿಂದ ನಿಜವಾಗಿ ಈ ಪುರುಷನಿಗೆ ಯಾವುದು (ವ್ಯವಹಾರಕ್ಕೆ) ಬೆಳಕಾಗಿದೆ? ಎಂಬುದನ್ನು ಜನಕನು ಕೇಳಲಾಗಿ ಕೊನೆಗೆ ಆತ್ಮನ ಬೆಳಕಿನಿಂದಲೇ ಈತನ (ಎಲ್ಲಾ ವ್ಯವಹಾರವು) (೪–೩–೬) ಎಂಬುದಾಗಿ (ಯಾಜ್ಞವಲ್ಕ್ಯರು) ನಿರ್ಣಯವನ್ನು ಮಾಡಿರುತ್ತಾರೆ. ಇಲ್ಲಿ ಆದಿತ್ಯಾದಿಗಳಿಗೆ ಜ್ಯೋತಿಷ್ಟವನ್ನು ಅಧ್ಯಾರೋಪಮಾಡಿ ಹೇಳಿರುವುದು ಅವು ಬೆಳಕಾಗಿದೆ ಎಂಬ ಉದ್ದೇಶದಿಂದಲ್ಲ, ಮತ್ತೇನೆಂದರೆ ಶರೀರೇಂದ್ರಿಯ ಗುಂಪಿಗಿಂತ ಬೇರೆಯದಾದ ಒಂದಾನೊಂದು ಜ್ಯೋತಿಸ್ಸು ಇರಬೇಕೆಂಬ ಅನುಮಾನವನ್ನು ಗಟ್ಟಿಪಡಿಸುವುದಕ್ಕಾಗಿ ಹೇಳಿದ್ದು. ಹೇಗೆ ಸರ್ವಾಂತರನಾದ ಮುಖ್ಯವಾದ ಆತ್ಮನನ್ನು ನಿರ್ಣಯಮಾಡುವುದಕ್ಕೆ ಉಪಾಯವಾಗಿ ಪ್ರಾಣಮಯಾದಿಗಳಲ್ಲಿ ಆತ್ಮತ್ವವನ್ನು ಅಧ್ಯಾರೋಪಮಾಡಿರುತ್ತದೋ ಅದೇ ರೀತಿ ಇಲ್ಲೂ ಸಹ "ಯಾವಾತನು ಆತ್ಮನು"? "ಯಾವ ಈತನು ಪ್ರಾಣಗಳಲ್ಲಿ ಹೃದ್ಯಂತರ್ಜ್ಯೋತಿಯಾದ ವಿಜ್ಞಾನಮಯನಿದಾನೋ" (ಆತನು) (ಬೃ. ೪–೩–೭) ಎಂದು ಎಲ್ಲಾ ದೇಹೇಂದ್ರಿಯಗಳನ್ನು ಬೆಳಗುವ ಆತ್ಮನು ಹೊರಗಿನ ಬೆಳಕಿನ ಅಪೇಕ್ಷೆ ಇಲ್ಲದವನು, ಆತನು ಸ್ವಯಂಜ್ಯೋತಿಯಾಗಿ–ರುತ್ತಾನೆಂಬುದನ್ನು ತಿಳಿಸಿಕೊಡುವುದಕ್ಕೆ ಉಪಾಯವಾಗಿಯೇ ಅಧ್ಯಾರೋಪ–ವನ್ನು ಮಾಡಿರುತ್ತದೆ ಎಂದು ಗೊತ್ತಾಗುತ್ತದೆ. ಏಕೆಂದರೆ "ಇಲ್ಲಿ ಈ ಪುರುಷನು ಸ್ವಯಂಜ್ಯೋತಿಯಾಗಿರುತ್ತಾನೆ" (ಬೃ. ೪–೩–೯, ೪–೩–೧೪) ಎಂಬುದಾಗಿ ಅವಧಾರಣೆ ಮಾಡಿರುತ್ತದೆ. ಹಾಗೆಯೇ ಭಾಷ್ಯಕಾರರೂ ಹೇಳಿರುತ್ತಾರೆ.

"ಎಚ್ಚರದಲ್ಲಿ ವಿಷಯೇಂದ್ರಿಯ ಸಂಬಂಧವಿರುವುದರಿಂದಲೂ

ಜಾಗರಿತೇ ವಿಷಯೇಂದ್ರಿಯಸಂಯೋಗಾತ್, ಆದಿತ್ಯಾದಿಜ್ಯೋತಿರ್ವ್ಯತಿಕಾರಾಚ್ಚ ಆತ್ಮನಃ ಸ್ವಯಂಜ್ಯೋತಿಷ್ಟ್ವಂ ದುರ್ವಿವೇಚನಮಿತಿ ತದ್ವಿವೇಚನಾಯ ಸ್ವಪ್ನ ಉಪನ್ಯಸ್ತಃ || ಸೂ.ಭಾ. ೩-೨-೪.

ಇತಿ ||

೩೬. **ಉತ್ಕ್ರಾಂತಿಗತ್ಯಾಗತ್ಯಾದಿರಧ್ಯಾರೋಪದೃಷ್ಟ್ಯೈವ** - ಏವಮೇವೋತ್ಕ್ರಾಂತಿಗತ್ಯಾಗತ್ಯಾದಿರಪ್ಯಧ್ಯಾರೋಪಪ್ರಕ್ರಿಯಾಮವಲಂಬ್ಯೈವ | ತದ್ಯಥಾ- "ಯತ್ರೈತತ್ ಪುರುಷ ಆರ್ತೋ ಮರಿಷ್ಯನ್ನಾಬಲ್ಯಮೇತ್ಯ ಸಂಮೋಹಮೇತಿ ತಮಾಹುರುದಕ್ರಮೀಚ್ಚಿತ್ರಂ (ತ್ತಮ್ ?) ನ ಶೃಣೋತಿ ನ ಪಶ್ಯತಿ ನ ವಾಚಾ ವದತಿ ನ ಧ್ಯಾಯತ್ಯಥಾಸ್ಮಿನ್ ಪ್ರಾಣ ಏವೈಕಧಾ ಭವತಿ ತದ್ಯೆನಂ ವಾಕ್ ಸರ್ವೈರ್ನಾಮಭಿಃ ಸಹಾಪ್ಯೇತಿ ಚಕ್ಷುಃ ಸರ್ವೈಃ ರೂಪೈಃ ಸಹಾಪ್ಯೇತಿ ಶ್ರೋತ್ರಂ ಸರ್ವೈಃ ಶಬ್ದೈಃ ಸಹಾಪ್ಯೇತಿ ಮನಃ ಸರ್ವೈರ್ಧ್ಯಾನೈಃ ಸಹಾಪ್ಯೇತಿ ಸ ಯದಾಸ್ಮಾಚ್ಛರೀರಾದುತ್ಕ್ರಾಮತಿ ಸಹೈವೈತೈಃ

---

ಆದಿತ್ಯಾದಿಗಳ ಬೆಳಕಿನ ಕಲಬೆರಿಕೆ ಇರುವುದರಿಂದಲೂ ಆತ್ಮನ ಸ್ವಯಂಜ್ಯೋತಿಷ್ಟ್ವವನ್ನು ವಿಂಗಡಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಅದರ ವಿವೇಕಕ್ಕಾಗಿ ಸ್ವಪ್ನವನ್ನು ಹೇಳಿರುತ್ತದೆ" (ಸೂ.ಭಾ. ೩-೨-೪) ಎಂದಿದ್ದಾರೆ.

**೩೬) ಉತ್ಕ್ರಾಂತಿ ಗತಿ ಆಗತಿಯು ಅಧ್ಯಾರೋಪದೃಷ್ಟಿಯಿಂದಲೇ (ಹೇಳಿದ್ದು)** – ಹೀಗೆಯೇ ಉತ್ಕ್ರಾತಿಗತ್ಯಾಗತಿಗಳೂ ಕೂಡ ಅಧ್ಯಾರೋಪ ಪ್ರಕ್ರಿಯೆಯನ್ನವಲಂಬಿಸಿಯೇ ಹೇಳಿದ್ದು. ಹೇಗೆಂದರೆ ಯಾವಾಗ ಹೀಗೆ ಪುರುಷನು (ರೋಗಾದಿಗಳಿಂದ) ಪೀಡಿತನಾಗಿ ಸಾಯುವವನೆಂದಾಗಿ ದುರ್ಬಲನಾಗಿ ಮೂರ್ಛೆಯನ್ನು ಹೊಂದುವನೋ ಆತನನ್ನು (ಕುರಿತು ಜನರು) ಮೇಲಕ್ಕೆ ತೆರಳುತ್ತಿದಾನೆ, (ಆತನ) ಚಿತ್ತವು ಕೇಳುವುದಿಲ್ಲ, ನೋಡುವುದಿಲ್ಲ, ಮಾತನಾಡುವುದಿಲ್ಲ, ಧ್ಯಾನಿಸುವುದಿಲ್ಲ, ಈ ಪ್ರಾಣನಲ್ಲಿಯೇ (ಎಲ್ಲವೂ) ಒಂದಾಗಿದೆ. ಈತನನ್ನು ವಾಗಿಂದ್ರಿಯವು ತನ್ನ ಎಲ್ಲಾ ಹೆಸರುಗಳಿಂದ ಸೇರಿರುತ್ತದೆ. ಕಣ್ಣು ಎಲ್ಲಾ ರೂಪಗಳೊಡನೆಯೂ, ಕಿವಿಯು ಎಲ್ಲಾ ಶಬ್ದಗಳೊಡನೆಯೂ, ಮನಸ್ಸು ಎಲ್ಲಾ ಚಿಂತಿಸಬೇಕಾದದ್ದರೊಡನೆಯೂ ಸೇರುತ್ತವೆ. ಆ (ಜೀವನು) ಯಾವಾಗ ಈ ಶರೀರದಿಂದ (ಬಿಟ್ಟು) (ಮೇಲಕ್ಕೆ)

ಸರ್ವೈರುತ್ಕ್ರಾಮತಿ" (ಕೌ. ೫-೩)[1] "ತಮುತ್ಕ್ರಾಮಂತಂ ಪ್ರಾಣೋಽನೂತ್ಕ್ರಾಮತಿ" (ಬೃ. ೪-೪-೨) ಇತ್ಯಾದಿಶ್ರುತಿಭಿರುತ್ಕ್ರಾಂತಿಃ | "ಯೇ ವೈ ಕೇಚಾಸ್ಮಾಲ್ಲೋಕಾತ್ ಪ್ರಯಂತಿ ಚಂದ್ರಮಸಮೇವ ತೇ ಸರ್ವೇ ಗಚ್ಛಂತಿ" (ಕೌ. ೩-೨), "ಸ ಏತಂ ದೇವಯಾನಂ ಪಂಥಾನಮಾಪದ್ಯಾಗ್ನಿಲೋಕಮಾಗಚ್ಛತಿ" (ಕೌ. ೩-೩), ಇತ್ಯಾದಿಭಿರ್ಗತಿಃ "ತಸ್ಮಾಲ್ಲೋಕಾತ್ ಪುನರೇತ್ಯಸ್ಮೈ ಲೋಕಾಯ ಕರ್ಮಣೇ" (ಬೃ. ೪-೪-೬) ಇತ್ಯಾದಿಭಿರಾಗತಿಃ - ಇತ್ಯೇವಮ್ ಅಧ್ಯಾರೋಪದೃಷ್ಟ್ಯಾ | ಏತಸ್ಯಾಪವಾದಸ್ತು "ಸ ಈಕ್ಷಾಂಚಕ್ರೇ | ಕಸ್ಮಿನ್ನ್ವಹಮುತ್ಕ್ರಾಂತ ಉತ್ಕ್ರಾಂತೋ ಭವಿಷ್ಯಾಮಿ ಕಸ್ಮಿನ್ ವಾ ಪ್ರತಿಷ್ಠಿತೇ ಪ್ರತಿಷ್ಠಾಸ್ಯಾಮೀತಿ | ಸ ಪ್ರಾಣಮಸೃಜತ" (ಪ್ರ. ೬-೩, ೪) ಇತಿ

೧. ಇದಂ ವಾಕ್ಯಮ್ ಶಾಂಖಾಯನಾರಣ್ಯಕಮ್ ಇತಿ ಸಂಜ್ಞಯಾ ಆನಂದಾಶ್ರಮಮುದ್ರಿತಪುಸ್ತಕಾತ್ ಉದ್ಧೃತಮ್ | ತತ್ರ ಚ ಪಂಚಮಾಧ್ಯಾಯತ್ವೇನ ಪರಿಗಣಿತಮ್ | ನಿರ್ಣಯಸಾಗರಪುಸ್ತಕೇ ತು ಅನ್ಯಥೈವ ಉಪನಿಷದ್ವಾಕ್ಯಂ ದೃಶ್ಯತೇ |

ತೆರಳುವನೋ ಇದೆಲ್ಲದರೊಡನೆಯೇ ಹೋಗುತ್ತಾನೆ" (ಕೌ. ೫–೩)[1]. "ಆ ಜೀವನು ಏಳುವುದನ್ನನುಸರಿಸಿ ಪ್ರಾಣನು ಏಳುತ್ತಾನೆ" (ಬೃ .೪–೪–೨) ಎಂಬಿವೇ ಮುಂತಾದ ಶ್ರುತಿಗಳಿಂದ ಉತ್ಕ್ರಾಂತಿಯುನ್ನು (ಹೇಳಿದೆ). "ಯಾರಾದರೂ (ಸರಿ) ಈ ಲೋಕದಿಂದ ಹೊರಟುಹೋಗುವವರಾಗಿರು–ತ್ತಾರೋ ಅವರೆಲ್ಲರೂ ಚಂದ್ರಮಂಡಲವನ್ನು ಕುರಿತೇ ಹೋಗುತ್ತಾರೆ" (ಕೌ. ೩–೨) ಆತನು ಈ ದೇವಯಾನಮಾರ್ಗವನ್ನು ಹೊಂದಿ ಅಗ್ನಿಲೋಕವನ್ನು (ಕುರಿತು) ಬರುತ್ತಾನೆ" (ಕೌ. ೩–೩) ಎಂಬ (ಶ್ರುತಿಯಿಂದ) ಗತಿಯು, "ಆ ಲೋಕದಿಂದ ಮತ್ತೆ ಈ ಲೋಕಕ್ಕೆ ಕರ್ಮವನ್ನು ಮಾಡುವುದಕ್ಕಾಗಿ ಬರುತ್ತಾನೆ" (ಬೃ. ೪–೪–೬) ಎಂಬುದಾಗಿ (ವಾಪಸ್ಸು) ಬರುವುದನ್ನು ಏನು ಹೇಳಿದೆ ಅದು ಅಧ್ಯಾರೋಪದೃಷ್ಟಿಯಿಂದ ಹೇಳಿರುತ್ತದೆ. ಇದರ ಅಪವಾದವಾದರೋ "ಆತನು ಆಲೋಚಿಸಿದನು, ಯಾವುದು ಉತ್ಕ್ರಾಂತವಾದರೆ ನಾನೇ ಉತ್ಕ್ರಾಂತ–ನಾದೇನೋ ಯಾವುದು ನೆಲೆ ನಿಂತರೆ (ನಾನು) ನೆಲೆನಿಂತವನಾಗುವೆನೋ ಎಂದುಕೊಂಡು ಆತನು ಪ್ರಾಣವನ್ನು ಸೃಷ್ಟಿಸಿದನು. (ಪ್ರಶ್ನ. ೬–೩,೪) ಎಂಬುದಾಗಿ ಹೇಳುತ್ತಾ ಪ್ರಾಣೋಪಾಧಿಯಿಂದಲೇ ಉತ್ಕ್ರಾಂತಿಯೇ ಹೊರತು

೧. (ಈ ವಾಕ್ಯವು ಶಾಂಖಾಯನಾರಣ್ಯಕದ್ದೆಂದು ಆನಂದಾಶ್ರಮಮುದ್ರಿತ ಪುಸ್ತಕದಿಂದ ಗೊತ್ತಾಗಿದೆ. ಅಲ್ಲಿ ಐದನೆಯ ಅಧ್ಯಾಯವೆಂದು ಸ್ವೀಕರಿಸಿದೆ. ನಿರ್ಣಯಸಾಗರದ ಪುಸ್ತಕದಲ್ಲಾದರೋ ಬೇರೊಂದು ರೀತಿಯ ಉಪನಿಷತ್ತಿನ ವಾಕ್ಯವು ಕಂಡುಬರುತ್ತದೆ).

ಪ್ರಾಣೋಪಾಧಿಕೈವೋತ್ಕ್ರಾಂತಿಃ ನ ತು ಸ್ವತಃ - ಇತಿ ವಚನಾತ್, "ಅಪ್ರಾಣಮ್" (ಬೃ. ೩-೮-೮) ಇತಿ ಪರಮಾರ್ಥದೃಷ್ಟ್ಯಾ ಸಪ್ರಾಣತ್ವಸ್ಯ ನಿಷೇಧಾಚ್ಚಾವಗಮ್ಯತೇ | ಏವಂ ಹಿ ಸಂಪ್ರದಾಯವಿದ ಆಹುಃ -

(೧) ಮರಣೇ ಸಂಭವೇ ಚೈವ ಗತ್ಯಾಗಮನಯೋರಪಿ |
ಸ್ಥಿತೌ ಸರ್ವಶರೀರೇಷು ಹ್ಯಾಕಾಶೇನಾವಿಲಕ್ಷಣಃ || ಗೌ. ಕಾ. ೩-೯.

ಇತಿ ಭಾಷ್ಯಂ ಚಾತ್ರ -

(೧) ಘಟಾಕಾಶಜನ್ಮನಾಶಗಮನಾಗಮನಸ್ಥಿತಿವತ್ ಸರ್ವಶರೀರೇಷ್ವಾತ್ಮನೋ ಜನ್ಮಮರಣಾದಿಃ ||

ಇತಿ || ತಸ್ಮಾತ್, ಉತ್ಕ್ರಾಂತ್ಯಾದಿದರ್ಶನಂ ವೈರಾಗ್ಯೋತ್ಪಾದನಾರ್ಥಮಧ್ಯಾರೋಪದೃಷ್ಟ್ಯೈವೇತಿ ಸ್ಥಿತಮ್ || ಅತ್ರ ಭಾಷ್ಯಮ್ -

(೨) ತತ್ರ ಪ್ರಥಮೇ ತಾವತ್ ಪಾದೇ ಪಂಚಾಗ್ನಿವಿದ್ಯಾಮಾಶ್ರಿತ್ಯ ಸಂಸಾರ-

---

ಸ್ವತಃ ಉತ್ಕ್ರಾಂತಿ ಇಲ್ಲ, ಎಂದು ಹೇಳಿರುವುದರಿಂದಲೂ, "(ಆತನು) ಅಪ್ರಾಣನು" (ಬೃ. ೩–೮–೮) ಎಂದು ಹೇಳುತ್ತಾ ಪರಮಾರ್ಥದೃಷ್ಟಿಯಿಂದ ಪ್ರಾಣವುಳ್ಳವನೆಂಬುದನ್ನು ಅಲ್ಲಗಳೆದಿರುವುದರಿಂದಲೂ (ಇದು ಗೊತ್ತಾಗುತ್ತದೆ). ಹೀಗೆಯೇ ಅಲ್ಲವೇ ಸಂಪ್ರದಾಯುವನ್ನು ಬಲ್ಲವರು ಹೇಳುತ್ತಾರೆ –

(೧) "ಮರಣದಲ್ಲೂ, ಹುಟ್ಟಿನಲ್ಲೂ, ಗತಿಯಲ್ಲೂ, ಆಗಮನದಲ್ಲೂ ಎಲ್ಲಾ ಶರೀರದಲ್ಲಿದ್ದುಕೊಂಡಿರುವಾಗಲೂ ಕೂಡ (ಈತನು) ಆಕಾಶಕ್ಕೆ ಸಮಾನವಾಗಿರುತ್ತಾನೆ" (ಗೌ.ಕಾ. ೩–೯). ಇಲ್ಲಿ ಭಾಷ್ಯವು,– ಘಟಾಕಾಶದ ಹುಟ್ಟು, ನಾಶ, ಹೋಗುವುದು, ಬರುವುದು (ಮತ್ತು) ಇರುವುದು ಎಂಬುದರಂತೆ ಎಲ್ಲಾ ಶರೀರಗಳಲ್ಲೂ ಆತ್ಮನಿಗೆ ಜನ್ಮಮರಣಾದಿಗಳು (ತೋರುತ್ತವೆ), (ಅವು ನಿಜವಾಗಿಲ್ಲ). ಆದ್ದರಿಂದ ಉತ್ಕ್ರಾಂತ್ಯಾದಿಗಳನ್ನು ತೋರಿಸಿರುವುದು (ಸಾಧಕರಿಗೆ) ವೈರಾಗ್ಯವನ್ನು ಹುಟ್ಟಿಸುವುದಕ್ಕಾಗಿ ಅಧ್ಯಾರೋಪದ ದೃಷ್ಟಿಯಿಂದಲೇ ಹೇಳಿದ್ದು (ಎಂಬುದು) ನಿರ್ಣಯವಾಯಿತು. ಇಲ್ಲಿ ಭಾಷ್ಯವು.

(೨) ಇಲ್ಲಿ ಮೊದಲನೆಯ ಪಾದದಲ್ಲಾದರೋ ಪಂಚಾಗ್ನಿವಿದ್ಯೆಯನ್ನಾ–

ಗತಿಪ್ರಭೇದಃ ಪ್ರದರ್ಶ್ಯತೇ ವೈರಾಗ್ಯಹೇತೋಃ | "ತಸ್ಮಾಜ್ಜುಗುಪ್ಸೇತ" ಇತಿ ಚಾಂತೇ ಶ್ರವಣಾತ್ || ಸೂ.ಭಾ. ೩-೧-೧.

೩೭. **ಸಾಮಾನ್ಯವಿಶೇಷಪ್ರಕ್ರಿಯಾ** - ಏವಮಾತ್ಮಾನಃ ಸಾಮಾನ್ಯತ್ವ-ಸ್ವೀಕಾರೋಽಪ್ಯಧ್ಯಾರೋಪದೃಷ್ಟ್ಯೈವೇತಿ ಮಂತವ್ಯಮ್ - ತತ್ರ ಶ್ರುತಿಃ "ಸ ಯಥಾ ದುಂದುಭೇರ್ಹನ್ಯಮಾನಸ್ಯ ನ ಬಾಹ್ಯಾಞ್ಶಬ್ದಾಞ್ಶಕ್ನುಯಾದ್ ಗ್ರಹಣಾಯ ದುಂದುಭೇಸ್ತು ಗ್ರಹಣೇನ ದುಂದುಭ್ಯಾಘಾತಸ್ಯ ವಾ ಶಬ್ದೋ ಗೃಹೀತಃ" (ಬೃ. ೨-೪-೭) ಇತ್ಯಾದಿ | ತತ್ರ ಭಾಷ್ಯವಚನೇ -

(೧) ದುಂದುಭೇಸ್ತು ಗ್ರಹಣೇನ ದುಂದುಭಿಶಬ್ದಸಾಮಾನ್ಯವಿಶೇಷತ್ವೇನ "ದುಂದುಭಿಶಬ್ದಾ ಏತೇ" ಇತಿ ಶಬ್ದವಿಶೇಷಾ ಗೃಹೀತಾ ಭವಂತಿ | ದುಂದುಭಿ-ಶಬ್ದಸಾಮಾನ್ಯವ್ಯತಿರೇಕೇಣಾಭಾವಾತ್ ತೇಷಾಮ್ |........ದುಂದುಭ್ಯಾಘಾತ-

---

ಶ್ರಯಿಸಿಕೊಂಡು ಸಂಸಾರಗತಿಯ ಪ್ರಭೇದವನ್ನು ವೈರಾಗ್ಯವುಂಟಾಗಲೆಂಬ ಅಭಿಪ್ರಾಯದಿಂದ ತೋರಿಸಿದೆ. ಹೇಗೆಂದರೆ ಕೊನೆಯಲ್ಲಿ "ಅದರಿಂದ ಜುಗುಪ್ಸಿತನಾಗಬೇಕು" (ಎಂದು) ಕೇಳಿಸುತ್ತಿದೆಯಾದ್ದರಿಂದ (ಇದು ಗೊತ್ತಾಗುತ್ತದೆ) (ಸೂ.ಭಾ. ೩–೧–೧).

**೩೭) ಸಾಮಾನ್ಯವಿಶೇಷಪ್ರಕ್ರಿಯೆಯು** – ಹೀಗೆಯೇ ಆತ್ಮನು ಎಲ್ಲಕ್ಕೂ ಸಾಮಾನ್ಯನಾಗಿದ್ದಾನೆಂಬುದನ್ನೂ ಅಧ್ಯಾರೋಪದೃಷ್ಟಿಯಿಂದಲೇ ಹೇಳಿದ್ದೆಂದು ತಿಳಿಯಬೇಕು. ಈ ವಿಷಯದಲ್ಲಿ ಶ್ರುತಿಯು – "ಅದು ಹೇಗೆ ದುಂದುಭಿಯನ್ನು ಬಾರಿಸುತ್ತಿರುವಾಗ (ಅದರಿಂದ) ಹೊರಚ್ಚಾದ ಶಬ್ದಗಳನ್ನು (ಅದಕ್ಕಿಂತ ಬೇರೆಯಾಗಿ) ಗ್ರಹಿಸುವುದಕ್ಕಾಗುವುದಿಲ್ಲವೋ, "ದುಂದುಭಿಯವು ಇವು" ಎಂದು ತಿಳಿಯುವುದರಿಂದಲೂ ದುಂದುಭಿಯ ಹೊಡೆತದ್ದಾಗಿರುವ ಶಬ್ದಗಳು ಇವು" ಎಂಬುದಾಗಲೀ ತಿಳಿಯುವುದರಿಂದ ಇದು ತಿಳಿದಂತಾಗುತ್ತದೋ (ಹಾಗೆಯೇ ಇದು), (ಬೃ. ೨–೪–೭) ಅಲ್ಲಿ ಭಾಷ್ಯವಾಕ್ಯಗಳು (ಹೀಗಿವೆ)–

(೧) ದುಂದುಭಿಯವು ಇವು ಎಂದು ಗ್ರಹಿಸುವುದರಿಂದ ದುಂದುಭಿಯ ಶಬ್ದಸಾಮಾನ್ಯದ ವಿಶೇಷಗಳೆಂದು, "ಇವು ದುಂದುಭಿಯ ಶಬ್ದಗಳು" ಎಂದು ಗ್ರಹಿಸುವುದರಿಂದ ಆ ಶಬ್ಧ ವಿಶೇಷಗಳನ್ನು, ಅವು ದುಂದುಭಿಯ ಶಬ್ದಸಾಮಾನ್ಯವನ್ನು ಬಿಟ್ಟಿರುವುದಿಲ್ಲವಾದ್ದರಿಂದ ಅವನ್ನು ಗ್ರಹಿಸಬಹುದೋ.... ದುಂದುಭಿಯನ್ನು ಬಾರಿಸುವಿಕೆಯಿಂದ ಕೂಡಿರುವ ಶಬ್ದಸಾಮಾನ್ಯವನ್ನು

ವಿಶಿಷ್ಟಸ್ಯ ಶಬ್ದಸಾಮಾನ್ಯಸ್ಯ ಗ್ರಹಣೇನ ತದ್ಗತಾ ವಿಶೇಷಾ ಗೃಹೀತಾ ಭವಂತಿ | ನ ತು ತ ಏವ ನಿರ್ಭಿದ್ಯ ಗ್ರಹೀತುಂ ಶಕ್ಯಂತೇ | ವಿಶೇಷರೂಪೇಣಾಭಾವಾತ್ ತೇಷಾಮ್| ತಥಾ ಪ್ರಜ್ಞಾನವ್ಯತಿರೇಕೇಣ ಸ್ವಪ್ನಜಾಗರಿತಯೋರ್ನ ಕಶ್ಚಿದ್ ವಸ್ತುವಿಶೇಷೋ ಗೃಹ್ಯತೇ | ತಸ್ಮಾತ್ ಪ್ರಜ್ಞಾನವ್ಯತಿರೇಕೇಣ ಅಭಾವೋ ಯುಕ್ತಸ್ತೇಷಾಮ್ || ಬೃ.ಭಾ. ೨-೪-೭.

(೨) ಅನೇಕದೃಷ್ಟಾಂತೋಪಾದಾನಮ್ ಇಹ ಸಾಮಾನ್ಯಬಹುತ್ವಖ್ಯಾಪನಾರ್ಥಮ್| ಅನೇಕೇ ಹಿ ವಿಲಕ್ಷಣಾಃ, ಚೇತನಾಚೇತನರೂಪಾಃ ಸಾಮಾನ್ಯವಿಶೇಷಾಃ | ತೇಷಾಂ ಪಾರಂಪರ್ಯಗತ್ಯಾ ಯಥೈಕಸ್ಮಿನ್ ಮಹಾಸಾಮಾನ್ಯೇ ಅಂತರ್ಭಾವಃ ಪ್ರಜ್ಞಾನಘನೇ ಕಥಂ ನಾಮ ಪ್ರದರ್ಶಯಿತವ್ಯ ಇತಿ | ದುಂದುಭಿಶಂಖವೀಣಾಶಬ್ದಸಾಮಾನ್ಯ-ವಿಶೇಷಾಣಾಂ ಯಥಾ ಶಬ್ದತ್ವೇಽಂತರ್ಭಾವಃ, ಏವಂ ಸ್ಥಿತಿಕಾಲೇ ತಾವತ್ ಸಾಮಾನ್ಯವಿಶೇಷಾವ್ಯತಿರೇಕಾತ್ ಬ್ರಹ್ಮೈಕತ್ವಂ ಶಕ್ಯಮವಗಂತುಮ್ ||

ಬೃ.ಭಾ. ೨-೪-೯.

---

ಗ್ರಹಿಸುವುದರಿಂದ ಅದರಲ್ಲಿರುವ ವಿಶೇಷಗಳನ್ನೂ ತಿಳಿಯುವುದಕ್ಕಾಗುವುದೋ, ಆದರೆ ಆ ವಿಶೇಷಗಳನ್ನೇ – ವಿಶೇಷರೂಪದಿಂದ ಅವು ಬೇರೆಯಾಗಿ ಇಲ್ಲದ್ದರಿಂದ ಬೇರ್ಪಡಿಸಿಕೊಂಡು ಗ್ರಹಿಸುವುದಕ್ಕಾಗುವುದಿಲ್ಲವೋ, ಹಾಗೆಯೇ ಪ್ರಜ್ಞಾನವನ್ನು ಬಿಟ್ಟು ಸ್ವಪ್ನಜಾಗರಿತಗಳಲ್ಲಿ ಯಾವುದೊಂದು ವಸ್ತುವಿಶೇಷ-ಗಳನ್ನೂ ಗ್ರಹಿಸುವುದಕ್ಕಾಗುವುದಿಲ್ಲ. ಆದ್ದರಿಂದ ಅವು ಪ್ರಜ್ಞಾನವನ್ನು ಬಿಟ್ಟು ಬೇರೆಯಾಗಿಲ್ಲ ಎಂಬುದೇ ಯುಕ್ತವು" (ಬೃ. ೨-೪-೭) (ಭಾ. ೩೬೧)

(೨) "ಅನೇಕ ದೃಷ್ಟಾಂತಗಳನ್ನು ತೆಗೆದುಕೊಂಡಿರುವುದು ಸಾಮಾನ್ಯಗಳು ಅನೇಕವಾಗಿವೆ ಎಂಬುದನ್ನು ತಿಳಿಸುವುದಕ್ಕೆ. ಏಕೆಂದರೆ ಚೇತನಾಚೇತನ ರೂಪವಾಗಿರುವ ವಿಲಕ್ಷಣವಾದ ಸಾಮಾನ್ಯವಿಶೇಷಗಳು ಅನೇಕವಾಗಿರುತ್ತವೆ. ಅವುಗಳೆಲ್ಲವೂ ದುಂದುಭಿ, ಶಂಖ, ವೀಣೆ ಇವುಗಳ ಶಬ್ದಸಾಮಾನ್ಯವಿಶೇಷಗಳು ಶಬ್ದತ್ವದಲ್ಲಿ ಸೇರಿಹೋಗುವಂತೆ – ಪರಂಪರೆಯಿಂದ ಒಂದೇ ಆದ ಪ್ರಜ್ಞಾನಘನವಾದ ಮಹಾಸಾಮಾನ್ಯದಲ್ಲಿ ಸೇರಿ ಹೋಗಿರುವವೆಂದು ಹೇಗಾದರೂ ತಿಳಿಸಿಕೊಡೋಣವೆಂದು ಶ್ರುತಿಯು ಅನೇಕ ದೃಷ್ಟಾಂತವನ್ನು ಕೊಟ್ಟಿರುತ್ತದೆ. ಹೀಗೆ ಮೊದಲನೆಯದಾಗಿ ಸ್ಥಿತಿಕಾಲದಲ್ಲಿ ಸಾಮಾನ್ಯ ವಿಶೇಷಗಳು ಅದನ್ನು ಬಿಟ್ಟಿರುವುದಿಲ್ಲವಾದ್ದರಿಂದ ಅವು ಬ್ರಹ್ಮದೊಡನೆ ಒಂದಾಗಿರುವವು ಎಂದು ನಿಶ್ಚಯಿಸುವುದಕ್ಕಾಗುತ್ತದೆ (ಬೃ. ೨-೪-೯, ಭಾ.

ಅತ್ರ ಹಿ ಬ್ರಹ್ಮಣೋ ಮಹಾಸಾಮಾನ್ಯತ್ವಂ ನ ವಿವಕ್ಷಿತಮ್ | ಅನಾತ್ಮವಸ್ತುನಃ ಸರ್ವಸ್ಯಾನೃತತ್ವಾದೇವ ವಿಶೇಷತ್ವಾಸಂಭವೇ ಆತ್ಮನಸ್ತತ್ಸಾಮಾನ್ಯತ್ವಾನವಕ್ಲೃಪ್ತೇಃ | ಉಕ್ತಂ ಹಿ ಗೀತಾಭಾಷ್ಯೇ -

> (೩) ಸರ್ವತ್ರ ದ್ವೇ ಬುದ್ಧೀ ಸರ್ವೈರುಪಲಭ್ಯೇತೇ ಸಾಮಾನಾಧಿಕರಣ್ಯೇನ ನೀಲೋತ್ಪಲವತ್ "ಸನ್ ಘಟಃ", "ಸನ್ ಪಟಃ", "ಸನ್ ಹಸ್ತೀ" ಇತ್ಯೇವಂ ಸರ್ವತ್ರ | ತಯೋರ್ಬುದ್ಧ್ಯೋರ್ಘಟಾದಿಬುದ್ಧಿರ್ವ್ಯಭಿಚರತಿ | ತಥಾ ಚ ದರ್ಶಿತಮ್ ನ ತು ಸದ್ಬುದ್ಧಿಃ | ....ಏವಮಾತ್ಮಾನಾತ್ಮನೋಃ ಸದಸತೋ-ರುಭಯೋರಪಿ ದೃಷ್ಟ ಉಪಲಬ್ಧ್ಯೋಽಂತೋ ನಿರ್ಣಯಃ, ಸತ್ ಸದೇವ, ಅಸತ್ ಅಸದೇವೇತಿ || ಗೀ.ಭಾ. ೨-೧೬.

ಇತಿ | ನ ಚ ನಿರ್ವಿಶೇಷಂ ಸಾಮಾನ್ಯಂ ನಾಮಾಸ್ತೀತಿ ಸಾಮಾನ್ಯತ್ವಮಧ್ಯಾರೋಪ-ದೃಷ್ಟ್ಯೈವಾತ್ಮನ ಇತಿ ಸಿದ್ಧಮ್ ||

---

೩೬೩). ಈ ಸ್ಥಳದಲ್ಲಿ ಬ್ರಹ್ಮವು ಮಹಾಸಾಮಾನ್ಯವಾಗಿದೆ ಎಂದು ಹೇಳುವುದಕ್ಕೆ ಶ್ರುತಿಯು ಇಷ್ಟಪಟ್ಟುಕೊಂಡಿರುವುದಿಲ್ಲ, (ಏಕೆಂದರೆ) ಅನಾತ್ಮವಸ್ತುವೆಲ್ಲವೂ ಅನೃತವಾದದ್ದಾದ್ದರಿಂದಲೇ ಅದು ವಿಶೇಷವಲ್ಲವೆಂದಾಗಿ ಆತ್ಮನೂ ಸಾಮಾನ್ಯವೆಂಬುದು ಹೊಂದದೇ ಇರುವಂಥದ್ದಾಗಿರುತ್ತದೆ. ಇದನ್ನು ಗೀತಾಭಾಷ್ಯದಲ್ಲಿ ಹೇಳಿಯೂ ಇದ್ದಾರೆ –

(೩) "ಎಲ್ಲಾ ಕಡೆಯಲ್ಲೂ ಎಲ್ಲರಿಗೂ ಸಾಮಾನಾಧಿಕರಣ್ಯವಾಗಿ ನೀಲೋತ್ಪಲದಂತೆ ಎರಡು ಬುದ್ಧಿ ತೋರಿಬರುತ್ತಿವೆ. (ಹೇಗೆಂದರೆ)– "ಇರುವ ಗಡಿಗೆ", "ಇರುವ ಬಟ್ಟೆ", "ಇರುವ ಆನೆ" ಎಂಬುದಾಗಿ (ತೋರುತ್ತಿದೆ). ಈ ಎರಡು ಬುದ್ಧಿಗಳಲ್ಲಿ ಗಡಿಗೆ ಮುಂತಾದ ಬುದ್ಧಿಯು ಸುಳ್ಳಾದದ್ದಾಗಿದೆ. ಆದರೆ ಇದೆ ಎಂಬ ಬುದ್ಧಿಯು (ಅಲ್ಲಿ) ಬಿಟ್ಟು ಹೋಗುವುದಿಲ್ಲ (ಸುಳ್ಳಾಗುವುದಿಲ್ಲ). ಹಾಗೆಯೇ ನಾವು ಇದನ್ನು (ಹಿಂದೆ) ತೋರಿಸಿದ್ದೇವೆ. ಹೀಗೆಯೇ ಸತ್ ಅಸತ್ ಆದ ಆತ್ಮಾನಾತ್ಮರುಗಳೆರಡಕ್ಕೂ ಸತ್ ಸತ್ತೇ, ಅಸತ್ ಅಸತ್ತೇ ಎಂಬುದಾಗಿ ನಿರ್ಣಯವು ಕಂಡುಬಂದಿದೆ" (ಗೀ.ಭಾ. ೨–೧೬) ನಿರ್ವಿಶೇಷವಾದ ಸಾಮಾನ್ಯವೆಂಬುದು ಇಲ್ಲವಾದ್ದರಿಂದ ಆತ್ಮನಿಗೆ ಸಾಮಾನ್ಯತ್ವವನ್ನು ಅಧ್ಯಾರೋಪದೃಷ್ಟಿಯಿಂದಲೇ ಹೇಳಿದ್ದು ಎಂಬುದು ಸಿದ್ಧವಾಯಿತು.

೩೮. ಅವಸ್ಥಾತ್ರಯದೃಷ್ಟಿರಪ್ಯಧ್ಯಾರೋಪೇಣೈವ - ಏವಮ್ "ಜಾಗರಿತಸ್ಥಾನೋ ಬಹಿಃಪ್ರಜ್ಞಃ....ಸ್ಥೂಲಭುಗ್ವೈಶ್ವಾನರಃ" (ಮಾಂ. ೩), "ಸ್ವಪ್ನಸ್ಥಾನೋಽಂತಃಪ್ರಜ್ಞಃ.....ಪ್ರವಿವಿಕ್ತಭುಕ್ತೈಜಸಃ" (ಮಾಂ. ೪), "ಸುಷುಪ್ತಸ್ಥಾನ ಏಕೀಭೂತಃ ಪ್ರಜ್ಞಾನಘನ ಏವಾನಂದಮಯೋ ಹ್ಯಾನಂದಭುಕ್ ಚೇತೋಮುಖಃ ಪ್ರಾಜ್ಞಃ" (ಮಾಂ. ೫) ಇತ್ಯಾತ್ಮನೋಽವಸ್ಥಾವತ್ತ್ವಮಪಿ | ತಸ್ಯಾಧಿದೈವತವೈಶ್ವಾನರತ್ವಾದ್ಯುಪದೇಶೇನ ಪರಿಚ್ಛಿನ್ನತ್ವನಿವಾರಣಾರ್ಥತ್ವಾತ್ | "ನಾಂತಃಪ್ರಜ್ಞಂ ನ ಬಹಿಃಪ್ರಜ್ಞಂ ನೋಭಯತಃಪ್ರಜ್ಞಂ ನ ಪ್ರಜ್ಞಾನಘನಂ ನ ಪ್ರಜ್ಞಂ ನಾಪ್ರಜ್ಞಮ್" (ಮಾಂ. ೭) ಇತ್ಯಾದಿನಾ ಸರ್ವಾವಸ್ಥಾಸಂಬಂಧಾಪವಾದೇನ ನಿರ್ವಿಶೇಷತ್ವದರ್ಶನಾತ್ | ತಥಾ ಹಿ ಭಾಷ್ಯಂ ದ್ವಾದಶಮಂತ್ರವ್ಯಾಖ್ಯಾನಾವಸರೇ ಅಭಿಧಾನಾಭಿಧೇಯರಹಿತಪರಿಶುದ್ಧೋಂಕಾರಸ್ವರೂಪಮಾತ್ಮಾನಂ ದರ್ಶಯಿತ್ವಾ ಪ್ರಾಹ -

---

**೩೮) ಅವಸ್ಥಾತ್ರಯದೃಷ್ಟಿಯೂ ಸಹ ಅಧ್ಯಾರೋಪದಿಂದಲೇ ಹೇಳಿದ್ದು.** ಇದೇ ರೀತಿ "ಎಚ್ಚರವನ್ನೇ ಸ್ಥಾನವನ್ನಾಗಿ ಉಳ್ಳವನು..... ಸ್ಥೂಲ-ಭೋಗವನ್ನುಳ್ಳ ವೈಶ್ವಾನರನು (ಮಾಂ. ೩) ಸ್ವಪ್ನವನ್ನು ಸ್ಥಾನವನ್ನಾಗಿ ಉಳ್ಳವನು.... ಬಿಂಗಡವಾದ ಭೋಗವನ್ನುಳ್ಳ ತೈಜಸಾತ್ಮನು (ಮಾಂ. ೪) ಸುಷುಪ್ತಿಯನ್ನೇ ಸ್ಥಾನವನ್ನಾಗಿ ಒಂದಾದವನೂ, ಅರಿವಿನ ಗಟ್ಟಿಯೇ ಆಗಿರುವನು, ಆನಂದಮಯನು ಆನಂದವನ್ನನುಭವಿಸುವವನು, ಚೇತೋಮುಖನು ಪ್ರಾಜ್ಞನು" (ಮಾ. ೫) ಎಂಬುದಾಗಿ ಆತ್ಮನಿಗೆ ಅವಸ್ಥೆ ಇದೆ ಎಂಬುದೂ ಅಧ್ಯಾರೋಪ ದೃಷ್ಟಿಯಿಂದಲೇ (ಹೇಳಿದ್ದು). ಹೇಗೆಂದರೆ, ಆತ್ಮನಿಗೆ ಅಧಿದೈವತವಾದ ವೈಶ್ವಾನರನೇ ಮುಂತಾದ ಉಪದೇಶದಿಂದ (ಆಯಾ ಅವಸ್ಥೆಗೆ) ಪರಿಚ್ಛಿನ್ನನಾಗಿದ್ದಾನೆ ಎಂಬುದನ್ನು ಕಳೆಯುವುದಕ್ಕಾಗಿ ಹೇಳಿರುವುದರಿಂದ (ಇದು ಗೊತ್ತಾಗುತ್ತದೆ). ಹಾಗೆಯೇ "ಅನ್ತಃಪ್ರಜ್ಞನಲ್ಲ, ಬಹಿಃಪ್ರಜ್ಞನಲ್ಲ, ಈ ಎರಡೂ ಪ್ರಜ್ಞೆಯವನೂ ಅಲ್ಲ, ಪ್ರಜ್ಞಾನಘನನೂ ಅಲ್ಲ, ಪ್ರಜ್ಞನೂ ಅಲ್ಲ, ಅಪ್ರಜ್ಞನೂ ಅಲ್ಲ" (ಮಾಂ. ೭) ಎಂಬುದಾಗಿ ಎಲ್ಲಾ ಅವಸ್ಥೆಯ ಸಂಬಂಧವನ್ನು ಅಪವಾದ ಮಾಡುವುದರ ಮೂಲಕ ನಿರ್ವಿಶೇಷನಾಗಿದ್ದಾನೆಂದು ತಿಳಿಸುತ್ತಿದೆ. ಹಾಗೆಯೇ ಭಾಷ್ಯವೂ ಸಹ ಹನ್ನೆರಡನೆಯ ಮನ್ತ್ರವ್ಯಾಖ್ಯಾನವನ್ನು ಮಾಡುವ ಸಂದರ್ಭದಲ್ಲಿ ಅಭಿಧಾನವೂ ಅಭಿಧೇಯವೂ ಇಲ್ಲದ ಪರಿಶುದ್ಧವಾದ ಓಂಕಾರಸ್ವರೂಪನಾದ ಆತ್ಮನನ್ನು ತೋರಿಸಿ ಹೇಳುತ್ತದೆ. "ಪ್ರಪಂಚೋಪಶಮನಾದ ಶಿವನಾದ ಅದ್ವೈತನಾದ ಆತ್ಮನೇ

ಪ್ರಪಂಚೋಪಶಮಃ ಶಿವೋಽದ್ವೈತಃ ಸಂವೃತ್ತಃ | ಏವಂ ಯಥೋಕ್ತವಿಜ್ಞಾನವತಾ ಪ್ರಯುಕ್ತ ಓಂಕಾರಸ್ತ್ರಿಮಾತ್ರಃ, ತ್ರಿಪಾದ ಆತ್ಮೈವ | ಸಂವಿಶತ್ಯಾತ್ಮನಾ ಸ್ವೇನೈವ ಸ್ವಂ ಪಾರಮಾರ್ಥಿಕಮಾತ್ಮಾನಂ ಯ ಏವಂ ವೇದ | ಪರಮಾರ್ಥದರ್ಶನಾದ್ ಬ್ರಹ್ಮವಿತ್ ತೃತೀಯಂ ಬೀಜಭಾವಂ ದಗ್ಧ್ವಾ ಆತ್ಮಾನಂ ಪ್ರವಿಷ್ಟ ಇತಿ ನ ಪುನರ್ಜಾಯತೇ | ತುರೀಯಸ್ಯ ಅಬೀಜತ್ವಾತ್ | ನ ಹಿ ರಜ್ಜುಸರ್ಪಯೋರ್ವಿವೇಕೇ ರಜ್ಜ್ವಾಂ ಪ್ರವಿಷ್ಟಃ ಸರ್ಪಃ ಬುದ್ಧಿಸಂಸ್ಕಾರಾತ್ ಪುನಃ ಪೂರ್ವವದ್ ವಿವೇಕಿನಾಂ ಉತ್ಥಾಸ್ಯತಿ || ಮಾಂ.ಭಾ. ೧೨.

ಇತಿ ||

೩೯. ಬಂಧಮೋಕ್ಷಾದಿಸರ್ವವ್ಯವಹಾರೋಽಪ್ಯಧ್ಯಾರೋಪದೃಷ್ಟ್ಯೈವ - ಕಿಂ ಬಹುನಾ ? ಅಸ್ಮಿನ್ ಕಿರಣೇ ಯೇ ಯೇ ಪ್ರದರ್ಶಿತಾಃ ಪ್ರಕ್ರಿಯಾವಿಶೇಷಾಃ, ಅನುಕ್ತಾಶ್ಚಾತ್ರ ಯೇ ಯೇ ಉಪನಿಷತ್ಸು ಸಮುಪಾತ್ತಾಃ, ತೇ ಸರ್ವೇ

---

ಆಗಿಬಿಟ್ಟಿರುವನು. ಹೀಗೆ ಮೇಲೆ ಹೇಳಿರುವ ಅರಿವನ್ನುಳ್ಳಾತನು ಉಚ್ಚರಿಸಿದ ಓಂಕಾರವು ಮೂರು ಮಾತ್ರೆಗಳು, ಮೂರುಪಾದಗಳು ಇರುವುದಾದರೂ ಆತ್ಮನೇ. ಯಾವನು ಹೀಗೆಂದು ತಿಳಿಯುವನೋ (ಅವನು) "ಆತ್ಮನಾ" ಎಂದರೆ ತನ್ನಿಂದಲೇ "ಆತ್ಮಾನಂ" ಎಂದರೆ ಪಾರಮಾರ್ಥಿಕವಾದ ತನ್ನ ಸ್ವರೂಪವನ್ನೇ ಚೆನ್ನಾಗಿ ಸೇರಿಕೊಳ್ಳುವನು. ಪರಮಾರ್ಥವನ್ನು ಕಂಡು-ಕೊಂಡಿರುವ ಬ್ರಹ್ಮಜ್ಞಾನಿಯು ಮೂರನೆಯದಾದ ಬೀಜರೂಪವನ್ನು ಸುಟ್ಟು ಆತ್ಮ ಸ್ವರೂಪವನ್ನು ಪ್ರವೇಶಿಸುವುದರಿಂದ ಮತ್ತೆ ಹುಟ್ಟುವುದಿಲ್ಲ. ಏಕೆಂದರೆ ತುರೀಯನಲ್ಲಿ ಬೀಜವಿರುವುದಿಲ್ಲ. ಹಗ್ಗವನ್ನು ಹಾವಿನಿಂದ ವಿಂಗಡಿಸಿ ಅರಿತುಕೊಳ್ಳಲಾಗಿ ಹಗ್ಗದಲ್ಲಿ ಹೊಕ್ಕ ಹಾವು ಬುದ್ಧಿಯ ಸಂಸ್ಕಾರದಿಂದ ಮತ್ತೆ ಮೊದಲಿನಂತೆ ಅದನ್ನು ವಿಂಗಡಿಸಿ ಅರಿತವರಿಗೆ ಹುಟ್ಟುಕೊಳ್ಳುವುದಿಲ್ಲವಷ್ಟೇ? (ಮಾಂ.ಮಂ.೧೨, ಭಾ.ಭಾ. ೬೮).

**೩೯) ಬಂಧಮೋಕ್ಷವೇ ಮೊದಲಾದ ಎಲ್ಲಾ ವ್ಯವಹಾರವೂ ಸಹ ಅಧ್ಯಾರೋಪದೃಷ್ಟಿಯಿಂದಲೇ.** ಹೆಚ್ಚೇನು ಹೇಳುವುದು! ಈ ಕಿರಣದಲ್ಲಿ ಯಾವ ಯಾವ ಪ್ರಕ್ರಿಯಾ ವಿಶೇಷಗಳನ್ನು ತೋರಿಸಿದ್ದೇವೆಯೋ, ಇನ್ನೂ ತೋರಿಸದೇ ಇದ್ದದ್ದಾದ ಉಪನಿಷತ್ತಿನಲ್ಲಿ ಸ್ವೀಕರಿಸಿದ್ದಾದ ಯಾವ ಯಾವ ಪ್ರಕ್ರಿಯೆಗಳಿವೆಯೋ ಅವುಗಳೆಲ್ಲವೂ ಕೂಡ ಅಧ್ಯಾರೋಪದ

ಅಧ್ಯಾರೋಪದೃಷ್ಟ್ಯೈವ ಪ್ರತ್ಯಸ್ತಮಿತಸರ್ವವಿಶೇಷಂ ನಿತ್ಯಶುದ್ಧಬುದ್ಧಮುಕ್ತಸ್ವಭಾವಂ ವಸ್ತು ಜ್ಞಾಪಯಿತುಮುಪಾಯತ್ವೇನೈವ ಕಲ್ಪಿತಾಃ, ನ ತು ವಸ್ತುನಿ ಪ್ರಕ್ರಿಯಾರ್ಪಿತಾ ಧರ್ಮಾಃ ಕಥಮಪಿ ಕಂಚಿದಪಿ ವಿಶೇಷಮಾಧಾತುಂ ಶಕ್ನುವಂತೀತ್ಯೇಷ ವೇದಾಂತ-ಸಿದ್ಧಾಂತಃ | ಯೋಽಯಂ ವಿಜ್ಞಾನಮಯ ಇತಿ ಸಂಸಾರಬದ್ಧ ಇತ್ಯಾಭಾತ್ಯಜ್ಞದೃಷ್ಟ್ಯಾ, ಸ ಏಷ ನಿತ್ಯನಿರಸ್ತಸರ್ವವಿಶೇಷಂ ಬ್ರಹ್ಮೈವ - ಇತಿ ಜ್ಞಾನಮಾಧಾತುಮೇವ ಹಿ ವಿವಿಧಪ್ರಕ್ರಿಯಾಂಗೀಕಾರೇಣ ಸರ್ವವೇದಾಂತಪ್ರವೃತ್ತಿರಿತಿ | ತಥಾ ಹಿ ಶ್ರುತಿಃ -

(೧) ತದೇತದ್ ಬ್ರಹ್ಮಾಪೂರ್ವಮನಪರಮನಂತರಮಬಾಹ್ಯಮಯಮಾತ್ಮಾ ಬ್ರಹ್ಮ ಸರ್ವಾನುಭೂಃ ||　ಬೃ. ೨-೫-೧೯.

(೨) ಸ ವಾ ಏಷ ಮಹಾನಜ ಆತ್ಮಾಽಜರೋಽಮರೋಽಮೃತೋಽಭಯೋ ಬ್ರಹ್ಮಾಭಯಂ ವೈ ಬ್ರಹ್ಮಾಭಯಂ ಹಿ ವೈ ಬ್ರಹ್ಮ ಭವತಿ ಯ ಏವಂ ವೇದ ||
ಬೃ. ೪-೪-೨೫.

---

ದೃಷ್ಟಿಯಿಂದಲೇ. (ಅವನ್ನು) ಸಮಸ್ತ ವಿಶೇಷಗಳೂ ಅಡಗಿಹೋದ ನಿತ್ಯಶುದ್ಧ-ಬುದ್ಧ-ಮುಕ್ತ-ಸ್ವಭಾವವಾದ ವಸ್ತುವನ್ನು ತಿಳಿಸುವುದಕ್ಕೆ ಉಪಾಯವಾಗಿ ಕಲ್ಪಿಸಿರುತ್ತದೆ. ಅಷ್ಟೇ ಹೊರತು ಪ್ರಕ್ರಿಯೆಯಿಂದ ತಿಳಿದು ಬಂದ ಗುಣಗಳು (ಯಾವುವೂ) ವಸ್ತುವಿನಲ್ಲಿ ಹೇಗೂ ಸ್ವಲ್ಪವೂ (ಯಾವ) ವಿಶೇಷವನ್ನೂ ಇಡಲು ಸಮರ್ಥವಾಗುವುದಿಲ್ಲ ಎಂಬುದೇ ವೇದಾನ್ತ ಸಿದ್ಧಾಂತವು. ಅಜ್ಞರ ದೃಷ್ಟಿಯಿಂದ ಸಂಸಾರಕ್ಕೆ ಕಟ್ಟುಬಿದ್ದಿರುವನೆಂದು ಯಾವ ವಿಜ್ಞಾನಮಯನು (ತೋರಿಬರುತ್ತಿದ್ದಾನೆ), ಆ ಈತನೇ ಯಾವಾಗಲೂ ಯಾವ ವಿಶೇಷವೂ ಇಲ್ಲದ ಬ್ರಹ್ಮವೇ ಎಂಬ ಜ್ಞಾನವನ್ನುಂಟುಮಾಡುವುದಕ್ಕಾಗಿಯೇ ಬೇರೆ ಬೇರೆ ತರಹದ ಪ್ರಕ್ರಿಯೆಗಳನ್ನು ಒಪ್ಪಿಕೊಳ್ಳುವುದರ ಮೂಲಕ ಎಲ್ಲಾ ವೇದಾಂತಗಳೂ ಹೊರಟಿವೆ, ಹಾಗೆಯೇ ಶ್ರುತಿಯು ಇರುತ್ತದೆ.

(೧) "ಆ ಈ ಬ್ರಹ್ಮನು ಕಾರಣವಲ್ಲದ್ದು, ಕಾರ್ಯವಲ್ಲದ್ದು, (ಅದಕ್ಕೂ ಕಾರಣವಿಲ್ಲ, ಅದರಿಂದಲೂ ಏನು ಹುಟ್ಟಿಲ್ಲ) ಒಳಗೆ ಹೊರಗೆ ಎಂಬುದಿಲ್ಲದ್ದಾದದ್ದು. ಈ ಆತ್ಮನೇ ಸರ್ವವನ್ನೂ (ರನ್ನೂ) ಅನುಭವಿಸುವ ಬ್ರಹ್ಮವಾಗಿದೆ. (ಸ್ವಯಂ ಅನುಭವಸ್ವರೂಪನು ಎಂದರ್ಥ) . (ಬೃ. ೨-೫-೧೯)

(೨) ಆ ಈ ಆತ್ಮನು ಮಹಾನ್ತನಾದ ಅಜನಾದ ಆತ್ಮನು, ಮುಪ್ಪಿಲ್ಲದವನು,

(೩) ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ ತತ್ತ್ವಮಸಿ ||

ಛಾಂ. ೬-೮-೭.

ಇತಿ ಚ | ಆಹ ಚ ಭಾಷ್ಯಕಾರೋ ಬೃಹದಾರಣ್ಯಕವ್ಯಾಖ್ಯಾನಪ್ರಸಂಗೇನ -

(೧) ಚತುರ್ಷ್ವಪಿ ಪ್ರಪಾಠಕೇಷ್ವೇಕ ಆತ್ಮಾ ತುಲ್ಯೋ ನಿರ್ಧಾರಿತಃ ಪರಂ ಬ್ರಹ್ಮ| ಉಪಾಯವಿಶೇಷಸ್ತು ತಸ್ಯಾಧಿಗಮೇ ಅನ್ಯಶ್ಚಾನ್ಯಶ್ಚ | ಉಪೇಯಸ್ತು ಸ ಏವಾತ್ಮಾ ಯಶ್ಚತುರ್ಥೇ "ಅಥಾತ ಆದೇಶೋ ನೇತಿ ನೇತಿ" ಇತಿ ನಿರ್ದಿಷ್ಟಃ ||

ಬೃ.ಭಾ. ೪-೫-೧೫.

ಇತಿ | ನ ಚ ನಿರ್ವಿಶೇಷತ್ವಾದವಿಷಯತ್ವಾಚ್ಚ ತದ್ವಿಷಯಕಜ್ಞಾನಾನುಪಪತ್ತೇಃ ಶೂನ್ಯಕಲ್ಪತ್ವಮ್ | ಸ್ವಯಂಸಿದ್ಧಚಿದ್ರೂಪತ್ವಾತ್, ಸರ್ವಸ್ಯಾತ್ಮತ್ವಾಚ್ಚ ಸ್ವಪ್ರಕಾಶಕಜ್ಞಾನಾಂತರಾನಪೇಕ್ಷತ್ವಾತ್ | ನ ಚ ಸ್ವಯಂಸಿದ್ಧತ್ವೇ ಬ್ರಹ್ಮವಿದ್ಯೋಪದೇಶಾನಾಮಪ್ರಾಮಾಣ್ಯಪ್ರಸಂಗಃ, ವೇದಿತುರೇವ ಬ್ರಹ್ಮತ್ವೇನ ಆತ್ಮನಿ ಕರ್ತೃಕರ್ಮತ್ವಾನುಪಪತ್ತೌ ಸ್ವಾತ್ಮವಿಷಯಕವಿದ್ಯೋತ್ಪತ್ತ್ಯಾಕಾಂಕ್ಷಾನುಪಪತ್ತಿಶ್ಚ - ಇತಿ ಶಂಕ್ಯಮ್|

---

ಮರಣವಿಲ್ಲದವನು, ಅಮೃತನು, ಹೆದರಿಕೆ ಇಲ್ಲದ ಬ್ರಹ್ಮನು, ಯಾವನು ಇದನ್ನು ಹೀಗೆ ಅರಿತಿರುವನೋ ಅವನೂ ಹೆದರಿಕೆ ಇಲ್ಲದ ಬ್ರಹ್ಮನಾಗುವನು (ಬೃ. ೪-೪-೨೫)

(೩) ಇದೆಲ್ಲವೂ ಇದನ್ನೇ ಆತ್ಮವುಳ್ಳದ್ದಾಗಿದೆ, ಅದು ಸತ್ಯವು, ಅವನು ಆತ್ಮನು ಅದೇ ನೀನಾಗಿರುವೆ (ಛಾಂ. ೬-೮-೭). ಬೃಹದಾರಣ್ಯಕ ಶ್ರುತಿಯನ್ನು ವ್ಯಾಖ್ಯಾನವನ್ನು ಮಾಡುವ ಪ್ರಸಂಗದಿಂದ ಭಾಷ್ಯಕಾರರೂ ಸಹ ಹೇಳಿರುತ್ತಾರೆ.

(೧) ನಾಲ್ಕು ಅಧ್ಯಾಯಗಳಲ್ಲೂ ಸಮಾನವಾಗಿ ಒಬ್ಬ ಆತ್ಮನೇ ಪರಬ್ರಹ್ಮವೆಂದು ನಿರ್ಣಯವಾಗಿದೆ. ಅವನನ್ನರಿಯಲು ಬೇರೆ ಬೇರೆಯದಾದ ಉಪಾಯವಿಶೇಷವನ್ನು (ಮಾತ್ರ ಹೇಳಿದೆ). ಪಡೆಯಬೇಕಾದವನು ಆ ಆತ್ಮನೇ. ಯಾವಾತನನ್ನು ಎರಡನೆಯ ಅಧ್ಯಾಯದಲ್ಲಿ "ಇದಲ್ಲ ಇದಲ್ಲ ಎಂದು ತಿಳಿಸಿದೆಯೋ (ಆತನೇ)" (ಬೃ.ಭಾ. ೪-೪-೧೫) ಎಂದಿದ್ದಾರೆ.

(ಆತ್ಮನು) ನಿರ್ವಿಶೇಷನಾಗಿರುವುದರಿಂದಲೂ ವಿಷಯನಲ್ಲದವನಾದ್ದರಿಂದಲೂ ಆತನ ವಿಷಯದ ಜ್ಞಾನವೆಂಬುದು ಹೊಂದುವುದಿಲ್ಲವಾದ್ದರಿಂದ ಶೂನ್ಯಕ್ಕೆ ಸಮಾನವಲ್ಲ. ಏಕೆಂದರೆ (ಆತ್ಮನು) ಸ್ವಯಂಸಿದ್ಧನಾದ

ಬ್ರಹ್ಮಣೋ ವೇದಿತುರಾತ್ಮತ್ವೇನ ಸ್ವಯಂಸಿದ್ಧತ್ವಾನುಭವಸ್ಯೈವ ವಿದ್ಯಾಶಬ್ದವ್ಯಪದೇಶತ್ವಾತ್ | ಅಧ್ಯಾರೋಪಾಪವಾದನ್ಯಾಯೇನ ನಿಷ್ಪ್ರಪಂಚಮೇವ ಪ್ರಪಂಚ್ಯ ತಾದೃಶಾನುಭವಾಭಿವ್ಯಂಜನಾರ್ಥತ್ವಾದೇವ ಶಾಸ್ತ್ರಾಚಾರ್ಯೋಪದೇಶಸ್ಯ | ಯದಾಹ ಭಾಷ್ಯಕಾರಃ -

> (೨) ಇದಂ ಶರೀರಸ್ಥಂ ಯದ್ ಗೃಹ್ಯತೇ, ಅಗ್ರೇ ಪ್ರಾಕ್ ಪ್ರತಿಬೋಧಾದಪಿ ಬ್ರಹ್ಮೈವಾಸೀತ್ ಸರ್ವಂ ಚೇದಮ್ | ಕಿಂ ತು, ಅಪ್ರತಿಬೋಧಾತ್ "ಅಬ್ರಹ್ಮಾಸ್ಮಿ, ಅಸರ್ವಂ ಚ" ಇತಿ ಆತ್ಮನ್ಯಧ್ಯಾರೋಪಾತ್ "ಕರ್ತಾಽಹಮ್, ಕ್ರಿಯಾವಾನ್, ಫಲಾನಾಂ ಚ ಭೋಕ್ತಾ ಸುಖೀ ದುಃಖೀ, ಸಂಸಾರೀ" ಇತಿ ಚ ಅಧ್ಯಾರೋಪಯತಿ | ಪರಮಾರ್ಥತಸ್ತು ಬ್ರಹ್ಮೈವ ತದ್ವಿಲಕ್ಷಣಂ ಸರ್ವಂ ಚ | ತತ್ ಕಥಂಚಿದಾಚಾರ್ಯೇಣ ದಯಾಲುನಾ ಪ್ರತಿಬೋಧಿತಂ "ನಾಸಿ ಸಂಸಾರೀ"

---

ಚಿದ್ರೂಪದವನಾದ್ದರಿಂದಲೂ ಎಲ್ಲರಿಗೂ ಆತ್ಮನಾದ್ದರಿಂದಲೂ ತನ್ನನ್ನು ಬೆಳಗಿ ತೋರಿಸುವ ಮತ್ತೊಂದು ಜ್ಞಾನದ ಅಪೇಕ್ಷೆ ಇಲ್ಲವಾದರಿಂದಲೂ (ಅದು ಹಾಗೆಯೇ). (ಬ್ರಹ್ಮಾತ್ಮತ್ವವು) ಸ್ವಯಂಸಿದ್ಧವಾಗಿರುವುದರಿಂದ ಬ್ರಹ್ಮವಿದ್ಯೆಯನ್ನು ಉಪದೇಶ ಮಾಡುವ (ಶ್ರುತಿಯು) ಅಪ್ರಮಾಣವೆಂದೇನಾಗುವುದಿಲ್ಲ. ಹಾಗೆಯೇ, ತಿಳಿಯುವಾತನೇ ಬ್ರಹ್ಮವಾಗಿರುವುದರಿಂದ ತನ್ನಲ್ಲಿ ಕರ್ಮಕರ್ತೃತ್ವವು ಹೊಂದುವುದಿಲ್ಲವೆಂತಾಗಿ ತನ್ನ ಸ್ವರೂಪದ ಬಗ್ಗೆ ವಿದ್ಯೆಯು ಉಂಟಾಗಬೇಕೆಂಬ ಆಕಾಂಕ್ಷೆಯೂ ಹೊಂದುವುದಿಲ್ಲವಲ್ಲ! ಎಂದು ಸಂದೇಹ ಪಡಬಾರದು. ಏಕೆಂದರೆ ಬ್ರಹ್ಮವು ತಿಳಿಯುವಾತನ ಆತ್ಮವಾಗಿದೆ ಎಂದು (ತಿಳಿಸುವುದರ) ಮೂಲಕ, ಸ್ವಯಂಸಿದ್ಧವಾಗಿದೆ ಎಂಬ ಅನುಭವವನ್ನೇ ವಿದ್ಯಾಶಬ್ದದಿಂದ ಕರೆಯುತ್ತಿದೆ. ಅಧ್ಯಾರೋಪಾಪವಾದ ನ್ಯಾಯದಿಂದ ನಿಷ್ಪ್ರಪಂಚವಾದದ್ದನ್ನೇ ವಿವರಿಸಿ ಆ ರೀತಿಯುದಾದ ಅನುಭವವನ್ನು ತೋರಿಸುವುದಕ್ಕಾಗಿಯೇ ಶಾಸ್ತ್ರಾಚಾರ್ಯೋಪದೇಶವು ಬಂದಿರುತ್ತದೆ. ಭಾಷ್ಯಕಾರರು ಈ ವಿಷಯಕ್ಕೆ (ಹೀಗೆ) ಹೇಳಿರುತ್ತಾರೆ –

"ಈ ಶರೀರದಲ್ಲಿರುವುದಾಗಿ ಯಾವ(ಬ್ರಹ್ಮವು) ತೋರಿಬರುತ್ತಿದೆ, ಅದು (ತನ್ನ) ತಿಳಿವಳಿಕೆಗೆ ಮುಂಚೆಯೂ ಇದೆಲ್ಲವೂ ಬ್ರಹ್ಮವಾಗಿತ್ತು. ಆದರೆ ತಿಳಿಯದೇ ಇದ್ದದ್ದರಿಂದ "ಬ್ರಹ್ಮವಲ್ಲವೆಂತಲೂ" "ಸರ್ವವಲ್ಲವೆಂತಲೂ" ತನ್ನಲ್ಲಿ ಹುಟ್ಟಿಹಾಕಿಕೊಂಡಿದ್ದರಿಂದ "ನಾನು ಕರ್ತೃವು,

ಇತಿ, ಆತ್ಮಾನಮೇವಾವೇತ್ ಸ್ವಾಭಾವಿಕಮ್, ಅವಿದ್ಯಾಧ್ಯಾರೋಪಿತಸರ್ವ-ವಿಶೇಷವರ್ಜಿತಮ್ ||
ಬೃ.ಭಾ. ೧-೪-೧೦.

(೩) ನನು ವಿಪ್ರತಿಷಿದ್ಧಂ "ನ ವಿಜ್ಞಾತೇರ್ವಿಜ್ಞಾತಾರಂ ವಿಜಾನೀಯಾಃ" ಇತಿ ಶ್ರುತೇರ್ವಿಜ್ಞಾತುರ್ವಿಜ್ಞಾನಮ್ | ನ | ಏವಂ ವಿಜ್ಞಾನಾನ್ನ ವಿಪ್ರತಿಷೇಧಃ | ಏವಂ "ದೃಷ್ಟೇರ್ದ್ರಷ್ಟಾ" ಇತಿ ವಿಜ್ಞಾಯತ ಏವ | ಅನ್ಯಜ್ಞಾನಾನಪೇಕ್ಷತ್ವಾಚ್ಚ ||
ಬೃ.ಭಾ. ೧-೪-೧೦.

ನ ಚೈವಂ ಬ್ರಹ್ಮಾನುಭವಾನುತ್ಪತ್ತಿಪ್ರಸಂಗಃ, ತತ್ಕಾರಣಾನಾಕಾಂಕ್ಷಣಾದೇವ - ಇತಿ ಶಂಕ್ಯಮ್ | ಅನುಭವಾತ್ಮಕಸ್ಯೈವ ಸತಃ, ತತ್ಪ್ರತಿಪತ್ತಿಪ್ರತಿಬಂಧಾಪಗಮೇ ಸತಿ ಯದಾತ್ಮನ್ಯೇವ ವಿಶ್ರಮಣಮ್ ತದಾಭಾಸಬುದ್ಧಿಜನ್ಮ ಚ, ತಸ್ಯೈವಾನುಭವ-ವಾಚೋಯುಕ್ತ್ಯಾ ಅಭ್ಯುಪಗಮಾತ್ | ಅಸ್ತಿ ಹ್ಯತ್ರ ಭಾಷ್ಯವಚನಮ್-

---

ಕ್ರಿಯೆವುಳ್ಳವನಾಗಿರುವೆನು, ಫಲವನ್ನು ಅನುಭವಿಸುವವನು, ಸುಖಿಯು, ದುಃಖಿಯು, ಸಂಸಾರಿ" ಎಂದು ಹುಟ್ಟಿ ಹಾಕಿಕೊಂಡಿರುತ್ತಾನೆ. ನಿಜವಾಗಿ-ಯಾದರೋ ಅದಕ್ಕೆ ವಿಲಕ್ಷಣವಾದ ಬ್ರಹ್ಮವೇ ಇದೆಲ್ಲವೂ. ಅದು ಹೇಗೋ ದಯಾಳುವಾದ ಆಚಾರ್ಯನಿಂದ ತಿಳಿಸಲ್ಪಟ್ಟದ್ದಾದರೆ "ನೀನು ಸಂಸಾರಿ-ಯಲ್ಲಪ್ಪಾ!" (ಎಂದು ತಿಳಿಸಿದ್ದಾದರೆ), ಆಗ ಅವಿದ್ಯೆಯಿಂದ ಹುಟ್ಟುಹಾಕಿ-ಕೊಂಡಿದ್ದಾದ ಯಾವ ಪ್ರಕಾರದ ವಿಶೇಷವೂ ಇಲ್ಲದ ಸ್ವಾಭಾವಿಕವಾದ ತನ್ನನ್ನೇ ತಿಳಿದಾನು! (ಬೃ.ಭಾ. ೧-೪-೧೦)

(೩) "ವಿಜ್ಞಾತೃವನ್ನು (ಅರಿಯುವಾತನನ್ನು) ಅರಿಯಲಾರೆ" ಎಂದು ಶ್ರುತಿ ಇರುವುದರಿಂದ ವಿಜ್ಞಾತೃವನ್ನು ಅರಿಯುವುದೆಂಬುದು ವಿರುದ್ಧ-ವಾಗುತ್ತದೆಯಲ್ಲಾ! (ಎಂದರೆ ಇದೇನು) ತಪ್ಪಲ್ಲ. ಹೀಗೆ ತಿಳಿಯುವುದರಿಂದ ದೋಷವಾಗುವುದಿಲ್ಲ. ಹೀಗೆ ದ್ರಷ್ಟೃವಿಗೂ ದ್ರಷ್ಟವು ಎಂದು ತಿಳಿದು ಬಂದೇ ತೀರುತ್ತಾನೆ. ಮತ್ತೊಂದು ವಿಜ್ಞಾನದ ಅಪೇಕ್ಷೆಯೂ ಇರುವುದಿಲ್ಲ (ಬೃ.ಭಾ. ೧-೪-೧೦). ಬ್ರಹ್ಮಾನುಭವವುಂಟಾಗುವುದಕ್ಕೆ ಕಾರಣವನ್ನೇ ಬಯಸುವುದಿಲ್ಲ-ವಾದ್ದರಿಂದ ಬ್ರಹ್ಮಾನುಭವವು ಉಂಟಾಗುವುದೇ ಇಲ್ಲವಲ್ಲ! ಎಂದು ಶಂಕಿಸಬಾರದು. ಏಕೆಂದರೆ (ಆತ್ಮನು) ಅನುಭವಾತ್ಮಕನಾಗಿಯೇ ಇದ್ದು-ಕೊಂಡಿದ್ದು, ಅದನ್ನರಿಯುವುದಕ್ಕಿರುವ ಅಡ್ಡಿಯು ಹೋಗಲಾಗಿ, ಯಾವ ಸ್ವರೂಪದಿಂದಲೇ (ಈತನು) ವಿಶ್ರಾಂತನಾಗುವನೋ, ಆ ಪ್ರಕಾರವಾಗಿ

(೪) ಏಷ ವ್ಯಾವೃತ್ತಸರ್ವಸಂಸಾರಧರ್ಮಕೋಽನುಭವಾತ್ಮಕೋ ಬ್ರಹ್ಮಸಂಜ್ಞಕಃ ತತ್ಪದಾರ್ಥೋ ವೇದಾಂತಾಭಿಯುಕ್ತಾನಾಂ ಪ್ರಸಿದ್ಧಃ ||

ಸೂ.ಭಾ. ೪-೧-೨.

(೫) ತತ್ರ ಯೇಷಾಮೇತೌ ಪದಾರ್ಥೌ ಅಜ್ಞಾನಸಂಶಯವಿಪರ್ಯಯಪ್ರತಿಬದ್ಧೌ ತೇಷಾಂ "ತತ್ತ್ವಮಸಿ" ಇತ್ಯೇತದ್ ವಾಕ್ಯಂ ಸ್ವಾರ್ಥೇ ಪ್ರಮಾಂ ನೋತ್ಪಾದಯಿತುಂ ಶಕ್ನೋತಿ ||	ಸೂ.ಭಾ. ೪-೧-೨.

(೬) ತಸ್ಮಾತ್ ಸರ್ವದುಃಖವಿನಿರ್ಮುಕ್ತೈಕಚೈತನ್ಯಾತ್ಮಕೋಽಹಮ್ ಇತ್ಯೇಷ ಆತ್ಮಾನುಭವಃ ||	ಸೂ.ಭಾ. ೪-೧-೨.

(೭) ದೃಶಿರೇವಾನುಭೂಯೇತ ಸ್ವೇನೈವಾನುಭವಾತ್ಮನಾ |
ತದಾಭಾಸತಯಾ ಜನ್ಮ ಧಿಯೋಽಸ್ಯಾನುಭವಃ ಸ್ಮೃತಃ || ಉಪ.ಸಾ. ೧೮-೧೯೫.

[ ತದಾಭಾಸತಯಾ ಅನುಭವರೂಪಚಿದ್ವ್ಯಾಪ್ತತ್ವಾತ್ | ಅಸ್ಯಾನುಭವಃ, ಆತ್ಮನೋನುಭವಃ|| ]

---

ಬುದ್ಧಿಯುಂಟಾಗುವುದೆಂಬುದುದೇನಿದೆ, ಅದನ್ನೇ ಅನುಭವ ಎಂಬ ಮಾತಿನ ಜೋಡಣೆಯಿಂದ ಒಪ್ಪಿರುತ್ತೇವೆ. ಈ ವಿಷಯಕ್ಕೂ (ಹೀಗೆ) ಭಾಷ್ಯವಿರುತ್ತದೆ.

(೪) ಈತನು ಎಲ್ಲಾ ಸಂಸಾರಧರ್ಮವು ತೊಲಗಿಹೋದದ್ದಾದ ಅನುಭವ ಸ್ವರೂಪದವನಾದ ಬ್ರಹ್ಮ ಎಂಬ ಸಂಜ್ಞೆಯಿಂದ (ಕರೆಸಿಕೊಂಡವನು). ಇದೇ ತತ್ಪದಾರ್ಥವು, ಇದು ವೇದಾಂತದಲ್ಲಿ ಅಭಿಯುಕ್ತರಾದ (ನಿಷ್ಣಾತರಾದ)ವರಿಗೆ ಸುಪ್ರಸಿದ್ಧವಾಗಿರುತ್ತದೆ (ಸೂ.ಭಾ. ೪-೧-೨).

(೫) ಇಲ್ಲಿ ಯಾರಿಗೆ ತತ್, ತ್ವಂ ಎಂಬ ಈ (ಎರಡು) ಪದಾರ್ಥಗಳು, ಅಜ್ಞಾನ, ಸಂಶಯ, ಮಿಥ್ಯಾಜ್ಞಾನವೆಂಬ ಅಡ್ಡಿಯಿಂದ ತಡೆಹಿಡಿಯಲ್ಪಟ್ಟದ್ದಾಗಿದೆಯೋ ಅವರಿಗೆ ತತ್ತ್ವಮಸಿ ಎಂಬ ವಾಕ್ಯವು ತನ್ನ ವಿಷಯದಲ್ಲಿ ಅರಿವನ್ನುಂಟು ಮಾಡುವುದಕ್ಕೆ ಸಮರ್ಥವಾಗಿರುವುದಿಲ್ಲ (ಸೂ.ಭಾ. ೪-೧-೨).

(೬) "ಆದ್ದರಿಂದ ಎಲ್ಲಾ ದುಃಖಗಳಿಂದಲೂ ಕಳಚಿಕೊಂಡ ಅದ್ವಿತೀಯವಾದ ಚೈತನ್ಯಸ್ವರೂಪನೇ ನಾನು ಎಂಬುದೇ ಆತ್ಮಾನುಭವವು" (ಸೂ.ಭಾ. ೪-೧-೨)

(೭) ಸಾಕ್ಷಿಯೇ ತನ್ನದೇ ಆದ ಅನುಭವರೂಪದಿಂದ ಅನುಭೂತ-

ಏವಮ್

(೪) "ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ" ಬೃ. ೨-೪-೫.

(೫) "ನ ಸುಖದುಃಖೇ ವಿಜಿಜ್ಞಾಸೀತ ಸುಖದುಃಖಯೋರ್ವಿಜ್ಞಾತಾರಂ ವಿದ್ಯಾತ್.... ನ ಮನೋ ವಿಜಿಜ್ಞಾಸೀತ ಮಂತಾರಂ ವಿದ್ಯಾತ್" || ಕೌ. ೫-೮.

ಇತ್ಯಾದಿನಾ ಶ್ರವಣಾದಿಸಾಧನಾನಿ ಆತ್ಮಾನುಭವಲಕ್ಷಣಜ್ಞಾನಾರ್ಥಮುಪದಿಶ್ಯಮಾನಾನ್ಯಪಿ ಅಧ್ಯಾರೋಪದೃಷ್ಟ್ಯಾ ವಿಜ್ಞಾನಾತ್ಮಪರಮಾತ್ಮಭೇದಮುರರೀಕೃತ್ಯೈವೋಪದಿಶ್ಯಂತೇ ಪ್ರತ್ಯಕ್ಪ್ರವಣತಾಸಂಪಾದನಾರ್ಥಮ್ | ಬಂಧಮೋಕ್ಷಾದಿವ್ಯವಹಾರಾಶ್ಚ ತಥೈವಾಧ್ಯಾರೋಪದೃಷ್ಟ್ಯೈವ | ಯದಪ್ಯುಕ್ತಮ್ ಭಾಷ್ಯಕೃತಾ -

---

ವಾಗುತ್ತದೆ. ಅದರ ಆಭಾಸದಿಂದೊಡಗೂಡಿ ಉಂಟಾಗುವುದೇ ಬುದ್ಧಿಗೆ ಆಗುವ ಇವನ ಅನುಭವವೆನಿಸುತ್ತದೆ (ಉಪ. ಪದ್ಯ ೧೮–೧೯೫).

(ಆತ್ಮನ ಆಭಾಸವಾಗಿ ಅನುಭವರೂಪವಾದ ಚಿತ್ತಿನಿಂದ (ಬುದ್ಧಿಯು) ವ್ಯಾಪ್ತವಾಗಿರುವುದರಿಂದ, ಇದರ ಅನುಭವವೆಂದರೆ ಆತ್ಮನ ಅನುಭವವು). ಹೀಗೆಯೇ–

(೪) "ಎಲೆ (ಮೈತ್ರೇಯಿ) ಆತ್ಮನನ್ನೇ ಕಾಣಬೇಕು, ಶ್ರವಣವನ್ನು ಮಾಡಬೇಕು. ಮನನ ಮಾಡಬೇಕು, ನಿದಿಧ್ಯಾಸನವನ್ನು ಮಾಡಬೇಕು" (ಬೃ. ೨–೪–೫).

(೫) "ಸುಖದುಃಖಗಳನ್ನು ತಿಳಿಯಲಿಷ್ಟಪಡಬಾರದು, ಸುಖದುಃಖಗಳನ್ನು ಅರಿಯುತ್ತಿರುವಾತನನ್ನು ತಿಳಿಯಬೇಕು .... ಮನಸ್ಸನ್ನು ತಿಳಿಯಲಿಷ್ಟಪಡಬಾರದು, ಮನ್ತೃವನ್ನು ತಿಳಿಯಬೇಕು (ಕೌ. ೫–೮). ಈ ರೀತಿಯಾಗಿ ಆತ್ಮಾನುಭವರೂಪವಾದ ಜ್ಞಾನಕ್ಕಾಗಿ (ಯಾವ) ಶ್ರವಣಾದಿಸಾಧನಗಳನ್ನು ಉಪದೇಶ ಮಾಡಿದೆಯೋ, ಅದೂ ಅಧ್ಯಾರೋಪದೃಷ್ಟಿಯಿಂದಲೇ ವಿಜ್ಞಾನಾತ್ಮಪರಮಾತ್ಮರುಗಳ ಭೇದವನ್ನು ಒಪ್ಪಿಕೊಂಡೇ ಪ್ರತ್ಯಕ್‌ಪ್ರವಣತೆ (ಚಿತ್ತವು ಒಳಮುಖವಾಗಿ ಹರಿಯುವಿಕೆ) ಯನ್ನು ಸಂಪಾದನೆ ಮಾಡಿಕೊಳ್ಳುವುದಕ್ಕಾಗಿ (ಉಪದೇಶಿಸಿರುತ್ತದೆ) ಹಾಗೆಯೇ ಬಂಧಮೋಕ್ಷದ ವ್ಯವಹಾರವೂ

(೮) ಯೋ ಹಿ ಬಹಿರ್ಮುಖಃ ಪ್ರವರ್ತತೇ ಪುರುಷಃ "ಇಷ್ಟಂ ಮೇ ಭೂಯಾತ್, ಅನಿಷ್ಟಂ ಮಾ ಭೂತ್" ಇತಿ, ನ ಚ ತತ್ರಾತ್ಯಂತಿಕಂ ಪುರುಷಾರ್ಥಂ ಲಭತೇ, ತಮಾತ್ಯಂತಿಕಪುರುಷಾರ್ಥವಾಂಛಿನಂ ಸ್ವಾಭಾವಿಕಕಾರ್ಯಕರಣಸಂಘಾತ-ಪ್ರವೃತ್ತಿಗೋಚರಾದ್ ವಿಮುಖೀಕೃತ್ಯ ಪ್ರತ್ಯಗಾತ್ಮಸ್ರೋತಸ್ತಯಾ ಪ್ರವರ್ತಯಂತಿ "ಆತ್ಮಾ ವಾ ಅರೇ ದ್ರಷ್ಟವ್ಯಃ" ಇತ್ಯಾದೀನಿ ||　　ಸೂ.ಭಾ. ೧-೧-೪.

(೯) ಬುದ್ಧ್ಯಾದ್ಯುಪಾಧಿಕೃತಂ ತು ವಿಶೇಷಮಾಶ್ರಿತ್ಯ ಬ್ರಹ್ಮೈವ ಸನ್ ಜೀವಃ ಕರ್ತಾ ಭೋಕ್ತಾ ಚ ಇತ್ಯುಚ್ಯತೇ | ತಸ್ಯ ಉಪಾಧಿಕೃತಂ ತು ವಿಶೇಷಪರಿತ್ಯಾಗೇನ ಸ್ವರೂಪಂ ಬ್ರಹ್ಮ ದರ್ಶಯಿತುಂ "ನ ವಾಚಂ ವಿಜಿಜ್ಞಾಸೀತ, ವಕ್ತಾರಂ ವಿದ್ಯಾತ್" ಇತ್ಯಾದಿನಾ ಪ್ರತ್ಯಗಾತ್ಮಾಭಿಮುಖೀಕರಣಾರ್ಥಮ್ ಉಪದೇಶೋ ನ ವಿರುಧ್ಯತೇ ||
ಸೂ.ಭಾ. ೧-೧-೩೧.

(೧೦) ಮನನನಿದಿಧ್ಯಾಸನಯೋರಪಿ ಶ್ರವಣವದವಗತ್ಯರ್ಥತ್ವಾತ್ ||
ಸೂ.ಭಾ. ೧-೧-೪.

---

ಸಹ ಅಧ್ಯಾರೋಪದೃಷ್ಟಿಯಿಂದಲೇ ಉಪದೇಶಿಸಿದೆ. ಇದನ್ನೂ ಭಾಷ್ಯಕಾರರು ಹೇಳಿರುತ್ತಾರೆ.

(೮) "ಯಾವಾತನು ನನಗೆ ಇಷ್ಟವಾದದ್ದಾಗಬೇಕು, ಅನಿಷ್ಟವಾಗಬಾರದು" ಎಂದುಕೊಂಡು ಬಹಿರ್ಮುಖನಾಗಿ ಹೊರಡುತ್ತಾನೆ ಆತನು ಅಲ್ಲಿ ಆತ್ಯಂತಿಕ-ವಾದ ಪುರುಷಾರ್ಥವನ್ನು ಹೊಂದಲಾರ. ಆ ಆತ್ಯಂತಿಕ ಪುರುಷಾರ್ಥವನ್ನು ಬಯಸುವ ಪುರುಷನನ್ನು ಸ್ವಾಭಾವಿಕವಾದ ದೇಹೇಂದ್ರಿಯಸಂಘಾತದ ಪ್ರವೃತ್ತಿಗೆ ಕಾಣುವ ವಿಷಯದಿಂದ ಹಿಮ್ಮೆಟ್ಟಿಸಿ ಪ್ರತ್ಯಗಾತ್ಮನ ಕಡೆಗೆ (ಮನಸ್ಸಿನ) ಹರಿವನ್ನುಂಟುಮಾಡುವುದಕ್ಕೆ – "ಆತ್ಮಾ ವಾ ಅರೇ" ಎಂಬುದಾಗಿರುವ ವಾಕ್ಯಗಳು ಹೊರಟಿರುತ್ತವೆ.

(೯) ಜೀವನು ಬ್ರಹ್ಮನೇ ಆಗಿದ್ದರೂ ಬುದ್ಧಿಯೇ ಮುಂತಾದ ಉಪಾಧಿ-ಯಿಂದಾದ ವಿಶೇಷದಿಂದಲಾದರೋ ಕರ್ತಾ, ಭೋಕ್ತಾ ಎನಿಸಿಕೊಂಡಿರುತ್ತಾನೆ. ಆತನಿಗೆ ಉಪಾಧಿಯಿಂದಾದ ವಿಶೇಷವನ್ನು ಬಿಡಿಸುವುದರ ಮೂಲಕ (ತನ್ನ) ಸ್ವರೂಪವಾದ ಬ್ರಹ್ಮವನ್ನು ತೋರಿಸುವುದಕ್ಕಾಗಿ "ಮಾತನ್ನು ತಿಳಿಯಲಿಚ್ಛಿಸ-ಬಾರದು, ವಕ್ತೃವನ್ನು ತಿಳಿಯಬೇಕು" (ಕೌ. ೩–೮) ಎಂಬುದಾಗಿ ಪ್ರತ್ಯಗಾತ್ಮನ ಕಡೆಗೆ ಅಭಿಮುಖವನ್ನಾಗಿ ಮಾಡುವುದಕ್ಕಾಗಿ (ಏನು) ಉಪದೇಶಿಸುತ್ತಿದೆ (ಅದು) ವಿರುದ್ಧವಲ್ಲ (ಸೂ.ಭಾ. ೧–೧–೩೧).

(೧೧) ಪರ ಏವಾತ್ಮಾ ದೇಹೇಂದ್ರಿಯಮನೋಬುದ್ಧ್ಯುಪಾಧಿಭಿಃ ಪರಿಚ್ಛಿದ್ಯಮಾನೋ ಬಾಲೈಃ ಶಾರೀರ ಇತ್ಯುಪಚರ್ಯತೇ | ಯಥಾ ಘಟಕರಕಾದ್ಯುಪಾಧಿವಶಾತ್ ಅಪರಿಚ್ಛಿನ್ನಮಪಿ ನಭಃ ಪರಿಚ್ಛಿನ್ನವದವಭಾಸತೇ, ತದ್ವತ್ | ತದಪೇಕ್ಷಯಾ ಚ ಕರ್ಮಕರ್ತೃತ್ವಾದಿಭೇದವ್ಯವಹಾರೋ ನ ವಿರುಧ್ಯತೇ ಪ್ರಾಕ್ "ತತ್ತ್ವಮಸಿ" ಇತ್ಯಾತ್ಮೈಕತ್ವೋಪದೇಶಗ್ರಹಣಾತ್ | ಗೃಹೀತೇ ತು ಆತ್ಮೈಕತ್ವೇ ಬಂಧಮೋಕ್ಷಾದಿಸರ್ವವ್ಯವಹಾರಪರಿಸಮಾಪ್ತಿರೇವ ಸ್ಯಾತ್ ||

ಸೂ.ಭಾ. ೧-೨-೬.

ತದೇವಂ ಸರ್ವೇಷಾಮಪಿ ವ್ಯವಹಾರಾಣಾಮ್ ಅವಿದ್ಯಾಕಾರ್ಯತ್ವಾತ್, ಅಧ್ಯಾರೋಪದೃಷ್ಟ್ಯಾ ಸೃಷ್ಟಿಪ್ರಲಯಾದಿಕಮ್ ಉಪನ್ಯಸ್ಯ, ಪುನರಪವಾದದೃಷ್ಟ್ಯಾ ಸರ್ವಮಪಿ ನಿಷಿಧ್ಯತೇ ವೇದಾಂತೇಷು - ಇತ್ಯೇಷೋ ವೇದಾಂತಾಭಿಯುಕ್ತಸಮಯಃ | ತದೇತತ್ ವೇದಾಂತಸಂಪ್ರದಾಯವಿದ್ಭಿಃ ಶ್ರೀಗೌಡಪಾದಾಚಾರ್ಯೈರಪಿ ಸಂಗ್ರಹೇ-

---

(೧೦) ಮನನನಿದಿಧ್ಯಾಸನಗಳೂ ಸಹ ಶ್ರವಣದಂತೆ ಅವಗತಿಗಾಗಿಯೇ ಇರುತ್ತವೆ (ಸೂ.ಭಾ. ೧-೧-೪).

(೧೧) (ಜೀವನು) ಪರಮಾತ್ಮನೇ ಆಗಿದ್ದರೂ ದೇಹೇಂದ್ರಿಯಮನೋಬುದ್ಧ್ಯುಪಾಧಿಗಳಿಂದ ಪರಿಚ್ಛಿನ್ನಗೊಂಡಿರುವವನಾಗಿ (ತೋರುವುದರಿಂದ) ಹುಡುಗರು (ಅಜ್ಞಾನಿಗಳು) ಜೀವನೆಂದು ಕರೆಯುವರು. ಹೇಗೆ ಆಕಾಶವು (ಸ್ವತಃ) ಅಪರಿಚ್ಛಿನ್ನವಾಗಿದ್ದರೂ ಗಡಿಗೆ ಕುಡಿಕೆ ಮುಂತಾದ ಉಪಾಧಿಗನುಗುಣವಾಗಿ ಪರಿಚ್ಛಿನ್ನದಂತೆ ತೋರುತ್ತದೋ, (ಅದರಂತೆ ಜೀವನೂ ತೋರುತ್ತಾನೆ) "ತತ್ತ್ವಮಸಿ" ಎಂಬ ವಾಕ್ಯದಿಂದುಂಟಾಗುವ ಆತ್ಮೈಕತ್ವಜ್ಞಾನೋಪದೇಶವನ್ನು ಗ್ರಹಿಸುವುದಕ್ಕಿಂತ ಮೊದಲು, ಉಪಾಧಿಯ ಅಪೇಕ್ಷೆಯಿಂದ (ನಡೆಯುವ) ಕರ್ಮಕ್ಕೆ ಕರ್ತೃವಾಗಿದ್ದಾನೆ ಎಂಬುದೇ ಮೊದಲಾದ ಭೇದವ್ಯವಹಾರವು ವಿರುದ್ಧವಾಗಿರುವುದಿಲ್ಲ. ಆತ್ಮೈಕತ್ವದ ಗ್ರಹಣವಾದ ಮೇಲಾದರೋ ಬಂಧ, ಮೋಕ್ಷವೇ ಮೊದಲಾದ ಎಲ್ಲಾ ವ್ಯವಹಾರವೂ ಸಹ ಪರಿಸಮಾಪ್ತಿಯಾಗಿಯೇ ತೀರುವುದು (ಸೂ.ಭಾ. ೧-೨-೬).

ಹೀಗೆ ಎಲ್ಲಾ ವ್ಯವಹಾರವೂ ಅವಿದ್ಯಾಕಾರ್ಯವಾಗಿರುವುದರಿಂದ ಅಧ್ಯಾರೋಪದೃಷ್ಟಿಯಿಂದ ಸೃಷ್ಟಿಪ್ರಳಯವೇ ಮುಂತಾದವುಗಳನ್ನು ಹೇಳಿ

ಣೋಕ್ತಮ್ -

ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕಃ |
ನ ಮುಮುಕ್ಷುರ್ನ ವೈ ಮುಕ್ತ ಇತ್ಯೇಷಾ ಪರಮಾರ್ಥತಾ || ಗೌ.ಕಾ. ೨-೩೨.

[ ಭಾಷ್ಯಮ್ - ಯದಾ ವಿತಥಂ ದ್ವೈತಮಾತ್ಮೈವೈಕಃ ಪರಮಾರ್ಥತಃ ಸನ್, ತದೇದಂ ನಿಷ್ಪನ್ನಂ ಭವತಿ - ಸರ್ವೋಽಯಂ ಲೌಕಿಕೋ ವೈದಿಕಶ್ಚ ವ್ಯವಹಾರೋಽವಿದ್ಯಾವಿಷಯ ಏವೇತಿ........ ಉತ್ಪತ್ತಿಪ್ರಲಯಯೋರಭಾವಾತ್ ಬದ್ಧಾದಯೋ ನ ಸಂತಿ - ಇತ್ಯೇಷಾ ಪರಮಾರ್ಥತಾ || ]

ಇತ್ಯೇವಂ ಸಂಕ್ಷೇಪೇಣ ಪ್ರದರ್ಶಿತಾ ಶ್ರೀಶಂಕರಭಗವತ್ಪಾದಸಂಮತವೇದಾಂತಪ್ರಕ್ರಿಯಾ-ಸರಣಿಃ ಸಾಮಾನ್ಯತೋ ವಿಶೇಷತಶ್ಚ | ಯಥಾ ತ್ವೇತತ್ಪ್ರಕ್ರಿಯಾಸತತ್ತ್ವಮಜಾನದ್ಭಿರನ್ಯಥಾ

---

ಮತ್ತೆ ಅಪವಾದ ದೃಷ್ಟಿಯಿಂದ ಎಲ್ಲವನ್ನು ವೇದಾಂತಗಳಲ್ಲಿ ಅಲ್ಲಗಳೆದಿರುತ್ತದೆ ಎಂಬುದೇ ವೇದಾಂತದ ತೀರ್ಮಾನವು. ಇದನ್ನು ವೇದಾಂತಸಂಪ್ರದಾಯವನ್ನು ಬಲ್ಲವರಾದ ಶ್ರೀಗೌಡಪಾದಾಚಾರ್ಯರೂ ಸಂಗ್ರಹವಾಗಿ ಹೇಳಿರುತ್ತಾರೆ.

"ಪ್ರಳಯವೆಂಬುದಿಲ್ಲ, ಉತ್ಪತ್ತಿಯೂ ಇಲ್ಲ, ಬದ್ಧನೂ ಇಲ್ಲ, ಸಾಧಕನೂ ಇಲ್ಲ, ಮುಮುಕ್ಷುವೆಂಬುವನೂ ಇಲ್ಲ ಮುಕ್ತನೆಂಬುವನೂ ಇಲ್ಲ ಎಂಬುದೇ ನಿಜವಾದದ್ದು" (ಗೌ.ಕಾ. ೨–೩೨).

(ಭಾಷ್ಯವು – ಯಾವಾಗ ದ್ವೈತವೆಂಬುದು ಸುಳ್ಳಾದದ್ದು, ಆತ್ಮನೊಬ್ಬನೇ ನಿಜವಾಗಿರತಕ್ಕವನು ಎಂದಾಗುವುದೋ ಆಗ ಇದು ಸಿದ್ಧವಾಗುತ್ತದೆ, ಈ ಎಲ್ಲಾ ಲೌಕಿಕವೈದಿಕವ್ಯವಹಾರವೂ ಅವಿದ್ಯಾ ವಿಷಯದಲ್ಲಿಯೇ. (ಆಗ, ನಿಜವಾಗಿ) ಉತ್ಪತ್ತಿ ಪ್ರಳಯಾದಿಗಳು ಇರುವುದಿಲ್ಲವಾದ್ದರಿಂದ ಬದ್ಧಾದಿಗಳೂ ಇರುವುದಿಲ್ಲ ಎಂಬುದೇ ನಿಜವಾದದ್ದು ಎಂದಾಗುತ್ತದೆ). ಈ ರೀತಿಯಾಗಿ ಸಾಮಾನ್ಯವಾಗಿಯೂ ವಿಶೇಷವಾಗಿಯೂ ಶ್ರೀಶಂಕರಭಗವತ್ಪಾದರಿಗೆ ಒಪ್ಪಿಗೆಯಾದ ವೇದಾಂತಪ್ರಕ್ರಿಯಾಸರಣಿಯನ್ನು ಸಂಕ್ಷೇಪವಾಗಿ ತೋರಿಸಿದ್ದೇವೆ. ಹುಟ್ಟುಕುರುಡರು ಆನೆಯನ್ನು (ಹೇಗೆ) ಬಗೆಬಗೆಯಾಗಿ ವಿಕಲ್ಪಿಸುತ್ತಾರೋ ಹಾಗೆ ಈ ಪ್ರಕ್ರಿಯೆಯ ನಿಜವನ್ನು ತಿಳಿಯದೇ ಇದ್ದವರು ಬೇರೆ ಬೇರೆ ರೀತಿಯಾಗಿ ವಿಕಲ್ಪಿಸಿರುತ್ತಾರೆ. (ಅವರು ಹೇಗೆ ಮಾಡಿದ್ದಾರೆಂಬುದುದನ್ನು) ಮುಂದಿನ ಕಿರಣಗಳಲ್ಲಿ–ಜಿಜ್ಞಾಸುಜನ ಉನ್ಮಾರ್ಗವನ್ನು ತಡೆಗಟ್ಟುವುದರ ಮೂಲಕ ಶ್ರೇಯೋಮಾರ್ಗದಲ್ಲಿ (ಅವರ ಮನಸ್ಸನ್ನು) ನೆಲೆ ನಿಲ್ಲಿಸುವುದಕ್ಕಾಗಿ

ಅನ್ಯಥಾ ವಿಕಲ್ಪಿತೋ ವೇದಾಂತಾರ್ಥಃ, ಹಸ್ತೀವ ಜಾತ್ಯಂಧೈಃ, ತಥಾ ಆಗಾಮಿ-ಕಿರಣೇಷ್ವಾದರ್ಶ್ಯತೇ ಜಿಜ್ಞಾಸೂನಾಮುತ್ಪಥಪ್ರವೃತ್ತಿನಿವಾರಣಪೂರ್ವಕಂ ಶ್ರೇಯೋ-ಮಾರ್ಗೇ ಆನಯನಾರ್ಥಮಿತಿ ಸರ್ವಂ ಶಿವಮ್ ||

ಇತಿಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರೇಣ್ಯಶ್ರೀಪೂಜ್ಯಪಾದಶ್ರೀಮಚ್ಛಂಕರಭಗವಚ್ಚರಣಸ್ಮರಣ-ಪರಿಚಯಾವಾಪ್ತವೇದಾಂತಪ್ರವೇಶೇನ ಶ್ರೀಬೋಧಾನಂದೇಂದ್ರಸರಸ್ವತೀಶಿಷ್ಯಸಚ್ಚಿದಾನಂದೇಂದ್ರ-ಸರಸ್ವತ್ಯಾಖ್ಯೇನ ಭಿಕ್ಷುಣಾ ಪ್ರಣೀತೇ ಶುದ್ಧಶಾಂಕರಪ್ರಕ್ರಿಯಾಭಾಸ್ಕರಾಭಿದೇ ಪ್ರಕರಣೇ ಅಧ್ಯಾರೋಪಾಪವಾದಪ್ರಕ್ರಿಯಾವಿಶೇಷೋ ನಾಮ ಪಂಚಮಃ ಕಿರಣಃ

---

ತೋರಿಸಿಕೊಡುತ್ತೇವೆ ಎಂದಾದ್ದರಿಂದ ಎಲ್ಲವೂ ಮಂಗಳವೂ.

(ಈ ರೀತಿಯಾಗಿ ಪರಮಹಂಸ ಪರಿವ್ರಾಜಕಾಚಾರ್ಯರಲ್ಲಿ ಶ್ರೇಷ್ಠರಾದ ಶ್ರೀ ಪೂಜ್ಯಪಾದರಾದ ಶ್ರೀ ಶಂಕರಭಗವತ್ಪಾದರ ಚರಣದಸ್ಮರಣೆಯಿಂದ ಪರಿಚಯುವನ್ನು ಹೊಂದಿ ವೇದಾನ್ತಪ್ರವೇಶವನ್ನು ಮಾಡಿದವರಾದ ಶ್ರೀ ಬೋಧಾನಂದೇಂದ್ರ ಸರಸ್ವತಿಯರ ಶಿಷ್ಯರಾದ ಶ್ರೀ ಸಚ್ಚಿದಾನಂದೇಂದ್ರಸರಸ್ವತಿ ಎಂಬ ಹೆಸರಿನ ಸಂನ್ಯಾಸಿಗಳಾದವರು ರಚಿಸಿದ ಶುದ್ಧಶಾಂಕರ-ಪ್ರಕ್ರಿಯಾಭಾಸ್ಕರವೆಂಬ ಹೆಸರಿನ ಪ್ರಕರಣದಲ್ಲಿ ಅಧ್ಯಾರೋಪಾಪವಾದ ಪ್ರಕ್ರಿಯಾವಿಶೇಷವೆಂಬ ಐದನೇಯ ಕಿರಣವು (ಸಮಾಪ್ತಿಯಾಯಿತು)).

## ೬. ಶಾಂಕರಪ್ರಸ್ಥಾನಸ್ಯ ಪ್ರಸ್ಥಾನಾಂತರೇಭ್ಯೋ ವೈಲಕ್ಷಣ್ಯಮ್

**೪೦. ಉತ್ತರಗ್ರಂಥಸಂಬಂಧಃ -** ಅಜಾದ್ವಯಂ ಬ್ರಹ್ಮಾತ್ಮತತ್ತ್ವಂ ನ ಶಕ್ಯಂ ವಾಙ್ಮನಸಾಭ್ಯಾಂ ವಿಷಯೀಕೃತ್ಯ ಪ್ರಕಾಶಯಿತುಮ್ | ನಿರ್ವಿಶೇಷತ್ವಾತ್ | ನ ಚಾಸ್ತಿ ಸ್ವಯಂಸಿದ್ಧಸ್ವಪ್ರಕಾಶರೂಪಸ್ಯಾಸ್ಯ ಸರ್ವಸ್ಯಾಪ್ಯಾತ್ಮನ ಏವ ಚ ಸತೋ ಘಟಪಟಾದ್ಯಚೇತನಪ್ರಮೇಯವತ್ ಕೇನಚಿತ್ ಪ್ರಮಾಣೇನ ಪ್ರಕಾಶ್ಯತ್ವಾಕಾಂಕ್ಷಾ ; ಅತತ್ಸ್ವಭಾವಾಧ್ಯಾರೋಪಲಕ್ಷಣಾವಿದ್ಯಾಮಾತ್ರವ್ಯವಹಿತತ್ವಾತ್ತು ತಾದೃಶಾವಿದ್ಯಾಪಬಾಧನಮಾತ್ರೇಣ ತತ್ಸ್ವರೂಪಸಮರ್ಪಣಾತ್ ಅಸ್ಮಿನ್ ಪ್ರಮಾಣತ್ವೇನೋಪಚರ್ಯಂತೇ ವೇದಾಂತಾಃ - ಇತ್ಯೇಷಾ ವೇದಾಂತಾಭಿಯುಕ್ತಸಂಮತಾ ಶಾಂಕರೀ ಪ್ರಕ್ರಿಯಾ ಸಂಗ್ರಹೇಣ ಪ್ರದರ್ಶಿತಾ ||

ಅಥಾಪ್ಯದ್ವೈತಮೇವ ವೇದಾಂತಾರ್ಥಮಭ್ಯುಪಗಚ್ಛಂತಃ ಪ್ರಸ್ಥಾನಾಂತರೀಯಾಃ ಭಾಷ್ಯಕಾರಸಮಕಾಲೀನಾಃ ಸ್ವಸ್ವಸಂಪ್ರದಾಯಬಲಾದ್ ವೇದಾಂತಪ್ರಾಮಾಣ್ಯಮನ್ಯಥೈವ

---

**೪೦) ಮುಂದಿನ ಗ್ರಂಥದ ಸಂಬಂಧವು –** ಅಜಾದ್ವಯವಾದ ಬ್ರಹ್ಮಾತ್ಮತತ್ತ್ವವು ನಿರ್ವಿಶೇಷವಾದದ್ದಾದ್ದರಿಂದ ವಾಕ್ಕು ಮನಸ್ಸುಗಳಿಂದ ಬೆಳಗಿ ತೋರಿಸುವುದಕ್ಕಾಗುವುದಿಲ್ಲ. ಅಷ್ಟೆ ಅಲ್ಲ, ಗಡಿಗೆ ಬಟ್ಟೆ ಮುಂತಾದ ಅಚೇತನವಾದ ವಿಷಯವನ್ನು ತೋರಿಸುವಂತೆ ಸ್ವಯಂಸಿದ್ಧನೂ ಸ್ವಪ್ರಕಾಶನೂ ಆದ ಎಲ್ಲರಿಗೂ ಆತ್ಮನೇ ಆದ ಈತನನ್ನು ಯಾವುದೊಂದು ಪ್ರಮಾಣದಿಂದಲೂ ಬೆಳಗಬೇಕಾದ ಅವಶ್ಯಕತೆಯೂ ಇಲ್ಲ. ಅವನದ್ದಲ್ಲದ್ದಾದ ಸ್ವಭಾವವನ್ನು ಹುಟ್ಟು ಹಾಕಿಕೊಳ್ಳುವುದೆಂಬ ರೂಪವಾದ ಅವಿದ್ಯಾಮಾತ್ರದ ವ್ಯವಧಾನದಿಂದ, ಆ ಪ್ರಕಾರದ ಅವಿದ್ಯೆಯನ್ನು ಕಳೆಯುವುದರಿಂದ ಅದರ ಸ್ವರೂಪವನ್ನು ವೇದಾನ್ತಗಳು ತಿಳಿಸಿಕೊಡುವುದರಿಂದ ಅವು ಈ ಆತ್ಮನ ವಿಷಯದಲ್ಲಿ ಪ್ರಮಾಣವಾದವುಗಳು ಎಂದು ಉಪಚಾರಕ್ಕೆ ಹೇಳಲಾಗುತ್ತದೆ. ಇದು ವೇದಾಂತದಲ್ಲಿ ನಿಷ್ಣಾತರಾದವರಿಗೆ ಒಪ್ಪಿಗೆಯಾದ ಶಂಕರಾಚಾರ್ಯರ ಪ್ರಕ್ರಿಯೆಯು (ಇದನ್ನು ಇಲ್ಲಿ) ಸಂಗ್ರಹವಾಗಿ ತೋರಿಸಿದ್ದಾಗಿದೆ.

ಹೀಗಿದ್ದರೂ ಅದ್ವೈತವೇ ವೇದಾನ್ತಾರ್ಥವು ಎಂಬುದನ್ನು ಒಪ್ಪಿಕೊಂಡವರಾದ ಬೇರೆ ಪ್ರಸ್ಥಾನದವರೂ ಸಹ – ಅವರು ಭಾಷ್ಯಕಾರರ ಸಮಾನಕಾಲದವರಾಗಿದ್ದವರು – ಅವರೂ ತಮ್ಮ ಸಂಪ್ರದಾಯದ ಬಲದಿಂದ

ವರ್ಣಯಾಂಬಭೂವುಃ | ತತ್ರ ಸಮಾನೇಽಪ್ಯದ್ವೈತಿತ್ವೇ ತೇಷಾಮನಾದರಣೇ ಕೋ ಹೇತುರಿತಿ ವಕ್ತವ್ಯಂ ಯಥೋಪದರ್ಶಿತಪ್ರಕ್ರಿಯಾಯಾ ಏವೈಕಸ್ಯಾ ವೇದಾಂತಾಭಿಮತತ್ವ-ಬುದ್ಧಿದೃಢೀಕರಣಾರ್ಥಮ್ | ತದರ್ಥೋಽಯಮ್ ಆರಂಭಃ ||

೪೧. **ಪ್ರಾಚೀನಪ್ರಸ್ಥಾನಭೇದಾನಾಂ ಸಮಾನಾ ಧರ್ಮಾಃ** - ತತ್ರ ಪ್ರಸ್ಥಾನಾಂತರಾವಲಂಬಿಭಿರಪಿ ಜಗತೋ ಬ್ರಹ್ಮಕಾರಣಕತ್ವಮುರರೀಕ್ರಿಯತೇ, ಮೋಕ್ಷೇ ಜೀವಾನಾಂ ಬ್ರಹ್ಮಭಾವಾಪತ್ತಿಶ್ಚ | ಮೋಕ್ಷಸ್ತು ಶ್ರುತಿವಿಹಿತತ್ವೇನ ಸ್ವಸ್ವಸಂಪ್ರದಾಯಾಭಿ-ಮತಸಾಧನವಿಶೇಷೇಣ ಪ್ರಾಪ್ಯಃ - ಇತಿ ತೇಷಾಮಾಗ್ರಹಃ | ತಥಾ ಹಿ - (೧) ಕರ್ಮಕಾಂಡಸ್ಯಾಪಿ ವೇದತ್ವಸಾಮಾನ್ಯಾತ್ ಅವಿಶಿಷ್ಟಂ ಪ್ರಾಮಾಣ್ಯಮಿತಿ ತತ್ಪ್ರಾಮಾಣ್ಯಾವಿಘಾತಾಯ ಕರ್ಮಸಮುಚ್ಚಿತಾದೇವ ಜ್ಞಾನಾನ್ಮೋಕ್ಷೋ ಭವಿತುಮರ್ಹತಿ - ಇತಿ ಕೇಚಿತ್ | (೨) ವಸ್ತುಮಾತ್ರಸಮರ್ಪಕಸ್ಯ ಜ್ಞಾನಸ್ಯ ಅಕಿಂಚಿತ್ಕರತ್ವಾತ್, ಉಪಾಸನಾಪರಾಭಿಧಾನಮೇವ ಜ್ಞಾನಂ ವೇದಾಂತವಿಹಿತಮ್, ತೇನೈವ ಚ ಮೋಕ್ಷೋ

---

ವೇದಾನ್ತಗಳ ಪ್ರಾಮಾಣ್ಯವನ್ನು ಮತ್ತೊಂದು ರೀತಿಯಾಗಿಯೇ ವರ್ಣಿಸಿರು-ತ್ತಾರೆ. ಅವರಲ್ಲಿ, ಅದ್ವೈತಿಗಳೆಂಬುದು ಸಮಾನವಾಗಿದ್ದರೂ ಅವರನ್ನು ಅಸಡ್ಡೆ ಮಾಡುವುದಕ್ಕೆ ಕಾರಣವೇನು? ಎಂಬುದನ್ನು ಹೇಳಬೇಕು, ಮೇಲೆ ತೋರಿಸಿದ್ದಾದ ಈ ಒಂದೇ ಪ್ರಕ್ರಿಯೆಯೇ ವೇದಾನ್ತಗಳಿಗೆ ಒಪ್ಪಿಗೆಯಾದದ್ದೆಂಬ ಬುದ್ಧಿಯನ್ನು ಗಟ್ಟಿಗೊಳಿಸುವುದಕ್ಕಾಗಿ (ಈ ಮುಂದಿನ ಕಿರಣವು) ಆರಂಭ-ವಾಗಿರುತ್ತದೆ.

**೪೧) ಪ್ರಾಚೀನ ಪ್ರಸ್ಥಾನಗಳಿಗೂ (ಇದಕ್ಕೂ) ಸಮಾನವಾದ ಧರ್ಮಗಳು** – ಬೇರೆ ಪ್ರಸ್ಥಾನದವರೂ ಸಹ ಜಗತ್ತಿಗೆ ಬ್ರಹ್ಮವೇ ಕಾರಣವೆಂಬುದನ್ನು ಒಪ್ಪಿಕೊಂಡಿರುತ್ತಾರೆ. ಮೋಕ್ಷದಲ್ಲಿ ಜೀವರುಗಳಿಗೆ ಬ್ರಹ್ಮಭಾವವಿರುತ್ತದೆ (ಎಂಬುದನ್ನೂ ಒಪ್ಪಿರುತ್ತಾರೆ). ಮೋಕ್ಷವಾದರೆ ಶ್ರುತಿಯಲ್ಲಿ ವಿಧಿಸಿರುವುದರಿಂದ ತಮ್ಮ ಸಂಪ್ರದಾಯಕ್ಕೆ ಒಪ್ಪಿಗೆಯಾದ ಒಂದಾನೊಂದು ಸಾಧನದಿಂದ ಪಡೆಯತಕ್ಕದ್ದೆಂದು ಅವರ ಹಠವಿರುತ್ತದೆ. ಹಾಗೆಯೇ ಇದೆ (ನೋಡಿ) (೧) ಕರ್ಮಕಾಂಡವೂ ಸಹ ವೇದವಾದ್ದರಿಂದ ಪ್ರಾಮಾಣ್ಯವು (ಅದರೊಡನೆ) ಸಮಾನವಾಗಿರುತ್ತದೆಯಾದ್ದರಿಂದ ಅದರ ಪ್ರಾಮಾಣ್ಯಕ್ಕೆ ವಿರೋಧವಾಗದೇ ಇರುವುದಕ್ಕಾಗಿ ಕರ್ಮದೊಡನೆ ಸೇರಿಕೊಳ್ಳುವ ಜ್ಞಾನದಿಂದಲೇ ಮೋಕ್ಷವಾಗುವುದಕ್ಕೆ ತಕ್ಕದ್ದಾಗಿದೆ ಎಂದು ಕೆಲವರು (೨)

ಭವಿತುಮರ್ಹತಿ | "ಆತ್ಮಾ ವಾ ಅರೇ ದ್ರಷ್ಟವ್ಯಃ" (ಬೃ), "ಸೋಽನ್ವೇಷ್ಟವ್ಯಃ" (ಛಾಂ) ಇತ್ಯಾದಿವಿಧಾನದರ್ಶನಾತ್; ವಸ್ತುಬೋಧಕವಾಕ್ಯಾನಿ ತು ಉಪಾಸ್ಯಸ್ವರೂಪ-ಸಮರ್ಪಣೇನೋಪಯುಕ್ತಾನಿ - ಇತ್ಯಪರೇ | ತೇನೈವೋಪಾಸನೇನ ಅವಿದ್ಯಾನಿವೃತ್ತಿರಪಿ ಭವಿತ್ರೀ ಇತ್ಯಪಿ ಕೇಚಿತ್ | (೩) ನಿಷ್ಪ್ರಪಂಚಬ್ರಹ್ಮಾತ್ಮಭಾವಸ್ಯೈವ ಮೋಕ್ಷತ್ವಾತ್ ಪ್ರಪಂಚಪ್ರವಿಲಯೇ ಸಾಧಕೋ ನಿಯುಜ್ಯತೇ ವೇದೇನ ಸರ್ವತ್ರ | ತದನುಸಾರೇಣ ಪ್ರಪಂಚಂ ಕ್ರಮಕ್ರಮೇಣ ಪ್ರವಿಲಾಪ್ಯ ಮೋಕ್ಷೋಽಧಿಗಂತವ್ಯಃ - ಇತ್ಯಪರೇ | (೪) ಬ್ರಹ್ಮವಿಷಯಕಶ್ರವಣಂ ಕೃತ್ವಾಪಿ ಕೃತಾರ್ಥತಾ ನ ಭವತಿ ಮುಮುಕ್ಷೋಃ ; ಅತೋ ವಾಕ್ಯಜನ್ಯಂ ಜ್ಞಾನಂ ನಿರಂತರಂ ದೀರ್ಘಕಾಲಮ್ ಅಭ್ಯಸ್ಯ ಭಾವನೋಪಚಯಾನ್ನಿಃ-ಶೇಷಮಜ್ಞಾನಮ್ ಅಪನೀಯ ಕಾಲಾಂತರೇ ಬ್ರಹ್ಮಭಾವಃ ಸಂಪಾದನೀಯಃ - ಇತಿ ಕೇಚಿತ್ | (೫) ವಾಕ್ಯಜನ್ಯಂ ಜ್ಞಾನಂ ಕೇವಲಂ ಯುಕ್ತಿಸಹಿತಂ ವಾ ಸಮಭ್ಯಸ್ಯ ವಿಶೇಷಜ್ಞಾನಂ ಸಂಪಾದನೀಯಮ್ ಅಜ್ಞಾನವಿಧ್ವಸ್ತಯೇ - ಇತ್ಯೇಕೇ | (೬)

---

ವಸ್ತುವಷ್ಟನ್ನೇ ತಿಳಿಸುವ ಜ್ಞಾನವು ಏನನ್ನೂ (ಯಾವ ಪ್ರಯೋಜನವನ್ನು) ಮಾಡುವುದಿಲ್ಲವಾದ್ದರಿಂದಲೂ, ಉಪಾಸನೆ ಎಂಬ ಇನ್ನೊಂದು ಹೆಸರನ್ನಿಟ್ಟು-ಕೊಂಡ ಜ್ಞಾನವೇ ವೇದಾನ್ತದಲ್ಲಿ ವಿಹಿತವಾದ ಜ್ಞಾನವಾದ್ದರಿಂದಲೂ ಅದರಿಂದಲೇ ಮೋಕ್ಷವಾಗುವುದಕ್ಕೆ ಯೋಗ್ಯವಾಗಿದೆ, ಹಾಗೆಯೇ "ಆತ್ಮನನ್ನೇ ಕಂಡುಕೊಳ್ಳಬೇಕು" (ಬೃ) "ಆತ್ಮನನ್ನು ಹುಡುಕಿಕೊಳ್ಳಬೇಕು" (ಛಾಂ) ಎಂಬುದಾಗಿ ವಿಧಿಸಿರುವುದು ಕಂಡುಬಂದಿರುವುದರಿಂದ ವಸ್ತುಬೋಧಕ-ವಾಕ್ಯಗಳು ಯಾವುದಿದೆಯೋ ಅವು ಉಪಾಸ್ಯವಾದದ್ದರ ಸ್ವರೂಪವನ್ನು ತಿಳಿಸಿಕೊಡುವುದರ ಮೂಲಕ ಉಪಯುಕ್ತವಾದದ್ದಾಗಿವೆ ಎಂದು ಮತ್ತೆ ಕೆಲವರು (ಹೇಳುತ್ತಿದ್ದರು). ಆ ಉಪಾಸನೆಯಿಂದಲೇ ಅವಿದ್ಯೆಯು ತೊಲಗುವುದೆಂದೂ ಕೆಲವರು (ಹೇಳುವರು). (೩) ನಿಷ್ಪ್ರಪಂಚವಾದ ಬ್ರಹ್ಮವೇ ಆತ್ಮವಾಗಿದೆ ಎಂಬುದೇ ಮೋಕ್ಷವಾದ್ದರಿಂದ ವೇದದಲ್ಲಿ ಎಲ್ಲಾ ಕಡೆಯಲ್ಲೂ ಪ್ರಪಂಚವನ್ನು ಕರಗಿಸಿ-ಕೊಳ್ಳುವುದೆಂಬ ಕ್ರಿಯೆಯಲ್ಲಿಯೇ ಸಾಧಕನು ನಿಯುಕ್ತನಾಗಿರುತ್ತಾನೆ. ಅದಕ್ಕನುಗುಣವಾಗಿ ಪ್ರಪಂಚವನ್ನು ಕ್ರಮಕ್ರಮವಾಗಿ ಕರಗಿಸಿ ಮೋಕ್ಷವನ್ನು ಪಡೆಯಬೇಕೆಂದು ಇನ್ನು ಕೆಲವರ ಅಭಿಪ್ರಾಯವು. (೪) ಬ್ರಹ್ಮದ ಬಗ್ಗೆ ಶ್ರವಣವನ್ನು ಮಾಡಿದರೂ ಮುಮುಕ್ಷುವಿಗೆ ಕೃತಾರ್ಥತೆ ಎಂಬುದು ಆಗುವುದಿಲ್ಲ. ಆದ್ದರಿಂದ ವಾಕ್ಯದಿಂದುಂಟಾದ ಜ್ಞಾನವನ್ನು ನಿರಂತರವಾಗಿ ಬಹಳ ಕಾಲದವರೆಗೆ ಅಭ್ಯಾಸವನ್ನು ಮಾಡಿ ಭಾವನೆಯು

ವಾಕ್ಯಜ್ಞಾನಸ್ಯ ಸಂಸೃಷ್ಟಾರ್ಥವಿಷಯಕತ್ವಾತ್, ಅಸಂಸೃಷ್ಟಾರ್ಥವಿಜ್ಞಾನಸಮುತ್ಪತ್ತಯೇ ಜ್ಞಾನಾಭ್ಯಾಸಃ ಕರ್ತವ್ಯ ಇತ್ಯನ್ಯೇ | (೭) ಶ್ರುತಿವಿಹಿತವಿಧಾನೇನ ಅವಸ್ಥಾತ್ರಯ-ವಾಸನಾನಿರೋಧಂ ಕೃತ್ವೈವ ಕೃತಾರ್ಥೋ ಭವೇನ್ನಾನ್ಯಥಾ | ನ ಹಿ ಪ್ರಮಾಣಾಂತರ-ಗಮ್ಯಸ್ಯಾತ್ಮನೋ ವೇದಾಂತೈಕಗಮ್ಯತ್ವಮಿತಿ ಯುಜ್ಯತೇ | ಅತೋ ನಾತ್ಮಜ್ಞಾನೇ ವೇದಾಂತಾನಾಂ ವಿನಿಯೋಗಃ, ಕಿಂ ತರ್ಹಿ ಅನ್ವಯವ್ಯತಿರೇಕಾಭ್ಯಾಮ್ ಅವಸ್ಥಾ-ತ್ರಯಾದ್ ವಿವಿಚ್ಯಾತ್ಮಾನಂ ಪ್ರತ್ಯಭಿಜ್ಞಾತವಾನ್ ಅವಸ್ಥಾತ್ರಯವಾಸನಾನಿರೋಧೇ ನಿಯುಜ್ಯತೇ | ಇತಿ ಕೇಚಿತ್ | (೮) ಅಥವಾ ಮನೋನಿರೋಧೇ ಏವ ಪುರುಷೋ ನಿಯುಜ್ಯತೇ; ನಿರುದ್ಧಾಂತಃಕರಣಸ್ಯ ಸ್ವಯಮೇವಾತ್ಮಾ ಪ್ರಕಾಶತೇ, ಆತ್ಮನಃ ಸ್ವಯಂಪ್ರಕಾಶತ್ವಾದಿತ್ಯಪ್ಯನ್ಯೇ | (೯) ಸಾಕ್ಷಾತ್ಕೃತಬ್ರಹ್ಮಣೋಽಪಿ ದೇಹಪಾತಾನಂತರಂ ಬ್ರಹ್ಮಣಿ ಲಯ ಏವೈಕಾಂತಿಕೋ ಮೋಕ್ಷಃ | ತಾವತ್ಪರ್ಯಂತಮ್ ಅನಾತ್ಯಂತಿಕತ್ವಾದ್

---

(ಚೆನ್ನಾಗಿ) ಬೆಳೆಯುವುದರಿಂದ ಸಂಪೂರ್ಣವಾಗಿ ಅಜ್ಞಾನವು ತೊಲಗಿ ಕಾಲಾಂತರದಲ್ಲಿ ಬ್ರಹ್ಮಭಾವವನ್ನು ಪಡೆದುಕೊಳ್ಳಬೇಕೆಂದು ಕೆಲವರು. (೫) ವಾಕ್ಯದಿಂದುಂಟಾಗುವ ಕೇವಲ ಜ್ಞಾನವನ್ನಾಗಲೀ ಯುಕ್ತಿಸಹಿತವಾದದ್ದ-ನ್ನಾಗಲೀ ಚೆನ್ನಾಗಿ ಅಭ್ಯಾಸವನ್ನು ಮಾಡಿ ವಿಶೇಷಜ್ಞಾನವನ್ನು ಅಜ್ಞಾನನಾಶಕ್ಕಾಗಿ ಸಂಪಾದಿಸಿಕೊಳ್ಳಬೇಕು ಎಂದು ಮತ್ತೆ ಕೆಲವರು (೬) ವಾಕ್ಯಜ್ಞಾನವು ಸಂಸರ್ಗಾತ್ಮಕವಾದದ್ದಾದ್ದರಿಂದ ಅಸಂಸರ್ಗಾತ್ಮಕವಾದ ವಸ್ತುವಿನ ಜ್ಞಾನವುಂಟಾಗುವುದಕ್ಕೆ ಜ್ಞಾನಾಭ್ಯಾಸವನ್ನು ಮಾಡಬೇಕು ಎಂದು ಕೆಲವರು (೭) ಶ್ರುತಿಯಲ್ಲಿ ವಿಧಾನಮಾಡಿದ ರೀತಿಯಿಂದ ಅವಸ್ಥಾತ್ರಯದ ವಾಸನೆಯ ನಿರೋಧವನ್ನು ಮಾಡಿಕೊಂಡೇ ಕೃತಾರ್ಥನಾಗಬೇಕೇ ಹೊರತು ಬೇರೆ ರೀತಿಯಾಗುವುದಿಲ್ಲ. ಬೇರೊಂದು ಪ್ರಮಾಣಕ್ಕೂ ಸಿಗುವ ಆತ್ಮನು ವೇದಾನ್ತಒಂದಕ್ಕೇ ಗೊತ್ತಾಗುತ್ತಾನೆಂಬುದು ಹೊಂದುವುದಿಲ್ಲವಷ್ಟೇ? ಆದ್ದರಿಂದ ವೇದಾನ್ತಗಳು ಆತ್ಮಜ್ಞಾನವನ್ನುಂಟುಮಾಡುವುದರಲ್ಲಿ ವಿನಿಯೋಗಗೊಂಡಿಲ್ಲ, ಮತ್ತೇನೆಂದರೆ, ಅನ್ವಯವ್ಯತಿರೇಕದಿಂದ ಆತ್ಮನನ್ನು ಅವಸ್ಥಾತ್ರಯದಿಂದ ವಿಂಗಡಿಸಿಕೊಂಡವನು ತಿಳಿದವನಾಗುತ್ತಾನಾದ್ದರಿಂದ ಅವಸ್ಥಾತ್ರಯವೆಂಬ ವಾಸನೆಯನ್ನು ತಡೆ ಗಟ್ಟುವುದರಲ್ಲಿ ನಿಯುಕ್ತನಾಗಿರುತ್ತಾನೆ ಎಂದು ಕೆಲವರು (೮) ಅಥವಾ ಮನಸ್ಸನ್ನು ತಡೆಗಟ್ಟುವ (ವ್ಯಾಪಾರದಲ್ಲಿ) ಪುರುಷನು ನಿಯುಕ್ತನಾಗಿರುತ್ತಾನೆ, ಏಕೆಂದರೆ ಅಂತಃಕರಣವನ್ನು ತಡೆಹಿಡಿದರೆ ಆತ್ಮನು ತಾನೇ ತೋರಿಕೊಳ್ಳುತ್ತಾನೆ, ಏಕೆಂದರೆ (ಆತನು)

ಬ್ರಹ್ಮಪ್ರಾಪ್ತೇಃ - ಇತಿ ಕೇಚಿತ್ | ಇತ್ಯೇವಂ ಬಹುಧಾ ವಿಪ್ರತಿಪನ್ನಾಃ ಪ್ರಾಚೀನ-ಪ್ರಸ್ಥಾನಾವಲಂಬಿನಃ ||

ತತ್ರಾಮೀಷಾಂ ಸರ್ವೇಷಾಮಪಿ ವಾದಿನಾಂ (೧) ಶ್ರುತಿರಪೌರುಷೇಯತ್ವಾತ್ ಪ್ರಮಾಣಾಂತರಾನಧಿಗತಸಾಧನಫಲಸಂಬಂಧಬೋಧನಮುಖೇನೈವ ಪ್ರಮಾಣಮ್; (೨) ಆಚಾರ್ಯಸ್ತು ಶ್ರುತ್ಯರ್ಥಬೋಧಕತ್ವಮಾತ್ರೇಣ ಮಾರ್ಗದರ್ಶಕಃ; (೩) ಸಾಧನವಿಶೇಷಸ್ತು ಶ್ರುತಿವಿಹಿತಃ, ಸ್ವಪ್ರಸ್ಥಾನಸಂಪ್ರದಾಯಬಲಾದೇವ ನಿರ್ಧಾರಣೀಯಃ (೪) ಜೀವತ್ವರೂಪೋ ಬಂಧೋ ವಿದ್ಯಮಾನ ಏವ ತಾದೃಶಸಾಧನವಿಶೇಷಾ-ನುಷ್ಠಾನೇನೈವ ಪರಿಹರಣೀಯಃ; (೫) ಅಜ್ಞಾನಮಪಿ ಕ್ವಚಿದಭ್ಯುಪಗಮ್ಯಮಾನಂ ಪುಣ್ಯಪಾಪಾದಿವತ್ ಶಾಸ್ತ್ರೈಕಸಮಧಿಗಮ್ಯಮ್, ಪರಿಹರಣೀಯಂ ಚ ಸಾಧನ-ವಿಶೇಷಾನುಷ್ಠಾನೇನ | (೬) ಸ್ವಸ್ವಸಂಪ್ರದಾಯಸಂಮತಮೀಮಾಂಸಾಪ್ರಕಾರಾನು-

---

ಸ್ವಯಂಪ್ರಕಾಶನಾಗಿರುತ್ತಾನೆ ಎಂದೂ ಕೆಲವರು (೯) ಬ್ರಹ್ಮವನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದರೂ ದೇಹವು ಬಿದ್ದ ಮೇಲೆಯೇ ಬ್ರಹ್ಮದಲ್ಲಿ ಲಯವು, ಅದೇ ಏಕಾಂತಿಕವಾದ ಮೋಕ್ಷವು, ಅಲ್ಲಿಯವರೆಗೆ (ಆಗುವ) ಬ್ರಹ್ಮಪ್ರಾಪ್ತಿಯು ಆತ್ಯಂತಿಕವಾದದ್ದಾಗಿರುವುದಿಲ್ಲ ಎಂದೂ ಕೆಲವರು. ಹೀಗೆ ಪ್ರಾಚೀನಪ್ರಸ್ಥಾನ-ವನ್ನವಲಂಬಿಸಿದವರು ಬಹಳವಾಗಿ ವಿರುದ್ಧವಾಗಿ ತಿಳಿದವರಾಗಿರುತ್ತಾರೆ.

ಇಲ್ಲಿ ಇವರೆಲ್ಲರ ಸಮಾನತೆಯು ಇದು (೧) ಶ್ರುತಿಯು ಅಪೌರುಷೇಯ-ವಾದ್ದರಿಂದ ಮತ್ತೊಂದು ಪ್ರಮಾಣಕ್ಕೆ ಗೊತ್ತಾಗದ ಸಾಧನಫಲಗಳಿಗೆ ಸಂಬಂಧವನ್ನು ತಿಳಿಸುವುದರ ಮೂಲಕವಾಗಿಯೇ ಪ್ರಮಾಣವಾಗಿರುತ್ತದೆ. (೨) ಆಚಾರ್ಯನಾದರೋ ಶ್ರುತ್ಯರ್ಥವನ್ನು ತಿಳಿಸುವುದರ ಮೂಲಕವಾಗಿ ಮಾರ್ಗದರ್ಶಕನಾಗಿರುತ್ತಾನೆ. (೩) ಶ್ರುತಿಯು ವಿಧಿಸಿರುವ ಸಾಧನವಿಶೇಷ-ವಾದರೋ ತಮ್ಮ ಮಾರ್ಗದ ಸಂಪ್ರದಾಯ ಬಲದಿಂದಲೇ ನಿರ್ಧರಿಸ-ಬೇಕಾಗುತ್ತದೆ. (೪) ನಿಜವಾಗಿರುವ ಜೀವತ್ವರೂಪವಾದ ಬಂಧವನ್ನು (ಶಾಸ್ತ್ರ) ರೀತಿಯದಾದ ಗೊತ್ತಾದ ಸಾಧನಾನುಷ್ಠಾನದಿಂದಲೇ ಪರಿಹರಿಸಿಕೊಳ್ಳ-ಬೇಕಾಗುತ್ತದೆ. (೫) ಕೆಲವೊಮ್ಮೆ ಒಪ್ಪಿಕೊಂಡದ್ದಾದ ಅಜ್ಞಾನವನ್ನೂ ಸಹ ಪುಣ್ಯಪಾಪಗಳನ್ನು ಹೇಗೋ ಹಾಗೆ ಶಾಸ್ತ್ರ ಒಂದರಿಂದಲೇ ಗೊತ್ತಾಗತಕ್ಕದ್ದು ಮತ್ತು ಒಂದು ಗೊತ್ತಾದ ಸಾಧನಾನುಷ್ಠಾನದಿಂದ ಪರಿಹರಿಸಿಕೊಳ್ಳಬೇಕು. (೬) ತಮ್ಮ ತಮ್ಮ ಸಂಪ್ರದಾಯಕ್ಕೆ ಒಪ್ಪಿಗೆಯಾದ ಮೀಮಾಂಸೆಗೆ ಅನುಗುಣವಾಗಿ

ರೋಧೇನ ವಾಕ್ಯಾರ್ಥನಿರ್ಧಾರಣಮ್, ತದನುಗುಣಯುಕ್ತ್ಯುತ್ಪ್ರೇಕ್ಷಣಂ ಚ; (೭) ಪರಪಕ್ಷನಿರಾಕರಣೇಽಪಿ ಮೀಮಾಂಸಾನ್ಯಾಯಾನಾಮಾಹರಣಮ್, ತಾರ್ಕಿಕಸಂಮತ-ಯುಕ್ತ್ಯಾನಯನಂ ಚ ಸಮಾನಮ್ ||

## ಪ್ರಸ್ಥಾನಾಂತರೇಷು ದೋಷಾಃ

**೪೨. ವೇದಾಂತಾನಾಂ ವಿಧಿಪರತ್ವೇನಾಂಗೀಕಾರೋ ದೋಷಃ ಪ್ರಸ್ಥಾನೇಷು** - ಅಥಾಮೀಷಾಂ ಸರ್ವೇಷಾಂ ಸಮಾನಾನಿ ದೂಷಣಾನ್ಯುಪನ್ಯಸ್ಯಂತೇ ತತ್ಪ್ರಕ್ರಿಯಾ-ಣಾಮ್ ಅವೈದಾಂತಿಕತ್ವಾವಿಷ್ಕರಣಾರ್ಥಮ್ | ವೇದಾಂತಾನಾಂ ನಿಯಮೇನ ವಿಧಿಪರತ್ವಾಂಗೀಕಾರಸ್ತಾವತ್ ಸಮಾನೋ ದೋಷಃ ಸರ್ವೇಷಾಮಪಿ | ನ ಹಿ ನಿರ್ವಿಶೇಷಾತ್ಮತತ್ತ್ವಪ್ರತಿಪಾದಕೇಷು ವೇದಾಂತವಾಕ್ಯೇಷು ವಿಧಿಸಂಸ್ಪರ್ಶೋ ನಿಯೋಗೋಪದೇಶಗಂಧೋ ವಾ ಉಪಲಭ್ಯತೇ ಕ್ವಚಿದಪಿ | ವಸ್ತುಮಾತ್ರಪರ್ಯವ-ಸಾಯಿತ್ವಂ ಹಿ ನಿಯಮೇನ ದೃಶ್ಯತೇ ಸರ್ವತ್ರ ವಾಕ್ಯಾನಾಮ್, ತದ್ಗತಪದಾನಾಂ ಚ |

---

ವಾಕ್ಯಾರ್ಥವನ್ನು ಗೊತ್ತುಮಾಡಿಕೊಳ್ಳುವುದು ಮತ್ತು ಅದಕ್ಕೇ ಹೊಂದುಗಡೆ-ಯಾಗುವ ಯುಕ್ತಿಯನ್ನು ಊಹಿಸಿಕೊಳ್ಳುವುದು. (೭) ಮತ್ತೊಂದು ಪಕ್ಷವನ್ನು ನಿರಾಕರಣೆ ಮಾಡುವಾಗಲೂ ಮೀಮಾಂಸಾನ್ಯಾಯವನ್ನು ತರುವುದು ಮತ್ತು ತಾರ್ಕಿಕರಿಗೆ ಒಪ್ಪಿಗೆಯಾದ ಯುಕ್ತಿಯನ್ನು ತರುವುದು, (ಎಂಬುದು ಈ ಎಲ್ಲಾ ವಾದಿಗಳಿಗೂ ಸಮಾನವು).

## ॥ ಬೇರೆ ಪ್ರಸ್ಥಾನದಲ್ಲಿರುವ ದೋಷಗಳು ॥

**೪೨) ಬೇರೆ ಮತದವರಲ್ಲಿ ವೇದಾಂತಗಳನ್ನು ವಿಧಿಪರವಾಗಿ ಒಪ್ಪಿರುವುದೆಂಬುದು ದೋಷವು.** ಈ ಪ್ರಕ್ರಿಯೆಗಳೆಲ್ಲಾ ಅವೈದಿಕವಾಗಿವೆ ಎಂಬುದನ್ನು ತೋರಿಸುವುದಕ್ಕಾಗಿ ಈ ಎಲ್ಲಾ ಪ್ರಕ್ರಿಯೆಗಳಲ್ಲೂ ಇರುವ ಸಮಾನವಾದ ದೋಷಗಳನ್ನು ಹೇಳಲಾಗುತ್ತದೆ. ವೇದಾನ್ತಗಳು ವಿಧಿಪರವಾಗಿವೆ ಎಂಬುದು ಈ ಎಲ್ಲಾ ವಾದಿಗಳ ನಿಯತವಾದ ಸಮಾನವಾದ ದೋಷವು. ಯಾವ ವಿಶೇಷವೂ ಇಲ್ಲದ ಆತ್ಮತತ್ತ್ವವನ್ನು ಪ್ರತಿಪಾದನೆ ಮಾಡುವ ವೇದಾಂತವಾಕ್ಯಗಳಲ್ಲಿ ವಿಧಿಸಂಬಂಧವಾಗಲೀ ನಿಯೋಗದ (ಕಟ್ಟು-ಮಾಡುವುದರ) ಗಂಧವಾಗಲೀ ಸ್ವಲ್ಪವೂ ಕೂಡ ಇರುವುದಿಲ್ಲ. (ವೇದಾನ್ತ) ವಾಕ್ಯಗಳಿಗೂ ಅದರಲ್ಲಿರುವ ಪದಗಳಿಗೂ ಸಹ ವಸ್ತುಸ್ವರೂಪವಷ್ಟನ್ನೇ

ತಸ್ಮಾತ್, ವಸ್ತುಬೋಧಕವಾಕ್ಯಸ್ಯಾರ್ಥಾಂತರಕಲ್ಪನಂ ಪ್ರಥಮೋ ದೋಷಃ ಸರ್ವೇಷಾಂ ವಾದಿನಾಮ್ | ಯಥಾಹುರ್ಭಗವತ್ಪಾದಾಃ -

(೧) ನ ಚ ತದ್ಗತಾನಾಂ ಪದಾನಾಂ ಬ್ರಹ್ಮಸ್ವರೂಪವಿಷಯೇ ನಿಶ್ಚಿತೇ ಸಮನ್ವಯೇ ಅವಗಮ್ಯಮಾನೇ ಅರ್ಥಾಂತರಕಲ್ಪನಾ ಯುಕ್ತಾ | ಶ್ರುತಹಾನ್ಯಶ್ರುತಕಲ್ಪನಾ-ಪ್ರಸಂಗಾತ್ || ಸೂ.ಭಾ. ೧-೧-೪.

(೨) "ತದೇತದ್ ಬ್ರಹ್ಮಾಪೂರ್ವಮನಪರಮನಂತರಮಬಾಹ್ಯಮಯಮಾತ್ಮಾ ಬ್ರಹ್ಮ ಸರ್ವಾನುಭೂಃ" (ಬೃ.) ಇತ್ಯೇವಮಾದೀನಿ ವಾಕ್ಯಾನಿ ನಿಷ್ಪ್ರಪಂಚ-ಬ್ರಹ್ಮಾತ್ಮತತ್ತ್ವಪ್ರಧಾನಾನಿ ನಾರ್ಥಾಂತರಪ್ರಧಾನಾನಿ - ಇತ್ಯೇತತ್ ಪ್ರತಿಷ್ಠಾಪಿತಮ್ "ತತ್ತು ಸಮನ್ವಯಾತ್" (೧-೧-೪) ಇತ್ಯತ್ರ || ಸೂ.ಭಾ. ೩-೨-೧೪,

---

(ತಿಳಿಸಿಕೊಡುವುದರಲ್ಲಿ) ತಾತ್ಪರ್ಯವಿರುವುದೆಂಬುದು ಏಕಾಂತವಾಗಿ ಎಲ್ಲಾ ಕಡೆಯಲ್ಲೂ ಕಂಡುಬಂದಿರುತ್ತದೆ. ಆದ್ದರಿಂದ ಎಲ್ಲಾ ವಾದಿಗಳಿಗೂ ವಸ್ತುವನ್ನು ತಿಳಿಸಿಕೊಡುವ ವಾಕ್ಯಗಳಿಗೆ ಬೇರೊಂದು ಅರ್ಥವನ್ನು ಮಾಡುವುದೆಂಬುದು ಮೊಟ್ಟ ಮೊದಲನೆಯ ದೋಷವು. ಈ ವಿಷಯಕ್ಕೆ ಭಗವತ್ಪಾದರು (ಹೀಗೆ) ಹೇಳಿರುತ್ತಾರೆ.

(೧) ವೇದಾಂತಗಳಲ್ಲಿರುವ ಪದಗಳಿಗೆ ಬ್ರಹ್ಮಸ್ವರೂಪದ ವಿಷಯದಲ್ಲಿ ನಿಶ್ಚಿತವಾದ ಸಮನ್ವಯವು ಗೊತ್ತಾಗುತ್ತಿರುವಾಗ (ಅವುಗಳಿಗೆ) ಬೇರೊಂದು ಅರ್ಥವನ್ನು ಕಲ್ಪಿಸುವುದು ಸರಿಯಲ್ಲ. ಏಕೆಂದರೆ (ಹಾಗೆ ಮಾಡಿದರೆ) ಶ್ರುತಿಯಲ್ಲಿ ಹೇಳಿರುವುದನ್ನು ಬಿಟ್ಟು ಹೇಳದಿರುವುದನ್ನು ಕಲ್ಪಿಸಿಕೊಂ-ಡಂತಾದೀತು (ಸೂ. ಭಾ ೧-೧-೪).

(೨) "ಆ ಈ ಬ್ರಹ್ಮವು ಅಪೂರ್ವವು (ಕಾರಣವಿಲ್ಲದ್ದು), ಕಾರ್ಯ-ವಿಲ್ಲದ್ದು, ಒಳಗಿಲ್ಲದ್ದು, ಹೊರಗಿಲ್ಲದ್ದು, ಈ ಆತ್ಮನೇ ಬ್ರಹ್ಮವು ಎಲ್ಲವನ್ನೂ ಅನುಭವಿಸುತ್ತಿರುವಂಥದ್ದು" (ಬೃ) ಎಂದು ಮೊದಲಾದ ವಾಕ್ಯಗಳು, ನಿಷ್ಪ್ರಪಂಚವಾದ ಬ್ರಹ್ಮಾತ್ಮತತ್ವವನ್ನೇ ಪ್ರಧಾನವಾಗಿ ಹೇಳುತ್ತಿರುವ (ವಾಕ್ಯಗಳು). ಇವು ಬೇರೊಂದರ್ಥವನ್ನು ಹೇಳುವಂಥವುಗಳಲ್ಲ, ಎಂಬೀ ವಿಚಾರವನ್ನು "ತತ್ತು ಸಮನ್ವಯಾತ್" (೧-೧-೪) ಎಂಬ ಸೂತ್ರದಲ್ಲಿ ತೋರಿಸಿಕೊಟ್ಟದ್ದಾಗಿದೆ (ಸೂ. ಭಾ ೩-೨-೧೪).

(೩) ವಸ್ತುಮಾತ್ರಪರ್ಯವಸಾಯೀನಿ ಹಿ ಬ್ರಹ್ಮವಾಕ್ಯಾನಿ ನ ನಿಯೋಗೋಪದೇಶೀನಿ ಇತ್ಯೇತತ್ ವಿಸ್ತರೇಣ ಪ್ರತಿಷ್ಠಾಪಿತಂ "ತತ್ತು ಸಮನ್ವಯಾತ್" (೧-೧-೪) ಇತ್ಯತ್ರ || ಸೂ.ಭಾ. ೩-೨-೨೧.

ಇತಿ ಚ ||

ನ್ಯಾಯಶ್ಚ - ನ ಹಿ "ತತ್ತ್ವಮಸಿ" ಇತ್ಯಾದಿವಾಕ್ಯಬೋಧಿತಃ "ಏಕಮೇವಾದ್ವಿತೀಯಮ್, ಅಪೂರ್ವಮನಪರಮನಂತರಮಬಾಹ್ಯಂ ಬ್ರಹ್ಮಾಹಮ್" ಇತಿ ಜ್ಞಾನವಾನ್ ಪುರುಷಃ "ಕರ್ತಾಹಮ್ ವೇದವಿಹಿತಸಾಧನೇನ ಪುರುಷಾರ್ಥಮವಾಪ್ಸ್ಯೇ" ಇತಿ ವಾ "ವೇದವಾಕ್ಯೈರ್ನಿಯುಕ್ತೋಽಹಂ ಸಾಧನವಿಶೇಷಾನುಷ್ಠಾನೇ" ಇತಿ ವಾ ಮನ್ಯೇತ | ವಾಕ್ಯಜನಿತಾಕರ್ತೃಬ್ರಹ್ಮಪ್ರತ್ಯಯವಿರೋಧಾತ್, ತಾದೃಶಪ್ರತ್ಯಯಸ್ಯ ||

ಯಥಾಹುರ್ಭಾಷ್ಯಕಾರಾಃ -

---

(೩) "ಬ್ರಹ್ಮವಾಕ್ಯಗಳು ವಸ್ತುಸ್ವರೂಪವಷ್ಟನ್ನೇ ತಿಳಿಸುವುದರಲ್ಲಿ ಕೊನೆಗಂಡದ್ದಾಗಿರುವಂಥದ್ದೇ ಹೊರತು ನಿಯೋಗೋಪದೇಶವನ್ನು ಮಾಡುವುದರಲ್ಲಿ ಅಲ್ಲ ಎಂಬುದನ್ನು "ತತ್ತು ಸಮನ್ವಯಾತ್" (ವೇ. ಸೂ. ೧-೧-೪) ಎಂಬ ಸೂತ್ರದಲ್ಲಿ ನೆಲೆ ನಿಲ್ಲಿಸಿದ್ದಾಗಿದೆ."

ಯುಕ್ತಿಯೂ ಸಹ (ಇದಕ್ಕೇ) ಇದೆ (ಹೇಗೆಂದರೆ) – "ತತ್ವಮಸಿ" "ಅದೇ ನೀನಾಗಿರುವೆ" ಎಂಬುದೇ ಮೊದಲಾದ ವಾಕ್ಯದಿಂದ ತಿಳಿಸಲ್ಪಟ್ಟವನು, ಹಾಗೆಯೇ "ಎರಡಿಲ್ಲದ ಒಂದೇ ಆಗಿರುವಂಥದ್ದು", " ಕಾರಣವಿಲ್ಲ, ಕಾರ್ಯವಿಲ್ಲ, ಒಳಗೆ ಹೊರಗೆ ಎಂಬುದಿಲ್ಲದ ಬ್ರಹ್ಮವು ನಾನಾಗಿರುವೆನು" ಎಂದು ತಿಳಿವಳಿಕೆಯುಳ್ಳ ಪುರುಷನು – "ನಾನು ಕರ್ತೃವಾಗಿರುವೆನು, ವೇದ ವಿಹಿತವಾದ ಸಾಧನದಿಂದ ಪುರುಷಾರ್ಥವನ್ನು ಪಡೆಯುವೆನು" ಎಂದಾಗಲೀ, "ವೇದವಾಕ್ಯಗಳಿಂದ ನಾನು ಸಾಧನವಿಶೇಷವನ್ನನುಷ್ಠಾನ ಮಾಡಬೇಕಾದ ವಿಷಯದಲ್ಲಿ ನಿಯುಕ್ತನಾಗಿರುವೆನು" ಎಂದು ತಿಳಿಯುವುದಿಲ್ಲವಲ್ಲವೇ? ಏಕೆಂದರೆ ಆ ತರಹದ ಜ್ಞಾನವು ವಾಕ್ಯದಿಂದುಂಟಾದ, ಅಕರ್ತೃವು ಬ್ರಹ್ಮವು ಎಂಬ ಜ್ಞಾನಕ್ಕೆ ವಿರೋಧವಾಗಿರುತ್ತದೆ.

ಇಲ್ಲಿ ಹೀಗೆ ಭಾಷ್ಯಕಾರರು ಹೇಳಿರುತ್ತಾರೆ.

(೪) (ಅಂತಃಪ್ರಜ್ಞತ್ವಾದೀ) ಪ್ರತಿಷೇಧವಿಜ್ಞಾನಪ್ರಮಾಣಸಮಕಾಲಮೇವ ಆತ್ಮನ್ಯನರ್ಥಪ್ರಪಂಚನಿವೃತ್ತಿಲಕ್ಷಣಫಲಂ ಪರಿಸಮಾಪ್ತಮ್ ಇತಿ ತುರೀಯಾಧಿಗಮೇ ಪ್ರಮಾಣಾಂತರಂ ಸಾಧನಾಂತರಂ ವಾ ನ ಮೃಗ್ಯಮ್ || ಮಾಂ.ಭಾ.

(೫) ನಿಯುಕ್ತಸ್ಯ ಚ "ಅಸ್ಮಿನ್ ಅಧಿಕೃತೋಽಹಮ್, ಕರ್ತಾ, ಮಯೇದಂ ಕರ್ತವ್ಯಮ್" ಇತ್ಯವಶ್ಯಂ ಬ್ರಹ್ಮಪ್ರತ್ಯಯಾದ್ ವಿಪರೀತಪ್ರತ್ಯಯ ಉತ್ಪದ್ಯತೇ||
ಸೂ.ಭಾ. ೪-೧-೨.

ಇತಿ ||

೪೩. **ಶಾರೀರಕಾರಂಭಾನುಪಪತ್ತಿರ್ದ್ವಿತೀಯೋ ದೋಷಃ** - ವೇದಾಂತವಾಕ್ಯಮೀಮಾಂಸಾಶಾಸ್ತ್ರಸ್ಯ ಪೃಥಗಾರಂಭಣಾನುಪಪತ್ತಿಃ ಸರ್ವತ್ರಾಪಿ ತತ್ರ ಸಮಾನಾ | ಸರ್ವೈರಪಿ ಹ್ಯೇತೈರ್ವಾದಿಭಿಃ, ಜ್ಞಾನಕಾಂಡಸ್ಯಾಪಿ ವಿಧಿಪರತ್ವೇನೈವಾಂಗೀಕಾರಾತ್, ವಿಧಿವಿಚಾರಸ್ಯ ಚ "ಅಥಾತೋ ಧರ್ಮಜಿಜ್ಞಾಸಾ" ಇತಿ ಜೈಮಿನಿನೈವಾರಬ್ಧತ್ವಾತ್ ನ

---

(೪) "ಅನ್ತಃಪ್ರಜ್ಞತ್ವವೇ ಮುಂತಾದವುಗಳ ಪ್ರತಿಷೇಧದ ತಿಳಿವಳಿಕೆಯುಂಟಾಗುವ ಸಮಾನಕಾಲದಲ್ಲಿಯೇ ಆತ್ಮನಲ್ಲಿ ಅನರ್ಥಪ್ರಪಂಚವು ತೊಲಗುವುದೆಂಬ ರೂಪದ್ದಾದ ಫಲವು ಕೊನೆಗೊಂಡದ್ದಾಗಿ ಆಗುತ್ತದೆ ಎಂದಾದ್ದರಿಂದ ಮತ್ತೆ ತುರೀಯಸ್ವರೂಪವನ್ನು ಅರಿಯುವ ವಿಷಯದಲ್ಲಿ ಬೇರೊಂದು ಪ್ರಮಾಣವನ್ನಾಗಲೀ ಸಾಧನವನ್ನಾಗಲೀ ಹುಡುಕಬೇಕಾಗಿಲ್ಲ (ಮಾಂಡೂ - ೭. ಭಾಭಾ ೩೯).

(೫) "ಇದರಲ್ಲಿ ನಾನು ಅಧಿಕಾರಿಯಾಗಿರುತ್ತೇನೆ", ಕರ್ತನು, ನಾನಿದನ್ನು ಮಾಡಬೇಕು, ಎಂಬೀರೂಪವಾಗಿ ನಿಯುಕ್ತನಾದವನಿಗೆ ಅವಶ್ಯವಾಗಿ ಬ್ರಹ್ಮಪ್ರತ್ಯಯಕ್ಕಿಂತ ವಿರುದ್ಧವಾದ ಪ್ರತ್ಯಯವು ಉಂಟಾಗಿಯೇ ತೀರುತ್ತದೆ (ಸೂ. ಭಾ. ೪-೧-೨) ಎಂದಿದ್ದಾರೆ.

**೪೩) ಶಾರೀರಕಮೀಮಾಂಸಾಶಾಸ್ತ್ರವು (ಬ್ರಹ್ಮಸೂತ್ರವು) ಆರಂಭವಾಗಿರುವುದು ಹೊಂದದೇ ಇರುವುದೆಂಬುದು ಎರಡನೇ ದೋಷವು.** ವೇದಾನ್ತಮೀಮಾಂಸಾಶಾಸ್ತ್ರವು ಬೇರೆಯಾಗಿ ಆರಂಭವಾಗಿರುವುದೆಂಬುದು ಹೊಂದದೇ ಇರುವುದೆಂಬುದು ಇವರೆಲ್ಲರಿಗೂ ಸಮಾನವಾದ ವಿಚಾರವು. ಈ ಎಲ್ಲಾ ವಾದಿಗಳೂ ಜ್ಞಾನಕಾಂಡವನ್ನು ಸಹ

ಪುನರಪಿ "ಅಥಾತೋ ಬ್ರಹ್ಮಜಿಜ್ಞಾಸಾ" ಇತಿ ಪೃಥಕ್ ಶಾಸ್ತ್ರಾರಂಭಸ್ಯಾವಕಾಶೋಽಸ್ತಿ| ಆರಬ್ಧಂ ತು ಶಾಸ್ತ್ರಂ ಭಗವತಾ ಬಾದರಾಯಣೇನ | ತದನ್ಯಥಾನುಪಪತ್ತ್ಯಾ ಅವಗಮ್ಯತೇ ನ ವಿಧಿಶೇಷತ್ವಂ ಬ್ರಹ್ಮಣ ಇಷ್ಟಮಾಚಾರ್ಯಸ್ಯೇತಿ ||

> ಪ್ರತಿಪತ್ತಿವಿಧಿಪರತ್ವೇ ಹಿ "ಅಥಾತೋ ಧರ್ಮಜಿಜ್ಞಾಸಾ" ಇತ್ಯೇವಾರಬ್ಧತ್ವಾತ್ ನ ಪೃಥಕ್ ಶಾಸ್ತ್ರಮಾರಭ್ಯೇತ | ಆರಭ್ಯಮಾಣಂ ಚೈವಮಾರಭ್ಯೇತ "ಅಥಾತಃ ಪರಿಶಿಷ್ಟಧರ್ಮಜಿಜ್ಞಾಸಾ" ಇತಿ | "ಅಥಾತಃ ಕ್ರತ್ವರ್ಥಪುರುಷಾರ್ಥ-ಯೋರ್ಜಿಜ್ಞಾಸಾ" ಇತಿವತ್ || ಸೂ.ಭಾ. ೧-೧-೪.

ಇತಿ ||

**೪೪. ಆಚಾರ್ಯೋಪಗಮೋಪದೇಶಾನುಪಪತ್ತಿರ್ದೋಷಾಂತರಮ್ -** ಕರ್ಮವಿಷಯೇ ಇವೇಹಾಪಿ ವಿಧ್ಯಾಕಾಂಕ್ಷೈವ ಚೇತ್ ಸ್ಯಾತ್ ತರ್ಹಿ ನಾಚಾರ್ಯೋಪ-

---

ವಿಧಿಪರವಾಗಿಯೇ ಒಪ್ಪಿರುವುದರಿಂದಲೂ, ವಿಧಿವಿಚಾರವನ್ನು ಜೈಮಿನಿಗಳು, "ಅಥಾತೋ ಧರ್ಮಜಿಜ್ಞಾಸಾ" ಎಂಬುದಾಗಿ ಆರಂಭಮಾಡಿ ಬಿಟ್ಟಿರುವುದ-ರಿಂದಲೂ ಮತ್ತೆ ಪುನಃ ಬೇರೆಯಾಗಿ "ಅಥಾತೋ ಬ್ರಹ್ಮಜಿಜ್ಞಾಸಾ" ಎಂಬುದಾಗಿ ಶಾಸ್ತ್ರಾರಂಭವನ್ನು ಮಾಡುವುದಕ್ಕೆ ಅವಕಾಶವಿಲ್ಲ. ಆದರೆ ಪೂಜ್ಯರಾದ ಬಾದರಾಯಣಾಚಾರ್ಯರು ಆರಂಭಿಸಿಬಿಟ್ಟಿರುತ್ತಾರೆ. ಹಾಗೆ ಆರಂಭಿಸಿರುವುದು ಮತ್ತೆ ಹೇಗೂ ಹೊಂದುವುದಿಲ್ಲವಾದ್ದರಿಂದ ಬ್ರಹ್ಮವು ವಿಧಿಶೇಷವಲ್ಲವೆಂಬುದು (ಶ್ರೀ ಬಾದರಾಯಣಾಚಾರ್ಯರಿಗೆ) ಇಷ್ಟವೆಂದು ಗೊತ್ತಾಗುತ್ತದೆ. "ಉಪಾಸನಾವಿಧಿಗೆ ಶೇಷವಾಗಿ ಬ್ರಹ್ಮವನ್ನು ಹೇಳಿದೆ ಎಂದಾದರೆ – "ಅಥಾತೋ ಧರ್ಮಜಿಜ್ಞಾಸಾ" ಎಂಬುದಾಗಿ ಆರಂಭವಾಗಿ ಬಿಟ್ಟಿರುವುದರಿಂದ ಮತ್ತೆ ಬೇರೆಯಾಗಿ ಶಾಸ್ತ್ರವು ಆರಂಭವಾಗಬಾರದಾಗಿತ್ತು. ಆಗ ಆರಂಭವಾಗುವಾಗ "ಇನ್ನು ಆದ್ದರಿಂದ ಉಳಿದ ಧರ್ಮಾಜ್ಞಿಸೆಯು" ಎಂಬುದಾಗಿ, "ಇನ್ನು ಆದ್ದರಿಂದ ಕ್ರತ್ವರ್ಥಪುರುಷಾರ್ಥಗಳ ಜಿಜ್ಞಾಸೆಯು" ಎಂದು ಆರಂಭವಾದಂತೆ (ಇದು) ಆರಂಭವಾಗಬೇಕಾಗಿತ್ತು. (ಸೂ. ಭಾ. ೧–೧–೪)

**೪೪) ಆಚಾರ್ಯರನ್ನು ಬಳಿಸಾರಿ ಉಪದೇಶವನ್ನು (ಸ್ವೀಕರಿ-ಸುವುದೆಂಬುದು) ಹೊಂದದೇ ಇರುವುದೆಂಬ ಮತ್ತೊಂದು ದೋಷವು** (ಈ ವಾದಿಗಳಿಗೆ ಗಂಟುಬೀಳುತ್ತದೆ). ಕರ್ಮದ ವಿಷಯದಲ್ಲಿ

ಗಮೋಽಪ್ರಾಪ್ತ ಇವೋಪದೇಷ್ಟವ್ಯಃ, ಅವಧಾರಯಿತವ್ಯೋ ವಾ "ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್" (ಮುಂ. ೧-೨-೧೨) ಇತಿ | ತಸ್ಮಾದವಗಮ್ಯತೇ ನ ಬ್ರಹ್ಮಾತ್ಮೈಕತ್ವೋಪದೇಶವಾಕ್ಯಾನಾಂ ಜ್ಞಾನವಿಧ್ಯಾಕಾಂಕ್ಷಾ - ಇತಿ | ತದುಕ್ತಂ ಭಾಷ್ಯೇ-

> ಯದಿ ಹಿ ಸದಸ್ಮೀತಿ ಬುದ್ಧಿಮಾತ್ರಂ ಕರ್ತವ್ಯತಯಾ ವಿಧೀಯತೇ ನ ತು ತ್ವಂಶಬ್ದವಾಚ್ಯಸ್ಯ ಸದ್ರೂಪತ್ವಮೇವ, ತದಾ ನಾಚಾರ್ಯವಾನ್ ವೇದೇತಿ ಜ್ಞಾನೋಪಾಯೋಪದೇಶೋ ವಾಚ್ಯಃ ಸ್ಯಾತ್ | ಯಥಾ "ಅಗ್ನಿಹೋತ್ರಂ ಜುಹುಯಾತ್" ಇತ್ಯೇವಮಾದಿಷು ಅರ್ಥಪ್ರಾಪ್ತಮೇವಾಚಾರ್ಯವತ್ತ್ವಮಿತಿ ತದ್ವತ್ || ಛಾಂ.ಭಾ. ೬-೧೬, ಉಪಸಂಹಾರಭಾಷ್ಯಮ್.

> [ ತುಲ್ಯನ್ಯಾಯಾತ್, ಜ್ಞಾನಕಾಂಡೇ ಯತ್ಕಿಂಚಿದ್ವಿಧೀಯತ ಇತಿ ನಿಯಮಮ್ ಆಸ್ಥಿತವತ್ಸು ಸರ್ವೇಷ್ವಪಿ ಪ್ರಸ್ಥಾನೇಷು ಏಷ ದೋಷಃ ಪ್ರಸಜತಿ || ]

---

ಹೇಗೋ ಹಾಗೆ (ಈ ಬ್ರಹ್ಮ ವಿಷಯದಲ್ಲಿ) ವಿಧಿಯ ಅಪೇಕ್ಷೆಯು ಇದೆ ಎಂದಾದರೆ ಆಗ ಆಚಾರ್ಯರನ್ನು ಕುರಿತು ಹೋಗಬೇಕೆಂಬುದಾಗಿ ಹೇಳಬಾರದು. "ಅದನ್ನು ಅರಿಯಲು ಗುರುವನ್ನೇ ಬಳಿಸಾರಬೇಕೆಂದು ಅವಧಾರಣೆಯನ್ನೂ ಮಾಡಬಾರದು, (ಆದರೆ ಹೇಳಿದೆ). ಆದ್ದರಿಂದ ಬ್ರಹ್ಮಾತ್ಮೈಕತ್ವದ ಉಪದೇಶವನ್ನು ಮಾಡುವ ವಾಕ್ಯಗಳಿಗೆ ಜ್ಞಾನದಲ್ಲಿ ವಿಧಿಯ ಅಪೇಕ್ಷೆ ಇದೆ ಎಂಬುದು ಸರಿಯಲ್ಲ. ಅದನ್ನು ಭಾಷ್ಯದಲ್ಲಿ ಹೀಗೆ ಹೇಳಿದೆ.

"ಒಂದು ವೇಳೆ ನಾನು ಸತ್ತಾಗಿರುವೆನು" ಎಂಬ ಬುದ್ಧಿಯಷ್ಟನ್ನು (ಮಾತ್ರ) ಮಾಡಿಕೊಳ್ಳಬೇಕು ಎಂದು ವಿಧಿಸುತ್ತಿದೆ ಎನ್ನುವುದಾದರೆ, ಹಾಗೆಯೇ "ತ್ವಂ" (ನೀನು) ಶಬ್ದವಾಚ್ಯನಾದವನಿಗೆ (ತ್ವಂ ಶಬ್ದದಿಂದ ಕರೆಸಿಕೊಂಡವನಿಗೆ) ಬ್ರಹ್ಮತ್ವವೇ ಇರುತ್ತದೆ ಎಂಬುದಿಲ್ಲವೆಂದಾದರೆ, ಆಗ ಆಚಾರ್ಯವನ್ತ-ನಾದವನು ಅರಿಯುತ್ತಾನೆ ಎಂದು ಜ್ಞಾನಕ್ಕೆ (ಆಚಾರ್ಯನೆಂಬ) ಉಪಾಯ-ವನ್ನು ಹೇಳಬಾರದಾಗಿತ್ತು. ಹೇಗೆ "ಅಗ್ನಿಹೋತ್ರವನ್ನು ಮಾಡಬೇಕು" ಎಂಬಿವೇ ಮುಂತಾದ ಸ್ಥಳದಲ್ಲಿ ಆಚಾರ್ಯವುಳ್ಳವನಾಗಿರುತ್ತಾನೆಂಬುದು ತಾನೇ ಒದಗಿ ಬರುವುದೋ ಅದರಂತೆಯೇ" (ಛಾಂ ೬ – ೧೬) ಇದು.

(ನ್ಯಾಯವು ಸಮಾನವಾದದ್ದರಿಂದ, ಜ್ಞಾನಕಾಂಡದಲ್ಲಿ ಏನೋ ಒಂದನ್ನು ವಿಧಿಸಿರುತ್ತದೆ ಎಂದು ಹಠವನ್ನು ಹಿಡಿಯುವ ಎಲ್ಲಾ ಪ್ರಸ್ಥಾನದಲ್ಲೂ ಈ ದೋಷವು ಬಂದೊದಗುತ್ತದೆ)

**೪೫. ಮೋಕ್ಷಸ್ಯ ಸಾಧನಾಯತ್ತತ್ವಕಲ್ಪನಮ್ ಅಪರೋ ದೋಷಃ** - ಮೋಕ್ಷಸ್ಯ ಸಾಧನಾನುಷ್ಠಾನೇನ ಪ್ರಾಪ್ಯತ್ವಾಭ್ಯುಪಗಮೋಽಪರೋ ದೋಷಃ ಸರ್ವೇಷಾಮೇಷಾಮ್ | ತಥಾ ಹಿ ಜೀವತ್ವನಿವೃತ್ತಿರೇವ ಚೇನ್ಮೋಕ್ಷಃ, ಜೀವತ್ವಂ ಚ ಇದಾನೀಂ ವಿದ್ಯಮಾನಂ ಕರ್ತೃತ್ವಾದಿಲಕ್ಷಣಮ್, ನ ತರ್ಹಿ ಸ್ವಭಾವಭೂತಂ ತತ್ ಸಾಧನಾನುಷ್ಠಾನೇನ ನಿವರ್ತ್ಯತ ಇತಿ ವಕ್ತುಂ ಯುಕ್ತಮ್ | ಮೋಕ್ಷಶ್ಚ ನಿಗಡಭಂಗ ಇವಾಭಾವರೂಪ ಏವ ಸ್ಯಾತ್ | ಪರಮಾತ್ಮೈಕತ್ವರೂಪತ್ವೇ ತು ತಸ್ಯ ನಿತ್ಯತ್ವಾತ್ ನ ಸಾಧನಾಪೇಕ್ಷಾ | ಸಾಧನಾಯತ್ತತ್ವೇ ಚಾನಿತ್ಯತ್ವಪ್ರಸಂಗ ಇತಿ | ಉಕ್ತಂ ಚ ಭಾಷ್ಯೇ -

> (೧) ನ ಚಾನಭ್ಯುಪಗಮ್ಯಮಾನೇ ಜ್ಞಾನಗಮ್ಯೇ ಬ್ರಹ್ಮಾತ್ಮತ್ವೇ ಕರ್ತೃತ್ವಭೋಕ್ತೃತ್ವ-ಸ್ವಭಾವಸ್ಯಾತ್ಮನಃ ಕೈವಲ್ಯಮಾಕಾಂಕ್ಷಿತುಂ ಶಕ್ಯಮ್ | ಅಗ್ನ್ಯೌಷ್ಣ್ಯವತ್ ಸ್ವಭಾವಸ್ಯ ಅಪರಿಹಾರ್ಯತ್ವಾತ್ || ಸೂ.ಭಾ. ೪-೩-೧೪.

---

**೪೫) ಮೋಕ್ಷವು ಸಾಧನೆಗೆ ಅಧೀನವಾದದ್ದೆಂಬುದು (ಇವರಲ್ಲಿ) ಇನ್ನೊಂದು ದೋಷವು.** ಮೋಕ್ಷವು ಸಾಧನಾನುಷ್ಠಾನದಿಂದ ಪಡೆಯ-ಬೇಕಾದದ್ದೆಂಬುದಾಗಿ ಒಪ್ಪಿರುವುದು ಇವರೆಲ್ಲರಿಗೂ (ಇರುವ) ಮತ್ತೊಂದು ದೋಷವು. ಜೀವತ್ವನಿವೃತ್ತಿಯು ಮೋಕ್ಷವೆಂದಾದರೆ, ಆಗ ಕರ್ತೃತ್ವಾದಿ-ರೂಪದಿಂದ ಈಗಿರುವ ಜೀವತ್ವವು (ನಿಜವಾದದ್ದೆಂದಾದರೆ) ಸ್ವಭಾವ-ವಾದದ್ದಾದ ಅದು ಸಾಧನಾನುಷ್ಠಾನದಿಂದ ತೊಲಗುತ್ತದೆ ಎಂದು ಹೇಳುವು-ದಕ್ಕಾಗುವುದಿಲ್ಲ. ಅಷ್ಟೇ ಅಲ್ಲದೆ ಮೋಕ್ಷವೆಂಬುದೂ ಸಹ ಬೇಡಿಯನ್ನು ಕತ್ತರಿಸಿಹಾಕುವಂತೆ ಅಭಾವರೂಪದ್ದೆಂದಾಗುತ್ತದೆ. ಹಾಗಿಲ್ಲದೆ (ಆ ಜೀವ ರೂಪವು) ಪರಮಾತ್ಮನೊಡನೆ ಏಕತ್ವವನ್ನು ಹೊಂದಿದ ರೂಪದ್ದೆಂದಾದರೆ ಅದು ಯಾವಾಗಲೂ ಇರುವಂಥದ್ದಾದ್ದರಿಂದ ಅದಕ್ಕೆ ಸಾಧನದ ಅಪೇಕ್ಷೆ ಬರುವುದಿಲ್ಲ. ಸಾಧನೆಗೆ ಅಧೀನವಾಗಿ (ಉಂಟಾಗುವುದಾದರೆ) ಅದು ಅನಿತ್ಯ-ವೆಂದಾಗುತ್ತದೆ. ಇದನ್ನು ಭಾಷ್ಯದಲ್ಲಿ ಹೇಳಿದೆ.

(೧) "ಜ್ಞಾನದಿಂದ ಬ್ರಹ್ಮಾತ್ಮತ್ವವು ಗೊತ್ತಾಗುವುದು ಎಂಬುದನ್ನು ಒಪ್ಪಿಕೊಳ್ಳದೇ ಹೋದರೆ, ಕರ್ತೃತ್ವಭೋಕ್ತೃತ್ವಸ್ವಭಾವದವನಾದ ಆತ್ಮನಿಗೆ ಕೈವಲ್ಯವನ್ನು ಅಪೇಕ್ಷಿಸುವುದಕ್ಕಾಗುವುದಿಲ್ಲ. ಏಕೆಂದರೆ ಅಗ್ನಿಯಉಷ್ಣದಂತೆ ಸ್ವಭಾವವಾದದ್ದನ್ನು ಪರಿಹಾರ ಮಾಡಿಕೊಳ್ಳುವುದಕ್ಕಾಗುವುದಿಲ್ಲ". (ಸೂ. ಭಾ. ೪-೩-೧೪)

(೨) ನ ಚ ನಿಗಡಭಂಗ ಇವಾಭಾವಭೂತೋ ಮೋಕ್ಷೋ ಬಂಧನನಿವೃತ್ತಿರುಪಪದ್ಯತೇ | ಪರಮಾತ್ಮೈಕತ್ವಾಭ್ಯುಪಗಮಾತ್, "ಏಕಮೇವಾದ್ವಿತೀಯಮ್" ಇತಿ ಶ್ರುತೇಃ ||　　ಬೃ.ಭಾ. ೪-೪-೬.

೪೬. ವಿದ್ಯಮಾನಾವಿದ್ಯಾನಿವೃತ್ತಿರೇವ ಮೋಕ್ಷ ಇತ್ಯಪಿ ನ ಸಮ್ಯಕ್ - ಯದ್ಯಪಿ ಪ್ರಸ್ಥಾನಾಂತರೀಯಾಃ ಕೇಚಿದ್ ವಿದ್ಯಮಾನಬಂಧನಿವೃತ್ತಿಲಕ್ಷಣಂ ಮೋಕ್ಷಂ ನೇಚ್ಛಂತಿ | ಅವಿದ್ಯಾನಿವೃತ್ತಿಮೇವ ತು ಮೋಕ್ಷತ್ವೇನಾಭ್ಯುಪಯಂತಿ, ತಥಾಪಿ ತೇಽಪಿ ಯಥೋಕ್ತಾದ್ದೋಷಾನ್ನೈವ ಮುಚ್ಯಂತೇ | ಯತಸ್ತೇಷಾಮೇಕದೇಶಿನೋ ಜ್ಞಾನಸ್ಯಾಪಿ ವಿಧಿಮುಪಗಚ್ಛಂತಿ | ತತ್ಸಾಧ್ಯಂ ಚ ಮೋಕ್ಷಮ್ | ತಚ್ಚೋಭಯಮಯುಕ್ತಮೇವ | ಯದಾಹುರ್ಭಾಷ್ಯಕಾರಾಃ -

(೧) ಅವಿಧಿಲಕ್ಷಣತ್ವಾದ್ ವಿದ್ಯಾಯಾಃ, ಅಸಾಧ್ಯತ್ವಾಚ್ಚ ವಿದ್ಯಾಫಲಸ್ಯ ||
ಸೂ.ಭಾ. ೩-೪-೩೩.

---

(೨) "ಬೇಡಿಯನ್ನು ಕತ್ತರಿಸಿ ಹಾಕುವಂತೆ ಮೋಕ್ಷವೆಂಬುದು ಅಭಾವ ರೂಪವಾಗಿದ್ದು ಬಂಧನದ ನಿವೃತ್ತಿರೂಪವೆಂಬುದು ಹೊಂದುವುದಿಲ್ಲ. ಏಕೆಂದರೆ "ಎರಡಿಲ್ಲದ ಒಂದೇ" ಎಂಬ ಶ್ರುತಿಯಿಂದ ಪರಮಾತ್ಮನೊಡನೆ ಏಕತ್ವವನ್ನು ಒಪ್ಪಿರುತ್ತೇವೆ". (ಬೃ ೪-೪-೬ ಭಾಷ್ಯ)

**೪೬) ನಿಜವಾಗಿರುವ ಅವಿದ್ಯೆಯು ತೊಲಗುವುದೆಂಬುದೇ ಮೋಕ್ಷವೆಂಬುದೂ ಹೊಂದುವುದಿಲ್ಲ.** ಬೇರೆ ಪ್ರಸ್ಥಾನದವರು ಕೆಲವರು ನಿಜವಾಗಿರುವ ಬಂಧನ ನಿವೃತ್ತಿರೂಪವಾದ ಮೋಕ್ಷವನ್ನು ಇಷ್ಟಪಡದೇ ಇದ್ದರೂ, ಅವಿದ್ಯಾನಿವೃತ್ತಿಯನ್ನೇ ಮೋಕ್ಷವೆಂಬುದನ್ನು ಒಪ್ಪುವವರಾದರೂ ಅವರು ಮೇಲೆ ಉದಾಹರಿಸಿದ ದೋಷದಿಂದ ಬಿಡುಗಡೆ ಹೊಂದುವುದಿಲ್ಲ. ಏಕೆಂದರೆ ಆ ಏಕದೇಶಿಗಳಾದ ಅವರು ಜ್ಞಾನವನ್ನೂ ವಿಧಿರೂಪವಾದದ್ದೆಂದೇ ಒಪ್ಪಿ, ಅದರಿಂದ ಮೋಕ್ಷವುಂಟಾಗುತ್ತದೆ, ಎನ್ನುತ್ತಾರೆ, ಇವೆರಡೂ ತಪ್ಪಾದದ್ದೇ. ಇದಕ್ಕೆ ಭಾಷ್ಯಕಾರರು – (೧) ವಿದ್ಯೆಯು ವಿಧಿರೂಪವಾದದ್ದಲ್ಲವಾದ್ದರಿಂದಲೂ ವಿದ್ಯಾಫಲವಾದ (ಮೋಕ್ಷವು) ಉಂಟಾಗುವುದಿಲ್ಲವಾದ್ದರಿಂದಲೂ (ಇದು ಹೀಗೆಯೇ) (ಸೂ. ಭಾ. ೩–೪–೩೩).

ಮೊದಲೇ ಸಿದ್ಧವಾದ ಮೋಕ್ಷವು ಅಡ್ಡಿಯು ಹೋಗುವುದಷ್ಟ

ಇತಿ ||

ನ ಚ ಪ್ರತಿಬಂಧಾಪನಯನಮಾತ್ರೇಣ ಸಿದ್ಧಸ್ಯೈವ ಮೋಕ್ಷಸ್ಯಾಭಿವ್ಯಕ್ತಿರಿತ್ಯಭ್ಯುಪಗಮೇ ನೋಕ್ತದೋಷಪ್ರಸಕ್ತಿಃ ಪ್ರತಿಬಂಧಾಪನಯನಾರ್ಥಂ ಸಾಧನಸ್ಯಾಪ್ಯನುಷ್ಠೇಯತ್ವೋಪಪತ್ತಿಃ - ಇತಿ ಶಂಕನೀಯಮ್ | ಪ್ರತಿಬಂಧೋ ಹಿ ವಿದ್ಯಮಾನ ಏವ ಚೇದಪನೇಯಃ, ದೋಷತಾದವಸ್ಥ್ಯಮ್ | ನ ಹಿ ವಿದ್ಯಮಾನಸ್ಯ ವಿನಾಶಃ ಸಂಭವೀ| ನ ಚಾನಿತ್ಯಸ್ಯ ವಿದ್ಯಮಾನಸ್ಯಾಪ್ಯಪನಯಃ ಸ್ಯಾದೇವೇತಿ ವಾಚ್ಯಮ್ | ಯತೋಽನಿತ್ಯಸ್ವಭಾವಶ್ಚೇತ್ ಪ್ರತಿಬಂಧಃ ಸ್ವಯಮೇವ ವಿನಂಕ್ಷ್ಯತಿ, ತತ್ರ ಕಾ ಸಾಧನಾಪೇಕ್ಷಾ ? ಕಿಂಚ ವಿದ್ಯಮಾನಾನಾಂ ಸಸ್ಯಾದೀನಾಂ ವಿನಷ್ಟಾನಾಮಪಿ ಪುನಃ ಪುನರುತ್ಪತ್ತಿದರ್ಶನಾತ್, ಅವಿದ್ಯಾದಿಪ್ರತಿಬಂಧಾನಾಂ ಹೇತುಂ ವಿನೈವೋತ್ಪನ್ನಾನಾಂ ಪುನರುತ್ಪತ್ತಿರಪಿ ಶಕ್ಯಶಂಕಾ| ಅವಿದ್ಯಾಯಾ ಅನಾದಿತ್ವಾನ್ನೋಕ್ತದೋಷಃ - ಇತಿ ಚೇತ್, ತದಪಿ ನ ಶುಧ್ಯತಿ | ಆತ್ಮನೋಽವಸ್ಥಾಭೇದಾಭ್ಯುಪಗಮೇ ತಸ್ಯಾನಿತ್ಯತ್ವಪ್ರಸಂಗಾತ್, ಬಂಧಮೋಕ್ಷಕಲ್ಪನಾಯಾಃ ಪ್ರಮಾಣವಿರುದ್ಧತ್ವಾಚ್ಚ | ಯದುಕ್ತಂ **ಗೀತಾಭಾಷ್ಯೇ** -

---

ಮಾತ್ರದಿಂದಲೇ ತೋರಿಕೊಳ್ಳುತ್ತದೆ ಎಂದು ಒಪ್ಪಿಕೊಂಡರೆ ಅದರಿಂದ ದೋಷವಾಗುವುದಿಲ್ಲವಲ್ಲಾ! ಏಕೆಂದರೆ ಪ್ರತಿಬಂಧವನ್ನು ಕಳೆಯುವುದಕ್ಕೆ ಸಾಧನವನ್ನೂ ಕೂಡ ಮಾಡಬೇಕೆಂಬುದು ಯುಕ್ತವಾಗಿದೆಯಲ್ಲಾ ! ಎಂದು ಸಂದೇಹಪಡಬಾರದು. ಏಕೆಂದರೆ ನಿಜವಾಗಿರುವ ಪ್ರತಿಬಂಧವನ್ನು ಕಳೆಯಬೇಕೆಂದು ಒಪ್ಪಿಕೊಂಡರೆ ಮೇಲೆ ಹೇಳಿದ ದೋಷವು ಹಾಗೇ ಉಳಿಯುತ್ತದೆ. (ನಿಜವಾಗಿ) ಇರುವುದಕ್ಕೆ ನಾಶವೆಂಬುದು ಹೊಂದುವುದಿಲ್ಲವಲ್ಲವೇ? ಅನಿತ್ಯವಾಗಿದ್ದುಕೊಂಡಿರುವುದಕ್ಕೆ ತೊಲಗುವಿಕೆ ಎಂಬುದು ಆಗಬಹುದಲ್ಲಾ! ಎಂದೂ ಹೇಳಬಾರದು. ಏಕೆಂದರೆ ಅನಿತ್ಯವೆಂಬುದು ಅದರ ಸ್ವಭಾವವಾದರೆ ಪ್ರತಿಬಂಧವೂ ಸಹ ತಾನೇ ಹೋಗುತ್ತದೆ ಎಂದಾದ್ದರಿಂದ ಅದಕ್ಕೆ ಸಾಧನದ ಆಪೇಕ್ಷೆಯು ಏತಕ್ಕೆ? ಅಷ್ಟೇ ಅಲ್ಲ, ಸಸ್ಯವೇ ಮುಂತಾದವುಗಳು ಇದ್ದು ನಾಶವಾದರೂ ಮತ್ತೆ ಹುಟ್ಟಬಹುದೆಂದಾಗುತ್ತದೆ. ಅವಿದ್ಯೆಯು ಅನಾದಿಯಾದ್ದರಿಂದ(ಒಮ್ಮೆ ನಾಶವಾದರೆ ಮತ್ತೆ ಹುಟ್ಟುವುದಿಲ್ಲವಾದ್ದರಿಂದ) ಈ ಮೇಲೆ ಹೇಳಿದ ದೋಷವು ಬರುವುದಿಲ್ಲವಲ್ಲಾ ! ಎಂದರೆ ಅದೂ ಸರಿಯಲ್ಲ. ಆತ್ಮನಿಗೆ ಅವಸ್ಥಾಭೇದವನ್ನು ಒಪ್ಪಿಕೊಂಡರೆ ಅವನು ಅನಿತ್ಯನೆಂದಾಗುವುದರಿಂದಲೂ (ಈತರಹದ) ಬಂಧಮೋಕ್ಷದ ಕಲ್ಪನೆಯು

(೨) ಆತ್ಮನೋಽವಸ್ಥಾಭೇದಾನುಪಪತ್ತೇಃ | ಯದಿ ತಾವದಾತ್ಮನೋ ಬಂಧಮುಕ್ತಾವಸ್ಥೇ(ತೇ?), ಯುಗಪತ್ ಸ್ಯಾತಾಂ ಕ್ರಮೇಣ ವಾ | ಯುಗಪತ್ ತಾವದ್ ವಿರೋಧಾನ್ನ ಸಂಭವತಃ | ಸ್ಥಿತಿಗತೀ ಇವೈಕಸ್ಮಿನ್ | ಕ್ರಮಭಾವಿತ್ವೇ ಚ ನಿರ್ನಿಮಿತ್ತತ್ವಂ ಸನಿಮಿತ್ತತ್ವಂ ವಾ | ನಿರ್ನಿಮಿತ್ತತ್ವೇ ಅನಿರ್ಮೋಕ್ಷಪ್ರಸಂಗಃ, ಅನ್ಯನಿಮಿತ್ತತ್ವೇ ಚ ಸ್ವತೋಽಭಾವಾತ್ ಅಪರಮಾರ್ಥತ್ವಪ್ರಸಂಗಃ | ತಥಾ ಚ ಸತಿ ಅಭ್ಯುಪಗಮಹಾನಿಃ | ಕಿಂಚ ಬಂಧಮುಕ್ತಾವಸ್ಥಯೋಃ ಪೌರ್ವಾಪರ್ಯ-ನಿರೂಪಣಾಯಾಂ ಬಂಧಾವಸ್ಥಾ ಪೂರ್ವಂ ಪ್ರಕಲ್ಪ್ಯಾ, ಅನಾದಿಮತೀ ಅಂತವತೀ ಚ, ತಚ್ಚ ಪ್ರಮಾಣವಿರುದ್ಧಮ್ | ತಥಾ ಮೋಕ್ಷಾವಸ್ಥಾ ಆದಿಮತೀ ಅನಂತಾ ಚ ಪ್ರಮಾಣವಿರುದ್ಧೈವ ಅಭ್ಯುಪಗಮ್ಯತೇ | ನ ಚ, ಅವಸ್ಥಾವತಃ, ಅವಸ್ಥಾಂತರಂ ಗಚ್ಛತೋ ನಿತ್ಯತ್ವಮ್ ಉಪಪಾದಯಿತುಂ ಶಕ್ಯಮ್ || ಗೀ.ಭಾ. ೧೩-೨.

---

ಪ್ರಮಾಣಕ್ಕೆ ವಿರುದ್ಧವಾದ್ದರಿಂದಲೂ (ನೀವು ಹೇಳಿದ್ದು ಸರಿಯಾಗುವುದಿಲ್ಲ) ಅದನ್ನು ಗೀತಾಭಾಷ್ಯದಲ್ಲಿ ಹೇಳಿದೆ.

(೨) ಆತ್ಮನಿಗೆ ಅವಸ್ಥಾಭೇದವೆಂಬುದು ಹೊಂದುವುದಿಲ್ಲವಾದ್ದರಿಂದ (ಸರಿಯಲ್ಲ). ಮೊಟ್ಟಮೊದಲು ಆತ್ಮನಿಗೆ ಬಂಧಮೋಕ್ಷಾವಸ್ಥೆಗಳು ಒಟ್ಟಿಗೇ ಆಗುತ್ತದೋ ಕ್ರಮವಾಗಿ ಆಗುತ್ತದೋ ? (ಹೇಳಿ)–, ಒಟ್ಟಿಗೆಯಾಗುತ್ತದೆ ಎನ್ನುವುದು ವಿರುದ್ಧವಾದ್ದರಿಂದ ಅದು ಹೊಂದುವುದಿಲ್ಲ. ಒಬ್ಬನಿಗೆ ಒಂದೇ ಕಾಲಕ್ಕೆ ಸ್ಥಿತಿಗತಿಯಂತೆ (ಇದು) ವಿರುದ್ಧವಾದದ್ದು. ಕ್ರಮವಾಗಿ ಆಗುತ್ತದೆ ಎಂದರೆ ಕಾರಣವಿಲ್ಲದೇ ಆಗುತ್ತದೋ ಕಾರಣದಿಂದಲೋ? ಕಾರಣವಿಲ್ಲದೇ ಆಗುತ್ತದೆ ಎಂದರೆ ಮೋಕ್ಷವಾಗುವುದಿಲ್ಲವೆಂದಾಗುತ್ತದೆ. ಮತ್ತೊಂದರ ನಿಮಿತ್ತದಿಂದಾಗುತ್ತದೆ ಎಂದಾದರೆ ಸ್ವತಃ ಇಲ್ಲವಾದದ್ದರಿಂದ ನಿಜವಾಗಿಲ್ಲ-ದೆಂದಾಗುತ್ತದೆ. ಅದೂ ಆಗಲಿ ಎಂದರೆ ಒಪ್ಪಿಕೊಂಡದ್ದನ್ನು ಕೈ ಬಿಡಬೇಕಾಗುತ್ತದೆ. ಮತ್ತೂ ಏನೆಂದರೆ– ಬಂಧಮುಕ್ತಾವಸ್ಥೆಗಳಿಗೆ ಹಿಂದು ಮುಂದೆಂಬುದನ್ನು ಕಲ್ಪಿಸಬೇಕಾದಾಗ ಬಂಧಾವಸ್ಥೆಯನ್ನು ಹಿಂದಿನದೆಂದು ಕಲ್ಪಿಸಬೇಕು. ಆಗ ಅದು ಅನಾದಿಯಾದದ್ದು ಅಂತವುಳ್ಳದೆಂದಾಗುತ್ತದೆ. ಅದು ಪ್ರಮಾಣಕ್ಕೆ ವಿರುದ್ಧವಾದದ್ದು. ಹಾಗೆಯೇ ಮೋಕ್ಷಾವಸ್ಥೆಯನ್ನೂ ಆದಿ ಉಳ್ಳದ್ದಾಗಿ ಅನಂತವಾದದ್ದೆಂದು ಪ್ರಮಾಣಗಳಿಗೆ ವಿರುದ್ಧವಾಗಿಯೇ ಒಪ್ಪಿದ್ದಾಗುತ್ತದೆ. ಒಂದವಸ್ಥೆಯಿಂದ ಮತ್ತೊಂದು ಅವಸ್ಥೆಗೆ ಪರಿಣಮಿ-ಸುವುದನ್ನು ನಿತ್ಯವಾದದ್ದೆಂದು ಹೊಂದಿಸುವುದಕ್ಕಾಗುವುದಿಲ್ಲ (ಗೀ. ಭಾ ೧೩-೨).

ಇತಿ ||

ಅಪಿ ಚಾಭಿವ್ಯಕ್ತಿಪಕ್ಷೋಽಯಂ ಬೃಹದಾರಣ್ಯಕಭಾಷ್ಯೇ ಬಹುಧಾ ವಿಕಲ್ಪ್ಯ ದೂಷಿತಃ | ತದಪಿ ದೂಷಣಮಿಹಾನುಸಂಧೇಯಮ್ -

(೩) ಯೇಽಪ್ಯಾಚಕ್ಷತೇ ಮೋಕ್ಷೇ ವಿಜ್ಞಾನಾಂತರಮ್ ಆನಂದಾಂತರಂ ಚಾಭಿವ್ಯಜ್ಯತ ಇತಿ | ತೈರ್ವಕ್ತವ್ಯೋಽಭಿವ್ಯಕ್ತಿಶಬ್ದಾರ್ಥಃ | ಯದಿ ತಾವಲ್ಲೌಕಿಕ್ಯೇವ ಉಪಲಬ್ಧಿವಿಷಯಪ್ರಾಪ್ತಿರಭಿವ್ಯಕ್ತಿಶಬ್ದಾರ್ಥಃ, ತತೋ ವಕ್ತವ್ಯಮ್ - ಕಿಂ ವಿದ್ಯಮಾನಮಭಿವ್ಯಜ್ಯತೇ, ಅವಿದ್ಯಮಾನಮಿತಿ ವಾ | ವಿದ್ಯಮಾನಂ ಚೇತ್ ಯಸ್ಯ ಮುಕ್ತಸ್ಯ ತದಭಿವ್ಯಜ್ಯತೇ, ತಸ್ಯ ಆತ್ಮಭೂತಮೇವ ತದಿತಿ ಉಪಲಬ್ಧಿವ್ಯವಧಾನಾನುಪಪತ್ತೇರ್ನಿತ್ಯಾಭಿವ್ಯಕ್ತತ್ವಾತ್ ಮುಕ್ತಸ್ಯಾಭಿವ್ಯಜ್ಯತ ಇತಿ ವಿಶೇಷವಚನಮನರ್ಥಕಮ್ | ಅಥ ಕದಾಚಿದೇವಾಭಿವ್ಯಜ್ಯತೇ, ಉಪಲಬ್ಧಿವ್ಯವಧಾನಾದನಾತ್ಮ-

---

ಇಷ್ಟೇ ಅಲ್ಲದೆ ಈ (ಮೋಕ್ಷವು) ಅಭಿವ್ಯಕ್ತಿಯಾಗುತ್ತದೆ ಎಂಬುದನ್ನು ಬೃಹದಾರಣ್ಯಕಭಾಷ್ಯದಲ್ಲಿ ಅನೇಕ ಪ್ರಕಾರವಾಗಿ ವಿಕಲ್ಪಿಸಿಕೊಂಡು ಖಂಡನೆ ಮಾಡಲಾಗಿದೆ. ಆ ಖಂಡನೆಯನ್ನೂ ಇಲ್ಲಿ ಅನುಸಂಧಾನಮಾಡಬೇಕು.

೩) ಮೋಕ್ಷದಲ್ಲಿ ಮತ್ತೊಂದು ವಿಜ್ಞಾನವೂ ಮತ್ತೊಂದು ಆನಂದವೂ ಅಭಿವ್ಯಕ್ತವಾಗುತ್ತದೆ ಎಂದು ಯಾರು ಹೇಳುತ್ತಾರೋ ಅವರು ಅಭಿವ್ಯಕ್ತಿ ಎಂಬ ಶಬ್ದದ ಅರ್ಥವನ್ನು ತಿಳಿಸಬೇಕಾಗುತ್ತದೆ. ಮೊದಲನೆಯದಾಗಿ ಲೋಕಪ್ರಸಿದ್ಧವಾಗಿರುವ ಅರಿವು ವಿಷಯವನ್ನು ವ್ಯಾಪಿಸುವುದೇ ಅಭಿವ್ಯಕ್ತಿ ಶಬ್ದದ ಅರ್ಥವಾದರೆ ಆಗ ಮೊದಲು ಇದ್ದುಕೊಂಡಿರುವುದೇ ಅಭಿವ್ಯಕ್ತವಾಗುವುದೋ ಮೊದಲು ಇಲ್ಲದ್ದು ಅಭಿವ್ಯಕ್ತವಾಗುವುದೋ ಎಂಬುದನ್ನು ಹೇಳಬೇಕಾಗುವುದು. ಇದ್ದುಕೊಂಡಿರುವುದೇ ಆದರೆ ಯಾವ ಮುಕ್ತನಿಗೆ ಅದು ಅಭಿವ್ಯಕ್ತವಾಗುವುದೋ ಅವನಿಗೆ ಅದು ಸ್ವರೂಪವೇ ಆಗಿರುವುದರಿಂದ ಅವನ ಅರಿವಿಗೆ ವ್ಯವಧಾನವು ಹೊಂದದೇ ಇರುವುದರಿಂದ ಯಾವಾಗಲೂ ಅಭಿವ್ಯಕ್ತವೇ ಆಗಿರಬೇಕೆಂದಾಗಿ ಮುಕ್ತನಿಗೆ ಅಭಿವ್ಯಕ್ತವಾಗುತ್ತದೆ ಎಂದು ವಿಶೇಷವಾಗಿ ಹೇಳಿದ್ದು ವ್ಯರ್ಥವಾಗುತ್ತದೆ. ಇನ್ನು ಯಾವಾಗಲೋ ಅದು ಅಭಿವ್ಯಕ್ತವಾಗುವುದಾದರೆ ಆಗ ಅರಿವಿಗೆ ವ್ಯವಧಾನವಿರುವುದರಿಂದ ಅದು ಅನಾತ್ಮರೂಪವಾದದ್ದೇ ಆಗಿರುವುದಾದ್ದರಿಂದ ಮತ್ತೊಂದರಿಂದ ಅಭಿವ್ಯಕ್ತವಾಗಬೇಕೆಂದಾಗುವುದು. ಹಾಗಾದರೆ ಅದರ ಅಭಿವ್ಯಕ್ತಿಗೆ ಸಾಧನವು

ಭೂತಂ ತದಿತಿ ಅನ್ಯತೋಽಭಿವ್ಯಕ್ತಿಪ್ರಸಂಗಃ, ತಥಾ ಚಾಭಿವ್ಯಕ್ತಿಸಾಧನಾಪೇಕ್ಷತಾ| ಉಪಲಬ್ಧಿಸಮಾನಾಶ್ರಯತ್ವೇ ತು ವ್ಯವಧಾನಕಲ್ಪನಾನುಪಪತ್ತೇಃ ಸರ್ವದಾ ಅಭಿವ್ಯಕ್ತಿಃ, ಅನಭಿವ್ಯಕ್ತಿರ್ವಾ, ನ ತ್ವಂತರಾಲಕಲ್ಪನಾಯಾಂ ಪ್ರಮಾಣಮಸ್ತಿ ನ ಚ ಸಮಾನಾಶ್ರಯಾಣಾಮ್ ಏಕಸ್ಯಾತ್ಮಭೂತಾನಾಂ ಧರ್ಮಾಣಾಮ್ ಇತರೇತರ-ವಿಷಯವಿಷಯಿತ್ವಂ ಸಂಭವತಿ | ವಿಜ್ಞಾನಸುಖಯೋಶ್ಚ ಪ್ರಾಗಭಿವ್ಯಕ್ತೇಃ ಸಂಸಾರಿತ್ವಮ್ ಅಭಿವ್ಯಕ್ತ್ಯುತ್ತರಕಾಲಂ ಚ ಮುಕ್ತತ್ವಂ ಯಸ್ಯ, ಸೋಽನ್ಯಃ ಪರಸ್ಮಾನ್ನಿತ್ಯಾಭಿವ್ಯಕ್ತಜ್ಞಾನಸ್ವರೂಪಾತ್ | ಅತ್ಯಂತವೈಲಕ್ಷಣ್ಯಾತ್ ಶೈತ್ಯಮಿ-ವೌಷ್ಣ್ಯಾತ್ | ಪರಮಾತ್ಮಭೇದಕಲ್ಪನಾಯಾಂ ಚ ವೈದಿಕಃ ಕೃತಾಂತಃ ಪರಿತ್ಯಕ್ತಃ ಸ್ಯಾತ್ || ಬೃ.ಭಾ. ೪-೪-೬.

**೪೭. ಶ್ರುತಿಪ್ರಾಮಾಣ್ಯಮಾಶ್ರಿತ್ಯ ದೋಷದೂರೀಕರಣಂ ನ ಶಕ್ಯಮ್ - ಶ್ರುತಿವಾಕ್ಯಪ್ರಾಮಾಣ್ಯಾತ್ ಸರ್ವಮಿದಮಚೋದ್ಯಮ್ - ಇತಿ ಪ್ರತ್ಯವಸ್ಥಾನಂ ತು**

---

ಬೇಕೆಂದಾಗುವುದು. ಅರಿವಿನ ಆಶ್ರಯವೇ ಅದಕ್ಕೂ ಆಶ್ರಯವೆಂದಾದರೆ ಅರಿವಿಗೆ ವ್ಯವಧಾನವನ್ನು ಕಲ್ಪಿಸುವುದು ಹೊಂದುವುದಿಲ್ಲವಾಗಿ ಯಾವಾಗಲೂ ಅದರ ಅಭಿವ್ಯಕ್ತಿಯೋ ಅನಭಿವ್ಯಕ್ತಿಯೋ ಆಗಬೇಕಾಗುವುದು. ಇಷ್ಟೇ ಹೊರತು ಇವೆರಡರ ನಡುವೆ ಮತ್ತೊಂದು ಪ್ರಕಾರವನ್ನು ಕಲ್ಪಿಸುವುದಕ್ಕೆ ಪ್ರಮಾಣವಿಲ್ಲ. ಇದೂ ಅಲ್ಲದೆ ಒಂದೇ ಆಶ್ರಯದಲ್ಲಿರುವ ಒಬ್ಬನಿಗೇ ಸ್ವರೂಪವಾಗಿರುವ ಧರ್ಮಗಳು ಒಂದಕ್ಕೊಂದು ವಿಷಯವಿಷಯಿಭಾವದಿಂದ ಇರುವುದೆಂಬುದೂ ಹೊಂದುವುದಿಲ್ಲ. ವಿಜ್ಞಾನಾನಂದಗಳು ಅಭಿವ್ಯಕ್ತವಾಗುವ ಮುಂಚೆ ಸಂಸಾರಿಯೂ, ಅವು ಅಭಿವ್ಯಕ್ತವಾದ ಮೇಲಿನ ಕಾಲದಲ್ಲಿ ಮುಕ್ತನೂ ಆಗಿರುವವನಲ್ಲಾ ಆ ಆತ್ಮನು ಎಂದೆಂದಿಗೂ ಅಭಿವ್ಯಕ್ತವಾಗಿರುವ ಜ್ಞಾನವುಳ್ಳ ಪರಮಾತ್ಮನಿಗಿಂತ ಬೇರೆಯೇ ಎಂದಾಗುವುದು. ಏಕೆಂದರೆ ತಂಪು ಬಿಸಿಗಿಂತ ಅತ್ಯಂತ ವಿಲಕ್ಷಣವಾಗಿರುವಂತೆ ಅವನು ಪರಮಾತ್ಮನಿಗಿಂತ ಅತ್ಯಂತ ವಿಲಕ್ಷಣನಾಗಿರುತ್ತಾನೆ. ಹೀಗೆ ಪರಮಾತ್ಮನಿಗೂ ಜೀವನಿಗೂ ಭೇದವೇ ಎಂದು ಕಲ್ಪಿಸಿದರೋ ವೈದಿಕಸಿದ್ಧಾಂತವನ್ನೇ ಕೈ ಬಿಟ್ಟಂತಾಗುವುದು" (ಬೃ. ಭಾ. ೪-೪-೬ (೨೭೩)).

**೪೭) ಶ್ರುತಿಪ್ರಾಮಾಣ್ಯವನ್ನಾಶ್ರಯಿಸಿಕೊಂಡು ದೋಷವನ್ನು ದೂರಮಾಡುವುದಕ್ಕಾಗುವುದಿಲ್ಲ.** ಶ್ರುತಿಪ್ರಮಾಣವನ್ನವಲಂಬಿಸಿದ್ದರಿಂದ ಇದು ಯಾವುದೂ ಆಕ್ಷೇಪವಾಗುವುದಿಲ್ಲ ಎಂದು ಹೇಳುವುದು ಶ್ರುತಿ

ಸರ್ವೇಷಾಮಪಿ ಶ್ರುತಿಪ್ರಮಾಣಕಾನಾಂ ಸಮಾನಮ್ | ತತ್ರ ಶ್ರುತ್ಯರ್ಥ ಏವ ತಾವತ್ ಕಿಂಮತಾನುಕೂಲಃ ? - ಇತಿ ನಿರ್ಧಾರಣೀಯಂ ಭವತಿ | ನ ಹಿ ವ್ಯಾಖ್ಯಾನಕೌಶಲ-ಪ್ರದರ್ಶನಮಾತ್ರೇಣ ವೇದಾರ್ಥೋ ನಿಶ್ಚಿತೋ ಭವತಿ | ವ್ಯಾಖ್ಯಾನಾಂತರಸ್ಯ ಪ್ರತಿವಾದಿನೋಽಪಿ ಸುಲಭತ್ವಾತ್ | ನ ಚ ವಿರುದ್ಧೋಽಪ್ಯರ್ಥಃ ಶ್ರುತ್ಯರ್ಥ ಇತ್ಯವಗಂತುಂ ಶಕ್ಯಮ್ | ನ ಹಿ ಪ್ರಮಾಣಭೂತಾ ಶ್ರುತಿರಪಿ ಪ್ರಮಾಣಾಂತರ-ವಿರುದ್ಧಮರ್ಥಂ ಸ್ವವಚನವಿರುದ್ಧಂ ವಾ ವಿವಕ್ಷತಿ ಕದಾಚಿತ್ | ಯಥೋಕ್ತಮ್ -

> ನ ಹಿ ಶ್ರುತಿಶತಮಪಿ "ಶೀತೋಽಗ್ನಿಃ", "ಅಪ್ರಕಾಶೋ ವಾ" ಇತಿ ಬ್ರುವತ್ ಪ್ರಾಮಾಣ್ಯಮುಪೈತಿ | ಯದಿ ಬ್ರೂಯಾತ್ ಶೀತೋಽಗ್ನಿಃ, ಅಪ್ರಕಾಶೋ ವಾ - ಇತಿ, ತಥಾಪಿ ಅರ್ಥಾಂತರಂ ಶ್ರುತೇರ್ವಿವಕ್ಷಿತಂ ಕಲ್ಪ್ಯಮ್, ಪ್ರಾಮಾಣ್ಯಾನ್ಯಥಾ-

---

ಪ್ರಮಾಣಕರಾದವರಿಗೆಲ್ಲಾ ಸಮಾನವು. ಆಗ ಶ್ರುತ್ಯರ್ಥವು ಯಾವ ಮತಕ್ಕೆ ಅನುಗುಣವಾಗಿದೆ ಎಂಬುದನ್ನು ನಿರ್ಣಯಿಸಬೇಕಾಗುತ್ತದೆ. ವ್ಯಾಖ್ಯಾನದ ಕೌಶಲ್ಯವನ್ನು ತೋರಿಸಿದ ಮಾತ್ರಕ್ಕೆ ವೇದಾರ್ಥವು ನಿರ್ಣಯ-ವಾದದ್ದಾಗುವುದಿಲ್ಲವಲ್ಲವೇ? ಪ್ರತಿವಾದಿಯಾದವನಿಗೆ (ತನ್ನ ಮತಕ್ಕನು-ಗುಣವಾದ) ಮತ್ತೊಂದು ವ್ಯಾಖ್ಯಾನವೂ ಸುಲಭವಾಗಿಯೇ (ದೊರೆಯುತ್ತದೆ). ವಿರುದ್ಧವಾದ ಅರ್ಥವಾದರೂ ಸಹ (ಅದೂ) ಶ್ರುತ್ಯರ್ಥವೇ ಎಂದು ತಿಳಿಯುವುದಕ್ಕೆ ಸಾಧ್ಯವಿಲ್ಲವಷ್ಟೇ! (ಸ್ವಯಂ) ಪ್ರಮಾಣವಾಗಿರುವ ಶ್ರುತಿಯು ಮತ್ತೊಂದು ಪ್ರಮಾಣಕ್ಕೆ ವಿರುದ್ಧವಾದ ಅರ್ಥವನ್ನಾಗಲೀ ತನ್ನ ಮಾತಿಗೇ ವಿರುದ್ಧವಾಗಿ ಹೇಳುವುದಾಗಲೀ ಮಾಡುವುದಿಲ್ಲವಷ್ಟೇ? ಇದನ್ನೂ (ಸಹ) ಭಾಷ್ಯಕಾರರು ಹೇಳಿರುತ್ತಾರೆ.

"ನೂರು ಶ್ರುತಿಯಾದರೂ (ಸರಿ), ಅಗ್ನಿಯು ತಣ್ಣಗಿದೆ, ಬೆಳಕಿಲ್ಲದ್ದು", ಎಂದು ಹೇಳುತ್ತಾ ಇದ್ದರೆ (ಅದರ ವಿಷಯಕ್ಕೆ) ಪ್ರಮಾಣವಾಗುವುದಿಲ್ಲವಷ್ಟೇ? ಹಾಗೇನಾದರೂ ಒಂದು ವೇಳೆ ಹೇಳಿದರೆ ಆಗಲೂ ಶ್ರುತಿಗೆ ಬೇರೆ ಅರ್ಥವು ಅಭಿಪ್ರೇತವಾಗಿದೆ ಎಂದು ಕಲ್ಪಿಸಬೇಕಾಗುತ್ತದೆ. ಏಕೆಂದರೆ (ಹಾಗಿಲ್ಲದೇ ಹೋದರೆ) (ಅದರ) ಪ್ರಾಮಾಣ್ಯವು ಬೇರೊಂದು ರೀತಿಯಿಂದ ಹೊಂದುವು-ದಿಲ್ಲ. (ಎಂದಿಗೂ ಶ್ರುತಿಯು) ಬೇರೊಂದು ಪ್ರಮಾಣಕ್ಕೆ ವಿರುದ್ಧ-ವಾಗಿಯಾಗಲೀ ತನ್ನ ಮಾತಿಗೆ ವಿರುದ್ಧವಾಗಿಯಾಗಲೀ ಇರುವುದಿಲ್ಲ.(ಗೀ.ಭಾ. ೧೮-೬೬)

ನುಪಪತ್ತೇಃ | ನ ತು ಪ್ರಮಾಣಾಂತರವಿರುದ್ಧಮ್, ಸ್ವವಚನವಿರುದ್ಧಂ ವಾ ||

ಗೀ.ಭಾ. ೧೮-೬೬.

ಇತಿ ||

**೪೮. ವಿವಾದಗ್ರಸ್ತತರ್ಕೋಪನ್ಯಾಸೋಽಪಿ ಸರ್ವತ್ರ ಸಮಾನೋ ದೋಷಃ** - ಏವಂ ಸ್ವಸ್ವಪಕ್ಷಾನುಗುಣತರ್ಕೋಪನ್ಯಾಸೋಽಪಿ ಸಮಾನೋ ಮಂತವ್ಯಃ | ನ ಹಿ ಪ್ರಸ್ಥಾನಾಂತರಾವಲಂಬೀ ಪ್ರತಿವಾದೀ ಸ್ವಪಕ್ಷಾನುಗುಣಂ ತರ್ಕಮುಪನ್ಯಸ್ಯ ಅಯಮೇವ ಯುಕ್ತಿಯುಕ್ತೋ ವೇದಾಂತಸಿದ್ಧಾಂತಃ - ಇತಿ ಪ್ರತಿಪಾದಯಿತುಮ್, ಪ್ರತಿಪಕ್ಷ-ಪ್ರತಿಷ್ಠಾಪಿತಂ ವ್ಯುತ್ಥಾಪಯಿತುಂ ಚ ನ ಶಕ್ನುಯಾದಿತಿ ಸಂಭಾವನಾ ಅಸ್ತಿ | ನ ಚಾಯಮೇವ ನಿರಪವಾದಸ್ತರ್ಕ ಇತಿ ಸರ್ವೇ ಪರಿಗೃಹ್ಣೀಯುರಿತಿ ಪ್ರತ್ಯಾಶಾ ಸಮಸ್ತಿ | ಯದಪ್ಯುಕ್ತಂ ಭಾಷ್ಯೇ -

ಯದ್ಧಿ ಕೇನಚಿತ್ತಾರ್ಕಿಕೇಣ ಇದಮೇವ ಸಮ್ಯಗ್ಜ್ಞಾನಮಿತಿ ಪ್ರತಿಪಾದಿತಮ್,

---

**೪೮) ವಿವಾದಕ್ಕೆ ಅವಕಾಶವಿರುವ ತರ್ಕವನ್ನು ಹೇಳುವುದೂ (ಸಹ) ಎಲ್ಲರಿಗೂ ಸಮಾನವಾದ ದೋಷವಾಗಿದೆ.** ಇದೇ ರೀತಿ (ಎಲ್ಲರೂ) ತಮ್ಮ ತಮ್ಮ ಪಕ್ಷಕ್ಕೇ ಅನುಗುಣವಾದ ತರ್ಕವನ್ನು ಹೇಳುವುದೂ ಸಹ ಸಮಾನವಾದದ್ದೆಂದೇ ತಿಳಿಯಬೇಕು. ಬೇರೆ ಪ್ರಸ್ಥಾನವನ್ನು ಆಶ್ರಯಿಸಿಕೊಂಡವನು ತನ್ನ ಪಕ್ಷಕ್ಕೆ ಅನುಗುಣವಾದ ತರ್ಕವನ್ನು ಹೇಳಿ ಇದೇ ಸರಿಯಾದ ವೇದಾನ್ತಸಿದ್ಧಾನ್ತವು ಎಂದು ತಿಳಿಸಿಕೊಡಲು ಸಮರ್ಥ-ನಾಗಿಯೇ ಇರುತ್ತಾನೆ. ಹಾಗೆಯೇ ಬೇರೆ ಪಕ್ಷದವರು ಸ್ಥಾಪಿಸಿದ ಸಿದ್ಧಾನ್ತವನ್ನು ತೆಗೆದುಹಾಕಲು ಸಮರ್ಥನಾದವನಾಗಿಯೂ ಇರುತ್ತಾನೆ. ಎಲ್ಲರೂ ಒಪ್ಪಿದ್ದಾದ ತರ್ಕವು ಇದೇ ಎಂದು (ಸರ್ವಸಂಮತವಾಗಿ) ಸ್ವೀಕರಿಸಿದ್ದಾದ ಒಂದು ತರ್ಕವಿಲ್ಲವಷ್ಟೇ ? ಇದನ್ನು ಭಾಷ್ಯಕಾರರು ಹೇಳಿರುತ್ತಾರೆ.

"ಯಾರಾದರೂ ತಾರ್ಕಿಕರಾದವರು ಯಾವುದಾದರೊಂದನ್ನು ಇದೇ ಸರಿಯಾದ ಜ್ಞಾನವೆಂದು ಪ್ರತಿಪಾದನೆ ಮಾಡಿದರೆ ಅದನ್ನು ಮತ್ತೊಬ್ಬ ತಾರ್ಕಿಕನು ಕಿತ್ತುಹಾಕುತ್ತಾನೆ. ಆ ಮತ್ತೊಬ್ಬನು ನೆಲೆನಿಲ್ಲಿಸಿದ್ದನ್ನು ಇನ್ನೊಬ್ಬನು ತೆಗೆದುಹಾಕುತ್ತಾನೆಂಬುದು ಲೋಕದಲ್ಲಿ ಪ್ರಸಿದ್ಧವಾಗಿದೆಯಲ್ಲವೇ?" (ಸೂ.ಭಾ. ೨-೧-೧೧)

ತದಪರೇಣ ವ್ಯುತ್ಥಾಪ್ಯತೇ, ತೇನಾಪಿ ಪ್ರತಿಷ್ಠಾಪಿತಂ ತತೋಽಪರೇಣ ವ್ಯುತ್ಥಾಪ್ಯತ ಇತಿ ಪ್ರಸಿದ್ಧಂ ಲೋಕೇ || ಸೂ. ಭಾ. ೨-೧-೧೧.

ನ ಚ ಮೀಮಾಂಸಾನ್ಯಾಯಾವಷ್ಟಂಭೇನ ಶ್ರುತ್ಯುಪಪತ್ತಿಭ್ಯಾಂ ವೇದಾಂತಾರ್ಥಂ ನಿರ್ಣೇತುಂ ಸಮರ್ಥಾನಾಂ ಸಂಪ್ರದಾಯವಿದಾಂ ಮಹಾಪ್ರಜ್ಞಾನಾಮ್ ಅಪ್ರತಿಷ್ಠಿತ-ತರ್ಕಮಾತ್ರಶರಣ್ಯೈಸ್ತೌಲ್ಯಾಪಾದನಂ ನ ಯುಕ್ತಮಿತಿ ಪ್ರತ್ಯವಸ್ಥೇಯಮ್ | ಮೀಮಾಂಸಾದಿಸರ್ವಪರಿಕರೋಪೇತಮೇವ ಸ್ವಸ್ವಸಂಪ್ರದಾಯಸಂಮತಂ ಸಿದ್ಧಾಂತಂ ಬಹುಮನ್ಯಮಾನಾನಾಂ ವೇದಾಂತಿನಾಂ ನಾನಾಪಥಜುಷಾಂ ಮಧ್ಯೇ ಕೋ ಬ್ರಹ್ಮಿಷ್ಠಃ, ಕಶ್ಚ ತರ್ಕವಿದಾಮುತ್ತಮಃ - ಇತಿ ನಿಶ್ಚಯೇ ಹೇತೋರೇವಾದ್ಯ ವಿಚಾರ್ಯಮಾಣ-ತ್ವಾತ್ ತಸ್ಯಾದ್ಯಾಪ್ಯನಿಶ್ಚಯಾದಿತಿ ||

೪೯. ಸಿದ್ಧಾಂತೇ ಶ್ರುತಿತರ್ಕಯೋರನುಭವಾನುಗುಣತ್ವಂ ವಿಶೇಷಃ - ಭವತ್ವೇವಂ ಪ್ರಸ್ಥಾನಾಂತರಾಣಾಂ ಸರ್ವೇಷಾಮಪಿ ಸದೋಷತ್ವಮಿತಿ | ತಥಾಪಿ

---

(ಇಲ್ಲಿ ಯಾರಾದರೂ ಹೀಗೆ ಆಕ್ಷೇಪಿಸಬಹುದು. ಏನೆಂದರೆ) ಮೀಮಾಂಸಾನ್ಯಾಯವನ್ನವಲಂಬಿಸುವುದರ ಮೂಲಕ ಶ್ರುತಿಯುಕ್ತಿಗಳಿಂದ ವೇದಾನ್ತಗಳ ಅರ್ಥವನ್ನು ನಿರ್ಣಯಮಾಡುವುದಕ್ಕೆ ಯಾರು ಸಮರ್ಥರಾಗಿರುವರೋ (ಅವರು) ಸಂಪ್ರದಾಯವನ್ನು ತಿಳಿದವರಾದ ಮಹಾಪ್ರಜ್ಞರು, ಅವರೊಡನೆ ನೆಲೆಯೇ ಇಲ್ಲದ ಕೇವಲ ತರ್ಕವಷ್ಟನ್ನೇ ನಂಬಿದವರನ್ನು ಹೋಲಿಸುವುದು ಸರಿಯಾಗುವುದಿಲ್ಲವಲ್ಲ! ಎಂದು ಆಕ್ಷೇಪಿಸಬಾರದು - ಏಕೆಂದರೆ ಪ್ರತಿಯೊಬ್ಬ ವಾದಿಯೂ ತಮ್ಮ ತಮ್ಮ ಸಂಪ್ರದಾಯಕ್ಕೆ ಒಪ್ಪಿಗೆಯಾದ ಸಿದ್ಧಾಂತವು ಮೀಮಾಂಸೆಯೇ ಮುಂತಾದ ಎಲ್ಲಾ ಸಲಕರಣೆಯಿಂದ ಕೂಡಿದ್ದೇ ಆಗಿದೆ ಎಂದು ಆಗ್ರಹಪೂರ್ವಕವಾಗಿ ತಿಳಿದವರಾಗಿರುವುದರಿಂದ ನಾನಾ ಮಾರ್ಗವನ್ನವಲಂಬಿಸಿರುವ ವೇದಾಂತಿಗಳ ಮಧ್ಯೆ ಯಾವಾತನು ಹೆಚ್ಚಾಗಿ ಬ್ರಹ್ಮವನ್ನರಿತವನು? ಯಾವಾತನು ತರ್ಕವನ್ನು ತಿಳಿದವರಲ್ಲಿ ಉತ್ತಮನು? ಎಂದು ನಿಶ್ಚಯಿಸುವುದಕ್ಕೆ ಕಾರಣವನ್ನು ಇಂದಿಗೂ ವಿಚಾರಿಸಬೇಕಾಗಿರುವುದರಿಂದಲೂ ಇಂದಿಗೂ ಅದರ ನಿರ್ಣಯವಾಗಿಲ್ಲ-ವಾದ್ದರಿಂದಲೂ (ಹಾಗೆ ಆಕ್ಷೇಪಿಸುವುದು ಸರಿಯಾಗುವುದಿಲ್ಲ).

**೪೯) ಸಿದ್ಧಾಂತದಲ್ಲಿ ಶ್ರುತಿ ಮತ್ತು ತರ್ಕವು ಅನುಭವಕ್ಕೆ ಅನುಗುಣವಾಗಿದೆ ಎಂಬುದು ವಿಶೇಷವು** - ಬೇರೆ ಪ್ರಸ್ಥಾನದವ-

ಭಗವತ್ಪಾದಸಂಪ್ರದಾಯಗತಸ್ಯ ವೇದಾಂತಪ್ರಸ್ಥಾನಸ್ಯ ಕೋ ವಿಶೇಷೋ ಯೇನ ತದೇವ ಪರಿಗೃಹ್ಯೇತೇತಿ ? ಅತ್ರ ಬ್ರೂಮಃ | ಸ್ಮರ್ಯತಾಂ ಪೂರ್ವಕಿರಣೇಷು ಯಥಾವರ್ಣಿತಾ ಸಾಂಪ್ರದಾಯಿಕೀ ಪ್ರಕ್ರಿಯಾ | ನೈವೇಹ ಪ್ರತಿಜ್ಞಾಮಾತ್ರೇಣಾದ್ವೈತಮುರರೀಕ್ರಿಯತೇ | ನ ಚ ವಾಕ್ಯಮಿತ್ಯೇವ ಶ್ರುತಿಪ್ರಮಾಣಂ ಶ್ರದ್ಧೇಯತಯಾ ಸಮುಪನ್ಯಸ್ಯ ಕೇವಲಮೀಮಾಂಸಾನ್ಯಾಯಾವಲಂಬನೇನ ವ್ಯಾಖ್ಯಾನಚಾತುರೀಪ್ರದರ್ಶನಮಾತ್ರೇಣ ಸ್ವಸಿದ್ಧಾಂತಃ ಪ್ರತಿಷ್ಠಾಪ್ಯತೇ, ಕೇವಲತರ್ಕಾವಷ್ಟಂಭೇನ ವಾ ಪರಪಕ್ಷನಿರಾಕರಣ-ಪೂರ್ವಕಂ ಸ್ವಪಕ್ಷಃ ಪ್ರತಿತಿಷ್ಠಾಪಯಿಷ್ಯತೇ, ಕಿಂ ತು ಸಾರ್ವತ್ರಿಕಾನುಭವಾಧಾರೇಣೈವ ಶ್ರುತ್ಯರ್ಥನಿರ್ಣಯಃ ಕ್ರಿಯತೇ ಅಪರಿಹಾಯ ಮೀಮಾಂಸಾತರ್ಕಸಾಹಾಯ್ಯಮಪಿ | ತದೇತತ್ ಪ್ರತಿಜ್ಞಾತಂ ಭಾಷ್ಯೇಽಪಿ -

(೧) ವೇದಸ್ಯ ತು ನಿತ್ಯತ್ವೇ ವಿಜ್ಞಾನೋತ್ಪತ್ತಿಹೇತುತ್ವೇ ಚ ಸತಿ ವ್ಯವಸ್ಥಿತಾರ್ಥ-ವಿಷಯತ್ವೋಪಪತ್ತೇಃ, ತಜ್ಜನಿತಸ್ಯ ಜ್ಞಾನಸ್ಯ ಸಮ್ಯಕ್ತ್ವಮ್ ಅತೀತಾನಾಗತ-

---

ರೆಲ್ಲರದ್ದೂ ದೋಷಯುಕ್ತವಾದದ್ದೆ ಎಂಬುದೇ ಆಗಲಿ, ಆದರೂ ಭಗವತ್ಪಾದರ ಸಂಪ್ರದಾಯದಲ್ಲಿರುವ ವೇದಾನ್ತಪ್ರಸ್ಥಾನದ್ದರ ವಿಶೇಷವೇನು? ಹಾಗಿದ್ದದ್ದರಿಂದಲ್ಲವೇ (ಅದನ್ನೇ) ಸ್ವೀಕರಿಸಿರುವುದು? ಎಂದರೆ ಇದಕ್ಕೆ ಹೇಳುತ್ತೇವೆ. ಹಿಂದಿನ ಕಿರಣಗಳಲ್ಲಿ ಯಾವ ರೀತಿಯಾಗಿ ಸಾಂಪ್ರದಾಯಿಕವಾದ ಪ್ರಕ್ರಿಯೆಯನ್ನು ವರ್ಣಿಸಿರುತ್ತೇವೆಯೋ ಅದನ್ನು ಸ್ಮರಿಸಿರಿ. ಇಲ್ಲೇನೂ (ಕೇವಲ) ಪ್ರತಿಜ್ಞಾಮಾತ್ರದಿಂದ ಅದ್ವೈತವನ್ನು ಒಪ್ಪಿಕೊಂಡಿರುವುದಿಲ್ಲ. (ಅಷ್ಟೇ ಅಲ್ಲ) ವಾಕ್ಯವಾಗಿದೆ ಎಂಬಿಷ್ಟೇ ಕಾರಣದಿಂದ ಶ್ರುತಿಯನ್ನು ನಂಬಬೇಕೆಂದು ಹೇಳಿ ಕೇವಲ ಮೀಮಾಂಸಾನ್ಯಾಯದ ಬಲದಿಂದ ವ್ಯಾಖ್ಯಾನದ ಚತುರತೆಯನ್ನು ತೋರಿಸುವ ಮಾತ್ರದಿಂದ ನಮ್ಮ ಸಿದ್ಧಾಂತವನ್ನು ನೆಲೆಗೊಳಿಸಿರುವುದಿಲ್ಲ. ಹಾಗೆಯೇ ತರ್ಕದ ಬಲದಿಂದಲಾಗಲೀ ಇನ್ನೊಬ್ಬರ ಪಕ್ಷವನ್ನು ನಿರಾಕರಣೆ-ಮಾಡುವ ಮೂಲಕ ನಮ್ಮ ಪಕ್ಷವನ್ನು ನೆಲೆಗೊಳಿಸುವುದಿಲ್ಲ. ಮತ್ತೆ ಹೇಗೆಂದರೆ – ಸಾರ್ವತ್ರಿಕವಾದ ಅನುಭವದ ಆಧಾರದಿಂದಲೇ ಮೀಮಾಂಸಾನ್ಯಾಯ-ಶಾಸ್ತ್ರದ ಸಹಾಯವನ್ನು ಕೈಬಿಡದೇ ಶ್ರುತ್ಯರ್ಥವನ್ನು ಮಾಡಲಾಗಿದೆ. ಭಾಷ್ಯದಲ್ಲೂ ಇದು ಹೀಗೆ ಪ್ರತಿಜ್ಞೆ ಮಾಡಲ್ಪಟ್ಟಿದೆ.

(೧) ವೇದವು ನಿತ್ಯವಾಗಿರುವುದರಿಂದಲೂ ಅರಿವು ಉಂಟಾಗುವುದಕ್ಕೆ ಕಾರಣವಾಗಿರುವುದರಿಂದಲೂ ಏಕಪ್ರಕಾರವಾಗಿ ನಿಲ್ಲುವ ಅರ್ಥದ ವಿಷಯವದು

ವರ್ತಮಾನೈಃ ಸರ್ವೈರಪಿ ತಾರ್ಕಿಕೈರಪಹ್ನೋತುಮಶಕ್ಯಮ್ | ಅತಃ ಸಿದ್ಧಮಸ್ಯೈ-ವೌಪನಿಷದಸ್ಯ ಜ್ಞಾನಸ್ಯ ಸಮ್ಯಗ್ಜ್ಞಾನತ್ವಮ್ | ಅತೋಽನ್ಯತ್ರ ಸಮ್ಯಗ್ಜ್ಞಾನ-ತ್ವಾನುಪಪತ್ತೇಃ ಸಂಸಾರಾವಿಮೋಕ್ಷ ಏವ ಪ್ರಸಜ್ಯೇತ || ಸೂ.ಭಾ. ೨-೧-೧೧.

[ ಅತ್ರ "ನಿತ್ಯತ್ವೇ" ಇತಿ ನ ಪ್ರಾಮಾಣ್ಯೇ ಕಾರಣಮುಚ್ಯತೇ, ಕಿಂ ತು ತಾರ್ಕಿಕಮತಿ-ವದನೇಕರೂಪತ್ವಾನೇಕಾರ್ಥತ್ವಾಭಾವಃ | ನ ಹಿ ವೇದನಿತ್ಯತ್ವಂ ಶಾರೀರಕೇ ಹೇತುಭಿಃ ಪ್ರತಿಷ್ಠಾಪ್ಯತೇ, ಪೂರ್ವತಂತ್ರೇ ಸ್ಥಿತಮೇವ ತು ವ್ಯಾವಹಾರಿಕನಿತ್ಯತ್ವಮನುಮೋದ್ಯತೇ ಇತಿ ಸ್ಪಷ್ಟಮ್ "ಅತ ಏವ ಚ ನಿತ್ಯತ್ವಮ್" (ವೇ.ಸೂ. ೧-೩-೨೯) ಇತಿ ಸೂತ್ರಸ್ಯ ಭಾಷ್ಯೇ | "ವಿಜ್ಞಾನಹೇತುತ್ವೇ" ಇತಿ ಸಾರ್ವತ್ರಿಕಾನುಭವಹೇತುತ್ವೇನ ಪ್ರಾಮಾಣ್ಯಂ ದ್ಯೋತ್ಯತೇ || ]

(೨) ನ ಧರ್ಮಜಿಜ್ಞಾಸಾಯಾಮಿವ ಶ್ರುತ್ಯಾದಯ ಏವ ಪ್ರಮಾಣಂ ಬ್ರಹ್ಮ-ಜಿಜ್ಞಾಸಾಯಾಮ್, ಕಿಂ ತು ಶ್ರುತ್ಯಾದಯೋಽನುಭವಾದಯಶ್ಚ ಯಥಾಸಂಭವಮಿಹ

---

ಎಂದಾಗುವುದರಿಂದ ಆದರಿಂದುಂಟಾಗುವ ಜ್ಞಾನವು ಸಮ್ಯಜ್ಞಾನವೆಂಬುದನ್ನು ಹಿಂದಿನ ಮುಂದಿನ ಈಗಿನ ಯಾವ ತಾರ್ಕಿಕರೂ ಇಲ್ಲವೆನ್ನುವುದಕ್ಕಾಗುವುದಿಲ್ಲ. ಆದ್ದರಿಂದ ಈ ಔಪನಿಷತ್ ಜ್ಞಾನವೇ ಸಮ್ಯಜ್ಞಾನವೆಂದಾಯಿತು. ಇದಕ್ಕಿಂತ ಬೇರೆಯಾದದ್ದು ಸಮ್ಯಜ್ಞಾನವೆಂದಾಗುವಂತಿಲ್ಲವಾದ್ದರಿಂದ, ಅವುಗಳಿಂದ ಸಂಸಾರದಿಂದ ಮೋಕ್ಷವಾಗುವುದೆಂಬುದು ಇಲ್ಲವೆಂದಾಗುತ್ತದೆ (ಸೂ.ಭಾ. ೨–೧–೧೧). (ಈ ಮೇಲಿನ ವಾಕ್ಯದಲ್ಲಿ "ನಿತ್ಯತ್ವೇ" ಎಂದು ಪ್ರಾಮಾಣ್ಯಕ್ಕೆ ಕಾರಣವನ್ನು ಹೇಳುತ್ತಲಿಲ್ಲ. ಮತ್ತೇನೆಂದರೆ ತಾರ್ಕಿಕರ ಅಭಿಪ್ರಾಯದಂತೆ ಅನೇಕರೂಪತ್ವ, ಅನೇಕಾರ್ಥತ್ವವೆಂಬುದು ವೇದಕ್ಕಿಲ್ಲ ಎಂದರ್ಥ. ಶಾರೀರಕ-ಮೀಮಾಂಸೆಯಲ್ಲಿ ವೇದನಿತ್ಯತ್ವವನ್ನು ಕಾರಣವಾಗಿ ಕೊಟ್ಟು ಪ್ರತಿಪಾದಿ-ಸಿಲ್ಲವಷ್ಟೆ?, ಮತ್ತೇನೆಂದರೆ ಪೂರ್ವಮೀಮಾಂಸೆಯಲ್ಲಿ ತೀರ್ಮಾನವಾಗಿರುವ ಪ್ರಾಮಾಣ್ಯವನ್ನೇ ವ್ಯಾವಹಾರಿಕನಿತ್ಯತ್ವವೆಂದು ಅನುಮೋದಿಸಲಾಗಿದೆ ಎಂಬುದು ಸ್ಪಷ್ಟ. ಇದನ್ನು "ಅತ ಏವ ಚ ನಿತ್ಯತ್ವಮ್" (ವೇ. ಸೂ. ೧–೩–೨೯) ಎಂಬ ಸೂತ್ರದ ಭಾಷ್ಯದಲ್ಲಿ ಹೇಳಿದೆ. (ಇಲ್ಲಿ) "ವಿಜ್ಞಾನಹೇತುತ್ವೇ" ಎಂದು ಹೇಳುತ್ತಾ ಸಾರ್ವತ್ರಿಕವಾದ ಅನುಭವಕ್ಕೆ ಕಾರಣವಾಗಿದೆ ಎಂದು ತಿಳಿಸುವುದರ ಮೂಲಕ ಪ್ರಾಮಾಣ್ಯವನ್ನು ತಿಳಿಸಲಾಗಿದೆ.

(೨) ಧರ್ಮಜಿಜ್ಞಾಸೆಯಂತೆ ಈ ಬ್ರಹ್ಮಜಿಜ್ಞಾಸೆಯಲ್ಲಿ ಬರೀ ಶ್ರುತ್ಯಾದಿ-ಗಳಷ್ಟೇ ಪ್ರಮಾಣವಲ್ಲ. ಮತ್ತೇನೆಂದರೆ ಶ್ರುತ್ಯಾದಿಗಳೂ ಅನುಭವಾದಿಗಳೂ

ಪ್ರಮಾಣಮ್ | ಅನುಭವಾವಸಾನತ್ವಾತ್, ಭೂತವಸ್ತುವಿಷಯತ್ವಾಚ್ಚ ಬ್ರಹ್ಮಜ್ಞಾನಸ್ಯ || ಸೂ.ಭಾ. ೧-೧-೨.

[ "ಯಥಾಸಂಭವಮ್" ಇತ್ಯುಕ್ತ್ಯಾ ಉಪಸನಾರೂಪಮಾನಸಕರ್ಮವಿಷಯೇ ಕೇವಲ-ಶ್ರುತ್ಯಾದಿವಾಕ್ಯಪ್ರಾಮಾಣ್ಯಮೇವಾಂಗೀಕ್ರಿಯತೇ ಇತ್ಯವಿರೋಧೋ ಜ್ಞಾಪಿತಃ || ]

**೫೦. ವೇದಾಂತಾನಾಂ ನಿರ್ವಿಶೇಷವಸ್ತುಪರತ್ವಾಂಗೀಕಾರೋ ವಿಶೇಷೋಽತ್ರ**- ವೇದಾಂತವಾಕ್ಯಾನಾಂ ನ ಕರ್ಮವಾಕ್ಯವನ್ನಿಯಮೇನ ಕ್ರಿಯಾರ್ಥತ್ವ-ಮುರರೀಕ್ರಿಯತೇಽತ್ರ, ಕಿಂ ತು ಅದ್ವಿತೀಯಬ್ರಹ್ಮಾವಗಮಕತ್ವಮೇವ ಪ್ರಾಧಾನ್ಯತಃ | ತೇನ ವಸ್ತುಬೋಧಕವಾಕ್ಯಾನಾಮ್ ಉಪಾಸನಾವಿಧಾಯಕವಾಕ್ಯಾನಾಂ ಚ ತತ್ತತ್ಪ್ರಧಾನ-ತ್ವೇನ ಪೃಥಕ್ಕರಣಾತ್, ನ ವಾಕ್ಯಸ್ಯಾರ್ಥಾಂತರಕರಣಲಕ್ಷಣೋ ದೋಷೋಽತ್ರ | ತಥಾ ಹಿ ಭಾಷ್ಯಕಾರಃ -

---

ಸಹ ಹೊಂದುವಷ್ಟು ಮಟ್ಟಿಗೆ ಪ್ರಮಾಣವಾಗಿರುತ್ತವೆ. ಏಕೆಂದರೆ ಬ್ರಹ್ಮಜ್ಞಾನವು ಇರುವ ವಸ್ತುವನ್ನು ವಿಷಯಮಾಡಿಕೊಂಡಿರುವುದರಿಂದಲೂ ಅನುಭವದಲ್ಲಿ ಕೊನೆಗಾಣುವದಾಗಿರುವುದರಿಂದಲೂ ಹೀಗೆಯೇ (ಸೂ. ಭಾ. ೧-೧-೨).

("ಯಥಾಸಂಭವಂ" ಎಂದು ಹೇಳಿರುವುದರ ಅಭಿಪ್ರಾಯವೇನೆಂದರೆ ಉಪಾಸನೆಯೆಂಬ ಮಾನಸಕರ್ಮದವಿಷಯದಲ್ಲಿ ಬರೀ ಶ್ರುತ್ಯಾದಿವಾಕ್ಯ ಪ್ರಾಮಾಣ್ಯವಷ್ಟನ್ನೇ ಒಪ್ಪಿಕೊಳ್ಳಲಾಗುತ್ತದೆ, (ಇಲ್ಲಿ ಹಾಗಲ್ಲ), ಆದ್ದರಿಂದ ವಿರೋಧವಿಲ್ಲ.)

**೫೦) ವೇದಾಂತವಾಕ್ಯಗಳು ಕರ್ಮವಾಕ್ಯದಂತೆ ಏಕಾಂತವಾಗಿ ಕ್ರಿಯೆಗಾಗಿಯೇ ಎಂದು ಸಿದ್ಧಾಂತದಲ್ಲಿ ಒಪ್ಪಿಕೊಂಡಿಲ್ಲ,** ಮತ್ತೇನೆಂದರೆ (ವೇದಾಂತವಾಕ್ಯಗಳು) ಪ್ರಧಾನವಾಗಿ ಅದ್ವಿತೀಯವಾದ ಬ್ರಹ್ಮವನ್ನು ಗೊತ್ತುಮಾಡಿಸಿಕೊಡುವುದಕ್ಕಾಗಿಯೇ ಹೊರಟಿರುತ್ತವೆ. ಆದ್ದರಿಂದ ವಸ್ತುಭೋಧಕವಾಕ್ಯಗಳಿಗೂ ಉಪಾಸನೆಯನ್ನು ವಿಧಿಸುವವಾಕ್ಯಗಳಿಗೂ ಅದದರಲ್ಲಿ (ಅದದಕ್ಕೆ) ಪ್ರಧಾನವಿದೆಯೆಂದು ಬೇರ್ಪಡಿಸಿ (ಹೇಳಿ) ರುವುದರಿಂದ ವಾಕ್ಯಕ್ಕೆ ಬೇರೊಂದು ರೂಪವಾಗಿ ಅರ್ಥವನ್ನು ಮಾಡುವುದು ಇಲ್ಲಿ ದೋಷವಲ್ಲ. ಹಾಗೆಯೇ ಭಾಷ್ಯಕಾರರೂ ಹೇಳಿರುತ್ತಾರೆ.

(೧) ದೇವತಾದಿಪ್ರತಿಪಾದನಸ್ಯ ತು ಸ್ವವಾಕ್ಯಗತೋಪಾಸನಾರ್ಥತ್ವೇಽಪಿ ನ ಕಶ್ಚಿದ್ ವಿರೋಧಃ | ನ ತು ತಥಾ ಬ್ರಹ್ಮಣ ಉಪಾಸನಾವಿಧಿಶೇಷತ್ವಂ ಸಂಭವತಿ | ಏಕತ್ವೇ ಹೇಯೋಪಾದೇಯಶೂನ್ಯತಯಾ ಕ್ರಿಯಾಕಾರಕಾದಿದ್ವೈತವಿಜ್ಞಾನೋಪಮರ್ದೋಪಪತ್ತೇಃ || ಸೂ.ಭಾ. ೧-೧-೪.

[ "ಕ್ರಿಯಾಕಾರಕಾದಿದ್ವೈತವಿಜ್ಞಾನೋಪಮರ್ದೋಪಪತ್ತೇಃ" ಇತಿ ನ ಸರ್ವೇಷಾಂ ವೇದಾಂತವಾಕ್ಯಾನಾಂ ವಿಧಿಪರತ್ವಂ ಪ್ರತ್ಯಾಖ್ಯಾತಮತ್ರ, ಕಿಂ ತು ಬ್ರಹ್ಮವಾಕ್ಯಾನಾಮೇವ || ]

(೨) "ತದೇತದ್ ಬ್ರಹ್ಮಾಪೂರ್ವಮನಪರಮನಂತರಮಬಾಹ್ಯಮಯಮಾತ್ಮಾ ಬ್ರಹ್ಮ ಸರ್ವಾನುಭೂಃ" ಇತ್ಯೇವಮಾದೀನಿ ವಾಕ್ಯಾನಿ ನಿಷ್ಪ್ರಪಂಚಬ್ರಹ್ಮಾತ್ಮತತ್ತ್ವಪ್ರಧಾನಾನಿ ನಾರ್ಥಾಂತರಪ್ರಧಾನಾನಿ - ಇತ್ಯೇತತ್ ಪ್ರತಿಷ್ಠಾಪಿತಂ "ತತ್ತು ಸಮನ್ವಯಾತ್" ಇತ್ಯತ್ರ || ಸೂ.ಭಾ. ೩-೨-೧೪.

(೩) ವಸ್ತುಮಾತ್ರಪರ್ಯವಸಾಯೀನಿ ಹಿ ಬ್ರಹ್ಮವಾಕ್ಯಾನಿ ನ ನಿಯೋಗೋಪದೇಶೀನಿ ಇತ್ಯೇತದ್ ವಿಸ್ತರೇಣ ಪ್ರತಿಷ್ಠಾಪಿತಂ "ತತ್ತು ಸಮನ್ವಯಾತ್" ಇತ್ಯತ್ರ|| ಸೂ.ಭಾ. ೩-೨-೨೧.

---

(೧) ದೇವತೆಯನ್ನು ಪ್ರತಿಪಾದನೆ ಮಾಡುವ ವಾಕ್ಯಕ್ಕೆ (ತಾತ್ಪರ್ಯವು) ಆಯಾ ವಾಕ್ಯದಲ್ಲಿರುವ ಉಪಾಸನೆಯಲ್ಲಿರುವುದು, ಎಂದರೂ ಯಾವ ವಿರೋಧವೂ ಇಲ್ಲ. ಆದರೆ ಹಾಗೆ ಬ್ರಹ್ಮವು ಉಪಾಸನಾವಿಧಿಗೆ ಶೇಷವಾಗಿದೆ ಎಂಬುದು ಹೊಂದುವುದಿಲ್ಲ. (ಬ್ರಹ್ಮವು) ಒಂದೇ ಎಂದಾಗಿ (ಅದು) ಹೇಯೋಪಾದೇಯ ಶೂನ್ಯವಾಗಿರುವುದರಿಂದ ಕ್ರಿಯಾಕಾರಕವೇ ಮುಂತಾದ ದ್ವೈತವಿಜ್ಞಾನವು ನಾಶವಾಗುವುದೆಂಬುದು ಹೊಂದುತ್ತದೆ (ಸೂ. ಭಾ. ೧–೧–೪).

(ಕ್ರಿಯಾಕಾರಕವೇ ಮುಂತಾದ ದ್ವೈತವಿಜ್ಞಾನವು ನಾಶವಾಗುವುದೆಂಬುದು ಹೊಂದುತ್ತದೆ ಎಂದು ಹೇಳುತ್ತಾ ಎಲ್ಲಾ ವೇದಾನ್ತವಾಕ್ಯಗಳಿಗೂ ಇಲ್ಲಿ ವಿಧಿಪರತ್ವವನ್ನು ಅಲ್ಲಗಳೆದಿದೆ ಎಂದು ತಿಳಿಯಬಾರದು. ಮತ್ತೇನೆಂದರೆ ಬ್ರಹ್ಮವಾಕ್ಯಗಳಿಗೆ ಮಾತ್ರವೇ (ಎಂದರಿಯಬೇಕು).

(೨) "ಆ ಈ ಬ್ರಹ್ಮವು ಅಪೂರ್ವವೂ ಅನಪರವೂ ಅನಂತರವೂ ಅಬಾಹ್ಯವೂ. ಈ ಆತ್ಮನೇ ಬ್ರಹ್ಮನು. ಈತನು ಸರ್ವರ ಅನುಭವರೂಪನು ಎಂಬಿವೇ ಮುಂತಾದ ವಾಕ್ಯಗಳು ನಿಷ್ಪ್ರಪಂಚವಾದ ಬ್ರಹ್ಮಾತ್ಮತತ್ವಪ್ರಧಾನ–

(೪) ಸತಿ ತು ವಿರೋಧೇ ತತ್ಪ್ರಧಾನಾನಿ ಅತತ್ಪ್ರಧಾನೇಭ್ಯೋ ಬಲೀಯಾಂಸಿ ಭವಂತಿ||　ಸೂ.ಭಾ. ೩-೨-೧೪.

[ ವೇದಾಂತಾಃ ಸವಿಶೇಷಬ್ರಹ್ಮಪರಾಃ, ಉತ ನಿರ್ವಿಶೇಷಬ್ರಹ್ಮಪರಾಃ ? - ಇತ್ಯತ್ರೇವ ವಿಧಿಪರಾಃ, ವಸ್ತುಪರಾ ವಾ ? - ಇತ್ಯತ್ರಾಪಿ ತತ್ಪ್ರಧಾನವಾಕ್ಯಾನಾಂ ಬಲೀಯಸ್ತ್ವಮೇವ ವಿನಿಗಮಕಂ ವಾಕ್ಯಾರ್ಥನಿರ್ಣಯೇ - ಇತ್ಯಭ್ಯುಪಗಮೋಽತ್ರ ಸೂಚಿತಃ || ]

ವೇದಾಂತಾನಾಂ ನಿರ್ವಿಶೇಷವಸ್ತುಪರತ್ವಾಂಗೀಕಾರೇಣ ನ ಕೇವಲಂ ತತ್ತತ್ಪರ-ವಾಕ್ಯಾನಾಮರ್ಥಾಂತರಕಲ್ಪನದೋಷವಾರಣಮ್, ಅಪಿ ತು ಶಾರೀರಕಶಾಸ್ತ್ರಾರಂಭಾ-ನುಪಪತ್ತಿಃ, ಆಚಾರ್ಯೋಪಗಮೋಪದೇಶಾನುಪಪತ್ತಿಃ - ಇತ್ಯೇತಾವಪಿ ದೋಷೌ ನಾತ್ರ ಪ್ರಸಜತಃ - ಇತಿ ಸ್ಪಷ್ಟಮ್ | ಉಪದೇಶಮಾತ್ರಗಮ್ಯತ್ವಾತ್ ಪರಮಾತ್ಮವಸ್ತುನಃ, ತದರ್ಥಂ ಶಾಸ್ತ್ರಾರಂಭಃ, ಗುರೂಪಸರ್ಪಣೋಪದೇಶಶ್ಚೇತ್ಯುಪಪತ್ತೇಃ | ತಥಾ ಹಿ ಭಾಷ್ಯಮ್ -

---

ವಾದವುಗಳೇ ಹೊರತು ಬೇರೆ ಅರ್ಥವನ್ನು ಹೇಳುವಂಥವುಗಳಲ್ಲ, ಎಂಬೀ ವಿಚಾರವನ್ನು "ತತ್ತು ಸಮನ್ವಯಾತ್" ಎಂಬ ಸೂತ್ರದಲ್ಲಿ ನೆಲೆನಿಲ್ಲಿಸಿರುತ್ತೇವೆ. (ಸೂ. ಭಾ. ೩-೨-೧೪).

(೩) ಬ್ರಹ್ಮವಾಕ್ಯಗಳು ವಸ್ತುವಷ್ಟನ್ನೇ ತೋರಿಸುವುದರಲ್ಲಿ ಕೊನೆಗೊಂಡವುಗಳೇ ಹೊರತು ನಿಯೋಗವನ್ನು ಉಪದೇಶಿಸುವಂಥವುಗಳಲ್ಲ ಎಂಬ ವಿಚಾರವನ್ನು "ತತ್ತು ಸಮನ್ವಯಾತ್" ಎಂಬ ಸೂತ್ರದಲ್ಲಿ ವಿಸ್ತಾರವಾಗಿ ತಿಳಿಸಿಕೊಡಲಾಗಿದೆ. (ಸೂ.ಭಾ. ೩-೨-೨೧)

(೪) (ಸಗುಣ ನಿರ್ಗುಣ ವಾಕ್ಯಗಳಿಗೆ) ವಿರೋಧವಾದರೆ ಬ್ರಹ್ಮ ಸ್ವರೂಪವನ್ನೇ ತಿಳಿಸುವ ವಾಕ್ಯಗಳು ಸಗುಣವಾಕ್ಯಗಳಿಗಿಂತ ಪ್ರಬಲವಾದವುಗಳು ಎಂದಾಗುವವು (ಸೂ.ಭಾ. ೩-೨-೧೪). (ವೇದಾನ್ತಗಳು ಸವಿಶೇಷ-ಬ್ರಹ್ಮಪರವಾದವುಗಳೋ ನಿರ್ವಿಶೇಷಬ್ರಹ್ಮಪರವಾದವುಗಳೋ ಎಂಬಂತೆ, ಅವು ವಿಧಿಪರವೋ ವಸ್ತುಪರವೋ ಎಂಬ ವಿಷಯದಲ್ಲೂ ತತ್ಪರವಾದ ವಾಕ್ಯಗಳು ವಾಕ್ಯಾರ್ಥದ ನಿರ್ಣಯದ ವಿಷಯದಲ್ಲಿ (ಅತತ್ಪರವಾದ ವಾಕ್ಯಕ್ಕಿಂತ) ಬಲವಾದದ್ದೆಂದು ನಿರ್ಣಯವೆಂದು ಇಲ್ಲಿ ಒಪ್ಪಿಕೊಂಡಿದೆ ಎಂಬುದನ್ನು ಸೂಚಿಸಿದೆ).

(೫) ಅ) ತದ್ ಬ್ರಹ್ಮ ಸರ್ವಜ್ಞಂ ಸರ್ವಶಕ್ತಿ ಜಗದುತ್ಪತ್ತಿಸ್ಥಿತಿಲಯಕಾರಣಂ ವೇದಾಂತಶಾಸ್ತ್ರಾದೇವ ಅವಗಮ್ಯತೇ | ಕಥಮ್ ? ಸಮನ್ವಯಾತ್ ||
ಸೂ.ಭಾ. ೧-೧-೪.

[ ಬ್ರಹ್ಮ ಶಾಸ್ತ್ರಾದೇವಾವಗಮ್ಯತೇ - ಇತ್ಯತ್ರ ಪರಮಂ ತಾತ್ಪರ್ಯಮ್ | ನ ತು ವಸ್ತುವೃತ್ತೇನ ಕಾರಣಮೇವ ಬ್ರಹ್ಮ ಇತ್ಯತ್ರಾಪೀತಿ ಪ್ರಕೃತಸೂತ್ರಭಾಷ್ಯಾದೇವಾವಗಮ್ಯತೇ || ]

(ಆ) ಸ್ವತಂತ್ರಮೇವ ಬ್ರಹ್ಮ ಶಾಸ್ತ್ರಪ್ರಮಾಣಕಂ ವೇದಾಂತವಾಕ್ಯಸಮನ್ವಯಾತ್ ಇತಿ ಸಿದ್ಧಮ್ | ಏವಂ ಚ ಸತಿ "ಅಥಾತೋ ಬ್ರಹ್ಮಜಿಜ್ಞಾಸಾ" ಇತಿ ತದ್ವಿಷಯಃ ಪೃಥಕ್ಶಾಸ್ತ್ರಾರಂಭಃ ಉಪಪದ್ಯತೇ || ಸೂ.ಭಾ. ೧-೧-೪.

---

ವೇದಾನ್ತಗಳಿಗೆ ನಿರ್ವಿಶೇಷವಾದ ವಸ್ತುವಿನಲ್ಲಿ ತಾತ್ಪರ್ಯವಿದೆ ಎಂದು ಒಪ್ಪಿಕೊಳ್ಳುವುದರಿಂದ ತತ್ಪರವಾದ ವಾಕ್ಯಗಳಿಗೆ ಅರ್ಥಾಂತರಕಲ್ಪನೆಯನ್ನು ಮಾಡುವ ದೋಷವಷ್ಟನ್ನೇ ತಡೆಗಟ್ಟಿದಂತಾಗುವುದೆಂಬುದಲ್ಲ, ಮತ್ತೇನೆಂದರೆ (ಬೇರೆಯಾಗಿ) ಶಾರೀರಕ ಶಾಸ್ತ್ರವನ್ನು ಆರಂಭವಮಾಡಿರುವುದೂ ಹೊಂದುವುದಿಲ್ಲ ಮತ್ತು ಆಚಾರ್ಯ ಆಗಮದ ಉಪದೇಶವೂ ಹೊಂದುವುದಿಲ್ಲ, ಎಂಬೀ ಎರಡು ದೋಷವೂ ಇಲ್ಲಿ ಪ್ರಸಕ್ತವಾಗುವುದಿಲ್ಲ. ಪರಮಾತ್ಮವಸ್ತು ಉಪದೇಶಮಾತ್ರದಿಂದಲೇ ತಿಳಿದುಬರುವುದಾದ್ದರಿಂದ ಅದಕ್ಕಾಗಿ ಶಾಸ್ತ್ರವನ್ನು ಆರಂಭಿಸುವುದು ಗುರುಗಳ ಬಳಿಗೆ ಹೋಗಬೇಕೆಂಬ ಉಪದೇಶವೂ ಸಹ ಹೊಂದುತ್ತದೆ. ಹಾಗೆಯೇ ಭಾಷ್ಯವೂ ಇರುತ್ತದೆ.

(೫) (ಅ) ಸರ್ವಜ್ಞವು ಸರ್ವಶಕ್ತಿಸಮನ್ವಿತವೂ ಜಗತ್ತಿನ ಉತ್ಪತ್ತಿ-ಸ್ಥಿತಿಲಯಕ್ಕೆ ಕಾರಣವಾದದ್ದೂ ಆದ ಆ ಬ್ರಹ್ಮವು ವೇದಾನ್ತವಾಕ್ಯದಿಂದಲೇ ತಿಳಿದು ಬರುತ್ತದೆ. ಹೇಗೆ? ಎಂದರೆ ಸಮನ್ವಯವಿರುವುದರಿಂದ (ಸೂ.ಭಾ. ೧-೧-೪).

(ಇಲ್ಲಿ ಬ್ರಹ್ಮವು ಶಾಸ್ತ್ರದಿಂದಲೇ ತಿಳಿದುಬರುವಂಥದ್ದು ಎಂದು ತಿಳಿಸುವುದರಲ್ಲಿ ತಾತ್ಪರ್ಯವಿದೆಯೇ ಹೊರತು ವಾಸ್ತವಿಕವಾಗಿ ಬ್ರಹ್ಮವು ಕಾರಣವೂ ಆಗಿದೆ ಎಂದು ತಿಳಿಸುವುದರಲ್ಲಿಲ್ಲ ಎಂಬುದು ಈ ಸೂತ್ರದ ಭಾಷ್ಯದಿಂದ ಗೊತ್ತಾಗುತ್ತದೆ.)

(೬) ಯೇ ಸಮ್ಯಗ್ದರ್ಶಿನಃ, ತೈರುಪದಿಷ್ಟಂ ಜ್ಞಾನಂ ಕಾರ್ಯಕ್ಷಮಂ ಭವತಿ ನೇತರತ್ ಇತಿ ಭಗವತೋ ಮತಮ್ | ತಥಾ ಚ ಸತೀದಮಪಿ ಸಮರ್ಥಂ ವಚನಮ್ - (ಗೀ. ೪-೩೫)

[ ಅತ್ರ ಹಿ ಪಂಚತ್ರಿಂಶಶ್ಲೋಕೇ "ಯಜ್ಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ" ಇತ್ಯಾಚಾರ್ಯೋಪದಿಷ್ಟಜ್ಞಾನೇನೈವ ಮೋಹಾಪಸರಣಂ ಭವತೀತ್ಯುಚ್ಯತೇ || ]

(೭) ಕಥಂಚಿದೇವ ಪುಣ್ಯಾತಿಶಯಾತ್ ಪರಮಕಾರುಣಿಕಂ ಕಂಚಿತ್ ಸದ್ಬ್ರಹ್ಮಾತ್ಮ-ವಿದಂ ವಿಮುಕ್ತಬಂಧನಂ ಬ್ರಹ್ಮಿಷ್ಠಂ ಯದಾ ಆಸಾದಯತಿ, ತೇನ ಚ ಬ್ರಹ್ಮವಿದಾ ಕಾರುಣ್ಯಾತ್ ದರ್ಶಿತಸಂಸಾರವಿಷಯದೋಷದರ್ಶನಮಾರ್ಗೋ ವಿರಕ್ತಃ ಸಂಸಾರವಿಷಯೇಭ್ಯಃ, "ನಾಸಿ ತ್ವಂ ಸಂಸಾರೀ ಅಮುಷ್ಯಪುತ್ರತ್ವಾದಿಧರ್ಮವಾನ್, ಕಿಂ ತರ್ಹಿ ಸದ್ ಯತ್ ತತ್ ತ್ವಮಸಿ" ಇತ್ಯವಿದ್ಯಾಮೋಹಪಟಾಭಿ-

---

(ಅ) ಸ್ವತಂತ್ರವಾಗಿಯೇ ಬ್ರಹ್ಮವು ಶಾಸ್ತ್ರಪ್ರಮಾಣಕವಾಗಿದೆ ಎಂಬುದು ವೇದಾಂತವಾಕ್ಯಗಳ ಸಮನ್ವಯದಿಂದ ಸಿದ್ಧವಾಗುತ್ತದೆ. ಹೀಗಾಗಲಾಗಿ "ಅಥಾತೋ ಬ್ರಹ್ಮಜಿಜ್ಞಾಸಾ" ಎಂದು ಅದರ ವಿಷಯವಾಗಿ ಬೇರೆಯದಾದ ಶಾಸ್ತ್ರವು ಆರಂಭವಾಗಿರುವುದು ಹೊಂದುತ್ತದೆ (ಸೂ.ಭಾ. ೧-೧-೪).

೬. ಸಮ್ಯಗ್ದರ್ಶಿಗಳು ಯಾರಿರುವರೋ ಅವರು ಉಪದೇಶಿಸಿದ ಜ್ಞಾನವು ಫಲಕಾರಿಯಾಗುತ್ತದೆಯೇ ಹೊರತು ಬೇರೆಯವರದಲ್ಲ ಎಂಬುದು ಭಗವಂತನ ಅಭಿಪ್ರಾಯವು. ಆಗ ಇದೂ ಸಹ ಹೊಂದುತ್ತದೆ. (ಗೀ. ೪-೩೫) (ಈ ೩೫ನೇ ಶ್ಲೋಕದಲ್ಲಿ "ಯಾರ ಉಪದೇಶವನ್ನು ತಿಳಿದವನಾದರೆ ಮತ್ತೆ ನೀನು ಹೀಗೆ ಮೋಹವನ್ನು ಹೊಂದುವುದಿಲ್ಲವೋ" ಎಂದು ಆಚಾರ್ಯನು ಉಪದೇಶಿಸಿದ ಜ್ಞಾನದಿಂದಲೇ ಮೋಹವು ತೊಲಗುವುದೆಂದು ಹೇಳಿದೆ.)

೭) ಹೇಗೋ (ಸಂಪಾದಿಸಿದ) ಹೆಚ್ಚಿನ ಪುಣ್ಯಕ್ಕೆ ಅನುಗುಣವಾಗಿ ಪರಮ-ಕಾರುಣಿಕನಾದ ಯಾವನೋ ಒಬ್ಬ ಸದ್ಬ್ರಹ್ಮವನ್ನು ಅರಿತ, ಬಂಧನಗಳಿಂದ ವಿಮುಕ್ತನಾದ ಬ್ರಹ್ಮಿಷ್ಠನನ್ನು ಹೇಗೋ ಯಾವಾಗ ಪಡೆದುಕೊಳ್ಳುವನೋ ಆ ಬ್ರಹ್ಮಜ್ಞಾನಿಯು ಕರುಣೆಯಿಂದ ಸಂಸಾರವಿಷಯಗಳ ದೋಷವನ್ನು ಕಂಡುಕೊಳ್ಳುವ ಮಾರ್ಗವನ್ನು ತೋರಿಸಿಕೊಡಲಾಗಿ ಸಂಸಾರವಿಷಯದಲ್ಲಿ ವಿರಕ್ತನಾಗಿ "ನೀನು ಸಂಸಾರಿಯಲ್ಲ, ಇಂಥವನ ಮಗನಾಗಿರುವುದೇ ಮುಂತಾದ ಈ ಧರ್ಮಗಳುಳ್ಳವನಲ್ಲ, ಮತ್ತೇನೆಂದರೆ ಆ ಸತ್ತೆಂಬುದುಂಟಲ್ಲ, ಅದೇ

ನಹನಾನ್ಮೋಕ್ಷಿತೋ ಗಂಧಾರಪುರುಷವಚ್ಚ ಸ್ವಂ ಸದಾತ್ಮಾನಮ್ ಉಪಸಂಪದ್ಯ ಸುಖೀ ನಿರ್ವೃತಃ ಸ್ಯಾತ್ - ಇತ್ಯೇತಮೇವಾರ್ಥಮಾಹ "ಆಚಾರ್ಯವಾನ್ ಪುರುಷೋ ವೇದ" ಇತಿ || ಛಾಂ.ಭಾ. ೬-೧೪-೨.

ಇತಿ ||

**೫೧. ಅತ್ರ ವಿದ್ಯಮಾನಬಂಧನಿವೃತ್ತಿರ್ನಾಂಗೀಕ್ರಿಯತೇ** - ವಸ್ತುತ ಏವ ವಿದ್ಯಮಾನಸ್ಯ ಬಂಧಸ್ಯ, ಅವಿದ್ಯಾಯಾ ವಾ, ಸಾಧನಾನುಷ್ಠಾನೇನ ವಾಸ್ತವಿಕೀ ನಿವೃತ್ತಿರಿತ್ಯನಭ್ಯುಪಗಮಾತ್, ಶಾಸ್ತ್ರಾಚಾರ್ಯೋಪದೇಶಜನಿತವಿದ್ಯಯಾ ಅವಿದ್ಯಾಧ್ಯಾರೋಪಿತಬಂಧಾದೇರಪಬಾಧಮಾತ್ರಮಿತ್ಯಂಗೀಕಾರಾಚ್ಚ, ಪ್ರಸ್ಥಾನಾಂತರೇಷು ಚೋದಿತದೋಷಾಣಾಮ್ ಅತ್ರಾನವಕಾಶಃ -

(೧) ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕಃ |
ನ ಮುಮುಕ್ಷುರ್ನ ವೈ ಮುಕ್ತ ಇತ್ಯೇಷಾ ಪರಮಾರ್ಥತಾ || ಗೌ. ಕಾ. ೨-೩೨.

---

ನೀನಾಗಿರುವೆ ಎಂದು ಅವಿದ್ಯಾಮೋಹದ ಬಟ್ಟೆಯ ಕಣ್ಣುಕಟ್ಟನ್ನು ಬಿಚ್ಚಿ ಗಂಧಾರದೇಶದ ಆ ಪುರುಷನಂತೆಯೇ ತನ್ನದೇ ಆಗಿರುವ ಸದಾತ್ಮನೆಂಬ ಸ್ವರೂಪವನ್ನು ಸೇರಿ ಸುಖಿಯೂ ಸಮಾಧಾನಹೊಂದಿದವನೂ ಆಗುವನು, ಎಂಬೀ ವಿಷಯವನ್ನೇ ಆಚಾರ್ಯವಂತನಾದ ಪುರುಷನು ಅರಿತುಕೊಳ್ಳುತ್ತಾನೆ" ಎಂದು ಹೇಳಿರುತ್ತದೆ, ಎಂದಿದೆ (ಛಾಂ. ೬–೧೪–೨).

**೫೧) ಈ (ಸಿದ್ಧಾಂತದಲ್ಲಿ) ನಿಜವಾಗಿರುವ ಬಂಧನನಿವೃತ್ತಿ ಎಂಬುದನ್ನು ಒಪ್ಪಿಕೊಳ್ಳಲಾಗುವುದಿಲ್ಲ.** ನಿಜವಾಗಿಯೇ ಇರುವ ಬಂಧವಾಗಲೀ, ಅವಿದ್ಯೆಯಾಗಲೀ ವಾಸ್ತವಿಕವಾಗಿ ನಿವೃತ್ತಿಯಾಗುತ್ತದೆ ಎಂದು ಒಪ್ಪಿಕೊಂಡಿಲ್ಲವಾದ್ದರಿಂದ ಶಾಸ್ತ್ರಾಚಾರ್ಯೋಪದೇಶದಿಂದುಂಟಾದ ವಿದ್ಯೆಯಿಂದ, ಅವಿದ್ಯೆಯಿಂದ ಹುಟ್ಟುಗಟ್ಟಿದ್ದಾದ ಬಂಧವೇ ಮುಂತಾದವುಗಳ ಬಾಧೆಯಾಗುವುದೆಂಬುದಷ್ಟನ್ನೇ ಒಪ್ಪಿಕೊಂಡಿರುವುದರಿಂದ ಬೇರೆ ಪ್ರಸ್ಥಾನದವರು ಆಕ್ಷೇಪಿಸಿರುವ ದೋಷಗಳು ಇಲ್ಲಿ ಬರುವುದಿಲ್ಲ.

(೧) ಪ್ರಳಯವಾಗಲೀ ಉತ್ಪತ್ತಿಯಾಗಲೀ ಬದ್ಧನಾಗಲೀ ಸಾಧಕನಾಗಲೀ, ಮುಕ್ತನಾಗಲೀ, ಮುಮುಕ್ಷುವಾಗಲೀ ನಿಜವಾಗಿಲ್ಲವೇ ಇಲ್ಲವೆಂಬುದೇ ಪರಮಾರ್ಥವು (ಗೌ.ಕಾ. ೨–೩೨). ಇಲ್ಲಿ ಭಾಷ್ಯವು – ಆದ್ದರಿಂದ

ಭಾಷ್ಯಮ್ - ಅತೋ ಮನೋವಿಕಲ್ಪನಾಮಾತ್ರಂ ದ್ವೈತಮಿತಿ ಸಿದ್ಧಮ್ | ತಸ್ಮಾತ್ ಸೂಕ್ತಂ ದ್ವೈತಸ್ಯ ಅಸತ್ತ್ವಾತ್ ನಿರೋಧಾದ್ಯಭಾವಃ ಪರಮಾರ್ಥತೇತಿ ||

[ ಅತ್ರ ದ್ವೈತಪ್ರಪಂಚಸ್ಯ ವಿಕಲ್ಪಮಾತ್ರತ್ವಾತ್, ನ ತಸ್ಯ ನಿವೃತ್ತ್ಯರ್ಥಮ್ ಅನುಷ್ಠೇಯಂ ಸಾಧನಮಪೇಕ್ಷಿತವ್ಯಮ್ ಇತ್ಯುಕ್ತಮ್ | ಅತೋ ವಿದ್ಯಮಾನಸ್ಯ ನಿವೃತ್ತಿಃ, ಅವಿದ್ಯಮಾನಸ್ಯೋತ್ಪತ್ತಿರ್ವಾ ನಾಂಗೀಕೃತಾ ಭವತಿ || ]

(೨) ಅವಿದ್ಯಾವತಃ, ಅವಿದ್ಯಾನಿವೃತ್ತ್ಯನಿವೃತ್ತಿಕೃತೋ ವಿಶೇಷ ಆತ್ಮನಃ ಸ್ಯಾತ್ - ಇತಿ ಚೇತ್ | ನ | ಅವಿದ್ಯಾಕಲ್ಪನಾವಿಷಯತ್ವಾಭ್ಯುಪಗಮಾತ್ ರಜ್ಜೂಷರಶುಕ್ತಿಕಾಗಗನಾನಾಂ ಸರ್ಪೋದಕರಜತಮಲಿನತ್ವಾದಿವದದೋಷ ಇತ್ಯವೋಚಾಮ | ತಿಮಿರಾತಿಮಿರದೃಷ್ಟಿವತ್ ಅವಿದ್ಯಾಕರ್ತೃತ್ವಾಕರ್ತೃತ್ವಕೃತ ಆತ್ಮನೋ ವಿಶೇಷಃ ಸ್ಯಾದಿತಿ ಚೇತ್ | ನ | "ಧ್ಯಾಯತೀವ ಲೇಲಾಯತೀವ" ಇತಿ ಸ್ವತೋಽವಿದ್ಯಾಕರ್ತೃತ್ವಸ್ಯ ಪ್ರತಿಷಿದ್ಧತ್ವಾತ್ || ಬೃ.ಭಾ. ೪-೪-೬.

[ ಅತ್ರ ಅವಿದ್ಯಾಶ್ರಯತ್ವಮಪಿ ಅವಿದ್ಯಾಕಲ್ಪಿತಮೇವೇತಿ, ಅವಿದ್ಯಾನಿವೃತ್ತ್ಯನಿವೃತ್ತೀ

---

ದ್ವೈತವೆಂಬುದು ಕೇವಲ ಮನಸ್ಸಿನ ವಿಕಲ್ಪನಾಮಾತ್ರವೆಂಬುದು ಸಿದ್ಧವಾಯಿತು. ದ್ವೈತವೆಂಬುದು ಇಲ್ಲವಾದ್ದರಿಂದ ನಿಜವಾಗಿ ಪ್ರಳಯಾದಿಗಳು ಇಲ್ಲವೆಂದು ಹೇಳಿದ್ದು ಸರಿಯಾಯಿತು. (ಇಲ್ಲಿ ದ್ವೈತಪ್ರಪಂಚವೆಂಬುದು ವಿಕಲ್ಪಮಾತ್ರವಾದ್ದರಿಂದ ಅದರ ನಿವೃತ್ತಿಗಾಗಿ ಸಾಧನವನ್ನು ಅನುಷ್ಠಿಸಬೇಕೆಂಬುದು ಸರಿಯಲ್ಲ ಎಂದಾಯಿತು. ಆದ್ದರಿಂದ ಇರುವುದರ ನಿವೃತ್ತಿಯಾಗಲೀ ಇಲ್ಲದರ ಉತ್ಪತ್ತಿಯಾಗಲೀ ಇಲ್ಲಿ ಒಪ್ಪಿಲ್ಲ ಎಂದು ಭಾವ).

೨) ಅವಿದ್ಯಾವಂತನಾದವನಿಗೆ ಅವಿದ್ಯೆಯ ನಿವೃತ್ತಿ, ಅನಿವೃತ್ತಿಯಿಂದಾದ ವಿಶೇಷವಾದರೂ ತನಗಿದೆ ಎಂದಾಗುವುದಿಲ್ಲವೇ? (ಎಂದರೆ-ಅದೂ) ಆಗುವುದಿಲ್ಲ - ಏಕೆಂದರೆ (ಆತ್ಮನು) ಅವಿದ್ಯೆಯೆಂಬ ಕಲ್ಪನೆಗೂ ಅವಿಷಯನೆಂದು ಒಪ್ಪಿರುತ್ತೇವೆ. ಇದು ಹೇಗೆಂದರೆ - ಹಗ್ಗ, ಚೌಳು ನೆಲ, ಕಪ್ಪೆ ಚಿಪ್ಪು, ಆಕಾಶ ಇವುಗಳಿಗೆ ಹಾವು, ನೀರು, ಬೆಳ್ಳಿ, ಮಲವಾಗಿದೆ ಎಂಬ ದೋಷದಂತೆ ಎಂದು ಹೇಳಿದ್ದೇವೆ. ಕಣ್ಣಿನಲ್ಲಿ ಪೊರೆ ಇರುವುದು, ಇಲ್ಲದಿರುವುದು ಎಂಬ ದೃಷ್ಟಿಯಂತೆ ಅವಿದ್ಯೆಗೆ ಕರ್ತೃವಾಗಿರುವುದು, ಅಕರ್ತೃವಾಗಿರುವುದೆಂಬುದರಿಂದಾದ ವಿಶೇಷವಾದರೂ ಆತ್ಮನಿಗಿದೆ ಎಂದರೆ ಅದೂ ಸರಿಯಲ್ಲ, ಏಕೆಂದರೆ "ಧ್ಯಾನ ಮಾಡುವವನಂತೆಯೂ, ಅಲುಗಾಡುವವನಂತೆಯೂ" ಎಂದು ಹೇಳುತ್ತಾ ಆತ್ಮನಿಗೆ ಸ್ವತಃ ಕರ್ತೃತ್ವವಿದೆ ಎಂಬುದನ್ನು

ಅಪಿ ಅವಿದ್ಯಾಕಲ್ಪಿತೇ ಏವೇತಿ ಚೋಕ್ತಮ್ | ತೇನ ಪ್ರಸ್ಥಾನಾಂತರೇ ಉದ್ಭಾವಿತಾ ದೋಷಾ ನಾತ್ರ ಪ್ರಾದುಷ್ಯುಃ || ]

(೩) "ಅಹಂ ನ ಜಾನೇ ಮುಗ್ಧೋಽಸ್ಮಿ" ಇತಿ ಪ್ರತ್ಯಯದರ್ಶನಾತ್ ಅವಿದ್ಯಾ-ಭ್ರಮವತ್ತ್ವಮೇವ ಇತಿ ಚೇತ್ | ನ | ತಸ್ಯಾಪಿ ವಿವೇಕಗ್ರಹಣಾತ್ | ನ ಹಿ ಯೋ ಯಸ್ಯ ವಿವೇಕೇನ ಗ್ರಹೀತಾ ಸ ತಸ್ಮಿನ್ ಭ್ರಾಂತ ಇತ್ಯುಚ್ಯತೇ||ಬೃ.ಭಾ. ೪-೪-೬.

[ ಅನೇನ ಅನುಭವವಿರೋಧಃ ಪರಾಸ್ತಃ || ]

**೫೨. ದೃಷ್ಟಿದ್ವಯಾಂಗೀಕಾರೇಣ ಸರ್ವದೋಷಪರಿಹಾರಃ -** ತದೇವಮತ್ರ ಪ್ರಸ್ಥಾನೇ, ಅವಿದ್ಯಾಕಲ್ಪಿತವ್ಯವಹಾರದೃಷ್ಟ್ಯೈವ ಪ್ರಪಂಚಸದ್ಭಾವಃ, ಜೀವಾನಾಂ ಪ್ರಮಾತೃತ್ವಕರ್ತೃತ್ವಭೋಕ್ತೃತ್ವಲಕ್ಷಣಃ ಸಂಸಾರಃ, ಉಪಾಸ್ಯೋಪಾಸಕಾದಿಭೇದಃ,

---

ಅಲ್ಲಗಳೆದಿದೆ (ಬೃ.ಭಾ. ೪-೪-೬).

[ಇಲ್ಲಿ (ಆತ್ಮನು) ಅವಿದ್ಯೆಗೆ ಆಶ್ರಯನೆಂಬುದೂ ಅವಿದ್ಯಾಕಲ್ಪಿತವೆಂತಲೂ, ಅವಿದ್ಯೆಯ ನಿವೃತ್ತಿ ಮತ್ತು ಅನಿವೃತ್ತಿಯೂ ಸಹ ಅವಿದ್ಯಾಕಲ್ಪಿತವೇ ಎಂದು ಹೇಳಿದೆ. ಇದರಿಂದ ಬೇರೆ ಪ್ರಸ್ಥಾನದವರು ಎತ್ತಿದ ದೋಷಗಳು (ಇದಕ್ಕೆ) ತಟ್ಟುವುದಿಲ್ಲ].

(೩) "ನಾನು ಅರಿಯನು, ಮುಗ್ಧನಾಗಿರುವೆನು" ಎಂದು ಅರಿವು ಕಂಡು ಬಂದಿರುವುದರಿಂದ (ಆತ್ಮನು) ಅವಿದ್ಯಾಭ್ರಮೆಯುಳ್ಳವನೆಂದೇ ಆಗುತ್ತಾನಲ್ಲಾ! ಎಂದರೆ ಆಗುವುದಿಲ್ಲ. ಏಕೆಂದರೆ ಅದನ್ನೂ ವಿಂಗಡವಾಗಿ ಅರಿಯುತ್ತಾ-ನಾದ್ದರಿಂದ. ಯಾವಾತನು ಯಾವುದನ್ನು ವಿಂಗಡವಾಗಿ ಅರಿಯುವವ-ನಾಗಿರುತ್ತಾನೋ ಅವನು ಅದರಲ್ಲಿ ಭ್ರಾಂತನೆಂದಾಗುವುದಿಲ್ಲವಲ್ಲವೇ? (ಬೃ.ಭಾ. ೪-೪-೬).

(ಇಷ್ಟು ಹೇಳಿದ್ದರಿಂದ ಅನುಭವಕ್ಕೆ ವಿರುದ್ಧವಾದದ್ದನ್ನು ತಳ್ಳಿಹಾಕಿ-ದಂತಾಯಿತು).

**೫೨) ಎರಡು ದೃಷ್ಟಿಯಿಂದ ಒಪ್ಪಿರುವುದರಿಂದ ಎಲ್ಲಾ ದೋಷದ ಪರಿಹಾರವನ್ನು ಹೇಳಿದಂತಾಗುವುದು.** ಹೀಗೆ ಈ (ಅದ್ವೈತ) ಪ್ರಸ್ಥಾನ-ದಲ್ಲಿ ಅವಿದ್ಯಾಕಲ್ಪಿತವಾದ ವ್ಯವಹಾರದೃಷ್ಟಿಯಿಂದಲೇ (೧) ಪ್ರಪಂಚವಿದೆ

ಶಾಸ್ತ್ರಾಚಾರ್ಯವಾಕ್ಯಪ್ರಾಮಾಣ್ಯಮ್, ಜ್ಞಾನಸಾಧನಾನುಷ್ಠಾನಮ್, ಜ್ಞಾನೇನಾಜ್ಞಾನ-ನಿವೃತ್ತಿಃ, ಬಂಧಮೋಕ್ಷೌ ಚ - ಇತ್ಯೇವಮಾದಯಃ ಸರ್ವೇ ವ್ಯವಹಾರಾ ಅಭ್ಯುಪ-ಗಮ್ಯತೇ | ಪರಮಾರ್ಥದೃಷ್ಟ್ಯಾ ತು ನೈವಾಸ್ತಿ ಕಿಂಚಿತ್ ನಿರ್ವಿಶೇಷಬ್ರಹ್ಮವ್ಯತಿರಿಕ್ತಮ್ - ಇತ್ಯಭ್ಯುಪಗಮಾತ್, ಅಭ್ಯುಪಗಮಸ್ಯ ಚಾಸ್ಯ ಶ್ರುತಿಯುಕ್ತ್ಯನುಭವಸಂಗಾನೇನೋಪ-ಪಾದನಾಚ್ಚ ನ ಕಶ್ಚಿದಸ್ತಿ ವೇದಾಂತಾರ್ಥೋಽಸಾಧಿತಃ, ನ ಕಶ್ಚಿದ್ದೋಷೋಽಸ್ತ್ಯಪರಿ-ಹೃತಃ | ಅತ ಏವಾತ್ರ ಶ್ರುತಿಸ್ಮೃತಿಪುರಾಣಾನಾಂ ಯಥಾಸಂಭವಂ ಪ್ರಾಮಾಣ್ಯಮ್ ಉರರೀಕೃತ್ಯ ಮೀಮಾಂಸಾನ್ಯಾಯಾಧಾರೇಣ ವಾಕ್ಯಾರ್ಥನಿರ್ಣಯಃ, ವಿನೇಯಾನ್ ಪ್ರತಿ ತತ್ತದಧಿಕಾರಾನುಗುಣಂ ಶಾಸ್ತ್ರತರ್ಕಾದಾನೇನ ಶ್ರುತಿಯುಕ್ತ್ಯನುಭವಸಂಗಾನಪ್ರದರ್ಶಕ-ವಾದಕಥಾಸರಣ್ಯಾ ಉಪದೇಶಃ, ಪರಾಭಿಮತಪ್ರಸ್ಥಾನಾಂತರಾಣಾಮ್ ಅಸಾರತ್ವ-ಪ್ರಖ್ಯಾಪನೇನ ಮುಮುಕ್ಷೂಣಾಂ ತತೋ ವಿಮುಖೀಕರಣಾಯ ಯಥಾಯೋಗಂ ಜಲ್ಪವಿತಂಡಾದಿಕಥಾ ಅಪ್ಯಾಶ್ರಿತ್ಯ ಪ್ರಯತನಂ ಚ - ಇತ್ಯೇತತ್ ಸರ್ವಮವಕಲ್ಪತೇ, ಪ್ರಸ್ಥಾನಾಂತರೇಷು ತು ನೈವಮ್ - ಇತಿ ಸುಮಹದ್ ವೈಲಕ್ಷಣ್ಯಮ್ | ತಥಾ

---

(೨) ಜೀವರುಗಳಿಗೆ ಪ್ರಮಾತೃತ್ವಕತೃತ್ವಭೋಕ್ತೃತ್ವರೂಪವಾದ ಸಂಸಾರವು, (೩) ಉಪಾಸ್ಯೋಪಾಸಕಭೇದವು, (೪) ಶಾಸ್ತ್ರಾಚಾರ್ಯವಾಕ್ಯಗಳಿಗೆ ಪ್ರಾಮಾಣ್ಯವು, (೫) ಜ್ಞಾನಸಾಧನದ ಅನುಷ್ಠಾನವನ್ನು ಮಾಡುವುದೆಂಬುದು, (೬) ಜ್ಞಾನದಿಂದ ಅಜ್ಞಾನದ ನಿವೃತ್ತಿಯು, (೭) ಬಂಧಮೋಕ್ಷಗಳೆಂಬವುಗಳು, ಇವೇ ಮೊದಲಾದ ಎಲ್ಲಾ ವ್ಯವಹಾರಗಳನ್ನು ಒಪ್ಪಲಾಗಿದೆ. ಈ ಒಪ್ಪಿಗೆಯನ್ನು ಶ್ರುತಿಯುಕ್ತಿ ಅನುಭವವನ್ನು ಹೊಂದಿಸುವುದರ ಮೂಲಕ ತೋರಿಸಿರುವುದ-ರಿಂದ, ಸಾಧಿಸದೇ ಇರುವ ವೇದಾನ್ತದ ಅರ್ಥವು ಯಾವುದೂ ಇಲ್ಲ, ಪರಿಹರಿಸದೇ ಇರುವ ಯಾವುದೊಂದು ದೋಷವೂ ಇಲ್ಲ. ಆದ್ದರಿಂದಲೇ ಇಲ್ಲಿ ಶ್ರುತಿಸ್ಮೃತಿಪುರಾಣಗಳಿಗೆ ಹೊಂದುವ ಹಾಗೆ ಪ್ರಾಮಾಣ್ಯವನ್ನು ಒಪ್ಪಿಕೊಂಡು ಮೀಮಾಂಸಾನ್ಯಾಯದ ಆಧಾರದಿಂದ ವಾಕ್ಯಾರ್ಥವನ್ನು ನಿರ್ಣಯಮಾಡಿರುವುದು, ಶಿಷ್ಯರುಗಳ ಅಧಿಕಾರಕ್ಕೆ ತಕ್ಕಂತೆ ಶಾಸ್ತ್ರಯುಕ್ತಿಯನ್ನು ತರುವುದರ ಮೂಲಕ ಶ್ರುತಿಯುಕ್ತಿ ಅನುಭವಗಳನ್ನು ಹೊಂದಿಸಿ ತೋರಿಸುವುದೆಂಬ ರೀತಿಯಿಂದ ಉಪದೇಶಿಸಿರುವುದು. ಬೇರೆಯವರಿಗೆ ಒಪ್ಪಿಗೆಯಾದ ಬೇರೆ ಪ್ರಸ್ಥಾನಗಳನ್ನು ಅವು ಅಸಾರವಾಗಿದೆ ಎಂದು ತೋರಿಸುವುದರ ಮೂಲಕ ಮುಮುಕ್ಷುಗಳನ್ನು ಅಲ್ಲಿಂದ ಹಿಂತಿರುಗಿಸುವುದಕ್ಕಾಗಿ ಅಲ್ಲಲ್ಲಿಗೆ ತಕ್ಕಹಾಗೆ ಜಲ್ಪವಿತಂಡಾದಿಗಳನ್ನು ಸಹ ಆಶ್ರಯಿಸಿಕೊಂಡು ಪ್ರಯತ್ನ

ಹ್ಯಭಿಯುಕ್ತಾಃ -

(೧) ಯದಾ ವಿತಥಂ ದ್ವೈತಮ್ ಆತ್ಮೈವೈಕಃ ಪರಮಾರ್ಥತಃ ಸನ್, ತದಾ ಇದಂ ನಿಷ್ಪನ್ನಂ ಭವತಿ - ಸರ್ವೋಽಯಂ ಲೌಕಿಕೋ ವೈದಿಕಶ್ಚ ವ್ಯವಹಾರೋಽವಿದ್ಯಾ-ವಿಷಯ ಏವೇತಿ || ಗೌ.ಕಾ.ಭಾ. ೨-೩೨.

(೨) ಸ್ವಸಿದ್ಧಾಂತವ್ಯವಸ್ಥಾಸು ದ್ವೈತಿನೋ ನಿಶ್ಚಿತಾ ದೃಢಮ್ |
ಪರಸ್ಪರಂ ವಿರುಧ್ಯಂತೇ ತೈರಯಂ ನ ವಿರುಧ್ಯತೇ || ಗೌ.ಕಾ. ೩-೧೭.

ಅದ್ವೈತಂ ಪರಮಾರ್ಥೋ ಹಿ ದ್ವೈತಂ ತದ್ಭೇದ ಉಚ್ಯತೇ |
ತೇಷಾಮುಭಯಥಾ ದ್ವೈತಂ ತೇನಾಯಂ ನ ವಿರುಧ್ಯತೇ || ಗೌ.ಕಾ. ೩-೧೮.

[ ತದ್ಭೇದಃ - ತಸ್ಯ ಕಾರ್ಯಮ್, ತಸ್ಮಿನ್ ವಿಕಲ್ಪಿತಮ್ ಇತ್ಯರ್ಥಃ || ]

(೩) ಅಜಾತಸ್ಯೈವ ಭಾವಸ್ಯ ಜಾತಿಮಿಚ್ಛಂತಿ ವಾದಿನಃ |
ಅಜಾತೋ ಹ್ಯಮೃತೋ ಭಾವೋ ಮರ್ತ್ಯತಾಂ ಕಥಮೇಷ್ಯತಿ || ಗೌ.ಕಾ. ೩-೨೦.

---

ಮಾಡಿರುವುದೆಲ್ಲವೂ ಹೊಂದುತ್ತದೆ. ಬೇರೆ ಪ್ರಸ್ಥಾನದವರಲ್ಲಿ ಹೊಂದುವುದೇ ಇಲ್ಲ, ಎಂದಾದ್ದರಿಂದ (ಅದಕ್ಕೂ ಇದಕ್ಕೂ) ತುಂಬಾ ವ್ಯತ್ಯಾಸವಿದೆ.

(೧) ಹಾಗೆಯೇ ಬಲ್ಲವರು ಹೇಳಿರುತ್ತಾರೆ - ಯಾವಾಗ (ಎಲ್ಲಾ) ದ್ವೈತವು ಸುಳ್ಳೆಂದೂ, ಆತ್ಮನೊಬ್ಬನೇ ಪರಮಾರ್ಥವಾಗಿರುವೆನೆಂದಾ-ಗುವುದೋ, ಆಗ ಈ ಲೌಕಿಕವೈದಿಕ ವ್ಯವಹಾರವೆಲ್ಲವೂ ಅವಿದ್ಯಾ ವಿಷಯದಲ್ಲಿಯೇ ಎಂದು ತೀರ್ಮಾನವಾಗುತ್ತದೆ. (ಗೌ.ಕಾ.-೨-೩೨)

(೨) ತಮ್ಮ ಸಿದ್ಧಾಂತಗಳ ವ್ಯವಸ್ಥೆಗಳಲ್ಲಿ ದ್ವೈತಿಗಳು ದೃಢವಾಗಿ ನಿಶ್ಚಿತರಾಗಿರುವವರಾಗಿ ಒಬ್ಬರಿಗೊಬ್ಬರು ವಿರುದ್ಧವಾಗಿರುತ್ತಾರೆ. ಇದು (ಅದ್ವೈತವು) ಅವರಿಗೆ ವಿರುದ್ಧವಲ್ಲ. ಏಕೆಂದರೆ ಅದ್ವೈತವು ಪರಮಾರ್ಥವು, ದ್ವೈತವು ಅದರ ಭೇದವೆನಿಸುತ್ತದೆ. ಅವರಿಗೆ ಎರಡು ಪ್ರಕಾರದಿಂದಲೂ ದ್ವೈತವೇ. ಆದ್ದರಿಂದ ಇದು ವಿರುದ್ಧವಲ್ಲ. (ಗೌ.ಕಾ.೩-೧೭,೧೮).

(" ತದ್ಭೇದಃ" ಎಂದರೆ ಅದರ ಕಾರ್ಯವು, ಅದರಲ್ಲಿ ವಿಕಲ್ಪಿತವಾದದ್ದು ಎಂದರ್ಥವು)

(೩) ಅಜಾತವೇ ಆಗಿರುವ ಭಾವಕ್ಕೆ ವಾದಿಗಳು ಜಾತಿಯನ್ನು

ನ ಭವತ್ಯಮೃತಂ ಮರ್ತ್ಯಂ ನ ಮರ್ತ್ಯಮಮೃತಂ ತಥಾ |
ಪ್ರಕೃತೇರನ್ಯಥಾಭಾವೋ ನ ಕಥಂಚಿದ್ ಭವಿಷ್ಯತಿ || ಗೌ.ಕಾ. ೩-೨೧.

[ ಅತ್ರ ವಸ್ತುತ ಏವೋತ್ಪತ್ತಿಬಂಧಮೋಕ್ಷಾದೀನ್ ಇಚ್ಛಂತೋ ವೇದಾಂತಿನೋ ದೂಷಿತಾಃ||]

ಏವಂ ಚ ಸರ್ವಥಾಪಿ ಬಂಧಮ್ ಅವಿದ್ಯಾಂ ವಾ, ವಿದ್ಯಮಾನತ್ವೇನ ಪ್ರಕಲ್ಪ್ಯ ಶ್ರುತಿಪ್ರಮಾಣವಿಹಿತಸಾಧನವಿಶೇಷಾದೇವ ಮುಕ್ತಿಮಿಚ್ಛತಾಂ, ಪಕ್ಷಪ್ರತಿಪಕ್ಷಗ್ರಹಣೇನ ಪರಸ್ಪರಂ ವಿವದಮಾನಾನಾಂ ಪ್ರಸ್ಥಾನಸ್ಯ ಕಸ್ಯಚಿದಪಿ ಕಥಂಚಿದಪಿ ಸಾಮ್ಯಂ ಚಿಂತಯಿತುಮಪಿ ನ ಶಕ್ಯಂ ಭಗವತ್ಪಾದೀಯಸಾಂಪ್ರದಾಯಿಕಪ್ರಸ್ಥಾನೇನ | ನ ಹ್ಯತ್ರ ಕ್ವಚಿದಪಿ ಬಂಧಃ, ಅವಿದ್ಯಾ ವಾ ಕಂಟಕಾದಿವದುತ್ಕೀಲ್ಯಾಪನೇತವ್ಯತ್ವೇನ ಪ್ರದರ್ಶ್ಯತೇ| ಸರ್ವತ್ರೈವ ತು "ಅಧ್ಯಾರೋಪಾಪವಾದನ್ಯಾಯೇನ" ನಿತ್ಯಸಿದ್ಧನಿಷ್ಪ್ರಪಂಚತತ್ತ್ವ-

---

ಇಷ್ಟಪಡುತ್ತಾರೆ. ಅಜಾತವೂ ಅಮೃತವೂ ಆಗಿರುವ ಭಾವವೇ ಮರ್ತ್ಯತ್ವವನ್ನು ಹೇಗೆ ಹೊಂದೀತು? ಅಮೃತವು ಮರ್ತ್ಯವಾಗುವುದಿಲ್ಲ. ಹಾಗೂ ಮರ್ತ್ಯವು ಅಮೃತವಾಗುವುದಿಲ್ಲ. ಸ್ವಭಾವಕ್ಕೆ ಬೇರೆ ತರಹವೆಂಬುದು ಹೇಗೂ ಹೊಂದುವುದಿಲ್ಲ. (ಗೌ.ಕಾ ೩-೨೦, ೨೧)

(ಈ ಕಾರಿಕೆಯಲ್ಲಿ (ಆತ್ಮನಿಗೆ) ನಿಜವಾಗಿಯೇ ಉತ್ಪತ್ತಿ ಬಂಧ ಮೋಕ್ಷವೇ ಮುಂತಾದವನ್ನು ಇಷ್ಟಪಡುವಂತಹ ವೇದಾನ್ತಿಗಳನ್ನು ತಳ್ಳಿಹಾಕಿದೆ.)

ಹೀಗೆ, ಏನೇ ಆದರೂ ಬಂಧವಾಗಲೀ ಅವಿದ್ಯೆಯಾಗಲೀ ಇದೆ ಎಂಬುದಾಗಿ ಕಲ್ಪಿಸಿಕೊಂಡು ಶ್ರುತಿಪ್ರಮಾಣದಲ್ಲಿ ವಿಹಿತವಾದ ಸಾಧನಾನುಷ್ಠಾನವನ್ನು ಮಾಡಿ, ಮುಕ್ತಿಯನ್ನು ಬಯಸುವವರಿಗೂ, ಪಕ್ಷಪ್ರತಿಪಕ್ಷವನ್ನು ಹಿಡಿಯುವುದರ ಮೂಲಕ ಒಬ್ಬರಿಗೊಬ್ಬರು ವಾದವನ್ನು ಮಾಡುವವರ ಪ್ರಸ್ಥಾನವನ್ನು ಶ್ರೀಶಂಕರ-ಭಗವತ್ಪಾದರ ಸಾಂಪ್ರದಾಯಿಕವಾದ ಪ್ರಸ್ಥಾನದೊಡನೆ ಹೇಗಾದರೂ ಹೊಂದಿಸಬಹುದೆಂಬುದನ್ನು ಯೋಚಿಸುವುದಕ್ಕೂ ಆಗುವುದಿಲ್ಲ. ಈ (ಶಂಕರರ) ಪ್ರಸ್ಥಾನದಲ್ಲಿ ಯಾವ ಬಂಧವಾಗಲೀ ಅವಿದ್ಯೆಯಾಗಲೀ -ಮುಳ್ಳನ್ನು-ಕಿತ್ತುವಹಾಗೆ ತೆಗೆಯಬೇಕಾದದ್ದೆಂದು ತಿಳಿಸಿಲ್ಲ. ಎಲ್ಲಾ ಕಡೆಯಲ್ಲೂ ಅಧ್ಯಾರೋಪಾಪವಾದನ್ಯಾಯದಿಂದ ನಿತ್ಯಸಿದ್ಧವಾದ ನಿಷ್ಪ್ರಪಂಚದ ತತ್ತ್ವವನ್ನೇ

ಪ್ರಪಂಚನಮೇವ ಲಕ್ಷ್ಯೀಕ್ರಿಯತೇ ಇತಿ ಸರ್ವಂ ಶಿವಮ್ ||

ಇತಿಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರೇಣ್ಯಶ್ರೀಪೂಜ್ಯಪಾದಶ್ರೀಮಚ್ಛಂಕರಭಗವಚ್ಚರಣಸ್ಮರಣ-ಪರಿಚಯಾವಾಪ್ತವೇದಾಂತಪ್ರವೇಶೇನ ಶ್ರೀಬೋಧಾನಂದೇಂದ್ರಸರಸ್ವತೀಶಿಷ್ಯಸಚ್ಚಿದಾನಂದೇಂದ್ರ-ಸರಸ್ವತ್ಯಾಖ್ಯೇನ ಭಿಕ್ಷುಣಾ ಪ್ರಣೀತೇ ಶುದ್ಧಶಾಂಕರಪ್ರಕ್ರಿಯಾಭಾಸ್ಕರಾಭಿದೇ ಪ್ರಕರಣೇ ಶಾಂಕರಪ್ರಸ್ಥಾನಸ್ಯ ಪ್ರಸ್ಥಾನಾಂತರೇಭ್ಯೋ ವೈಲಕ್ಷಣ್ಯಮ್ ನಾಮ ಷಷ್ಠಃ ಕಿರಣಃ

---

ಲಕ್ಷ್ಯವನ್ನಾಗಿ ಮಾಡಿಕೊಂಡಿದೆ ಎಂದಾದ್ದರಿಂದ (ಇಲ್ಲಿ) ಎಲ್ಲವೂ ಮಂಗಳವು.

**ಇಲ್ಲಿಗೆ ಶಾಂಕರ ಪ್ರಸ್ಥಾನವು ಬೇರೆ ಪ್ರಸ್ಥಾನಕ್ಕಿಂತ ವಿಲಕ್ಷಣವಾಗಿದೆ ಎಂದು ತಿಳಿಸುವ ಆರನೇ ಕಿರಣವು ಮುಗಿಯಿತು.**

## ೭. ಬೌದ್ಧಮತಸಾಮ್ಯಶಂಕಾಪರಿಹಾರಃ

೫೩. ಶಂಕಾ - ಅತ್ರ ಕೇಚಿದ್ ಬ್ರೂಯುಃ :- ಅಸ್ತ್ವೇವಂ ಶಂಕರಭಗವತ್ಪಾದಾನಾಂ ಪ್ರಸ್ಥಾನಸ್ಯ ಸಾಂಪ್ರದಾಯಿಕತ್ವಮ್, ಅಸ್ತು ಚ ತದನ್ಯೇಷಾಂ ಶಂಕರಭಾಷ್ಯೇಷು ಪರೀಕ್ಷಿತಾನಾಂ ಪ್ರಸ್ಥಾನಾಂತರಾಣಾಂ ಸದೋಷತ್ವಮಿತಿ | ತಥಾಪಿ, ಏತತ್ಸಂಪ್ರದಾಯೋರರೀಕೃತೈವೈಕಾ ವೇದಾಂತಪ್ರಕ್ರಿಯೇತಿ ಅನಾದಿಕಾಲಾದಪಿ ಸರ್ವಸಂಪ್ರತಿಪನ್ನಮಾಸೀದಿತಿ ಕಥಂ ವಿಶ್ವಸಿಮಃ ? ನ ಹಿ ಶಾಂಕರಭಾಷ್ಯೇಷು ವಿಮರ್ಶನಾಯಾನುಪಾತ್ತಾನಿ ಪ್ರಸ್ಥಾನಾಂತರಾಣಿ ನಾಸನ್ನೇವಾನಾದಿಕಾಲಸ್ರೋತಸಿ ಅದ್ಯಾಪ್ಯನುಪಲಬ್ಧಾನಿ ಇತಿ ಶಕ್ಯತೇ ಸಂಭಾವಯಿತುಮ್ ಇತಿ ||

ಸ್ಯಾದೇತತ್ | ದರ್ಶಿತಂ ತಾವತ್ ಶಾಂಕರ್ಯಾಃ ಪ್ರಕ್ರಿಯಾಯಾಃ ಸರ್ವವೇದಾಂತಾನುಗಂತೃತ್ವಮ್; ದರ್ಶಿತಂ ಚ ಸಾರ್ವತ್ರಿಕಾನುಭವಾನುಸಾರೇಣ ಸರ್ವೇಷಾಮಪಿ ವೇದಾಂತಾನಾಮ್ ಅದ್ವೈತಾತ್ಮನಿ ತಾತ್ಪರ್ಯಂ ತಯೈವ ಸಮಾಶ್ರಿತಯಾ ಶಕ್ಯನಿರ್ಧಾರಣಂ ನಾನ್ಯಥಾ - ಇತಿ | ತತ್ರೈವಮ್ ಅವಧಾರಿತೇ

---

## ೭) ಬೌದ್ಧಮತದೊಡನೆ ಸಮಾನವೆಂಬ ಸಂದೇಹ ಪರಿಹಾರವು.

೫೩) ಸಂದೇಹವು – ಇಲ್ಲಿ ಕೆಲವರು ಹೇಳುವರು, – ಶಂಕರಭಗತ್ಪಾದರ ಪ್ರಸ್ಥಾನವು ಸಾಂಪ್ರದಾಯಿಕವಾದದ್ದೆಂದೇ ಆಗಲಿ, ಹಾಗೆಯೇ ಅದಕ್ಕಿಂತ ಬೇರೆಯದಾದ ಶಂಕರಭಾಷ್ಯದಲ್ಲಿ ವಿಚಾರಿಸಿದ್ದಾದ ಬೇರೆ ಪ್ರಸ್ಥಾನವು ದೋಷವುಳ್ಳದ್ದೆಂದೇ ಆಗಲಿ, ಆದರೂ ಈ ಸಂಪ್ರದಾಯದಲ್ಲಿ ಒಪ್ಪಿದ್ದಾದ ವೇದಾಂತಪ್ರಕ್ರಿಯೆಯೊಂದೇ ಅನಾದಿಕಾಲದಿಂದಲೂ ಕೂಡ ಎಲ್ಲರಿಗೂ ಒಪ್ಪಿಗೆಯಾದದ್ದಾಗಿತ್ತು ಎಂದು ಹೇಗೆ ನಂಬೋಣ? ಶಂಕರಭಾಷ್ಯದಲ್ಲಿ ವಿಮರ್ಶೆಗೆ ತೆಗೆದುಕೊಳ್ಳದ ಬೇರೆ ಪ್ರಸ್ಥಾನಗಳು, ಇಂದಿಗೂ ಸಿಗದೇ ಇರುವಂಥದ್ದು (ಅದು) ಅನಾದಿಕಾಲದ ಪ್ರವಾಹದಲ್ಲೂ ಇರಲೇ ಇಲ್ಲವೆಂದು ಒಪ್ಪುವುದಕ್ಕಾಗುವುದಿಲ್ಲವಲ್ಲವೇ ?

ಹೀಗಿರಬಹುದು – ಶಾಂಕರಪ್ರಕ್ರಿಯೆಯೇ ಎಲ್ಲಾ ವೇದಾಂತಗಳಿಗೂ ಹೊಂದುಕೊಂಡಿದ್ದೆಂದು ತೋರಿಸಿದ್ದಾಯಿತು. ಸಾರ್ವತ್ರಿಕವಾದ ಅನು–ಭವಾನುಸಾರವಾಗಿ ಎಲ್ಲಾ ವೇದಾನ್ತಗಳಿಗೂ ಅದ್ವೈತಾತ್ಮನಲ್ಲಿಯೇ

ವೇದಾಂತಾರ್ಥೇ, ಕುತಃ ಪುನರನುಪಲಬ್ಧಪ್ರಸ್ಥಾನಾಂತರಸದ್ಭಾವಸಂಭಾವನಾಮಾತ್ರೇಣ ಆಕ್ಷೇಪೋತ್ಥಾಪನಸ್ಯಾವಕಾಶ ಇತಿ ? ಅತ್ರೋಚ್ಯತೇ | ಭವೇದೇತದೇವಂ ಯದಿ ನಿಯಮೇನ ಸರ್ವಸಂಪ್ರತಿಪನ್ನಂ ಸ್ಯಾತ್ ಶಂಕರಸಂಪ್ರದಾಯ ಏವ ಪ್ರವೃತ್ತೋಽನಾದಿಕಾಲಾತ್, ನಾನ್ಯ ಇತಿ | ಅಸ್ತಿ ತ್ವಾಕ್ಷೇಪಃ ಪ್ರಸ್ಥಾನಾಂತರೀಯಾಣಾಂ ಭಾಷ್ಯಕಾರಾಣಾಂ ಯನ್ನೇದಂ ಗೌಡಪಾದಾದ್ಯೈಃ ಪ್ರಸ್ಥಾಪಿತಂ ವೇದಾಂತಮತಮ್, ಕಿಂ ತರ್ಹಿ ಸೌಗತಪ್ರಚ್ಛರ್ದಿತಮೇವೇತಿ | ತಥಾ ಹಿ -

(೧) "ವಿಗೀತಂ ವಿಚ್ಛಿನ್ನಮೂಲಂ ಮಾಹಾಯಾನಿಕಬೌದ್ಧಗಾಥಿತಂ ಮಾಯಾವಾದಂ ವ್ಯಾವರ್ಣಯಂತೋ ಲೋಕಾನ್ ವ್ಯಾಮೋಹಯಂತಿ" ||

ಇತಿ (ಭಾ.ಸೂ.ಭಾ. ೧-೪-೨೫) ಸೂತ್ರಭಾಷ್ಯೇ ಭಾಸ್ಕರಾಚಾರ್ಯಾಃ ||

(೨) ಅನಾದ್ಯವಿದ್ಯಾವಶಾಚ್ಚ ಸಮಾರೋಪಿತಾವಾಸ್ತವಗ್ರಾಹ್ಯಗ್ರಾಹಕ-

---

ತಾತ್ಪರ್ಯವೆಂತಲೂ ಆ ರೀತಿ ಆಶ್ರಯಿಸಿಕೊಳ್ಳುವುದರಿಂದಲೇ (ತತ್ತ್ವ) ನಿರ್ಧಾರಣೆಯನ್ನು ಮಾಡುವುದಕ್ಕಾಗುತ್ತದೆಯೇ ಹೊರತು ಬೇರೆ ರೀತಿಯಾಗಿ ಆಗುವುದಿಲ್ಲ ಎಂಬುದನ್ನು ಸಹ ತೋರಿಸಿದ್ದಾಯಿತು. ಈ ರೀತಿಯಾಗಿ ವೇದಾನ್ತಾರ್ಥವನ್ನು ನಿರ್ಣಯಮಾಡಲಾಗಿ ಹೇಗೆ ತಾನೇ, ಕಾಣದೇ ಇರುವ ಬೇರೊಂದು ಪ್ರಸ್ಥಾನವು ಇರಬಹುದೆಂಬ ಊಹಾಮಾತ್ರದಿಂದ ಆಕ್ಷೇಪವನ್ನು ಎತ್ತುವುದಕ್ಕೆ ಅವಕಾಶವಾಗುತ್ತದೆ? ಎಂದರೆ ಇದಕ್ಕೆ ಹೇಳುತ್ತೇವೆ – ಶಂಕರರ ಸಂಪ್ರದಾಯವೇ ಅನಾದಿಕಾಲದಿಂದ ನಡೆದುಬಂದದ್ದೇ ಹೊರತು ಬೇರೆಯದಲ್ಲ ಎಂಬುದು ಎಲ್ಲರಿಗೂ ಏಕಾಂತವಾಗಿ ಒಪ್ಪಿಗೆಯಾದದ್ದಾಗಿದ್ದರೆ ನೀವು (ಹೇಳಿದ ಹಾಗೆ) ಆಗಬಹುದಾಗಿತ್ತು ! ಆದರೆ ಈ ವೇದಾನ್ತ ಮತವೇನಿದೆ ಅದು ಗೌಡಪಾದರೇ ಮುಂತಾದವರಿಂದ ಹೊರಡಿಸಿದ ಮತವಲ್ಲ, ಮತ್ತೇನೆಂದರೆ ಪ್ರಚ್ಛನ್ನಬೌದ್ಧರಿಂದ ಹೇಳಿದ್ದೆಂದು ಬೇರೆ ಪ್ರಸ್ಥಾನದ ಭಾಷ್ಯಕಾರರ ಆಕ್ಷೇಪವಿದೆ. ಹಾಗೆಯೇ ಅಲ್ಲವೆ?

(೧) "ವಿರುದ್ಧವಾಗಿ ಹೇಳಿದ್ದಾದ, ಪ್ರಮಾಣವಿಲ್ಲದ ಮಹಾಯಾನಿಕರಾದ ಬೌದ್ಧರು ಹೇಳಿದ್ದಾದ ಮಾಯಾವಾದವನ್ನು ವರ್ಣಿಸುತ್ತಾ ಜನರನ್ನು ಮೋಹಗೊಳಿಸುತ್ತಾರೆ" ಎಂದು ಸೂತ್ರಭಾಷ್ಯದಲ್ಲಿ (೧-೪-೨೫) ಭಾಸ್ಕರಾಚಾರ್ಯರು ಹೇಳಿರುತ್ತಾರೆ.

ವಿಕಲ್ಪೋಲ್ಲೇಖಿನೀ ಸ್ವಯಂಪ್ರಕಾಶಾ ಸಂವಿದೇವ ಪರಮಾರ್ಥಸತೀ, ಸೈವ ಆತ್ಮಾ - ಇತಿ ಸೌಗತಾಃ ಪ್ರಕಟಾಃ ಪ್ರಚ್ಛನ್ನಾಶ್ಚ || ಸಿ.ತ್ರ. ೧೯

ಪ್ರತ್ಯುಕ್ತಶ್ಚಾಯಂ ಪ್ರತಿಬಿಂಬವಾದಃ ಪ್ರಚ್ಛನ್ನಬಾಹ್ಯಮತಪ್ರತ್ಯಾದೇಶೇ || ಸಿ.ತ್ರ.೪೦

ಇತಿ ಚ ಯಾಮುನಾಚಾರ್ಯಾಃ ||

(೩) ಜ್ಞಾನಮಾತ್ರಮೇವ ಪರಮಾರ್ಥ ಇತಿ ಸಾಧಯಂತಃ ಸರ್ವಲೋಕೋಪಹಾಸೋಪಕರಣಂ ಭವಂತೀತಿ ವೇದವಾದಚ್ಛದ್ಮಪ್ರಚ್ಛನ್ನಬೌದ್ಧನಿರಾಕರಣೇ ನಿಪುಣತರಂ ಪ್ರಪಂಚಿತಮ್ || ಶ್ರೀ.ಭಾ. ೨-೨-೨೭,

ಇತಿ ರಾಮಾನುಜಾಚಾರ್ಯಾಃ ||

(೪) ಯಚ್ಛೂನ್ಯವಾದಿನಃ ಶೂನ್ಯಂ ತದೇವ ಬ್ರಹ್ಮ ಮಾಯಿನಃ |
ನ ಹಿ ಲಕ್ಷಣಭೇದೋऽಸ್ತಿ ನಿರ್ವಿಶೇಷತ್ವತಸ್ತಯೋಃ ||

---

(೨) ಅನಾದಿಯಾದ ಅವಿದ್ಯೆಗೆ ವಶವಾಗಿ ಆರೋಪಣೆ ಮಾಡಿದ್ದಾದ ನಿಜವಲ್ಲದ್ದಾದ ಗ್ರಾಹ್ಯಗ್ರಾಹಕ ವಿಕಲ್ಪವನ್ನು ತೋರಿಸುವ (ಪರಾಮರ್ಶಿಸು) ವಂಥದ್ದು, ಸ್ವಯಂ ಪ್ರಕಾಶವಾದ ಸಂವಿತ್ತೇ ಪರಮಾರ್ಥವಾಗಿರುವಂಥದ್ದು, ಅದೇ ಆತ್ಮನು ಎಂದು ಸ್ಪಷ್ಟಬೌದ್ಧರಾಗಿದ್ದರೂ ಪ್ರಚ್ಛನ್ನರಾಗಿರುತ್ತಾರೆ (ಸಿ.ತ್ರ.೧೯), ಪ್ರಚ್ಛನ್ನರಾದ ವೇದಬಾಹ್ಯರಮತವನ್ನು ಅಲ್ಲಗಳೆಯುವ ಸಮಯದಲ್ಲಿ ಈ ಪ್ರತಿಬಿಂಬವಾದವನ್ನು ಅಲ್ಲಗಳೆದದ್ದಾಗಿದೆ. (ಸಿ.ತ್ರ. ೪೦) ಎಂದು ಯಮುನಾಚಾರ್ಯರ (ವಚನವು).

೩) ಜ್ಞಾನವಷ್ಟೇ ಪರಮಾರ್ಥವಾದದ್ದೆಂದು ಸಾಧಿಸುತ್ತಾ ಎಲ್ಲಾ ಜನರ ಉಪಹಾಸಕ್ಕೆ ಕಾರಣರಾದವರಾಗಿರುತ್ತಾರಾದ್ದರಿಂದ (ಇವರು) ವೇದವಾದದಿಂದ ತಮ್ಮನ್ನು ಮುಚ್ಚಿಕೊಂಡವರಾದ ಪ್ರಚ್ಛನ್ನ ಬೌದ್ಧರ ನಿರಾಕರಣೆಯನ್ನು ಮಾಡುವ ಸಂದರ್ಭದಲ್ಲಿ ಇನ್ನೂ ಹೆಚ್ಚಾಗಿ ತೋರಿಸಿರುತ್ತೇವೆ. (ಶ್ರೀ ಭಾಷ್ಯ ೨-೨-೨೭) ಎಂದು ರಾಮಾನುಜಾಚಾರ್ಯರು.

೪) "ಶೂನ್ಯವಾದಿಗಳ ಶೂನ್ಯವೆಂಬುದೇನಿದೆ ಅದೇ ಮಾಯಾವಾದಿಗಳ ಬ್ರಹ್ಮವು, ಇಬ್ಬರಿಗೂ, ನಿರ್ವಿಶೇಷವಾದದ್ದಾಗಿದೆ ಎಂದು ಹೇಳುವುದರಲ್ಲಿ ವ್ಯತ್ಯಾಸವಿಲ್ಲವಾದ್ದರಿಂದ (ಇವರಿಗೆ) ಲಕ್ಷಣಭೇದವಿರುವುದಿಲ್ಲ" ಎಂದು

ಇತಿ (ವೇ.ಸೂ. ೨-೨-೮-೨೮) ಶೂನ್ಯಾಧಿಕರಣೇ ಆನಂದತೀರ್ಥಾಃ ||

ಅಧುನಾತನಾಂಗ್ಲಶಿಕ್ಷಣಸಂಸ್ಕೃತಬುದ್ಧಯಶ್ಚ ಗ್ರಂಥತತ್ತ್ವಸಂಶೋಧಕಾಃ ಇತ್ಯಮವಯಂತಿ -

(ಅ) ಗೌಡಪಾದಗ್ರಂಥೇ ಯೋಗಾಚಾರಾಭಿಖ್ಯವಿಜ್ಞಾನವಾದ್ಯಭಿಮತೈವ "ವಿಜ್ಞಪ್ತಿಮಾತ್ರತಾ" ನಾಮ ಚಿತ್ತಾವಸ್ಥಾ ನಾಮಾಂತರೇಣ ಸ್ವೀಕೃತಾ -
Agama Sastra, Intro. pp, cxxxii onwards,

ಇತಿ ವಿಧುಶೇಖರಭಟ್ಟಾಚಾರ್ಯಾಃ ||

(ಆ) ಅದ್ವೈತಿನಾಂ ಪರಮಾರ್ಥವ್ಯವಹಾರದೃಷ್ಟಿವಿಭಾಗಸ್ವೀಕರಣಂ ಮಾಧ್ಯಮಿಕಾನಾಂ ಸಂವೃತಿಪರಮಾರ್ಥಸತ್ಯವಿಭಾಗಸರಣಿಮ್ ಅನುಹರತಿ | ನಾಗಾರ್ಜುನಶಿಷ್ಟಂ ಶೂನ್ಯಂ ಶಂಕರಾಚಾರ್ಯೋಪದಿಷ್ಟಂ ನಿರ್ಗುಣಂ ಬ್ರಹ್ಮ ಚ ಭೂಯಶಃ ಸಮಾನಧರ್ಮಕೇ - Indian Philosophy, Vol. I.

ಇತಿ ಪ್ರೊಫೆಸರ್ ರಾಧಾಕೃಷ್ಣನ್ ಮಹೋದಯಃ ||

---

ಶೂನ್ಯಾಧಿಕರಣದಲ್ಲಿ ಮಧ್ವರು (ವೇ.ಸೂ. ೨-೨-೮-೨೮). ಆಧುನಿಕ ಆಂಗ್ಲ ಶಿಕ್ಷಣದಿಂದ ಸಂಸ್ಕಾರಗೊಂಡ ಬುದ್ಧಿಯವರಾದ ಗ್ರಂಥತತ್ವಶೋಧಕರೂ ಈ ರೀತಿ ಇಲ್ಲಿ ತಿಳಿಯುತ್ತಾರೆ -

(ಅ) ಗೌಡಪಾದರ ಗ್ರಂಥದಲ್ಲಿ ಯೋಗಾಚಾರವೆಂಬ ಹೆಸರುಳ್ಳ ವಿಜ್ಞಾನವಾದಿಗೆ ಒಪ್ಪಿಗೆಯಾದ "ವಿಜ್ಞಪ್ತಿ ಮಾತ್ರವಾಗಿರುವುದೆಂಬ" ಹೆಸರಿನ ಚಿತ್ತಾವಸ್ಥೆಯನ್ನೇ ಬೇರೊಂದು ಹೆಸರಿನಿಂದ ಸ್ವೀಕರಿಸಿರುತ್ತದೆ. (ಆಗಮಶಾಸ್ತ್ರ-ಪೀಠಿಕಾ) ಎಂದು ವಿಧುಶೇಖರಭಟ್ಟಾಚಾರ್ಯರು.

(ಆ) ಅದ್ವೈತಿಗಳು ಪರಮಾರ್ಥ, ವ್ಯವಹಾರ ಎಂಬ ಬೇರೆ ಬೇರೆ ದೃಷ್ಟಿಯನ್ನು ಸ್ವೀಕರಿಸಿರುವುದು, ಬೌದ್ಧರ ಸಂವೃತ್ತಿ, ಪರಮಾರ್ಥಸತ್ಯವೆಂಬ ವಿಭಾಗದ ಸರಣಿಯನ್ನು ಅನುಸರಿಸುತ್ತದೆ. ನಾಗಾರ್ಜುನನು ಹೇಳಿದ ಶೂನ್ಯವೂ ಶಂಕರಾಚಾರ್ಯರು ಹೇಳಿದ ನಿರ್ಗುಣಬ್ರಹ್ಮವೂ ಬಹಳ ಮಟ್ಟಿಗೆ ಸಮಾನ-ಧರ್ಮದ್ದೇ ಆಗಿದೆ. (ಇಂಡಿಯನ್ ಫಿಲಾಸಫಿ ಸೈಪಿಡಿ -೧, ಪುಟ ೬೦೮) ಎಂದು ಪ್ರೊಫೆಸರ್ ರಾಧಾಕೃಷ್ಣಮಹೋದಯರು ಹೇಳುತ್ತಾರೆ.

(೩) ಗೌಡಪಾದಾಚಾರ್ಯಾಃ ಸಂಭವತಃ ಸ್ವಯಮಪಿ ಸೌಗತಾ ಏವ ಸ್ಯುಃ ತೇ ಚ ಔಪನಿಷದದರ್ಶನಂ ಹಿ ಸೌಗತದರ್ಶನೇನ ಸಾಮ್ಯಂ ಧತ್ತೇ ಇತ್ಯನುಮನ್ವತೇ:-
History of Indian Philosophy, Vol. I, p. 423.

ಇತಿ ದಾಸಗುಪ್ತಮಹಾಶಯಃ ||

ತದೇತೇಷಾಮಪಿ ಮತೇನ ಶಾಂಕರಸಂಪ್ರದಾಯೋ ನಾನಾದಿಕಾಲಪ್ರವೃತ್ತಃ ||

ತದ್ ಯಾವದ್ ಬೌದ್ಧವೇದಾಂತದರ್ಶನಯೋಃ ಪರಸ್ಪರವೈಲಕ್ಷಣ್ಯ-ಪ್ರದರ್ಶನಪೂರ್ವಕಮುಕ್ತಶಂಕಾ ನ ನಿವಾರ್ಯತೇ, ತಾವದತೀತಕಿರಣೇಷು ಪ್ರತಿಪಾದಿತಮಪಿ ಭಗವತ್ಪಾದಪ್ರಸ್ಥಾನಸ್ಯ ಸರ್ವವೇದಾಂತಸಂಮತಪ್ರಕ್ರಿಯಾವತ್ತ್ವಂ ನ ಸುಪ್ರತಿಷ್ಠಂ ಭವೇತ್ | ಅತಃ ಪುನರಾಕ್ಷೇಪಃ ಕ್ರಿಯತೇ "ಕಥಂ ಶ್ರದ್ದಧ್ಯಾಮ ಇಯಮೇವ ಪ್ರಕ್ರಿಯಾ ವೇದಾಂತಸಂಪ್ರದಾಯಗತಾ ಇತಿ ?" ಇತಿ ||

**೫೪. ವೇದಾಂತಪ್ರಸ್ಥಾನೇ ಸೌಗತಮತಗಂಧಿತಾಶಂಕಾ** - ಅತ್ರ ಗೌಡಪಾದಾಸ್ತಾವತ್ ಸ್ವೀಯಪ್ರಕ್ರಿಯಾಯಾಂ ಕಥಂ ವಿಜ್ಞಾನವಾದಶೂನ್ಯವಾದ-

---

(೩) ಗೌಡಪಾದಾಚಾರ್ಯರು ತಾವೂ ಕೂಡ ಬೌದ್ಧರೇ ಆಗಿರುತ್ತಾರೆಂದು ಊಹಿಸಬಹುದಾಗಿದೆ. ಅವರು ಔಪನಿಷತ್ತಿನ ದರ್ಶನವು, ಬೌದ್ಧದರ್ಶನ-ದೊಡನೆ ಸಮಾನತೆಯನ್ನು ಹೊಂದುತ್ತದೆ ಎಂದು ಒಪ್ಪುತ್ತಾರೆ. (ಭಾರತೀಯ ಫಿಲಾಸಫಿಯ ಇತಿಹಾಸ) ಕೈಪಿಡಿ – ೧, ಪುಟ ೪೨೩ ಎಂದು ದಾಸಗುಪ್ತರು ಹೇಳಿರುತ್ತಾರೆ.

ಆದ್ದರಿಂದ ಇವರೆಲ್ಲರ ಅಭಿಪ್ರಾಯದಂತೆ ಶಾಂಕರಸಂಪ್ರದಾಯವು ಅನಾದಿಕಾಲದಿಂದ ಬಂದದ್ದಲ್ಲ (ಎಂದು ಗೊತ್ತಾಗುತ್ತದೆ). ಆದ್ದರಿಂದ ಎಲ್ಲಿಯವರೆಗೆ ಬೌದ್ಧ ಮತ್ತು ವೇದಾನ್ತದರ್ಶನಗಳಿಗೆ ಪರಸ್ಪರ ವೈಲಕ್ಷಣ್ಯವನ್ನು ತೋರಿಸುವುದರ ಮೂಲಕ ಮೇಲೆ ಹೇಳಿದ ಸಂದೇಹವನ್ನು ತೆಗೆದು-ಹಾಕುವುದಿಲ್ಲವೋ ಅಲ್ಲಿಯವರೆಗೆ – ಹಿಂದಿನ ಕಿರಣಗಳಲ್ಲಿ ಭಗವತ್ಪಾದರ ಪ್ರಸ್ಥಾನವು ಎಲ್ಲಾ ವೇದಾನ್ತಗಳಿಗೂ ಒಪ್ಪಿಗೆಯಾದ ಪ್ರಕ್ರಿಯೆಯಾದದ್ದೆಂದು ತಿಳಿಸಿದ್ದಾದರೂ ಸ್ಥಿರವಾಗಿ ನಿಲ್ಲುವುದಿಲ್ಲ. ಆದ್ದರಿಂದ ಮತ್ತೊಮ್ಮೆ ಆಕ್ಷೇಪವನ್ನು ಮಾಡಲಾಗುತ್ತದೆ. ಹೇಗೆಂದರೆ ಈ ಪ್ರಕ್ರಿಯೆಯೇ ವೇದಾನ್ತಸಂಪ್ರದಾಯ-ದಿಂದ ಬಂದದ್ದೆಂದು ಹೇಗೆ ನಾವು ನಂಬೋಣ? ಎಂದು (ಆಕ್ಷೇಪ).

ಸಂಮತಾನಭಿಪ್ರಾಯಾನ್ ವೇದಾಂತವಾದತ್ವೇನಾಭಿನೀಯ ದರ್ಶಯಂತಿ ? - ಇತ್ಯೇತದ್ ಪೂರ್ವಪಕ್ಷಿಮತೇನ ಕಿಂಚಿದುಪಪ್ರದರ್ಶ್ಯತೇ | ಪ್ರಥಮಂ ತಾವನ್ಮಾಧ್ಯಮಿಕ-ಮತಾಭಿನಯಃ -

(೧) ಅನಿರೋಧಮನುತ್ಪಾದಮನುಚ್ಛೇದಮಶಾಶ್ವತಮ್ |
ಅನೇಕಾರ್ಥಮನಾನಾರ್ಥಮನಾಗಮಮನಿರ್ಗಮಮ್ ||
ಯಃ ಪ್ರತೀತ್ಯ ಸಮುತ್ಪಾದಂ ಪ್ರಪಂಚೋಪಶಮಂ ಶಿವಮ್ |
ದೇಶಯಾಮಾಸ ಸಂಬುದ್ಧಸ್ತಂ ವಂದೇ ವದತಾಂ ವರಮ್ || ಮಾ.ಕಾ.ವೃ.

ನ ಬಧ್ಯಂತೇ ನ ಮುಚ್ಯಂತೇ ಉದಯವ್ಯಯಧರ್ಮಿಣಃ |
ಸಂಸ್ಕಾರಾಃ ಪೂರ್ವವತ್ ಸತ್ತ್ವೋ ಬಧ್ಯತೇ ನೈವ ಮುಚ್ಯತೇ || ಮಾ.ಕಾ. ೧೬-೫.

ಇತಿ ನಾಗಾರ್ಜುನಕೃತಮಧ್ಯಮಿಕಕಾರಿಕಾಪ್ರಾರಂಭಶ್ಲೋಕೌ ತತ್ರಾಕ್ಷರಸಾಮ್ಯಮಪ್ಯನು-ರುಂಧಾನಾ ಗೌಡಪಾದಾಃ ಕಾರಿಕಾಂ ನ್ಯಭಾಂತ್ಸುಃ -

---

**೫೪) ವೇದಾನ್ತಪ್ರಸ್ಥಾನದಲ್ಲಿ ಬೌದ್ಧಮತದ ವಾಸನೆ ಇದೆ ಎಂಬ ಸಂದೇಹವು.** ಮೊಟ್ಟಮೊದಲನೆಯದಾಗಿ ಗೌಡಪಾದರು ತಮ್ಮ ಪ್ರಕ್ರಿಯೆಯಲ್ಲಿ ವಿಜ್ಞಾನವಾದಕ್ಕೂ ಶೂನ್ಯವಾದಕ್ಕೂ ಒಪ್ಪಿಗೆಯಾದ ಅಭಿಪ್ರಾಯಗಳನ್ನು ವೇದಾನ್ತವಾದವಾಗಿ ತಂದು ತೋರಿಸಿರುತ್ತಾರೆ ಎಂಬುದು ಹೇಗೆ? ಎಂಬುದನ್ನು ಪೂರ್ವಪಕ್ಷಿಯ ಅಭಿಪ್ರಾಯದಂತೆ ಇಲ್ಲಿ ಸ್ವಲ್ಪ ತೋರಿಸಲಾಗುತ್ತದೆ. ಮೊಟ್ಟಮೊದಲು ಮಾಧ್ಯಮಿಕ ಮತದವರ ಶಾಸ್ತ್ರಾಭಿಪ್ರಾಯವು (ಹೀಗಿದೆ)–

(೧) ಪ್ರಳಯವಿಲ್ಲ, ಉತ್ಪತ್ತಿ ಇಲ್ಲ, ನಾಶವಿಲ್ಲ, ಶಾಶ್ವತವಿಲ್ಲ, ಏಕಾರ್ಥ-ವಿಲ್ಲ, ನಾನಾರ್ಥವೂ ಇಲ್ಲ, ಬರುವುದಿಲ್ಲ, ಹೋಗುವುದಿಲ್ಲ. ಯಾವ ದೇಶಿಕನು ಒಂದರ ಅಪೇಕ್ಷೆಯಿಂದ ಹುಟ್ಟು ಎಂಬುದಾಗುತ್ತದೆ ಎಂದು ತಿಳಿದವನಾದನೋ ಆತನು ವಾಗ್ಮಿಗಳಲ್ಲಿ ಶ್ರೇಷ್ಠನಾದವನು. (ಆತನನ್ನು) ನಮಸ್ಕರಿಸುವೆನು. (ಮಾ.ಕಾ.ವೃ. ೩–೪).

ಹುಟ್ಟು ನಾಶ ಸ್ವಭಾವದ್ದಾದ ಸಂಸ್ಕಾರಗಳು ಬದ್ಧವೂ ಆಗುವುದಿಲ್ಲ ಬಿಡುಗಡೆಯನ್ನೂ ಹೊಂದುವುದಿಲ್ಲ. ಮೊದಲಿನಂತೆ ಅಂತಃಕರಣವು (ಜೀವವು) ಬದ್ಧವೂ ಆಗುವುದಿಲ್ಲ, ಬಿಡುಗಡೆಯನ್ನೂ ಹೊಂದುವುದಿಲ್ಲ(ಮಾ.ಕಾ. ೧೬–೫).

(೧) ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕಃ | ನ ಮುಮುಕ್ಷುರ್ನ
ವೈ ಮುಕ್ತ ಇತ್ಯೇಷಾ ಪರಮಾರ್ಥತಾ || ಗೌ.ಕಾ. ೨-೩೨.

ಇತಿ | ತಥಾ -

(೨) ಯಥಾ ಮಾಯಾ ಯಥಾ ಸ್ವಪ್ನೋ ಗಂಧರ್ವನಗರಂ ಯಥಾ |
ತಥೋತ್ಪಾದಸ್ತಥಾ ಸ್ಥಾನಂ ತಥಾ ಭಂಗ ಉದಾಹೃತಃ || ಮ.ಕಾ. ೭-೩೪.

ಇತಿ ಮಾಧ್ಯಮಿಕಃ | ಏವಮೇವ ಗೌಡಪಾದಾಚಾರ್ಯೈರಪಿ -

ಸ್ವಪ್ನಮಾಯೇ ಯಥಾ ದೃಷ್ಟೇ ಗಂಧರ್ವನಗರಂ ತಥಾ | ತಥಾ ವಿಶ್ವಮಿದಂ ದೃಷ್ಟಂ
ವೇದಾಂತೇಷು ವಿಚಕ್ಷಣೈಃ || ಗೌ.ಕಾ. ೨-೩೧.

ಇತಿ ವಿಶ್ವಸ್ಯ ಸ್ವಪ್ನಮಾಯಾಸಮತ್ವಂ ವರ್ಣಿತಮ್ ||

ತಥಾ ಕಾರ್ಯಕಾರಣನಿರಾಸಾರ್ಥಮ್ -

---

ಈ ರೀತಿಯಾಗಿ ನಾಗಾರ್ಜುನನು ಮಾಡಿದ್ದಾದ ಮಧ್ಯಮ ಕಾರಿಕೆಯ ಪ್ರಾರಂಭ ಶ್ಲೋಕಗಳು ಯಾವವುವಿವೆ ಅವುಗಳ, ಅಕ್ಷರದ ಹೋಲಿಕೆಯನ್ನು ಹೊಂದಿದ್ದಾದ ಶ್ಲೋಕಗಳನ್ನು ಗೌಡಪಾದರು ಕಾರಿಕೆಯನ್ನಾಗಿ ರಚಿಸಿರುತ್ತಾರೆ. (೧) "ನಾಶವಿಲ್ಲ, ಉತ್ಪತ್ತಿ ಇಲ್ಲ, ಬದ್ಧನಿಲ್ಲ, ಸಾಧಕನಿಲ್ಲ, ಮುಮುಕ್ಷುವಿಲ್ಲ ಮುಕ್ತನಿಲ್ಲ ಎಂಬುದೇ ಪರಮಾರ್ಥವಾದದ್ದು" (ಗೌ.ಕಾ. ೨-೩೨).

ಹಾಗೆಯೇ (೨) "ಮಾಯೆ, ಸ್ವಪ್ನ ಗಂಧರ್ವನಗರವು ಹೇಗೋ, ಹಾಗೆಯೇ ಹುಟ್ಟು ಸ್ಥಿತಿ ನಾಶವೆಂಬುದು ತಿಳಿದುಬಂದಿದೆ." (ಮ.ಕಾ. ೭-೩೪) ಎಂದು ಮಾಧ್ಯಮಿಕ ಶ್ಲೋಕವಿದೆ. ಹೀಗೆಯೇ ಗೌಡಪಾದರೂ ಸಹ – "ಸ್ವಪ್ನ ಮಾಯೆಗಳು ಹೇಗೆ ಕಂಡಿವೆಯೋ ಗಂಧರ್ವನಗರವು ಹೇಗಿದೆಯೋ, ಹಾಗೆಯೇ ಈ ವಿಶ್ವವು ಇರತಕ್ಕದ್ದೆಂದು ವೇದಾನ್ತದಲ್ಲಿ ಪಂಡಿತರಾದವರು ಕಂಡು–ಕೊಂಡಿರುತ್ತಾರೆ" (ಗೌ.ಕಾ. ೨–೩೧) ಎಂದು ವಿಶ್ವವು ಸ್ವಪ್ನಮಾಯೆಗೆ ಸಮವೆಂದು ಹೇಳಿರುತ್ತಾರೆ, ಹಾಗೆಯೇ ಕಾರ್ಯಕಾರಣವನ್ನು ಅಲ್ಲಗಳೆ–ಯುವುದಕ್ಕಾಗಿ–

(೩) ನ ಸ್ವತೋ ನಾಪಿ ಪರತೋ ನ ದ್ವಾಭ್ಯಾಂ ನಾಪ್ಯಹೇತುತಃ |
ಉತ್ಪನ್ನಾ ಜಾತು ವಿದ್ಯಂತೇ ಭಾವಾಃ ಕ್ವಚನ ಕೇಚನ || ಮಾ.ಅಕಾ. ೧-೧.
ನ ಸನ್ನಾಸನ್ನ ಸದಸನ್ ಧರ್ಮೋ ನಿರ್ವರ್ತತೇ ಯದಾ |
ಕಥಂ ನಿರ್ವರ್ತಕೋ ಹೇತುರೇವಂ ಸತಿ ಹಿ ಯುಜ್ಯತೇ ||ಮಾ.ಕಾ. ೧-೭.

ಇತಿ ನಾಗಾರ್ಜುನಃ | ಗೌಡಪಾದಾಚಾರ್ಯಾ ಅಪಿ -

ಸ್ವತೋ ವಾ ಪರತೋ ವಾಪಿ ನ ಕಿಂಚಿದ್ ವಸ್ತು ಜಾಯತೇ |
ಸದಸತ್ ಸದಸದ್ವಾಪಿ ನ ಕಿಂಚಿದ್ ವಸ್ತು ಜಾಯತೇ || ಗೌ.ಕಾ. ೪-೨೨.

ಇತಿ ವದಂತಿ ||

(೪) ಅನ್ಯತೋ ನಾಪಿ ಚಾಯಾತಂ ನ ತಿಷ್ಠತಿ ನ ಗಚ್ಛತಿ |
ನಾಯಾತಃ ಕೋ ವಿಶೇಷೋಽಸ್ಯ ಯನ್ಮೂರ್ಖೈಃ ಸತ್ಯತಃ ಕೃತಮ್ ||ಬೋ.ಚ. ೯-೧೪೩.

ಇತಿ ವಿಜ್ಞಾನವಾದಿನಃ | ಏವಮೇತೇಽಪ್ಯಾಚಾರ್ಯಾಃ -

---

(೩) ಯಾವ ವಸ್ತುವೂ ತನ್ನಿಂದಲಾಗಲೀ ಮತ್ತೊಂದರಿಂದಲಾಗಲೀ ಎರಡರಿಂದಲೂ ಆಗಲೀ, ಮತ್ತು ಕಾರಣವಿಲ್ಲದೆಯೂ ಆಗಲೀ ಎಲ್ಲೂ ಯಾವುದೂ ಉತ್ಪನ್ನವಾದದ್ದಾಗಿರುವುದಿಲ್ಲ (ಮಾ.ಕಾ.೧-೧).

ಇರುವ, ಇಲ್ಲದಿರುವ, ಇದ್ದೂ ಇಲ್ಲದಿರುವ ಯಾವುದೊಂದು ವಸ್ತುವೂ ಉಂಟಾಗುವಂತೆ ಇಲ್ಲವೆಂದು ಯಾವಾಗ ಆಯಿತೋ, ಆಗ ಕಾರ್ಯವನ್ನುಂಟುಮಾಡುವ ಹೇತುವು ಇದೆ ಎಂಬುದು ಹೇಗೆ ತಾನೆ ಯುಕ್ತವಾದೀತು? (ಗೌಡಪಾದಹೃದಯದಪುಟದ ಸಂಖ್ಯೆ: ೩೩೭)

ಸತ್ತಾಗಿಯಾಗಲೀ ಅಸತ್ತಾಗಿಯಾಗಲೀ ಸದಸತ್ತಾಗಿಯಾಗಲೀ ಯಾವಾಗ ಪದಾರ್ಥವು ಉಂಟಾಗುವುದೆಂಬುದಿಲ್ಲವೋ, ಆಗ ಅವನ್ನುಂಟುಮಾಡುವ ಹೇತುವಾದರೂ ಹೇಗೆತಾನೆ ಹೊಂದುತ್ತದೆ (ಮಾ.ಕಾ. ೧-೭) ಎಂದು ನಾಗಾರ್ಜುನನು ಹೇಳಿರುತ್ತಾನೆ.

ಗೌಡಪಾದಾಚಾರ್ಯರೂ ಸಹ – "ತನ್ನಿಂದಲಾಗಲೀ ಮತ್ತೊಂದರಿಂದಲಾಗಲೀ ಯಾವುದೊಂದು ವಸ್ತುವೂ ಹುಟ್ಟುವುದಿಲ್ಲ". ಇರುವುದಾಗಲಿ ಇಲ್ಲದ್ದಾಗಲಿ ಇದ್ದೂ ಇಲ್ಲದ್ದಾಗಲೀ ಯಾವ ವಸ್ತುವೂ ಹುಟ್ಟುವುದಿಲ್ಲ (ಗೌ.ಕಾ. ೪–೨೨) ಎಂದಿರುತ್ತಾರೆ.

ನ ನಿರ್ಗತಾಸ್ತೇ ವಿಜ್ಞಾನಾದ್ ದ್ರವ್ಯತ್ವಾಭಾವಯೋಗತಃ |
ಕಾರ್ಯಕಾರಣತಾಭಾವಾದ್ ಯತೋಽಚಿಂತ್ಯಾಃ ಸದೈವ ತೇ|| ಗೌ.ಕಾ. ೪-೫೨.

ಇತಿ ಲಿಖಂತಿ ||

(೫) ಅಭೂತಪರಿಕಲ್ಪೋಽಸ್ತಿ ದ್ವಯಂ ತತ್ರ ನ ವಿದ್ಯತೇ |
ಶೂನ್ಯತಾ ವಿದ್ಯತೇ ತತ್ರ ತಸ್ಯಾಮಪಿ ಸ ವಿದ್ಯತೇ || ಮ.ವಿ.೧.

ಇತಿ ವಿಜ್ಞಾನವಾದೀ | ಆಚಾರ್ಯಾ ಅಪ್ಯಾಹುಃ -

(೬) ಅಭೂತಾಭಿನಿವೇಶೋಸ್ತಿ ದ್ವಯಂ ತತ್ರ ನ ವಿದ್ಯತೇ || ಗೌ.ಕಾ. ೪-೭೫.

ಇತಿ | ವಿಸ್ಪಷ್ಟಂ ಚ ಚಿತ್ತಮಾತ್ರತಾಮಾಹುಃ ಕಾರಿಕಾಂತರೇ -

---

(೪) ಮತ್ತೊಂದು ಕಡೆಯಿಂದಲೂ ಬಂದಿರುವುದಿಲ್ಲ, ಹಾಗೆಯೇ ನಿಲ್ಲುವುದಿಲ್ಲ ಹೋಗುವುದೂ ಇಲ್ಲ. (ಹೀಗೆ ವಸ್ತುವು) ಬಂದಿಲ್ಲವೆಂದಾದಾಗ ಮಾಯೆಗೂ ಇದಕ್ಕೂ ವಿಶೇಷವಾದರೂ ಏನು? ಯಾವುದನ್ನು ಮೂಢರು ನಿಜವೆಂದಾಗಿ ಮಾಡಿರುವರೋ (ಆದರಲ್ಲಿ ವಿಶೇಷವು ಹೇಗೆ?) (ಬೋ.ಚ – ೯–೧೪೩) ಎಂದು ವಿಜ್ಞಾನವಾದಿಗಳು. ಹೀಗೆಯೇ ಈ (ಗೌಡಪಾದ) ಆಚಾರ್ಯರೂ ಸಹ, (ಭಾವಗಳು) ವಿಜ್ಞಾನದಿಂದ ಬಂದವುಗಳಲ್ಲ, ಏಕೆಂದರೆ ದ್ರವ್ಯತ್ವವೆಂಬುದೇ ಇದಕ್ಕೆ ಹೊಂದುವುದಿಲ್ಲ. ಆದ್ದರಿಂದ ಅವುಗಳಿಗೆ ಕಾರ್ಯಕಾರಣಭಾವವನ್ನು ಯಾವಾಗಲೂ ಯೋಚಿಸುವುದಕ್ಕೂ ಆಗುವುದಿಲ್ಲ. (ಗೌ.ಕಾ. ೪–೫೨) ಎಂದು ಬರೆಯುತ್ತಾರೆ.

(೫) ಇಲ್ಲದ ವಸ್ತುವಿನ ಕಲ್ಪನೆ ಇರುತ್ತದೆ. ಅಲ್ಲಿ ದ್ವೈತವಿರುವುದಿಲ್ಲ. ಅಲ್ಲಿ ಶೂನ್ಯವೇ ಇರುತ್ತದೆ. ಆದರಲ್ಲೂ (ಅಭೂತಕಲ್ಪನೆ ಇದೆ) (ಮಾ.ವಿ. ೧). ಎಂದು ವಿಜ್ಞಾನವಾದಿಯು (ಹೇಳುತ್ತಾನೆ). ಆಚಾರ್ಯರೂ ಕೂಡ (ಹೀಗೆ) ಹೇಳುತ್ತಾರೆ.

ಅಭೂತವಾದ (ಇಲ್ಲದಿರುವ ವಸ್ತುವಿನಲ್ಲಿ) ಹಟ ಮಾತ್ರವಿದೆ. ದ್ವೈತವು ಅಲ್ಲಿರುವುದಿಲ್ಲ (ಗೌ.ಕಾ. ೪–೭೫). ಇನ್ನೊಂದು ಕಾರಿಕೆಯಲ್ಲಿ ಸ್ಪಷ್ಟವಾಗಿ ಚಿತ್ತವಷ್ಟೇ ಎಂದಿರುತ್ತಾರೆ. "ಗ್ರಾಹ್ಯಗ್ರಾಹಕರೂಪವಾದದ್ದೆಲ್ಲವೂ ಚಿತ್ತ-ಸ್ಪಂದನಮಾತ್ರವೇ, ಚಿತ್ತವೂ ನಿರ್ವಿಷಯವೆಂಬುದಾಗಿಯೇ ಇರುವಂಥದ್ದು.

(೮) ಚಿತ್ತಸ್ಪಂದಿತಮೇವೇದಂ ಗ್ರಾಹ್ಯಗ್ರಾಹಕಲಕ್ಷಣಮ್ |
ಚಿತ್ತಂ ನಿರ್ವಿಷಯಂ ನಿತ್ಯಮಸಂಗಂ ತೇನ ಕೀರ್ತಿತಮ್ || ಗೌ.ಕಾ. ೪-೭೨.

ಇತಿ ||

ತದೇವಂ ತತ್ರ ತತ್ರ ಮಾಹಾಯಾನಿಕಪಕ್ಷ ಏವ ಶಬ್ದತೋಽರ್ಥಶ್ಚ ಸಮನೂದಿತೋ ಗೌಡಪಾದಾಚಾರ್ಯೈಃ | ತಥಾ ಚ ಪ್ರಚ್ಛನ್ನಬೌದ್ಧಾ ಇಮೇ ಇತಿ ನಾಯಮಯುಕ್ತೋಽಭಿಯೋಗಃ ಪರಪ್ರಾಸ್ಥಾನಿಕಾನಾಮಿತಿ ಭಾತಿ | ತತ್ರ ಕಥಮಿಮಾಂ ಭಗವತ್ಪಾದಪ್ರಕ್ರಿಯಾಂ ಗೌಡಪಾದಸಂಪ್ರದಾಯಾಗತಾಂ ವೇದಾಂತಾನುಮತತ್ವೇನ ಸ್ವೀಕುರ್ಮಃ ?- ಇತಿ ಜಿಜ್ಞಾಸವಃ ಕೇಚನ ಶಂಕೇರನ್ ||

**೫೫. ಕಾರಿಕಾಣಾಂ ಸಾಂಪ್ರದಾಯಿಕತ್ವೇ ಸಂಭಾವನಾಯುಕ್ತಿಃ** - ಯದ್ಯಪಿ ಪ್ರತಿಪಾದಿತಮೇವೇದಂ ಪ್ರಾಕ್ ಶ್ರುತಿಯುಕ್ತ್ಯನುಭವಸಂಗಾನೇನ ಇಯಮೇವೈಕಾ ಪ್ರಕ್ರಿಯಾ ಶ್ರೌತೀತಿ, ತಥಾಪಿ ಪರತಂತ್ರಪ್ರಜ್ಞಾಃ ಶ್ರುತ್ಯರ್ಥಂ ಸ್ವಯಂ ನಿರ್ಣೇತುಮಸಮರ್ಥಾ ಯಥಾಪ್ರತಿಪಾದಿತೇಽರ್ಥೇ ಶ್ರದ್ಧಾಂ ನ ಬಧ್ನಂತಿ ಯಾವದಸ್ಯಾಂ

---

ಅದು ಯಾವಾಗಲೂ ಅಸಂಗವೆಂಬುದಾಗಿ ಹೇಳಲ್ಪಟ್ಟಿದೆ. (ಗೌ.ಕಾ. ೪-೭೨). ಈ ರೀತಿಯಾಗಿ ಮಹಾಯಾನಿಕ ಪಕ್ಷವನ್ನೇ ಕೆಲವು ಕಡೆ ಶಬ್ದದಿಂದಲೂ ಮತ್ತೆ ಕೆಲವು ಕಡೆ ಅರ್ಥದಿಂದಲೂ ಗೌಡಪಾದರು ಅನುವಾದಮಾಡಿರುತ್ತಾರೆ. ಆದ್ದರಿಂದಲೇ ಅವರನ್ನು ಪ್ರಚ್ಛನ್ನಬೌದ್ಧರೆಂಬುದಾಗಿ ಆರೋಪವನ್ನು ಬೇರೆ ಪ್ರಸ್ಥಾನದವರು ಮಾಡಿರುತ್ತಾರೆ. ಇದನ್ನು ಸರಿಯಲ್ಲವೆನ್ನುವುದಕ್ಕಾಗುವುದಿಲ್ಲ.

ಹೀಗಿರುವಾಗ ಹೇಗೆ ಈ ಭಗವತ್ಪಾದರ ಪ್ರಕ್ರಿಯೆಯನ್ನು ಗೌಡಪಾದರ ಸಂಪ್ರದಾಯದಲ್ಲಿ ಬಂದದ್ದೆಂತಲೂ ವೇದಾನ್ತಗಳಿಗೆ ಅನುಗುಣವಾದದ್ದೆಂದು ಸ್ವೀಕರಿಸೋಣ? ಎಂದು ಕೆಲವು ಜಿಜ್ಞಾಸುಗಳು ಸಂದೇಹಪಡುತ್ತಾರೆ.

**೫೫) ಕಾರಿಕೆಗಳು ಸಾಂಪ್ರದಾಯಿಕವಾಗಿವೆ ಎಂಬುದಕ್ಕೆ ಸಂಭಾ-ವನಾಯುಕ್ತಿ ಇದೆ.** ಈ ವಿಚಾರವನ್ನು ಹಿಂದೆಯೇ ಶ್ರುತಿಯುಕ್ತ್ಯನುಭವಗಳನ್ನು ಹೊಂದಿಸುವುದರ ಮೂಲಕ ಈ ಒಂದು ಪ್ರಕ್ರಿಯೆಯೇ ಶ್ರುತ್ಯುಕ್ತವಾದದ್ದು ಎಂದು ತಿಳಿಸಿದ್ದರೂ ಇನ್ನೊಬ್ಬರ ತಿಳಿವಳಿಕೆಯನ್ನು ಅನುಸರಿಸುವವರಾದ ಸಾಮಾನ್ಯ ಜನರಿಗಾಗಿ ಹೇಳಿದ್ದು. (ಅವರು) ತಾವು ಸ್ವತಃ ನಿರ್ಣಯವನ್ನು ಮಾಡುವುದಕ್ಕೆ ಸಮರ್ಥರಾಗದೇ ಇರುವವರಾಗಿರುತ್ತಾರೆ. ಅವರಿಗೆ ಈ

ಸೌಗತಮತಗಂಧಿತಾ ಕೈಶ್ಚಿದ್ಭಾಷ್ಯಕಾರೈರ್ಗ್ರಂಥತತ್ತ್ವಶೋಧಕೈಶ್ಚಾಪಾದಿತಾ ನಾಪನೋದ್ಯತೇ | ಅತಸ್ತಾದೃಶಜಿಜ್ಞಾಸುಜನೋಪಸಂಗ್ರಹಾರ್ಥಂ ಯತ್ನಃ ಕರ್ತವ್ಯಃ ||

ತತ್ರ ಬ್ರೂಮಃ | ಉದಾಹೃತಾ ಏವ ಸಂಪ್ರದಾಯವಿದೋಽನ್ಯೇ ಯೇ ಇಮಾಮೇವ ಪ್ರಕ್ರಿಯಾಮ್ ಆಲಂಬ್ಯ ವೇದಾರ್ಥಂ ನಿರಣೈಷುಃ | ಸ್ಥಿತೇಷು ಚ ಪ್ರಾಚೀನೇಷು ಸಂಪ್ರದಾಯವಿದಾಂ ವಚನೇಷು ನಾಕಸ್ಮಾತ್ ಅದ್ವೈತವಿದ್ವೇಷಿಣಾಮ್ ಅಧುನಾತನಪ್ರಸ್ಥಾನಾವಲಂಬಿನಾಂ ವಚನೇ ಪಕ್ಷಪಾತೋ ಯುಕ್ತಃ ಪರತಂತ್ರಪ್ರಜ್ಞಸ್ಯ| ಕಿಂಚ, ಸೌಗತೈರೇವ ತತ್ತ್ವಸಂಗ್ರಹಾದಿಗ್ರಂಥೇಷು ಶಾಂತರಕ್ಷಿತಾದಿಭಿಃ, ಔಪನಿಷದಮತಪರೀಕ್ಷಣೇ ಪ್ರವೃತ್ತೈರ್ಗೌಡಪಾದಕಾರಿಕೋಪಾತ್ತಂ ಮತಂ ವೇದಾಂತಿಮತತ್ವೇನೈವ ಸಮುದಾಹೃತಮ್ ಇತೀದಮಪಿ ಗಮಕಂ ಕಾರಿಕಾಣಾಂ ಸಾಂಪ್ರದಾಯಿಕಾರ್ಥಪ್ರತಿಪಾದಕತ್ವೇ | ನ ಹಿ ಸೌಗತಾಃ ಸ್ವಮತಾನುಕೂಲಾಭಿಪ್ರಾಯ-

---

ಮೇಲೆ ತೋರಿಸಿಕೊಟ್ಟ (ಶಾಂಕರ ಸಂಪ್ರದಾಯದ ಪ್ರಕ್ರಿಯೆಯಲ್ಲಿ) ವಿಷಯದಲ್ಲಿ ಶ್ರದ್ಧೆಯುಂಟಾಗುವುದಿಲ್ಲ. ಆದ್ದರಿಂದ ಎಲ್ಲಿಯವರೆಗೆ ಈ ಬೌದ್ಧರ ಮತಕ್ಕೆ ಒಪ್ಪಿಗೆಯಾದ ವಿಚಾರವನ್ನು – ಬೇರೆ ಕೆಲವು ಭಾಷ್ಯಕಾರರೂ ಮತ್ತು ಗ್ರಂಥತತ್ವಶೋಧಕರೂ ಸಹ ಆಕ್ಷೇಪವನ್ನು ಮಾಡಿರುತ್ತಾರೋ ಹಾಗೆಯೇ ಅವನ್ನು ನಾವು ಎಲ್ಲಿಯವರೆಗೆ ತೆಗೆದು ಹಾಕುವುದಿಲ್ಲವೋ ಅಲ್ಲಿಯವರೆಗೆ ಈ ಪ್ರಕ್ರಿಯೆಯಲ್ಲಿ ಸಾಮಾನ್ಯರಿಗೆ ಶ್ರದ್ಧೆಯುಂಟಾಗುವುದಿಲ್ಲ. ಆದ್ದರಿಂದ ಆ ತರಹದ ಜಿಜ್ಞಾಸುಜನರನ್ನು ಸನ್ಮಾರ್ಗದಲ್ಲಿ ಕೂಡಿ ಹಾಕುವುದಕ್ಕಾಗಿ ಪ್ರಯತ್ನವನ್ನು ಮಾಡುವೆವು.

ಇಲ್ಲಿ ಈಗ ಈ ವಿಷಯಕ್ಕೆ (ನಾವು) ಹೇಳುವೆವು – ಯಾರು ಈ ಪ್ರಕ್ರಿಯೆಯನ್ನೇ ಅವಲಂಬಿಸಿಕೊಂಡು ವೇದಾರ್ಥನಿರ್ಣಯವನ್ನು ಮಾಡಿದರೋ ಅಂತಹ ಸಂಪ್ರದಾಯಬಲ್ಲವರನ್ನು ನಾವು (ಈ ಹಿಂದೆಯೇ) ಉದಾಹರಿ-ಸಿದ್ದೇವೆ. ಪ್ರಾಚೀನರಾದ ಸಂಪ್ರದಾಯವನ್ನು ಬಲ್ಲವರ ವಚನವು (ಆಧಾರವಾಗಿ) ರುವಾಗ ಏನೂ ಕಾರಣವಿಲ್ಲದೇ ಪರತಂತ್ರಪ್ರಜ್ಞರಾದ ಸಾಮಾನ್ಯಜನರಿಗೆ, ಅದ್ವೈತದ್ವೇಷಿಗಳಾದ ಇತ್ತೀಚಿನ ಪ್ರಸ್ಥಾನವನ್ನು ಅವಲಂಬಿಸಿದವರಾದವರ ಮಾತಿನಲ್ಲಿ ಪಕ್ಷಪಾತವನ್ನು ಮಾಡುವುದು ಸರಿಯಲ್ಲ. ಮತ್ತೂ ಏನಂದರೆ ಶಾಂತರಕ್ಷಿತರೇ ಮೊದಲಾದವರಾದ ಬೌದ್ಧರು (ತಮ್ಮ) ತತ್ವಸಂಗ್ರಹವೇ ಮುಂತಾದ ಗ್ರಂಥಗಳಲ್ಲಿ ಉಪನಿಷನ್ಮತವನ್ನು ಪರೀಕ್ಷೆ ಮಾಡುವಾಗ

ವಂತಮೇವಾಚಾರ್ಯಂ ಪ್ರತಿವಾದಿಪಕ್ಷೇ ನಿವೇಶಯೇರನ್ ಇತಿ ಸಂಭಾವ್ಯತೇ | ಅಪಿ ಚ ಗೌಡಪಾದಕೃತಪ್ರಕರಣೇಷು ಪ್ರಥಮಮಾಗಮಪ್ರಕರಣಂ ರಾಮಾನುಜಾಚಾರ್ಯೈ-ರಾನಂದತೀರ್ಥೈಶ್ಚ ಶ್ರುತಿತ್ವೇನೈವ ಸ್ವೀಕೃತಂ ಭ್ರಾಂತ್ಯಾ ಇತಿ ಕಿರಣಾಂತರೇ ನಿದರ್ಶಿತಂ ಪ್ರಾಕ್(ದ್ವಿತೀಯಕಿರಣೇ) | ಅತಸ್ತಸ್ಮಿನ್ ಪ್ರಕರಣೇ ತಾವತ್ ಸೌಗತಮತಪ್ರವೇಶೋ ನ ಶಕ್ಯಶಂಕಃ | ಯದಿ ಹಿ ರಾಮಾನುಜಸಮಯೇ ತತ್ ಪ್ರಚ್ಛನ್ನಬೌದ್ಧಕೃತಿತ್ವೇನ ನಿಶ್ಚಿತಮಭವಿಷ್ಯತ್, ತತೋ ನೈವ ತೈಃ ಸ್ವಾಭಿಪ್ರಾಯೋಪಷ್ಟಂಭಕಪ್ರಮಾಣತ್ವೇ-ನಾಗ್ರಹೀಷ್ಯತ, ನ ಪ್ರಾಗೇವ ಶ್ರುತಿತ್ವೇನೇತಿ ಸ್ಪಷ್ಟಮ್ | ತಸ್ಮಾತ್, ಗೌಡಪಾದಾನಾಂ ವೇದಾಂತಸಂಪ್ರದಾಯವಿತ್ತ್ವೇನ ಸಾಕ್ಷಾದ್ ಭಗವತ್ಪಾದೈರ್ಭಾಷ್ಯೇ ಬಹುಮಾನಿತಾನಾಂ ಸರ್ವಥಾ ನಾಸ್ತಿ ಮತಾಂತರಪ್ರವೇಶಶಂಕಾಸಂಭಾವನಾ ಅರ್ವಾಚೀನಪ್ರಸ್ಥಾನಾಂತರೀಯ-ಭಾಷ್ಯಕಾರಮತೇನಾಪಿ | ಶ್ರೀಗೌಡಪಾದಾಚಾರ್ಯೈರ್ಮಾಂಡೂಕ್ಯೋಪನಿಷದ್ವ್ಯಾಖ್ಯಾನಿ

---

ಗೌಡಪಾದರಕಾರಿಕೆಯಲ್ಲಿ ಸ್ವೀಕರಿಸಿದ್ದಾದ ಮತವನ್ನು ವೇದಾಂತಿಗಳ ಮತವೆಂಬುದಾಗಿ ಸ್ವೀಕರಿಸಿರುವುದೆಂಬುದೇನಿದೆ ಇದು ಕಾರಿಕೆಗಳು ಸಾಂಪ್ರದಾಯಿಕವಾದ ಅರ್ಥವನ್ನೇ ಪ್ರತಿಪಾದನೆ ಮಾಡುತ್ತವೆ ಎಂಬುದಕ್ಕೆ (ಪ್ರಬಲವಾದ) ಪ್ರಮಾಣವಾಗಿದೆ. (ಗೌಡಪಾದರು ಪ್ರಚ್ಛನ್ನಬೌದ್ಧರಾಗಿದ್ದರೆ) ಬೌದ್ಧರು ತಮ್ಮ ಮತಕ್ಕೆ ಅನುಕೂಲವಾದ ಅಭಿಪ್ರಾಯವನ್ನುಳ್ಳ ಆಚಾರ್ಯರನ್ನೇ ಪ್ರತಿವಾದಿಯ ಪಕ್ಷದಲ್ಲಿಟ್ಟಿರುತ್ತಾರೆಂದು ಊಹಿಸುವುದಕ್ಕೆ ಆಗುವುದಿಲ್ಲ. ಇನ್ನೊಂದೇನೆಂದರೆ, ಗೌಡಪಾದರು ರಚಿಸಿದ್ದಾದ ಮೊದಲನೇಯದಾದ ಆಗಮಪ್ರಕರಣವನ್ನು ರಾಮಾನುಜಾಚಾರ್ಯರು ಮತ್ತು ಮಧ್ವಾಚಾರ್ಯರಿಬ್ಬರೂ ಭ್ರಾಂತರಾಗಿ (ಅದನ್ನು) ಶ್ರುತಿ ಎಂದೇ ಸ್ವೀಕರಿಸಿರುತ್ತಾರೆಂದು ಹಿಂದೆ ಬೇರೊಂದು ಕಿರಣದಲ್ಲಿ(೨ನೇ ಕಿರಣ) ನಾವು ತೋರಿಸಿಕೊಟ್ಟಿರುತ್ತೇವೆ. ಆದ್ದರಿಂದ ಆ ಪ್ರಕರಣದ ವಿಷಯದಲ್ಲಿ ಬೌದ್ಧರ ಮತ ಪ್ರವೇಶವಿದೆ ಎಂದು (ಅವರಿಗೂ) ಸಂದೇಹಿಸುವುದಕ್ಕೆ ಬರುವುದಿಲ್ಲ. ಅದೂ ಏನಾದರೂ ರಾಮಾನುಜರ ಕಾಲದಲ್ಲಿ ಪ್ರಚ್ಛನ್ನಬೌದ್ಧರ ಕೃತಿ ಎಂದು ನಿಶ್ಚಿತವಾಗಿದ್ದರೆ ಆಗ ಅವರು ತಮ್ಮ ಅಭಿಪ್ರಾಯಕ್ಕೆ ಪುಷ್ಟಿಕೊಡುವುದಕ್ಕೆ ಪ್ರಮಾಣವಾಗಿ ಉಪೋದ್ಬಲಕವಾಗಿ (ಅದನ್ನು) ಸ್ವೀಕರಿಸುತ್ತಿರಲಿಲ್ಲ. ಹಾಗೆಯೇ ಶ್ರುತಿ ಎಂತಲೂ ಇನ್ನೂ ಮುಂಚೆ ಸ್ವೀಕರಿಸುತ್ತಿರಲಿಲ್ಲ ಎಂಬುದು ಸ್ಪಷ್ಟವು. ಭಗವತ್ಪಾದರು ಬಹಳ ಗೌರವಪೂರ್ವಕವಾಗಿ ವೇದಾನ್ತಸಂಪ್ರದಾಯವನ್ನು ಬಲ್ಲವರೆಂದು ಗೌಡಪಾದರನ್ನು ಸೂಚಿಸಿರುವಾಗ, ಇತ್ತೀಚಿನ ವೇದಾನ್ತ

ಖಂಡಶೋ ವಿಭಜ್ಯ ತದಭಿಪ್ರಾಯಾವಿಷ್ಕರಣಪರಾಃ ಕಾರಿಕಾಃ "ಅತ್ರೈತೇ ಶ್ಲೋಕಾ ಭವಂತಿ" ಇತ್ಯವತಾರಿಕಾಪೂರ್ವಕಮ್ ಉಪನಿಷನ್ಮಧ್ಯೇ ಏವ ತತ್ತತ್ಖಂಡನಾಮಾಂತ-ರಾಂತರಾ ನಿವೇಶಿತಾಃ, ಸಾಂಪ್ರದಾಯಿಕೈರದ್ವೈತಿಭಿಶ್ಚ ತಥೈವಾಧೀಯಮಾನಾಶ್ಚೋ-ಪಲಭ್ಯ, ಆಗಮಪ್ರಕರಣಮಪ್ಯುಪನಿಷದೇವೇತಿ ಭ್ರೇಮಿರೇ ಮತಾಂತರೀಯಾ ಭಾಷ್ಯಕಾರಾಃ, ಕಥಂಚಿದ್ ವ್ಯಾಖ್ಯಾನಕೌಶಲಪ್ರದರ್ಶನೇನ ತಾ ಅಪಿ ಸ್ವಸ್ವಸಿದ್ಧಾಂತಾನು-ಗುಣ್ಯೇನ ವ್ಯಾಕರ್ತುಂ ಪ್ರಯೇತಿರೇ ಚ | ವೈತಥ್ಯಾದಿಪ್ರಕರಣಾನಿ ತು ಸ್ವಾತಂತ್ರ್ಯೇಣೈವ ಪಠ್ಯಮಾನಾನಿ ಸ್ಫುಟತರಮದ್ವೈತಪ್ರತಿಪಾದಕಾನಿ ಚ ಸ್ವೋಪಜ್ಞನವೀನಸಿದ್ಧಾಂತಾನು-ಸಾರೇಣ ನೇತುಮಶಕ್ನುವಾನಾಃ, ಗೌಡಪಾದಾನುಯಾಯಿಭಾಷ್ಯಸ್ಥಯುಕ್ತೀರಪಿ ಪ್ರತ್ಯಾಖ್ಯಾತುಮಸಮರ್ಥಾಃ "ಪ್ರಚ್ಛನ್ನಬೌದ್ಧಾ ಇಮೇ" ಇತಿ ಗಾಲಿದಾನೇನೈವ ವಿನೇಯಮನಃ ಸಮಾಧಾನಂ ವಿಧಾತುಮುಪಚಕ್ರಮಿರೇ - ಇತ್ಯೇವಂ ಯುಕ್ತಂ

---

ಪ್ರಸ್ಥಾನದವರಾದ (ಮಾಧ್ವಭಾಷ್ಯಕಾರರ ಮತದಂತೆಯೂ) (ಇದರಲ್ಲಿ) ಬೌದ್ಧಮತದ ಪ್ರವೇಶವಿರಬಹುದೆಂಬ ಸಂದೇಹವೂ ಬರುವುದಿಲ್ಲ. ಗೌಡಪಾದಾಚಾರ್ಯರು ಮಾಂಡೂಕ್ಯೋಪನಿಷದ್ವಾಕ್ಯಗಳನ್ನು ಖಂಡಖಂಡವಾಗಿ ಒಡೆದುಕೊಂಡು ಅದದರ ಅಭಿಪ್ರಾಯವನ್ನು ತೋರಿಸುವಂಥದ್ದಾದ ಕಾರಿಕೆಗಳನ್ನು, ''ಅತ್ರೈತೇ ಶ್ಲೋಕಾ ಭವನ್ತಿ'' ''ಈ ವಿಷಯಕ್ಕೆ ಈ ಶ್ಲೋಕಗಳಿರುತ್ತವೆ'' ಎಂದು ಪೀಠಿಕಾರೂಪವಾಗಿ ಉಪನಿಷನ್ಮಂತ್ರದ ಮಧ್ಯದಲ್ಲೇ ಆಯಾ ಖಂಡದ ಹೆಸರಿನ ಒಳಗೇ ಸೇರಿಸಿರುತ್ತಾರೆ. ಅದೇ ರೀತಿ ಸಾಂಪ್ರದಾಯಿಕರಾದ ಅದ್ವೈತಿಗಳು ಅಧ್ಯಯನವನ್ನು ಮಾಡುತ್ತಿರು-ವುದನ್ನು ಕಂಡೂ, ಆಗಮಪ್ರಕರಣವನ್ನು ಉಪನಿಷತ್ತೆಂದೇ ಬೇರೆಬೇರೆಯ ಭಾಷ್ಯಕಾರರುಗಳು ಭ್ರಾಂತರಾಗಿರುತ್ತಾರೆ. ಹಾಗೆಯೇ ಅವನ್ನು ಹೇಗೋ ವ್ಯಾಖ್ಯಾನಕೌಶಲವನ್ನು ತೋರಿಸುವುದರ ಮೂಲಕ ತಮ್ಮ ಸಿದ್ಧಾಂತಕ್ಕನು-ಗುಣವಾಗಿ ವಿವರಿಸಲು ಪ್ರಯತ್ನಿಸಿರುತ್ತಾರೆ. ಸ್ವತಂತ್ರವಾಗಿಯೇ ಅಧ್ಯಯನ ಮಾಡುತ್ತಿರುವ ವೈತಥ್ಯವೇ ಮುಂತಾದ ಪ್ರಕರಣವು ಅವು ಸ್ಪಷ್ಟವಾಗಿ ಅದ್ವೈತವನ್ನೇ ಪ್ರತಿಪಾದನೆ ಮಾಡುತ್ತಿದ್ದರೂ, (ಈ ಮಾಧ್ವರು) ತಾವು ಕಲ್ಪಿಸಿಕೊಂಡದಾದ ಹೊಸ ಸಿದ್ಧಾಂತದಂತೆಯೇ ಅರ್ಥವನ್ನು ಮಾಡುವು-ದಕ್ಕಾಗದೇ, ಗೌಡಪಾದರ ಅಭಿಪ್ರಾಯಕ್ಕನುಗುಣವಾದ ಭಾಷ್ಯದಲ್ಲಿರುವ ಯುಕ್ತಿಗಳನ್ನೂ ಸಹ ಅಲ್ಲಗಳೆಯುವುದಕ್ಕಾಗದೇ ''ಇವರು ಪ್ರಚ್ಛನ್ನ ಬೌದ್ಧರು'' ಎಂಬ ಬೈಗಳವನ್ನು ಮಾಡುವುದರಿಂದಲೇ (ತಮ್ಮ) ಶಿಷ್ಯರ

ಕಲ್ಪಯಿತುಮ್ ||

೫೬. ದರ್ಶನವೈಲಕ್ಷಣ್ಯಂ ಪ್ರಪಂಚೋಪಶಮತತ್ತ್ವವಿಷಯೇ - ಆಸ್ತಾಂ ತಾವದಿಯಂ ಸಂಭಾವನಾಯುಕ್ತಿಃ | ಸಾಕ್ಷಾನ್ನಾಗಾರ್ಜುನಾದಿಗ್ರಂಥಪರೀಕ್ಷಣೇ-ನಾಪೀದವಗಮ್ಯತೇ ಯತ್, ಶೂನ್ಯವಿಜ್ಞಾನವಾದಯೋರ್ಗೌಡಪಾದಾಚಾರ್ಯ-ಸಂಮತವೇದಾಂತದರ್ಶನಸ್ಯ ಚ ತಮಃಪ್ರಕಾಶವದ್ ವಿರುದ್ಧಸ್ವಭಾವತೇತಿ | ತತ್ರ ಕುತ ಏವಾವಕಾಶಃ ಸುಗತನಯಪ್ರವೇಶಶಂಕಾಯಾ ಭಗವತ್ಪಾದೀಯವೇದಾಂತನಯೇ ಅಧುನಾತನದ್ವೈತಿವೇದಾಂತಿನಾಂ ತತ್ತ್ವವಿವೇಚನಾಸಾಮರ್ಥ್ಯಂ ಶುದ್ಧವೇದಾಂತ-ಪ್ರಕ್ರಿಯಾವಿದ್ವೇಷಂ ವಾ ಮನಸಿ ಕುರ್ವತಾಮ್ ? ತದೇತದಾವಿಷ್ಕರ್ತುಂ ನಾಗಾರ್ಜುನಗೌಡಪಾದಾಚಾರ್ಯಯೋರ್ವಿಚಾರಸರಣಿವೈಲಕ್ಷಣ್ಯಮೇವ ತಾವತ್ ಕಿಂಚಿದುದಾಹರಿಷ್ಯಾಮಃ ||

---

ಮನಸ್ಸಮಾಧಾನವನ್ನು ಮಾಡುವುದಕ್ಕೆ ಹೊರಟಿರುತ್ತಾರೆ ಎಂದು ಹೇಳುವುದೇ ಸರಿಯಾದದ್ದು.

**೫೬) ಪ್ರಪಂಚವು (ನಿಜವಾಗಿ ಇಲ್ಲವೆಂಬ ) ತತ್ತ್ವದ ವಿಷಯದಲ್ಲಿ (ಬೌದ್ಧ ವೇದಾನ್ತಿಗಳ) ದರ್ಶನದಲ್ಲಿರುವ ವ್ಯತ್ಯಾಸವು** – ಈ (ಮೇಲೆ ತೋರಿಸಿದ್ದಾದ) ಸಂಭಾವನಾಯುಕ್ತಿಯು (ಸದ್ಯಕ್ಕೆ ಹಾಗೆ) ಇರಲಿ. ನೇರಾಗಿ ನಾಗಾರ್ಜುನರೇ ಮುಂತಾದವರ ಗ್ರಂಥವನ್ನು ಪರೀಕ್ಷೆ ಮಾಡುವುದರಿಂದಲೂ ಇದು ಗೊತ್ತಾಗುತ್ತದೆ. ಏನೆಂದರೆ – ಶೂನ್ಯವಾದ, ವಿಜ್ಞಾನವಾದಕ್ಕೂ ಮತ್ತು ಗೌಡಾಪಾದಚಾರ್ಯರಿಗೆ ಒಪ್ಪಿಗೆಯಾದ ವೇದಾನ್ತ ದರ್ಶನಕ್ಕೂ ಕತ್ತಲೆ ಬೆಳಕಷ್ಟು ವಿರುದ್ಧಸ್ವಭಾವವಿರುತ್ತದೆ. ಹೀಗಿರುವಾಗ ಇತ್ತೀಚಿನವರಾದ ದ್ವೈತವೇದಾಂತಿಗಳಿಗೆ ಭಗವತ್ಪಾದರು ತೋರಿಸಿಕೊಟ್ಟ ವೇದಾನ್ತಶಾಸ್ತ್ರದ ತತ್ವವನ್ನು ವಿವೇಚನೆ ಮಾಡುವ ಸಾಮರ್ಥ್ಯವಿಲ್ಲದೆ, ಶುದ್ಧವಾದ ವೇದಾನ್ತಪ್ರಕ್ರಿಯೆಯನ್ನು ದ್ವೇಷಮಾಡುವುದನ್ನೇ ಮನಸ್ಸಿನಲ್ಲಿ ಮಾಡಿಕೊಂಡ, ಅವರಿಗೆ, ಬೌದ್ಧಶಾಸ್ತ್ರವನ್ನು (ಇದರೊಡನೆ) ಪ್ರವೇಶವನ್ನು ಮಾಡಿಸುವುದಕ್ಕೆ (ನಿಜವಾಗಿ) ಅವಕಾಶವಾದರೂ ಎಲ್ಲಿದೆ? ಇದನ್ನು ತೋರಿಸುವುದಕ್ಕೆ ಮೊಟ್ಟಮೊದಲು ನಾಗಾರ್ಜುನ ಮತ್ತು ಗೌಡಪಾದಾ–ಚಾರ್ಯರುಗಳ ವಿಚಾರಸರಣಿಯಲ್ಲಿರುವ ವ್ಯತ್ಯಾಸವನ್ನು ಕುರಿತು ಸ್ವಲ್ಪ

ಪ್ರಥಮಂ ತಾವತ್ "ಅನಿರೋಧಮನುತ್ಪಾದಮ್" ಇತಿ ನಾಗಾರ್ಜುನ-ಕಾರಿಕಾರ್ಥಂ "ನ ನಿರೋಧೋ ನ ಚೋತ್ಪತ್ತಿಃ" (ಗೌ.ಕಾ. ೨-೩೨) ಇತಿ ಗೌಡಪಾದೀಯಕಾರಿಕಾರ್ಥೇನ ತುಲಯಾಮಃ | ತತ್ರ -

(೧)ಯಃ ಪ್ರತೀತ್ಯಸಮುತ್ಪಾದಂ ಪ್ರಪಂಚೋಪಶಮಂ ಶಿವಮ್ |
ದೇಶಯಾಮಾಸ ಸಂಬುದ್ಧಸ್ತಂ ವಂದೇ ವದತಾಂ ವರಮ್ ||(ನಾ.ಕಾ.)

ಇತಿ ಪ್ರತೀತ್ಯಸಮುತ್ಪಾದಮೇವ ನಿರೋಧೋತ್ಪಾದರಾಹಿತ್ಯೇನ ವಿಶಿಂಷನ್ ನಾಗಾರ್ಜುನಃ ಸರ್ವಥಾ ಪರಮಾರ್ಥಾತ್ಮಾನಂ ನಾಂಗೀಕರೋತೀತಿ ಸ್ಫುಟಮ್ | ಸರ್ವೇಷಾಮಪಿ ಧರ್ಮಾಣಾಂ ಪ್ರಪಂಚೋಪಶಮತ್ವಮ್ ಇತಿ ಖಲು ನಾಗಾರ್ಜುನಸ್ಯ ಸಿದ್ಧಾಂತಃ | ವ್ಯಾಖ್ಯಾತಂ ಚೈತದೇವಮೇವ ಚಂದ್ರಕೀರ್ತಿನಾ -

(೧) ಪ್ರತೀತ್ಯಶಬ್ದೋಽತ್ರ ಲ್ಯಬಂತಃ ಪ್ರಾಪ್ತೌ ಅಪೇಕ್ಷಾಯಾಂ ವರ್ತತೇ | "ಸಮುತ್" ಪೂರ್ವಃ ಪದಿಃ ಪ್ರಾದುರ್ಭಾವಾರ್ಥಃ ಇತಿ ಸಮುತ್ಪಾದಶಬ್ದಃ

---

ಉದಾಹರಿಸುವೆವು. ಮೊದಲು "ಅನಿರೋಧಮನುತ್ಪಾದಮ್" "ಉತ್ಪತ್ತಿ ಪ್ರಳಯವಿಲ್ಲದ" (ಎಂಬರ್ಥದ) ನಾಗಾರ್ಜುನ ಶ್ಲೋಕಾರ್ಥದೊಡನೆ "ನ ನಿರೋಧೋ ನ ಚೋತ್ಪತ್ತಿಃ" (ಗೌ.ಕಾ. ೨–೩೨) ಎಂಬ ಗೌಡಪಾದರ ಕಾರಿಕೆಯ ಅರ್ಥದೊಡನೆ ಹೋಲಿಸಿ ನೋಡೋಣ.

(೧) "ಪ್ರಪಂಚೋಪಶಮವಾದ ಶಿವವಾದ "ಪ್ರತೀತ್ಯಸಮುತ್ಪಾದವನ್ನೇ", ಯಾವಾತನು ಉಪದೇಶಿಸಿದನೋ ಅಂತಹ ವಾಗ್ಮಿಶ್ರೇಷ್ಠನಾದ ಜ್ಞಾನಿಯನ್ನು ನಮಸ್ಕರಿಸುವೆನು" ಎಂದು ಹೇಳುತ್ತಾ ಪ್ರತೀತಿಸಮುತ್ಪಾದವನ್ನೇ ನಿರೋಧೋತ್ಪತ್ತಿ ಇಲ್ಲದ್ದೆಂಬ ವಿಶೇಷಣದೊಡನೆ ವಿಶೇಷಿಸುತ್ತಾ ನಾಗಾರ್ಜುನನು ಯಾವ ರೀತಿಯಿಂದಲೂ ಪರಮಾರ್ಥಾತ್ಮವನ್ನು ಒಪ್ಪಿರುವುದಿಲ್ಲವೆಂಬುದು ಸ್ಪಷ್ಟವು. ಎಲ್ಲಾ ವಸ್ತುಗಳೂ (ಧರ್ಮಗಳೂ) ಪ್ರಪಂಚೋಪಶಮವಾಗಿದೆ ಎಂದಲ್ಲವೆ, ನಾಗಾರ್ಜುನನ ಸಿದ್ಧಾಂತವು. ಇದನ್ನು ಚಂದ್ರಕೀರ್ತಿಯೂ ಸಹ ಹೀಗೆಯೇ ವ್ಯಾಖ್ಯಾನವನ್ನು ಮಾಡಿರುತ್ತಾನೆ.

(ಅ) "ಪ್ರತೀತ್ಯ" ಎಂಬ ಶಬ್ದವು ಲ್ಯಪ್ (ಪ್ರತ್ಯಯಾ)ಂತವಾಗಿದ್ದು ಪಡೆಯುವುದು, ಬಯಸುವುದು ಎಂಬ ಅರ್ಥದಲ್ಲಿರುತ್ತದೆ. ಸಮ್, ಉತ್ ಎಂಬ ಉಪಸರ್ಗವನ್ನು ಹಿಂದಿಟ್ಟುಕೊಂಡ ಪದ್ ಎಂಬ ಧಾತುವು

ಪ್ರಾದುರ್ಭಾವೇ ವರ್ತತೇ | ತತಶ್ಚ ಹೇತುಪ್ರತ್ಯಯಾಪೇಕ್ಷೋ ಭಾವಾನಾಮ್ ಉತ್ಪಾದಃ ಪ್ರತೀತ್ಯಸಮುತ್ಪಾದಾರ್ಥಃ || ಮಾ.ವೃ.

(೨) ಸ ಏವೇದಾನೀಂ ಸಂವೃತಃ ಪ್ರತೀತ್ಯಸಮುತ್ಪಾದಃ ಸ್ವಭಾವೇನ ಅನುತ್ಪನ್ನತ್ವಾತ್ ಆರ್ಯಜ್ಞಾನಾಪೇಕ್ಷಯಾ "ನಾಸ್ಮಿನ್ ನಿರೋಧೋ ವರ್ತತೇ" ಇತ್ಯನಿರೋಧಾದಿಭಿರಷ್ಟಾಭಿವಿಶೇಷಣೈರ್ವಿಶೇಷ್ಯತೇ | ಯಥಾ ಚ ನಿರೋಧಾದಯೋ ನ ಸಂತಿ ಪ್ರತೀತ್ಯಸಮುತ್ಪಾದಸ್ಯ ತಥಾ ಸಕಲಶಾಸ್ತ್ರೇಣ ಪ್ರತಿಪಾದಯಿಷ್ಯತೇ | ಅನಂತವಿಶೇಷಣಸಂಭವೇಽಪಿ ಪ್ರತೀತ್ಯಸಮುತ್ಪಾದಸ್ಯ ಅಷ್ಟಾನಾಮೇವೋಪಾದಾನಮ್ ಏಷಾಂ ಪ್ರಾಧಾನ್ಯೇನ ವಿವಾದಾಂಗಭೂತತ್ವಾತ್ | ಯಥಾವಸ್ಥಿತಪ್ರತೀತ್ಯಸಮುತ್ಪಾದದರ್ಶನೇ ಸತ್ಯಾಚಾರ್ಯಾ(?)ಣಾಮ್ ಅಭಿಧೇಯಾದಿಲಕ್ಷಣಸ್ಯ ಪ್ರಪಂಚಸ್ಯ ಸರ್ವಥಾ ಉಪಶಮಾತ್ "ಪ್ರಪಂಚಾನಾಮ್ ಉಪಶಮಃ ಅಸ್ಮಿನ್" ಇತಿ ಸ ಏವ ಪ್ರತೀತ್ಯಸಮುತ್ಪಾದಃ ಪ್ರಪಂಚೋಪಶಮ ಇತ್ಯುಚ್ಯತೇ | ಚಿತ್ತಚೇತ್ತಾನಾಂ ಚ ತಸ್ಮಿನ್ ಅಪ್ರವೃತ್ತೌ ಜ್ಞಾನಜ್ಞೇಯವ್ಯವಹಾರನಿವೃತ್ತೌ ಜಾತಿಜರಾಮರಣಾದಿನಿರವಶೇಷೋಪದ್ರವರಹಿತತ್ವಾತ್ ಶಿವಃ || ಮಾ.ವೃ.

---

ತೋರಿಕೊಳ್ಳುವುದು ಎಂಬರ್ಥದಲ್ಲಿದ್ದು ಒಟ್ಟು "ಸಮುತ್ಪಾದ" ಎಂಬ ಶಬ್ದವು ತೋರಿಕೊಳ್ಳುವುದೆಂಬ ಅರ್ಥದಲ್ಲಿದೆ. ಆದ್ದರಿಂದ ಕಾರಣ, ಅರಿವುಗಳನ್ನಪೇಕ್ಷಿಸಿಕೊಂಡು ಪದಾರ್ಥಗಳ ಹುಟ್ಟುವುದೆಂಬುದೇ ಪತೀತ್ಯಸಮುತ್ಪಾದವೆಂಬುದರರ್ಥವು. (ಮಾ.ಕಾ.ವೃ.ಪು–೨)

(೨) ಅದೇ ಈಗ ಸಂವೃತವು, ಪ್ರತೀತ್ಯಸಮುತ್ಪಾದವು ಸ್ವಭಾವದಿಂದ ಹುಟ್ಟದೇ ಇರುವಂಥದ್ದಾದ್ದರಿಂದ ತಿಳಿದವರ ಜ್ಞಾನದ ದೃಷ್ಟಿಯಿಂದ "ಇದರಲ್ಲಿ ಪ್ರಳಯವೆಂಬುದೂ ಇರುವುದಿಲ್ಲ", ಎಂದು ಅನಿರೋಧವೇ ಮುಂತಾದ ಎಂಟು ವಿಶೇಷಣಗಳಿಂದ ವಿಶೇಷಗೊಳಿಸಿದೆ. ಹೇಗೆ ಆದರೆ ಪ್ರತೀತಿಸಮುತ್ಪಾದಕ್ಕೆ (ಒಂದರ ಅಪೇಕ್ಷೆಯಿಂದ (ಇನ್ನೊಂದು) ತೋರುವಂಥದ್ದಕ್ಕೆ) ನಿರೋಧಾದಿಗಳು (ಪ್ರಳಯವೇ ಮುಂತಾದವುಗಳು) ಆಗುವುದೇ ಇಲ್ಲವೋ ಆ ರೀತಿಯಾಗಿ ಸಂಪೂರ್ಣಶಾಸ್ತ್ರದಿಂದಲೇ ಅದನ್ನು ತಿಳಿಸಿಕೊಡಲಾಗುತ್ತದೆ. ಪ್ರತೀತ್ಯಸಮುತ್ಪಾದಕ್ಕೆ ಅನೇಕ ವಿಶೇಷಣಗಳು ಹೊಂದುವುದಾದರೂ ಎಂಟನ್ನೇ ಸ್ವೀಕರಿಸಿರುವುದೇಕೆಂದರೆ ಇವೇ ಪ್ರಧಾನವಾಗಿ ವಾದಕ್ಕೆ ಎಡೆಮಾಡಿಕೊಟ್ಟಿದೆಯಾದ್ದರಿಂದ (ಹಾಗೆ ಎಂಟನ್ನೇ ಸ್ವೀಕರಿಸಿದೆ). ಆಚಾರ್ಯರುಗಳು ಇದ್ದದ್ದು ಇದ್ದ ಹಾಗೆ ಇರುವ ಪ್ರತೀತ್ಯಸಮುತ್ಪಾದವನ್ನು ತೋರಿಸಿಕೊಟ್ಟರೆ ಅಭಿಧೇಯ

ಇತಿ | ತದೇವಂ ಪ್ರಪಂಚೋಪಶಮಶಿವತ್ವೇನ ವಿಶೇಷಿತಃ ಪ್ರತೀತ್ಯಸಮುತ್ಪಾದ ಏವಾತ್ರೇತಿ ಸಿದ್ಧಮ್ | ಆತ್ಮನಿರಾಕರಣಪೂರ್ವಕಮ್ "ಅನೇಕಾರ್ಥಮನಾನಾರ್ಥಮ್" ಇತ್ಯಾದ್ಯಪಿ ತಸ್ಯೈವ ಪ್ರತೀತ್ಯಸಮುತ್ಪಾದಸ್ಯೇತ್ಯೇತತ್ ಪ್ರತಿಪಾದಿತಂ ನಾಗಾರ್ಜುನೇನ -

(೨) ಆತ್ಮನ್ಯಸತಿ ಚಾತ್ಮೀಯಂ ಕುತ ಏವ ಭವಿಷ್ಯತಿ |
ನಿರ್ಮಮೋ ನಿರಹಂಕಾರಃ ಶಮಾದಾತ್ಮಾತ್ಮನೀನಯೋಃ || ೨ ||

ನಿರ್ಮಮೋ ನಿರಹಂಕಾರೋ ಯಶ್ಚ ಸೋಽಪಿ ನ ವಿದ್ಯತೇ || ೩ ||

ಪ್ರತೀತ್ಯ ಯದ್ ಯದ್ಭವತಿ ನ ಹಿ ತಾವತ್ ತದೇವ ತತ್ |
ನ ಚಾನ್ಯದಪಿ ತತ್ತಸ್ಮಾನ್ನೋಚ್ಛಿನ್ನಂ ನ ಚ ಶಾಶ್ವತಮ್ || ೧೦ ||

ಅನೇಕಾರ್ಥಮನಾನಾರ್ಥಮನುಚ್ಛೇದಮಶಾಶ್ವತಮ್ |
ಏತತ್ ತಲ್ಲೋಕನಾಥಾನಾಂ ಬುದ್ಧಾನಾಂ ಶಾಸನಾಮೃತಮ್ || ೧೧ ||

---

ರೂಪವಾದ ಪ್ರಪಂಚವು ಎಲ್ಲಾ ರೀತಿಯಿಂದಲೂ ಅಡಗಿ ಹೋಗುವುದರಿಂದ. "ಇದರಲ್ಲಿ ಪ್ರಪಂಚವು ಅಡಗಿಹೋಗುವುದರಿಂದ" ಆ ಪ್ರತೀತ್ಯಸಮುತ್ಪಾದವೇ ಪ್ರಪಂಚೋಪಶಮವೆನಿಸಿಕೊಂಡಿದೆ. ಅಲ್ಲಿ ಚಿತ್ತವಾಗಲೀ ಚೈತ್ಯವಾಗಲೀ (ಚಿತ್ತಕ್ಕೆ ತೋರುವ ದೃಶ್ಯವಾಗಲೀ) ಉಂಟಾಗುವುದಿಲ್ಲವಾದ್ದರಿಂದ ಜ್ಞಾನಜ್ಞೇಯವ್ಯವಹಾರವು ನಿವೃತ್ತಿಯಾಗಲಾಗಿ ಜನ್ಮ, ಮುಪ್ಪು, ಮರಣ ಮುಂತಾಗಿ ಸಂಪೂರ್ಣವಾಗಿ ಎಲ್ಲಾ ತೊಂದರೆಗಳೂ ಇಲ್ಲವಾದ್ದರಿಂದ ಅದು ಶಿವರೂಪವು (ಮಾ.ಕಾ.ವೃ. ಪುಟ – ೩). ಈ ರೀತಿಯಾಗಿ ಪ್ರಪಂಚೋಪ-ಶಮವೆಂಬ ಶಿವವೆಂಬ ರೂಪದಿಂದ ವಿಶೇಷಗೊಳಿಸಿದ್ದಾದ ಪ್ರತೀತ್ಯ-ಸಮುತ್ಪಾದವೇ ಇಲ್ಲಿ ಹೇಳಿರುವುದೆಂದು ಸಿದ್ಧವಾಯಿತು. ಆತ್ಮನನ್ನು ನಿರಾಕರಣೆ ಮಾಡುವುದರ ಮೂಲಕ "ಏಕಾರ್ಥವಿಲ್ಲದ್ದು, ನಾನಾತ್ವವಿಲ್ಲದ್ದು", ಎಂಬುದಾಗಿ ವರ್ಣಿಸಿರುವುದೂ ಅದೇ ಸಮುತ್ಪಾದವನ್ನೇ ಹೇಳಿರುವುದೆಂದು ನಾಗಾರ್ಜುನನು ತಿಳಿಸಿರುತ್ತಾನೆ.

(1) ಆತ್ಮವೆಂಬುದೇ ಇಲ್ಲದಿರುವಾಗ ಆತ್ಮೀಯವೆಂಬುದಾದರೂ ಹೇಗೆ ಆಗುತ್ತದೆ. ಮಮತ್ವವಿಲ್ಲ ಅಹಂಕಾರವಿಲ್ಲ, ಆತ್ಮ ಆತ್ಮೀಯವೆಂಬ ಎರಡೂ ಶಮವಾಗಿರುವುದರಿಂದ, ನಿರ್ಮಮ ನಿರಹಂಕಾರವೆಂಬುದೇನಿದೆ ಅದೂ ಇಲ್ಲ, (ಏಕೆಂದರೆ) ಯಾವು ಯಾವುದು ಪ್ರತೀತ್ಯದಿಂದ (ತೋರಿಕೆ ಮಾತ್ರವಾಗಿ)

ಇತ್ಯಾತ್ಮಪರೀಕ್ಷಾಯಾಮ್ ||

ಆಚಾರ್ಯಾಃ ಪುನಃ ; "ಪ್ರಪಂಚೋಪಶಮಃ ಶಿವೋಽದ್ವೈತ ಏವಮೋಂಕಾರ ಆತ್ಮೈವ ಸಂವಿಶತ್ಯಾತ್ಮನಾತ್ಮಾನಂ ಯ ಏವಂ ವೇದ" (ಮಾಂ. ೧೨) ಇತಿ ಶ್ರುತಿಮಾಶ್ರಿತ್ಯ -

(ಅ) ಪ್ರಣವಂ ಹೀಶ್ವರಂ ವಿದ್ಯಾತ್ ಸರ್ವಸ್ಯ ಹೃದಯೇ ಸ್ಥಿತಮ್ |
ಸರ್ವವ್ಯಾಪಿನಮೋಂಕಾರಂ ಮತ್ವಾ ಧೀರೋ ನ ಶೋಚತಿ || ಗೌ.ಕಾ. ೧-೨೮.

ಅಮಾತ್ರೋಽನಂತಮಾತ್ರಶ್ಚ ದ್ವೈತಸ್ಯೋಪಶಮಃ ಶಿವಃ |
ಓಂಕಾರೋ ವಿದಿತೋ ಯೇನ ಸ ಮುನಿರ್ನೇತರೋ ಜನಃ || ಗೌ.ಕಾ. ೧-೨೯.

ಇತ್ಯಭಿಧಾನಾಭಿಧೇಯವಿಭಾಗರಹಿತಮ್ ಓಂಕಾರೋಪಲಕ್ಷಿತಂ ಸರ್ವಾತ್ಮಾನಮೇವ ಪ್ರಪಂಚೋಪಶಮಂ ಶಿವಮಾಹುಃ | ಕಿಂಚ,

---

ಇರುವುದೋ ಆಗಲೇ ಅದದಿರುವುದಿಲ್ಲವಲ್ಲವೇ? ಹಾಗೆಯೇ ಅದಕ್ಕಿಂತ ಬೇರೆಯದಾದ ನಾಶವೆಂಬುದಾಗಲೀ ಶಾಶ್ವತವಾಗಲೀ ಇಲ್ಲ. ಏಕಾರ್ಥವಿಲ್ಲ, ಅನೇಕಾರ್ಥವಿಲ್ಲ, ನಾಶವಿಲ್ಲ, ಶಾಶ್ವತವೆಂಬುದಿಲ್ಲ. ಇದು ಲೋಕನಾಥರಾದ ತಿಳಿದವರಾದ ಅಮೃತವಾದ ಶಾಸನವು", (ಎಂದು ನಾಗಾರ್ಜುನನು) (ತಾನು ಬರೆದ) ಆತ್ಮಪರೀಕ್ಷೆಯಲ್ಲಿ (ಹೇಳಿರುತ್ತಾನೆ).

ಗೌಡಪಾದಾಚಾರ್ಯರಾದರೋ "ಪ್ರಪಂಚೋಪಶಮನಾದ ಶಿವವೂ, ಅದ್ವೈತವೂ ಆದದ್ದು ಹೇಗೋ, ಹಾಗೆ ಓಂಕಾರವು ಆತ್ಮವೇ, ಈ ರೀತಿ ಯಾರು ತಿಳಿದಿರುತ್ತಾರೋ ಆತ್ಮನನ್ನೇ ಪ್ರವೇಶಿಸುವರು" ಎಂಬ (ಮಾಂ ೧೨) ಶ್ರುತಿಯನ್ನನುಸರಿಸಿ–

(ಅ) ಓಂಕಾರವನ್ನು ಈಶ್ವರವೆಂದು ತಿಳಿಯಬೇಕು, ಅದು ಎಲ್ಲರ ಹೃದಯದಲ್ಲಿರತಕ್ಕದ್ದು. ಅಂತಹ ಸರ್ವವ್ಯಾಪಿಯಾದ ಓಂಕಾರವನ್ನು ತಿಳಿದ ಧೀರನು ಶೋಕಿಸುವುದಿಲ್ಲ. (ಗೌ.ಕಾ ೧–೨೮). ಅಮಾತ್ರನು ಮತ್ತು ಅನಂತಮಾತ್ರನು, ದ್ವೈತವೆಲ್ಲಾ ಅಡಗಿರುವ ಶಿವನು, ಅಂತಹ ಓಂಕಾರವನ್ನು ಯಾರು ತಿಳಿದಿರುತ್ತಾರೋ ಆತನು ಮುನಿಯು, ಬೇರೆಯವರಲ್ಲ (ಗೌ.ಕಾ. ೧–೨೯) ಎಂಬುದಾಗಿ ಅಭಿಧಾನಾಭಿಧೇಯವಿಭಾಗವಿಲ್ಲದಿರುವ ಓಂಕಾರ–

(ಆ) ಏತೈರೇಷೋಽಪೃಥಗ್ಭಾವೈಃ ಪೃಥಗೇವೇತಿ ಲಕ್ಷಿತಃ |
ಏವಂ ಯೋ ವೇದ ತತ್ತ್ವೇನ ಕಲ್ಪಯೇತ್ ಸೋಽವಿಶಂಕಿತಃ || ಗೌ.ಕಾ. ೨-೩೦.

ಇತಿ ತಸ್ಮಿನ್ನೇವಾತ್ಮನಿ ಅನಾತ್ಮಭಾವಾನ್ ತದವ್ಯತಿರಿಕ್ತಾನೇವ ಪೃಥಕ್ತ್ವೇನ ಕಲ್ಪಯಂತಿ ಮೂಢಾಃ - ಇತ್ಯುಕ್ತ್ವಾ ಆಹುಃ -

ಸ್ವಪ್ನಮಾಯೇ ಯಥಾ ದೃಷ್ಟೇ ಗಂಧರ್ವನಗರಂ ಯಥಾ |
ತಥಾ ವಿಶ್ವಮಿದಂ ದೃಷ್ಟಂ ವೇದಾಂತೇಷು ವಿಚಕ್ಷಣೈಃ ||
ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕಃ |
ನ ಮುಮುಕ್ಷುರ್ನ ವೈ ಮುಕ್ತ ಇತ್ಯೇಷಾ ಪರಮಾರ್ಥತಾ ||

ಇತಿ (ಗೌ.ಕಾ. ೨-೩೧,೩೨) ಆತ್ಮಾ ಏಕ ಏವ ಸತ್ಯಂ ಪರಮಾರ್ಥತಃ, ತಸ್ಮಿನ್ ಪ್ರಾಣಾದಯಃ, ನಿರೋಧೋತ್ಪಾದಾದಯಶ್ಚ ಕಲ್ಪಿತಾಃ ಸ್ವಪ್ನಾದಿವದಿತಿ | ಅತಃ ಸುಸ್ಪಷ್ಟಂ ಮಹದ್ ವೈಲಕ್ಷಣ್ಯಂ ಸರ್ವಥಾ ಭಾವನಿಃಸ್ವಭಾವತಾವಾದಾತ್ ಸರ್ವಭಾವಾನಾ-

---

ದಿಂದ ತೋರಿಬಂದ ಸರ್ವಾತ್ಮನನ್ನೇ ಪ್ರಪಂಚೋಪಶಮನಾದ ಶಿವನೆಂದು ಹೇಳಿರುತ್ತಾರೆ ಮತ್ತೂ ಏನೆಂದರೆ –

(ಆ) ಈ ಬೇರೆಬೇರೆಯಾಗದ ಪದಾರ್ಥಗಳಿಂದ ಈತನು ಬೇರೆ ಬೇರೆಯಾದವನಂತೆ ತೋರಿ ಬಂದಿರುತ್ತಾನೆ. ಇದನ್ನು ಯಾವನು ಯಥಾವತ್ತಾಗಿ ಅರಿತಿರುವನೋ ಆತನು ನಿಸ್ಸಂದಿಗ್ಧವಾಗಿ ವೇದಾರ್ಥವನ್ನು ಕಲ್ಪಿಸಿಯಾನು! (ಗೌ.ಕಾ–೨–೩೦) ಎಂಬುದಾಗಿ ಅದೇ ಆತ್ಮನಲ್ಲಿ ಅನಾತ್ಮಭಾವವಾದ (ಪದಾರ್ಥ)ಗಳನ್ನು ಅವು ಅವನಿಗಿಂತ ಬೇರೆಯಲ್ಲದವುಗಳು, ಅದನ್ನು ಮೂಢರು ಬೇರೆ ಎಂದು ಕಲ್ಪಿಸುತ್ತಾರೆ, ಎಂದು ಹೇಳಿ, ಮತ್ತೆ ಹೀಗೆ ಹೇಳಿರುತ್ತಾರೆ – "ಸ್ವಪ್ನ ಮಾಯೆಗಳು ಯಾವ ರೀತಿ ಕಂಡಿದೆಯೋ, ಗಂಧರ್ವನಗರವು ಹೇಗಿರುವುದೋ ಆ ರೀತಿ ಈ ವಿಶ್ವವಿರುವುದೆಂದು ವೇದಾಂತಗಳಲ್ಲಿ ಹೇಳಿದೆ ಎಂದು ಜ್ಞಾನಿಗಳು ಕಂಡುಕೊಂಡಿರುತ್ತಾರೆ. ಪ್ರಳಯವಾಗಲೀ, ಉತ್ಪತ್ತಿಯಾಗಲೀ, ಬದ್ಧನಾಗಲೀ, ಸಾಧಕನಾಗಲೀ, ಮುಮುಕ್ಷುವಾಗಲೀ ಮುಕ್ತವಾಗಲೀ ನಿಜವಾಗಿರುವುದಿಲ್ಲವೆಂಬುದೇ ಪರಮಾರ್ಥವು". (ಗೌ.ಕಾ. ೨–೩೧,೩೨) ಎಂದು ಹೇಳುತ್ತಾ ನಿಜವಾಗಿ ಆತ್ಮನೊಬ್ಬನೇ ಸತ್ಯವು, ಆತನಲ್ಲಿ ಪ್ರಾಣಾದಿಗಳೂ, ಸ್ವಪ್ನಾದಿಗಳಂತೆ ಉತ್ಪತ್ತಿಪ್ರಳಯಗಳು ಕಲ್ಪಿತವಾಗಿವೆ. ಎಲ್ಲಾ ರೀತಿಯಿಂದಲೂ ಯಾವುದಕ್ಕೂ ಯಾವ ಸ್ವಭಾವವೂ ಇಲ್ಲವೇ ಇಲ್ಲವೆನ್ನುವ

ಮಾತ್ಮೈಕಸ್ವಭಾವತಾವಾದಸ್ಯ ||

**೫೭. ದರ್ಶನವೈಲಕ್ಷಣ್ಯಮ್ ಅಜಾತಿವಿಷಯೇ - ಕಿಂಚಾನ್ಯತ್ -**

(೧) ನ ಸ್ವತೋ ನಾಪಿ ಪರತೋ ನ ದ್ವಾಭ್ಯಾಂ ನಾಪ್ಯಹೇತುತಃ |
ಉತ್ಪನ್ನಾ ಜಾತು ವಿದ್ಯಂತೇ ಭಾವಾಃ ಕ್ವಚನ ಕೇಚನ || ಮಾ.ಕಾ. ೧-೧.

[ ಚಂದ್ರಕೀರ್ತಿಟೀಕಾ - ತತ್ರ ಜಾತು ಇತಿ ಕದಾಚಿದಿತ್ಯರ್ಥಃ | ಕ್ವಚನಶಬ್ದ ಆಧಾರವಚನಃ , ಕ್ವಚಿಚ್ಛಬ್ದಪರ್ಯಾಯಃ | ತತಶ್ಚ ಏವಂ ಸಂಬಂಧಃ - ನೈವ ಸ್ವತ ಉತ್ಪನ್ನಾ ಜಾತು ವಿದ್ಯಂತೇ ಭಾವಾಃ ಕ್ವಚನ ಕೇಚನ | ಏವಂ ಪ್ರತಿಜ್ಞಾತ್ರಯಮಪಿ ಯೋಜ್ಯಮ್ || ]

ನ ಸನ್ನಾಸನ್ ನ ಸದಸನ್ ಧರ್ಮೋ ನಿರ್ವರ್ತತೇ ಯದಾ |
ಕಥಂ ನಿರ್ವರ್ತಕೋ ಹೇತುರೇವಂ ಸತಿ ಹಿ ಯುಜ್ಯತೇ || ಮಾ.ಕಾ. ೧-೨.

---

(ಬೌದ್ಧ) ವಾದಕ್ಕಿಂತ ಎಲ್ಲಾ ಭಾವಗಳೂ ಯಾವಾಗಲೂ ಆತ್ಮನೊಬ್ಬನನ್ನೇ ಸ್ವಭಾವವುಳ್ಳದ್ದಾಗಿವೆ ಎನ್ನುವ ವೇದಾಂತವಾದಕ್ಕೆ ತುಂಬಾ ವ್ಯತ್ಯಾಸವಿದೆ.

**೫೭) ಅಜಾತಿ (ಹುಟ್ಟಿಲ್ಲ) ಎಂಬ ವಿಷಯದಲ್ಲಿ (ಈ ಎರಡು) ದರ್ಶನಕ್ಕಿರುವ ವ್ಯತ್ಯಾಸವು.** ಮತ್ತೊಂದೇನೆಂದರೆ – "ತನ್ನಿಂದಲಾಗಲೀ ಮತ್ತೊಂದರಿಂದಲಾಗಲೀ, ಎರಡರಿಂದಲೂ ಆಗಲಿ (ಯಾವುದಕ್ಕೂ) ಕಾರಣವೇ ಇಲ್ಲವಾದ್ದರಿಂದ ಎಲ್ಲೂ ಯಾವುವೂ ಪದಾರ್ಥಗಳು ಹುಟ್ಟಿವೆ ಎಂಬುದು ಎಂದಿಗೂ ಇಲ್ಲ" (೧–೧) (ಇದಕ್ಕೆ ಚಂದ್ರಕೀರ್ತಿಯ ಟೀಕೆ, ಈ ಶ್ಲೋಕದಲ್ಲಿ "ಜಾತು" ಎಂಬ ಪದವು ಎಂದಿಗೂ ಎಂಬ ಅರ್ಥವನ್ನು ಹೇಳುತ್ತದೆ. "ಕ್ವಚನ" ಎಂಬುದು ಆಧಾರವನ್ನು ಹೇಳುತ್ತದೆ. "ಕ್ವಚಿತ್" ಯಾವಾಗಲಾದರೂ (ಎಲ್ಲಾದರೂ) ಎಂಬ ಶಬ್ದಕ್ಕೆ ಪರ್ಯಾಯವಾಗಿದೆ. ಆಗ ಈ ರೀತಿಯಾಗಿ ಅನ್ವಯವಿರುತ್ತದೆ. ಪದಾರ್ಥಗಳು ತಮ್ಮಷ್ಟಕ್ಕೆ ತಾವು ಎಲ್ಲೂ ಯಾವುವೂ ಹೇಗೂ ಹುಟ್ಟುವುದಿಲ್ಲ. ಈ ರೀತಿಯಾಗಿ ಮೂರು ಪ್ರತಿಜ್ಞೆಯನ್ನೂ ಹೊಂದಿಸಿಕೊಳ್ಳಬೇಕು.)

ಸತ್ತಾದ, ಅಸತ್ತಾದ, ಸದಸತ್ತಾದ ಯಾವ ವಸ್ತುವೂ ಯಾವಾಗಲೂ ಉಂಟಾಗುವುದೇ ಇಲ್ಲ ಎಂದು ಯಾವಾಗ (ತೀರ್ಮಾನವಾಯಿತೋ) ಆಗ ಉಂಟುಮಾಡುವುದಕ್ಕೆ ಕಾರಣವೇನಿದ್ದೀತು! ಏಕೆಂದರೆ ಹೀಗಾದರೆ (ಮೂರರಲ್ಲಿ ಒಂದಾಗಿದ್ದರೆ) ಹುಟ್ಟುತ್ತದೆ. (ಮಾ.ಕಾ–೧–೨) ಎಂಬುದಾಗಿ ಹೇಳುತ್ತಾ ಯಾವ ರೀತಿಯಿಂದಲೂ ಭಾವಗಳಿಗೆ ಉತ್ಪತ್ತಿಯು ಹೊಂದುವುದಿಲ್ಲ ಎಂದು

ಇತಿ ಸರ್ವಥಾಪಿ ಭಾವಾನಾಮುತ್ಪತ್ತಿರ್ನ ಸಂಭವತೀತ್ಯುಕ್ತ್ವಾ ಪ್ರಾಹ -

ಯಥಾ ಮಾಯಾ ಯಥಾ ಸ್ವಪ್ನೋ ಗಂಧರ್ವನಗರಂ ಯಥಾ |
ತಥೋತ್ಪಾದಸ್ತಥಾ ಸ್ಥಾನಂ ತಥಾ ಭಂಗ ಉದಾಹೃತಃ || ಮಾ.ಕಾ. ೭-೩೪.

[ ಚಂದ್ರಕೀರ್ತಿಃ - ಯಥಾ ಮಾಯಾದಯಃ ಸ್ವಭಾವೇನಾನುತ್ಪನ್ನಾ ಅವಿದ್ಯಾಮಾಯಾದಿ-ಶಬ್ದವಾಚ್ಯಾಃ, ಮಾಯಾದಿವಿಜ್ಞಾನಗಮ್ಯಾಶ್ಚ ಲೋಕಸ್ಯ, ಏವಮೇತೇಽಪಿ ಲೋಕ-ಪ್ರಸಿದ್ಧಿಮಾತ್ರೇಣೋತ್ಪಾದಾದಯಃ ಸ್ವಭಾವೇನಾವಿದ್ಯಮಾನಾ ಅಪಿ ಭಗವತಾ ತಥಾವಿಧವಿನೇಯಜನಾನುಗ್ರಹಚಿಕೀರ್ಷುಣಾ ನಿರ್ದಿಷ್ಟಾಃ - ಇತಿ || ]

ಇತ್ಯುತ್ಪತ್ತಿಸ್ಥಿತಿಲಯಾನಾಂ ಸರ್ವಥಾಪಿ ನಿಷೇಧಃ ಕೃತಃ, ಮಾಯಾಸ್ವಪ್ನಾದಿದೃಷ್ಟಾಂತ-ಮುಪಾದಾಯಾಪಿ ಮಾಯಾವಿಸ್ವಪ್ನದೃಗಾದಿಸತ್ತ್ವಮಪಿ ಪ್ರತ್ಯಾಖ್ಯಾತಮ್ - ಇತಿ ಸರ್ವಥಾಪಿ ಜಾತ್ಯಭಾವ ಏವ ತಸ್ಯಾಜಾತಿವಾದೇನ ನಿರ್ವಾಹ್ಯಮ್ | ಆಚಾರ್ಯಾಸ್ತು-

---

ಹೇಳಿ, "ಮಾಯೆ ಹೇಗೋ, ಸ್ವಪ್ನವು ಹೇಗೋ ಗಂಧರ್ವನಗರವು ಹೇಗಿದೆಯೋ, ಹಾಗೆಯೇ ಉತ್ಪಾದವು, ಸ್ಥಿತಿಯು, ನಾಶವೆಂಬುದೆಂದು ಹೇಳಿರುತ್ತದೆ". ಮಾ.ಕಾ. ೭–೩೪

(ಇದಕ್ಕೆ ಚಂದ್ರಕೀರ್ತಿಯ ವ್ಯಾಖ್ಯಾನವು – ಹೇಗೆ ಮಾಯೆಯೇ ಮುಂತಾದವುಗಳು ಸ್ವಭಾವದಿಂದಲೇ ಹುಟ್ಟದೇ ಇರುವಂಥವುಗಳೋ, ಅವುಗಳೇ ಅವಿದ್ಯೆ, ಮಾಯೆ ಮುಂತಾದ ಶಬ್ದಗಳಿಗೆ ವಾಚ್ಯವಾಗಿವೆ. ಜನರಿಗೆ ಮಾಯೆಯೇ ಮುಂತಾದ ಅರಿವಿಗೆ ಗೊತ್ತಾಗುವಂಥವುಗಳೂ ಆಗಿವೆ. ಇದೇ ರೀತಿ ಈ ಲೋಕಪ್ರಸಿದ್ಧಿಮಾತ್ರದಿಂದ ಉತ್ಪತ್ತಿಯೇ ಮುಂತಾದವುಗಳು ಸ್ವಭಾವದಿಂದ ಇಲ್ಲದವುಗಳೇ ಆಗಿದ್ದರೂ ಕೂಡ ಆ ತರಹದ (ಆ ಮಟ್ಟದ) ಶಿಷ್ಯರನ್ನನುಗ್ರಹ ಮಾಡಬೇಕೆಂಬ ಇಚ್ಛೆಯಿಂದ ಭಗವಂತನಾದ (ಗೌತಮ ಬುದ್ಧನು) ಹೇಳಿರುತ್ತಾನೆ (ಎಂದಿದೆ)).

ಹೀಗೆ ಉತ್ಪತ್ತಿ ಸ್ಥಿತಿಲಯಗಳನ್ನು ಎಲ್ಲಾ ಪ್ರಕಾರದಿಂದಲೂ ಮಾಯೆ ಸ್ವಪ್ನ(ವೆಂಬ) ದೃಷ್ಟಾಂತಗಳನ್ನು ತೆಗೆದುಕೊಂಡು ಅಲ್ಲಗಳೆದಿದೆ. (ಹಾಗೆಯೇ) ಮಾಯಾವಿಯನ್ನು, ಸ್ವಪ್ನವನ್ನು ನೋಡುವಾತನನ್ನೂ ಸಹ ಅಲ್ಲಗಳೆದಿರುತ್ತದೆ. ಆತನ ಅಜಾತಿವಾದದಿಂದ ಎಲ್ಲಾ ರೀತಿಯಿಂದಲೂ ಜಾತ್ಯಭಾವವನ್ನೇ ಹೇಳಿದೆ (ಎಂದು ತಿಳಿಯಬೇಕು). ಗೌಡಪಾದಾಚಾರ್ಯರಾದರೋ –

(ಅ) ನೇಹ ನಾನೇತಿ ಚಾಮ್ನಾಯಾದಿಂದ್ರೋ ಮಾಯಾಭಿರಿತ್ಯಪಿ |
ಅಜಾಯಮಾನೋ ಬಹುಧಾ ಮಾಯಯಾ ಜಾಯತೇ ತು ಸಃ || ಗೌ.ಕಾ.೩-೨೪.

ಸತೋ ಹಿ ಮಾಯಯಾ ಜನ್ಮ ಯುಜ್ಯತೇ ನ ತು ತತ್ತ್ವತಃ || ಗೌ.ಕಾ.೩-೨೭.

ಇತಿ ಚ ಬ್ರುವಂತಃ ಪರಮಾರ್ಥಸತ ಆತ್ಮನ ಏವೋತ್ಪತ್ತಿಸ್ಥಿತಿಲಯವತ್ತ್ವಂ ಮಾಯಯೇತ್ಯಂಗೀಚಕ್ರುಃ -

(ಆ) ಸೃಷ್ಟಿರಿತಿ ಸೃಷ್ಟಿವಿದೋ ಲಯ ಇತಿ ಚ ತದ್ವಿದಃ |
ಸ್ಥಿತಿರಿತಿ ಸ್ಥಿತಿವಿದಃ ಸರ್ವೇ ಚೇಹ ತು ಸರ್ವದಾ || ಗೌ.ಕಾ.೨-೨೮.

ಅತ್ರ ಹಿ ಸೃಷ್ಟ್ಯಾದಯೋಽಪ್ಯಾತ್ಮನಿ ವಿಕಲ್ಪಿತಾ ಇತ್ಯುಚ್ಯಂತೇ | ತಥಾ ಹಿ ಭಾಷ್ಯಕೃತಃ -

(ಇ) ಪ್ರಾಣಃ ಪ್ರಾಜ್ಞೋ ಬೀಜಾತ್ಮಾ, ತತ್ಕಾರ್ಯಭೇದಾ ಹಿ ಇತರೇ ಸ್ಥಿತ್ಯಂತಾಃ |
ಅನ್ಯೇ ಚ ಸರ್ವೇ ಲೌಕಿಕಾ ಸರ್ವಪ್ರಾಣಿಪರಿಕಲ್ಪಿತಾ ಭೇದಾ ರಜ್ಜ್ವಾಮಿವ

---

(ಅ) "ನೇಹ ನಾನಾಸ್ತಿ" "ಇಂದ್ರೋ ಮಾಯಾಭಿಃ" "ಅಜಾಯಮಾನೋ ಬಹುಧಾ" ಎಂಬ ಶ್ರುತಿಗಳ ಆಧಾರದಿಂದ ಹುಟ್ಟೆಂಬುದು ಮಾಯೆಯಿಂದ ಆಗಿರುತ್ತದೆ. (ಗೌ.ಕಾ.೩-೨೪)

"ಇದ್ದದ್ದಕ್ಕಲ್ಲವೇ? ಮಾಯೆಯಿಂದ ಜನ್ಮವೆಂಬುದಾಗಬೇಕು, ಆದರೆ ನಿಜವಾಗಿ ಆಗುವುದಿಲ್ಲ" (ಗೌ.ಕಾ. ೩-೨೭) ಎಂದು ಹೇಳುತ್ತಾ ಪರಮಾರ್ಥವಾಗಿರುವ ಆತ್ಮನಿಂದಲೇ ಉತ್ಪತ್ತಿಸ್ಥಿತಿಲಯುವೆಂಬುದನ್ನು ಮಾಯೆಯಿಂದ ಎಂದು ಒಪ್ಪಿರುತ್ತಾರೆ.

(ಆ) ಸೃಷ್ಟಿಯನ್ನು ಬಲ್ಲವರು ಸೃಷ್ಟಿಯನ್ನು (ಸತ್ಯವೆಂತಲೂ) ಲಯವನ್ನು ಹೇಳುವವರು ಲಯವೇ (ನಿಜವೆಂತಲೂ) ಸ್ಥಿತಿ ಎಂದು ಸ್ಥಿತಿಯನ್ನು ಬಲ್ಲವರು ಹೇಳುವರು, ಆದರೆ ಎಲ್ಲವೂ ಯಾವಾಗಲೂ ಇವು ಆತ್ಮನಲ್ಲಿ ಕಲ್ಪಿತವಾಗಿವೆ" (ಗೌ.ಕಾ ೨-೨೮).

ಇಲ್ಲಿ ಸೃಷ್ಟ್ಯಾದಿಗಳು ಆತ್ಮನಲ್ಲಿ ಕಲ್ಪಿತವಾಗಿವೆ ಎಂದು ಹೇಳಿದೆ. ಹಾಗೆಯೇ ಭಾಷ್ಯಕಾರರೂ–

(ಇ) ಪ್ರಾಣನು ಎಂದರೆ ಬೀಜಾತ್ಮನಾದ ಪ್ರಾಜ್ಞನು, ಉಳಿದ ಸ್ಥಿತ್ಯಂತ–ವಾದದ್ದೆಲ್ಲ ಅದರ ಕಾರ್ಯಭೇದವೇ ಆಗಿರುತ್ತದೆ. ಬಾಕಿ ಎಲ್ಲಾ ಲೌಕಿಕರಾದ

ಸರ್ಪಾದಯಃ, ತಚ್ಛೂನ್ಯೇ ಆತ್ಮನಿ, ಆತ್ಮಸ್ವರೂಪಾನಿಶ್ಚಯಹೇತೋರವಿದ್ಯಯಾ ಕಲ್ಪಿತಾಃ - ಇತಿ ಪಿಂಡೀಕೃತೋಽರ್ಥಃ ||

ಇತಿ | ತದೇವಂ ಪರಮಾರ್ಥಸದ್ಭೂತಃ ಪರಮಾತ್ಮೈವ ನಿರೋಧೋತ್ಪಾದಾದೀನಾಂ ವಿಕಲ್ಪಾನಾಮ್ ಆಸ್ಪದಮಿತಿ ವೇದಾಂತಿಮತಮ್; ನಿರಾಸ್ಪದಾ ಏವ ತೇ ವಿಕಲ್ಪಾ ಇತಿ ಮಾಧ್ಯಮಿಕನಯಃ | ಯದ್ಯಪಿ ಪಾಶ್ಚಾತ್ತ್ಯವಿದ್ಯಾಪರಿಪಾಟೀಸಂಸ್ಕೃತವಿಚಾರ-ಕ್ರಮಮನುರುಧ್ಯಮಾನಾಃ ಕೇಚಿದಭಿಪ್ರಯಂತಿ - ನ ಮಾಧ್ಯಮಿಕಾ ನಿರಾಸ್ಪದವಿಕಲ್ಪ-ವಾದಿನಃ, ಶೂನ್ಯಮಿತಿ ಹಿ ತೈರ್ನಾಸದ್ರೂಪಃ ಪದಾರ್ಥ ಉಚ್ಯತೇ, ಕಿಂ ತು ನಿರ್ವಿಕಲ್ಪಂ ಬುದ್ಧೇರಗೋಚರಂ ತತ್ತ್ವಂ ಪ್ರಜ್ಞಾಪಾರಮಿತಾಭಿಧಮ್ | ಧರ್ಮಾಣಾಂ ಹಿ "ಧರ್ಮತಾ", "ಪ್ರಜ್ಞಾಪಾರಮಿತಾ", "ಭೂತಕೋಟಿಃ", "ತಥತಾ" - ಇತ್ಯಾದಿಶಬ್ದೈ-ರ್ವ್ಯಪದಿಶ್ಯತ ಇತಿ | ತದೇತನ್ನಾಗಾರ್ಜುನಾದೀನಾಂ ನ ಸಂಮತಮಿತಿ ವಿತತ್ಯೋಪ-ಪಾದಿತಂ ಮಾಂಡೂಕ್ಯರಹಸ್ಯವಿವೃತೌ, ತತ ಏವಾಧಿಗಂತವ್ಯಂ ಚ | ಇಹ ತು ಸಂಕ್ಷೇಪೇಣ

---

ಜನರೂ ಕಲ್ಪಿಸಿದ್ದಾದ ಭೇದಗಳು ಹಗ್ಗದಲ್ಲಿ ಹಾವು ಕಲ್ಪಿಸಿದಂತೆ ಕಲ್ಪಿಸಿದವುಗಳಾಗಿವೆ. ಆ ಯಾವ (ಕಲ್ಪನೆಯೂ ಇಲ್ಲದ ಆತ್ಮನಲ್ಲಿ) ಆತ್ಮ ಸ್ವರೂಪವನ್ನು ತಿಳಿಯದೆಂಬ ಕಾರಣವಾದ ಅವಿದ್ಯೆಯಿಂದ ಕಲ್ಪಿತವಾದವು-ಗಳೆಂಬುದು ಒಟ್ಟರ್ಥವು.

ಹೀಗೆ ನಿಜವಾಗಿರುವಂತಹ ಪರಮಾತ್ಮನೇ ಉತ್ಪತ್ತಿ ಪ್ರಳಯ ಮುಂತಾದ ವಿಕಲ್ಪಗಳಿಗೆ ಆಸ್ಪದನಾಗಿದ್ದಾನೆಂಬುದು ವೇದಾನ್ತಿಗಳ ಮತವು. ಆದರೆ ಮಾಧ್ಯಮಿಕರಾದ ಬೌದ್ಧರು ಯಾವ ಆಸ್ಪದವೂ ಇಲ್ಲದೇ ವಿಕಲ್ಪಿತವಾಗಿವೆ ಎನ್ನುತ್ತಾರೆ. ಪಾಶ್ಚಾತ್ಯರ ವಿದ್ಯಾಭ್ಯಾಸಕ್ರಮದಿಂದ ಸಂಸ್ಕಾರಗೊಂಡವರ ವಿಚಾರಕ್ರಮವನ್ನನುಸರಿಸುವವರು ಕೆಲವರು ಈ ರೀತಿಯಾಗಿ ಅಭಿಪ್ರಾಯವನ್ನು ಪಡುತ್ತಾರೆ. ಹೇಗೆಂದರೆ – "ಮಾಧ್ಯಮಿಕರು, ವಿಕಲ್ಪಗಳು ನಿರಾಸ್ಪದವಾದದ್ದು ಎಂದು ಹೇಳುವವರಲ್ಲ, ಶೂನ್ಯವೆಂಬುದು ಅಸದ್ರೂಪವಾದ ಪದಾರ್ಥವೆಂದೂ ಹೇಳುವುದಿಲ್ಲ. ಮತ್ತೇನೆಂದರೆ – ಜೀವರುಗಳಿಗೆ "ಧರ್ಮತಾ", "ಪ್ರಜ್ಞಾ-ಪಾರಮಿತಾ", "ಭೂತಕೋಟಿ", "ತಥತಾ" ಇದೇ ಮೊದಲಾದ ಶಬ್ದಗಳ ವ್ಯಪದೇಶವಿರುತ್ತದೆ" (ಎಂದು ಹೇಳುತ್ತಾರೆ). ಆದರೆ ಇದು ನಾಗಾರ್ಜುನರೇ ಮುಂತಾದವರಿಗೆ ಒಪ್ಪಿಗೆಯಾದದ್ದಲ್ಲವೆಂದು ವಿಸ್ತಾರವಾಗಿ ಮಾಂಡೂಕ್ಯರಹಸ್ಯ ವಿವೃತಿಯಲ್ಲಿ ಹೇಳಿದೆ, ಅಲ್ಲಿಂದಲೇ ಹೆಚ್ಚಿನ ವಿಚಾರವನ್ನು ತಿಳಿದುಕೊಳ್ಳಬೇಕು.

ಇದಮಾವೇದ್ಯತೇ ಯತ್ ಪ್ರಜ್ಞಾಪಾರಮಿತ್ಯೈವ ತಾವನ್ಮಾಯೋಪಮತ್ವೇನೋದ್ಘೋಷಿತಾ ಸೌಗತೈರಿತಿ | ತದ್ಯಥಾ -

(೧) "ಅದ್ವಯಜ್ಞಾನಮೇವ ಕೇವಲಂ ಭಾವತೋ ಭಾವರೂಪಮಿತಿ ನಿಶ್ಚಿತ್ಯ ತದಪಿ ಪ್ರತೀತ್ಯಸಮುತ್ಪನ್ನತ್ವಾನ್ಮಾಯಾವನ್ನಿಃಸ್ವಭಾವಂ ತತ್ತ್ವತೋಽಪಗತೈಕಾಂತ-ಭಾವಾಭಾವಾದಿಪರಾಮರ್ಶರೂಪಮ್ - ಇತಿ ಭಾವಯನ್....." || ಅ.ಸ.ಆ.

(೨) ಯತ್ರ ಹಿ ನಾಮ ನಿರ್ವಾಣಮಪಿ ಪ್ರತಿವಿಶಿಷ್ಟಂ ಧರ್ಮಕಾಯಮ್ ಅದ್ವಯಜ್ಞಾನಸ್ವಭಾವಂ ಮಾಯಾಸ್ವಪ್ನಸಮಾನಂ ವದಾಮಿ ತತ್ರ ಕಿಂ ಪುನರನ್ಯಂ ಧರ್ಮಂ ರೂಪಕಾಯಂ ನ ವದಾಮಿ ?.... ಯದಿ ನಿರ್ವಾಣಾದಪಿ ಕಶ್ಚಿದನ್ಯೋ ವಿಶಿಷ್ಟತರೋ ಧರ್ಮಃ ಸಂಭವೇತ್, ತದಾ ತಮಪಿ ಮಾಯಾದಿಸದೃಶಂ ವದೇಯಮ್ || ಅ.ಸ.ಆ.

---

ಇಲ್ಲಿ ಸಂಕ್ಷೇಪವಾಗಿ ಇಷ್ಟನ್ನು ಮಾತ್ರ ಹೇಳಲಾಗುತ್ತದೆ. ಏನೆಂದರೆ - ಪ್ರಜ್ಞಾಪಾರಮಿತೆಯೇ, ಮೊದಲನೆಯದಾಗಿ ಮಾಯೆಗೆ ಸಮಾನವಾದದ್ದೆಂದು ಬೌದ್ಧರು ಉದ್ಘೋಷಣೆ ಮಾಡಿರುತ್ತಾರೆ. ಹೇಗೆಂದರೆ–

(೧) ಭಾವದ ಭಾವರೂಪವು ಕೇವಲವಾದ ಅದ್ವಯ ಜ್ಞಾನರೂಪವೇ ಎಂದು ನಿಶ್ಚಯಿಸಿ, (ಈಗ) ಅದೂ ಪ್ರತೀತ್ಯಸಮುತ್ಪನ್ನವಾದ್ದರಿಂದ ಒಂದರ (ಅಪೇಕ್ಷೆಯಿಂದ ಬಂದದ್ದೆಂದಾದ್ದರಿಂದ) ಮಾಯೆಯಂತೆ ನಿಜವಾಗಿ ನಿಃ–ಸ್ವಭಾವವೇ, ಭಾವಾಭಾವಾದಿ ಪರಾಮರ್ಶೆಯ ರೂಪವು ತೊಲಗಿ ಹೋಗಿರುವಂಥದ್ದೆಂದೇ ತಿಳಿಯಬೇಕೆನ್ನುತ್ತಾ..... (ಅಭಿಸಮಯಾಲಂಕಾರ ೪೯೮ ಪುಟ) ಹೀಗೆಂದಿದ್ದಾರೆ.

(೨) "ಎಲ್ಲಿ ನಿರ್ವಾಣವೆಂಬುದೂ ಸಹ ಗೊತ್ತಾದ ಜೀವರೂಪವೂ ಅದ್ವಯಜ್ಞಾನ ಸ್ವಭಾವವೆಂಬುದೂ ಸಹ ಮಾಯಾ ಸ್ವಪ್ನಕ್ಕೆ ಸಮಾನ–ವೆನ್ನುವೆನೋ ಅಲ್ಲಿ ಇನ್ನಾವ ಬೇರೆ ವಸ್ತುವಿನ ರೂಪವಿಶೇಷವನ್ನು (ಶೂನ್ಯ–ವೆಂಬುದಾಗಿ) ಹೇಳದೇ ಇದ್ದೇನು!..... ಒಂದು ವೇಳೆ ನಿರ್ವಾಣಕ್ಕಿಂತಲೂ ಒಂದಾನೊಂದು ಬೇರೆ ತೆರನಾದ ಜೀವನು ಇರುವುದಾದರೆ ಆಗ ಆತನನ್ನೂ ಮಾಯಾದಿಗಳಿಗೆ ಸಮಾನವೆಂದು ಹೇಳುವೆನು". (ಅಭಿಸಮಯಾಲಂಕಾರ ೧೪೪) ಎಂಬುದಾಗಿ ಅಭಿಸಮಯಾಲಂಕಾರಲೋಕದಲ್ಲಿ ಸುಸ್ಪಷ್ಟವಾಗಿ

ಇತಿ ಚ ಅಭಿಸಮಯಾಲಂಕಾರಾಲೋಕೇ ಸುಸ್ಫುಟಂ ಸರ್ವಸ್ಯಾಪಿ ಮಾಯೋಪಮತ್ವಮೇವೋದ್ಘೋಷಿತಮ್ ||

ಅಪಿ ಚ "ಪ್ರಜ್ಞಾಪಾರಮಿತಾಜ್ಞಾನಮದ್ವಯಂ ಸಾ ತಥಾಗತಃ" ಇತಿ ದಿಙ್ನಾಗವಚನಮ್ ಅನ್ಯಥೈವ ಯೋಜಯಿತ್ವಾ ಖಲು ಪ್ರಜ್ಞಾಪಾರಮಿತಾಯಾಃ ಪರಮಾರ್ಥತ್ವಮಂಗೀಕೃತಂ ಬೌದ್ಧೈರಿತಿ ಪ್ರತಿಜ್ಞಾಯತೇ ಅಧುನಾತನೈತಿಹಾಸಕೈಃ | ತತ್ರ ಪ್ರಜ್ಞಾಪಾರಮಿತಾಯಾ ಮಾಯೋಪಮತ್ವಮೇವ ಕಂಠರವೇಣೋಕ್ತಂ ಬೌದ್ಧೈರಿತ್ಯಾವೇದಿತಮಧಸ್ತಾತ್ | ನಾಗಾರ್ಜುನ ಏವ ಸಾಕ್ಷಾತ್ ತಥಾಗತಸ್ಯಾಪಿ ನಿಃಸ್ವಭಾವತ್ವಮೇವಾಹೇತಿ ಕಥಂಕಾರಂ ತಸ್ಯ ಪರಮಾರ್ಥತಾ ಮಾಧ್ಯಮಿಕಾನಾಂ ಮತಾ - ಇತಿ ಯುಕ್ತಂ ಸ್ಯಾದ್ ವಚಃ ? ತಥಾ ಹಿ ನಾಗಾರ್ಜುನಃ -

(೩) ಪ್ರಪಂಚಯಂತಿ ಯೇ ಬುದ್ಧಂ ಪ್ರಪಂಚಾತೀತಮವ್ಯಯಮ್ |
ತೇ ಪ್ರಪಂಚಹತಾಃ ಸರ್ವೇ ನ ಪಶ್ಯಂತಿ ತಥಾಗತಮ್ ||
ತಥಾಗತೋ ಯತ್ಸ್ವಭಾವಸ್ತತ್ಸ್ವಭಾವಮಿದಂ ಜಗತ್ |
ತಥಾಗತೋ ನಿಃಸ್ವಭಾವೋ ನಿಃಸ್ವಭಾವಮಿದಂ ಜಗತ್|| ಮಾ.ಕಾ. ೨೨-೧೫,೧೬.

---

ಎಲ್ಲವೂ ಮಾಯೆಗೆ ಸಮಾನವೆಂದು ಘೋಷಿಸಿದೆ.

ಆಧುನಿಕ ಇತಿಹಾಸಕಾರರು "ಪ್ರಜ್ಞಾಪಾರಮಿತವಾದ ಜ್ಞಾನವು ಅದ್ವಯವೂ ಮತ್ತು ಹಾಗೆಯೇ ಇರತಕ್ಕದ್ದೆಂಬ" ದಿಙ್ನಾಗನ ಮಾತನ್ನು ಬೇರೊಂದು ರೀತಿಯಿಂದ ಹೊಂದಿಸಿ "ಬೌದ್ಧರೂ ಸಹ ಪ್ರಜ್ಞಾಪಾರಮಿತೆಯನ್ನು ಪರಮಾರ್ಥವೆಂಬುದಾಗಿ ಒಪ್ಪಿರುತ್ತಾರೆ" ಎಂದು ಏನು ಪ್ರತಿಜ್ಞೆ ಮಾಡಿರುತ್ತಾರೆ, ಅಲ್ಲಿ (ನಾವು ಹೇಳುವುದೇನೆಂದರೆ) ಮೇಲೆ ತೋರಿಸಿ ಕೊಟ್ಟಂತೆ ಪ್ರಜ್ಞಾಪಾರಮಿತೆ ಎಂಬುದು ಮಾಯೆಗೆ ಸಮಾನವೆಂಬುದಾಗಿ ಅವರೇ ಬಾಯಿಬಿಟ್ಟು ಹೇಳಿರುತ್ತಾರಲ್ಲಾ!? ನಾಗಾರ್ಜುನನೇ ನೇರಾಗಿ ತಥಾಗತವೂ ಸಹ ನಿಃಸ್ವಭಾವವಾದದ್ದೆಂದು ಹೇಳಿರುವಾಗ, ಹೇಗೆ ತಾನೇ ಬೌದ್ಧರಿಗೆ ಪರಮಾರ್ಥತೆ ಎಂಬುದು ಒಪ್ಪಿಗೆಯಾದದ್ದು ಎಂಬ ಮಾತು ಯುಕ್ತವಾಗುತ್ತದೆ? ನಾಗಾರ್ಜುನನೂ ಹಾಗೆಯೇ ಹೇಳಿರುತ್ತಾನೆ.

(೩) ಪ್ರಪಂಚಾತೀತನಾದ ಅವ್ಯಯವಾದ ಜ್ಞಾನವನ್ನು ಯಾರು ವರ್ಣಿಸುತ್ತಾರೋ ಅವರು ಆ ವರ್ಣನೆಯಿಂದ ಹತರಾದವರು, ಅವರು ಸತ್ಯವನ್ನರಿಯರು, ನಿಜವಾಗಿ (ಶೂನ್ಯಕ್ಕೆ) ಏನು ಸ್ವಭಾವವೋ ಈ ಜಗತ್ತೂ

ಇತ್ಯಪರಮಾರ್ಥತ್ವಮೇವ ಸರ್ವಸ್ಯಾಪ್ಯವಧಾರಯತಿ | ತೇನ ಸ್ಕಂಧಾನಾಂ ನಿರೋಧಾತ್ ನಿರುಪಾಧಿಶೇಷಂ ನಿರ್ವಾಣಂ ಲಭ್ಯತೇ - ಇತ್ಯೇಕದೇಶಿಮತಮಪಿ ತೇನ ನೈವೋಪಗಮ್ಯತ ಇತ್ಯೇವ ಯುಕ್ತಮ್ | ಯತ ಆಹ -

(೪) ಯದ್ಯಶೂನ್ಯಮಿದಂ ಸರ್ವಮುದಯೋ ನಾಸ್ತಿ ನ ವ್ಯಯಃ |
ಪ್ರಹಾಣಾದ್ ವಾ ನಿರೋಧಾದ್ ವಾ ಕಸ್ಯ ನಿರ್ವಾಣಮಿಷ್ಯತೇ || ಮಾ.ಕಾ. ೨೫-೨.

[ ಅತ್ರ ಚಂದ್ರಕೀರ್ತಿಃ - "ಶೂನ್ಯವಾದಿನಃ ಕ್ಲೇಶಾನಾಂ ಬಂಧಾನಾಂ ವಾ ನಿವೃತ್ತಿಲಕ್ಷಣಂ ನಿರ್ವಾಣಂ ನೇಚ್ಛಂತಿ - ಇತಿ | ಉತ್ತರತ್ರ ಚ "ಸರ್ವೋಪಲಂಭೋಪಶಮಃ" ಇತಿ ಕಾರಿಕಾವ್ಯಾಖ್ಯಾಯಾಂ ಸ್ಪಷ್ಟತರಮಾಹ - "ತಸ್ಮಾನ್ನಿರ್ವಾಣಮಪಿ ನಾಸ್ತೀತಿ ಸಿದ್ಧಮ್" ಇತಿ || " ]

**೫೮. ಪರಮಾರ್ಥನಿರ್ಧಾರಣಕ್ರಮೇಽಪಿ ದರ್ಶನಯೋರ್ವೈಲಕ್ಷಣ್ಯಮ್-**
ಅನ್ಯಚ್ಚ - "ನ ಸನ್ನಾಸನ್ನ ಸದಸನ್" (ಮಾ.ಕಾ. ೧-೭) ಇತಿ ಚತುಷ್ಕೋಟಿನಿರಾಸೇನೈವ

---

ಅದೇ ಸ್ವಭಾವದ್ದು, ಶೂನ್ಯವೆಂಬುದು ನಿಃಸ್ವಭಾವವಲ್ಲವೇ? ಹಾಗೆಯೇ ಈ ಜಗತ್ತೂ ನಿಃಸ್ವಭಾವವಾದದ್ದು" (ಮಾ.ಕಾ. ೨೨-೧೫, ೧೬). ಎಂದು ಎಲ್ಲವೂ ಸುಳ್ಳೆಂದೇ ನಿರ್ಣಯಿಸಿರುತ್ತಾನೆ. ಇದರಿಂದ ಸ್ಕಂಧಗಳು ಇಲ್ಲವಾದ್ದರಿಂದ ನಿರ್ವಾಣವೆಂಬುದು ಯಾವ ಉಪಾಧಿಯೂ ಇಲ್ಲದ್ದು ಎಂದು ಸಿದ್ಧವಾಗುತ್ತದೆ ಎಂದು ಹೇಳಿದ್ದರಿಂದ ಏಕದೇಶೀ ಮತವೂ ಸಹ (ಅವನಿಗೆ) ಒಪ್ಪಿಗೆಯಾಗಿಲ್ಲ ಎಂಬುದೇ ಯುಕ್ತವಾದದ್ದು. ಏಕೆಂದರೆ –

(೪) ಇದೆಲ್ಲವೂ ಶೂನ್ಯವಲ್ಲವೆಂದಾದರೆ ಹುಟ್ಟಾಗಲೀ ನಾಶವಾಗಲೀ ಇಲ್ಲದಿರುವಾಗ ಬಿಡುವುದರಿಂದಲಾಗಲೀ ನಾಶದಿಂದಲಾಗಲೀ ಯಾರಿಗೆ ನಿರ್ವಾಣವೆನ್ನಬೇಕಾಗುವುದು (ಮಾ.ಕಾ ೨೫–೨) ಈ ವಿಷಯಕ್ಕೆ ಚಂದ್ರಕೀರ್ತಿಯು – (ಶೂನ್ಯವಾದಿಗಳು ಕ್ಲೇಶ ಮತ್ತು ಬಂಧಗಳ ನಿವೃತ್ತಿರೂಪವಾದ ಮೋಕ್ಷವನ್ನು ಇಷ್ಟಪಡುವುದಿಲ್ಲ. ಮುಂದೆ "ಎಲ್ಲಾ ತೋರಿಕೆಗಳ ಅಡಗುವಿಕೆ" ಎಂಬ ಕಾರಿಕೆಯ ವ್ಯಾಖ್ಯಾನದಲ್ಲಿ ಸ್ಪಷ್ಟವಾಗಿ ಹೇಳಿರುತ್ತಾನೆ. "ಆದ್ದರಿಂದ ನಿರ್ವಾಣವೆಂಬುದು ಇಲ್ಲ ಎಂದು ಸಿದ್ಧವಾಯಿತು ಎಂದಿರುತ್ತಾನೆ)

**೫೮) ಪರಮಾರ್ಥವನ್ನು ನಿರ್ಣಯಮಾಡುವ ಕ್ರಮದಲ್ಲೂ**

ಯದ್ಯಪಿ ಜಾತಿಮಾತ್ರಂ ನಿರಾಕೃತಂ ನಾಗಾರ್ಜುನೇನ, ತಥಾಪಿ ಸದಸದಾದಿವಿಕಲ್ಪಾ ಯದ್ವಿಷಯಾಃ ಸ ಪರಮಾರ್ಥಃ ಕಥಂಚಿದಪಿ ನ ಪ್ರತಿಪಾದಿತೋ ಭವತಿ ತಾವತಾ | ನ ಹಿ ವಿಕಲ್ಪನಿರಾಕರಣಮಾತ್ರೇಣ ಪರಮಾರ್ಥಸತ್ತ್ವಮಸತ್ತ್ವಂ ವಾ ಸಾಧ್ಯತೇ ನ ಚ ಯುಕ್ತ್ಯಾ ನಿಷೇಧಮಾತ್ರೇಣಾಪಿ ವಸ್ತುತತ್ತ್ವಂ ನಿರಾಕ್ರಿಯತೇ | ನ ಹಿ ಪ್ರತೀಯಮಾನಂ ವಸ್ತು ಯುಕ್ತಿಮಾತ್ರೇಣ "ಅಸಂಭಾವಿತಮಿದಮ್" ಇತಿ ನಿರಾಕ್ರಿಯಮಾಣಮಪಿ ವಸ್ತು ನ ಭವತಿ | ಯಥೋಕ್ತಂ ಭಾಷ್ಯಕಾರೈಃ -

> (೧) ಪ್ರಮಾಣಪ್ರವೃತ್ತ್ಯಪ್ರವೃತ್ತಿಪೂರ್ವಕೌ ಸಂಭವಾಸಂಭವೌ ಅವಧಾರ್ಯೇತೇ ನ ಪುನಃ ಸಂಭವಾಸಂಭವಪೂರ್ವಿಕೇ ಪ್ರಮಾಣಪ್ರವೃತ್ತ್ಯಪ್ರವೃತ್ತೀ ||
>
> ಸೂ.ಭಾ. ೨-೨-೨೮.

ಇತಿ | ನ ಚಾದ್ವೈತಿಭಿರಪಿ ಪ್ರಮಾಣಾನಾಂ ನಿರಾಕರಣಾತ್ ನಾಯಮಭಿಯೋಗೋ ಯುಕ್ತಃ - ಇತಿ ವಾಚ್ಯಮ್ | ಅದ್ವೈತಿಭಿರ್ಹಿ ಪ್ರಮಾಣವ್ಯವಹಾರಸ್ಯಾವಿದ್ಯಾಪುರಸ್ಸರ-

---

**ದರ್ಶನಗಳಿಗೆ ವ್ಯತ್ಯಾಸವು.** ಇನ್ನೂ ಒಂದು ಏನೆಂದರೆ – "ಸತ್ತಲ್ಲ, ಅಸತ್ತಲ್ಲ, ಸದಸತ್ತಲ್ಲ" (ಮಾ.ಕಾ. ೧–೭) ಎಂಬುದಾಗಿ ನಾಲ್ಕು ಕೋಟಿ ಇಲ್ಲದ್ದೆಂದು ಹೇಳಿದ್ದರಿಂದಲೇ ಹುಟ್ಟನ್ನು ನಾಗಾರ್ಜುನನು ಅಲ್ಲಗಳೆದಿದ್ದರೂ ಈ ಸದಸದಾದಿ ವಿಕಲ್ಪಗಳು ಯಾವುದನ್ನು ವಿಷಯಮಾಡಿಕೊಂಡಿವೆಯೋ ಆ ಪರಮಾರ್ಥವನ್ನು ಅಷ್ಟರಿಂದ ಪ್ರತಿಪಾದನೆ ಮಾಡಿದಂತಾಗುವುದಿಲ್ಲ. ವಿಕಲ್ಪವನ್ನು ಅಲ್ಲಗಳೆದ ಮಾತ್ರದಿಂದ ಪರಮಾರ್ಥದ ಇರುವಿಕೆಯಾಗಲೀ ಇಲ್ಲದಿರುವಿಕೆಯಾಗಲೀ ಸಿದ್ಧವಾಗುವುದಿಲ್ಲವಷ್ಟೇ? ಯುಕ್ತಿಯಿಂದ (ವಸ್ತುವನ್ನು) ಅಲ್ಲಗಳೆದ ಮಾತ್ರದಿಂದ ವಸ್ತು ತತ್ವವನ್ನು ಅಲ್ಲಗಳೆಯುವುದಕ್ಕಾಗುವು–ದಿಲ್ಲವಷ್ಟೇ? ತೋರುತ್ತಿರುವ ವಸ್ತುವು ಯುಕ್ತಿಮಾತ್ರದಿಂದ ಇದು ಹೊಂದುವುದಿಲ್ಲ" ಎಂದು ನಿರಾಕರಿಸಿದರೂ ವಸ್ತುವೇನೂ ಇಲ್ಲವೆಂದಾಗುವು–ದಿಲ್ಲವಷ್ಟೇ? ಇದನ್ನು ಭಾಷ್ಯಕಾರರೂ ಸಹ ಹೇಳಿರುತ್ತಾರೆ.

(೧) "ಪ್ರಮಾಣಗಳ ಪ್ರವೃತ್ತಿ ಅಪ್ರವೃತ್ತಿದ್ವಾರಾ, ಹೊಂದುತ್ತದೆ ಹೊಂದುವುದಿಲ್ಲ ಎಂಬುದನ್ನು ನಿರ್ಣಯಿಸಬೇಕೇ ಹೊರತು ಹೊಂದುತ್ತದೆ ಹೊಂದುವುದಿಲ್ಲ ಎಂಬುದನ್ನು ಮುಂದುಮಾಡಿಕೊಂಡು ಪ್ರಮಾಣಗಳ ಪ್ರವೃತ್ತ್ಯಪ್ರವೃತ್ತಿಯನ್ನು ನಿರ್ಣಯಿಸುವುದಕ್ಕಾಗುವುದಿಲ್ಲ" (ಸೂ. ಭಾ. ೨–೨–೨೮).

ಪ್ರವೃತ್ತೇರನುಭವಾನುಸಾರಿಯುಕ್ತ್ಯಾ ಸಮುಪಪಾದ್ಯಮಾನತ್ವಾತ್, ಅವಿದ್ಯಾಯಾಶ್ಚ ಸತ್ಯಾನೃತಯೋರಿತರೇತರಾಧ್ಯಾಸರೂಪಾಯಾಃ ಸರ್ವಲೋಕಪ್ರತ್ಯಕ್ಷತ್ವಾತ್ | ನ ತ್ವೇವಂ ವ್ಯವಹಾರಸ್ಯಾನೃತತ್ವಮ್ ಅನುಭವಾನುಸಾರಿಯುಕ್ತ್ಯಾ ಉಪಪಾದ್ಯತೇ ಸೌಗತೈರಿತಿ ವೈಷಮ್ಯಮ್ | ಅಥ ಸ್ಯಾತ್ -

(೧) ದ್ವೇ ಸತ್ಯೇ ಸಮುಪಾಶ್ರಿತ್ಯ ಬುದ್ಧಾನಾಂ ಧರ್ಮದೇಶನಾ |
ಲೋಕಸಂವೃತಿಸತ್ಯಂ ಚ ಸತ್ಯಂ ಚ ಪರಮಾರ್ಥತಃ || ಮಾ.ಕಾ. ೨೪-೮.

[ ಚಂದ್ರಕೀರ್ತಿಃ - ಲೋಕಸಂವೃತ್ಯಾ ಸತ್ಯಂ ಲೋಕಸಂವೃತಿಸತ್ಯಮ್ | ಸರ್ವ ಏವಾಯಮಭಿಧಾನಾಭಿಧೇಯಜ್ಞಾನಜ್ಞೇಯಾದಿವ್ಯವಹಾರೋಽಶೇಷಲೋಕಸಂವೃತಿ-ಸತ್ಯಮಿತ್ಯುಚ್ಯತೇ | ನ ಹಿ ಪರಮಾರ್ಥತ ಏವ ತತ್ ಸಂಭವತಿ || ]

---

ಅದ್ವೈತಿಗಳೂ ಪ್ರಮಾಣಗಳನ್ನು ಅಲ್ಲಗಳೆಯುವುದರಿಂದ ಈ ಆಕ್ಷೇಪವು ಸರಿಯಲ್ಲವಲ್ಲ! ಎಂದು ಹೇಳಬಾರದು, ಏಕೆಂದರೆ - ಅದ್ವೈತಿಗಳು ಪ್ರಮಾಣಗಳ ವ್ಯವಹಾರವು ಅವಿದ್ಯಾಪುರಸ್ಸರವಾಗಿದೆ ಎಂಬುದನ್ನು ಅನುಭವಾನುಸಾರಿಯಾದ ಯುಕ್ತಿಯಿಂದ ಚೆನ್ನಾಗಿ ಹೊಂದಿಸಿರುತ್ತಾರೆ. ಅವಿದ್ಯೆ ಎಂಬುದು ಸತ್ಯಾನೃತವಾಗಿರುವ ಒಂದನ್ನೊಂದರೊಡನೆ ಅಧ್ಯಾಸಮಾಡಿ-ಕೊಳ್ಳುವ ರೂಪವಾದದ್ದೆಂಬುದು ಎಲ್ಲರಿಗೂ ಪ್ರತ್ಯಕ್ಷವಾದದ್ದೆಂದು (ತೋರಿಸಿಕೊಟ್ಟಿರುತ್ತಾರೆ). ಬೌದ್ಧರು ಹೀಗೆ ವ್ಯವಹಾರವು ಅನೃತವಾದದ್ದೆಂದು ಅನುಭವಾನುಸಾರಿಯಾದ ಯುಕ್ತಿಯಿಂದ - (ಪ್ರತೀತ್ಯಸಮುತ್ಪಾದ - ಎಂದರೆ ಒಂದು ಇದ್ದರೆ ಇನ್ನೊಂದು ಉಂಟಾಗುತ್ತದೆ ಎಂಬ ನ್ಯಾಯ - ಗೌ.ಹೃ ೩೩೭) - ತಿಳಿಸಿಲ್ಲವಾದ್ದರಿಂದ (ಅವರಿಗೂ) ಅದಕ್ಕೂ ಇದಕ್ಕೂ ತುಂಬಾ ವ್ಯತ್ಯಾಸವಿದೆ. ಇನ್ನೂ ಹೀಗೆನ್ನಬಹುದು.

(೧) "ಎರಡು ಸತ್ಯವನ್ನು ಆಶ್ರಯಿಸಿಕೊಂಡು ತಿಳಿದವರು ತತ್ವವನ್ನು ಉಪದೇಸಿರುವರು. ಒಂದು ಲೋಕದ ಅವಿದ್ಯಾವ್ಯವಹಾರದ ಸತ್ಯವು, ಇನ್ನೊಂದು ಪರಮಾರ್ಥವಾದ ಸತ್ಯವು". (ಮಾ.ಕಾ. ೨೪-೮).

(ಇದಕ್ಕೆ ಚಂದ್ರಕೀರ್ತಿಯು ಈ ರೀತಿ ವಿವರಿಸುತ್ತಾನೆ. ಲೋಕದ ಅವಿದ್ಯೆಯಿಂದ ತೋರಿದ (ಸತ್ಯವು) ಲೋಕಸಂವೃತ್ತಿಸತ್ಯವು, ಈ ಎಲ್ಲಾ ಅಬಿಧಾನಾಭಿಧೇಯ ಜ್ಞಾನಜ್ಞೇಯುವೇ ಮುಂತಾದ ವ್ಯವಹಾರವು ಏನಿದೆ ಇದು ಎಲ್ಲಾ ಜನರ ಅವಿದ್ಯೆಯಿಂದ ತೋರಿದ ಸತ್ಯವು ಎನ್ನಲಾಗಿದೆ. ಏಕೆಂದರೆ

ಇತಿ ಸೌಗತೈರಪಿ ಪ್ರಮಾಣಾದಿವ್ಯವಹಾರಸ್ಯಾಪರಮಾರ್ಥತ್ವಮಭ್ಯುಪಗತ-ಮೇವೇತ್ಯತೋऽಯಮಪಿ ಮಿಥ್ಯಾಭಿಯೋಗ ಏವೇತಿ | ನೈತದೇವಮ್ -

(೨) ಯಃ ಪ್ರತೀತ್ಯಸಮುತ್ಪಾದಃ ಶೂನ್ಯತಾಂ ತಾಂ ಪ್ರಚಕ್ಷ್ಮಹೇ ||

ಮಾ.ಕಾ.೨೪-೧೮.

ಇತಿ ಪ್ರತೀತ್ಯಸಮುತ್ಪಾದಹೇತುಮಾತ್ರೇಣ ಸರ್ವೇಷಾಂ ಧರ್ಮಾಣಾಂ ನಿಃಸ್ವಭಾವತಾ-ಸಾಧನಾತ್ ಸೌಗತೈಃ ಪ್ರತೀತ್ಯಸಮುತ್ಪಾದಸ್ಯ ಚ ವ್ಯಾವಹಾರಿಕತ್ವಾತ್ -

(೩) ವ್ಯವಹಾರಮನಾಶ್ರಿತ್ಯ ಪರಮಾರ್ಥೋ ನ ದೃಶ್ಯತೇ |
ಪರಮಾರ್ಥಮನಾಗಮ್ಯ ನಿರ್ವಾಣಂ ನಾಧಿಗಮ್ಯತೇ || ಮಾ.ಕಾ. ೨೪-೧೦.

ಇತಿ ವದತಾ ನ ಕಿಂಚಿದುಕ್ತಂ ಸ್ಯಾತ್ ಪರಮಾರ್ಥಶಬ್ದಿತಸ್ಯಾಪಿ ವ್ಯವಹಾರಾವ್ಯತಿರೇಕಾತ್||

(೪) ನಿರ್ವಾಣಸ್ಯ ಚ ಯಾ ಕೋಟಿಃ ಕೋಟಿಃ ಸಂಸರಣಸ್ಯ ಚ |
ನ ತಯೋರಂತರಂ ಕಿಂಚಿತ್ ಸುಸೂಕ್ಷ್ಮಮಪಿ ವಿದ್ಯತೇ || ಮಾ.ಕಾ೨೫-೨೦.

---

ನಿಜವಾಗಿಯೇ ಅದು ಇರುವುದೆಂಬುದು ಹೊಂದುವುದಿಲ್ಲ, ಎಂದು ಪ್ರಮಾಣ ವ್ಯವಹಾರವೂ ಸಹ ನಿಜವಾದದ್ದಲ್ಲವೆಂದು ಬೌದ್ಧರು ಒಪ್ಪಿಯೇ ಇರುತ್ತಾ-ರಾದ್ದರಿಂದ ಈ (ನಿಮ್ಮ) ಆಕ್ಷೇಪವು ಸುಳ್ಳಾದದ್ದೇ, ಎಂದರೆ ಇದು ಸರಿಯಲ್ಲ, ಏಕೆಂದರೆ –

(೨) "ತೋರಿಕೆಯಿಂದ ಹುಟ್ಟುವುದೆಂಬುದೇನಿದೆ ಅದನ್ನು ಶೂನ್ಯವೆಂದು ಹೇಳುತ್ತೇವೆ" (ಮಾ.ಕಾ. ೨೪–೧೮) ಎಂದು ಹೇಳುತ್ತಾ, ತೋರಿಕೆಯಿಂದ ಹುಟ್ಟುತ್ತದೆ ಎಂಬ ಹೇತುವಿನಿಂದ ಎಲ್ಲಾ ಜೀವರುಗಳಿಗೂ (ವಸ್ತುಗಳಿಗೂ) ಬೌದ್ಧರು ನಿಃಸ್ವಭಾವವನ್ನೇ ಹೇಳುವುದರಿಂದ ಪ್ರತೀತ್ಯಸಮುತ್ಪಾದವೆಂಬುದೇ ವ್ಯಾವಹಾರಿಕವು ಎಂದಿರುತ್ತಾರೆ.

(೩) "ವ್ಯವಹಾರವನ್ನಾಶ್ರಯಿಸದೇ ಪರಮಾರ್ಥವನ್ನು ಉಪದೇಶಿಸುವು-ದಕ್ಕಾಗುವುದಿಲ್ಲ. ಪರಮಾರ್ಥವನ್ನು ಹೊಂದದೇ ಮೋಕ್ಷವೆಂಬುದನ್ನೂ ಹೊಂದುವುದಕ್ಕಾಗುವುದಿಲ್ಲ" (ಮಾ. ೨೪–೧೦). ಎಂದು ಹೇಳುತ್ತಾ ಏನನ್ನೂ ಹೇಳಿದಂತಾಗಲಿಲ್ಲ. ಏಕೆಂದರೆ ಪರಮಾರ್ಥವೆಂಬ ಶಬ್ದದಿಂದ ಕರೆಸಿಕೊಂಡ (ತತ್ವವೂ) ವ್ಯವಹಾರಕ್ಕಿಂತ ಬೇರೆಯಾಗಿರುವುದಿಲ್ಲ.

ಇತ್ಯಭ್ಯುಪಗಮಾತ್ ಸಂಸರಣಮೇವ ನಿರ್ವಾಣಮ್, ತಚ್ಚ ಸಂಸರಣಂ ಪ್ರತೀತ್ಯ-ಸಮುತ್ಪಾದಲಕ್ಷಣಸಂವೃತಿಚ್ಛನ್ನಮಿತ್ಯೇವೋಕ್ತಂ ಭವತಿ | ಏವಂ ಚ ನ ಪರಮಾರ್ಥ-ವಿಷಯೇ ಕಿಂಚಿತ್ ಪ್ರತಿಜ್ಞಾತಮ್ | ನ ಚ ಪರಮಾರ್ಥ ಈದೃಶಃ - ಇತಿ ಪ್ರತಿಜ್ಞಾತುಂ ಶಕ್ಯತೇ ನಾಗಾರ್ಜುನಾನುಯಾಯಿಭಿಃ | ಯತೋ ಯದ್ಯತ್ ಪ್ರತಿಜ್ಞಾಯತೇ ತಸ್ಯ ತಸ್ಯ ಪ್ರತೀತ್ಯಸಮುತ್ಪನ್ನತ್ವಾತ್, ಶೂನ್ಯಮೇವ ಹಿ ತದ್ ಭವೇತ್ | ಆಹ ಚಾಸೌ ಸ್ವಯಮ್-

(೫) ಯದಿ ಕಾಚನ ಪ್ರತಿಜ್ಞಾ ಸ್ಯಾನ್ಮೇ ತದ್ಯೈಷ ಮೇ ಭವೇದ್ದೋಷಃ |
ನಾಸ್ತಿ ಚ ಮೇ ಪ್ರತಿಜ್ಞಾ ತಸ್ಮಾನ್ನೈವಾಸ್ತಿ ಮೇ ದೋಷಃ ||
ಯದಿ ಕಿಂಚಿದುಪಲಭೇಯಂ ಪ್ರವರ್ತಯೇಯಂ ನಿವರ್ತಯೇಯಂ ವಾ |
ಪ್ರತ್ಯಕ್ಷಾದಿಭಿರರ್ಥೈಸ್ತದಭಾವಾನ್ಮೇಽನುಪಾಲಂಭಃ || ವಿ.ವ್ಯಾ.೨೯, ೩೦.

ಇತಿ | ಅತೋ ಯದಿದಂ ಯುಕ್ತ್ಯಾ ನಿರಾಕರಣಂ ಪ್ರಪಂಚಸ್ಯ, ಅನಿಕಾರಣಮೇವ ವಸ್ತುತೋ ತದ್ ಭವೇತ್ | ಯಥೋಕ್ತಂ ಭಾಷ್ಯಕೃದ್ಭಿಃ -

---

(೪) "ನಿರ್ವಾಣದ ತುದಿಯು ಯಾವುದೋ ಅದೇ ಸಂಸಾರದ ತುದಿಯೂ ಆಗಿದೆ. ಅವೆರಡಕ್ಕೆ ಅತಿ ಸೂಕ್ಷ್ಮತೆಯಿಂದಲೂ ವ್ಯತ್ಯಾಸವೆಂಬುದಿರುವುದಿಲ್ಲ". (ಮಾ.ಕಾ. ೨೫-೨೦) ಎಂದು ಒಪ್ಪಿರುವುದರಿಂದ ಸಂಸರಣವೇ ನಿರ್ವಾಣವು, ಆ ಸಂಸರಣವೆಂಬುದು ಪ್ರತೀತ್ಯಸಮುತ್ಪಾದರೂಪವಾದ ಅವಿದ್ಯೆಯಿಂದ ಮುಚ್ಚಿರುವುದೆಂಬುದಷ್ಟನ್ನೇ ಹೇಳಿದಂತಾಗುವುದು. ಹೀಗಾಗಿ ಪರಮಾರ್ಥ-ವಿಷಯದಲ್ಲಿ ಏನನ್ನೂ ಪ್ರತಿಜ್ಞೆಮಾಡಿದಂತಾಗುವುದಿಲ್ಲ. ನಾಗಾರ್ಜುನರ ಅನುಯಾಯಿಗಳಿಗೆ ಪರಮಾರ್ಥವು ಈ ತರಹದ್ದೆಂದು ಪ್ರತಿಜ್ಞೆ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಏನೇನನ್ನು ಪ್ರತಿಜ್ಞೆ ಮಾಡುವರೋ ಅದದನ್ನು ಪ್ರತೀತ್ಯಸಮುತ್ಪಾದ (ತೋರಿಕೆಯಿಂದಾದದ್ದು) ಎಂದು ಹೇಳುತ್ತಾರೆ. (ಆಗ) ಅದು ಶೂನ್ಯವೇ ಆಗುತ್ತದೆ. ಹಾಗೆಯೇ ಈತನು ಹೇಳಿಯೂ ಇರುತ್ತಾನೆ.

(೫) ಏನಾದರೊಂದು ನನ್ನ ಪ್ರತಿಜ್ಞೆ ಇದೆ ಎಂದಾದರೆ ಆಗಲೇ ದೋಷವಾಗುತ್ತದೆ. ಆದ್ದರಿಂದ ನನ್ನ ಪ್ರತಿಜ್ಞೆ ಎಂಬುದಿಲ್ಲ. ಆದ್ದರಿಂದ ನನಗೆ ಯಾವ ದೋಷವೂ ಇಲ್ಲ. ಏನಾದರೊಂದನ್ನು ನಾನು ಪ್ರತ್ಯಕ್ಷವೇ ಮುಂತಾದವುಗಳಿಂದ ವಸ್ತುವನ್ನು ಅರಿತೆನೆಂದರೆ ಆಗ ನಾನು ಪ್ರವರ್ತಿಸಿಯೇನು ಅಥವಾ ನಿವರ್ತಿಸಿಯೇನು! ಆದರೆ ಅವು ಇಲ್ಲವಾಗಿವೆಯಾದ್ದರಿಂದ ಅವನ್ನು ಅರಿಯೆನು. (ವಿಗ್ರಹ ವ್ಯಾವರ್ತಿನೀ ನಾಗಾರ್ಜುನ ಕೃತ ೨೯-೩೦) ಆದ್ದರಿಂದ

(೨) ನ ಹ್ಯಯಂ ಸರ್ವಪ್ರಮಾಣಪ್ರಸಿದ್ಧೋ ಲೋಕವ್ಯವಹಾರೋಽನ್ಯತ್ ತತ್ತ್ವಮನಧಿಗಮ್ಯ ಶಕ್ಯತೇ ಅಪಹ್ನೋತುಮ್ | ಅಪವಾದಾಭಾವೇ ಉತ್ಸರ್ಗಪ್ರಸಿದ್ಧೇಃ ||　　ಸೂ.ಭಾ. ೨-೨-೩೧ ;

ಇತಿ | ಆಧುನಿಕೈತಿಹಾಸಿಕದೃಷ್ಟಿಮವಲಂಬ್ಯ "ಶೂನ್ಯತಾ", "ತಥತಾ", "ಭೂತಕೋಟಿಃ", "ಧರ್ಮಧಾತುಃ" - ಇತ್ಯಾದಿಪರ್ಯಾಯಾಃ ಸರ್ವವಿಕಲ್ಪಾಸ್ಪದಪರಮಾರ್ಥತತ್ತ್ವಸ್ಯ ವ್ಯಪದೇಶಕಾಃ ಸೌಗತೈರಭ್ಯುಪಗಮ್ಯಂತ ಇತಿ ಪ್ರತಿಜ್ಞಾ ನ ಯುಕ್ತೇತ್ಯವೋಚಾಮ | ಯದಪಿ -

(೬) ಅಪರಪ್ರತ್ಯಯಂ ಶಾಂತಂ ಪ್ರಪಂಚೈರಪ್ರಪಂಚಿತಮ್ |
ನಿರ್ವಿಕಲ್ಪಮನಾನಾರ್ಥಮೇತತ್ ತತ್ತ್ವಸ್ಯ ಲಕ್ಷಣಮ್ || ಮಾ.ಕಾ. ೧೮-೯.

---

ಯುಕ್ತಿಯಿಂದ ಪ್ರಪಂಚವನ್ನು ನಿರಾಕರಿಸುವುದೆಂಬುದೇನಿದೆ ಅದು ನಿಜವಾಗಿ ನಿರಾಕರಣೆಯಾಗುವುದೇ ಇಲ್ಲ. ಇದನ್ನು ಭಾಷ್ಯಕಾರರೂ ಹೇಳಿರುತ್ತಾರೆ.

(೨) ''ಬೇರೊಂದು ನಿಜವಾದ ತತ್ತ್ವವನ್ನು ತೋರಿಸದೆ ಎಲ್ಲಾ ಪ್ರಮಾಣದಿಂದಲೂ ಸಿದ್ಧವಾದ ಈ ಪ್ರಪಂಚವನ್ನು (ಸುಮ್ಮನೆ) ಅಲ್ಲಗಳೆಯು- ವುದಕ್ಕಾಗುವುದಿಲ್ಲ. ಅಪವಾದವಿಲ್ಲದಿದ್ದಾಗ ಸಾಮಾನ್ಯನಿಯಮವು ಬಂದೇ ಬರುವುದು''. (ಸೂ.ಭಾ. ೨-೨-೩೧) (ಆದ್ದರಿಂದ) ಆಧುನಿಕರಾದ ಐತಿಹಾಸಿಕರ ದೃಷ್ಟಿಯನ್ನವಲಂಬಿಸಿ'', ''ಶೂನ್ಯತ್ವ'', ''ತಥತಾ'', ''ಭೂತ- ಕೋಟಿ'', ''ಧರ್ಮಧಾತು'', ಮುಂತಾದ ಪರ್ಯಾಯಪದಗಳು ಎಲ್ಲಾ ವಿಕಲ್ಪಕ್ಕೂ ಆಸ್ಪದವಾದ ಪರಮಾರ್ಥತತ್ತ್ವವನ್ನು ಹೇಳುವಂಥದ್ದೆಂದು ಬೌದ್ಧರೂ ಒಪ್ಪಿರುತ್ತಾರೆ ಎಂಬ ಪ್ರತಿಜ್ಞೆಯು ಸರಿಯಲ್ಲವೆಂದು ಹೇಳಿರುತ್ತೇವೆ. ಅವರು ಇನ್ನೊಂದನ್ನು ಏನು ಹೇಳುತ್ತಾರೆ -

(೬) ''ಬೇರೊಂದು ಅರಿವಿನ ರೂಪವಾಗದ ಶಾಂತವಾದ ಮಾತಿನಿಂದ ವಿವರಿಸುವುದಕ್ಕಾಗದ ವಿಕಲ್ಪವಿಲ್ಲದ ನಾನಾರ್ಥವಿರದೇ ಇರುವುದೆಂಬುದೇ ತತ್ವಕ್ಕೆ ಲಕ್ಷಣವು'' (ಮಾ.ಕಾ. ೧೮-೯) ಎಂಬುದು ನಾಗಾರ್ಜುನನ ವಚನವಿದೆಯಲ್ಲ ಅದು ಪರಮಾರ್ಥತತ್ವವನ್ನು ಅನುಭವಕ್ಕೆ ಗೋಚರಿಸುವು- ದಕ್ಕಲ್ಲ, ಮತ್ತೇನೆಂದರೆ ಮುಂದಿನ ಶ್ಲೋಕದಲ್ಲಿ ''ನಿವೃತ್ತವಾದದ್ದು ಚಿತ್ತಗೋಚರವಾಗಿದ್ದರೆ ಆ ನಿವೃತ್ತವಾದದ್ದನ್ನು ಹೇಳಬೇಕಾಗಿತ್ತು'' ಎಂದು ಹೇಳುತ್ತಾ ಧರ್ಮಗಳಿಗೆ (ಜೀವರುಗಳಿಗೆ) ಜೀವತ್ವವೆಂದು ''ಹುಟ್ಟುವುದಲ್ಲ,

ಇತಿ ವಚನಂ ನಾಗಾರ್ಜುನಸ್ಯ, ತದಪಿ ನ ಪರಮಾರ್ಥತತ್ತ್ವಸ್ಯಾನುಭವಗೋಚರತಾ-ಮಾಪಾದಯಿತುಮಿತಿ "ನಿವೃತ್ತಮಭಿಧಾತವ್ಯಂ ನಿವೃತ್ತೇ ಚಿತ್ತಗೋಚರೇ" ಇತಿ ಸಮನಂತರಪೂರ್ವಕಾರಿಕೋಕ್ತನೀತ್ಯಾ ಧರ್ಮಾಣಾಂ ಧರ್ಮತಾ ಅನುತ್ಪನ್ನಾ ಅನಿರುದ್ಧಾ ಚೇತ್ಯತಃ ನ ಕಿಂಚಿತ್ ತತ್ರಾಭಿಧಾತವ್ಯಮಸ್ತೀತ್ಯತಃ ಸ್ವಯಮೇವಾಧಿಗಂತವ್ಯಾ - ಇತ್ಯಭಿಪ್ರಾಯಕಮ್ ||

ತಥಾ ಹಿ ವ್ಯಾಖ್ಯಾತಿ ಸ್ಮ ಚಂದ್ರಕೀರ್ತಿಃ -

> "ಯಥಾ ಹಿ ತೈಮಿರಿಕಾಃ ವಿತಥಂ ಕಣಮಶಕಮಕ್ಷಿಕಾದಿರೂಪಂ ಪಶ್ಯಂತೋ ವಿತಿಮಿರೋಪದೇಶಾದಪಿ ನ ಶಕ್ನುವಂತಿ ಕಣಾ( ದೀ ? )ನಾಂ ಯಥಾವದವಸ್ಥಿತಂ ಸ್ವರೂಪದರ್ಶನನ್ಯಾಯೇನಾಧಿಗಂತವ್ಯಮತೈಮಿರಿಕವದಧಿಗಂತುಮ್, ಕಿಂ ತರ್ಹಿ ಅತೈಮಿರಿಕೋಪದೇಶಾತ್ ಮಿಥ್ಯೈತದಿತ್ಯೇತಾವನ್ಮಾತ್ರಮೇವ ಪ್ರತಿಪದ್ಯಂತೇ ಯದಾ ತು ತಿಮಿರೋಪಘಾತ್ಯವಿಪರೀತಶೂನ್ಯತಾದರ್ಶನಾಚ್ಛಿಂತನಯನಾಃ ಸಂತಃ ಸಮುತ್ಪನ್ನತತ್ತ್ವಜ್ಞಾನಾ ಭವಂತಿ ತದಾ ತತ್ತ್ವಾಧಿಗಮನಯೋಗೇನ

---

ಅಡಗುವುದೂ ಅಲ್ಲ" ಎಂದಾದ್ದರಿಂದ ಅಲ್ಲಿ ಹೇಳುವುದಕ್ಕೇನೂ ಇಲ್ಲವೆಂದಾದ್ದರಿಂದ ಅದನ್ನು ತಾನೇ ಅರಿಯಬೇಕೆಂಬ ಅಭಿಪ್ರಾಯದಿಂದ ಹೇಳಿದ್ದೆಂದು ತಿಳಿಯಬೇಕು. ಹೀಗೆಯೇ ಚಂದ್ರಕೀರ್ತಿಯೂ ವ್ಯಾಖ್ಯಾನಿಸಿರು-ತ್ತಾನೆ.

ಹೇಗೆ ಕಣ್ಣಿನ ಪೊರೆಯಿಂದ ಕಂಡದ್ದಾದ ಕಣ, ಸೊಳ್ಳೆ, ನೊಣ ಮುಂತಾದವುಗಳು ಸುಳ್ಳೊ, ಅದನ್ನು ಪೊರೆ ಎಂಬ ದೋಷವಿಲ್ಲದವರು ಕಾಣಲಾರರೋ, ಕಣವೇ ಮುಂತಾದವುಗಳ ನಿಜಸ್ವರೂಪವನ್ನು ಕಾಣುವುದೆಂಬುದನ್ನು ಪೊರೆ ಇಲ್ಲದವನು ಕಾಣುವಂತೆ ಕಾಣಬೇಕೆಂಬುದು ಹೇಗೆ (ವಿವಕ್ಷೆ) ಇರುವುದಿಲ್ಲವೋ, ಮತ್ತೇನೆಂದರೆ ಪೊರೆ ಇಲ್ಲದವನ ಉಪದೇಶದಿಂದ ಅವು ಸುಳ್ಳಾಗಿರುವಂಥವುಗಳೇ, ಕೇವಲ ತೋರಿಕೆ ಮಾತ್ರವೆಂದು ತಿಳಿಸಲಾಗುತ್ತವೆ. ಯಾವಾಗಲಾದರೊ ಪೊರೆಯ ದೃಷ್ಟಿಯನ್ನು ಬಾಧೆ ಪಡಿಸುವ ನಿಜವಾದ ಶೂನ್ಯವೆಂಬ ದರ್ಶನದಿಂದ ಕೂಡಿದ ದೃಷ್ಟಿಯುಳ್ಳವರಾಗಿ ನಿಜವನ್ನರಿತವರಾಗುತ್ತಾರೋ ಅದರ ಸಂಬಂಧದಿಂದ ತಾವೇ (ನಿಜವನ್ನು) ತಿಳಿದವರಾಗುತ್ತಾರೆ. ಸಾಪೇಕ್ಷತೆ ಇಲ್ಲದಿರುವುದೆಂಬು-ದೇನಿದೆ ಅದೇ ಪದಾರ್ಥಗಳ ತತ್ವವು. ಅದು ಪೊರೆಇಲ್ಲದವನ ಕಣ್ಣಿಗೆ

ಸ್ವಯಮಧಿಗಚ್ಛಂತೀತಿ | ಏವಮ್ ಅಪರಪ್ರತ್ಯಯಂ ಭಾವಾನಾಂ ಯತ್ ಸ್ವರೂಪಂ ತತ್ ತತ್ತ್ವಮ್ | ಏತಚ್ಚ ಶಾಂತಭಾವಮತ್ಯೈಮಿರಿಕಕಣಾದರ್ಶನವತ್ ಸ್ವಭಾವವಿರಹಿತಮ್ ಇತ್ಯರ್ಥಃ | ಅತ ಏತತ್ ಪ್ರಪಂಚೈರಪ್ರಪಂಚಿತಮ್ | ಪ್ರಪಂಚೋ ಹಿ ವಾಕ್, ಪ್ರಪಂಚಯತ್ಯರ್ಥಾನ್ ಇತಿ ಕೃತ್ವಾ | ಪ್ರಪಂಚೈರ-ಪ್ರಪಂಚಿತಮ್ | ವಾಗ್ಭಿರವ್ಯಾಕೃತಮ್ ಇತ್ಯರ್ಥಃ | ನಿರ್ವಿಕಲ್ಪಕಮ್ ಚಿತ್ತರಾಗ-ತದ್ರಹಿತತ್ವಾತ್ ತತ್ತತ್ತ್ವಂ ನಿರ್ವಿಕಲ್ಪಕಮ್ |.... ನಾತ್ರ ಕಿಂಚಿತ್ಪರಮಾರ್ಥತೋ ನಾನಾಕರಣಮ್ | ತತ್ ಕಸ್ಮಾದ್ ಹೇತೋಃ ? ಸ ಪರಮಾರ್ಥತೋ-ಽತ್ಯಂತಾನುತ್ಪಾದತ್ವಾತ್ ಸರ್ವಧರ್ಮಾಣಾಮಿತಿ | ತದೇವಮ್ ಅನಾನಾರ್ಥತಾ ತತ್ತ್ವಸ್ಯ ಲಕ್ಷಣಂ ವೇದಿತವ್ಯಂ ಶೂನ್ಯತಯಾ ಏಕರೂಪತ್ವಾತ್ || ಮಾ.ಕಾ.ವೃ.ಪಾ.

ಇತಿ ||

ಅತ್ರ ಸರ್ವಧರ್ಮಾಣಾಮನುತ್ಪಾದ ಏವ ತತ್ತ್ವಂ ಕಣಮಶಕಾದಿವದಿತ್ಯೇತಾವ-ದುಕ್ತಮ್, ನ ತ್ವನುಭವಪ್ರದರ್ಶನಂ ಕಿಂಚಿತ್ - ಇತಿ ನ ಪೃಥಗ್ ವಕ್ತವ್ಯಮ್ ||

---

ಕಾಣಿಸದೇ ಇರುವ ಕಣಾದಿಗಳಂತೆ ಶಾಂತವಾದ ಸ್ವಭಾವವಿಲ್ಲದ ರೂಪವು ಎಂದರ್ಥವು. ಆದ್ದರಿಂದಲೇ ಅದು ವಾಕ್ಕಿನಿಂದಲೂ ವಿವರಿಸುವುದಕ್ಕಾಗದೇ ಇರುವುದು. ಇಲ್ಲಿ ಪ್ರಪಂಚವೆಂದರೆ ಎಲ್ಲವನ್ನೂ ವಿವರಿಸುವುದರಿಂದ ವಾಕ್ಕಿಗೇ ಹೆಸರು. ವಾಕ್ಕಿಗೆ ತೋರದೇ ಇರುವುದೆಂದು ಅದರ ಅರ್ಥವು. (ಅದು) ನಿರ್ವಿಕಲ್ಪಕವೆಂದರೆ, ಚಿತ್ತದ ರಾಗವಿಲ್ಲದ್ದಾದ್ದರಿಂದ ನಿರ್ವಿಕಲ್ಪಕವಾದದ್ದು. ಇಲ್ಲಿ ಸ್ವಲ್ಪವೂ ನಿಜವಾಗಿ ನಾನು ಮಾಡುವುದೆಂಬುದಿಲ್ಲ. ಅದು ಏಕೆಂದರೆ – ಯಾವ ವಸ್ತುವೂ ನಿಜವಾಗಿ ಹುಟ್ಟದೇ ಇರುವಂಥದ್ದಾದ್ದರಿಂದ, ಹೀಗೆ ತತ್ವದ ಲಕ್ಷಣವನ್ನು ನಾನಾರ್ಥವಿಲ್ಲದಿರುವುದೆಂಬುದಾಗಿ ತಿಳಿಯಬೇಕು. ಏಕೆಂದರೆ ಶೂನ್ಯವು ಏಕರೂಪವಾಗಿರುವುದರಿಂದ ಇದು ಹೀಗೆ. (ಮಾ.ಕಾ. ೧೩೩)

(ತಥತಾ – ಎಂದರೆ, ತಥಾ ಭಾವವು, ಎಂದರೆ ವಿಕಾರವಿಲ್ಲದಿರುವುದು, ಯಾವಾಗಲೂ ಸ್ಥಿರವಾಗಿರುವುದು (ಗೌ.ಹೃ. ೩೧೬)ಅನುವಾದಕರು).

ಇಲ್ಲಿ ಎಲ್ಲಾ ವಸ್ತುಗಳಿಗೂ ಹುಟ್ಟಿಲ್ಲವೆಂಬುದೇ ತತ್ವವೆಂದು ಹೇಳಿದೆ. ಕಣ, ಸೊಳ್ಳೆ ಮುಂತಾದವುಗಳಂತೆ ಎಂದಿಷ್ಟನ್ನೇ ಹೇಳಿದೆಯೇ ಹೊರತು ಇಲ್ಲಿ ಯಾವ ಅನುಭವವನ್ನೂ ತೋರಿಸಿಲ್ಲ ಎಂಬುದನ್ನು ಬೇರೆಯಾಗಿ

ಆಚಾರ್ಯಗೌಡಪಾದೈಃ ಪುನಃ -

(೩) ಅಜಮನಿದ್ರಮಸ್ವಪ್ನಂ ಪ್ರಭಾತಂ ಭವತಿ ಸ್ವಯಮ್ |
ಸಕೃದ್ವಿಭಾತೋ ಹ್ಯೇವೈಷ ಧರ್ಮೋ ಧಾತುಸ್ವಭಾವತಃ || ಗೌ.ಕಾ.೪-೮೧.

ಇತಿ ಶ್ರುತಿನಿರ್ದಿಷ್ಟಾವಸ್ಥಾತ್ರಯಶೂನ್ಯಸ್ವಯಂಪ್ರಕಾಶತುರೀಯತತ್ತ್ವಮೇವಾಜಾದ್ವಯಂ ನಿರ್ದಿಶ್ಯ ಚತುಷ್ಕೋಟಿವರ್ಜಿತತ್ತ್ವಂ ಪರಮಾರ್ಥತತ್ತ್ವಸ್ಯ ಸಾರ್ವತ್ರಿಕಾನುಭವ-ಗಮ್ಯಮಿತಿ ನೈವ ಯುಕ್ತ್ಯಾ ಪ್ರತ್ಯಾಖ್ಯೇಯಮಿತಿ ಚ ವಿಶದಯಾಮಾಸುಃ -

(೪) ಅಸ್ತಿ ನಾಸ್ತ್ಯಸ್ತಿ ನಾಸ್ತೀತಿ ನಾಸ್ತಿ ನಾಸ್ತೀತಿ ವಾ ಪುನಃ |
ಚಲಸ್ಥಿರೋಭಯಾಭಾವೈರಾವೃಣೋತ್ಯೇವ ಬಾಲಿಶಃ || ಗೌ.ಕಾ. ೪-೮೩.
ಕೋಟ್ಯಶ್ಚತಸ್ರ ಏತಾಸ್ತು ಗ್ರಹೈರ್ಯಾಸಾಂ ಸದಾವೃತಃ |
ಭಗವಾನಾಭಿರಸ್ಪೃಷ್ಟೋ ಯೇನ ದೃಷ್ಟಃ ಸ ಸರ್ವದೃಕ್ || ಗೌ.ಕಾ. ೪-೮೪.

ಇತಿ | ಅಸ್ತಿನಾಸ್ತ್ಯಾದಿಸರ್ವವಿಕಲ್ಪನಾವರ್ಜಿತಃ ಪರಮಾತ್ಮಾ - ಇತ್ಯಭಿಪ್ರಾಯಃ | "ಸ ಏಷ ನೇತಿ ನೇತ್ಯಾತ್ಮಾಽಗೃಹ್ಯೋ ನ ಹಿ ಗೃಹ್ಯತೇ" (ಬೃ. ೩-೯-೨೬) ಇತ್ಯಾದಿ

---

ಹೇಳಬೇಕಾಗಿಲ್ಲ.

೩) ಹುಟ್ಟಿಲ್ಲದ, ನಿದ್ರೆಇಲ್ಲದ, ಕನಸಿಲ್ಲದ, ತಾನೇ ಹೊಳೆಯುತ್ತಿರುವಂಥದ್ದು (ಯಾವಾಗಲೂ) ತೋರುತ್ತಿರುವುದಾಗಿದೆ. ಈ ಧರ್ಮವೆಂಬ ಹೆಸರಿನ ತತ್ತ್ವವು ಸ್ವಭಾವದಿಂದಲೇ ಇರುವಂಥದ್ದು" ಎಂದು (ಗೌ.ಕಾ. ೪–೮೧) ಶ್ರುತಿಯಲ್ಲಿ ತೋರಿಸಿದ್ದಾದ ಅವಸ್ಥಾತ್ರಯವಿಲ್ಲದ ತಾನಾಗಿಯೇ ತೋರುತ್ತಿರುವ ತುರೀಯವೆಂಬ ತತ್ತ್ವವೇ ಹುಟ್ಟಿಲ್ಲದ್ದು, ಅದ್ವಯವಾದದ್ದೆಂದು ತೋರಿಸಿ, ನಾಲ್ಕು ತುದಿ ಇಲ್ಲದ್ದು, ಎಂದು ಪರಮಾರ್ಥತತ್ತ್ವವನ್ನು ಸಾರ್ವತ್ರಿಕವಾದ ಅನುಭವದಿಂದ ತೋರುವುದನ್ನು ಯುಕ್ತಿಯಿಂದ ಅಲ್ಲಗಳೆಯುವುದಕ್ಕಾಗುವುದಿಲ್ಲ ಎಂದು ಸ್ಪಷ್ಟಪಡಿಸಿರುತ್ತಾರೆ.

(೪) ಇದ್ದಾನೆ ಇಲ್ಲ, ಇದ್ದೂ ಇಲ್ಲ, ಎಂದೋ ಇಲ್ಲವೇ ಇಲ್ಲ ಎಂದೋ ಚಲ ಸ್ಥಿರ ಉಭಯ ಅಭಾವ ಇವುಗಳಿಂದ ಬಾಲಿಶನು ಮುಚ್ಚುತ್ತಲೇ ಇರುವನು. ಈ ನಾಲ್ಕು ಕೋಟಿಗಳಿವೆಯಲ್ಲ, ಇವುಗಳನ್ನು ಗ್ರಹಿಸುವುದರಿಂದ (ಆತ್ಮನು) ಯಾವಾಗಲೂ ಮುಚ್ಚಲ್ಪಡುತ್ತಿರುವನಷ್ಟೇ, ಇವುಗಳ ಸೋಂಕಿಲ್ಲದ ಭಗವಂತನು ಯಾವನಿಂದ ಕಂಡವನಾಗಿರುವನೋ ಆತನೇ ಸರ್ವವನ್ನೂ

ಶ್ರುತೇಃ | ಆತ್ಮಾ ಹಿ ನಾಮ ಸ್ವರೂಪಮ್ | ನ ಚ ಸ್ವಸ್ಯೈವ ಸ್ವರೂಪಮ್ ಅಸ್ತೀತ್ಯವಧಾರಯಿತುಮ್, ನಾಸ್ತೀತಿ ಪ್ರತ್ಯಾಖ್ಯಾತುಮ್, "ಅಸ್ತಿ ವಾ ನಾಸ್ತಿ ವಾ" ಇತಿ ಸಂಶೇತುಮ್, "ಏವಂ ಸ್ಯಾತ್" ಇತಿ ವಿಕಲ್ಪಯಿತುಂ ವಾ ಶಕ್ಯಂ ಕೇನಚಿತ್ | ಯ ಏವ ಹ್ಯವಧಾರಯಿತಾ, ಪ್ರತ್ಯಾಖ್ಯಾತಾ, ಸಂಶಯಿತಾ, ವಿಕಲ್ಪಯಿತಾ ವಾ ತಸ್ಯೈವ ಸ್ವರೂಪತ್ವಾದಸ್ಯಾತ್ಮನಃ | ಕಿಂ ಬಹುನಾ, ಆತ್ಮಶಬ್ದವಾಚ್ಯತ್ವಮಪಿ ಕದಾಚಿನ್ನಿರಾಕ್ರಿಯೇತ, ಆತ್ಮತ್ವೇನ ಚಿಂತ್ಯತ್ವಮಪಿ, ನ ತು ಸ್ವಸ್ಯ ನಿರ್ವಿಶೇಷಂ ಸ್ವರೂಪಂ ಕಥಂಚಿತ್, ಜಾತುಚಿದಪಿ | ತಸ್ಮಾತ್ ಸಾಧೂಚ್ಯತೇ ಆಚಾರ್ಯೈಃ ಸರ್ವಕೋಟಿಭಿರಸಂಸ್ಪೃಷ್ಟಂ ಪರಮಾರ್ಥಸ್ವರೂಪಂ ಯೇನ ದೃಷ್ಟಮ್, ಸ ಸರ್ವದೃಗಿತಿ ||

೫೯. **ಶೂನ್ಯಮತತುಲನೋಪಸಂಹಾರಃ** - ತದಯಮೇತಾವತಾ ವಿಚಾರೇಣ ನಿರ್ಗಲಿತೋಽರ್ಥಃ -

---

ಕಂಡವನು (ಗೌ.ಕಾ. ೪-೮೩-೮೪), ಎಂಬುದಾಗಿ ಹೇಳುತ್ತಾ ಪರಮಾತ್ಮನು ಅಸ್ತಿ ನಾಸ್ತಿತ್ವಾದಿ ಯಾವ ವಿಕಲ್ಪವಿಲ್ಲದವನು ಎಂದರ್ಥವು. "ಆ ಈತನು ಹೀಗಲ್ಲ, ಹೀಗಲ್ಲ ಎಂಬ ರೂಪನು, ಏಕೆಂದರೆ ಯಾವುದಕ್ಕೂ ವಿಷಯನಲ್ಲ-ವಲ್ಲವೇ? (ಬೃ. ೩-೯-೨೬) ಎಂಬುದಾಗಿ ಶ್ರುತಿ ಇದೆ. ಆತ್ಮನೆಂದರೆ ಸ್ವರೂಪವು. ತನಗೇ (ತನ್ನ) ಸ್ವರೂಪವನ್ನು ಇದೆ ಎಂದು (ವಿಷಯೀಕರಿಸಿ) "ತಿಳಿಯುವುದಕ್ಕಾಗಲೀ" ಇಲ್ಲವೆಂದು "ಅಲ್ಲಗಳೆಯುವುದಕ್ಕಾಗಲೀ" ಆಗುವುದಿಲ್ಲವಲ್ಲವೇ? ಹಾಗೆಯೇ "ಇದಾನೋ ಇಲ್ಲವೋ?" ಎಂದು ಸಂಶಯಪಡುವುದಕ್ಕಾಗಲೀ "ಹೀಗಿರಬಹುದೆಂದು" ವಿಕಲ್ಪಿಸುವುದಕ್ಕಾಗಲೀ ಯಾರಿಗೂ ಆಗುವುದಿಲ್ಲ. ಏಕೆಂದರೆ ಯಾವನು ನಿಶ್ಚಯಿಸುವಾತನೋ, ತಿರಸ್ಕರಿಸುವಾತನೋ, ಸಂಶಯಪಡುವಾತನೋ, ವಿಕಲ್ಪಿಸುವಾತನೋ ಆಗಿರುತ್ತಾನೋ, ಅವನ ಸ್ವರೂಪವಾಗಿ (ಆತ್ಮನು) ಇದ್ದುಕೊಂಡಿರುತ್ತಾನೆ. ಹೆಚ್ಚೇನು ಹೇಳುವುದು! "ಆತ್ಮ"ನೆಂಬಶಬ್ದಕ್ಕೆ ವಾಚ್ಯನಾಗಿರುತ್ತಾನೆಂಬುದನ್ನೂ ಕೆಲವೊಮ್ಮೆ ನಿರಾಕರಿಸುತ್ತದೆ. ತನ್ನ ನಿರ್ವಿಷೇಷಸ್ವರೂಪವು ತನಗೇ, ಎಂದೂ (ವಿಷಯವಾಗಿ) ಆತ್ಮನೆಂದು ಚಿಂತಿಸುವುದಕ್ಕಾಗುವುದಲ್ಲವಷ್ಟೇ? ಆದ್ದರಿಂದ ಆಚಾರ್ಯರು ಪರಮಾರ್ಥಸ್ವರೂಪವು ಯಾವ ವಿಕಲ್ಪವೂ ಇಲ್ಲದ್ದೆಂದೂ, ಅದನ್ನು ಯಾರು ಕಂಡುಕೊಂಡಿದ್ದಾರೋ ಆತನು ಸರ್ವಜ್ಞನು ಎಂದೂ ಹೇಳಿದ್ದು ಸರಿಯಾಗಿದೆ.

(೧) ಆಚಾರ್ಯೋ ಹಿ "ನ ತತ್ರ ರಥಾಃ" (ಬೃ. ೪-೩-೧೦) ಇತ್ಯಾದಿಶ್ರುತ್ಯನುಗೃಹೀತಂ ತದನುಕೂಲಂ ಚ ತರ್ಕಮ್ ಆಶ್ರಿತ್ಯ ಸ್ವಪ್ನಜಾಗರಿದಯೋರ್ದೃಶ್ಯಮಾನಾನಾಂ ಭೇದಾನಾಂ ಸಮಮೇವ ತತ್ತದವಸ್ಥಾಮಾತ್ರಪ್ರತಿಬದ್ಧತ್ವಾತ್, ಅನ್ಯತ್ರಾಸತ್ತ್ವಾಚ್ಚ, ಮಿಥ್ಯಾತ್ವಮ್ ಇತ್ಯನುಭವಾಙ್ಗಯುಕ್ತಿಂ ದರ್ಶಯತಿ -

(ಅ) ಸ್ವಪ್ನಜಾಗರಿತೇ ಸ್ಥಾನೇ ಹ್ಯೇಕಮಾಹುರ್ಮನೀಷಿಣಃ || ಗೌ.ಕಾ. ೨-೫.

(ಆ) ಆದಾವಂತೇ ಚ ಯನ್ನಾಸ್ತಿ ವರ್ತಮಾನೇಽಪಿ ತತ್ತಥಾ |
ವಿತಥೈಃ ಸದೃಶಾಃ ಸಂತೋಽವಿತಥಾ ಇವ ಲಕ್ಷಿತಾಃ || ಗೌ.ಕಾ. ೨-೬.

ಇತಿ | ಮಾಧ್ಯಮಿಕಸ್ತು ಪ್ರತೀತ್ಯಸಮುತ್ಪನ್ನತ್ವಾತ್ ಭಾವಾನಾಂ ಸ್ವಭಾವಶೂನ್ಯತ್ವಮಾಹ ಯುಕ್ತಿಮಾತ್ರಮನುಸರನ್ -

(೧) ಪ್ರತೀತ್ಯ ಯದ್ ಯದ್ಭವತಿ ತತ್ತಚ್ಛಾಂತಂ ಸ್ವಭಾವತಃ ||
ಮಾ.ಕಾ. ೭-೧೭.

---

**೫೯) ಶೂನ್ಯಮತದೊಡನೆ ಹೋಲಿಸುವುದರ ಉಪಸಂಹಾರವು** – ಇದು ಇಷ್ಟರವರೆಗಿನ ವಿಚಾರದಿಂದ ತೀರ್ಮಾನವಾದ ಅರ್ಥವು. ಗೌಡಪಾದಾಚಾರ್ಯರು "ಅಲ್ಲಿ ರಥಗಳಿರುವುದಿಲ್ಲ" (ಬೃ ೪–೩–೧೦) ಎಂಬುದಾಗಿ ಶ್ರುತಿಯು ತೋರಿಸಿಕೊಟ್ಟ ವಿಚಾರವನ್ನೂ ಅದಕ್ಕನುಕೂಲವಾದ ತರ್ಕವನ್ನಾಶ್ರಯಿಸಿಕೊಂಡು ಸ್ವಪ್ನಜಾಗರಿತಗಳಲ್ಲಿ ಕಂಡುಬರುವ ಭೇದಗಳು ಸಮವೆಂತಲೂ ಅವು ಆಯಾ ಅವಸ್ಥೆಗೆ ಮಾತ್ರ ಕಟ್ಟುವಡೆದದ್ದೆಂದೂ ಬೇರೆ ಎಲ್ಲದರಲ್ಲೂ ಸಮವಾಗಿರುವುದರಿಂದಲೂ ಸುಳ್ಳಾದದ್ದೆಂದು ಅನುಭವಾಂಗವಾದ ಯುಕ್ತಿಯಿಂದ ತೋರಿಸಿಕೊಟ್ಟಿರುತ್ತಾರೆ.

(ಅ) ಸ್ವಪ್ನಜಾಗರಿತಗಳ ಸ್ಥಾನದ ವಿಷಯದಲ್ಲಿ ಎರಡೂ ಒಂದೇ ಎಂದು ತಿಳಿದವರು ಹೇಳುತ್ತಾರೆ (ಗೌ.ಕಾ. ೨–೫)

(ಆ) ಆದಿಯಲ್ಲೂ ಅಂತದಲ್ಲೂ ಯಾವುದಿಲ್ಲವೋ ಅದು ವರ್ತಮಾನದಲ್ಲೂ ಇರುವುದಿಲ್ಲ. ಸುಳ್ಳಾದವುಗಳೇ ಆದ ಅವು ಸುಳ್ಳಲ್ಲವೆಂಬಂತೆ ಕಾಣುತ್ತವೆ (ಗೌ.ಕಾ. ೨–೬) ಎಂದಿದ್ದಾರೆ. ಬೌದ್ಧರಾದರೋ ಒಂದರ ಅಪೇಕ್ಷೆಯಿಂದ ಉತ್ಪನ್ನವಾಗುವದರಿಂದ ಪದಾರ್ಥಗಳಿಗೆ ಸ್ವಭಾವಶೂನ್ಯತ್ವವನ್ನು ಕೇವಲ ಯುಕ್ತಿಯನ್ನನುಸರಿಸಿ ಹೇಳುತ್ತಾರೆ. (೧)

(೨) ಯಃ ಪ್ರತೀತ್ಯಸಮುತ್ಪಾದಃ ಶೂನ್ಯತಾಂ ತಾಂ ಪ್ರಚಕ್ಷ್ಮಹೇ ||
ಮಾ.ಕಾ. ೨೪-೧೮.

ಇತಿ ಚ ||

(೨) ಆಚಾರ್ಯಸ್ತಾವತ್ ಸ್ವಪ್ನಜಾಗ್ರತ್ಸ್ಥಾನಯೋಃ ಸರ್ವಸಮತ್ವೇನೋ-ಭಯೋರಪಿ ಚೇದ್ ವೈತಥ್ಯಮ್, ಕಸ್ತೇಷಾಂ ವಿಕಲ್ಪಕಃ, ಕೋ ವಾ ತತ್ತತ್ತ್ವನಿಶ್ಚೇತಾ? - ಇತಿ ಶಂಕಾಮ್ ಉದ್ಭಾವ್ಯ "ತ್ರಯಃ ಸ್ವಪ್ನಾಃ" (ಐ. ೧-೩-೧೨), "ದೃಷ್ಟ್ವೈವ ಪುಣ್ಯಂ ಚ ಪಾಪಂ ಚ" (ಬೃ. ೪-೩-೧೭)- ಇತ್ಯಾದ್ಯಾಃ, ಅನುಭವಾನುಗುಣಾಃ ಶ್ರುತೀರೇವಾಶ್ರಿತ್ಯ ಆತ್ಮೈವ ತತ್ರ ಮಾಯಯಾ ವಿಕಲ್ಪಕೋ ನಿಶ್ಚೇತಾ ಚ, ಆತ್ಮೈವ ಚ ಭೇದತ್ವೇನ ವಿಕಲ್ಪಿತಃ ಇತ್ಯಾಹ -

(೮) ಕಲ್ಪಯತ್ಯಾತ್ಮನಾತ್ಮಾನಮಾತ್ಮಾ ದೇವಃ ಸ್ವಮಾಯಯಾ |
ಸ ಏವ ಬುಧ್ಯತೇ ಭೇದಾನಿತಿ ವೇದಾಂತನಿಶ್ಚಯಃ || ಗೌ.ಕಾ. ೨-೧೨.

ಇತಿ | ಮಾಧ್ಯಮಿಕಸ್ತು -

---

"ಒಂದನ್ನಿಟ್ಟುಕೊಂಡು ಯಾವುಯಾವುದು ಇರುವುದೋ ಅದು ಸ್ವಭಾವದಿಂದ ಇಲ್ಲದವುಗಳೇ" (ಮಾ.ಕಾ. ೭-೧೭), (೨) ಒಂದನ್ನಿಟ್ಟುಕೊಂಡು ಯಾವುದು ತೋರುವುದೋ ಅದನ್ನು ಶೂನ್ಯವೆಂದೇ ಹೇಳುವೆವು" (ಮಾ.ಕಾ. ೨೪-೧೮) ಎಂದು ಹೇಳುತ್ತಾರೆ.

(೨) ಗೌಡಪಾದರಾದರೋ - ಸ್ವಪ್ನಜಾಗರಿತಸ್ಥಾನಗಳು ಎಲ್ಲಾ ರೀತಿಯಿಂದಲೂ ಸಮವಾದದ್ದಾದ್ದರಿಂದ ಎರಡೂ ಸುಳ್ಳೆಂದಾದರೆ, ಅವುಗಳನ್ನು ವಿಕಲ್ಪಿಸುವಾತನು ಯಾರು? ತತ್ತ್ವವನ್ನು ನಿಶ್ಚಯಿಸುವಾತನೂ ಯಾರು? ಎಂಬೀ ಸಂದೇಹವನ್ನು ಎಬ್ಬಿಸಿ "ಮೂರು ಸ್ವಪ್ನಗಳು" (ಐ ೧-೩-೧೨) "ಪುಣ್ಯಪಾಪಗಳನ್ನು (ಬರೀ) ಕಂಡವನಾಗಿ" (ಬೃ ೪-೩-೧೭) ಎಂಬಿವೇ ಮೊದಲಾದ ಅನುಭವಕ್ಕೆ ಅನುಗುಣವಾದ ಶ್ರುತಿಗಳನ್ನು ಆಶ್ರಯಿಸಿಕೊಂಡು, ಆ ಸ್ಥಳದಲ್ಲಿ ಆತ್ಮನೇ ಮಾಯೆಯಿಂದ ವಿಕಲ್ಪಿಸುವಾತನು ಮತ್ತು ನಿಶ್ಚಯ ಮಾಡುವಾತನೆಂದೂ, ಆತ್ಮನೇ ಭೇದರೂಪದಿಂದ ವಿಕಲ್ಪಿಸಲ್ಪಟ್ಟಿರುತ್ತಾನೆಂದು ಹೇಳಿರುತ್ತಾರೆ.

(೧) ಅವಿದ್ಯಮಾನೇ ಭಾವೇ ಚ ಕಸ್ಯಾಭಾವೋ ಭವಿಷ್ಯತಿ |
ಭಾವಾಭಾವವಿಧರ್ಮಾ ಚ ಭಾವಾಭಾವಮವೈತಿ ಕಃ || ಮಾ.ಕಾ. ೫-೬.

ಇತ್ಯನುಭವನ್ಯಕ್ಕಾರೇಣ ಭಾವಾಭಾವಪದಾರ್ಥಾನಾಂ ಸಮಮೇವಾಭಾವತಾಮ್, ಭಾವಾಭಾವವಿಸದೃಶಸ್ಯ ಪರೀಕ್ಷಕಸ್ಯಾಪ್ಯಭಾವತಾಂ ಪ್ರತಿಜಾನೀತೇ ಕೇವಲಯುಕ್ತಿ-ಮಾಶ್ರಿತ್ಯ ||

(೩) ಕಿಂಚ, ಆಚಾರ್ಯೋ ದ್ವೈತಮಾತ್ರಸ್ಯ ಪ್ರತೀತರೂಪೇಣ ಮಾಯಾತ್ವಂ ಪರಮಾರ್ಥಸ್ವರೂಪೇಣಾದ್ವೈತತ್ವಂ ಚ ಬ್ರೂತೇ "ಬ್ರಹ್ಮೈವೇದಂ ವಿಶ್ವಮ್" (ಮುಂ. ೨-೨-೧೧), "ಅಜಾಯಮಾನೋ ಬಹುಧಾ ವಿಜಾಯತೇ" (ತೈ.ಆ. ೩-೧೩-೩೯) ಇತ್ಯಾದಿಶ್ರುತಿಪ್ರಮಾಣಂ ತದನುಗುಣಂ ತರ್ಕಂ ಚ ಸಂಶ್ರಿತ್ಯ -

(ಅ) ಅದ್ವೈತಂ ಪರಮಾರ್ಥೋ ಹಿ ದ್ವೈತಂ ತದ್ಭೇದ ಉಚ್ಯತೇ ||
ಗೌ.ಕಾ. ೩-೧೮.

---

(ಅ) ಆತ್ಮವೆಂಬ ದೇವನು ತನ್ನನ್ನು ತಾನೇ ತನ್ನ ಮಾಯೆಯಿಂದ ಕಲ್ಪಿಸಿಕೊಳ್ಳುತ್ತಾನೆ. ಆತನೇ ಭೇದಗಳನ್ನು ಅರಿಯುತ್ತಾನೆಂಬುದು ವೇದಾನ್ತದ ನಿಶ್ಚಯವು" (ಗೌ.ಕಾ. ೨-೧೨). ಬೌದ್ಧರಾದರೋ "ವಸ್ತುವೇ ಇಲ್ಲದಿರುವಾಗ ಯಾವುದರ ಅಭಾವವು ಎಂದಾಗುವುದು ? ಭಾವಾಭಾವವಿಲಕ್ಷಣನಾದ ಯಾವನು ತಾನೆ ಭಾವಾಭಾವಗಳನ್ನು ಅರಿಯುತ್ತಾನೆ (ಮಾ.ಕಾ.೫-೬). ಎಂದೀಪರಿಯಾಗಿ ಕೇವಲ ಯುಕ್ತಿಯನ್ನಾಶ್ರಯಿಸಿ ಅನುಭವವನ್ನು ಧಿಕ್ಕರಿಸುವುದರ ಮೂಲಕ ಭಾವಾಭಾವಗಳೆರಡೂ ಸಮಾನವಾಗಿಯೇ ಇಲ್ಲವೆಂತಲೂ, ಭಾವಾಭಾವವಿಲಕ್ಷಣವಾದ ಪರೀಕ್ಷಕನಾದ (ತನ್ನನ್ನೂ) ಇಲ್ಲವೆಂದು ಪ್ರತಿಜ್ಞೆ ಮಾಡುತ್ತಾನೆ!

(೩) ಮತ್ತೂ ಏನೆಂದರೆ ಗೌಡಪಾದಾಚಾರ್ಯರು "ಈ ವಿಶ್ವವೆಲ್ಲ ಬ್ರಹ್ಮವೇ" (ಮುಂ. ೨-೨-೧೧) "ತಾನು ಹುಟ್ಟದೇ ಬಹಳವಾಗಿ (ಹುಟ್ಟಿದವನಂತೆ) ತೋರುವನು" (ತೈ.ಆ.೩-೧೩-೩೯) ಎಂಬಿವೇ ಮುಂತಾದ ಶ್ರುತಿಯನ್ನೂ ಅದಕ್ಕನುಗುಣವಾದ ತರ್ಕವನ್ನೂ ಆಶ್ರಯಿಸಿ, ದ್ವೈತವೆಂಬುದು ತೋರಿಕೆಯ ರೂಪದಿಂದ ಮಾಯೆಯಾಗಿದೆ ಎಂತಲೂ ಪರಮಾರ್ಥಸ್ವರೂಪದಿಂದ ಅದ್ವೈತವಾಗಿದೆ ಎಂತಲೂ ಹೇಳುತ್ತಾರೆ.

(ಆ) ಮಾಯಯಾ ಭಿದ್ಯತೇ ಹ್ಯೇತನ್ನಾನ್ಯಥಾಜಂ ಕಥಂಚನ |
ತತ್ತ್ವತೋ ಭಿದ್ಯಮಾನೇ ಹಿ ಮರ್ತ್ಯತಾಮಮೃತಂ ವ್ರಜೇತ್ || ೩-೧೯.

(ಇ) ಪ್ರಪಂಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ |
ಮಾಯಾಮಾತ್ರಮಿದಂ ದ್ವೈತಮದ್ವೈತಂ ಪರಮಾರ್ಥತಃ || ಗೌ.ಕಾ. ೧-೧೭.

ಇತಿ | ಶೂನ್ಯವಾದೀ ಪುನಃ, ದ್ವೈತಾದ್ವೈತಾದಿಸರ್ವದೃಷ್ಟೀನಾಂ ಪ್ರಹಾಣಾರ್ಥಮೇವ ಸ್ವಸಂಪ್ರದಾಯಕರ್ತುಃ ಪ್ರವೃತ್ತಿಮ್, ಸ್ವಸ್ಯ ಚ ಸರ್ವದೃಷ್ಟ್ಯನಾಶ್ರಯಣ-ಮೇವೇತರೇಭ್ಯೋ ವೈಶಿಷ್ಟ್ಯಮ್, ಅಂತತಃ ಶೂನ್ಯಸ್ಯಾಪ್ಯಶೂನ್ಯತಾಮೇವ ಚ ಪ್ರತಿಜಾನೀತೇ -

(೧) ಸರ್ವದೃಷ್ಟಿಪ್ರಹಾಣಾಯ ಯಃ ಸದ್ಧರ್ಮಮದೇಶಯತ್ |
ಅನುಕಂಪಾಮುಪಾದಾಯ ತಂ ನಮಸ್ಯಾಮಿ ಗೌತಮಮ್ || ಮಾ.ಕಾ. ೨೭-೩೦.

---

(ಅ) "ಅದ್ವೈತವು ಪರಮಾರ್ಥವು ದ್ವೈತವು ಅದರ ಭೇದವೆನಿಸಿ-ಕೊಂಡಿದೆ" (ಗೌ.ಕಾ.೩-೧೮).

(ಆ) ಇದು ಮಾಯೆಯಿಂದ ಭಿನ್ನವಾಗುತ್ತದೆ. ಹೀಗಲ್ಲದೆ ಹೇಗೂ ಅಜವಾದದ್ದು (ಭಿನ್ನವಾಗುವುದಿಲ್ಲ). ನಿಜವಾಗಿಯೇ ಭಿನ್ನವಾದರೆ ಅಮೃತವಾದದ್ದು ಮರ್ತ್ಯವಾದೀತು! (ಗೌ.ಕಾ. ೩-೧೯).

(ಇ) "ಪ್ರಪಂಚವೇನಾದರೂ ಇದ್ದಿದ್ದರೆ, ಹೋಗಬೇಕಾದೀತು, ಇದರಲ್ಲಿ ಸಂಶಯವಿಲ್ಲ. ಆದರೆ ಈ ದ್ವೈತವೆಲ್ಲವೂ ಮಾಯಾಮಾತ್ರವಾದದ್ದು, ನಿಜವಾಗಿ ಅದ್ವೈತವೇ ಪರಮಾರ್ಥವಾದದ್ದು" (ಗೌ.ಕಾ. ೧-೧೭). ಶೂನ್ಯವಾದಿ-ಯಾದರೋ - ದ್ವೈತಾದ್ವೈತಾದಿ ಎಲ್ಲಾ ದೃಷ್ಟಿಯನ್ನೂ ಹೊಡೆದುಹಾಕುವು-ದಕ್ಕಾಗಿಯೇ ಸಂಪ್ರದಾಯವನ್ನೂ ರಚಿಸಿದವನ ಪ್ರವೃತ್ತಿಯು. ತನ್ನದಾದರೋ ಯಾವ ದೃಷ್ಟಿಯನ್ನಾಶ್ರಯಿಸದೇ ಇರುವುದೆಂಬುದೇ ಅಸಾಧಾರಣವಾದದ್ದು. ಕೊನೆಗೆ ಶೂನ್ಯವೆಂಬುದೂ ಇಲ್ಲವೆಂದೇ ಪ್ರತಿಜ್ಞೆ ಮಾಡಿರುತ್ತಾನೆ.

(೧) "ಯಾವಾತನು (ಶಿಷ್ಯರ ಮೇಲಿನ) ಅನುಕಂಪೆಯನ್ನು ಒಪ್ಪಿ ಎಲ್ಲಾ ದೃಷ್ಟಿಯನ್ನೂ ಕಳೆಯುವುದಕ್ಕಾಗಿ ಒಳ್ಳೆಯ ಧರ್ಮವನ್ನು ಆದೇಶಿದನೋ, ಆ ಗೌತಮನನ್ನು ನಮಸ್ಕರಿಸುವೆನು" (ಮಾ.ಕಾ. ೨೭-೩೦).

(೨) ಶೂನ್ಯತಾ ಸರ್ವದೃಷ್ಟೀನಾಂ ಪ್ರೋಕ್ತಾ ನಿಃಸರಣಂ ಜಿನೈಃ |
ಯೇಷಾಂ ತು ಶೂನ್ಯತಾ ದೃಷ್ಟಿಸ್ತಾನಸಾಧ್ಯಾನ್ ಬಭಾಷಿರೇ || ಮಾ.ಕಾ. ೧೩-೮.

(೩) ಯದ್ಯಶೂನ್ಯಂ ಭವೇತ್ ಕಿಂಚಿತ್ ಸ್ಯಾಚ್ಛೂನ್ಯಮಿತಿ ಕಿಂಚನ |
ನ ಕಿಂಚಿದಸ್ತ್ಯಶೂನ್ಯಂ ಚ ಕುತಃ ಶೂನ್ಯಂ ಭವಿಷ್ಯತಿ || ಮಾ.ಕಾ. ೧೩-೭.

ಇತಿ | ತದೇವಮ್ -

(೪) ನಿರ್ಮಿತಕೋ ನಿರ್ಮಿತಕಂ ಮಾಯಾಪುರುಷಃ ಸ್ವಮಾಯಯಾ ಸೃಷ್ಟಮ್ |
ಪ್ರತಿಷೇಧಯತೇ ಯದ್ವತ್ ಪ್ರತಿಷೇಧೋಽಯಂ ತಥೈವ ಸ್ಯಾತ್ ||
ವಿ.ವ್ಯಾ. ೨೩.

[ "ಏವಮೇವ ಮದ್ವಚನೇನ ಶೂನ್ಯೇನ ಸರ್ವಭಾವಾನಾಂ ಸ್ವಭಾವಪ್ರತಿಷೇಧ ಉಪಪನ್ನಃ" ಇತಿ ತದ್ವ್ಯಾಖ್ಯಾನಂ ಚ || ]

ಇತಿ ಸರ್ವಭಾವಾನಾಂ ತತ್ಪ್ರತಿಷೇದ್ಧುಃ, ಪ್ರತಿಷೇಧಸ್ಯ ಚ, ಕಿಂ ಬಹುನಾ ಶೂನ್ಯಸ್ಯಾಪಿ

---

(೨) ತೀರ್ಥರಾದವರು ಎಲ್ಲಾ ದೃಷ್ಟಿಯನ್ನು ಸ್ವಭಾವದಿಂದಲೇ ಶೂನ್ಯವೆಂದು ಹೇಳಿದರು. ಆದರೆ ಯಾರ ಮತದಂತೆ ಶೂನ್ಯತೆಯೂ (ಒಂದು ದೃಷ್ಟಿಯಾಗಿದೆಯೋ) ಅವರನ್ನು ಅಸಾಧ್ಯರೆಂದೇ ಹೇಳಿರುವರು.

(೩) ಶೂನ್ಯವಲ್ಲದ್ದೇನಾದರೂ ಇದ್ದಿದ್ದರೆ ಯಾವುದನ್ನಾದರೂ ಶೂನ್ಯವೆನ್ನಬಹುದಾಗಿತ್ತು (ಮಾ.ಕಾ. ೧೩–೨). ಶೂನ್ಯವಲ್ಲದ್ದು ಯಾವುದೂ ಇಲ್ಲದಿರುವಾಗ ಶೂನ್ಯವೆಂಬುದಾದರೂ ಹೇಗಾದೀತು? (ಮಾ.ಕಾ. ೧೩–೭) ಎಂದು ಹೀಗೆಯೇ.

(೪) "ಮಾಯೆಯನ್ನು ಮಾಡುವಾತನು ಮಾಯಾಪುರುಷನನ್ನು ತನ್ನ ಮಾಯೆಯಿಂದ ಸೃಷ್ಟವಾದದ್ದನ್ನು ಹೇಗೆ ಅಲ್ಲಗಳೆಯುವನೋ ಹಾಗೆಯೇ ಇದು ಪ್ರತಿಷೇಧವಾದೀತು" (ವಿ.ವ್ಯಾ. ೨೩). (ಇದೇ ರೀತಿ ನನ್ನ ಮಾತಿನಿಂದ ಶೂನ್ಯವಾಗಿದೆ ಎಂದು ಹೇಳುವ ಮೂಲಕ ಎಲ್ಲಾ ಪದಾರ್ಥಗಳಿಗೂ ಸ್ವಭಾವಪ್ರತಿಷೇಧವು ಹೊಂದುತ್ತದೆ" ಎಂದು ಅದರ ವ್ಯಾಖ್ಯಾನವಿದೆ). ಹೀಗೆ ಎಲ್ಲಾ ಭಾವಗಳನ್ನೂ ಅಲ್ಲಗಳೆಯುವವನು, ಆ ಪ್ರತಿಷೇಧವನ್ನೂ ಅಲ್ಲಗಳೆಯುವವನು, ಶೂನ್ಯಕ್ಕೂ ಸ್ವಭಾವವಿಲ್ಲವೆಂದು ಹೇಳುವ ಬೌದ್ಧನಿಗೆ

ಸ್ವಭಾವಶೂನ್ಯತಾಂ ಬ್ರುವಾಣಸ್ಯ ಮಾಧ್ಯಮಿಕಸ್ಯ -

ಅಕಲ್ಪಕಮಜಂ ಜ್ಞಾನಂ ಜ್ಞೇಯಾಭಿನ್ನಂ ಪ್ರಚಕ್ಷತೇ |
ಬ್ರಹ್ಮಜ್ಞೇಯಮಜಂ ನಿತ್ಯಮಜೇನಾಜಂ ವಿಬುಧ್ಯತೇ || ಗೌ.ಕಾ. ೩-೩೩.

ಇತಿ ಮಾಯಿಕಜ್ಞಾತೃಜ್ಞಾನಾದಿವಿಕಲ್ಪಾಸ್ಪದಮದ್ವೈತಬ್ರಹ್ಮಾತ್ಮತತ್ತ್ವಂ ವೇದಾಂತಸಿದ್ಧಂ ಸರ್ವಸ್ಯಾಪ್ಯಾತ್ಮಭೂತಮುಪದೇಷ್ಟ್ರಾ ಸಾಮ್ಯಂ ನ ಕೋಽಪಿ ಕಥಂಚಿದಪಿ ಕಲ್ಪಯೇತ್ ವಿನಾ ದುರಭಿನಿವೇಶವಿಪರ್ಯಯಜ್ಞಾನಾನ್ಯತರತಿಮಿರಾಂಧಮ್ - ಇತ್ಯಲಮತಿ-ಪ್ರಪಂಚೇನ ||

**೬೦. ವೇದಾಂತಿಸಂಮತವಿಜ್ಞಾನಸ್ಯ ವೈಲಕ್ಷಣ್ಯಂ ಬೌದ್ಧಾಭಿಮತ-ವಿಜ್ಞಾನಾತ್**- ಏತೇನ ವಿಜ್ಞಾನವಾದಸಾಮ್ಯಮಪ್ಯಪಾಸ್ತಂ ವೇದಿತವ್ಯಮ್ | ತಥಾ ಹಿ ಅತ್ರ ತಾವದಿದಂ ಮನಸಿ ಕರಣೀಯಂ ಯದಾಚಾರ್ಯೇಣ "ಮತಾಂತರಾಭಿನಿವಿಷ್ಟೈರಪಿ ಪರಸ್ಪರಂ ವಿವದಮಾನೈಸ್ತತ ಏವಾಜಾದ್ವಯಮಾತ್ಮತತ್ತ್ವಂ ಪರಿದೀಪ್ಯತ

---

"ಕಲ್ಪನೆಯಿಲ್ಲದ, ಹುಟ್ಟಿಲ್ಲದ ಜ್ಞಾನವು (ಅದು) ಜ್ಞೇಯಕ್ಕಿಂತ ಭಿನ್ನವಲ್ಲವೆಂದು ಹೇಳಲಾಗಿದೆ. ಬ್ರಹ್ಮಜ್ಞೇಯವೂ ಅಜವೂ ನಿತ್ಯವೂ ಆದ ಅದು ಅಜದಿಂದ ಅಜವು ತಿಳಿಯಲ್ಪಡುತ್ತದೆ" (ಗೌ.ಕಾ. ೩-೩೩) ಎಂದು ಮಾಯಿಕವಾದ ಜ್ಞಾತೃಜ್ಞಾನವೇ ಮುಂತಾದ ವಿಕಲ್ಪಕ್ಕೆ ಆಸ್ಪದವಾದ ಅದ್ವೈತವಾದ ಬ್ರಹ್ಮಾತ್ಮ ತತ್ತ್ವವು ವೇದಾಂತಸಿದ್ಧವಾದದ್ದು ಎಲ್ಲಕ್ಕೂ ಆತ್ಮವಾಗಿರುವಂಥದನ್ನು ಉಪದೇಶಿಸುವಂತಹ ಶ್ರೀಗೌಡಪಾದರೊಡನೆ ಹೋಲಿಕೆಯನ್ನು ಯಾರೂ ಹೇಗೂ ಕಲ್ಪಿಸಲಾರರು. ದುರಾಗ್ರಹವಿಷ್ಟನಾದ ತಪ್ಪುತಿಳಿವಳಿಕೆಯೋ ಮುಂತಾದದ್ದರಲ್ಲಿ ಯಾವುದಾದರೊಂದು ತಿಮಿರದೋಷವುಳ್ಳವಾತನು ಮಾಡಿಯಾನು! ಎಂದಾದ್ದರಿಂದ ಹೆಚ್ಚಾಗಿ ಇದನ್ನು ವಿವರಿಸುವುದು ಸಾಕು.

**೬೦) ಬೌದ್ಧರಿಗೆ ಒಪ್ಪಾದ ವಿಜ್ಞಾನಕ್ಕಿಂತ ವೇದಾನ್ತಿಗಳಿಗೆ ಒಪ್ಪಾದ ವಿಜ್ಞಾನವು ವಿಲಕ್ಷಣವಾಗಿದೆ.** ಇಷ್ಟನ್ನು ಹೇಳಿದ್ದರಿಂದ ವಿಜ್ಞಾನವಾದ-ದೊಡನೆ ಸಾಮ್ಯತೆ ಹೊಂದಿದೆ ಎಂಬ ವಿಚಾರವನ್ನು ತಳ್ಳಿಹಾಕಿದ್ದಾಯಿತು. ಹಾಗೆಯೇ ಇದನ್ನು ಲಕ್ಷ್ಯದಲ್ಲಿಟ್ಟಿರಬೇಕು - ಏನೆಂದರೆ - ಬೇರೆ ಬೇರೆ ಮತದಲ್ಲಿ ಅಭಿನಿವೇಶವನ್ನು ಹೊಂದಿದವರು ಪರಸ್ಪರ ವಾದ ಮಾಡುತ್ತಿರುವವರೇ (ಪ್ರಕಾರಾಂತರದಿಂದ) ಅಜಾದ್ವಯವಾದ ಆತ್ಮತತ್ತ್ವವನ್ನು

ಇತ್ಯಾವಿಷ್ಕರ್ತುವಮ್ ಅಲಾತಶಾಂತಿಪ್ರಕರಣಮಾರಿಪ್ಸಮಾಣೇನ ಪ್ರಪ್ರಥಮಂ ಮಂಗಲಶ್ಲೋಕ ಏವಾದ್ವೈತಾತ್ಮದರ್ಶನಂ ಪ್ರತಿಜ್ಞಾತಮ್ | ವಿಶಿಷ್ಯ ಚ ದರ್ಶನಸತತ್ತ್ವಪ್ರತಿಪಾದನಾಂತೇ ಬುದ್ಧೋಪದಿಷ್ಟವಿಜ್ಞಾನವಾದತೋಽದ್ವೈತದರ್ಶನಸ್ಯ ಸ್ವಸಂಪ್ರದಾಯಾನುಮತಸ್ಯ ವೈಲಕ್ಷಣ್ಯಂ ಕಂಠರವೇಣೋಕ್ತಮ್" ಇತಿ ||

ತತ್ರೋಪಕ್ರಮೇ ತಾವತ್ -

(೧) ಜ್ಞಾನೇನಾಕಾಶಕಲ್ಪೇನ ಧರ್ಮಾನ್ ಯೋ ಗಗನೋಪಮಾನ್ |
ಜ್ಞೇಯಾಭಿನ್ನೇನ ಸಂಬುದ್ಧಸ್ತಂ ವಂದೇ ದ್ವಿಪದಾಂ ವರಮ್ || ಗೌ.ಕಾ. ೪-೧.

ಇತಿ ಶೂನ್ಯವಾದಾದಿವ ವಿಜ್ಞಾನವಾದಾದಪಿ ಸ್ವಾಭೀಷ್ಟಾದ್ವೈತತತ್ತ್ವಸ್ಯ ವಿಶೇಷಮಾಹ | ತಥಾ ಹಿ - ಯಥಾ ಆಕಾಶಂ ನಿಃಸ್ವಭಾವಮ್, ಏವಂ ಜ್ಞಾನಮಪಿ - ಇತಿ ಶೂನ್ಯವಾದಿನಃ ವಿಜ್ಞಾನವಾದಿನಸ್ತು ನಿರಾಲಂಬನತ್ವಾದೇವ ವಿಜ್ಞಾನಸ್ಯಾಸಂಗತ್ವಮ್, ಕ್ಷಣಿಕವಿಜ್ಞಾನ-

---

ತೋರಿಸಿದಂತಾಗಿರುತ್ತಾರೆಂಬುದನ್ನು ತೋರಿಸಬೇಕೆನ್ನುತ್ತಾ, ಶ್ರೀಗೌಡಪಾದಾಚಾರ್ಯರು ಅಲಾತಶಾಂತಿಪ್ರಕರಣವನ್ನು ಆರಂಭಿಸಬೇಕೆನ್ನು-ವವರಾಗಿ ಮೊಟ್ಟ ಮೊದಲನೆಯ ಶ್ಲೋಕವಾದ ಮಂಗಲಶ್ಲೋಕದಲ್ಲೇ ಅದ್ವೈತಾತ್ಮದರ್ಶನವನ್ನೇ ಪ್ರತಿಜ್ಞೆ ಮಾಡಿರುತ್ತಾರೆ. ವಿಶೇಷವಾಗಿ (ಅದ್ವೈತ) ದರ್ಶನದ ನಿಜವನ್ನು ಪ್ರತಿಪಾದನೆ ಮಾಡಿದ ಕೊನೆಯಲ್ಲಿ ಬುದ್ಧನು ಉಪದೇಶಮಾಡಿದ್ದಾದ ವಿಜ್ಞಾನವಾದಕ್ಕಿಂತ ತಮ್ಮ ಸಂಪ್ರದಾಯಕ್ಕೆ ಒಪ್ಪಾದ ಅದ್ವೈತದರ್ಶನವು ವಿಲಕ್ಷಣವಾಗಿದೆ ಎಂಬುದನ್ನು ಬಾಯಿಬಿಟ್ಟು ಹೇಳಿರು-ತ್ತಾರೆ. ಆರಂಭದಲ್ಲಿ ನೋಡುವುದಾದರೆ ೧) ಆಕಾಶದಂತಿರುವ ಜ್ಞಾನದಿಂದ ಆಕಾಶದಂತಿರುವ ಜೀವರನ್ನು ತಿಳಿಯಬೇಕಾದ (ಆತ್ಮನಿಗಿಂತ) ಬೇರೆಯಾಗದೇ ಯಾವನು ತಿಳಿದಿರುವನೋ (ಅಂತಹ) ದ್ವಿಪದರಲ್ಲಿ ಶ್ರೇಷ್ಠನಾದ (ನಾರಾಯಣನನ್ನು) ನಮಸ್ಕರಿಸುವೆನು (ಗೌ.ಕಾ. ೪-೧). ಎಂದು ಹೇಳುತ್ತಾ ಶೂನ್ಯವಾದಕ್ಕಿಂತ ಬೇರೆಯಾಗಿರುವ, ಹಾಗೆಯೇ ವಿಜ್ಞಾನವಾದಕ್ಕಿಂತಲೂ ತಮಗೆ ಒಪ್ಪಿಗೆಯಾದ ಅದ್ವೈತತತ್ವವು ವಿಶೇಷವಾದದ್ದಾಗಿದೆ ಎಂದು ಹೇಳಿರುತ್ತಾರೆ. (ಬೌದ್ಧರು) ಹೇಗೆ ಆಕಾಶವು ನಿಃಸ್ವಭಾವವೋ ಹಾಗೆಯೇ ಜ್ಞಾನವೂ ಎಂದು ಶೂನ್ಯವಾದಿಗಳು (ಹೇಳುವರು). ವಿಜ್ಞಾನವಾದಿಗಳಾದರೋ, ಆಧಾರವಿಲ್ಲದ್ದಾದ್ದರಿಂದಲೇ ವಿಜ್ಞಾನವು ಅಸಂಗವಾದದ್ದು, (ಹಾಗೆಯೇ) ವಿಷಯಗಳು ಕ್ಷಣಿಕವಿಜ್ಞಾನದ ಪರಿಣಾಮಮಾತ್ರವಾಗಿ ವಿಜ್ಞಾನವಷ್ಟೇ

ಪರಿಣಾಮತ್ವಾಚ್ಚ ವಿಷಯಾಣಾಂ ವಿಜ್ಞಾನಮಾತ್ರತ್ವಂ ನ ತು ತೇಷಾಂ ಸ್ವಾತಂತ್ರ್ಯೇಣಾ-ಪ್ಯಸ್ತಿತ್ವಮ್ ಇತ್ಯಾಹುಃ | ತದೇತದುಭಯಂ ವ್ಯಾವೃತ್ಯ ಕೂಟಸ್ಥವಿಜ್ಞಾನಮಾತ್ರಮೇವ ಸತತ್ತ್ವಂ ಜ್ಞಾತೃಜ್ಞಾನಜ್ಞೇಯಾನಾಂ ನ ತು ತತಃ ಪೃಥಕ್ಸತ್ತಾ ತೇಷಾಮಸ್ತೀತ್ಯುಚ್ಯತೇ | ಯಥಾಹ ಭಗವಾನ್ ಭಾಷ್ಯಕೃತ್ -

> (1) ಉಪದೇಷ್ಟ್ರುನಮಸ್ಕಾರಮುಖೇನ ಜ್ಞಾನಜ್ಞೇಯಜ್ಞಾತೃಭೇದರಹಿತಂ ಪರಮಾತ್ಮತತ್ತ್ವದರ್ಶನಮಿಹ ಪ್ರಕರಣೇ ಪ್ರತಿಪಿಪಾದಯಿಷಿತಂ ಪ್ರತಿಪಕ್ಷ-ಪ್ರತಿಷೇಧದ್ವಾರೇಣ ಪ್ರತಿಜ್ಞಾತಂ ಭವತಿ || ಗೌ.ಕಾ.ಭಾ. ೪-೧,

ಇತಿ | ಉಪಸಂಹಾರೇ ಖಲ್ವಪಿ -

> (೨) ಕ್ರಮತೇ ನ ಹಿ ಬುದ್ಧಸ್ಯ ಜ್ಞಾನಂ ಧರ್ಮೇಷು ತಾಯಿನಃ |
> ಸರ್ವೇ ಧರ್ಮಾಸ್ತಥಾ ಜ್ಞಾನಂ ನೈತದ್ ಬುದ್ಧೇನ ಭಾಷಿತಮ್ || ಗೌ.ಕಾ. ೪-೯೯.

ಇತಿ | ವ್ಯಾಚಷ್ಟೇ ಚೈತದ್ ಭಾಷ್ಯಕಾರಃ -

---

ಆಗಿದೆಯೇ ಹೊರತು ಅವುಗಳಿಗೆ ಸ್ವತಂತ್ರವಾಗಿಯೂ ಅಸ್ತಿತ್ವವಿದೆ ಎಂಬುದಿಲ್ಲ ಎನ್ನುತ್ತಾರೆ. (ಆದರೆ ಶ್ರೀಗೌಡಪಾದರು) ಇವೆರಡನ್ನೂ ತಳ್ಳಿಹಾಕಿ ಜ್ಞಾತೃಜ್ಞಾನಜ್ಞೇಯಗಳ ತಿರುಳು ಕೂಟಸ್ಥವಾದ ವಿಜ್ಞಾನವಷ್ಟೇ ಆಗಿದೆಯೇ ಹೊರತು ಅದಕ್ಕಿಂತ ಬೇರೆಯಾಗಿ ಅವುಗಳಿಗೆ ಇರುವಿಕೆ ಇರುವುದಿಲ್ಲ ಎಂದಿರುತ್ತಾರೆ. ಪೂಜ್ಯರಾದ ಭಾಷ್ಯಕಾರರೂ ಸಹ ಇದನ್ನೇ ಹೇಳಿರುತ್ತಾರೆ.

(1) ಪ್ರತಿಪಕ್ಷವಾದ (ಸಾಂಖ್ಯ ನ್ಯಾಯಾದಿಗಳನ್ನು) ಅಲ್ಲಗಳೆಯುವುದರ ಮೂಲಕ ಯುಕ್ತಿಯಿಂದ (ಇದನ್ನು) ಪ್ರತಿಜ್ಞೆ ಮಾಡಿದಂತಾಗುತ್ತದೆ (ಏನೆಂದರೆ) – "ಉಪದೇಷ್ಟೃವಾದ ಗುರುವಿಗೆ" ನಮಸ್ಕಾರವನ್ನು ಮಾಡುವ ಮೂಲಕ ಜ್ಞಾನಜ್ಞೇಯಜ್ಞಾತೃಭೇದವಿಲ್ಲದಿರುವ ಪರಮಾತ್ಮತತ್ವವನ್ನು ತೋರಿಸುವು-ದೆಂಬುದೇ ಈ ಪ್ರಕರಣದಲ್ಲಿ ಪ್ರತಿಪಾದನೆಯನ್ನು ಮಾಡಬೇಕೆಂದುಕೊಂಡಿರುವ ವಿಚಾರವು" (ಗೌ.ಕಾ. ೪–೧). ಉಪಸಂಹಾರದಲ್ಲೂ ಸಹ –

(೨) ನಿರಂತರವಾದ ಜ್ಞಾನಿಯ ದೃಷ್ಟಿಯಲ್ಲಿ ಜೀವನಲ್ಲಿರುವ ಜ್ಞಾನವು ಸಂಚರಿಸುವುದಿಲ್ಲ. ಎಲ್ಲಾ ಜೀವರಲ್ಲಿಯೂ ಹಾಗೆಯೇ, ಈ ಜ್ಞಾನವನ್ನು (ಮಾತ್ರ) ಗೌತಮಬುದ್ಧನು ಹೇಳಿರುವುದಿಲ್ಲ (ಗೌ.ಕಾ. ೪–೯೯). ಇದನ್ನು ಭಾಷ್ಯಕಾರರೂ ಸಹ ಹೀಗೆ ವ್ಯಾಖ್ಯಾನಿಸಿರುತ್ತಾರೆ.

(2) ಯಸ್ಮಾತ್, ನ ಹಿ ಕ್ರಮತೇ ಬುದ್ಧಸ್ಯ ಪರಮಾರ್ಥದರ್ಶಿನಃ, ಜ್ಞಾನಂ ವಿಷಯಾಂತರೇಷು ಧರ್ಮೇಷು, ಧರ್ಮಸಂಸ್ಥಂ ಸವಿತರೀವ ಪ್ರಭಾ | ತಾಯಿನಃ ತಾಯೋ ಅಸ್ಯಾಸ್ತೀತಿ ತಾಯೀ | ಸಂತಾನವತಃ, ನಿರಂತರಸ್ಯ ಆಕಾಶಕಲ್ಪಸ್ಯ - ಇತ್ಯರ್ಥಃ | ಪೂಜಾವತಃ, ಪ್ರಜ್ಞಾವತೋ ವಾ | ಸರ್ವೇ ಧರ್ಮಾಃ ಆತ್ಮಾನೋಽಪಿ ತಥಾ ಜ್ಞಾನವದೇವ ಆಕಾಶಕಲ್ಪತ್ವಾತ್ ನ ಕ್ರಮಂತೇ ಕ್ವಚಿದಪಿ ಅರ್ಥಾಂತರೇ ಇತ್ಯರ್ಥಃ | ಯದಾದೌ ಉಪನ್ಯಸ್ತಂ "ಜ್ಞಾನೇನಾಕಾಶಕಲ್ಪೇನ" ಇತ್ಯಾದಿ | ತದಿದಮ್ ಆಕಾಶಕಲ್ಪಸ್ಯ ತಾಯಿನಃ ಬುದ್ಧಸ್ಯ ತದನನ್ಯತ್ವಾತ್ ಆಕಾಶಕಲ್ಪಮ್, ಜ್ಞಾನಂ ನ ಕ್ರಮತೇ ಕ್ವಚಿದಪ್ಯರ್ಥಾಂತರೇ | ತಥಾ ಧರ್ಮಾಃ ಇತಿ | ಆಕಾಶಮಿವ ಅಚಲಮ್, ಅವಿಕ್ರಿಯಮ್, ನಿರವಯವಂ, ನಿತ್ಯಮ್, ಅದ್ವಿತೀಯಮ್, ಅಸಂಗಮ್, ಅದೃಶ್ಯಮ್, ಅಗ್ರಾಹ್ಯಮ್, ಅಶನಾಯಾದ್ಯತೀತಂ ಬ್ರಹ್ಮಾತ್ಮತತ್ತ್ವಮ್, "ನ ಹಿ ದ್ರಷ್ಟುರ್ದೃಷ್ಟೇರ್ವಿಪರಿಲೋಪೋ ವಿದ್ಯತೇ" (ಬೃ) ಇತಿ ಶ್ರುತೇಃ | ಜ್ಞಾನಜ್ಞೇಯಜ್ಞಾತೃಭೇದರಹಿತಂ ಪರಮಾರ್ಥತತ್ತ್ವಮ-

---

"ಪರಮಾರ್ಥವನ್ನು ಕಂಡುಕೊಂಡಿರುವ ಜ್ಞಾನಿಯ ದೃಷ್ಟಿಯಲ್ಲಿ ಜೀವನಲ್ಲಿರುವ ಜ್ಞಾನವು ಸೂರ್ಯನಲ್ಲಿರುವ ಬೆಳಕು ಹೇಗೆ ಸೂರ್ಯನನ್ನು ಬಿಟ್ಟುಹೋಗುವುದಿಲ್ಲವೋ ಅದರಂತೆ ಹೋಗುವುದಿಲ್ಲ." ಸಂತತವಾಗಿ ಆಕಾಶದಂತೆ ಎಲ್ಲಡೆ ವ್ಯಾಪಿಸಿರುವ ಅಥವಾ ಪೂಜ್ಯವಾದ ಉತ್ಕೃಷ್ಟವಾದ ಜ್ಞಾನವು ಬೇರೆಕಡೆಗೆ ಚಲಿಸುವುದಿಲ್ಲ. ತಾಯಿಯಾದ - ತಾಯವುಳ್ಳವನು ತಾಯಿಯು, ಸಂತತವಾಗಿರುವ ಎಡೆಬಿಡದೆ ಆಕಾಶದಂತೆ (ವ್ಯಾಪಿಸಿರುವ) ಎಂದರ್ಥ; ಅಥವಾ ಪೂಜೆಯುಳ್ಳ (ಪೂಜ್ಯನಾದ); ಅಥವಾ ಪ್ರಕೃಷ್ಟವಾದ ಜ್ಞಾನವುಳ್ಳ-(ಬುದ್ಧನ ಮತದಲ್ಲಿ ಜ್ಞಾನವು) ಬೇರೆಯ ವಿಷಯಗಳಲ್ಲಿ ಹೋಗಿಸೇರುವುದಿಲ್ಲ (ಎಂದರ್ಥ). ಮತ್ತು ಎಲ್ಲಾ ಆತ್ಮರೂ ಜ್ಞಾನದಂತೆಯೇ (ಇರತಕ್ಕವರು), ಆಕಾಶದಂತಿದ್ದು ಬೇರೆ ಕಡೆಗೆ ಹೋಗುವರಲ್ಲ ಎಂದರ್ಥ. "ಆಕಾಶಕಲ್ಪವಾದ ಜ್ಞಾನದಿಂದ" ಎಂದು (೪-೧) ಹೇಳಿತ್ತಲ್ಲ, ಅದನ್ನೇ ಇಲ್ಲಿ ಆಕಾಶದಂತಿರುವ ಜ್ಞಾನಿಯ, ಆಕಾಶದಂತಿರುವ ಜ್ಞಾನವು, ಆತನ ಸ್ವರೂಪಕ್ಕಿಂತ ಬೇರೆಯಲ್ಲವಾದ್ದರಿಂದ ಮತ್ತೆ ಯಾವ ವಿಷಯಕ್ಕೂ ಹೋಗಿ ಸೇರುವುದಿಲ್ಲ. ಧರ್ಮರೂ ಹಾಗೆಯೇ ಎಂದು ಉಪಸಂಹಾರವನ್ನು ಮಾಡಿರು-ತ್ತಾರೆ. ಈ ಜ್ಞಾನವೂ ಆಕಾಶದಂತೆ ಅಚಲವಾಗಿಯೂ ವಿಕಾರವಿಲ್ಲದ್ದಾಗಿಯೂ ಅವಯವವಿಲ್ಲದ್ದಾಗಿಯೂ ನಿತ್ಯವಾಗಿಯೇ, ತನಗೆರಡಿಲ್ಲದ್ದಾಗಿಯೂ ಮತ್ತೊಂದರ ಸೋಂಕಿಲ್ಲದ್ದಾಗಿಯೂ ಕಾಣುವುದಕ್ಕಾಗದೆಯೂ ಹಿಡಿದು-ಕೊಳ್ಳುವುದಕ್ಕೆ ಬಾರದ್ದಾಗಿಯೂ ಹಸಿವು ಮುಂತಾದವುಗಳನ್ನು

ದ್ವಯಮೇತತ್ ನ ಬುದ್ಧೇನ ಭಾಷಿತಮ್ | ಯದ್ಯಪಿ ಬಾಹ್ಯಾರ್ಥನಿರಾಕರಣಂ ಜ್ಞಾನಮಾತ್ರಕಲ್ಪನಾ ಚ ಅದ್ವಯವಸ್ತುಸಾಮೀಪ್ಯಮುಕ್ತಮ್ | ಇದಂ ತು ಪರಮಾರ್ಥತತ್ತ್ವಮ್ ಅದ್ವೈತಂ ವೇದಾಂತೇಷ್ವೇವ ವಿಜ್ಞೇಯಮ್ ಇತ್ಯರ್ಥಃ||
ಗೌ.ಕಾ.ಭಾ.

[ ಅತ್ರ "ವಿಷಯಾಂತರೇಷು ಜ್ಞಾನಂ ನ ಕ್ರಮತೇ" ಇತಿ ಜ್ಞೇಯಸ್ಯ ಸ್ವಾತಂತ್ರ್ಯೇಣ ಸತ್ತ್ವಂ ನಿರಸ್ತಮ್ | "ತಾಯಿನಃ" ಇತಿ ಸಂತತಚೈತನ್ಯಸ್ವರೂಪಮುಕ್ತಮ್ | "ಆತ್ಮಾನೋಽಪಿ ಧರ್ಮಶಬ್ದವಾಚ್ಯಾ ನಾರ್ಥಾಂತರೇಷು ಕ್ರಮಂತೇ" ಇತಿ ಪರಮಾತ್ಮಸ್ವರೂಪೇಣ ತೇಷಾಮೈಕ್ಯಮುಕ್ತಮ್ | ಆತ್ಮನೋ ಜ್ಞಾನಂ ಸವಿತರೀವ ಪ್ರಭಾ ಸ್ವಾಶ್ರಯಾಭಿನ್ನಮಿತಿ ಚೋಕ್ತಮ್ || ]

ಅರ್ವಾಚೀನವಿಜ್ಞಾನವಾದಿನಸ್ತು "ತಾಯಃ ಸ್ವದೃಷ್ಟಮಾರ್ಗೋಕ್ತಿಃ", "ತಾಯೋ ವಾ ಚತುಃಸತ್ಯಪ್ರಕಾಶನಮ್" (ಪ್ರ.ವಾ. ೨-೧೪೬, ೧೪೭) ಇತ್ಯಾಹುಃ|

---

ದಾಟಿರುವುದಾಗಿಯೂ ಇರುವಂಥದ್ದು ಬ್ರಹ್ಮಾತ್ಮತತ್ತ್ವವು. "ನೋಡುವಾತನ ನೋಟಕ್ಕೆ ನಾಶವೆಂಬುದಿಲ್ಲ" (ಬೃ. ೪-೩-೨೩), ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. ಜ್ಞಾನಜ್ಞೇಯಜ್ಞಾತೃಗಳೆಂಬ ಭೇದಗಳಿಲ್ಲದ ತನಗೆರಡನೆಯ-ದಿಲ್ಲದ ಈ ಪರಮಾರ್ಥತತ್ತ್ವವನ್ನು ಗೌತಮಬುದ್ಧನು ಹೇಳಿರುವುದಿಲ್ಲ. ಹೊರಗಿನ ವಸ್ತುವನ್ನು ನಿರಾಕರಿಸುವುದು ಜ್ಞಾನ ಒಂದೇ ಇರುವುದೆಂದು ಕಲ್ಪಿಸಿರುವುದು ಹೀಗೆ ಅದ್ವಯವಸ್ತುವಿಗೆ ಸಮೀಪವಾಗಿರುವುದನ್ನೇ ಅವರು ಹೇಳಿದರೂ ಇದನ್ನು (ಮಾತ್ರ ಹೇಳಿಲ್ಲ.) ಅದ್ವೈತವೆಂಬ ಈ ಪರಮಾರ್ಥ-ತತ್ತ್ವವಾದರೋ ವೇದಾನ್ತಗಳಲ್ಲಿಯೇ ತಿಳಿಯಬರತಕ್ಕದ್ದಾಗಿರುತ್ತದೆ ಎಂದರ್ಥ" (ಗೌ.ಕಾ. ೪-೯೯). (ಇಲ್ಲಿ "ಬೇರೆ ವಿಷಯಗಳಲ್ಲಿ ಜ್ಞಾನವು ಹೋಗುವುದಿಲ್ಲ" ಎಂದು ಹೇಳುತ್ತಾ ಜ್ಞೇಯಕ್ಕೆ ಸ್ವತಂತ್ರವಾಗಿ ಇರುವಿಕೆ ಇದೆ ಎಂಬುದನ್ನು ಅಲ್ಲಗಳೆದಿರುತ್ತಾರೆ. "ತಾಯಿನಃ" ಎಂದು ಹೇಳುತ್ತಾ ನಿರಂತರವಾದ ಚೈತನ್ಯ ಸ್ವರೂಪವೆಂದು ಹೇಳಿದೆ. ಧರ್ಮ ಎಂಬ ಶಬ್ದದಿಂದ ಕರೆಸಿಕೊಂಡ ಜೀವರುಗಳೂ ಸಹ ಬೇರೆ ಕಡೆಗೆ ಹೋಗುವರಲ್ಲ ಎಂದು ಹೇಳುತ್ತಾ ಪರಮಾತ್ಮಸ್ವರೂಪದಿಂದ ಅವರುಗಳಿಗೆ ಐಕ್ಯವನ್ನು ಹೇಳಿದೆ. ಆತ್ಮನ ಅರಿವು ಸೂರ್ಯನಲ್ಲಿರುವ ಪ್ರಭೆಯಂತೆ ತನ್ನ ಸ್ವರೂಪಕ್ಕಿಂತ ಭಿನ್ನವಾಗಿಲ್ಲ ಎಂದು ಹೇಳಿದೆ)....

ಅರ್ವಾಚೀನ (ಈಗಿನ) ವಿಜ್ಞಾನವಾದಿಗಳು "ತಾಯವು ಎಂದರೆ ತಾವು

ಅತ್ರ ತು ತಾಯಃ ಸರ್ವತ್ರ ಸಂತತೋ ಭಾವಃ, ಆಕಾಶವತ್ಸರ್ವಗತಚೈತನ್ಯಸ್ವಭಾವತ್ವ-ಮಿತ್ಯುಕ್ತಮಿತಿ ವಿಶೇಷಃ | ಜ್ಞಾತೃಜ್ಞೇಯಜ್ಞಾನಾನಾಂ ಸರ್ವೇಷಾಮಪಿ "ಆಕಾಶವತ್ ಸರ್ವಗತಶ್ಚ ನಿತ್ಯಃ" (?) "ಯೇನ ಸರ್ವಮಿದಂ ತತಮ್" (ಗೀ.೨-೧೭.) ಇತಿ ಚ ಶ್ರುತಿಸ್ಮೃತ್ಯನುಸಾರೇಣ ಅದ್ವಿತೀಯಚೈತನ್ಯಮಾತ್ರೇಣ ರೂಪೇಣ ಸರ್ವವ್ಯಾಪಿತ್ವಂ ಹಿ ಬುದ್ಧೇನ - ವಿಜ್ಞಾನವಾದರೀತ್ಯಾಪಿ - ನ ಭಾಷಿತಮ್ | ಯತ್ತು ಭಾಷ್ಯಮ್ "ಅದ್ವಯವಸ್ತುಸಾಮೀಪ್ಯಮುಕ್ತಮ್" ತೇನೇತಿ, ತದುಕ್ತವಿಜ್ಞಾನಸ್ಯ ಬಾಹ್ಯಾರ್ಥ-ನಿಪೇಕ್ಷಸ್ಯೈವ ಜ್ಞಾನಜ್ಞೇಯವ್ಯವಹಾರಸಾಧಕಯುಕ್ತ್ಯುಪೇತತ್ವಾತ್ | ತಯೈವ ಹಿ ಯುಕ್ತ್ಯಾ ಕ್ಷಣಿಕವಿಜ್ಞಾನಮಪಿ ವಿಷಯಕೋಟೌ ವಿನಿವೇಶ್ಯ ಆತ್ಮಾವಿದ್ಯಯೈವ ಸರ್ವಪ್ರಮಾಣ-ಪ್ರಮೇಯವ್ಯವಹಾರಃ - ಇತಿ ಶಕ್ಯತೇ ಉಪಪಾದಯಿತುಮ್, ತತಶ್ಚ ಪ್ರಪಂಚೋಪ-

---

ಕಂಡುಕೊಂಡ ಮಾರ್ಗದ ಮಾತು, ಅಥವಾ ತಾಯವು ಎಂದರೆ ಚತುಃಸತ್ಯದ (ಅಸ್ತಿನಾಸ್ತ್ಯಾದಿ) ಪ್ರಕಾಶನವು, (ತೋರಿಸುವುದು) (ಧರ್ಮಕೀರ್ತಿಕೃತ ಪ್ರಮಾಣವಾರ್ತಿಕವು ೨-೧೪೬, ೧೪೭) ಎಂದು ಹೇಳುತ್ತಾರೆ. ಇಲ್ಲಾದರೋ ತಾಯವು ಎಂದರೆ ಎಲ್ಲಾ ಕಡೆಯಲ್ಲೂ ಸೇರಿಕೊಂಡರೂಪವು, ಆಕಾಶದಂತೆ ಎಲ್ಲಾ ಕಡೆಯಲ್ಲಿರುವ ಚೈತನ್ಯಸ್ವಭಾವದ್ದೆಂದು ಹೇಳಿದೆ ಎಂಬುದು ವಿಶೇಷವು. ಎಲ್ಲಾ ಜ್ಞಾತೃಜ್ಞಾನಜ್ಞೇಯಗಳು "ಆಕಾಶದಂತೆ ಸರ್ವಗತವೂ ನಿತ್ಯವೂ" "ಯಾವುದರಿಂದ ಇವೆಲ್ಲವೂ ವ್ಯಾಪಿಸಲ್ಪಟ್ಟಿದೆಯೋ" (ಗೀ ೨-೧೭) ಎಂಬುದಾಗಿ ಶ್ರುತಿಸ್ಮೃತಿಗೆ ಅನುಗುಣವಾಗಿ ಅದ್ವಿತೀಯ ಚೈತನ್ಯಮಾತ್ರ-ರೂಪದಿಂದ ಸರ್ವವ್ಯಾಪಿಯಾಗಿದೆ ಎಂದು ಏನು ಹೇಳಿದೆ ಅದನ್ನು ಬುದ್ಧನು ವಿಜ್ಞಾನವಾದ ರೀತಿಯಿಂದಲೂ ಹೇಳಿರುವುದಿಲ್ಲ. "ಅದ್ವಯವಸ್ತುವಿಗೆ ಸಮೀಪವಾಗಿ ಬುದ್ಧನು ಹೇಳಿರುತ್ತಾನೆಂದು" ಏನು ಭಾಷ್ಯಕಾರರು ಹೇಳಿರುತ್ತಾರೆ ಅದು, ಅವನು ಹೇಳಿದ ವಿಜ್ಞಾನವು, ಹೊರಗಿನ ವಸ್ತುವಿನ ಅಪೇಕ್ಷೆ ಇಲ್ಲದೆಯೇ ಜ್ಞಾನಜ್ಞೇಯವ್ಯವಹಾರವನ್ನು ಸಾಧಿಸುವಂಥದ್ದು ಎಂಬ ಯುಕ್ತಿಯಿಂದ ಕೂಡಿದ್ದಾಗಿದೆ (ಎಂಬ ಕಾರಣದಿಂದ ಹಾಗೆ ಹೇಳಿರುತ್ತಾರೆ). ಅದೇ ಯುಕ್ತಿಯಿಂದಲೇ ಕ್ಷಣಿಕವಿಜ್ಞಾನವನ್ನೂ ಕೂಡ ವಿಷಯರಾಶಿಯಲ್ಲಿ ಸೇರಿಸಿ ಆತ್ಮನ ಬಗ್ಗೆ ಇರುವ ಅವಿದ್ಯೆಯಿಂದಲೇ ಎಲ್ಲಾ ಪ್ರಮಾಣಪ್ರಮೇಯ-ವ್ಯವಹಾರವು ಸಾಗುತ್ತಿರುವುದೆಂಬುದನ್ನೂ ಹೊಂದಿಸುವುದಕ್ಕಾಗುತ್ತದೆ. ಅದರಿಂದ ಪ್ರಪಂಚವು ಅಡಗಿರುವ ಮಂಗಳವಾದ ಅದ್ವೈತತತ್ತ್ವವು ಸಿದ್ಧವಾಗುತ್ತದೆ ಎಂಬ ಅಭಿಪ್ರಾಯದಿಂದ ಆ ವಾದವು ಅದ್ವೈತಕ್ಕೆ

ಶಮಂ ಶಿವಮದ್ವೈತತತ್ತ್ವಂ ಸೇತ್ಸ್ಯತೀತ್ಯಭಿಪ್ರಾಯೇಣೈವಮುಚ್ಯತೇ, ನ ತು ವ್ಯಾವಹಾರಿಕಾನುಭವಾಪಲಾಪೇನ ಬಾಹ್ಯಾರ್ಥನಿರಾಕರಣಂ ಯುಕ್ತಮಿತಿ ಕೃತ್ವಾ | ವಿಜ್ಞಾನವಾದಸ್ಯ ವಿಸ್ತೀರ್ಣತರಂ ಸೂತ್ರಭಾಷ್ಯೇ ನಿರಾಕೃತತ್ವಾತ್ - ಇತಿ ಬೋಧ್ಯಮ್||

**೬೧. ಬಾಹ್ಯಾರ್ಥನಿರಾಕರಣಪ್ರಕಾರೇ ವೈಷಮ್ಯಂ ದರ್ಶನಯೋಃ -** ಯತ್ತೂಚ್ಯತೇ ವಿಜ್ಞಾನವಾದಿಭಿರ್ಬೌದ್ಧೈಃ -

ಅನ್ಯತೋ ನಾಪಿ ಚಾಯಾತಂ ನ ತಿಷ್ಠತಿ ನ ಗಚ್ಛತಿ |
ಮಾಯಾತಃ ಕೋ ವಿಶೇಷೋಽಸ್ಯ ಯನ್ಮೂಢೈಃ ಸತ್ಯತಃ ಕೃತಮ್ ||ಬೋ.ಚ. ೯-೧೪೩.

ತತ್ರ ಯದ್ಯಯಮಭಿಪ್ರಾಯಃ - ಚಿತ್ತಮೇವ ತು ಸತ್ಯಮ್, ತದ್ವ್ಯತಿರೇಕೇಣ ಜ್ಞಾನವೈಚಿತ್ರ್ಯನಿಮಿತ್ತಂ ನಾಸ್ತ್ಯೇವ - ಇತಿ, ತರ್ಹಿ ತೇನೈವ ನ್ಯಾಯೇನ ಇದಮಭ್ಯುಪ-ಗಂತವ್ಯಂ ಭವತಿ ಯದ್ ಯಥೈವ ಅಸತ್ಯಪಿ ಘಟಾದೌ ನಿಮಿತ್ತೇ ಚಿತ್ತಂ ಸ್ವಭಾವತ

---

ಹತ್ತಿರವಾದದ್ದು ಎಂದು ಹೇಳಿರುತ್ತದೆ. ಇಷ್ಟೇ ಹೊರತು ವ್ಯಾವಹಾರಿಕವಾದ ಅನುಭವವನ್ನು ತಿರಸ್ಕರಿಸುವುದರಿಂದ ಹೊರಗಿನ ವಸ್ತುವನ್ನು ನಿರಾಕರಿಸುವುದು ಸರಿಯೇ ಎಂದುಕೊಂಡು (ಅದು ಅದ್ವೈತಕ್ಕೆ ಹತ್ತಿರವಾದದ್ದು ಎಂದು) ಹೇಳಿಲ್ಲ. ಇನ್ನೂ ವಿಸ್ತಾರವಾಗಿ ಸೂತ್ರಭಾಷ್ಯದಲ್ಲಿ ಈ ವಿಜ್ಞಾನವಾದವನ್ನು ನಿರಾಕರಿಸಿರುತ್ತದೆ.

**೬೧) ಈ ಬೌದ್ಧ ವೇದಾನ್ತದರ್ಶನಗಳಿಗೆ ಬಾಹ್ಯಾರ್ಥವನ್ನು ನಿರಾಕರಿಸುವುದರಲ್ಲಿ ವ್ಯತ್ಯಾಸವಿದೆ.** ವಿಜ್ಞಾನವಾದಿಗಳಾದ ಬೌದ್ಧರು ಏನೆನ್ನುತ್ತಾರೆಂದರೆ – ("ದ್ವೈತವೆಂಬುದು") ಬೇರೊಂದು ಕಡೆಯಿಂದ ಬಂದಿರುವುದಿಲ್ಲ, ನಿಲ್ಲುವುದಿಲ್ಲ, ಹೋಗುವುದೂ ಇಲ್ಲ. (ಎಲ್ಲವೂ) ಮಾಯೆಯಾದ್ದರಿಂದ – ಯಾವುದನ್ನು ಮೂಢರು ಸತ್ಯದಿಂದಾದದ್ದೆನ್ನುವರೋ ಅದರಲ್ಲಿ ಏನು ವಿಶೇಷವಿದ್ದೀತು! (ಬೋ.ಚ. ೯–೧೪೩) ಎಂದು ಹೇಳಿರುತ್ತಾರೆ. ಇದಕ್ಕೇನಾದರೂ ಹೀಗೆ ಅಭಿಪ್ರಾಯವೆನ್ನುವುದಾದರೆ, – "ಚಿತ್ತವೆಂಬುದೇ ಸತ್ಯವಾದದ್ದು, ಅದನ್ನು ಬಿಟ್ಟರೆ ಜ್ಞಾನವೈಚಿತ್ರ್ಯಕ್ಕೆ ನಿಮಿತ್ತವೆಂಬುದೇ ಇರುವುದಿಲ್ಲ" ಎಂಬ (ಅಭಿಪ್ರಾಯವಾದರೆ)–ಆಗ ಇದೇ ನ್ಯಾಯದಿಂದ ಮುಂದೆ ಹೇಳುವುದನ್ನೂ ಒಪ್ಪಿಕೊಳ್ಳಬೇಕು. ಹೇಗೆ ಗಡಿಗೆ ಮುಂತಾದ ನಿಮಿತ್ತವಿಲ್ಲದೇ ಹೋದರೂ ಚಿತ್ತವು ಸ್ವಭಾವದಿಂದಲೇ ಅದರಂತೆ

ಏವ ತದ್ವದವಭಾಸತೇ, ಏವಮೇವ ಚಿತ್ತದೃಷ್ಟ್ಯಾತ್ಮವ್ಯತಿರೇಕೇಣ ಚಿತ್ತಮಪಿ ನಾಸ್ತ್ಯೇವ, ಅವಿದ್ಯಾಸ್ವಭಾವತ ಏವ ತು ನಿರ್ಮಲೋಽಪ್ಯಾತ್ಮಾ ಚಿತ್ತವದವಭಾಸತ ಇತ್ಯಾಹುರಾಚಾರ್ಯಾಃ -

(೧) ತಸ್ಮಾನ್ನ ಜಾಯತೇ ಚಿತ್ತಂ ಚಿತ್ತದೃಶ್ಯಂ ನ ಜಾಯತೇ |
ತಸ್ಯ ಪಶ್ಯಂತಿ ಯೇ ಜಾತಿಂ ಖೇ ವೈ ಪಶ್ಯಂತಿ ತೇ ಪದಮ್ || ಗೌ.ಕಾ. ೪-೨೮.

ಇತಿ ||

[ ಅತ್ರ ಭಾಷ್ಯಮ್ - ಯಸ್ಮಾದಸತ್ಯೇವ ಘಟಾದೌ ಘಟಾದ್ಯಾಭಾಸತಾ ಚಿತ್ತಸ್ಯ ವಿಜ್ಞಾನವಾದಿನಾ ಅಭ್ಯುಪಗತಾ ತದನುಮೋದಿತಮಸ್ಮಾಭಿರಪಿ, ಭೂತದರ್ಶನಾತ್ | ತಸ್ಮಾತ್, ತಸ್ಯಾಪಿ ಚಿತ್ತಸ್ಯ ಜಾಯಮಾನಾವಭಾಸತಾ ಅಸತ್ಯೇವ ಜನ್ಮನಿ ಯುಕ್ತಾ ಭವಿತುಮ್ || ]

ಅಥ ಸ್ವಪ್ನಮಾಯಾದಾವಿವ ಅಸತ್ಯಾ ಏವ ವಿಷಯಾ ತದ್ದ್ರಷ್ಟೃಚಿತ್ತಾತ್ ಪೃಥಗ್ವಿದ್ಯಮಾನಾ ಇವಾವಭಾಸಂತ ಇತಿ, ತತ್ರಾಪ್ಯಾಹುರಾಚಾರ್ಯಾಃ -

---

ತೋರುತ್ತದೋ ಅದರಂತೆ ಚಿತ್ತವನ್ನು ನೋಡುವ ಆತ್ಮನಿಗಿಂತ ಬೇರೆಯಾಗಿ ಚಿತ್ತವೆಂಬುದೂ ಇರುವುದೇ ಇಲ್ಲವೆಂತಲೂ ಕೇವಲ ಅವಿದ್ಯಾ-ಸ್ವಭಾವದಿಂದಲೇ ಆತ್ಮನು ಶುದ್ಧನಾದರೂ ಚಿತ್ತದಂತೆ ತೋರುತ್ತಿರುವನು ಎಂದು (ಶ್ರೀಗೌಡಪಾದಾಚಾರ್ಯರು) ಹೇಳುತ್ತಿರುವರು.

(೧) "ಆದ್ದರಿಂದ ಚಿತ್ತವೂ ಚಿತ್ತದೃಶ್ಯವೂ ಯಾವುದೂ ಹುಟ್ಟುವುದಿಲ್ಲ. ಅದರ ಹುಟ್ಟನ್ನು ಯಾರು ನೋಡುತ್ತಾರೋ ಅವರು ಆಕಾಶದಲ್ಲೂ (ಹಕ್ಕಿಯ) ಹೆಜ್ಜೆಯನ್ನು ನೋಡಿಯಾರು!" (ಗೌ.ಕಾ. ೪-೨೮) ಎಂದಿದ್ದಾರೆ - ಇಲ್ಲಿ ಭಾಷ್ಯವು ಹೀಗಿದೆ - "ಹೇಗೆ ಗಡಿಗೆಯೇ ಮುಂತಾದವುಗಳು ಇಲ್ಲದೇ ಹೋದರೂ ಚಿತ್ತಕ್ಕೆ ಘಟವೇ ಮುಂತಾದ ರೂಪದ ತೋರಿಕೆಯು ಇರಬಹುದು ಎನ್ನುವಿರೋ, ಅದನ್ನು ನಾವೂ ಕೂಡ ಒಪ್ಪಿರುತ್ತೇವೆ. ಆದ್ದರಿಂದ ಆ ಚಿತ್ತಕ್ಕೂ ಸಹ ಹುಟ್ಟಿಲ್ಲದೇ ಹೋದರೂ ಹುಟ್ಟಿರುವಂತೆ ತೋರುವುದೆಂಬುದು ಇರಬಹುದೆಂಬುದು ನ್ಯಾಯವಾಗಿದೆ".

ಇನ್ನು ಸ್ವಪ್ನ ಮಾಯೆ ಮುಂತಾದವುಗಳಲ್ಲಿ ಹೇಗೆ ವಿಷಯವು ಇರುವುದೇ ಇಲ್ಲವೋ, ಅವನ್ನು ನೋಡುತ್ತಿರುವಾತನ ಚಿತ್ತಕ್ಕಿಂತ ಬೇರೆಯಾಗಿರುವಂತೆ

(೨) ಸ್ವಪ್ನದೃಕ್ ಪ್ರಚರನ್ ಸ್ವಪ್ನೇ ದಿಕ್ಷು ವೈ ದಶಸು ಸ್ಥಿತಾನ್ |
ಅಂಡಜಾನ್ ಸ್ವೇದಜಾನ್ ವಾಪಿ ಜೀವಾನ್ ಪಶ್ಯತಿ ಯಾನ್ ಸದಾ ||

ಸ್ವಪ್ನದೃಕ್ಚಿತ್ತದೃಶ್ಯಾಸ್ತೇ ನ ವಿದ್ಯಂತೇ ತತಃ ಪೃಥಕ್ |
ತಥಾ ತದ್ದೃಶ್ಯಮೇವೇದಂ ಸ್ವಪ್ನದೃಕ್ಚಿತ್ತಮಿಷ್ಯತೇ||

ಚರನ್ ಜಾಗರಿತೇ ಜಾಗ್ರದ್ ದಿಕ್ಷು ವೈ ದಶಸು ಸ್ಥಿತಾನ್ |
ಅಂಡಜಾನ್ ಸ್ವೇದಜಾನ್ ವಾಪಿ ಜೀವಾನ್ ಪಶ್ಯತಿ ಯಾನ್ ಸದಾ ||

ಜಾಗ್ರಚ್ಚಿತ್ತೇಕ್ಷಣೀಯಾಸ್ತೇ ನ ವಿದ್ಯಂತೇ ತತಃ ಪೃಥಕ್ |
ತಥಾ ತದ್ದೃಶ್ಯಮೇವೇದಂ ಜಾಗ್ರತಶ್ಚಿತ್ತಮಿಷ್ಯತೇ ||
೪-೬೩ ತಮ ಶ್ಲೋಕಮಾರಭ್ಯ ೬೬ ತಮ ಶ್ಲೋಕಪರ್ಯಂತಮ್ ||

[ ಅತ್ರ ಸ್ವಪ್ನಜಾಗರಿತಯೋಃ ಪೃಥಕ್ ಪೃಥಕ್ ಚಿತ್ತಂ ತದ್ವ್ಯತಿರೇಕೇಣ ತದ್ದ್ರಷ್ಟಾ ಆತ್ಮಾ ಚ ಅನುಭವಾನುಸಾರೇಣ ಪ್ರತಿಜ್ಞಾತಃ | ಸ್ವಪ್ನಜಾಗರಿತದ್ರಷ್ಟುರೈಕ್ಯಂ "ಸ್ವಪ್ನಾಂತಂ

---

ತೋರುತ್ತಿವೆ ಎನ್ನುವಿರೋ, ಅದರ ವಿಷಯಕ್ಕೂ (ಶ್ರೀಗೌಡಪಾದಾಚಾರ್ಯರು) ಹೇಳಿಯೇ ಇರುತ್ತಾರೆ. "ಸ್ವಪ್ನದರ್ಶಿಯು ಕನಸಿನಲ್ಲಿ ಓಡಾಡುತ್ತಾ ಹತ್ತು ದಿಕ್ಕುಗಳಲ್ಲಿಯೂ ಇರುವ ಅಂಡಜ ಸ್ವೇದಜಗಳೆಂಬ ಯಾವ ಜೀವರನ್ನು ಯಾವಾಗಲೂ ನೋಡುತ್ತಿರುವನೋ ಅವು ಸ್ವಪ್ನವನ್ನು ನೋಡುತ್ತಿರುವಾತನ ಚಿತ್ತಕ್ಕೆ ದೃಶ್ಯವಾಗಿವೆ. ಅದಕ್ಕಿಂತ ಬೇರೆಯಾಗಿರುವುದಿಲ್ಲ. ಹಾಗೆಯೇ ಈ ಸ್ವಪ್ನದೃಕ್ ಚಿತ್ತವೂ ಅದಕ್ಕೆ ಕಾಣಿಸುವದಾಗಿರುತ್ತದೆ. ಎಚ್ಚರದಲ್ಲಿ ಓಡಾಡುತ್ತಾ ಹತ್ತುದಿಕ್ಕುಗಳಲ್ಲಿಯೂ ಇರುವ ಅಂಡಜ ಸ್ವೇದಜಗಳೆಂಬ ಯಾವ ಜೀವರನ್ನು ಯಾವಾತನು ಯಾವಾಗಲೂ ಕಾಣುತ್ತಿರುವನೋ ಅವು ಎಚ್ಚೆತ್ತಿರುವ ಚಿತ್ತಕ್ಕೆ ಕಾಣುತ್ತಿರುವವು. ಅದಕ್ಕಿಂತ ಬೇರೆಯಾಗಿಲ್ಲ. ಹಾಗೆಯೇ ಈ ಎಚ್ಚತ್ತವನ ಚಿತ್ತವೂ ಅವನಿಗೆ ಕಾಣಿಸುತ್ತಿರುವುದು" (ಗೌ.ಕಾ. ೪-೬೩, ೬೪, ೬೫, ೬೬) (ಈ ಕಾರಿಕೆಗಳಲ್ಲಿ ಎಚ್ಚರಕನಸುಗಳೆರಡಕ್ಕೂ ಬೇರೆ ಬೇರೆ ಮನಸ್ಸೆಂತಲೂ ಅದಕ್ಕಿಂತ ಬೇರೆಯಾಗಿ ಅವನ್ನು ನೋಡುವಾತನು ಆತ್ಮನು ಎಂಬುದನ್ನು ಅನುಭವಾನುಸಾರವಾಗಿ ಪ್ರತಿಜ್ಞೆಮಾಡಿ ತಿಳಿಸಿಕೊಟ್ಟಿದೆ. ಎಚ್ಚರ ಕನಸುಗಳನ್ನು ನೋಡುವಾತನು ಒಬ್ಬನೇ ಎಂಬುದನ್ನು "ಸ್ವಪ್ನವನ್ನೂ ಎಚ್ಚರವನ್ನೂ ಯಾವಾತನು ನೋಡುವವನೋ" ಎಂದು (ಕಠ-೨-೧-೪) ಶ್ರುತಿಗನು-ಗುಣವಾಗಿ ಸಾರ್ವತ್ರಿಕಾನುಭವವನ್ನೇ ಆಶ್ರಯಿಸಿ ಹೇಳಿರುತ್ತದೆ).

ಜಾಗರಿತಾಂತಂ ಚೋಭೌ ಯೇನಾನುಪಶ್ಯತಿ" (ಕಾ. ೨-೧-೪) ಇತಿ ಶ್ರುತ್ಯನುರೋಧೇನ ಸಾರ್ವತ್ರಿಕಾನುಭವಮೇವಾಶ್ರಿತ್ಯೋಪಪಾದಿತಮ್ || ]

ಯಥೋದಾಹೃತಕಾರಿಕಾಃ "ತ್ರಯಃ ಸ್ವಪ್ನಾಃ"(ಐ.) ಇತ್ಯಾದಿಶ್ರುತಿಭ್ಯಃ ಸ್ವಪ್ನಜಾಗರಿತಯೋಃ ಸರ್ವಸಾಮ್ಯೇನ ವೈತಥ್ಯಮೂರೀಕೃತ್ಯ ವಿಜ್ಞಾನವಾದಾದ್ ವೈಲಕ್ಷಣ್ಯಂ ವೇದಾಂತದರ್ಶನಸ್ಯ ಖ್ಯಾಪಯಂತಿ | ಸೂತ್ರಭಾಷ್ಯೇ ತು ಕೇವಲಯುಕ್ತ್ಯಾ ಸ್ವಪ್ನಮಾಯಾದಿತೌಲ್ಯಂ ಸಿಷಾಧಯಿಷತೋ ವಿಜ್ಞಾನವಾದಿನೋ ದೃಷ್ಟಾಂತ ಏವಾಸಿದ್ಧ ಇತಿ ಪ್ರತ್ಯವಸ್ಥಿತಮ್ -

(೩) ವೈಧರ್ಮ್ಯಂ ಹಿ ಭವತಿ ಸ್ವಪ್ನಜಾಗರಿತಯೋಃ | ಕಿಂ ಪುನರ್ವೈಧರ್ಮ್ಯಮ್? ಬಾಧಾಬಾಧಾವಿತಿ ಬ್ರೂಮಃ | ಬಾಧ್ಯತೇ ಹಿ ಸ್ವಪ್ನೋಪಲಬ್ಧಂ ವಸ್ತು ಪ್ರತಿಬುದ್ಧಸ್ಯ "ಮಿಥ್ಯಾ ಮಯೋಪಲಬ್ಧೋ ಮಹಾಜನಸಮಾಗಮ ಇತಿ | ನ ಹ್ಯಸ್ತಿ ಮಮ ಮಹಾಜನಸಮಾಗಮಃ ನಿದ್ರಾಗ್ಲಾನಂ ತು ಮೇ ಮನೋ ಬಭೂವ ತೇನೈಷಾ ಭ್ರಾಂತಿರುದ್ಬಭೂವ" - ಇತಿ | ಏವಂ ಮಾಯಾದಿಷ್ವಪಿ ಭವತಿ ಯಥಾಯಥಂ

---

ಮೇಲೆ ಉದಾಹರಿಸಿದ ಕಾರಿಕೆಗಳು "ತ್ರಯಃ ಸ್ವಪ್ನಾಃ" "ಮೂರೂ ಕನಸುಗಳು" (ಐತ) ಎಂಬಿವೇ ಮೊದಲಾದ ಶ್ರುತಿಗಳಿಂದ ಎಚ್ಚರಕನಸುಗಳಿಗೆ ಎಲ್ಲಾ ರೀತಿಯ ಹೋಲಿಕೆಯಿಂದಲೂ ಸುಳ್ಳಾಗಿದೆ ಎಂಬುದನ್ನು ಒಪ್ಪಿಕೊಂಡು ಈ ವೇದಾಂತದರ್ಶನವು ವಿಜ್ಞಾನವಾದಕ್ಕಿಂತ ವಿಲಕ್ಷಣವಾಗಿದೆ ಎಂದು ತಿಳಿಸುತ್ತಿವೆ. ಸೂತ್ರಭಾಷ್ಯದಲ್ಲಾದರೋ ಕೇವಲ ಯುಕ್ತಿಯಿಂದ ಎಚ್ಚರವು ಸ್ವಪ್ನ ಮಾಯಾದಿಗಳಿಗೆ ಸಮಾನವಾಗಿದೆ ಎಂಬುದನ್ನು ಸಾಧಿಸುವುದಕ್ಕೆ ಹೊರಟ ಬೌದ್ಧರ ದೃಷ್ಟಾಂತವೇ ಸರಿಯಿಲ್ಲ ಎಂದು ಸ್ಥಿರಗೊಳಿಸಿದೆ.

೩) "ಎಚ್ಚರಕನಸುಗಳಿಗೆ ವ್ಯತ್ಯಾಸವಿರುತ್ತದೆಯಲ್ಲವೇ? ಏನು ವ್ಯತ್ಯಾಸ? ಎಂದರೆ, ಬಾಧೆಯಾಗುವುದು, ಬಾಧೆಯಾಗದಿರುವುದು ಎಂದು ಹೇಳುವೆವು. ಎಚ್ಚತ್ತವನಿಗೆ ಕನಸಿನಲ್ಲಿ ಕಂಡ ವಸ್ತುವು – "ತುಂಬಾ ಜನರೊಡನೆ ನಾನು ಸೇರಿದವನಂತೆ (ಕನಸಿನಲ್ಲಿ) ಕಂಡೆನು" ಎಂಬುದು – ಬಾಧಿತವಾಗುತ್ತದೆ-ಯಲ್ಲವೇ? "ನನಗೆ ಅನೇಕ ಜನರಸಮಾಗಮವು ಆಗಲೇ ಇಲ್ಲ, ನನ್ನ ಮನಸ್ಸು ನಿದ್ರೆಯಿಂದ ಬಳಲಿತ್ತು, ಹಾಗಾಗಿ ಈ ಭ್ರಾಂತಿಯು ಬಂದಿತು" (ಎಂದು ತಿಳಿಯುತ್ತಾನೆ). ಹೀಗೆಯೇ ಆಯಾ ಮಾಯಾದಿಗಳಲ್ಲೂ ಬಾಧೆ ಎಂಬುದಾಗುತ್ತದೆ. ಹೀಗೆ ಎಚ್ಚರದಲ್ಲಿ ಕಂಡ ವಸ್ತುವು – "ಕಂಬವೇ ಮುಂತಾದವುಗಳು ಯಾವ ಅವಸ್ಥೆಯಲ್ಲೂ ಬಾಧೆಯಾಗುವುದಿಲ್ಲ" (ಸೂ.ಭಾ.

ಬಾಧಃ | ನೈವಂ ಜಾಗರಿತೋಪಲಬ್ಧಂ ವಸ್ತು ಸ್ತಂಭಾದಿಕಂ ಕಸ್ಯಾಂಚಿದಪಿ ಅವಸ್ಥಾಯಾಂ ಬಾಧ್ಯತೇ || ಸೂ.ಭಾ. ೨-೨-೨೯.

ನ ಚೈವಂ ವೇದಾಂತಿನೋಽಪಿ ದೃಶ್ಯಮಿಥ್ಯಾತ್ವಂ ನ ಸಿಧ್ಯೇತ್ ಇತಿ ವಾಚ್ಯಮ್| ತಸ್ಯ ವ್ಯಾವಹಾರಿಕದೃಷ್ಟ್ಯಾ ಇಷ್ಟಾಪತ್ತೇಃ | ಇಷ್ಟಮೇವ ಹ್ಯಾಪಾದ್ಯತೇ ಯದ್ ವಿಷಯಾಣಾಂ ಜಾಗ್ರತಿ ಸತ್ಯಮಿಥ್ಯಾವಿಭಕ್ತತ್ವಮಸ್ತೀತಿ | "ಸತ್ಯಂ ಚಾನೃತಂ ಸತ್ಯಮಭವತ್" (ತೈ.) ಇತಿ ಶ್ರುತೇಃ | ಪರಮಾರ್ಥದೃಷ್ಟ್ಯಾ ತು ನ ಕೇವಲಂ ಚಿತ್ತದೃಶ್ಯಯೋಃ, ಕಿಂ ತರ್ಹಿ ಸರ್ವಸ್ಯಾಪಿ ಬಾಹ್ಯಸ್ಯಾಧ್ಯಾತ್ಮಿಕಸ್ಯ ಚ ಸರ್ವಥಾಪಿ ಮಿಥ್ಯಾತ್ವಮೇವೇತಿ ವೈತಥ್ಯೇ ಉಪಪಾದಿತಮ್ ||

ತದೇವಂ ಬಾಹ್ಯಮತೇ ದೃಷ್ಟಾಂತಾಸಿದ್ಧೇಃ, ಮಾಯಾತಃ ಕೋ ವಿಶೇಷಃ ? ಇತಿ ಮೃಷೈವೋಚ್ಯತೇ, "ಅನ್ಯತೋ ನಾಪಿ ಚಾಯಾತಮ್" ಇತಿ ಚ | ಆಚಾರ್ಯೈಸ್ತು-ಸ್ವಪ್ನಜಾಗರಿತಯೋಃ ಸರ್ವಸಮತಾಮ್ ಉಪಪಾದ್ಯ, ಸುಷುಪ್ತೇ ಉಭಯೋರಪ್ಯ-ಭಾವಂ ಸರ್ವಾನುಭವಸಿದ್ಧಂ ಶ್ರುತ್ಯಾನುಗುಣ್ಯೇನ ಪ್ರದರ್ಶ್ಯೈವೋಚ್ಯತೇ-

---

೨-೨-೨೯). ಹೀಗಾದರೆ ವೇದಾನ್ತಿಗಳಿಗೂ ದೃಶ್ಯವು ಮಿಥ್ಯೆಯಾಗಿದೆ ಎಂಬುದು ಸಿದ್ಧಿಸುವುದೇ ಇಲ್ಲವಲ್ಲ ಎಂದು ಹೇಳಬಾರದು. ಏಕೆಂದರೆ ಅದು ವ್ಯವಹಾರ ದೃಷ್ಟಿಯಿಂದ ಇಷ್ಟವೇ ಆಗಿದೆ. ಎಚ್ಚರದಲ್ಲಿ (ದೃಶ್ಯಗಳು) ವಿಷಯಗಳು ಸತ್ಯಮಿಥ್ಯಾರೂಪದಿಂದ ವಿಂಗಡವಾಗಿದೆ ಎಂಬುದು ಇಷ್ಟವೇ ಆಗಿದೆ.

"ಸತ್ಯವಾಗಿಯೂ ಸುಳ್ಳಾಗಿಯೂ ಸತ್ಯವಾದದ್ದೇ ಆಯಿತು". (ತೈ.ಉ) ಎಂದು ಶ್ರುತಿ ಇದೆ. ಪರಮಾರ್ಥದೃಷ್ಟಿಯಿಂದಲಾದರೋ ಚಿತ್ತದೃಶ್ಯಕ್ಕೆ ಮಾತ್ರವಲ್ಲ ಮಿಥ್ಯಾತ್ವವು, ಮತ್ತೇನೆಂದರೆ ಬಾಹ್ಯಾಧ್ಯಾತ್ಮಿಕವಾದದ್ದೆಲ್ಲವೂ ಎಲ್ಲಾ ರೀತಿಯಿಂದಲೂ ಸುಳ್ಳೇ ಆಗಿದೆ ಎಂಬುದನ್ನು ವೈತಥ್ಯಪ್ರಕರಣದಲ್ಲಿ ಹೇಳಿದೆ. ಹೀಗೆ (ವೇದ) ಬಾಹ್ಯರಾದ (ಬೌದ್ಧರ) ಮತದಲ್ಲಿ ದೃಷ್ಟಾಂತವೇ ಸಿದ್ಧಿಸುವುದಿಲ್ಲವಾದ್ದರಿಂದ "ಮಾಯೆಗಿಂತ ಏನು ವಿಶೇಷವು" ? ಎಂಬುದಾಗಿ ಸುಳ್ಳಾಗಿಯೇ ಹೇಳಲ್ಪಟ್ಟಿದೆ. ಹಾಗೆಯೇ "ಮತ್ತೊಂದರಿಂದ ಬಂದೂ ಇಲ್ಲ" ಎಂಬುದೂ ಹೀಗೆಯೇ ಸುಳ್ಳೇ ಆಗಿದೆ. ಗೌಡಪಾದಾಚಾರ್ಯರಾದರೋ ಎಲ್ಲಾ ರೀತಿಯಿಂದಲೂ ಜಾಗ್ರತ್ಸ್ವಪ್ನಗಳು ಸಮಾನವಾಗಿವೆ ಎಂದು ತೋರಿಸಿಕೊಟ್ಟು ಸುಷುಪ್ತಿಯಲ್ಲಿ ಇವೆರಡೂ ಇರುವುದಿಲ್ಲ ಎಂಬುದನ್ನು ಸರ್ವಾನುಭವಸಿದ್ಧವಾದ ಈ ವಿಚಾರವು ಶ್ರುತಿಗನುಗುಣವಾಗಿದೆ ಎಂದು ತೋರಿಸಿಕೊಟ್ಟಿರುತ್ತಾರೆ.

ಏವಂ ನ ಜಾಯತೇ ಚಿತ್ತಮೇವಂ ಧರ್ಮಾ ಅಜಾಃ ಸ್ಮೃತಾಃ |
ಏವಮೇವ ವಿಜಾನಂತೋ ನ ಪತಂತಿ ವಿಪರ್ಯಯೇ || ಗೌ. ಕಾ.೪-೪೬.

ಇತಿ ಚಿತ್ತಸ್ಯಾಪ್ಯಜಾತಿಃ, ಜೀವಾನಾಮಜಾದ್ವಯಸ್ವರೂಪೇಣೈಕತಾ ಚ | ತಾದೃಶಾ-ಜಾದ್ವಯಂ ಕೂಟಸ್ಥಚೈತನ್ಯಮೇವ ವಿಜ್ಞಾನಶಬ್ದೇನ ವ್ಯಪದಿಶ್ಯ ಲಿಖಿತಂ ತೈಃ -

ವಿಜ್ಞಾನೇ ಸ್ಪಂದಮಾನೇ ವೈ ನಾಭಾಸಾ ಅನ್ಯತೋಭುವಃ |
ನ ತತೋಽನ್ಯತ್ರ ನಿಸ್ಪಂದಾನ್ನ ವಿಜ್ಞಾನಂ ವಿಶಂತಿ ತೇ || ಗೌ. ಕಾ.೪-೫೧.

ನ ನಿರ್ಗತಾಸ್ತೇ ವಿಜ್ಞಾನಾತ್ ದ್ರವ್ಯತ್ವಾಭಾವಯೋಗತಃ |
ಕಾರ್ಯಕಾರಣತಾಭಾವಾದ್ ಯತೋಽಚಿಂತ್ಯಾಃ ಸದೈವ ತೇ || ಗೌ.ಕಾ.೪-೫೨.

ಅವಿದ್ಯಯಾ ಸ್ಪಂದಮಾನೇ ವಿಜ್ಞಾನೇ ಜಾಗ್ರತ್ಸ್ವಪ್ನಯೋರಾಭಾಸಾ ದೃಶ್ಯಂತೇ, ಸ್ವತೋ ವಿಜ್ಞಾನಂ ಕೂಟಸ್ಥಚೈತನ್ಯಮೇವಾವತಿಷ್ಠತೇ ಇತ್ಯರ್ಥಃ ||

ಅತೋ ವಿಜ್ಞಾನಶಬ್ದೋಪಾದಾನಮಾತ್ರಾತ್ ನ ಶಂಕಿತವ್ಯಂ ಸಾಮ್ಯ-ಮುಭಯೋರ್ದರ್ಶನೋರ್ಬಾಹ್ಯಾರ್ಥನಿರಾಕರಣವಿಷಯೇ | ಯತ ಏಕತ್ರ ಚಿತ್ತದೃಶ್ಯ-

---

"ಈ ರೀತಿಯಾಗಿ ಚಿತ್ತವು ಹುಟ್ಟುವುದಿಲ್ಲ, ಹೀಗೆಯೇ ಜೀವರುಗಳೂ ಹುಟ್ಟದೇ ಇರುವವರೆಂದು ತೀರ್ಮಾನವಾಗಿದೆ. ಈ ರೀತಿಯಾಗಿ ತಿಳಿದವರು ಮಿಥ್ಯಾಜ್ಞಾನದಲ್ಲಿ (ಮತ್ತೆ) ಬೀಳುವುದಿಲ್ಲ" (ಗೌ.ಕಾ. ೪–೪೬) ಎಂದು ಚಿತ್ತಕ್ಕೂ ಅಜಾತಿಯನ್ನೂ, ಜೀವರುಗಳಿಗೆ ಅಜಾದ್ವಯಸ್ವರೂಪದಿಂದ ಏಕರೂಪರಾಗಿದ್ದಾರೆಂಬುದನ್ನು ಹೇಳಿರುತ್ತಾರೆ. ಆ ರೀತಿಯದಾದ ಅಜಾದ್ವಯವು ಕೂಟಸ್ಥಚೈತನ್ಯವಾಗಿಯೇ ಇರತಕ್ಕದ್ದು ಎಂದು ಹೇಳಿ ಅದನ್ನು ವಿಜ್ಞಾನ ಎಂಬ ಶಬ್ದದಿಂದ ಕರೆದು ಈ ರೀತಿಯಾಗಿ ಬರೆಯುತ್ತಾರೆ.

"ವಿಜ್ಞಾನವು ಅಲುಗಾಡುತ್ತಿದ್ದರೆ (ಅದರಲ್ಲಿ ತೋರುವ) ಆಭಾಸಗಳು ಮತ್ತೊಂದು ಕಡೆಯಿಂದ ಉಂಟಾಗುವುದಿಲ್ಲ (ಬಂದಿರುವುದಿಲ್ಲ), ಆ ನಿಷ್ಪಂದಕ್ಕಿಂತ ಬೇರೆ ಕಡೆಗೂ ಹೋಗುವುದಿಲ್ಲ, ಆ ವಿಜ್ಞಾನವನ್ನೂ ಸಹ ಅವು ಪ್ರವೇಶಿಸುವುದಿಲ್ಲ". ಅವು ದ್ರವ್ಯವಲ್ಲವಾದ್ದರಿಂದ ವಿಜ್ಞಾನಕ್ಕಿಂತ ಮತ್ತೊಂದು ಕಡೆಗೆ ಹೋಗಿರುವುದಿಲ್ಲ. (ಅವುಗಳಿಗೂ ವಿಜ್ಞಾನಕ್ಕೂ) ಕಾರ್ಯಕಾರಣತ್ವಭಾವವು ಇರುವುದಿಲ್ಲವಾದ್ದರಿಂದ ಯಾವಾಗಲೂ ಅವು

ಮಾತ್ರಂ ಯುಕ್ತ್ಯಾಭಾಸೇನ ನಿರಾಕ್ರಿಯತೇ, ಇತರತ್ರ ತು ಸರ್ವಮೇವ ಚಿತ್ತಂ ಚೈತ್ಯಂ ಚ ಆಭಾಸಮಾನರೂಪೇಣ ಅಚಿಂತ್ಯಮ್ ಇತ್ಯುಪಪಾದ್ಯ ಸ್ವರೂಪೇಣ ಸರ್ವಂ ಅಜಾದ್ವಯಚಿನ್ಮಾತ್ರಮೇವೇತ್ಯನುಭವಾನುಸಾರಿಯುಕ್ತ್ಯಾ ಪ್ರದರ್ಶ್ಯತ ಇತಿ ಸ್ಥಿತಮ್||

**೬೨. ಚಿತ್ತಶಬ್ದಪ್ರಯೋಗಮಾತ್ರೇಣ ನ ಪರಮತಸಾಮ್ಯಮ್ -** ಯದಪ್ಯಾಶಂಕ್ಯತೇ "ಅಭೂತಾಭಿನಿವೇಶೋಽಸ್ತಿ" (ಗೌ.ಕಾ. ೪-೭೫), "ಚಿತ್ತಸ್ಪಂದಿತಮೇವೇದಮ್" (ಕಾ.೪-೭೨) ಇತಿ ಚ ವಿಜ್ಞಾನವಾದಿಮತಮೇವಾನುಮತಮಾಚಾರ್ಯೈರಪೀತಿ | ತದಪ್ಯೇತೇನ ಪ್ರತ್ಯುಕ್ತಮ್ | ಏವಂ ಹಿ ವಿಜ್ಞಾನವಾದಿಕಾರಿಕಾಂ ವ್ಯಾಖ್ಯಾತಿ ಸ್ಥಿರಮತಿಃ-

(೧) ನ ಖಲು ಅಭೂತಪರಿಕಲ್ಪೋಽಪಿ ನ ಭವತಿ | ಯಥಾ ರಜ್ಜುಃ ಶೂನ್ಯಾ ಸರ್ಪತ್ವ(ಸ್ವ)ಭಾವೇನ - ತತ್ಸ್ವಭಾವತ್ವಾಭಾವಾತ್ ಸರ್ವಕಾಲಂ ಶೂನ್ಯಾ - ನ

---

ಅಚಿಂತ್ಯವೇ ಆಗಿವೆ" (ಗೌ.ಕಾ. ೪–೫೧, ೫೨), ಅವಿದ್ಯೆಯಿಂದ ವಿಜ್ಞಾನವು ಸ್ಪಂದಿಸುತ್ತಿರಲಾಗಿ ಜಾಗ್ರತ್ಸ್ವಪ್ನಗಳ ಆಭಾಸಗಳು ತೋರುತ್ತಿರುವವು. (ಆದರೆ) ಸ್ವತಃ ವಿಜ್ಞಾನವು ಕೂಟಸ್ಥಚೈತನ್ಯವಾಗಿಯೇ ಇದ್ದುಕೊಂಡಿವೆ ಎಂದರ್ಥವು.

ಆದ್ದರಿಂದ "ವಿಜ್ಞಾನ" ಎಂಬ ಶಬ್ದವನ್ನು ಸ್ವೀಕಾರಮಾಡಿದಮಾತ್ರದಿಂದ ಈ ಎರಡೂ ದರ್ಶನಗಳಿಗೂ ಬಾಹ್ಯಾರ್ಥವನ್ನು ನಿರಾಕರಣೆ ಮಾಡುವ ವಿಷಯದಲ್ಲಿ ಸಾಮ್ಯತೆ ಇದೆ ಎಂದು ಸಂದೇಹಪಡಬಾರದು. ಬೌದ್ಧ ಮತದಲ್ಲಿ ಯುಕ್ತಿಯ ಆಭಾಸದಿಂದ ಚಿತ್ತದ ದೃಶ್ಯಮಾತ್ರವನ್ನು ಅಲ್ಲಗಳೆಯಲಾಗಿದೆ. ವೇದಾನ್ತದಲ್ಲಾದರೋ ಚಿತ್ತ, ಚೈತ್ಯ ಎಂಬುದೆಲ್ಲವನ್ನೂ, ತೋರುವ ರೂಪದಿಂದ ಅಚಿಂತ್ಯವಾಗಿದೆ ಎಂದು ತೋರಿಸಿಕೊಟ್ಟು ಹುಟ್ಟಿಲ್ಲದ ಅದ್ವಯುವಾದ ಚಿನ್ಮಾತ್ರವಷ್ಟೇ ಎಂಬುದಾಗಿ ಅನುಭವಾನುಸಾರಿಯಾದ ಯುಕ್ತಿಯಿಂದ ತೋರಿಸಿಕೊಡಲಾಗಿದೆ.

**೬೨) "ಚಿತ್ತ" ಎಂಬ ಶಬ್ದ ಪ್ರಯೋಗಮಾತ್ರದಿಂದ ಬೌದ್ಧಮತ ಸಾಮ್ಯತೆಯಾಗುವುದಿಲ್ಲ.** (ಇಲ್ಲಿ) ಇನ್ನೊಂದು ಸಂದೇಹವನ್ನು ಏನು ಮಾಡಲಾಗಿದೆ – "ಇಲ್ಲದೇ ಇರುವುದರಲ್ಲಿ ಹಠವನ್ನು ಹೊಂದಿರುವುದರಿಂದ" (ಗೌ.ಕಾ. ೪–೭೫) "ಇದೆಲ್ಲವೂ ಚಿತ್ತದ ಅಲುಗಾಟವೇ ಆಗಿದೆ" (ಗೌ.ಕಾ. ೪–೭೨) ಎಂಬುದಾಗಿ ವಿಜ್ಞಾನವಾದಿಗಳ ಮತವನ್ನೇ ಗೌಡಪಾದಾಚಾರ್ಯರೂ

ತು ರಜ್ಜುಸ್ವಭಾವೇನ, ತಥಾ ಇಹಾಪಿ | ........ಯತ್ ಶೂನ್ಯಂ ತಸ್ಯ ಸದ್ಭಾವಾತ್,
ಯೇನ ಶೂನ್ಯಂ ತಸ್ಯ ತತ್ರಾಭಾವಾತ್ || ಮ.ವಿ.ಸೂ.ಭಾ.ಟೀ.,ಪಾ. ೧೨, ೧೩[೧].

ಇತಿ | ತತ್ರ ಚಿತ್ತಮೇವ "ಅಭೂತಪರಿಕಲ್ಪ" ಶಬ್ದೇನ ವ್ಯಪದಿಶ್ಯತೇ | ತಸ್ಮಿನ್ ಗ್ರಾಹ್ಯಗ್ರಾಹಕವಿಭಾಗಲಕ್ಷಣಂ ದ್ವಯಮ್ ಅಭೂತಮೇವ ಪರಿಕಲ್ಪಿತಮಿತಿ ಕೃತ್ವಾ | ಗೌಡಪಾದಾಚಾರ್ಯಾಸ್ತು ಜಾಗ್ರತ್ಸ್ವಪ್ನಯೋಶ್ಚಿತ್ತಂ ಚಿತ್ತದೃಶ್ಯಂ ಜೀವಾದಿ ಚೇತ್ಯುಭಯಮ್ ಇತರೇತರಸಾಪೇಕ್ಷತ್ವಾತ್ ಸ್ವಾತಂತ್ರ್ಯೇಣ ನ ಕಿಮಪ್ಯಸ್ತಿ (ಗೌ.ಕಾ.೪-೬೭), ಜೀವಾಃ ಸರ್ವೇ ಸ್ವಪ್ನಮಯಾ ಇವ ಮಾಯಾಮಯಾ ಇವ ನಿರ್ಮಿತಕಾ ಇವ

೧. ಇಯಂ ಕಾರಿಕಾ ಮೈತ್ರೇಯನಾಥಸ್ಯ, ಮಧ್ಯಾಂತವಿಭಂಗಸೂತ್ರಭಾಷ್ಯಟೀಕಾ ಚ ಸ್ಥಿರಮತೇಃ, ಪ್ರೋ.ವಿ. ಭಟ್ಟಾಚಾರ್ಯೇಃ, ತಥಾ ವಿ. ತುಚ್ಚೀ-ಇತ್ಯೇತಾಭ್ಯಾಂ ಸಂಪಾದಿತಾ, ಪ್ರೋ.ಟಿ.ಆರ್.ವಿ.ಮೂರ್ತಿಶರ್ಮಣಾ The central Philosophy of Buddhism ನಾಮಕ ಗ್ರಂಥೇ ಸಮುದಾಹೃತಾ ಚ ||

ಅನುಮೋದನೆ ಮಾಡಿರುವಂತೆ ಏನು ತೋರುತ್ತದೆ. ಅದನ್ನೂ ಇಷ್ಟು ಹೇಳಿದ್ದರಿಂದಲೇ ತಳ್ಳಿಹಾಕಿದಂತಾಯಿತು. ಹೀಗೆಂಯೇ ಅಲ್ಲವೇ ವಿಜ್ಞಾನವಾದಿಯ ಕಾರಿಕೆಯನ್ನು ಸ್ಥಿರಮತಿ ಎಂಬಾತನು ವ್ಯಾಖ್ಯಾನವನ್ನು ಮಾಡಿರುತ್ತಾನೆ-

(೧) ಇಲ್ಲದೇ ಇರುವುದನ್ನು ಕಲ್ಪಿಸುವುದೆಂಬುದೂ ಹೊಂದುವುದಿಲ್ಲ. ಹೇಗೆ ಹಗ್ಗವು ಸರ್ಪತ್ವರೂಪದಿಂದ ಶೂನ್ಯವಾದದ್ದೋ, ಏಕೆಂದರೆ ಆ ಸ್ವಭಾವವೆಂಬುದು ಇಲ್ಲದಿರುವುದರಿಂದ ಎಲ್ಲಾ ಕಾಲದಲ್ಲೂ ಶೂನ್ಯ-ವಾದದ್ದೋ, ಅದು ಹಗ್ಗದ ಸ್ವಭಾವವೂ ಅಲ್ಲದ್ದೋ, ಅದರಂತೆ ಇದು. ಯಾವುದು ಶೂನ್ಯವೋ ಅದೇ ಇರುವುದು, ಯಾವುದು ಶೂನ್ಯವೋ ಅದಕ್ಕೆ ಅಲ್ಲಿರುವುದೆಂಬುದು ಹೊಂದುವುದಿಲ್ಲ. (ಮಾ.ಕ.ವಿ.ಸೂ.ಭಾ.ಟೀ. ಪುಟ ೧೨, ೧೩)

ಮೇಲಿನ ವ್ಯಾಖ್ಯಾನದಲ್ಲಿ ಇಲ್ಲದ್ದನ್ನು ಕಲ್ಪಿಸುವುದು ಎಂಬ ಶಬ್ದದಿಂದ ಚಿತ್ತವನ್ನೇ ಹೇಳಿರುತ್ತದೆ. ಅದರಲ್ಲಿ ಗ್ರಾಹ್ಯಗ್ರಾಹಕವಿಭಾಗರೂಪವಾದದ್ದೆರಡೂ

(ಈ ಕಾರಿಕೆಯು ಮೈತ್ರೇಯನಾಥನದು, ಮಧ್ಯಾಂತವಿಭಂಗಸೂತ್ರಭಾಷ್ಯ ಟೀಕೆಯು ಸ್ಥಿರಮತಿಯದು. ಇದಕ್ಕೆ ಪ್ರೊಫೆಸರ್''. ಭಟ್ಟಾಚಾರ್ಯರು ಮತ್ತು''. ತುಚ್ಚೀ ಎಂಬುವರು ಸಂಪಾದಕರು. ಇದನ್ನು ಪ್ರೊಫೆಸರ್ T.R.V.Murthy ಎಂಬುವರು ತಮ್ಮ The Central Philosophy of Buddhism ಎಂಬ ಗ್ರಂಥದಲ್ಲಿ ಉದಾಹರಿಸಿರುತ್ತಾರೆ).

ಚ ಅವಿದ್ಯಮಾನಾ ಏವ ಚಿತ್ತವಿಕಲ್ಪನಮಾತ್ರರೂಪಾಃ (ಗೌ.ಕಾ.೪-೬೮.೬೯.೭೦) ಇತಿ ಸ್ಥಾಪಯಿತ್ವಾ -

ನ ಕಶ್ಚಿಜ್ಜಾಯತೇ ಜೀವಃ ಸಂಭವೋಽಸ್ಯ ನ ವಿದ್ಯತೇ |
ಏತತ್ತದುತ್ತಮಂ ಸತ್ಯಂ ಯತ್ರ ಕಿಂಚಿನ್ನ ಜಾಯತೇ ||　ಗೌ.ಕಾ.೪-೭೧.

[ ಭಾಷ್ಯವ್ - ವ್ಯವಹಾರಸತ್ಯವಿಷಯೇ ಜೀವಾನಾಂ ಜನ್ಮಮರಣಾದಿಃ ಸ್ವಪ್ನಾದಿಜೀವವದಿತ್ಯುಕ್ತಮ್ | ಉತ್ತಮಂ ತು ಪರಮಾರ್ಥಸತ್ಯಂ ನ ಕಶ್ಚಿಜ್ಜಾಯತೇ ಜೀವ ಇತಿ || ]

ಇತ್ಯದ್ವೈತಪ್ರಕರಣೋಕ್ತಮ್(ಗೌ.ಕಾ.೩-೪೮)ಅಜಾತಿಬ್ರಹ್ಮವಾದಮೇವೋಪಸಂಜಹ್ರುಃ||

---

ಇಲ್ಲದೇ ಇದ್ದದ್ದು ಇದೆ ಎಂದಿಟ್ಟುಕೊಂಡಿರುತ್ತದೆ. ಗೌಡಪಾದಾಚಾರ್ಯರಾದರೋ ಜಾಗ್ರತ್ಸ್ವಪ್ನಗಳ ಚಿತ್ತವು ಮತ್ತು ಚಿತ್ತದೃಶ್ಯವಾದ ಜೀವರೇ ಮುಂತಾದ ವಸ್ತುಗಳೆರಡೂ ಒಂದಿನ್ನೊಂದರ ಅಪೇಕ್ಷೆಯಿಂದ ಇರುವುದರಿಂದ ಯಾವುದೊಂದಕ್ಕೂ ಸ್ವತಂತ್ರವಾಗಿ ಇರುವಿಕೆ ಇಲ್ಲ, (ಗೌ.ಕಾ ೪-೬೭) ಎಂದಿರುತ್ತಾರೆ. ಹಾಗೆಯೇ ಸ್ವಪ್ನದಂತೆಯೂ, ಮಾಯಾರೂಪದಂತೆಯೂ, ತಯಾರುಮಾಡಿದ ಜೀವರಂತೆಯೂ ಎಲ್ಲವೂ ಇಲ್ಲದೇ ಇರುವಂಥವುಗಳೇ "ಚಿತ್ತದ ವಿಕಲ್ಪನಾ ಮಾತ್ರ ರೂಪವಾಗಿವೆ" (ಗೌ.ಕಾ ೬೮, ೬೯, ೭೦) ಎಂದು ಹೇಳಿರುತ್ತಾರೆ.

"ಯಾವ ಒಬ್ಬ ಜೀವನೂ ಹುಟ್ಟಲಾರನು, ಅವುಗಳ (ಹುಟ್ಟೆಂಬುದು) ಹೊಂದುವುದೇ ಇಲ್ಲ. ಇದು ಉತ್ತಮವಾದ ಸತ್ಯವು. ಎಲ್ಲಿ ಏನೂ ಹುಟ್ಟುವುದಿಲ್ಲವೆಂಬುದಿದೆ (ಅದೇ ಸತ್ಯ) (ಗೌ.ಕಾ. ೪-೭೧). (ಭಾಷ್ಯವು ವ್ಯವಹಾರದ ಸತ್ಯವಿಷಯದಲ್ಲಿ ಜೀವರುಗಳ ಜನ್ಮಮರಣವೇ ಮುಂತಾದವುಗಳು, ಸ್ವಪ್ನವೇ ಮುಂತಾದವುಗಳ ಜೀವರಂತೆಯೇ ಎಂದು ಹೇಳಿರುತ್ತದೆ. ಪರಮಾರ್ಥವಾದ ಉತ್ತಮ ಸತ್ಯವಾದರೋ ಯಾವ ಜೀವನೂ ಹುಟ್ಟುವುದೇ ಇಲ್ಲ) ಎಂಬುದಾಗಿ ಏನನ್ನು ಅದ್ವೈತ ಪ್ರಕರಣದಲ್ಲಿ (೩-೪೮) ಹೇಳಿತ್ತೋ, ಆ ಅಜಾತಿ ಬ್ರಹ್ಮವಾದವನ್ನೇ ಉಪಸಂಹರಿಸಿರುತ್ತಾರೆ. ಆಮೇಲೆ ಈ ಕಾರಿಕೆಯು ಬಂದಿರುತ್ತದೆ. "ಗ್ರಾಹ್ಯಗ್ರಾಹಕವುಳ್ಳದ್ದಾದ ದ್ವೈತವೆಲ್ಲವೂ ಚಿತ್ತದ ಸ್ಪಂದನ ಮಾತ್ರವೇ, ಚಿತ್ತವು ಎಂದಿಗೂ ಯಾವ ವಿಷಯವೂ ಇಲ್ಲದ್ದು, ಆದ್ದರಿಂದ ಅಸಂಗವೆಂದು ಹೇಳಲ್ಪಟ್ಟಿದೆ (ಗೌ.ಕಾ. ೪-೭೨).

ತತ ಊರ್ಧ್ವಮ್ ಇಯಂ ಕಾರಿಕಾ ಪ್ರವೃತ್ತಾ -

ಚಿತ್ತಸ್ಪಂದಿತಮೇವೇದಂ ಗ್ರಾಹ್ಯಗ್ರಾಹಕವದ್ ದ್ವಯಮ್ |
ಚಿತ್ತಂ ನಿರ್ವಿಷಯಂ ನಿತ್ಯಮಸಂಗಂ ತೇನ ಕೀರ್ತಿತಮ್ || ಗೌ.ಕಾ.೪-೭೨.

ಇತಿ | ಸೇಯಮ್ -

ಯಥಾ ಸ್ವಪ್ನೇ ದ್ವಯಾಭಾಸಂ ಸ್ಪಂದತೇ ಮಾಯಯಾ ಮನಃ |
ತಥಾ ಜಾಗ್ರದ್ ದ್ವಯಾಭಾಸಂ ಸ್ಪಂದತೇ ಮಾಯಯಾ ಮನಃ || ಗೌ. ಕಾ.೩-೨೯.

[ ಭಾಷ್ಯಮ್ - ಮನಃ ಪರಮಾರ್ಥದೃಷ್ಟ್ಯಾ ಆತ್ಮರೂಪೇಣಾವೇಕ್ಷ್ಯಮಾಣಂ ಸತ್ ಗ್ರಾಹ್ಯಗ್ರಾಹಕರೂಪೇಣ ದ್ವಯಾಭಾಸಂ ಸ್ಪಂದತೇ ಸ್ವಪ್ನೇ ಮಾಯಯಾ ; ರಜ್ಜ್ವಾಮಿವ ಸರ್ಪಃ | ತಥಾ ತದ್ವದೇವ ಜಾಗ್ರತ್ ಜಾಗರಿತೇ ಸ್ಪಂದತೇ ಮಾಯಯಾ ಮನಃ | ಸ್ಪಂದತ ಇವ ಇತ್ಯರ್ಥಃ || ]

ಇತ್ಯದ್ವೈತಪ್ರಕರಣಕಾರಿಕಯಾ ಏಕವಾಕ್ಯತಾಮಾಪನ್ನಾ ಆತ್ಮವಾದ ಏವ ಪರ್ಯವಸನ್ನಾಸ್ತೀತ್ಯತಃ -

ಅಭೂತಾಭಿನಿವೇಶೋಽಸ್ತಿ ದ್ವಯಂ ತತ್ರ ನ ವಿದ್ಯತೇ || ಗೌ.ಕಾ.೪-೭೫.

---

"ಹೇಗೆ ಸ್ವಪ್ನದಲ್ಲಿ ಮನಸ್ಸು ಮಾಯೆಯಿಂದ ದ್ವಯಾಭಾಸವಾಗಿ ಸ್ಪಂದಿಸುತ್ತದೆಯೋ, ಹಾಗೆಯೇ ಜಾಗ್ರತ್ತಿನಲ್ಲೂ ಸುಳ್ಳುಸುಳ್ಳಾಗಿಯೇ ಮನಸ್ಸು ದ್ವಯರೂಪದಿಂದ ತೋರುತ್ತದೆ. (ಗೌ.ಕಾ. ೩–೨೯). ಇಲ್ಲಿ ಭಾಷ್ಯವು ಹೀಗಿದೆ – "ಪರಮಾರ್ಥದೃಷ್ಟಿಯಿಂದ ಆತ್ಮರೂಪದಿಂದ ಮನಸ್ಸನ್ನು ನೋಡಿದ್ದಾದರೆ ಅದು ಮಾಯೆಯಿಂದ ಗ್ರಾಹ್ಯಗ್ರಾಹಕರೂಪವಾಗಿ ದ್ವೈತರೂಪದಿಂದ ತೋರುತ್ತದೆ. ಹಗ್ಗದಲ್ಲಿ ಹಾವು ತೋರುವ ಹಾಗೆ ತೋರುತ್ತಿರುತ್ತದೆ. ಅದರಂತೆ ಎಚ್ಚರದಲ್ಲಿ ಮಾಯೆಯಿಂದ ಮನಸ್ಸು ಸ್ಪಂದಿಸುತ್ತದೆ ಎಂದರೆ ಸ್ಪಂದಿಸುವಂತೆ ಕಾಣುತ್ತದೆ ಎಂದರ್ಥವು". ಎಂಬುದಾಗಿರುವ ಅದ್ವೈತಪ್ರಕರಣದ ಕಾರಿಕೆಯಿಂದ ಏಕವಾಕ್ಯತೆಯನ್ನು ಹೊಂದಿದ್ದಾಗಿ ಆತ್ಮವಾದದಲ್ಲೇ ಅದು ಕೊನೆಗೊಂಡಿದೆ ಎಂದಾಗುತ್ತದೆ. ಆದ್ದರಿಂದ "ಇಲ್ಲದೇ ಇರುವ ವಸ್ತುವಿನಲ್ಲಿ ಹಠವಿರುತ್ತದೆ. (ಆದ್ದರಿಂದ ಅಲ್ಲಿಗೆ ಮನಸ್ಸು ಹೋಗುತ್ತದೆ). ಆದರೆ ಅಲ್ಲಿ ದ್ವೈತವೆಂಬುದಿಲ್ಲ" (ಗೌ.ಕಾ. ೪–೭೫) ಎಂಬ ಕಾರಿಕೆಯಲ್ಲಿ ಹೇಳಿರುವುದೇನೆಂದರೆ – ಕೂಟಸ್ಥಾತ್ಮನಲ್ಲಿ ಹಠಮಾತ್ರದಿಂದ ದ್ವೈತವು ವಿಕಲ್ಪಿತವಾಗಿದೆ, ಆದರೆ ನಿಜವಾಗಿ ಇರುವುದಿಲ್ಲ

ಇತ್ಯತ್ರ ಕೂಟಸ್ಥಾತ್ಮನಿ ದ್ವೈತಮಭಿನಿವೇಶಮಾತ್ರಾದ್ ವಿಕಲ್ಪಿತಂ ನ ತು ವಸ್ತುತೋಽಸ್ತೀ- ತ್ಯೇವಾಭಿಪ್ರಾಯಃ | ನ ತತ್ರ ಜಾಗ್ರನ್ಮಾತ್ರಲಬ್ಧಜೀವಿತವಿಜ್ಞಾನವಾರ್ತಾಯಾ ಗಂಧೋಽಪ್ಯಸ್ತೀತಿ ಸ್ಫುಟಮ್ ||

**೬೩. ಲೋಕೋತ್ತರಶಬ್ದೋಪಾದಾನಂ ನ ಬೌದ್ಧಸಾಮ್ಯಮಾವಹತಿ -** ಇದಂ ಚಾಪರಮಸ್ತಿ ಸಾಮ್ಯಮುದ್ಭಾವಿತಂ ಕೈಶ್ಚಿತ್, ಅವಿಚಾರರಮಣೀಯಮ್ | ಬೌದ್ಧೈರ್ಯೋಗಾಚಾರೈರುಕ್ತಮ್ -

> (೧) ಏವಂ ವಿತಥವಿಕಲ್ಪಾಭ್ಯಾಸವಾಸನಾನಿದ್ರಯಾ ಪ್ರಸುಪ್ತೋ ಲೋಕಃ ಸ್ವಪ್ನ ಇವಾಭೂತಮರ್ಥಂ ಪಶ್ಯನ್ ಅಪ್ರಬುದ್ಧಸ್ತದಭಾವಂ ಯಥಾವನ್ನಾವಗಚ್ಛತಿ | ಯದಾ ತು ತತ್ಪ್ರತಿಪಕ್ಷಲೋಕೋತ್ತರನಿರ್ವಿಕಲ್ಪಜ್ಞಾನಲಾಭಾತ್ ಪ್ರಬುದ್ಧೋ ಭವತಿ, ತದಾ ತತ್ಪೃಷ್ಠಲಬ್ಧಶುದ್ಧಲೌಕಿಕಜ್ಞಾನಸಂಮುಖೀಭಾವಾತ್ ವಿಷಯಭಾವಂ

---

ಎಂದಭಿಪ್ರಾಯವು. ಎಚ್ಚರದಲ್ಲಿ ಮಾತ್ರ ಇರುವಿಕೆಯನ್ನು ಹೊಂದಿದ ವಿಜ್ಞಾನದ ವಾರ್ತೆಯೂ ಸಹ ಆ ಸ್ವಪ್ನದಲ್ಲಿರುವುದಿಲ್ಲ ಎಂದಭಿಪ್ರಾಯವು.

**೬೩) "ಲೋಕೋತ್ತರ ಎಂಬ ಶಬ್ದವನ್ನು ತೆಗೆದುಕೊಂಡಿರು- ವುದೂ ಸಹ ಬೌದ್ಧರೊಡನೆ ಸಾಮ್ಯತೆಯನ್ನು ಹೊಂದುವುದಿಲ್ಲ.** ಇಲ್ಲಿ ಇನ್ನೊಂದು ಸಾಮ್ಯತೆ ಇದೆ ಎಂದು ಕೆಲವರು ತೋರಿಸಿರುತ್ತಾರೆ. ಆದೂ ಸಹ ಅವಿಚಾರಿತ ರಮಣೀಯವಾಗಿದೆ. ಬೌದ್ಧರ ಯೋಗಾಚಾರರು ಹೇಳುವುದೇನೆಂದರೆ – ೧. "ಸುಳ್ಳಾದ ವಿಕಲ್ಪದ ತಪ್ಪುತಿಳಿವಳಿಕೆಯೆಂಬ ವಾಸನಾರೂಪವಾದ ನಿದ್ರೆಯಿಂದ ಮಲಗಿದವನು ಸ್ವಪ್ನದಲ್ಲಿ ಹೇಗೋ ಹಾಗೆ ಇಲ್ಲದ ವಸ್ತುವನ್ನು ಕಾಣುತ್ತಾ ಅಜ್ಞಾನದಿಂದ ಅದಿರುವುದಿಲ್ಲ ಎಂದು ಯಥಾವತ್ತಾಗಿ ತಿಳಿಯುವುದಿಲ್ಲ. ಯಾವಾಗಲಾದರೋ ಅದಕ್ಕೆ ವಿರುದ್ಧವಾದ ಲೋಕೋತ್ತರವೆಂಬ ನಿರ್ವಿಕಲ್ಪವಾದ ಜ್ಞಾನವನ್ನು ಪಡೆಯುವುದರಿಂದ ಎಚ್ಚತ್ತವನಾಗುತ್ತಾನೋ ಆಗ ಅದರ ಹಿಂದುಗಡೆಯಿಂದಲೇ ದೊರೆಯುವ ಶುದ್ಧಲೌಕಿಕವೆಂಬ ಜ್ಞಾನವು ತೋರಿಕೊಳ್ಳುವುದರಿಂದ ವಿಷಯ ಸ್ವಭಾವವನ್ನು ಇದ್ದದ್ದನ್ನು ಇದ್ದ ಹಾಗೆ ಅರಿಯುತ್ತಾನೆ ಎಂಬುದು ಸಮಾನವಾಗಿದೆ" (ವಿಂಶಿಕಾ ವಸುಬಂಧುಕೃತಾ ೧೭). ಇಲ್ಲಿ ಯಾವ ರೀತಿ ಲೋಕಶುದ್ಧಲೌಕಿಕ ಲೋಕೋತ್ತರ ಎಂಬ ಶಬ್ದಗಳು ವಸುಬಂಧುವಿನಿಂದ ಸ್ವೀಕರಿಸಲ್ಪಟ್ಟಿದೆಯೋ, ಹಾಗೆಯೇ ಆಚಾರ್ಯರೂ ಸಹ ಸ್ವೀಕರಿಸಿದ್ದಾರೆ – 1. "ವಸ್ತುವೂ ಅರಿವೂ

ಯಥಾವದವಗಚ್ಛತೀತಿ ಸಮಾನಮೇತತ್ || ವಿಂ. ೧೭. (ವಿಂಶಿಕಾ ವಸುಬಂಧಕೃತ)

ಇತಿ | ಇತಿ ಅತ್ರ ಯಥೈವ ಲೋಕಶುದ್ಧಲೌಕಿಕಲೋಕೋತ್ತರಶಬ್ದಾಃ ಸಮುಪಾತ್ತಾ ವಸುಬಂಧುನಾ, ತಥೈವ ಆಚಾರ್ಯೈರಪಿ -

(೧) ಸವಸ್ತು ಸೋಪಲಂಭಂ ಚ ದ್ವಯಂ ಲೌಕಿಕಮಿಷ್ಯತೇ | ಅವಸ್ತು ಸೋಪಲಂಭಂ ಚ ಶುದ್ಧಂ ಲೌಕಿಕಮಿಷ್ಯತೇ || ಅವಸ್ತ್ವನುಪಲಂಭಂ ಚ ಲೋಕೋತ್ತರಮಿತಿ ಸ್ಮೃತಮ್ || ಗೌ.ಕಾ.೪-೮೭, ೮೮.

ಇತಿ; ಅತೋ ಯೋಗಾಚಾರವಿಜ್ಞಾನವಾದಿಮತಮೇವೇದಮಿತಿ | ತೇ ಸಾಹಸಿಕಾಃ ಖದ್ಯೋತಶಬ್ದಸಾಮ್ಯಾತ್ ಸಹಸ್ರಕಿರಣೋಽಪಿ ಭಾನುಃ ಕೀಟವಿಶೇಷಾತ್ ಪ್ರಕಾಶಂ ವೃಣೀತೇ ಸ್ಮೇತ್ಯಪಿ ಬ್ರೂಯುಃ | ಯತೋ ಲೋಕೋತ್ತರಶಬ್ದೇನ ಸಮಾಧಿವಿಶೇಷೋ ವಿವಕ್ಷ್ಯತೇ ಯೋಗಾಚಾರೈಃ, ಗ್ರಾಹ್ಯಗ್ರಹಣವಿವರ್ಜಿತಂ ಸುಷುಪ್ತಮೇವ ತ್ವಾಚಾರ್ಯೈಃ| ಯೋಗಿನಾಮಪಿ ಜ್ಞಾನಭೂಮಿಕಾತಾರತಮ್ಯಮಭ್ಯುಪಗಮ್ಯತೇ ಯೋಗಾಚಾರೈಃ; ಸುಷುಪ್ತ್ಯನುಭವೇ ತಾರತಮ್ಯಂ ನೈವಾಂಗೀಕ್ರಿಯತೇ ಆಚಾರ್ಯೈಃ, ಶಕ್ಯಾಭ್ಯುಪಗಮಂ

---

ಇದ್ದರೆ ದ್ವೈತರೂಪವಾದ ಲೌಕಿಕವೆನಿಸುತ್ತದೆ. ವಸ್ತುವಿಲ್ಲದೆ ಬರಿಯ ಅರಿವಾದರೆ ಶುದ್ಧವಾದ ಲೌಕಿಕವೆನಿಸಿರುತ್ತದೆ. ವಸ್ತುವೂ ಇಲ್ಲ, ಅರಿವೂ ಇಲ್ಲವೆಂದಾದರೆ ಲೋಕೋತ್ತರವೆನಿಸುತ್ತದೆ (ಗೌ. ೪–೮೭, ೮೮) ಎಂದು ಹೇಳಿದ್ದಾರೆ. ಇದನ್ನು ಯೋಗಾಚಾರನಾದ ವಿಜ್ಞಾನವಾದಿಯ ಮತವೇ ಆಗಿದೆ ಎಂದು ಯಾರು ಹೇಳುತ್ತಾರೋ ಅವರು (ಮಹಾ) ಸಾಹಸಿಕರು (ಎನ್ನಬೇಕಾಗುತ್ತದೆ). "ಖದ್ಯೋತ" ಎಂಬ ಶಬ್ದದ ಹೋಲಿಕೆಯಿಂದ ಸಾವಿರಕಿರಣವುಳ್ಳ ಸೂರ್ಯನೂ ಸಹ ದೀಪದ ಹುಳ ಎಂಬ (ಕ್ರಿಮಿ) ವಿಶೇಷದಿಂದಲೂ ಪ್ರಕಾಶವನ್ನು ಬಯಸುತ್ತಾನೆ ಎಂತಲೂ (ಇವರು) ಹೇಳಿಯಾರು! ಏಕೆಂದರೆ ಲೋಕೋತ್ತರ ಎಂಬ ಶಬ್ದದಿಂದ ಯೋಗಾಚಾರರು ಸಮಾಧಿವಿಶೇಷವನ್ನು ಹೇಳುತ್ತಾರೆ, ಆದರೆ ಗೌಡಪಾದಾಚಾರ್ಯರು ಗ್ರಾಹ್ಯಗ್ರಹಣವಿಲ್ಲದ ಸುಷುಪ್ತಿಯನ್ನು ಹೇಳುತ್ತಾರೆ. ಯೋಗಾಚಾರರು ಯೋಗಿಗಳಿಗೂ ಜ್ಞಾನಭೂಮಿಕಾ ತಾರತಮ್ಯವನ್ನು ಒಪ್ಪಿಕೊಳ್ಳುತ್ತಾರೆ, ಸುಷುಪ್ತಿಯ ಅನುಭವ ವಿಚಾರದಲ್ಲಿ ಆಚಾರ್ಯರು ತಾರತಮ್ಯವನ್ನು ಒಪ್ಪಿಕೊಳ್ಳುವುದಿಲ್ಲ, ಎಂದಿಗೂ ಒಪ್ಪಿಕೊಳ್ಳುವುದಕ್ಕೂ ಆಗುವುದಿಲ್ಲ. ಅಷ್ಟೇ ಅಲ್ಲ, ಸುಷುಪ್ತಿಸಮಾಧಿಗಳಲ್ಲಿ ಸಮಾನವಾಗಿಯೇ ದ್ವೈತವೆಂಬುದು

ವಾ ಕ್ವಚಿದಪಿ | ಕಿಂಚ ಸುಪ್ತಿಸಮಾಧ್ಯೋರ್ದ್ವೈತಾಭಾವಃ ಸಮಾನಮೇವೇತ್ಯಭ್ಯುಪ-ಗಮ್ಯತೇ ವೇದಾಂತಿಭಿಃ | ಆಹುರ್ಹಿ ಭಾಷ್ಯಕಾರಾಃ -

> (೨) ಯಥಾ ಹಿ ಸುಷುಪ್ತಿಸಮಾಧ್ಯಾದಾವಪಿ ಸತ್ಯಾಂ ಸ್ವಾಭಾವಿಕ್ಯಾಮ್ ಅವಿಭಾಗಪ್ರಾಪ್ತೌ ಮಿಥ್ಯಾಜ್ಞಾನಸ್ಯ ಅನಪೋದಿತತ್ವಾತ್ ಪೂರ್ವವತ್ ಪುನಃ ಪ್ರಬೋಧೇ ವಿಭಾಗೋ ಭವತಿ ||　ಸೂ.ಭಾ.೨-೧-೯.

ಇತಿ ||

**೬೪. ಯೋಗಸಾಪೇಕ್ಷತ್ವನಿರಪೇಕ್ಷತ್ವಾಭ್ಯಾಮಪಿ ವೈಲಕ್ಷಣ್ಯಂ ದರ್ಶನಯೋಃ** – ಅಪಿ ಚ ವೇದಾಂತಸಂಪ್ರದಾಯೇ ಯದ್ಯಪಿ ಮನೋನಿಗ್ರಹಲಕ್ಷಣೋ ಯೋಗಃ ಸಮುಪದಿಶ್ಯತೇ ಮಧ್ಯಮಾಧಿಕಾರಿಣಃ ಪ್ರತಿ, ತಥಾಪಿ ಸ ಯೋಗೋ ನ ಮನಸೋ ಭೂಮಿಕಾವಿಶೇಷಃ, ಅಪಿ ತು ಬ್ರಹ್ಮತಾದಾತ್ಮ್ಯಾನುಭವೇನ ಅಮನೀಭಾವ ಏವೇತಿ ವೈಷಮ್ಯಮ್ | ತಥಾ ಹಿ

---

ಇಲ್ಲವೆಂಬುದನ್ನು ವೇದಾನ್ತಿಗಳು ಒಪ್ಪಿಕೊಂಡಿರುತ್ತಾರೆ. ಭಾಷ್ಯಕಾರರು (ಹೀಗೆ) ಹೇಳಿರುತ್ತಾರೆ.

(೨) "ಸುಷುಪ್ತಿಸಮಾಧಿಗಳಲ್ಲಿ ಮಿಥ್ಯಾಜ್ಞಾನವು ಹೋಗಿಲ್ಲವಾದ್ದರಿಂದ ಅಲ್ಲಿ ಸ್ವಾಭಾವಿಕವಾದ ಅವಿಭಾಗವು ಇದ್ದರೂ ಹಿಂದಿನಂತೆ ಮತ್ತೆ ಎಚ್ಚರದಲ್ಲಿ ವಿಭಾಗವಿರುತ್ತದೆ" (ಸೂ.ಭಾ. ೨-೧-೯) ಎಂದು.

**೬೪) ಯೋಗವು ಬೇಕು, ಬೇಡ ಎಂಬ ಅಭಿಪ್ರಾಯದಿಂದಲೂ ಈ ಎರಡು ದರ್ಶನಗಳಿಗೆ ವ್ಯತ್ಯಾಸವಿದೆ.** ಮನೋನಿಗ್ರಹರೂಪವಾದ ಯೋಗವನ್ನು ಮಧ್ಯಮಾಧಿಕಾರಿಗಳಿಗಾಗಿ ವೇದಾನ್ತಸಂಪ್ರದಾಯದಲ್ಲಿ ಉಪದೇಶಿಸುವುದಾದರೂ ಆ ಯೋಗವು ಮನಸ್ಸಿನ ಭೂಮಿಕಾ ವಿಶೇಷರೂಪವಾದದ್ದಲ್ಲ, ಮತ್ತೇನೆಂದರೆ ಬ್ರಹ್ಮದೊಡನೆ ಒಂದಾಗುವುದೆಂಬ ಅನುಭವದಿಂದ ಹೇಳಿದ್ದು. ಮನಸ್ಸೆಂಬುದು ಇಲ್ಲವಾಗುವುದೆಂಬರೂಪವಾದದ್ದೇ ಎಂದಾದ್ದರಿಂದ ಇದಕ್ಕೂ ಅದಕ್ಕೂ ವ್ಯತ್ಯಾಸವಿದೆ. ಬೌದ್ಧರು ಹೇಳುವುದು ಹೇಗೆಂದರೆ –

(೧) ಯದಾ ತ್ವಾಲಂಬನಂ ಜ್ಞಾನಂ ನೈವೋಪಲಭತೇ ತದಾ |
ಸ್ಥಿತಂ ವಿಜ್ಞಾನಮಾತ್ರತ್ವೇ ಗ್ರಾಹ್ಯಾಭಾವೇ ತದಗ್ರಹಾತ್ || ತ್ರಿ. ೨೮.

ಇತಿ ಸಮಾಧೌ ವಿಜ್ಞಾನಮಾತ್ರತ್ವೋಪಗಮೇಽಪಿ, ವಿಜ್ಞಾನಸ್ಯ ಸ್ವವಿಷಯತ್ವೇನೈವ ಸಿದ್ಧೇಃ ತಸ್ಯ ಸ್ವಾಲಂಬನತ್ವಾಭಾವಃ ಕಥಮಪಿ ನ ಶಕ್ಯಚಿಂತನೋ ಬೌದ್ಧದರ್ಶನೇ | ವೇದಾಂತಿನಯೇ ತು "ವಿಜ್ಞಾತಾರಮರೇ ಕೇನ ವಿಜಾನೀಯಾತ್" (ಬೃ. ೨-೪-೧೪) ಇತ್ಯಾದಿಶ್ರುತ್ಯನುಸಾರೇಣಾತ್ಮನೋ ನಿತ್ಯಾವಿಜ್ಞೇಯತ್ವಾಭ್ಯುಪಗಮಾತ್, ವಾಙ್ಮನಸಾಗೋಚರನಿತ್ಯಸ್ವಯಂಜ್ಯೋತಿರೂಪೇಣಾವಸ್ಥಾನಮೇವ ಸಮಾಧಿರ್ನಾನ್ಯಃ-

(೧) ಸರ್ವಾಭಿಲಾಪವಿಗತಃ ಸರ್ವಚಿಂತಾಸಮುತ್ಥಿತಃ |
ಸುಪ್ರಶಾಂತಃ ಸಕೃಜ್ಜ್ಯೋತಿಃ ಸಮಾಧಿರಚಲೋಽಭಯಃ || ಗೌ.ಕಾ.೩-೩೭.

ಇತ್ಯುಕ್ತಮಾಚಾರ್ಯೈಃ | ಮಧ್ಯಮಾಧಿಕಾರ್ಯನುಷ್ಠೇಯಮನೋನಿಗ್ರಹಸ್ಯಾಪಿ ಸ್ವರೂಪಾವಸ್ಥಾನಪರ್ಯವಸಾಯಿತ್ವೇನೈವೋಪದೇಶೋಽತ್ರ | ಉಕ್ತಂ ಹಿ -

---

(೧) "ಯಾವಾಗ ವಿಜ್ಞಾನಕ್ಕೆ ಆಲಂಬನೆಯು (ಗ್ರಾಹ್ಯದ) (ವಸ್ತುವು) ತೋರುವುದಿಲ್ಲವೋ ಆಗ ಅದು ವಿಜ್ಞಾನಮಾತ್ರವಾಗಿದ್ದುಕೊಂಡಿರುತ್ತದೆ. ಗ್ರಾಹ್ಯವೇ ಇಲ್ಲದ ಮೇಲೆ ಅದು ಅಗ್ರಹವಾದದ್ದಾಗಿರುತ್ತದೆ", (ತೋರದೇ ಇರುತ್ತದೆ ಎಂದರ್ಥವು) (ತ್ರಿ. ೨೮), ಸಮಾಧಿಯಲ್ಲಿ ವಿಜ್ಞಾನ ಮಾತ್ರವಾಗಿರುತ್ತದೆ ಎಂದು ಒಪ್ಪಿಕೊಂಡಿದ್ದರೂ ವಿಜ್ಞಾನವು ತನಗೆತಾನೇ ವಿಷಯವಾಗಿ ಸಿದ್ಧವಾಗುವುದರಿಂದ ಅದಕ್ಕೆ ಆಲಂಬನೆ ಎಂಬುದು ಇಲ್ಲವೆಂಬುದನ್ನು ಬೌದ್ಧದರ್ಶನದಲ್ಲಿ ಹೇಗೂ ಚಿಂತಿಸುವುದಕ್ಕಾಗುವುದಿಲ್ಲ. ವೇದಾನ್ತಶಾಸ್ತ್ರಪ್ರಕಾರವಾದರೋ "ವಿಜ್ಞಾತೃವಾದವನನ್ನು (ಹೇಗೆ) ಯಾವುದರಿಂದ ಅರಿತೀಯೆ?" (ಬೃ. ೨-೪-೧೪) ಎಂಬ ಶ್ರುತಿಗೆ ಅನುಸಾರವಾಗಿ ಯಾವಾಗಲೂ ಅವಿಜ್ಞೇಯನೆಂದು ಒಪ್ಪಿರುವುದರಿಂದ, ವಾಕ್ಕು ಮನಸ್ಸಿಗೂ ಗೋಚರವಲ್ಲದ ಎಂದೆಂದಿಗೂ ಸ್ವಯಂಜ್ಯೋತಿರೂಪದಿಂದಿದ್ದು-ಕೊಂಡಿರುವುದೇ ಸಮಾಧಿಯೇ ಹೊರತು ಬೇರೆ ಅಲ್ಲ. "ಎಲ್ಲಾ ಮಾತೂ ಹೊರಟು ಹೋಗಿರುವ, ಯಾವ ಚಿಂತೆಯೂ ಇಲ್ಲದಿರುವ, ಸಂಪೂರ್ಣವಾಗಿ ಶಾಂತವಾಗಿರುವ ಸದಾಬೆಳಗುವ ಸ್ವಭಾವದ್ದಾದ ಸಮಾಧಿಯು, ಅಚಲವೂ ಅಭಯವಾದದ್ದು" (ಗೌ. ೩-೩೭), ಎಂದು ಶ್ರೀಗೌಡಪಾದಾಚಾರ್ಯರು ಹೇಳಿರುತ್ತಾರೆ. ಮಧ್ಯಮಾಧಿಕಾರಿಯಾದವನು ಅನುಷ್ಠಾನಮಾಡಬೇಕಾದ

(೨) ಯದಾ ನ ಲೀಯತೇ ಚಿತ್ತಂ ನ ಚ ವಿಕ್ಷಿಪ್ಯತೇ ಪುನಃ |
ಅನಿಂಗನಮನಾಭಾಸಂ ನಿಷ್ಪನ್ನಂ ಬ್ರಹ್ಮ ತತ್ತದಾ || ಗೌ.ಕಾ. ೩-೪೬.

ಇತಿ ||

ಅತ ಏವಾತ್ರಾದ್ವೈತದರ್ಶನಮ್ ಅಸ್ಪರ್ಶಯೋಗತ್ವೇನ ಸಂಸ್ತೂಯತೇ ಆಚಾರ್ಯೈಃ-

(೩) ಅಸ್ಪರ್ಶಯೋಗೋ ವೈ ನಾಮ ಸರ್ವಸತ್ತ್ವಸುಖೋ ಹಿತಃ |
ಅವಿವಾದೋಽವಿರುದ್ಧಶ್ಚ ದೇಶಿತಸ್ತಂ ನಮಾಮ್ಯಹಮ್ || ಗೌ.ಕಾ. ೪-೨.

ಅದ್ವೈತದರ್ಶನಂ ಹ್ಯೇತದದ್ವಿತೀಯಾನುಭವಲಕ್ಷಣಂ ಬ್ರಹ್ಮಸ್ವಭಾವ ಏವೇತ್ಯತಃ "ಅಸ್ಪರ್ಶಃ", ದ್ವಿತೀಯಸಂಬಂಧರಹಿತಃ | ಏಷ ಏವ ಚ ಮುಖ್ಯವೃತ್ತ್ಯೇನ "ಯೋಗಃ" ವಾದ್ಯಂತರಸಂಮತಕಾದಾಚಿತ್ಕಸಮಾಧಿಲಕ್ಷಣಯೋಗಾಪೇಕ್ಷಯಾ ಇತ್ಯತಃ "ಅಸ್ಪರ್ಶಯೋಗ" ಉಚ್ಯತೇ | "ವೈ ನಾಮ" ಇತಿ ಬ್ರಹ್ಮವಿದಾಂ ತಚ್ಛಬ್ದವಾಚ್ಯತ್ವೇನ ಪ್ರಸಿದ್ಧ ಇತಿ ದ್ಯೋತಯಿತುಮ್; "ತತ್ಕೇನ ಕಂ ಪಶ್ಯೇತ್" (ಬೃ. ೪-೫-೧೫) ಇತಿ

---

ಮನೋನಿಗ್ರಹವೂ ಕೂಡ (ತನ್ನ) ಸ್ವರೂಪದಲ್ಲಿ ನೆಲೆನಿಲ್ಲುವುದರಲ್ಲಿ ಕೊನೆಗಾಣವುದೆಂಬುದಾಗಿಯೇ ಇಲ್ಲಿ ಉಪದೇಶಿಸಿದೆ. ಹಾಗೆಯೇ ಹೇಳಿದೆ–

(೨) "ಯಾವಾಗ ಚಿತ್ತವು ಲಯವನ್ನಾಗಲೀ ವಿಕ್ಷೇಪವನ್ನಾಗಲೀ ಹೊಂದುವುದಿಲ್ಲವೋ ಆಲುಗಾಟವಿಲ್ಲದೆ, (ವಿಷಯಾ) ಭಾಸವನ್ನೂ ಹೊಂದದೇ ಇದ್ದರೆ ಆಗ ಬ್ರಹ್ಮವಾಗಿದೆ ಎಂದು (ತಿಳಿಯಬೇಕು)" (ಗೌ.ಕಾ. ೩–೪೬) ಎಂದಿದ್ದಾರೆ. ಆದ್ದರಿಂದಲೇ ಇಲ್ಲಿ ಅದ್ವೈತದರ್ಶನವನ್ನು ಅಸ್ಪರ್ಶಯೋಗ–ವೆಂಬುದಾಗಿ ಆಚಾರ್ಯರು ಹೊಗಳಿರುತ್ತಾರೆ.

ಅಸ್ಪರ್ಶಯೋಗವೆಂಬ ಹೆಸರಿನ ಇದು ಎಲ್ಲಾ ಪ್ರಾಣಿಗಳಿಗೂ ಸುಖವೂ ಹಿತವೂ ಆದದ್ದು, ಇದು ವಾದಕ್ಕೆ (ಎಡೆ ಮಾಡಿಕೊಡು)ವುದಿಲ್ಲ, (ಯಾವುದಕ್ಕೂ) ವಿರುದ್ಧವೂ ಅಲ್ಲ. ಇದನ್ನು ಯಾರು ಉಪದೇಶಿಸಿದನೋ ಅವನನ್ನು ನಮಸ್ಕರಿಸುವೆನು" (ಗೌ.ಕಾ ೪–೨), ಈ ಅದ್ವೈತದರ್ಶನವೆಂಬುದು ಅದ್ವಿತೀಯವಾದ ಅನುಭವದಲ್ಲಿ ನೆಲೆನಿಲ್ಲುವ ರೂಪವಾದ ಬ್ರಹ್ಮಸ್ವಭಾವವೇ ಎಂದಾದ್ದರಿಂದ " ಅಸ್ಪರ್ಶವು", ಎಂದರೆ ಎರಡನೆಯದರ ಸಂಬಂಧವಿಲ್ಲದ್ದು. ಬೇರೆವಾದಿಗಳಿಗೆ ಒಪ್ಪಾದ ಯಾವಾಗಲೋ ಒಮ್ಮೆ ತೋರಿಕೊಳ್ಳುವ ಯೋಗಕ್ಕೆ ಹೋಲಿಸಿಕೊಂಡರೆ ಇದೇ ನಿಜವಾದ ಮುಖ್ಯಾರ್ಥದಲ್ಲಿ ಯೋಗವು. "ವೈ

ಶ್ರುತೇಃ | "ಸರ್ವಸತ್ತ್ವಸುಖಃ"; ಸರ್ವೇಷ್ವಪಿ ಸತ್ತ್ವೇಷು ಸುಖತ್ವೇನ ವಿಭಾವ್ಯಮಾನಃ "ಏತಸ್ಯೈವಾನಂದಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವಂತಿ" (ಬೃ. ೪-೩-೩೨) ಇತಿ ಶ್ರುತೇಃ | "ಹಿತಶ್ಚ" ; "ತ್ವಮೇವ ಮೇ ವೃಣೀಷ್ವ ಯಂ ತ್ವಂ ಮನುಷ್ಯಾಯ ಹಿತತಮಂ ಮನ್ಯಸೇ" (ಕೌ. ೩-೧), "ವಕ್ಷ್ಯಾಮಿ ಹಿತಕಾಮ್ಯಯಾ" (ಗೀ. ೧೦-೧) ಇತಿ ಶ್ರುತಿಸ್ಮೃತಿಭ್ಯಾಮ್ ||

ಅಪಿ ಚ "ಅವಿವಾದೋಽವಿರುದ್ಧಶ್ಚಾಯಮ್" | ಯಥೈವ ಹಿ ದ್ವೈತ-ಸ್ಪರ್ಶಾಭಾವಾತ್ ಅಸ್ಪರ್ಶಯೋಗೋಽಯಮ್ ಆನಂದಸ್ವಭಾವತ್ವಾದೇವ ಸರ್ವಸತ್ತ್ವಸುಖಃ, ಏತತ್ಪ್ರಾಪ್ತ್ಯೈವ ನಿತ್ಯತೃಪ್ತ್ಯವಾಪ್ತೇರ್ಹಿತಶ್ಚ - ಏವಮೇವಾಸ್ಮಿ-ನ್ನೇವೈಕಸ್ಮಿನ್ ದರ್ಶನೇ ವಿವಾದಾಭಾವಃ, ಯತೋಽತ್ರೈವ ನ ಕೇನಾಪಿ ವಿರೋಧಃ | ಸರ್ವವಾದ್ಯಾತ್ಮಭೂತತ್ವಾದಸ್ಯ | ನ ಹಿ ಸಾಂಖ್ಯವೈಶೇಷಿಕಾದೀನಾಂ ಬೌದ್ಧಾನಾಂ ವಾ

---

ನಾಮ" ಎಂದು ಬ್ರಹ್ಮಜ್ಞಾನಿಗಳಿಗೆ "ತತ್" ಎಂಬ ಶಬ್ದಕ್ಕೆ ವಾಚ್ಯವಾಗಿದೆ ಎಂಬುದನ್ನು ತಿಳಿಸುವುದಕ್ಕಾಗಿ ಉಪಯೋಗಿಸಿದ್ದು. "ಅಲ್ಲಿ ಯಾವುದರಿಂದ ಏನನ್ನು ಕಂಡಾನು?" (ಬೃ ೪–೫–೧೫) ಎಂಬ ಶ್ರುತಿಯು (ಇದಕ್ಕೆ ಪ್ರಮಾಣವು). "ಸರ್ವಸತ್ವಕ್ಕೂ ಸುಖವು" ಎಂದರೆ ಎಲ್ಲಾ ಪ್ರಾಣಿಗಳಲ್ಲೂ ಸುಖರೂಪವಾದದ್ದಾಗಿದೆ ಎಂದು ತೋರಿಕೊಳ್ಳುವಂಥದ್ದು ಎಂದರ್ಥ. "ಈ ಆನಂದದ್ದೇ ಒಂದು ಮಾತ್ರೆಯನ್ನು (ತುಣುಕನ್ನು) ಬೇರೆ ಪ್ರಾಣಿಗಳು ಉಪಜೀವಿಸಿಕೊಂಡಿದ್ದಾರೆ". (ಬೃ. ೪–೩–೩೨) ಎಂದು ಶ್ರುತಿ ಇದೆ. (ಇದು) ಹಿತವೂ ಆಗಿದೆ. ಹೇಗೆಂದರೆ – "ಯಾವುದನ್ನು ನೀನು ಮನುಷ್ಯನಿಗೆ ಹಿತತಮವಾದದ್ದು ಎಂದು ತಿಳಿದಿರುವೆಯೋ ಆ ವರವನ್ನೇ (ನನಗೆ ನೀನೇ) ವರಿಸು" (ಕೌ ೩–೧) "ನಿನಗೆ ಹಿತವಾಗಲೆಂಬ ಬಯಕೆಯಿಂದ (ಹೇಳುವೆನು)" (ಭ.ಗೀ. ೧೦–೧) ಎಂಬ ಶ್ರುತಿಸ್ಮೃತಿಗಳಿಂದ ಗೊತ್ತಾಗುತ್ತದೆ.

ಅಷ್ಟೇ ಅಲ್ಲ, (ಈ ಅದ್ವೈತವಾದವು) "ವಾದಕ್ಕೆ ಅವಕಾಶವಿಲ್ಲ, ಯಾವುದಕ್ಕೂ ವಿರುದ್ಧವಲ್ಲ", ಹೇಗೆಂದರೆ – ದ್ವೈತಸ್ಪರ್ಶವಿಲ್ಲವಾದ್ದರಿಂದ ಹೇಗೆ ಇದು ಅಸ್ಪರ್ಶಯೋಗವಾಗಿದೆಯೋ, ಆನಂದ ಸ್ವಭಾವವಾದ್ದರಿಂದಲೇ ಎಲ್ಲರಿಗೂ ಸುಖಕರವಾಗಿದೆಯೋ, – ಇದನ್ನು ಪಡೆಯುವುದರಿಂದಲೇ ನಿತ್ಯತೃಪ್ತಿ ಎಂಬುದು ದೊರೆಯುವುದು – ಇದೇ ರೀತಿ ಈ ಒಂದು ದರ್ಶನದಲ್ಲೇ ವಾದವಿರುವುದಿಲ್ಲ. ಏಕೆಂದರೆ ಇದು ಯಾವುದರೊಡನೆಯೂ

ಸರ್ವಾಸ್ತಿತ್ವವಿಜ್ಞಾನಮಾತ್ರಾಸ್ತಿತ್ವಧರ್ಮನೈಃಸ್ವಾಭಾವ್ಯವಾದಿಭೇದೈಃ ಪ್ರವಿಭಕ್ತಾನಾಂ ಪರಸ್ಪರವಿರೋಧೋ ಪರಸ್ಪರೇಣ ವಿವಾದೋ ವಾ ಜಾತು ಶಾಮ್ಯೇತೇತಿ ಸಂಭಾವ್ಯತೇ | ಯದ್ಯಪಿ ಮಾಧ್ಯಮಿಕಾ "ಅಪಿ ಅಸ್ತೀತಿ ನಾಸ್ತೀತಿ ವಿವಾದ ಏಷ" (ಸ.ರಾ. ೯-೨೮) ಇತಿ | "ಯದ್ಯಸ್ತಿತ್ವಂ ಪ್ರಕೃತ್ಯಾ ಸ್ಯಾನ್ನ ಭವೇದಸ್ಯ ನಾಸ್ತಿತಾ" (ಮ.ಕಾ. ೧೫-೮) | ಇತ್ಯಾದಿಪಠಂತಃ ಸರ್ವದೃಷ್ಟಿಪ್ರಹಾಣಾದವಿವಾದ ಇತಿ ಮನ್ಯಂತೇ | ತಥಾಪಿ ತೇಷಾಂ ವಿಜ್ಞಾನವಾದ್ಯಾದಿಭಿರ್ವಿವಾದೋ ದುರ್ವಾರಣ ಏವ ಪದಾರ್ಥಸ್ವಭಾವಾಸ್ತಿತ್ವವಾದಿಭಿಃ ಸರ್ವೈರೇವ ವಿರೋಧಾತ್ | ತರ್ಕಮಾತ್ರಾವಲಂಬನೇನೇತರದೃಷ್ಟಿವಾರಣೇ ಯತಮಾನಾನಾಂ ದ್ವಿತೀಯವಾದಿಸತ್ತ್ವಭಯಸ್ಯಾಪರಿಹಾರ್ಯತ್ವಾಚ್ಚ | ಯದ್ಯಪಿ ವಿಜ್ಞಾನವಾದಿಭಿರ್ಲೋಕೋತ್ತರಪ್ರಜ್ಞಾವಾಪ್ತ್ಯಾ ವಿಜ್ಞಾನವ್ಯತಿರಿಕ್ತವಿಷಯಾಭಾವ-ದರ್ಶನಮವಿವಾದೇನ ಸಿಧ್ಯತೀತ್ಯಭಿಮನ್ಯತೇ, ತಥಾಪಿ ತದಭ್ಯುಪಗತಸಮಾಧೇ-

---

ವಿರುದ್ಧವಲ್ಲ. ಈ ತತ್ತ್ವವು ಎಲ್ಲಾ ವಾದಿಗಳಿಗೂ ಆತ್ಮವಾಗಿದೆ. ಸರ್ವಾಸ್ತಿತ್ವ, ವಿಜ್ಞಾನಮಾತ್ರಾಸ್ತಿತ್ವ, ಯಾವ ಧರ್ಮವೂ ಇಲ್ಲದ ನೈಸ್ಸ್ವಭಾವ್ಯವೆಂಬುದಾಗಿ ವಿರುದ್ಧವಾಗಿ ವಾದಮಾಡುತ್ತಿರುವವರಾದ ಸಾಂಖ್ಯವೈಶೇಷಿಕರಿಗಾಗಲೀ ಬೌದ್ಧರಿಗಾಗಲೀ ಪರಸ್ಪರ ವಿರೋಧವೆಂಬುದು ಎಂದಿಗಾದರೂ ಅಡಗೀತೆಂದು ಊಹೆ ಮಾಡುವುದಕ್ಕೂ ಆಗುವುದಿಲ್ಲ. ಮಾಧ್ಯಮಿಕರಾದ ಬೌದ್ಧರು ಸಹ "ಇದೆ, ಇಲ್ಲ ಎಂಬುದಿದು ವಿವಾದವಷ್ಟೆ" (ಸ.ರಾ ೯–೨೮) "ಇದೆ ಎಂದಾದರೆ ಸ್ವಭಾವದಿಂದ ಇರಬೇಕು, ಇದಕ್ಕೆ "ನಾಸ್ತಿತಾ" ಇಲ್ಲದಿರುವಿಕೆ ಎಂಬುದು ಇರಬಾರದು" (ಮಾ.ಕಾ. ೧೫–೮) ಎಂಬುದಾಗಿ ಹೇಳುತ್ತಾ ಯಾವ ದೃಷ್ಟಿಯೂ (ಇರುವುದೇ ಇಲ್ಲವಾದ್ದರಿಂದ) ಅವಿವಾದವನ್ನು ತಿಳಿದಿರುವವ-ರಾದರೂ, ಅವರಿಗೆ ವಿವಾದವೆಂಬುದು ಅನಿವಾರ್ಯವೇ ಆಗಿದೆ. ಏಕೆಂದರೆ ಪದಾರ್ಥಸ್ವಭಾವವನ್ನು ಒಪ್ಪುವಂತಹ ಎಲ್ಲಾ ವಾದಿಗಳೊಡನೆ ವಿರೋಧವು ಬಂದೇ ತೀರುವುದು. ತರ್ಕಮಾತ್ರವನ್ನವಲಂಬಿಸುವುದರ ಮೂಲಕ ಇನ್ನೊಂದು ದೃಷ್ಟಿಯನ್ನು ತಡೆಯುವುದಕ್ಕೆ ಯಾರು ಪ್ರಯತ್ನಪಡುವರೋ ಅವರಿಗೆ ಇನ್ನೊಬ್ಬವಾದಿಯು ಇರುತ್ತಾನೆಂಬ ಭಯವನ್ನು ತಪ್ಪಿಸಿಕೊಳ್ಳುವುದಕ್ಕಾಗುವು-ದಿಲ್ಲ. ಲೋಕೋತ್ತರವಾದ ಪ್ರಜ್ಞೆಯನ್ನು ಪಡೆಯುವುದರಿಂದ ವಿಜ್ಞಾನವಾದಿಗಳು ವಿಜ್ಞಾನಕ್ಕಿಂತ ಬೇರೆಯಾದ ವಿಷಯವು ಇಲ್ಲವೆಂದು ಕಂಡುಕೊಳ್ಳುವುದರಿಂದ ಅವಿವಾದವು ಸಿದ್ಧಿಸುತ್ತದೆ ಎಂದು ತಿಳಿದಿದ್ದರೂ, ಅವರು ಒಪ್ಪಿಕೊಂಡ ಸಮಾಧಿಯು ವೈಯುಕ್ತಿಕವಾದ ಅನುಭವ

ರ್ವೈಯಕ್ತಿಕಾನುಭವಮಾತ್ರತ್ವಾತ್ ತಸ್ಯಾಪಿ ಬಾಧಕಾನುಭವಸದ್ಭಾವಶಂಕಾಭಯಂ ನ ನಿವಾರ್ಯತೇ | ಅದ್ವೈತದರ್ಶನಲಕ್ಷಣಯೋಗೇ ತು ನ ತಥಾ | ಭಯಹೇತುಭೂತ-ದ್ವಿತೀಯಸದ್ಭಾವಶಂಕಾಯಾ ಅಪಿ ಸಾರ್ವತ್ರಿಕಾನುಭವಾನುಸಾರಿಯುಕ್ತ್ಯಾ ವಿನಿವಾರಣಾತ್ | ತದುಕ್ತಮಾಚಾರ್ಯೈಃ -

(೪) ಅಸ್ಪರ್ಶಯೋಗೋ ವೈ ನಾಮ ದುರ್ದರ್ಶಃ ಸರ್ವಯೋಗಿಭಿಃ |
ಯೋಗಿನೋ ಬಿಭ್ಯತಿ ಹ್ಯಸ್ಮಾದಭಯೇ ಭಯದರ್ಶಿನಃ || ಗೌ.ಕಾ.೩-೩೯.

ಇತಿ | ಅತ ಏವ ಹ್ಯಭಿಯುಕ್ತಾಃ -

ವಿವದತ್ಸ್ವೇವ ನಿಕ್ಷಿಪ್ಯ ವಿರೋಧೋದ್ಭವಕಾರಣಮ್ |
ತೈಃ ಸಂರಕ್ಷಿತಸದ್ಬುದ್ಧಿಃ ಸುಖಂ ನಿರ್ವಾತಿ ವೇದವಿತ್ || ಪ್ರ.ಭಾ.೬-೩

ಇತಿ ||

## ೬೫. ವಿಜ್ಞಾನವಾದತುಲನೋಪಸಂಹಾರಃ – ತದಯಮತ್ರ ಸಾರಃ -

---

ಮಾತ್ರವಾಗಿರುವುದರಿಂದಲೂ, ಅದನ್ನೂ ಬಾಧೆಮಾಡುವ ಅನುಭವವು ಇರಬಹುದೆಂಬ ಸಂದೇಹದ ಭಯವು ಅವರಿಗೆ ತಪ್ಪಿದ್ದಲ್ಲ. ಆದರೆ ಅದ್ವೈತದರ್ಶನರೂಪವಾದ ಯೋಗದಲ್ಲಿ ಹಾಗಲ್ಲ. ಭಯಕ್ಕೆ ಕಾರಣವಾದ ಎರಡನೆಯದೆಂಬುದು ಇದೆ ಎಂಬ ಸಂದೇಹವನ್ನೇ ಸಾರ್ವತ್ರಿಕವಾದ ಅನುಭವಾವನುಸಾರಿಯಾದ ಯುಕ್ತಿಯಿಂದ ತಡೆಗಟ್ಟಿರುತ್ತದೆ. ಅದನ್ನು ಆಚಾರ್ಯರು ಹೇಳಿದ್ದಾರೆ.

(೪) ಅಸ್ಪರ್ಶಯೋಗವೆಂಬ ಯೋಗವು ಯಾವ (ಎಲ್ಲಾ) ಯೋಗಿಗಳಿಗೂ ಎದುರಿಸುವುದಕ್ಕಾಗದ (ಯೋಗವು). ಅಭಯವಾದ ಈ ಯೋಗದಲ್ಲಿ (ಆತ್ಮನಾಶ ನಿಮಿತ್ತವಾಗಿ) ಭಯವನ್ನು ಕಾಣುತ್ತಾ ಯೋಗಿಗಳೂ ಹೆದರಿರು–ತ್ತಾರೆ (ಗೌ.ಕಾ ೩–೩೯), ಆದ್ದರಿಂದಲೇ ತಿಳಿದವರೂ ಸಹ ಹೀಗೆ ಹೇಳಿದ್ದಾರೆ. "ವಿರೋಧವು ಎದ್ದುಕೊಳ್ಳುವುದಕ್ಕೆ ಕಾರಣವಾದ (ವಾದವನ್ನು) ವಾದಮಾಡು–ವವರಲ್ಲೇ ಇಟ್ಟು, (ಆ ವಾದಿಗಳಿಂದ) ರಕ್ಷಿಸಲ್ಪಟ್ಟ ಸದ್ಬುದ್ಧಿಯನ್ನು ಹಿಡಿದು ವೇದವನ್ನು ಬಲ್ಲವನಾಗಿ ಸುಲಭವಾಗಿ ಮೋಕ್ಷವನ್ನು ಹೊಂದುವನು (ಪ್ರ.ಭಾ.೬–೩).

(೧) ವಿಜ್ಞಾನವಾದೀ ಜಾಗರಿತಾವಸ್ಥಾಪ್ರತಿಬದ್ಧವಿಜ್ಞಾನಮೇವ ಪರೀಕ್ಷಣಾಯೋಪಾದತ್ತೇ -

ಯದಂತರ್ಜ್ಞೇಯರೂಪಂ ತು ಬಹಿರ್ವದವಭಾಸತೇ |
ಸೋಽರ್ಥೋ ವಿಜ್ಞಾನರೂಪತ್ವಾತ್ ತತ್ಪ್ರತ್ಯಯತಯಾಪಿ ಚ || ಆ.ಪ. ೬.

ಇತಿ ಬಾಹ್ಯಪದಾರ್ಥಸ್ಯ ಪರಮಾರ್ಥತೋಽಂತರೇವಾವಸ್ಥಿತತ್ವಂ ಮನ್ಯತೇ | ಆಚಾರ್ಯಸ್ತು ಚಿತ್ತಂ ಚೇತ್ಯಂ ಚೇತ್ಯುಭಯಮಪ್ಯನ್ಯೋನ್ಯಾಪೇಕ್ಷಸಿದ್ಧಮಪಿ ಜಾಗರಿತೇ ವ್ಯಾವಹಾರಿಕಂ ಜ್ಞಾನಂ ಜ್ಞೇಯಂ ಚೇತ್ಯುಭಯಮಪ್ಯನುಮನ್ಯತೇ -

(೧) ಉಭೇ ಹ್ಯನ್ಯೋನ್ಯದೃಶ್ಯೇ ತೇ ಕಿಂ ತದಸ್ತೀತಿ ನೋಚ್ಯತೇ||ಗೌ.ಕಾ.೪-೬೭.

(೨) ಸವಸ್ತು ಸೋಪಲಂಭಂ ಚ ದ್ವಯಂ ಲೌಕಿಕಮಿಷ್ಯತೇ || ಗೌ.ಕಾ.೪-೮೭.

ಇತಿ | ವಿಜ್ಞಾನತದ್ವಿಷಯೋಭಯವಿಲಕ್ಷಣಂ ತು ಪರಮಾರ್ಥದೃಷ್ಟ್ಯಾ ಸರ್ವೇಷಾ-

---

**೬೫) ವಿಜ್ಞಾನವಾದದ ಹೋಲಿಕೆಯ ಉಪಸಂಹಾರವು** – ಇಲ್ಲಿ ಇದು ಸಾರವು – ವಿಜ್ಞಾನವಾದಿಯು ಎಚ್ಚರದ ಅವಸ್ಥೆಗೆ ಕಟ್ಟುವಡೆದ ವಿಜ್ಞಾನವನ್ನೇ ಪರೀಕ್ಷೆಗೆ ಸ್ವೀಕರಿಸುತ್ತಾನೆ. "ಒಳಗಿರುವ ಜ್ಞೇಯವೇನಿದೆ ಅದೇ ಹೊರಗಿರುವಂತೆ ತೋರುತ್ತದೆ. ಆ ವಿಷಯವು ವಿಜ್ಞಾನ ರೂಪವಾಗಿರುವುದರಿಂದ, ಆ ಪ್ರತ್ಯಯರೂಪದಿಂದಲೂ (ವಿಜ್ಞಾನವೇ) ತೋರುತ್ತಿರುವುದು" (ಆ.ಪ. ೬) ಎಂದು ಹೇಳುತ್ತಾ ಹೊರಗಿನ ಪದಾರ್ಥವು ನಿಜವಾಗಿ ಒಳಗೇ ಇರುವಂಥದ್ದೆಂದು ತಿಳಿದಿರುತ್ತಾನೆ. ಗೌಡಪಾದಾಚಾರ್ಯರಾದರೋ, ಚಿತ್ತವೂ ಚೈತ್ಯವೂ ಈ ಎರಡೂ ಪರಸ್ಪರಾಪೇಕ್ಷೆಯಿಂದ ಸಿದ್ಧವಾದರೂ ಎಚ್ಚರದಲ್ಲಿ ವ್ಯಾವಹಾರಿಕವಾದ ಜ್ಞಾನವನ್ನೂ ಜ್ಞೇಯವನ್ನೂ ಒಪ್ಪಿರುತ್ತಾರೆ.

(೧) ಅವೆರಡೂ ಅನ್ಯೋನ್ಯದೃಶ್ಯಗಳೇ ಆಗಿರುವವು. ಇರುವುದು ಯಾವುದು? ಎಂಬುದನ್ನು ಹೇಳುವುದಕ್ಕೆ ಬರುವುದಿಲ್ಲ(ಗೌ.ಕಾ. ೪–೬೭).

(೨) ಸವಸ್ತುವೂ ಸೋಪಲಂಭವೂ ಆಗಿರುವ ದ್ವೈತವು, ಲೌಕಿಕವೆನಿಸುವುವು (ಗೌ.ಕಾ. ೪–೮೭).

ಮಪ್ಯಾತ್ಮನಾಂ ಸ್ವರೂಪಭೂತಂ ಜ್ಞಾನಂ ದ್ವಿತೀಯರಹಿತಮಜಂ ಚೇತಿ ತಸ್ಯ ಮತಮ್-

(೩) ಅಜೇಷ್ವಜಮಸಂಕ್ರಾಂತಂ ಧರ್ಮೇಷು ಜ್ಞಾನಮಿಷ್ಯತೇ |
ಯತೋ ನ ಕ್ರಮತೇ ಜ್ಞಾನಮಸಂಗಂ ತೇನ ಕೀರ್ತಿತಮ್ || ಗೌ.ಕಾ.೪-೯೬.

(೨) ವಿಜ್ಞಾನವಾದೀ ಜಾಗ್ರತ್ಪ್ರತ್ಯಕ್ಷಮಪಿ ಸ್ವಪ್ನವದೇವ ಬಾಹ್ಯಾರ್ಥಶೂನ್ಯಂ ವಿಭ್ರಮ ಇತಿ ಮನ್ಯತೇ -

ಪ್ರತ್ಯಕ್ಷಬುದ್ಧಿಃ ಸ್ವಪ್ನಾದೌ ಯದಾ ಸಾ ಚ ಯದಾ ತದಾ |
ನ ಸೋಽರ್ಥೋ ದೃಶ್ಯತೇ ತಸ್ಯ ಪ್ರತ್ಯಕ್ಷತ್ವಂ ಕಥಂ ಮತಮ್ || ವಿಂ. ೧೬.

ಇತಿ ಬ್ರುವಾಣಃ | ಅರ್ಥಾಭಾವಶ್ಚ ಸುಪ್ತಪ್ರಬುದ್ಧೇನೇವ ಲೋಕೋತ್ತರವಿಜ್ಞಾನೇನ ನಿಶ್ಚೀಯತ ಇತಿ ಚ | ಆಚಾರ್ಯಃ ಪುನಃ "ಸವಸ್ತು ಸೋಪಲಂಭಂ ಚ"

---

ವಿಜ್ಞಾನವು ಅದಕ್ಕೆ ವಿಷಯವಾದ ಪದಾರ್ಥವು, ಇವೆರಡಕ್ಕಿಂತಲೂ ವಿಲಕ್ಷಣವಾದ ಪರಮಾರ್ಥದೃಷ್ಟಿಯಿಂದಲಾದರೋ ಎಲ್ಲರಿಗೂ ಸ್ವರೂಪವಾಗಿರುವ ಜ್ಞಾನವು ದ್ವೈತವಿಲ್ಲದ್ದಾದ ಹುಟ್ಟಿಲ್ಲದ್ದಾದದ್ದೆಂದು ಅವರ ಮತವು.

(೩) ಅಜರಾದ ಜೀವರಲ್ಲಿರುವ ಜ್ಞಾನವು ಎಲ್ಲಿಗೂ ಹೋಗದೇ ಇರುವುದೆಂದು ಅಭಿಪ್ರೇತವಾಗಿದೆ. ಯಾವ ಕಾರಣದಿಂದ ಜ್ಞಾನವು ಎಲ್ಲಿಗೂ ಹೋಗುವುದಲ್ಲವೋ ಆ ಕಾರಣದಿಂದ ಅಸಂಗವೆಂದು ಹೇಳಲ್ಪಟ್ಟಿದೆ (ಗೌ.ಕಾ ೪-೯೬)

(೨) ವಿಜ್ಞಾನವಾದಿಯು ಜಾಗ್ರತ್ತಿನಲ್ಲಿ ಪ್ರತ್ಯಕ್ಷವಾಗಿದ್ದರೂ ಕನಸಿನಂತೆ ಹೊರಗಡೆ ವಸ್ತುವು ಇಲ್ಲವೆಂದು ಅದು ಕೇವಲ ಭ್ರಮೆ ಎಂದು ಹೇಳುವನು.

''ಸ್ವಪ್ನವೇ ಮುಂತಾದವುಗಳಲ್ಲಿ ಯಾವಾಗ ಪ್ರತ್ಯಕ್ಷವಾಗಿ ತೋರುವಂಥದ್ದೆಂಬ ಬುದ್ಧಿಯು ಆಗುವುದೋ ಆಗ ಆ ವಿಷಯವು ಇರುವುದಿಲ್ಲ. ಹೀಗಿರುವಾಗ ಅದು ಹೇಗೆ ಪ್ರತ್ಯಕ್ಷವೆಂದಾದೀತು !'' (೨೦-೧೬) ಎಂದು ಹೇಳುತ್ತಾರೆ.

ವಸ್ತುವು ಇಲ್ಲ ಎಂಬುದನ್ನು ಮಲಗಿ ಎಚ್ಚತ್ತವನು ಹೇಗೆ ತಿಳಿಯುವನೋ ಆದರಂತೆ ಲೋಕೋತ್ತರವಿಜ್ಞಾನದಿಂದ (ಇಲ್ಲವೆಂದು) ತಿಳಿಯುವನು.

ಇತ್ಯಾದಿಶ್ಲೋಕೋಕ್ತವಿಧಯಾ ಸ್ವಪ್ನಜಾಗರಿತಯೋಸ್ತತ್ತದವಸ್ಥೋಚಿತವಿಜ್ಞಾನಸ್ಯ ಬಾಹ್ಯಾರ್ಥತದಾಭಾಸವಿಷಯತ್ವೇಪಿ ಲೋಕೋತ್ತರಸಂಜ್ಞಿತಸುಷುಪ್ತೇ ವಿಜ್ಞಾನ-ತದ್ವಿಷಯಯೋರುಭಯೋರಪಿ ಸಮಮೇವಾಭಾವೋ ವಿಜ್ಞಾಯತೇ | ಯೇನ ಚ ತದುಭಯಂ ತದುಭಯಾಭಾವಶ್ಚ ವಿಜ್ಞಾಯತೇ ತದೇವ ಜಿಜ್ಞಾಸೋರ್ನಿತ್ಯಂ ಸರ್ವಜ್ಞಸ್ವರೂಪಂ ವಿಜ್ಞಾನಮ್; ನ ತಸ್ಯ ಸ್ವಪ್ನಃ ಪ್ರಬೋಧೋ ವಾ, ಸಮಾಧ್ಯಾ-ದ್ಯನ್ಯಾಪೇಕ್ಷತಾ ವಾ | ಆತ್ಮಸತ್ಯಾನುಬೋಧೇನ ತತ್ಸತತ್ತ್ವಂ ವಿಜಾನತಸ್ತದನುಪಪತ್ತೇಃ - ಇತ್ಯಾಹ -

(೪) ಅಜಮನಿದ್ರಮಸ್ವಪ್ನಂ ಪ್ರಭಾತಂ ಭವತಿ ಸ್ವಯಮ್ |
ಸಕೃದ್ವಿಭಾತೋ ಹ್ಯೇವೈಷ ಧರ್ಮೋ ಧಾತುಸ್ವಭಾವತಃ || ಗೌ. ಕಾ. ೪-೮೧.

(೫) ಅಜಮನಿದ್ರಮಸ್ವಪ್ನಮನಾಮಕಮರೂಪಕಮ್ |
ಸಕೃದ್ವಿಭಾತಂ ಸರ್ವಜ್ಞಂ ನೋಪಚಾರಃ ಕಥಂಚನ || ಗೌ.ಕಾ.೩-೩೬.

(೩) ವಿಜ್ಞಾನವಾದಿಮತೇ ಲೋಕೋತ್ತರಸಮಾಧಿಪ್ರಜ್ಞಾಲಾಭೇನ

---

ಆಚಾರ್ಯರಾದರೋ"ಸವಸ್ತು ಸೋಪಲಂಭಂ ಚ" ಈ ರೀತಿಯದಾದ ಶ್ಲೋಕದಲ್ಲಿ ಹೇಳಿರುವಂತೆ, ಎಚ್ಚರಕನಸುಗಳಲ್ಲಿ ಆಯಾ ಅವಸ್ಥೆಗೆ ತಕ್ಕದ್ದಾದ ಅರಿವು, ಹೊರಗಿನ ವಸ್ತು, ಅದರ ಆಭಾಸದ್ದಾಗಿದ್ದರೂ ಲೋಕೋತ್ತರ ಎಂಬ ಸಂಜ್ಞೆಯಿಂದ ಕರೆಯಿಸಿಕೊಂಡ ಸುಷುಪ್ತಿಯಲ್ಲಿ, ವಿಜ್ಞಾನ ಮತ್ತು ಅದಕ್ಕೆ ವಿಷಯವಾದ ವಸ್ತುಗಳೆರಡೂ ಸಮಾನವಾಗಿಯೇ ಇಲ್ಲವೆಂದು ಗೊತ್ತಾಗಿದೆ. ಯಾವುದರಿಂದ ಅವೆರಡೂ ಅವರೆಡರ ಅಭಾವವೂ ಗೊತ್ತಾಗುವುದೋ ಅದೇ ಜಿಜ್ಞಾಸುವಿನ ಎಂದೆಂದಿಗೂ ಇರುವ ಸರ್ವಜ್ಞ-ಸ್ವರೂಪವಾದ ವಿಜ್ಞಾನವು. ಅದಕ್ಕೆ ಸ್ವಪ್ನವಾಗಲೀ ಎಚ್ಚರವಾಗಲೀ ಸಮಾಧಿಯ ಅಪೇಕ್ಷೆಯಾಗಲೀ ಇರುವುದಿಲ್ಲ. ಏಕೆಂದರೆ ಆತ್ಮನೇ ಸತ್ಯವೆಂದು ತಿಳಿಯುವುದರಿಂದ ಅದರ ತಿರುಳನ್ನೂ ತಿಳಿದವನಾಗುತ್ತಾನಾದ್ದರಿಂದ ಅದಿರುವುದಿಲ್ಲ ಎಂದು ಹೇಳುತ್ತಾರೆ.

(೪) ಹುಟ್ಟಿಲ್ಲದ ನಿದ್ರೆ ಇಲ್ಲದ ಸ್ವಪ್ನವಿಲ್ಲದ ತಾನೇ ಹೊಳೆಯುತ್ತಲೂ ಯಾವಾಗಲೂ ತೋರುತ್ತಿರುವ ಈ ಧರ್ಮವೆಂಬ ಧಾತುವು ಸ್ವಭಾವದಿಂದಲೇ ಇರತಕ್ಕದ್ದು (ಗೌ.ಕಾ. ೪-೮೧).

ಜಾಗರಿತಾವಸ್ಥಾತಃ ಪ್ರಬೋಧಃ, ಸ್ವಪ್ನಾದಿವ ಜಾಗರಿತಲಾಭೇನ | ಆಚಾರ್ಯಮತೇ ತು ಅವಸ್ಥಾತ್ರಯಲಕ್ಷಣಾನ್ಮಾಯಾಸ್ವಪ್ನಾತ್ ಪ್ರಬೋಧಃ, ಸ ಚ ಪ್ರಬೋಧೋ ನ ಸಮಾಧಿವಿಶೇಷಪ್ರಾಪ್ತ್ಯಾ, ಕಿಂ ತು ವೇದಾಂತಾಭಿಜ್ಞಾಚಾರ್ಯೋಪದೇಶಜನ್ಯಾತ್ಮ-ಸತ್ಯಾನುಬೋಧೇನ -

> ಅನಾದಿಮಾಯಯಾ ಸುಪ್ತೋ ಯದಾ ಜೀವಃ ಪ್ರಬುಧ್ಯತೇ |
> ಅಜಮನಿದ್ರಮಸ್ವಪ್ನಮದ್ವೈತಂ ಬುಧ್ಯತೇ ತದಾ || ಗೌ.ಕಾ. ೧-೧೬.

[ ಅತ್ರ ಸ್ವಪ್ನಶಬ್ದೇನೈವ ಜಾಗ್ರತ್ಸ್ವಪ್ನಯೋರುಭಯೋರಪಿ ಗ್ರಹಣಮಿತಿ ಭಾಷ್ಯತಃ ಸ್ಪಷ್ಟಮ್ || ]

ಅತ್ರ ಹಿ "ಅಜಮನಿದ್ರಮಸ್ವಪ್ನಮದ್ವೈತಮ್" ಇತಿ ಕೂಟಸ್ಥೈಕಸ್ವಭಾವೇ

---

(೫) ಹುಟ್ಟಿಲ್ಲದ, ನಿದ್ರೆಯಿಲ್ಲದ ಸ್ವಪ್ನವಿಲ್ಲದ ನಾಮರೂಪವಿಲ್ಲದ, ಯಾವಾಗಲೂ ತೋರುತ್ತಿರುವ ಸರ್ವಜ್ಞನಾದವನನ್ನು (ಎಂದೂ) ಹೇಗೂ ಉಪಚಾರವು ಇರುವುದಿಲ್ಲ (ಗೌ.ಕಾ. ೩-೩೬).

ವಿಜ್ಞಾನವಾದಿಯ ಮತದಲ್ಲಿ ಲೋಕೋತ್ತರರೂಪವಾದ ಸಮಾಧಿ ಎಂಬ ಪ್ರಜ್ಞೆಯುಲಾಭದಿಂದ ಎಚ್ಚರದವಸ್ಥೆಯಿಂದ ಎಚ್ಚರಗೊಳ್ಳುವುದು, ಸ್ವಪ್ನಾವಸ್ಥೆಯಿಂದ ಎಚ್ಚರವನ್ನು ಪಡೆಯುವ ಹಾಗೆ ಪಡೆಯುವುದು. ಆಚಾರ್ಯರ ಮತದಲ್ಲಾದರೋ ಅವಸ್ಥಾತ್ರಯರೂಪವಾದ ಮಾಯಾ ಸ್ವಪ್ನದಿಂದ ಎಚ್ಚರಗೊಳ್ಳುವುದು, ಅದು ಸಮಾಧಿ ಎಂಬ ವಿಶೇಷವನ್ನು ಪಡೆಯುವುದರಿಂದಲ್ಲ. ಮತ್ತೇನೆಂದರೆ – ವೇದಾನ್ತವನ್ನು ಬಲ್ಲವನಾದ ಆಚಾರ್ಯನ ಉಪದೇಶದಿಂದುಂಟಾಗುವ ಆತ್ಮನೇ ಸತ್ಯನೆಂಬ ಜ್ಞಾನದಿಂದ (ದೊರೆಯುವುದು).

"ಅನಾದಿಯಾದ ಮಾಯೆಯಿಂದ ಮಲಗಿದವನು ಯಾವಾಗ ಎಚ್ಚರ-ಗೊಳ್ಳುವನೋ ಆಗ ಹುಟ್ಟಿಲ್ಲದ ನಿದ್ರೆ ಇಲ್ಲದ ಸ್ವಪ್ನವಿಲ್ಲದ ಅದ್ವೈತವನ್ನು ಅರಿಯುತ್ತಾನೆ" (ಗೌ ೧–೧೬).

(ಈ ಶ್ಲೋಕದಲ್ಲಿ ಸ್ವಪ್ನವನ್ನು ಗ್ರಹಿಸಿದ್ದರಿಂದ ಎಚ್ಚರಕನಸುಗಳೆರಡನ್ನೂ ಗ್ರಹಣೆ ಮಾಡಿಕೊಳ್ಳಬೇಕೆಂದು ಭಾಷ್ಯದಿಂದ ಗೊತ್ತಾಗುತ್ತದೆ)

ನಿಷಿದ್ಧಸರ್ವವಿಶೇಷೇ ಚೈತನ್ಯೇ ಅರ್ಥಾಭಾಸಲಕ್ಷಣಾ ಅಶುದ್ಧಿರ್ವಾ, ಸಮಾಧ್ಯಾದಿ-ಪ್ರಜ್ಞಾಯಾ ತದಪನಯಲಕ್ಷಣಾ ಶುದ್ಧಿರ್ವಾ ನಾಸ್ತ್ಯೇವ, ಅಗ್ರಹಣಲಕ್ಷಣಾ ಬೀಜನಿದ್ರಾ ವಾ ಅನ್ಯಥಾಗ್ರಹಣಲಕ್ಷಣಸ್ಸ್ವಪ್ನನಿದ್ರಾ ವಾ ನ ಜಾತುಚಿದಪಿ ವಿದ್ಯತೇ -ಇತಿ ಬೋಧ ಏವಾತ್ಮಸತ್ತ್ವಾನುಬೋಧ ಇತ್ಯುಕ್ತಮ್ ||

**೬೬. ಬೌದ್ಧಮತಸಾಂಕರ್ಯನಿರಾಸೋಪಸಂಹಾರಃ** - ತದೇವಂ ಜಾಗ್ರದ್‌ದೃಷ್ಟಿಮಾತ್ರಲಬ್ಧಜೀವಿತಜ್ಞಾನಜ್ಞೇಯವಿಭಾಗಮುರರೀಕೃತ್ಯ ತತ್ರ ವಿಜ್ಞಾನವ್ಯತಿರಿಕ್ತಬಾಹ್ಯಾರ್ಥತತ್ತ್ವಂ ಶುಷ್ಕತರ್ಕಾವಷ್ಟಂಭೇನಾಪಹ್ನುವಾನೋ ವಿಜ್ಞಾನವಾದಃ, ತಯೈವ ದೃಷ್ಟ್ಯಾ ವಿತಂಡಾಕಥಾರೀತಿಮಾತ್ರಾಶ್ರಯಣೇನ ಸರ್ವದೃಷ್ಟಿನಿರಸನವ್ಯಸನೀ ಶೂನ್ಯವಾದೋ ವಾ ಸಾರ್ವತ್ರಿಕಾನುಭವಾನು-

---

ಇಲ್ಲಿ 'ಅಜಮನಿದ್ರಮಸ್ವಪ್ನಮದ್ವೈತಂ' ಎಂದು ಕೂಟಸ್ಥವಾದ ಏಕಸ್ವಭಾವವಾದ ಎಲ್ಲಾ ವಿಶೇಷಗಳನ್ನೂ ಅಲ್ಲಗಳೆದ ಚೈತನ್ಯದಲ್ಲಿ ವಸ್ತುವು ತೋರುವುದೆಂಬ ರೂಪವಾದ ಅಶುದ್ಧಿಯಾಗಲೀ, ಸಮಾಧಿಯೇ ಮುಂತಾದ ರೂಪವಾದ ಪ್ರಜ್ಞೆಯಾಗಲೀ, ಅದನ್ನು ಕಳೆದುಹಾಕುವ ರೂಪವಾದ ಶುದ್ಧಿಯಾಗಲೀ ಇಲ್ಲವೇ ಇಲ್ಲ. ಅಗ್ರಹಣರೂಪವಾದ ಬೀಜನಿದ್ರೆಯಾಗಲೀ, ಅನ್ಯಥಾಗ್ರಹಣರೂಪವಾದ ಸ್ವಪ್ನವೆಂಬ ನಿದ್ರೆಯಾಗಲೀ ಎಂದಿಗೂ ಇರುವುದಿಲ್ಲ ಎಂಬುದಾಗಿ ತಿಳಿದುಕೊಳ್ಳುವುದೇ ಆತ್ಮಸತ್ತ್ವಾನುಬೋಧ ಎಂದು ಹೇಳಿದೆ ಎಂಬುದು ಸ್ಪಷ್ಟವು.

**೬೬) ಬೌದ್ಧಮತದ ಕಲೆಬೆರಿಕೆಯನ್ನು ತೆಗೆದುಹಾಕುವ (ವಿಚಾರದ) ಉಪಸಂಹಾರವು.** ಹೀಗೆ ಜಾಗ್ರದೃಷ್ಟಿಯಷ್ಟನ್ನೇ ಪಡೆದು ಬದುಕಿರುವ ಜ್ಞಾನಜ್ಞೇಯವಿಭಾಗವನ್ನು ಒಪ್ಪಿಕೊಂಡು ವಿಜ್ಞಾನಕ್ಕಿಂತ ಬೇರೆಯಾದ ಬಾಹ್ಯಾರ್ಥದ ತತ್ತ್ವವನ್ನು ಶುಷ್ಕತರ್ಕವನ್ನಾಶ್ರಯಿಸಿಕೊಂಡು ಅಲ್ಲಗಳೆಯುವಂಥಹ ವಿಜ್ಞಾನವಾದವಾಗಲೀ, ಅದೇ ರೀತಿಯಿಂದ ವಿತಂಡರೂಪವಾದ ಕ್ರಮವನ್ನಾಶ್ರಯಿಸುವುದರ ಮೂಲಕ ಎಲ್ಲಾ ದೃಷ್ಟಿಯನ್ನೂ ಅಲ್ಲಗಳೆಯುವ ಚಟವುಳ್ಳ ಶೂನ್ಯವಾದವಾಗಲೀ, ಸಾರ್ವತ್ರಿಕವಾದ ಅನುಭವವನ್ನನುಸರಿಸುವ ತರ್ಕವನ್ನಾಶ್ರಯಿಸುವುದರ ಮೂಲಕ ದ್ವೈತವನ್ನು ಅಸತ್ಯವೆಂದು ತೋರಿಸುವ ವೇದಾನ್ತಮತದೊಡನೆ ಯಾವ ತರಹದ

ಸಾರಿತರ್ಕಾಶ್ರಯಣೇನ ದ್ವೈತಾಸತ್ಯತಾಪ್ರದರ್ಶಕೇನ ವೇದಾಂತಿಮತೇನ ನ ಕಿಂಚಿತ್ ಸಾಮ್ಯಮಾಸಾದಯಿತುಮೀಷ್ಟೇ ಇತಿ ಸುಸ್ಫುಟಮ್ | ತಥಾ ಜಾಗ್ರದನುಭವಬಾಧಿತ-ಸ್ವಪ್ನಾನುಭವವತ್ ಬಾಹ್ಯಾರ್ಥಪ್ರಜ್ಞಾ ಲೌಕಿಕೀ ವೈಯಕ್ತಿಕಲೋಕೋತ್ತರಸಮಾಧಿ-ಪ್ರಜ್ಞಾಬಾಧಿತಾ ಭವಿಷ್ಯತೀತ್ಯಾಶಾಸಾನೋ ವಿಜ್ಞಾನವಾದಃ, ಪ್ರತೀತ್ಯಸಮುತ್ಪಾದಾಶ್ರ-ಯಣೇನ ಸರ್ವಧರ್ಮಾಣಾಂ ನೈಃಸ್ವಾಭಾವ್ಯಸಾಧನೇನೈವ ಚತುಷ್ಕೋಟಿವರ್ಜಿತಪ್ರಜ್ಞಾ-ಪಾರಮಿತಾಲಕ್ಷಣಮದ್ವಯಜ್ಞಾನಂ ಪ್ರಸಿಧ್ಯತೀತ್ಯಾಶಾಸಾನಃ ಶೂನ್ಯವಾದೋ ವಾ, ಅಧ್ಯಾರೋಪಾಪವಾದನ್ಯಾಯೇನ ನಿತ್ಯನಿರ್ವಿಕಲ್ಪಂ ಸ್ವಯಂಸಿದ್ಧಮಾತ್ಮತತ್ತ್ವಮನು-ಭವರೂಪಂ ಶ್ರುತ್ಯನುಸಾರೇಣ ವಿಜ್ಞಾಪಯಿತ್ರಾ ವೇದಾಂತದರ್ಶನೇನ ಸ್ವಪ್ನೇಽಪಿ ನ ಕಥಂಚಿತ್ ತೌಲ್ಯಂ ಭಜೇತ - ಇತಿ ಸೋಪಪತ್ತಿ ಪ್ರದರ್ಶಿತಮ್ | ಅಧಿಕಂ ತು ಮಾಂಡೂಕ್ಯರಹಸ್ಯವಿವೃತಿತಸ್ತದ್ಭೂಮಿಕಾತಶ್ಚಾಧಿಗಂತವ್ಯಂ ಜಿಜ್ಞಾಸುಭಿಃ | ಸಾಂಪ್ರದಾಯಿಕಾದ್ವೈತದರ್ಶನಸ್ಯಾದ್ವೈತದರ್ಶನಾಂತರಾದಿವ ಸೌಗತದರ್ಶನಾದಪಿ ವೈಲಕ್ಷಣ್ಯಂ ಶ್ರೀಗೌಡಪಾದಾಚಾರ್ಯಾ ಅಲಾತಶಾಂತಿಪ್ರಕರಣಾರಂಭೇ

---

ಸಾಮ್ಯತೆಯನ್ನೂ ಹೊಂದಲು ಸಮರ್ಥವಲ್ಲ ಎಂಬುದು ಸ್ಪಷ್ಟವು. ಹಾಗೆಯೇ ಎಚ್ಚರದ ಅನುಭವದಿಂದ ಸುಳ್ಳಾದ ಸ್ವಪ್ನಾನುಭವದಂತೆ ಲೌಕಿಕವಾದ ಬಾಹ್ಯಾರ್ಥದ ಪ್ರಜ್ಞೆಯು ವೈಯಕ್ತಿಕವಾದ ಲೋಕೋತ್ತರವೆಂಬ ಸಮಾಧಿ ಪ್ರಜ್ಞೆಯಿಂದ ಬಾಧಿತವಾದದ್ದಾಗುತ್ತದೆ ಎಂಬುದನ್ನು ಬಯಸುವಂಥವನು ವಿಜ್ಞಾನವಾದಿಯು. ಪ್ರತೀತ್ಯಸಮುತ್ಪಾದವನ್ನಾಶ್ರಯಿಸುವುದರ ಮೂಲಕ ಎಲ್ಲಾ ಪದಾರ್ಥಗಳೂ ನಿಃಸ್ವಭಾವವಾಗಿವೆ ಎಂಬುದನ್ನು ಸಾಧಿಸುವುದರಿಂದ ನಾಲ್ಕು ತರಹದ ವಿಕಲ್ಪವಿಲ್ಲದ ಪ್ರಜ್ಞಾಪಾರಮಿತಾರೂಪವಾದ ಅದ್ವಯಜ್ಞಾನವು ಸಿದ್ಧವಾಗುತ್ತದೆ ಎಂಬುದನ್ನಪೇಕ್ಷಿಸುವವನು ಶೂನ್ಯವಾದಿಯು. (ಇವೆರಡೂ) ಅಧ್ಯಾರೋಪಾಪವಾದನ್ಯಾಯದಿಂದ ಎಂದಿಗೂ ನಿರ್ವಿಕಲ್ಪವಾದ ಸ್ವಯಂಸಿದ್ಧವಾದ ಆತ್ಮತತ್ತ್ವವು ಅನುಭವರೂಪವಾಗಿದೆ ಎಂಬುದನ್ನು ಶ್ರುತಿಗನುಗುಣವಾಗಿ ತಿಳಿಸಿಕೊಡುವ ವೇದಾಂತದರ್ಶನದೊಡನೆ ಕನಸಿನಲ್ಲೂ ಸಮಾನತೆಯನ್ನು ಹೊಂದುವುದಿಲ್ಲ ಎಂಬುದನ್ನು, ಯುಕ್ತಿಯನ್ನು ತೋರಿಸುವದರ ಮೂಲಕವಾಗಿ ತೋರಿಸಿಕೊಟ್ಟಿದ್ದಾಗಿದೆ. ಇನ್ನೂ ಹೆಚ್ಚಾಗಿ ತಿಳಿಯಬೇಕೆನ್ನುವವರು ಮಾಂಡೂಕ್ಯರಹಸ್ಯವಿವೃತಿಯಿಂದಲೂ ಅದರ ಪೀಠಿಕೆಯಿಂದಲೂ ತಿಳಿದುಕೊಳ್ಳಬೇಕು. ಸಾಂಪ್ರದಾಯಿಕವಾದ ಅದ್ವೈತದರ್ಶನವು ಬೇರೆ ಅದ್ವೈತದರ್ಶನಕಾರರಿಗಿಂತ ಹೇಗೆ ಭಿನ್ನವೋ

ಮಂಗಲಶ್ಲೋಕೇ ನಿರದಿಕ್ಷನ್ | ತಂ ಚ ಶ್ಲೋಕಂ ವಿಜ್ಞಾನವಾದನಿರಸನಪ್ರಸ್ತಾವೇ ಉದಾಹೃತಮಪಿ ಪುನರಪಿ ಸಮುದಾಹೃತ್ಯ ಕಿರಣಮಿಮಮುಪಸಂಹರಿಷ್ಯಾಮಃ -

ಅಸ್ಪರ್ಶಯೋಗೋ ವೈ ನಾಮ ಸರ್ವಸತ್ತ್ವಸುಖೋ ಹಿತಃ |
ಅವಿವಾದೋಽವಿರುದ್ಧಶ್ಚ ದೇಶಿತಸ್ತಂ ನಮಾಮ್ಯಹಮ್ || ಗೌ.ಕಾ.೪-೨.

[ ಅತ್ರ ಹಿ ಅದ್ವೈತದರ್ಶನಯೋಗಸ್ಯ ನಿತ್ಯಸಿದ್ಧನಿರ್ವಿಕಲ್ಪಾನುಭವ-ರೂಪಾದ್ವೈತಾತ್ಮನೋಽಭಿನ್ನತ್ವಾತ್ ಸ್ವಯಂಸಿದ್ಧಕೂಟಸ್ಥಾನಂದರೂಪತ್ವಮ್, ದ್ವಿತೀಯಸಂಸ್ಪರ್ಶಸ್ಯ ಸರ್ವಥಾ ಸರ್ವದಾಪಿ ದ್ವಿತೀಯಸಂಸ್ಪರ್ಶಾಭಾವಾತ್ ವಿರೋಧವಿವಾದಾನಾಸ್ಪದತ್ವಂ ಚ ಸ್ತುತಿವ್ಯಾಜೇನ ಪ್ರತಿಜ್ಞಾತಮ್ | ನ ತು ಬಾಹ್ಯಮತೇ ಇವ ವಾದಿನಾಂ ದೃಷ್ಟ್ವಾ ದೋಷಸದ್ಭಾವಮಾತ್ರಮಿತಿ ಸುಸ್ಫುಟಮ್ || ]

೬೭. ಕಿರಣೋಪಸಂಹಾರಃ - ತದೇವಂ ಪ್ರಾಚೀನಪ್ರಸ್ಥಾನೇಭ್ಯೋ

---

ಅದರಂತೆ ಬೌದ್ಧರ ದರ್ಶನಕ್ಕಿಂತಲೂ ವಿಲಕ್ಷಣವಾಗಿದೆ ಎಂಬುದನ್ನು ಶ್ರೀಗೌಡಪಾದಾಚಾರ್ಯರು ಅಲಾತಶಾಂತಿಪ್ರಕರಣದ ಮಂಗಳಶ್ಲೋಕದಲ್ಲಿ ನಿರ್ದೇಶಿಸಿರುತ್ತಾರೆ (ಸೂಚಿಸಿರುತ್ತಾರೆ). ಆ ಶ್ಲೋಕವನ್ನು ವಿಜ್ಞಾನವಾದದ ಖಂಡನೆ ಮಾಡುವ ಸಂದರ್ಭದಲ್ಲಿ, ಉದಾಹರಣೆಯನ್ನು (ನಾವು) ಮಾಡಿದ್ದರೂ ಮತ್ತೊಮ್ಮೆ (ಇಲ್ಲಿ) ಉದಾಹರಿಸಿ ಕಿರಣವನ್ನು ಉಪಸಂಹಾರ ಮಾಡುವೆವು. "ಅಸ್ಪರ್ಶಯೋಗವೆಂಬುದು ಎಲ್ಲರಿಗೂ ಸುಖವೂ ಹಿತವೂ ಆದದ್ದು, ಅದು ಅವಿವಾದವೂ, ಅವಿರುದ್ಧವೂ ಆದದ್ದು, ಅದನ್ನು ಉಪದೇಶಿಸಿದವನನ್ನು ನಮಸ್ಕರಿಸುವೆನು"(ಗೌ.ಕಾ. ೪-೨) (ಇಲ್ಲಿ ಅದ್ವೈತದರ್ಶನಯೋಗವು ನಿತ್ಯಸಿದ್ಧವಾದ ನಿರ್ವಿಕಲ್ಪಾನುಭವ-ರೂಪವಾದ ಅದ್ವೈತಾತ್ಮನಿಗಿಂತ ಬೇರೆಯಲ್ಲವಾದ್ದರಿಂದ ಸ್ವಯಂ ಸಿದ್ಧವಾದ ಕೂಟಸ್ಥವಾದ ಆನಂದರೂಪವಾಗಿದೆ. ದ್ವೈತಸಂಸ್ಪರ್ಶವೂ ಹೇಗೂ ಯಾವಾಗಲೂ ಇಲ್ಲವಾದ್ದರಿಂದ, ವಿರೋಧವಾಗಲೀ ವಿವಾದವಾಗಲೀ ಇಲ್ಲಿಲ್ಲ (ಎಂದು ಹೊಗಳುವ ನೆಪದಿಂದ ಪ್ರತಿಜ್ಞೆ ಮಾಡಲಾಗಿದೆ.)

**೬೭) ಕಿರಣದ ಉಪಸಂಹಾರವು** - ಹೀಗೆ ಪ್ರಾಚೀನ ಪ್ರಸ್ಥಾನಕ್ಕಿಂತಲೂ, (ವೇದ) ಬಾಹ್ಯವಾದ ಪ್ರಸ್ಥಾನಕ್ಕಿಂತಲೂ ವೈಲಕ್ಷಣ್ಯವನ್ನು ತೋರಿಸಲಾಗಿದೆ. ಏಕೆಂದರೆ ಹೇಗಾದರೂ ಮುಮುಕ್ಷುಗಳಿಗೆ ಶುದ್ಧವಾದ ಶಾಂಕರಪ್ರಕ್ರಿಯಾಪ್ರಧಾನವಾದ ವೇದಾಂತದರ್ಶನದಲ್ಲೇ

ಬಾಹ್ಯಪ್ರಸ್ಥಾನೇಭ್ಯಶ್ಚ ವೈಲಕ್ಷಣ್ಯಂ ದರ್ಶಿತಂ ಶುದ್ಧಶಾಂಕರಪ್ರಕ್ರಿಯಾಪ್ರಧಾನ-ವೇದಾಂತದರ್ಶನೇ ಏವ ಯಥಾ ಮುಮುಕ್ಷವೋ ಬದ್ಧಾದರಾಃ ಸ್ಯುಃ | ಅಥಾಗಾಮಿ-ಕಿರಣೇಷು, ಅರ್ವಾಚೀನವೇದಾಂತಪ್ರಸ್ಥಾನೇಭ್ಯೋಽಪಿ ಯಥಾ ವೈಲಕ್ಷಣ್ಯಮಸ್ಯ ಪ್ರಸ್ಥಾನಸ್ಯ ತಥಾ ಸಮುಪಪಾದಯಿತುಂ ಯತ್ನಃ ಕರಿಷ್ಯತ ಇತಿ ಸರ್ವಂ ಶಿವಮ್ ||

ಇತಿಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರೇಣ್ಯಶ್ರೀಪೂಜ್ಯಪಾದಶ್ರೀಮಚ್ಛಂಕರಭಗವಚ್ಚರಣಸ್ಮರಣ-ಪರಿಚಯಾವಾಪ್ತವೇದಾಂತಪ್ರವೇಶೇನ ಶ್ರೀಬೋಧಾನಂದೇಂದ್ರಸರಸ್ವತೀಶಿಷ್ಯಸಚ್ಚಿದಾನಂದೇಂದ್ರ-ಸರಸ್ವತ್ಯಾಖ್ಯೇನ ಭಿಕ್ಷುಣಾ ಪ್ರಣೀತೇ ಶುದ್ಧಶಾಂಕರಪ್ರಕ್ರಿಯಾಭಾಸ್ಕರಾಭಿದೇ ಪ್ರಕರಣೇ ಬೌದ್ಧಮತಸಾಮ್ಯಶಂಕಾಪರಿಹಾರೋ ನಾಮ ಸಪ್ತಮಃ ಕಿರಣಃ

---

ಆದರವುಂಟಾಗಲೆಂದು (ತೋರಿಸಿಕೊಟ್ಟಿರುತ್ತದೆ). ಇನ್ನು ಮುಂದಿನ ಕಿರಣಗಳಲ್ಲಿ ಈಚಿನ ವೇದಾಂತಕ್ಕಿಂತಲೂ ಈ ಪ್ರಸ್ಥಾನವು ಯಾವ ರೀತಿ ವ್ಯತ್ಯಾಸವಾಗಿದೆ ಎಂಬುದನ್ನು ತೋರಿಸಿಕೊಡುವುದಕ್ಕೆ[೧] ಪ್ರಯತ್ನಿಸುವೆವು, ಎಂದಾದ್ದರಿಂದ ಇಲ್ಲಿಗೆ ಎಲ್ಲವೂ ಮಂಗಳವು.

**ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರೇಣ್ಯ**
**ಶ್ರೀಪೂಜ್ಯಪಾದ ಶ್ರೀಮಚ್ಛಂಕರಭಗವಚ್ಚರಣಸ್ಮರಣ**
**ಪರಿಚಯಾವಾಪ್ತವೇದಾನ್ತಪ್ರವೇಶೇನಶ್ರೀಬೋಧಾನಂದೇಂದ್ರಸರಸ್ವತೀ**
**ಶಿಷ್ಯೇಣ ಶ್ರೀಸಚ್ಚಿದಾನಂದೇಂದ್ರಸರಸ್ವತ್ಯಾಖ್ಯೇನ ಭಿಕ್ಷುಣಾ**
**ಪ್ರಣೀತೇ ಶುದ್ಧಶಾಂಕರಪ್ರಕ್ರಿಯಾಭಾಸ್ಕರಾಭಿದೇ ಪ್ರಕರಣೇ**
**ಬೌದ್ಧಮತಸಾಮ್ಯಶಂಕಾಪರಿಹಾರೋ ನಾಮ ಸಪ್ತಮಃ ಕಿರಣಃ**

---

೧) ಶ್ರೀ ಶ್ರೀಗಳವರು ಇನ್ನೂ ಮುಂದಕ್ಕೆ ಬರೆಯಬೇಕೆಂದಿದ್ದರು, ಆದರೆ ನಮ್ಮಗಳ ದುರದೃಷ್ಟದಿಂದ ಆ ಕೆಲಸವು ನಡೆಯಲಿಲ್ಲ.

# ತಿದ್ದುಪಡಿ

| ಪುಟ | ಸಾಲು | ತಪ್ಪು | ಸರಿ |
|---|---|---|---|
| ಪೀಠಿಕೆ–7 | ಕೆ–7 | ಧರ್ಶಕ | ದರ್ಶಕ |
| ಪೀಠಿಕೆ–13 | ಮೇ–11 | ಅಕಾರ | ಅಧಿಕಾರ |
| 2 | ಮೇ–5 | ವೇದಾಂನ್ತ | ವೇದಾನ್ತ |
| 2 | ಮೇ–10 | ತಾನ್ಯಪಿ | ತಾನಪಿ |
| 3 | ಮೇ–10 | ವೈಶೇಶಿಕ | ವೈಶೇಷಿಕ |
| 5 | ಕೆ–5 | ಭಾಭಾ 3–6 | ಭಾಭಾ 316 |
| 8 | ಮೇ–6 | ಯಾನಪ್ಯಭಿ.... | ಕಿಯಾನಪ್ಯಭಿ.... |
| 23 | ಕೆ–13 | – | ಉಪಾಸನೆಯನ್ನಾಶ್ರಯಿಸಿರುವ<br>ಧರ್ಮನು ಉತ್ಪತ್ತಿಗೆ ಮೊದಲು<br>ಎಲ್ಲವೂ ಅಜವು (ಎಂದು) ಜಾತ<br>ಬ್ರಹ್ಮದಲ್ಲಿ ಇದ್ದುಕೊಂಡಿರುತ್ತಾನೆ.<br>ಆದ್ದರಿಂದ ಇವರು ಕೃಪಣನೆನಿಸುವನು. |
| 58 | ಕೆ–2 | – | ರಾಮಾನುಜಾಚಾರ್ಯರಾದರೋ<br>ಬ್ರಹ್ಮವು ಪರಿಣಾಮವಾಗಿದೆಯೆಂದು<br>ಹೇಳುವರು. ಆಚಾರ್ಯರೂ ಕೂಡ |
| 64 | ಮೇ–10 | ಪ್ರತ್ಯಕ್ಷಾದ್ದಿನಾ | ಪ್ರತ್ಯಕ್ಷಾದಿನಾ |
| 70 | ಕೆ–7 | ಅಭೋಕ್ಕೃತ್ವವೂ | ಅಭೋಕ್ತೃವೂ |
| 73 | ಮೇ–12 | ಪರಮಾತ್ಮನಾಮ್ | ಪರಮಾತ್ಮಾನಮ್ |
| 75 | ಕೆ–12 | ಆತ್ಮನ್ವೇಷ್ಯವ್ಯ: | ಆತ್ಮಾನ್ವೇಷ್ಟವ್ಯ: |
| 80 | ಮೇ–10 | ಪ್ರಮಾತೃತ್ವಮ್ | ನ ಪ್ರಮಾತೃತ್ವಮ್ |
| 81 | ಕೆ–6 | ಇರುತ್ತದೆ | ಇರುತ್ತಾನೆ |
| 101 | ಕೆ–10 | ಅದರಿಂದ | ಆದ್ದರಿಂದ |
| 101 | ಕೆ–9 | ಶಾಶ್ವತವೇನಲ್ಲ | ಶಾಶ್ವತವೆಂಬುದು ಇಲ್ಲವೇ ಇಲ್ಲ |
| 104 | ಮೇ–7 | ಕುರ್ವಂತೀ | ಕುರ್ವತೀ |
| 205 | ಮೇ–8 | ಗಂಧರ್ವ ನಗರಂ ತಥಾ | ಗಂಧರ್ವನಗರಂ ಯಥಾ |
| 234 | ಮೇ–3 | ಸ್ವಪ್ನಜಾಗರಿದಯೋ | ಸ್ವಪ್ನಜಾಗರಿತಯೋ |

# ಸಂಸ್ಥಾಪಕರ ಸ್ಮರಣೆ

ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯವು ಸರ್ವದಾ ಸಂಸ್ಮರಣೀಯರಾದ ಶ್ರೀಶಂಕರಭಗವತ್ಪಾದರದು. ಬ್ರಹ್ಮೀಭೂತ **ಶ್ರೀಶ್ರೀಸಚ್ಚಿದಾನಂದೇಂದ್ರ ಸ್ವಾಮಿಗಳವರು** (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯಶರ್ಮರು - ವೈ. ಸುಬ್ಬರಾಯರು, ಜನನ ೫.೧.೧೮೮೦) ಶ್ರೀಶಂಕರರ ವೇದಾಂತ-ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ ಮಂಥನಗಳಿಂದ ತಮ್ಮ ವಿಶಿಷ್ಟ ಸಂಶೋಧನಾ ಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯಭಾಷ್ಯಗಳಿಗೆ ಹತ್ತಿದ್ದ ಕಳೆಯನ್ನು, ಮುತ್ತಿದ್ದ ಧೂಳನ್ನು ತೊಡೆದು ಶಾಂಕರವೇದಾಂತದ ನೈಜ ತಿರುಳನ್ನು ಕಂಡುಕೊಂಡರು, ಶಾಂಕರವೇದಾಂತಕ್ಕೆ ೨೦ನೇ ಶತಮಾನದ ಅಧಿಕೃತವಕ್ತಾರರಾದರು, ಪ್ರತಿಪಾದಕರಾದರು, **"ಅಭಿನವಶಂಕರರಾದರು"**.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀಶ್ರೀಗಳವರು ತಮ್ಮ ಬಾಲ್ಯದಿಂದ ೯೦ನೆಯ ವಯಸ್ಸಿನವರೆಗೂ ವೇದಾಂತಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು **'ಪುರುಷಸರಸ್ವತಿ'** ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲೀಷ್, ಸಂಸ್ಕೃತಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮವಿಚಾರದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿದ್ದಾಗಲೂ ನಿರಂತರ ಅಧ್ಯಾತ್ಮ ಚಿಂತನೆಯಿಂದಲೇ ಜೀವನವನ್ನು ನಿರ್ವಹಿಸುತ್ತಿದ್ದರು. ಆ ಸಮಯದಲ್ಲಿ **ಶ್ರೀಹೊಸಕೆರೆ ಚಿದಂಬರಯ್ಯನವರ, ಶ್ರೀಮಹಾಭಾಗವತರ** ಸಂಪರ್ಕ, ಅಧ್ಯಾತ್ಮಬಾಂಧವ್ಯ, ಆತ್ಮೀಯತೆ, ಅನಂತರ **ಶ್ರೀಗೋಂದಾವಳಿ ಮಹಾರಾಜರಲ್ಲಿ** ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳಾದ **ಶ್ರೀಸಚ್ಚಿದಾನಂದ ಶಿವಾಭಿನವನೃಸಿಂಹ ಭಾರತೀ** ಮಹಾಸ್ವಾಮಿಗಳವರಿಂದ ಭಾಷ್ಯಶಾಂತಿಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರುಗನ್ನು ನೀಡಿದವು.

೧೯೩೭ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. ೧೯೪೮ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವನಿಷ್ಠರಾಗಿ, ನಿಖರವಾದಬರವಣಿಗೆ, ಆಚಾರನಿಷ್ಠೆ ಮತ್ತು ಶಾಸ್ತ್ರೀಯನಿಯಮ-ಪಾಲನೆಗೆ ಶ್ರೀಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (೧೯೨೦) **ಅಧ್ಯಾತ್ಮಪ್ರಕಾಶ-ಕಾರ್ಯಾಲಯವು** ಈಗಲೂ ನಿಜವಾದ ಅಧ್ಯಾತ್ಮವಿದ್ಯಾ ಪ್ರಸಾರಕೇಂದ್ರವಾಗಿದೆ.

ಪೂಜ್ಯರು ೧೯೭೫ನೇ ಆಗಸ್ಟ ೫ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿಪೀಠವು ಹೊಳೆನರಸೀಪುರದಲ್ಲಿದೆ. ಅವರು ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲಶಕ್ತಿಯಾಗಿದ್ದಾರೆ.

**ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ |**
**ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ||**